ಕನ್ನಡ ಬೈಬಲ್ : ಒಂದು ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ
ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕ
ಡಿ.ಟಿ. ಪುನೀತ್

ಮಾರ್ಗದರ್ಶಕರು
ಡಾ. ಎಫ್.ಟಿ. ಹಳ್ಳಿಕೇರಿ
ಪ್ರಾಧ್ಯಾಪಕರು

ಹಸ್ತಪ್ರತಿಶಾಸ್ತ್ರ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

೨೦೦೭

ಕನ್ನಡ ಬೈಬಲ್ : ಒಂದು ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ
ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕ
ಡಿ.ಟಿ.ಪುನೀತ್

ಮಾರ್ಗದರ್ಶಕರು
ಡಾ. ಎಫ್.ಟಿ.ಹಳ್ಳಿಕೇರಿ
ಪ್ರಾಧ್ಯಾಪಕರು

ಹಸ್ತಪ್ರತಿಶಾಸ್ತ್ರ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೦೭

ಮಾರ್ಗದರ್ಶಕರ ಪ್ರಮಾಣ ಪತ್ರ

ಶ್ರೀ ಡಿ.ಟಿ.ಪುನೀತ್ ಅವರು **ಕನ್ನಡ ಬೈಬಲ್ : ಒಂದು ಅಧ್ಯಯನ** ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಪಿಎಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಪ್ರಬಂಧವು ಅವರ ಸ್ವಂತ ಪರಿಶ್ರಮದ ಫಲವಾಗಿದ್ದು, ಈ ಮೊದಲು ಇದನ್ನು ಇನ್ನಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ. ಎಫ್.ಟಿ.ಹಳ್ಳಿಕೇರಿ
ಮಾರ್ಗದರ್ಶಕರು ಮತ್ತು ಪ್ರಾಧ್ಯಾಪಕರು
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ :
ಸ್ಥಳ : ವಿದ್ಯಾರಣ್ಯ

ಸಂಶೋಧಕರ ಪ್ರಮಾಣ ಪತ್ರ

ಕನ್ನಡ ಬೈಬಲ್ : ಒಂದು ಅಧ್ಯಯನ ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಪಿಎಚ್.ಡಿ. ಪದವಿಗಾಗಿ ಡಾ.ಎಫ್.ಟಿ.ಹಳ್ಳಿಕೇರಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಪ್ರಬಂಧವು ನನ್ನ ಸ್ವಂತ ಪರಿಶ್ರಮದ ಫಲವಾಗಿದ್ದು, ಈ ಮೊದಲು ಇದನ್ನು ಇನ್ನಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಡಿ.ಟಿ.ಪುನೀತ್
ಸಂಶೋಧಕರು
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ :
ಸ್ಥಳ : ವಿದ್ಯಾರಣ್ಯ

ಕೃತಜ್ಞತೆಗಳು

ಬೈಬಲ್ ಕುರಿತು ಸಂಶೋಧನ ಅಧ್ಯಯನ ಮಾಡಬೇಕೆಂಬ ನನ್ನ ಬಹುದಿನಗಳಿಂದ ಆಲೋಚನೆ ಇತ್ತು. ಆದಕ್ಕೆ ಸೂಕ್ತ ಮಾರ್ಗದರ್ಶಕರ ಅನ್ವೇಷಣೆಯಲ್ಲಿದ್ದಾಗ ನನ್ನ ಆಸಕ್ತಿಯನ್ನು ಕಂಡು ನನ್ನ ವಿದ್ಯಾ ಗುರುಗಳು, ಹಿರಿಯ ಸಂಶೋಧಕರಾದ ಡಾ.ಎಂ.ಎಂ.ಕಲಬುರ್ಗಿ ಅವರು ತಮ್ಮ ಮಾರ್ಗದರ್ಶನದಲ್ಲಿ ಪಿಎಚ್.ಡಿ.ಅಧ್ಯಯನ ಕೈಗೊಳ್ಳಲು ೧೯೯೪ರಲ್ಲಿ ಒಪ್ಪಿಗೆ ಸೂಚಿಸಿ 'ಕನ್ನಡ ಬೈಬಲ್ : ಒಂದು ಅಧ್ಯಯನ' ಎಂಬ ಶೀರ್ಷಿಕೆಯನ್ನಿತ್ತರು. ಮುಂದೆ ಅವರಲ್ಲಿ ಸ್ಥಳ ಇರದ ಕಾರಣ ಮೈಸೂರು ವಿಶ್ವವಿದ್ಯಾನಿಲಯದ ಡಾ.ಎಡ್ವರ್ಡ್ ನೊರೋನರವರಲ್ಲಿ ಸಂಶೋಧನೆ ಮುಂದುವರಿಸಲು ಅನುಕೂಲ ಒದಗಿಸಿಕೊಟ್ಟರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕೆಲಕಾಲ ಸಂಶೋಧನೆ ಮುಂದುವರಿಯಿತು. ಆ ಸಮಯದಲ್ಲಿ ಡಾ.ಎಡ್ವರ್ಡ್ ನೊರೋನ ಅವರು ಹೊರದೇಶಕ್ಕೆ ಹೋಗುವ ಅವಕಾಶ ಬಂದಿತು. ಇದರ ಪ್ರಯುಕ್ತ ನನಗೆ ಅಧ್ಯಯನ ಮುಂದುವರಿಸಲು ಅಸಾಧ್ಯವಾಗಿ ಅಧ್ಯಯನವನ್ನು ಕೈಬಿಡಬೇಕಾಯಿತು. ಹೀಗೆ ಪ್ರಾರಂಭದಲ್ಲಿ ನನಗೆ ಸಲಹೆ, ಶೀರ್ಷಿಕೆ ಹಾಗೂ ಪ್ರೋತ್ಸಾಹ ನೀಡಿದ ಡಾ.ಎಂ.ಎಂ.ಕಲಬುರ್ಗಿ ಅವರಿಗೂ ಹಾಗೂ ಆರಂಭದ ಹೆಜ್ಜೆಯಲ್ಲಿ ದೃಢತೆ ತುಂಬಿದ, ಸಾರಲೇಖಕ್ಕೆ ಸಾಹಿತ್ಯ ಸಂಕಲಿಸಿ ಮಾರ್ಗದರ್ಶಿಸಿದ ಡಾ.ಎಡ್ವರ್ಡ್ ನೊರೋನ ಅವರಿಗೂ ನಾನು ಚಿರಋಣಿಯಾಗಿದ್ದೇನೆ.

ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಅಧ್ಯಯನಕ್ಕೆ ಅವಕಾಶ ಕಲ್ಪಿಸಿದ ವಿಶ್ರಾಂತ ಕುಲಪತಿಗಳಾದ ಡಾ.ಎಂ.ಎಂ.ಕಲಬುರ್ಗಿ ಅವರಿಗೂ, ಅವಧಿಯನ್ನು ವಿಸ್ತರಿಸಲು ಅವಕಾಶ ನೀಡಿದ ವಿಶ್ರಾಂತ ಕುಲಪತಿಗಳಾದ ಡಾ.ಎಚ್.ಜೆ.ಲಕ್ಕಪ್ಪಗೌಡ ಅವರಿಗೂ, ಪ್ರಬಂಧ ಮಂಡನೆಯ ಸಂದರ್ಭದಲ್ಲಿ ಎಲ್ಲ ರೀತಿಯ ಅನುಕೂಲ ಕಲ್ಪಿಸಿದ ಇಂದಿನ ಮಾನ್ಯ ಕುಲಪತಿಗಳಾದ ಡಾ.ಬಿ.ಎ.ವಿವೇಕ ರೈ ಅವರಿಗೂ ಹಾಗೂ ಆಡಳಿತಾತ್ಮಕವಾಗಿ ಸಹಕರಿಸಿದ ಮಾನ್ಯ ಕುಲಸಚಿವರಾದ ಶ್ರೀ ವಿ.ಶಂಕರ್ ಅವರಿಗೂ, ಅಧ್ಯಯನದ ಅವಧಿಯಲ್ಲಿ ಎಲ್ಲ ರೀತಿಯ ಸಹಕಾರ ನೀಡಿದ ಅಧ್ಯಯನಾಂಗದ ನಿರ್ದೇಶಕರಾದ ಡಾ.ಟಿ.ಆರ್.ಚಂದ್ರಶೇಖರ ಅವರಿಗೂ,

ಅಧ್ಯಯನ ಕುಂಟಿತಗೊಂಡಾಗ ನನ್ನ ಮಿತ್ರ ಹಾಗೂ ಸಹಪಾಠಿ ಡಾ.ಎಸ್.ಸಿ.ಪಾಟೀಲ ನನ್ನನ್ನು ಹುರಿದುಂಬಿಸಿ ಪುನಃ ಚೈತನ್ಯ ನೀಡಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕರೆತಂದು ಅಧ್ಯಯನ ಮಾಡಲು ಅನುವು ಮಾಡಿಕೊಟ್ಟರು. ಈ ನನ್ನ ಮಿತ್ರನಿಗೆ ಹೃತ್ಪೂರ್ವಕ ಕೃತಜ್ಞತೆಗಳು.

ಅಧ್ಯಯನ ಕೈಗೊಳ್ಳಲು ವಿಶ್ವವಿದ್ಯಾಲಯಕ್ಕೆ ಬಂದಾಗ ನನ್ನನ್ನು ಬಾಹ್ಯಸಂಶೋಧನ ವಿದ್ಯಾರ್ಥಿಯಾಗಿ ಆಯ್ಕೆ ಮಾಡಿಕೊಂಡು ಅವಕಾಶ ಮಾಡಿಕೊಟ್ಟು, ಸಕಾಲಕ್ಕೆ, ಸೂಕ್ತ ಮಾರ್ಗದರ್ಶನ, ಕಾಲೋಚಿತವಾದ ಸಲಹೆ ಸೂಚನೆಯಿತ್ತು; ಅಧ್ಯಯನ ಮಂದಗತಿಯಲ್ಲಿ ನಡೆದಾಗ ಎಚ್ಚರಿಸಿ ಆರು ವರ್ಷಗಳ ಕಾಲ ಬಹು ತಾಳ್ಮೆಯಿಂದ ಮಾರ್ಗದರ್ಶನ ನೀಡಿದ ಮಾರ್ಗದರ್ಶಕರಾದ ಡಾ.ಎಫ್.ಟಿ. ಹಳ್ಳಿಕೇರಿ ಅವರಿಗೆ ನನ್ನಾ ಮನಪೂರ್ವಕ ಕೃತಜ್ಞತೆಗಳು. ಶ್ರೀಯುತರು ನನಗೆ ಎರಡನೇ ಅವಧಿಗೆ ಅವಕಾಶ ಕಲ್ಪಿಸದಿದ್ದರೆ ಈ ಪ್ರಬಂಧವು ರೂಪತಳೆದು ಬರಲು ಸಾಧ್ಯವಿರಲಿಲ್ಲ.

ನನ್ನ ಅಧ್ಯಯನದಲ್ಲಿ ಹೆಚ್ಚಿನ ಆಸಕ್ತಿ ತೋರಿಸಿ ಸಕಾಲದಲ್ಲಿ ಮುಗಿಸಲು ಒತ್ತಾಸೆಯಿಂದ ಸಲಹೆ ನೀಡಿದ ವಿಭಾಗದ ಅಧ್ಯಾಪಕರುಗಳಾದ ಪ್ರೊ.ಎ.ವಿ.ನಾವಡ, ಡಾ.ವೀರೇಶ ಬಡಿಗೇರ, ಡಾ.ಎಸ್.ಎಸ್.ಅಂಗಡಿ, ಡಾ.ಕೆ.ರವೀದ್ರನಾಥ ಹಾಗೂ ಡಾ.ಎಸ್.ಆರ್.ಚನ್ನವೀರಪ್ಪ ಅವರಿಗೂ,

ಕ್ಷೇತ್ರಕಾರ್ಯದಲ್ಲಿ ಸಹಕರಿಸಿದ ಮಂಗಳೂರಿನ ದೈವಜ್ಞಾನ ಕಾಲೇಜಿನ ಪ್ರಾಚಾರ್ಯ ಡಾ.ಜೆ.ಸದಾನಂದ ಅವರಿಗೂ, ಗ್ರಂಥಪಾಲಕರಾದ ಬೆನೆಟ್ ಅಮ್ಮನ್ ಅವರಿಗೂ, ಪ್ರೋತ್ಸಾಹ ಮತ್ತು ಪುಸ್ತಕ ಮಾಹಿತಿ ಒದಗಿಸಿದ ರೆ.ಜೆ.ಎಂ.ಜೋಗುಳ, ಮಿತ್ರರಾದ ರೆ.ಜಾನ್ ವೆಸ್ಲಿ, ಬಿಲಿವರ್ಸ್ ಚರ್ಚ್, ಬೈಬಲ್ ಕಾಲೇಜು, ಬಿಜಾಪೂರ ಮತ್ತು ಡಾ. ಬಿ.ಎಸ್.ತಲ್ವಾಡಿ ಅವರಿಗೂ,

ಇಂಗ್ಲೀಷ್ ವಿಶ್ವಕೋಶವನ್ನು ಗ್ರಹಿಸುವಲ್ಲಿ ಸಹಾಯ ನೀಡಿದ ಹಾಗೂ ತರ್ಜುಮೆ ಮಾಡಿಕೊಟ್ಟ ಅಣ್ಣ ದಿವಂಗತ ಜೋಶೇಫ್ ಪುನೀತ್ ಮತ್ತು ಕೆ.ಪಿ.ಮಧುಸೂಧನ್, ನನ್ನ ವೈಯುಕ್ತಿಕ ಹಾಗೂ ಶೈಕ್ಷಣಿಕ ಬದುಕಿನ ಅಭಿವೃದ್ಧಿಗೆ ಪ್ರೋತ್ಸಾಹ ನೀಡಿದ ಉಪನ್ಯಾಸಕ ಕುಮಾರಸ್ವಾಮಿ, ಶ್ರೀ ಮಂಜುನಾಥ ಚಿಕ್ಕನಗೌಡರ್, ಶ್ರೀ ಚಿದಂಬರಶೆಟ್ಟಿ, ಡಾ.ಎಸ್.ಎಂ.ಶೇಖ, ವೃತ್ತಿ ಕ್ಷೇತ್ರದಲ್ಲಿ ಅನುಕೂಲ ಒದಗಿಸಿದ ಪ್ರಾಚಾರ್ಯ ಶ್ರೀ ಕಾಳಿದಾಸ್ ಅವರಿಗೂ,

ನನ್ನ ಅಧ್ಯಯನಕ್ಕೆ ಯಾವ ಅಡೆತಡೆ ಬರದಂತೆ ಪ್ರಾರ್ಥನ ಬಲವನ್ನು ನೀಡಿದ ಪೂಜ್ಯರಾದ ರೆ.ಶಾಂತರಾಜ, ರೆ.ಸಂಸೋನ ಮಳೇಕಾರ, ರೆ.ಎಂ.ರಾಜು, ರೆ.ಶಾಂತಕುಮಾರ, ರೆ.ಜಾಕಬ್, ರೆ.ಇಮ್ಮಾನುವೆಲ್ ಹಾಗೂ ನೋರಾ ಮಾರ್ಟಿನ್ ಶೇಖರ್, ಡಾ.ಸಂಜೀವ ಕುಮಾರ್ ಅವರಿಗೂ,

ಸತತ ಹತ್ತು ವರ್ಷಗಳ ಈ ಪ್ರಬಂಧ ರೂಪ ಪಡೆಯುವಲ್ಲಿ ನನ್ನೊಂದಿಗೆ ತನು, ಮನ, ಧನ ವ್ಯಯಿಸಿ ಕಾಂತಾ ಸಮ್ಮಿತೋಪದೇಶ ನೀಡಿ ಅಧ್ಯಯನ ಗುರಿ ಮುಟ್ಟುವಲ್ಲಿ ಸಹಕರಿಸಿದ ನನ್ನ ಪತ್ನಿ ವಿಜಯಕುಮಾರಿ ಹಾಗೂ ಅಧ್ಯಯನದ ಮುಕ್ತಾಯವನ್ನು ಕಾಣಲು ತವಕದಲ್ಲಿದ್ದ ಜೇಷ್ಠಪುತ್ರ ರೋನಾಲ್ಟ್, ಕಿರಿಯ ಪುತ್ರ ರಿಚರ್ಡ್ ಹಾಗೂ ಅಮಿತ್. ಅಧ್ಯಯನ ವೇಳೆ ರಾತ್ರಿ, ಹಗಲು, ಶುಶ್ರೂಷೆಗೈದ ಮಗಳಾದ ದೀಪ ವಿಜಯೇಂದ್ರ ಹಾಗೂ ಕಾಲಕಾಲಕ್ಕೆ ವಿಚಾರಿಸುತ್ತಾ ಪ್ರಬಂಧ ಕಣ್ತುಂಬ ನೋಡುವ ಅಶೆಹೊತ್ತ ಅಣ್ಣ ಸುಮುವೇಲ್, ಅಕ್ಕಂದಿರಾದ ಶ್ರೀಮತಿ ಕ್ರಿಸ್ತೀನಾ ನಡುಕಟ್ಟಿನ, ಶ್ರೀಮತಿ ಮನೋರಮಾ, ಶ್ರೀಮತಿ ಸುಹಾಸಿನಿ ಬಂಡಿ ಅವರಿಗೂ,

ಅಧ್ಯಯನದಲ್ಲಿ ವೈಯಕ್ತಿಕ ಸಲಹೆ, ಮಾರ್ಗದರ್ಶನ ನೀಡಿದ ದಾವಣಗೆರೆ ಜಿಲ್ಲಾಪಂಚಾಯತ್ ಶಿಕ್ಷಣ ಮತ್ತು ಆರೋಗ್ಯಸ್ಥಾಯಿ ಸಮಿತಿ ಅಧ್ಯಕ್ಷ ಡಾ.ವೈ.ರಾಮಪ್ಪ ಅವರಿಗೂ, ನನ್ನ ಅಧ್ಯಯನಕ್ಕೆ ಆಂತರಿಕ ಶಕ್ತಿಯಾದ ಹಲವು ಪೂರ್ವದ ಕೃತಿ ಸಂಗ್ರಹಿಸಿ ಅಧ್ಯಯನಕ್ಕೆ ಅವಳಡಿಸಿಕೊಳ್ಳಲು ಅವಕಾಶ ಒದಗುವಂತೆ ಮಾಡಿದ ತಂದೆಯವರಾದ ದಿವಂಗತ ರೆ.ಟಿ.ಜೆ.ಪುನೀತ ದಾನಿಯೇಲ್ ಪುನೀತರವರಿಗೂ,

ಕರಡುಪ್ರತಿ ತಿದ್ದುವಲ್ಲಿ ನನ್ನ ಜೊತೆ ಸಹಕರಿಸಿದ ಶ್ರೀ ಕಲ್ಲಯ್ಯ ಹಿರೇಮಠ ಮತ್ತು ಅಕ್ಷರ ಸಂಯೋಜಿಸಿದ ಶ್ರೀಮತಿ ರಶ್ಮಿಕೃಪಾಶಂಕರ್ ಹಾಗೂ ಶ್ರೀ ಎ.ಎಂ.ಕೃಪಾಶಂಕರ್ ಅವರಿಗೂ,

ಹೃದಯ ಪೂರ್ವಕ ಕೃತಜ್ಞತೆಗಳು.

ಈ ಅಧ್ಯಯನದ ಪ್ರಾರಂಭದಿಂದ ಅಂತ್ಯದವರೆಗೂ ನನ್ನ ಆಶೀರ್ವದಿಸಿ ಪ್ರಬಂಧ ಮಂಡಿಸಲು ಕಾರಣೀಕರ್ತನಾದ ಶ್ರೀ ಏಸುಕ್ರಿಸ್ತ ಪರಬ್ರಹ್ಮಣೇನಮಃ

ಡಿ. ಟಿ. ಪುನೀತ್

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವಿಧಾನ

೧.೧. ಅಧ್ಯಯನದ ಉದ್ದೇಶ

೧.೨. ಅಧ್ಯಯನದ ಸ್ವರೂಪ

೧.೩. ಅಧ್ಯಯನ ವಿಧಾನ

೧.೪. ಈವರೆಗೆ ನಡೆದ ಅಧ್ಯಯನ

೧

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವಿಧಾನ

೧.೧. ಅಧ್ಯಯನದ ಉದ್ದೇಶ

ಅನೇಕ ಕಾದಂಬರಿಗಳನ್ನು, ಇತರ ಗ್ರಂಥಗಳನ್ನೂ ರಚಿಸಿದ ಪ್ರಸಿದ್ಧ ಇಂಗ್ಲೀಷ್ ಲೇಖಕ ಸರ್ ವಾಲ್ಟರ್ ಸ್ಕಾಟ್‌ನು ತನ್ನ ಅಂತ್ಯ ಕಾಲದಲ್ಲಿ ಮರಣಶಯ್ಯೆಯ ಸಮೀಪದಲ್ಲಿ ನಿಂತಿದ್ದ ಬಂಧುವಿಗೆ 'ಗ್ರಂಥವನ್ನು ತಾ' ಎಂದನು. ಆದರೆ ಆ ಬಂಧುವು ಮಾತ್ರ ಸ್ಕಾಟನ್ ಮಾತುಗಳಲ್ಲಿ ಸ್ಪಷ್ಟತೆಯನ್ನು ಬಯಸುತ್ತ 'ಯಾವ ಗ್ರಂಥ'? ಎಂದು ಪ್ರಶ್ನಿಸಿದನು. ಅನೇಕ ಗ್ರಂಥಗಳನ್ನು ರಚಿಸಿದ ಆತನು ಸೂಚಿಸುವುದು ಯಾವ ಗ್ರಂಥವೆಂದು ಆತನು ತಿಳಿಯಬಯಸಿದನು. ಆದರೆ ಬಂಧುವಿನ ಮಾತಿನಲ್ಲಿ ಆಶ್ಚರ್ಯವನ್ನು ಸೂಚಿಸುತ್ತ "ಏನು? ಯಾವ ಗ್ರಂಥ? ಇರುವುದು ಒಂದೇ ಗ್ರಂಥವಲ್ಲವೇ? ಎಂದು ಸ್ಕಾಟನು ಬೈಬಲ್ ತರಲು ಹೇಳಿದನು.[೧]

ಜಗತ್ತಿನ ಜನರು ಅತ್ಯಧಿಕ ಸಂಖ್ಯೆಯಲ್ಲಿ ಬಳಸುವ ಗೌರವಿಸುವ ಪೂಜ್ಯ ಹಾಗೂ ಪವಿತ್ರಗ್ರಂಥ ಬೈಬಲ್ . ಯಹೂದಿ ಧರ್ಮಕ್ಕೂ ಇಸ್ಲಾಂ ಧರ್ಮಕ್ಕೂ ಅನ್ವಯಿಸುವ ಧರ್ಮಗ್ರಂಥ ಇದಾಗಿದೆ. ಈ ಗ್ರಂಥ ಜಗತ್ತಿನ ಎಲ್ಲ ಲಿಖಿತ ಹಾಗೂ ಅಲಿಖಿತ ಭಾಷೆಗಳಲ್ಲಿ ದೊರೆಯುತ್ತದೆ. ಮತ್ತು ಜಾಗತಿಕ ಮಟ್ಟದಲ್ಲಿ ಅತ್ಯಧಿಕ ಮಾರಾಟವಾಗುವ ಏಕೈಕ ಗ್ರಂಥ ಇದಾಗಿದೆ.

ಗ್ರಂಥವೆಂದು ಕರೆಯಿಸಿಕೊಳ್ಳುವ ಮೊದಲ ಕೃತಿ ಇದೆಂದರೆ ತಪ್ಪಾಗಲಿಕ್ಕಿಲ್ಲ. ಯಾಕೆಂದರೆ ಬೈಬಲ್ (Bible) ಎಂಬ ಶಬ್ದ ಮೂಲತಃ ಗ್ರೀಕಿನದು. Biblos ಎಂದರೆ ಗ್ರಂಥ ಎಂದು ಅರ್ಥ. ಇದು ಅನೇಕ ಪುಸ್ತಕಗಳ ಹೊತ್ತಿಗೆ. ಎಲ್ಲ ಧರ್ಮಗ್ರಂಥಗಳಂತೆ ಕಂಡುಬಂದರೂ ತನ್ನದೆಯಾದ ವಿಶಿಷ್ಟತೆಯಿಂದ ಕೂಡಿದ್ದು ಎಲ್ಲ ಧರ್ಮಗ್ರಂಥಗಳಿಂದ ವಿಭಿನ್ನವಾಗಿ ತೋರಿಬರುವುದು.

ಧರ್ಮಗ್ರಂಥಗಳು ಒಬ್ಬ ವ್ಯಕ್ತಿಯ ಮೂಲದಿಂದ ಹುಟ್ಟಿ ಬಂದವುಗಳಾಗಿವೆ. ಒಬ್ಬ ಕರ್ತೃ ಪ್ರಾರಂಭಿಸಿ ಆತನೆ ಮುಕ್ತಾಯ ಮಾಡಿರುವುದು ಸಹಜ. ಆದರೆ *ಬೈಬಲ್ ಎಂಬ ಹೆಸರನ್ನು ಜಾನ್

---

೧. ಕ್ರೈಸ್ತ ತತ್ವದರ್ಶನ ಎಡ್ವಿನ್ ಡಿಸೋಜ, ಪು.೧೫

* ೩ನೇ ಶತಮಾನದ ಮಧ್ಯದಲ್ಲಿ ಕ್ಲಮೆಂಟ್(Clement) ಎಂಬುವನು ಪ್ರಪ್ರಥಮವಾಗಿ ಬೈಬಲ್ ಎಂದು ಕರೆದನು.

ಕ್ರಿಸೊಸ್ತಮ್ ಎಂಬ ಧರ್ಮಾಧಿಕಾರಿ ಇತ್ತನು.* ಇದಕ್ಕೂ ಮೊದಲು ಪ್ರವಾದಿ ಮೋಶೆಯು ಬರೆದನೆನ್ನಲಾದ ಐದುಕಾಂಡ (ಆದಿಕಾಂಡ, ವಿಮೋಚನಕಾಂಡ, ಯಾಜಕಕಾಂಡ, ಅರಣ್ಯಕಾಂಡ, ಧರ್ಮೋಪದೇಶಕಾಂಡ)ಗಳನ್ನು ಪಂಚಕಾಂಡಗಳು ಎಂದು ನಂತರದಲ್ಲಿ ಪ್ರವಾದಿಗಳು ನಿಯಮಶಾಸ್ತ್ರಗಳ ಬರವಣಿಗೆ ಸೇರಿ 'ಸೆಪರ ತೊರಾನೆಬಿಯುಂ ಉಕೆತುಂಬಿಂ' ಎಂದು ಇಬ್ರೀಯ ಭಾಷೆಯಲ್ಲಿ ಕರೆಯಲಾರಂಭಿಸಿದರು. ಅನಂತರ ಇದು ಗ್ರೀಕ್‌ನಲ್ಲಿ ಭಾಷಾಂತರಗೊಂಡು ಸೆಪ್ತುವೆಂಗಿತ (SEPTUAGINT) ಎಂದು ಕರೆಯಿಸಿಕೊಳ್ಳಲು ಪ್ರಾರಂಭಿಸಿತು. ಗ್ರೀಕಿನಲ್ಲಿ ೭೦ (LXX) ಎಂದು ಕರೆಯುವ ಸಂಖ್ಯೆಗೆ 'ಸೆಪ್ತುವೆಂಗಿತ' ಎನ್ನುವರು ಗ್ರೀಕ ಭಾಷೆಗೆ ಭಾಷಾಂತರಿಸುವಾಗ ೭೦ ಜನ ಸೇರಿ ಭಾಷಾಂತರಿಸಿದ್ದರಿಂದ ಈ ಹೆಸರು ರೂಢಿಗೆ ಬಂದಿತೆಂದು ಹೇಳಲಾಗಿದೆ. ಕಾಲ ಸರಿದಂತೆ ಬೈಬಲ್ ಮೊದಲ ಭಾಗ ಹಳೆ ಒಡಂಬಡಿಕೆಗೆ ಮಾತ್ರ ಈ ಹೆಸರು ಸೀಮಿತವಾಯಿತು.

ಮುಂದೆ ಆಯಾ ಭಾಷೆಗಳಲ್ಲಿ, ಆಯಾ ಸ್ಥಳಗಳಲ್ಲಿ ಭಾಷಾಂತರ ಕ್ರಿಯೆ ನಡೆದು ಸ್ಥಳೀಯ ಆವೃತ್ತಿಗಳು ಬೇರೆ ಬೇರೆ ಹೆಸರಿನಿಂದ ಬಳಕೆಗೆ ಬಂದವು. ಬೈಬಲ್ ಏಕವ್ಯಕ್ತಿಯ ಬರಹವಲ್ಲ. ಒಟ್ಟು ೪೯ ಕೃತಿಕಾರರಿಂದ ರಚಿತವಾಗಿದೆ. ಇದರ ಕಾಲ ೧೬೦೦ ವರ್ಷಗಳು. ಹೀಗಾಗಿ ಜಗತ್ತಿನ ಎಲ್ಲ ಧರ್ಮಗ್ರಂಥಗಳಿಗೆ ಇರುವಂತೆ ಒಬ್ಬನೇ ಕರ್ತೃ ಇಲ್ಲ. ಕಾಲ ಕಾಲಕ್ಕೆ ಪ್ರವಾದಿಗಳಿಂದ ಆಯಾ ಜನ ಸಮುದಾಯಕ್ಕೆ ಬರೆದಿಟ್ಟ ಪವಿತ್ರವೆಂದೆನಿಸಿದ ಕೃತಿಗಳು ಒಟ್ಟುಗೂಡಿದೆ. ಇದರಲ್ಲಿ ಪ್ರಮುಖವಾಗಿ ಎರಡು ಭಾಗಗಳು. ಹಳೆ ಒಡಂಬಡಿಕೆ ಹಾಗೂ ಹೊಸ ಒಂಡಬಡಿಕೆ. ಇಲ್ಲಿಯ ಒಡಂಬಡಿಕೆ ಶಬ್ದದ ಉತ್ಪತ್ತಿ ಟೆಸ್ಟಮೆಂಡ್ (Testment) ಎಂಬುದು. ಒಡಂಬಡಿಕೆ ದೇವರು ಮಾನವನೊಂದಿಗೆ ಮಾಡಿಕೊಂಡ ಒಪ್ಪಂದ ಎಂದು ತಿಳಿಯಲಾಗಿದೆ.

ಬೈಬಲ್ ಎಂಬ ಶಬ್ದ ಇಂದು ಬಹು ವಿಶಾಲ ಅರ್ಥದಲ್ಲಿ ಕ್ರೈಸ್ತೇತರಲ್ಲಿ ಬಳಕೆಯಾಗುತ್ತಿದೆ. ಇಂದಿನ ಐಟಿ ಕಂಪನಿಗಳೂ ತರಬೇತಿ ನೀಡಿ ನಂತರ ಬಳಸುವುದಕ್ಕಾಗಿ ಸಾಹಿತ್ಯ ಒದಗಿಸುವಾಗ 'ನೀವು ಇದನ್ನು ಬೈಬಲ್ ಎಂದು ಅನುಸರಿಸಿ (you follow it as a Bible) ಬೈಬಲ್ ಎಂದು ಇದನ್ನು ಓದಿರಿ (you Reed It as a Bible) ಎಂದು ಹೇಳುವ ವಾಡಿಕೆ ಬೆಳೆದುಬಂದಿದೆ.

'ಬದುಕಲು ಬೇಕು ಬದುಕುವ ಈ ಮಾತು' ಎಂಬ ಪಾಟೀಲ ಪುಟ್ಟಪ್ಪರ ಕೃತಿಗೆ ಎನ್ಕೆಯವರು ಮುನ್ನುಡಿ ಬರೆಯುವಾಗ "ಈ ಬದುಕಿನ ಮಾತುಗಳು ಕನ್ನಡದ ಬೈಬಲ್ ಆಗಿ ಮಾಗಿವೆ" ಎಂದಿದ್ದಾರೆ. ಇಲ್ಲಿ ಬೈಬಲ್ ಶಬ್ದದ ಅರ್ಥದ ಬಳಕೆ ವಿಶಿಷ್ಟ ಅರ್ಥವನ್ನು, ಸತ್ಯ ಎನ್ನುವ ಅಂಶವನ್ನು ಪಡೆದುಕೊಂಡಿರುವುದನ್ನು ಗಮನಿಸಬಹುದು.

ಬೈಬಲ್ ಭಾಷಾಂತರ ಹಾಗೂ ರೂಪಾಂತರ ಪಡೆಯುತ್ತ ಯಾವ ಯಾವ ದೇಶವನ್ನು ಪ್ರವೇಶಿಸಿದೆಯೋ ಅಲ್ಲೆಲ್ಲ ತನ್ನದೆಯಾದ ಪ್ರಭಾವ ಬೀರಿದೆ. ಮತ್ತು ಯಾವ ಯಾವ ಭಾಷೆಯಲ್ಲಿ

ಭಾಷಾಂತರಗೊಂಡಿದೆಯೋ ಆಯಾ ಭಾಷೆಯ ಪರಿಯನ್ನೆ ಬದಲಾಯಿಸಲು ಕಾರಣವಾಗಿದೆ. ಬೈಬಲ್ ಸಾಹಿತ್ಯದಲ್ಲಿ, ಸಾಹಿತ್ಯದ ಎಲ್ಲ ಪ್ರಕಾರಗಳೂ ಒಳಗೊಂಡಿವೆ. ಇಲ್ಲಿ ಕಥೆಗಳಿವೆ. ದೃಷ್ಟಾಂತಗಳಿವೆ. ಕಾದಂಬರಿ ನಿರ್ಮಾಣವಾಗುವ ಸಾಹಿತ್ಯವಿದೆ. ನಾಟಕಕ್ಕೆ ಬೇಕಾದ ಸಂಭಾಷಣೆ ಇದೆ. ಗೀತೆಗಳಿಗೆ ಬೇಕಾದ ಪ್ರಾಚೀನ ಶೈಲಿಯ ಲಾಲಿತ್ಯದ ಕಾವ್ಯ ಸಾಹಿತ್ಯವಿದೆ. ಹೀಗಾಗಿ ಇದು ಕಾಲಿರಿಸಿದ ನಾಡಾಗಲಿ, ಭಾಷೆಯಾಗಲಿ ಇದರ ಪ್ರಭಾವಕ್ಕೆ ಒಳಗಾಗಲೇ ಬೇಕಾದ ಪ್ರಸಂಗ ಒದಗಿ ಬರುವುದನ್ನು ಕಾಣಬಹುದು. ಬೈಬಲ್ ಸರಳ ಕನ್ನಡದಲ್ಲಿ ತರ್ಜುಮೆ ಪಡೆಯುವಾಗ ಹೊಸಗನ್ನಡ ರೂಪ ಇರಲಿಲ್ಲ. ಬೈಬಲ್ ಭಾಷಾಂತರದೊಂದಿಗೆ ಹೊಸಗನ್ನಡ ರೂಪ ಈಗಿನ ಸ್ಥಿತಿಗೆ ಬರುವಲ್ಲಿ ಹೇಗೆ ಶ್ರಮಿಸಿದೆ ಎಂಬುದನ್ನು ಬೈಬಲ್ ಆವೃತ್ತಿಗಳಿಂದ ತಿಳಿಯಲು ಅನುಕೂಲವಾಗುವುದೆಂಬುದನ್ನು ಅಧ್ಯಯನ ಕಂಡುಕೊಳ್ಳಬೇಕಿದೆ.

ಬೈಬಲ್ ಭಾಷಾಂತರ, ರೂಪಾಂತರ ಮೊದಲಾದ ರೀತಿಗಳಲ್ಲಿ ಅವತರಿಸಿದೆ. ಕಥೆ, ಕಾವ್ಯ, ನಾಟಕ, ಕಾದಂಬರಿ ಮೊದಲಾದ ಆಧುನಿಕ ಸಾಹಿತ್ಯ ಪ್ರಕಾರಗಳ ಮೇಲೆಯೂ ಅದು ಪ್ರಭಾವ ಬೀರುತ್ತಾ ಬಂದಿದೆ. ಇದರಿಂದಾಗಿ ಕನ್ನಡದಲ್ಲಿಯೂ 'ಬೈಬಲ್ ಸಾಹಿತ್ಯ ಪರಂಪರೆಯೊಂದು ತೆರೆದುಕೊಂಡಿದೆ. ಈ ಪರಂಪರೆ ಯನ್ನು ಸಮಗ್ರವಾಗಿ ಪರಿಶೀಲಿಸಿ ಇದರ ಮೂಲಕ ಹೊಸಗನ್ನಡ ಭಾಷೆ, ಸಾಹಿತ್ಯಗಳಿಗೆ ಸಂದ ಕಾಣಿಕೆಯೇನು? ಅವುಗಳ ಮೇಲಾದ ಪರಿಣಾಮವೇನು? ಎಂಬಿವುಗಳನ್ನು ವಿವೇಚಿಸುವುದೇ ಈ ಅಧ್ಯಯನದ ಉದ್ದೇಶವಾಗಿದೆ.

ಮಿಶನರಿಗಳ ಕಾಲಕ್ಕೆ ಕನ್ನಡದಲ್ಲಿ ಹೊಸಗನ್ನಡದ ಅವಶ್ಯಕತೆ ಇತ್ತೇ? ಎಂದು ಪ್ರಶ್ನಿಸಿಕೊಂಡಾಗ ಕನ್ನಡ ಸಾಹಿತ್ಯದ ಗದ್ಯ, ಹೊಸ ಕನ್ನಡ ರೂಪ ಪಡೆಯುವ ಯಾವ ಲಕ್ಷಣಗಳೂ ಇರಲಿಲ್ಲವೆನ್ನಬಹುದು. ಹಳೆಗನ್ನಡದ ಗದ್ಯದ ಸಾಹಿತ್ಯ ಅಷ್ಟೊಂದು ಅವಶ್ಯಕವೆಂದೆನಿಸದೆ ಹೊಸಗನ್ನಡ ಗದ್ಯದ ಸುಳಿವಾದರು ಕಾಣುವುದು ಹೇಗೆ?

ಮಿಶನರಿಗಳು ಸರಳ ಕನ್ನಡವನ್ನು ಹಾಗೂ ಆಡುನುಡಿಯನ್ನು ಬಳಸುವ ಉದ್ದೇಶ ತಳೆದುದರಿಂದಲೇ, ಹೊಸ ಸೃಷ್ಟಿಗೆ ಕನ್ನಡ ಸಾಹಿತ್ಯದಲ್ಲಿ ಅವಕಾಶ ಉಂಟಾಯಿತು. "ಇದಲ್ಲದೆ ಹೊಸಕನ್ನಡ ಗದ್ಯ ಸಾಹಿತ್ಯದ ಮೂಲ ಪುರುಷರೂ ಪಾಶ್ಚಾತ್ಯರೆಂದೇ ಹೇಳಬಹುದಾಗಿದೆ. ಕಾರಣ 'ವಡ್ಡಾರಾಧನೆ' ಮತ್ತು 'ವಚನಗಳು' ಎಂದೋ ಪ್ರಚಾರದಲ್ಲಿದ್ದು ತಣ್ಣಾಗಿದ್ದು ಮುದ್ದಣ ಮತ್ತು ಅವನ ಸಮಕಾಲೀನ ಗದ್ಯ ಸಾಹಿತ್ಯಕ್ಕಿಂತ ಮುಂಚೆ. ಜಾನ್ ಹ್ಯಾಂಡ್ಸ್, ಜಾನ್ ರೀಡ್ ಮುಂತಾದವರು ಬೈಬಲನ್ನು ಸುಮಾರು ೨೦೦೦ ರಿಂದ ೩೦೦೦ (ಡೆಮ್ಮಿ) ಪುಟಗಳಷ್ಟು ಬರೆದು ಗದ್ಯ ಸಾಹಿತ್ಯವನ್ನು ವಿಪುಲವಾಗಿ ಬೆಳೆಸಿದ್ದಾರೆ... ಹೀಗೆ ಪಾಶ್ಚಾತ್ಯರ ಸಂಪರ್ಕದಿಂದಲೇ, ಹೊಸಗನ್ನಡ ಕಾವ್ಯ ರಚನೆಗೆ ಸ್ಫೂರ್ತಿ ದೊರತಿದೆಯೆಂದು ಸ್ಪಷ್ಟೀಕರಿಸಬೇಕಾಗಿದೆ."[೧] ಇದರ ಕುರಿತು ಸವಿವರವಾಗಿ ಕಂಡುಕೊಳ್ಳುವ ಉದ್ದೇಶ ಈ ಅಧ್ಯಯನದ್ದಾಗಿದೆ.

---

೧. ಕ.ಸಾ. ಮತ್ತು ಧರ್ಮ, ಹೊ.ಗ.ಮನಹೋರ, ಪು.೭೮-೭೯

ಕೇವಲ ಸಾಹಿತ್ಯದ ಮೇಲೆ ಪ್ರಭಾವಗೊಳ್ಳದೆ, ಎಲ್ಲ ಕ್ಷೇತ್ರಗಳಲ್ಲಿಯೂ ಇದರ ಪ್ರಭಾವ ಕಾಣಸಿಗುತ್ತದೆ. ಕನ್ನಡ ಸಾಹಿತ್ಯ ಧಾರ್ಮಿಕ ಸಾಹಿತ್ಯದಿಂದ ಹೊರತಾದುದಲ್ಲ. ಆದುದರಿಂದ ಬೈಬಲ್ ಸಾಹಿತ್ಯದ ಪ್ರಭಾವ ಕನ್ನಡ ಧಾರ್ಮಿಕ ಸಾಹಿತ್ಯದ ಮೇಲೆ, ಬಿರುಗಾಳಿಯೋಪಾದಿಯಲ್ಲಿ ತೂರಿ ಬಂದಿತೆಂದರೆ ಅತಿಶಯೋಕ್ತಿ ಆಗಲಾರದು ಈ ಸಾಹಿತ್ಯ ಕೇವಲ ಬ್ರಿಟೀಷರ ಕಾಲದಿಂದ ಮಾತ್ರ ಗುರುತಿಸದೆ, ಯೇಸು ಕ್ರಿಸ್ತನ ಶಿಷ್ಯರಲ್ಲಿ ಒಬ್ಬನಾದ ಸಂತ ಥೊಮಸ್‌ನು ಭಾರತಕ್ಕೆ ಬಂದಾಗಿನಿಂದ, ಭಾರತದ ಮೇಲೆ 'ಏಕದೇವೋಪಾಸನೆ ಪ್ರಾರಂಭವಾದಾಗಿನಿಂದ ಗುರುತಿಸಬಹುದಾಗಿದೆ.'(ಥೋಮಸ್ ಕೊನೆಗೆ ಮದ್ರಾಸಿನಲ್ಲಿ ಅಂತ್ಯವಾದನೆಂಬ ಪ್ರತೀತಿ ಇದ್ದು ಆತನ ಸಮಾಧಿಯನ್ನು ಈಗಲೂ ಕಾಣಬಹುದು)

ಕನ್ನಡ ನಾಡು ಬಹುಧರ್ಮಿಯತೆಯನ್ನು ಹೊಂದಿ ಹಲವು ದೇವರುಗಳನ್ನು ಪೂಜಿಸುವ, ಗೌರವಿಸುವ ನಾಡಾಗಿದೆ. ಇಲ್ಲಿ ಎಲ್ಲ ಧರ್ಮೀಯರಿಗೂ ಸದಾವಕಾಶವಿದೆ. ಹೀಗಾಗಿ ಧರ್ಮಸಮನ್ವಯತೆ ಕಂಡುಬರುವುದು ಬೈಬಲ್ ಸಾಹಿತ್ಯ ಭಾರತವನ್ನು ಪ್ರವೇಶಿಸಿದಾಗ ಭಾರತೀಯ ಧರ್ಮದೃಷ್ಟಿ ಬದಲಾಯಿತು. ಧರ್ಮ ಜಾಗೃತಿವುಂಟಾಗಿ ಸತ್ಯಾಸತ್ಯತೆಯನ್ನು ಒರೆಗೆ ಹಚ್ಚುವ, ವಿಮರ್ಶಿಸುವ ಕಾಲ ಒದಗಿಬಂತು. ಧರ್ಮ-ಧರ್ಮಗಳಲ್ಲಿ ಘರ್ಷಣೆ ಪೈಪೋಟಿ, ಮೇಲು-ಕೀಳೆಂಬ ಭಾವನೆಗೆ ಎಡೆ ಉಂಟಾಗಿ ಅನೇಕ ಸಂಘ-ಸಂಸ್ಥೆಗಳು ಉದ್ಭವವಾದವು ಉದಾ : ಆರ್ಯ ಸಮಾಜ, ಬ್ರಹ್ಮೋ ಸಮಾಜ, ರಾಮಕೃಷ್ಣ ಮಿಶನ್ ಮುಂತಾದವು. ಈ ಕುರಿತು ಅಧ್ಯಯನ ಅವಶ್ಯಕತೆ ಕಂಡುಬರುವುದು.

ಮಿಶನರಿಗಳು ಭಾರತೀಯ ಧರ್ಮವನ್ನು ಟೀಕಿಸಿದರು ಎಂಬ ಮಾತು ಇದೆ. ವೈವಿಧ್ಯದಲ್ಲಿ ಏಕತ್ವವನ್ನು ಕಾಣುವ ಭಾರತೀಯರು ಕ್ರೈಸ್ತ ಧರ್ಮವನ್ನು ಸ್ವೀಕರಿಸಿದ್ದು, ಅದು ಬಾಳಿ ಬದುಕಲು ಅವಕಾಶ ಕಲ್ಪಿಸಿದ್ದು ನಿಜ. ಆದರೆ ಕ್ರೈಸ್ತಧರ್ಮ ತನ್ನ ಧರ್ಮ ತತ್ವಗಳನ್ನು ಬಿತ್ತರಿಸಲನುವಾಗಿ ಇತರ ಧರ್ಮಗಳನ್ನು ಹಳಿಯಲು ಪ್ರಾರಂಭಿಸಿರುವುದು ಸರಿಯಲ್ಲ ಎಂಬುದು ಸರಿ ಅಷ್ಟೇ. ಆದರೆ ಕ್ರೈಸ್ತರ ಕ್ರೈಸ್ತತ್ವ ಭಾರತದಲ್ಲಿ/ಕರ್ನಾಟಕದಲ್ಲಿ ಕಾಲಿರಿಸುವುದಕ್ಕೆ ಮೊದಲು ಯಾವ ಒಂದು ಧರ್ಮ ಇನ್ನೊಂದು ಧರ್ಮವನ್ನು ಹಳಿದಿಲ್ಲವೆ?

ಶೈವರು ವೈಷ್ಣವರನ್ನು, ಬ್ರಹ್ಮನ ಆರಾಧಕರು ವಿಷ್ಣುವನ್ನು ಹಳಿದು ಬರೆದ ಶ್ಲೋಕಗಳೆಷ್ಟೋ! ನಂತರದ ವೀರಶೈವ ಪಂಥ ತನ್ನೆಲ್ಲ ಹಳೆಯ ಆರ್ಶೇಯ ಧರ್ಮತತ್ವಗಳನ್ನು ನೇರವಾಗಿಯೇ ಖಂಡಿಸಿ, ತೆಗಳಿರುವುದಕ್ಕೆ ಇಂದು ನಮಗೆ ವಚನ ವಾಙ್ಮಯವೇ ಸಾಕ್ಷಿ, ಒಂದರ್ಥದಲ್ಲಿ ವಚನಕಾರರಷ್ಟು ನೇರವಾಗಿ ಯಾರು ಟೀಕಿಸಿಲ್ಲ ಎನ್ನಬಹುದು. ಮಿಶನರಿಗಳ ಸಾಹಿತ್ಯ ಇದೇ ಪರಂಪರೆ ಎಡೆಗೆ ಸಾಗಿ ಧರ್ಮ ಜಾಗೃತಿಯನ್ನುಂಟು ಮಾಡಿರುವುದರಲ್ಲಿ ತಪ್ಪೇನಿಲ್ಲ ಎಂಬ ಅಂಶವನ್ನು ಈ ಅಧ್ಯಯನ ಕಂಡುಕೊಳ್ಳುವಲ್ಲಿ ಶ್ರಮಿಸುತ್ತದೆ.

ಮಿಶನರಿಗಳ ಟೀಕಾ ಪ್ರಹಾರವು ಹಿಂದೂ ಧರ್ಮಗಳ ಮೇಲೆ ಎರಗಿ ಬಂದಾಗ ಅಪಾರ ನೂತನ ವಿಚಾರಗಳಿಗೆ ಎಡೆ ಉಂಟಾಯಿತು. ಇದರ ಮೂಲಕ ಹೊಸಗನ್ನಡ ಗದ್ಯಕ್ಕೆ ಶೈಲಿಯ ಹೊಸತನ, ಸಂಭಾಷಣೆಯ ಕಸುವು, ಪಾಟಿ ಸವಾಲುಗಳ ನೂತನತೆ ಕಂಡುಬಂದ ಬಗೆಯ ಕುರಿತು ಅಧ್ಯಯನ ವಿವೇಚಿಸಬೇಕಾಗಿದೆ.

ಪ್ರಥಮ ಕನ್ನಡ ಸಾಹಿತ್ಯ ಚರಿತ್ರೆ ಬರೆದ ರೆ. ಕಿಟಲ್‌ರವರು ಕನ್ನಡ ಸಾಹಿತ್ಯವನ್ನು ಧಾರ್ಮಿಕ ನೆಲೆಗಟ್ಟುಗಳ ಮೇಲೆ ವಿಂಗಡಿಸಿದರು. ಇದನ್ನು ಮುಂದುವರೆಸಿ ಆರ್. ನರಸಿಂಹಾಚಾರ್ಯರು, ರಂ.ಶ್ರೀ ಮುಗಳಿಯವರು ಪುರಸ್ಕರಿಸಿದರು. ಆದರೆ ಮಿಶನರಿಗಳ ಧಾರ್ಮಿಕ ಸಾಹಿತ್ಯದ ಕೃತಿಗಳು ಸುಮಾರು ೫ ರಿಂದ ೬ ಸಾವಿರ ಪುಟಗಳಷ್ಟು ಕಂಡುಬಂದರೂ ಸಾಹಿತ್ಯ ಚರಿತ್ರೆಯಲ್ಲಿ ಈ ಕಾರ್ಯ ಗೌಣವಾಗಿರುವುದು ವಿಷಾದಕರ. ನನ್ನ ಅಧ್ಯಯನದಲ್ಲಿ ಇದನ್ನು ಅನುಲಕ್ಷಿಸಿ ಒಂದು ನಿರ್ಧಾರಕ್ಕೆ ಬರುವ ಪ್ರಯತ್ನವಿದೆ.

ಕನ್ನಡ ಧಾರ್ಮಿಕ ಸಾಹಿತ್ಯದಲ್ಲಿ ಕ್ರೈಸ್ತ ಧಾರ್ಮಿಕ ಸಾಹಿತ್ಯ ಕುರಿತು ಚಿಂತನ-ಮಂಥನ ಬಹು ವಿರಳ ಹಾಗೂ ಅಪರೂಪ. ಕಾರಣ ಎಲ್ಲ ಸಾಹಿತ್ಯ ಮತಾಂತರಕ್ಕೆ ಪ್ರಚೋದಿಸುತ್ತದೆಂಬ ಹಣೆಪಟ್ಟಿ ಕಟ್ಟಲಾಗಿದೆ. ಹೀಗಾಗಿ ಕ್ರೈಸ್ತೇತರರು ಕ್ರೈಸ್ತ ಸಾಹಿತ್ಯದಲ್ಲಿ ಕೃಷಿಗೈಯುವುದು ವಿರಳ. ಆದರೆ ಮಿಶನರಿಗಳು ಕನ್ನಡ-ಧಾರ್ಮಿಕ, ಪೌರಾಣಿಕ ಗ್ರಂಥಗಳನ್ನು ಗೌರವಿಸಿ ಮುದ್ರಿಸಿರುವುದು ಕಂಡುಬರುತ್ತದೆ. ಕ್ರೈಸ್ತೇತರರ ಕ್ರೈಸ್ತ ಸಾಹಿತ್ಯದ ನಿರಾಶಕ್ತಿಯನ್ನು ಅಧ್ಯಯನ ದೃಷ್ಟಿಸಲಿದೆ.

ಇಲ್ಲಿಯವರೆಗಿನ ಕ್ರೈಸ್ತ ಸಾಹಿತ್ಯ ಹಾಗೂ ಮಾಹಿತಿ ಕುರಿತು ಪ್ರಬಂಧಗಳು ಕನ್ನಡದಲ್ಲಿ ಬಂದಿದ್ದವು. ಪ್ರೊಟೆಸ್ಟೆಂಟ್ ಹಾಗೂ ಕೆಥೋಲಿಕ್ ಎಂಬ ಎರಡು ಪಂಗಡಗಳನ್ನು ಅನುಲಕ್ಷಿಸಿ ಪ್ರಬಂಧ ಹೊರ ಬಂದಿರುವುದಿಲ್ಲ. ಶ್ರೀ ಹಾವನೂರವರ ಹೊಸಗನ್ನಡ ಅರುಣೋದಯವನ್ನು ಹೊರತುಪಡಿಸಿ ಈ ಅಧ್ಯಯನದಲ್ಲಿ ಈ ಕೊರತೆಯನ್ನು ನೀಗಿಸುವ ಪ್ರಯತ್ನ ಮಾಡಲಾಗುವುದು.

ಕನ್ನಡ ಬೈಬಲ್ ಒಂದು ಅಧ್ಯಯನ ಎಂಬ ಶೀರ್ಷಿಕೆಯ ಅಡಿಯಲ್ಲಿ ಸಂಶೋಧನೆ ಕೈಗೊಳ್ಳುವಾಗ, ಬೈಬಲ್ ಸಾಹಿತ್ಯದ ಮೇಲೆ, ಅದರ ವಸ್ತುಸ್ಥಿತಿಯ ಮೇಲೆ ಹಾಗೂ ಅದರ ಕುರಿತು ಸಂಬಂಧಿಸಿರುವ ಸಾಹಿತ್ಯವನ್ನು ಅಧ್ಯಯನಕ್ಕೆ ನೇರವಾಗಿ ಬಳಸುವ ಉದ್ದೇಶವಿಲ್ಲ.

ಬೈಬಲ್ ಆಧಾರವಾಗಿಟ್ಟುಕೊಂಡು ಬೈಬಲ್ ಮಾಹಿತಿಗಳಾದ ಮಹತ್ವ-ರಚನೆ-ಕಾಲ-ಬಳಕೆ-ಪ್ರಯೋಜನಗಳನ್ನು ಅನುಲಕ್ಷಿಸುವುದು ಹಾಗೂ ಕನ್ನಡ ನಾಡಿನಲ್ಲಿ ಬೈಬಲ್ ಎಂಬ ಧರ್ಮಗ್ರಂಥ ಪ್ರವೇಶಿಸಿದ ಬಗ್ಗೆ ಅದಕ್ಕಾಗಿ ಶ್ರಮಿಸಿದವರ ಮಾಹಿತಿ, ಹೊಸಗನ್ನಡದ ಉದಯಕ್ಕೆ ಕಾರಣವಾದ ಬಗೆ ಮತ್ತು ಸಾಹಿತ್ಯ ಪ್ರಕಾರಗಳಲ್ಲಿ ಬೈಬಲ್ ಭಾಷಾಂತರದಿಂದ ಕಂಡುಬರುವ ಪ್ರಭಾವಗಳನ್ನು ಕಂಡುಕೊಳ್ಳುವಲ್ಲಿ ಶ್ರಮಿಸಬೇಕಾಗಿರುವುದನ್ನು ಅಧ್ಯಯನ ಪರಿಚಯಿಸುತ್ತದೆ.

ಬೈಬಲ್ ಎಲ್ಲರಿಗೂ ಪರಿಚಯವಾದ ಗ್ರಂಥವೆನ್ನುವುದು ಇದು ಬಾಹ್ಯಕ್ಕೆ ಅನ್ವಯಿಸುವ ಮಾತು. ಆದರೆ ಅದರ ಒಳನೋಟ ಹಾಗೂ ಕ್ರಿಸ್ತರಲ್ಲಿ ಎಷ್ಟರಮಟ್ಟಿಗೆ ಬಳಕೆಯಾಗಿದೆ, ಆಗುತ್ತಿದೆ ಎಂಬುದನ್ನು ಹಾಗೂ ಬೈಬಲ್ ಆಧಾರಿತ ಕ್ರೈಸ್ತೀಯ ಜೀವನ ಎಷ್ಟರಮಟ್ಟಿಗೆ ಪ್ರಚಲಿತವಿದೆ ಎಂಬುದನ್ನು ಅರಿತು ಕೊಳ್ಳುವಲ್ಲಿ ಅಧ್ಯಯನ ಪ್ರಯತ್ನಿಸುತ್ತದೆ.

ಭಾರತದಲ್ಲಿ ಹಾಗೂ ಕರ್ನಾಟಕದಲ್ಲಿ ಬೈಬಲ್ ಮೂಲಕ ಧಾರ್ಮಿಕ ಕ್ಷೇತ್ರಕ್ಕೆ ಸಂದ ಕಾಣ್ಕೆ ಏನು, ಪ್ರಭಾವ-ಪರಿಣಾಮವೇನೆಂಬುದನ್ನು ಇತರ ಧರ್ಮಗಳ ದೃಷ್ಟಿಕೋನದಡಿಯಲ್ಲಿ ಅಧ್ಯಯನಿಸುವ ಪ್ರಯತ್ನವೂ ಅಧ್ಯಯನದ ಉದ್ದೇಶಗಳಲ್ಲಿ ಒಂದಾಗಿದೆ.

೧.೨. ಅಧ್ಯಯನದ ಸ್ವರೂಪ

ಪ್ರಸ್ತುತ ಅಧ್ಯಯನವು ಕನ್ನಡ ಸಾಹಿತ್ಯದಲ್ಲಿ ಬೈಬಲ್ ಪ್ರವೇಶಿಸಿದರ ಪರಿಣಾಮವನ್ನು ಪ್ರತಿಕ್ರಿಯೆಯನ್ನು ಹಾಗೂ ಅಸ್ತಿತ್ವವನ್ನು ಕೂಲಂಕುಷವಾಗಿ ಕಂಡುಕೊಳ್ಳಲು ಪ್ರಯತ್ನಿಸುವುದು. ಬೈಬಲ್ ಭಾಷಾಂತರಿಂದ ಕನ್ನಡ ಸಾಹಿತ್ಯದ ಮೇಲೆ ಬೀರಿದ ಪ್ರಭಾವ ಹಾಗೂ ಭಾಷಾಂತರದ ಉದ್ದೇಶ, ಸ್ವರೂಪ, ಭಾಷಾಂತರದ ಕೊಡುಗೆ, ಶ್ರಮಗಳನ್ನು ಒಳಗೊಂಡಿದೆ.

ಕನ್ನಡ ನಾಡಿಗೆ ಸೇವೆ ಸಲ್ಲಿಸಿದ ಪಾಶ್ಚಾತ್ಯ ವಿದ್ವಾಂಸರ ಹಾಗೂ ಮಿಶನರಿಗಳ ಕೊಡುಗೆಯನ್ನು ಸಾಹಿತ್ಯ ಚರಿತ್ರೆ ಗೌಣವಾಗಿಯೇ ಪರಿಗಣಿಸಿದೆ. ಈ ಕುರಿತು ಸ್ಪಷ್ಟ ಚಿತ್ರಣ ಕಂಡುಕೊಳ್ಳಲು ಸಾಹಿತ್ಯ ಚರಿತ್ರೆಯಲ್ಲಿ ಮಿಶನರಿಗಳ ಸಾಹಿತ್ಯವನ್ನು ಪ್ರತ್ಯೇಕ ಗುರುತಿಸಲು ಒದಗಬಹುದಾದ ಮಾಹಿತಿಗಳ ಕುರಿತು ಅಧ್ಯಯನ ಪರಿಶೀಲಿಸಲಿದೆ. ಈ ಅಧ್ಯಯನಕ್ಕಾಗಿ ಕಂಡುಕೊಂಡ ಸ್ವರೂಪ ಇಂತಿದೆ.

ಅಧ್ಯಾಯ ಒಂದು : ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವಿಧಾನದಲ್ಲಿ ಬೈಬಲ್ ಜಾಗತಿಕ ಮಹಾಕೃತಿ; ಪೂಜ್ಯಕೃತಿ; ಅದು ಭಾಷಾಂತರ, ರೂಪಾಂತರ ಮೊದಲಾದ ರೀತಿಗಳಲ್ಲಿ ಅವತರಿಸಿದೆ. ಕಥೆ, ಕಾವ್ಯ, ನಾಟಕ, ಕಾದಂಬರಿ ಮೊದಲಾದ ಆಧುನಿಕ ಸಾಹಿತ್ಯ ಪ್ರಕಾರಗಳ ಮೇಲೆಯೂ ಅದು ಪ್ರಭಾವ ಬೀರುತ್ತ ಬಂದಿದೆ. ಇದರಿಂದಾಗಿ ಕನ್ನಡದಲ್ಲಿಯೂ ಬೈಬಲ್ ಸಾಹಿತ್ಯ ಪರಂಪರೆಯೊಂದು ತೆರೆದುಕೊಂಡಿದೆ. ಈ ಪರಂಪರೆಯನ್ನು ಸಮಗ್ರವಾಗಿ ಪರಿಶೀಲಿಸಿ, ಇದರ ಮೂಲಕ ಹೊಸಗನ್ನಡ ಭಾಷೆ, ಸಾಹಿತ್ಯಗಳಿಗೆ ಸಂದ ಕಾಣಿಕೆಯೇನು?; ಅವುಗಳ ಮೇಲಾದ ಪರಿಣಾಮವೇನು?; ಎಂಬಿವುಗಳನ್ನು ವಿವೇಚಿಸುವುದೇ ಈ ಅಧ್ಯಯನದ ಉದ್ದೇಶವಾಗಿದೆ.

ಅಧ್ಯಾಯ ಎರಡು : ಬೈಬಲ್ ಸ್ವರೂಪ, ಸಂಗ್ರಹ, ಸಂರಕ್ಷಣೆಯ ಇತಿಹಾಸದಲ್ಲಿ ಬೈಬಲ್ ಎಂದರೇನು? ಬೈಬಲಿನ ಮಹತ್ತ್ವವೇನು? ಬೈಬಲಿನ ಹಸ್ತಪ್ರತಿಗಳು, ಅದರ ಕರ್ತೃ, ಕಾಲ, ವಸ್ತು ಮತ್ತು

ಸಾಹಿತ್ಯ ಸ್ವರೂಪ, ಇತರ ಭಾಷೆಗಳ ಮೇಲೆ ಬೈಬಲಿನ ಪ್ರಭಾವ, ಬೈಬಲನ್ನು ಜಗತ್ತಿನಲ್ಲಿ ಅಭಿಜಾತ ಕೃತಿ ಎಂದು ಏಕೆ ಕರೆಯುತ್ತಾರೆ? ಇತ್ಯಾದಿ ಅಂಶಗಳ ಕುರಿತು ವಿವೇಚನೆಗಳನ್ನು ಇಲ್ಲಿ ನಡೆಸಲಾಗುತ್ತದೆ.

ಕನ್ನಡ ಬೈಬಲ್‌ಗಳ ಇತಿಹಾಸದಲ್ಲಿ ಕನ್ನಡ ಬೈಬಲಿನ ಕಾಲ, ಪ್ರಮುಖ ಬೈಬಲ್ ಅನುವಾದಕರು ಹಾಗೂ ಆವೃತ್ತಿಗಳು, ಅನುವಾದದಲ್ಲಿ ಸಹಾಯಕ ಪಾತ್ರ, ಅನುವಾದದಲ್ಲಿ ಬಳಸಿದ ರೀತಿ, ಅನುವಾದಕ್ಕಾಗಿ ಮತ್ತು ಪ್ರಕಟಣೆಗಾಗಿ ಆಯ್ದುಕೊಂಡ ಸ್ಥಳ, ಆ ಸಮಯದಲ್ಲಿ ಮುದ್ರಣಕ್ಕಾಗಿ ಬಳಸಿದ ಅಚ್ಚಿನ ವಿಧಾನ, ಅನುವಾದವನ್ನು ಪ್ರಕಟಿಸಿದ ಸಂಸ್ಥೆಗಳು ಮತ್ತು ಪ್ರಕಟಣೆಯ ವಿಧಾನ, ಉಪಲಬ್ಧ ಮತ್ತು ಅನುಪಲಬ್ಧ ಅನುವಾದಗಳು ಈ ವಿಷಯಗಳ ಸ್ವರೂಪ ಮತ್ತು ವಿವರಗಳನ್ನು ಇಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ಮೂರು : ಕನ್ನಡದಲ್ಲಿ ಧಾರ್ಮಿಕ ಸಾಹಿತ್ಯಕ್ಕೆ ಬೈಬಲಿನ ಕೊಡುಗೆ. ಕನ್ನಡದಲ್ಲಿ ಧಾರ್ಮಿಕ ಸಾಹಿತ್ಯ ಪರಂಪರೆ, ಬಹುಧರ್ಮಿಯತೆ, ವೈದಿಕ, ವೀರಶೈವ, ಇಸ್ಲಾಂ, ಕ್ರೈಸ್ತ ಮುಂತಾದವುಗಳ ವಿಶ್ಲೇಷಣೆ; ಬೈಬಲಿನ ವಸ್ತು ಮತ್ತು ಅರ್ಥವಂತಿಕೆಯ ಧಾರ್ಮಿಕ ಸಾಹಿತ್ಯಕ್ಕೆ ಸೇರಿರುವ ಮಹತ್ತ್ವದ ಅಂಶಗಳು ಅವುಗಳ ವಿವರ ಹಾಗೂ ಬೈಬಲ್ ಆಧಾರಿತ ಮಹತ್ತ್ವದ ಕೃತಿಗಳು ಸಾಹಿತ್ಯದ ಯಾವ ಮಹತ್ತ್ವದ ಭಾಗವಾಗಿ ಇವು ನೆಲೆ ನಿಂತಿವೆ. ಈ ದೃಷ್ಟಿಯ ಪರಿಶೀಲನೆಯಿಂದ ಕ್ರೈಸ್ತ ಸಾಹಿತ್ಯದ ಕೃತಿಗಳ ಮಹತ್ತ್ವ, ಸ್ಥಾನ, ಪ್ರಮಾಣ ಹೇಗಿವೆ? ಎಂಬ ಹಲವಾರು ಪ್ರಶ್ನೆಗಳ ಹಿನ್ನೆಲಯಲ್ಲಿ ಪ್ರಸ್ತುತ ಅಧ್ಯಯನದ ವಿವೇಚನೆ ಇದೆ.

ಅಧ್ಯಾಯ ನಾಲ್ಕು : ಹೊಸಗನ್ನಡದ ಗದ್ಯಶೈಲಿಯಲ್ಲಿ ಬೈಬಲಿನ ಪಾತ್ರ. ಹೊಸಗನ್ನಡ ಗದ್ಯವು ಬೈಬಲ್ ಮೂಲಕ ಹೊಸ ಹಾದಿಯನ್ನೇನಾದರೂ ಕಂಡುಕೊಂಡಿತೆ? ಹೊಸಗನ್ನಡ ಗದ್ಯಶೈಲಿಯ ಆರಂಭ ಮತ್ತು ಆರಂಭದ ಕೃತಿಗಳ ಹೊಸಗನ್ನಡ ಗದ್ಯಶೈಲಿಯ ಲೇಖಕರಾರು? ಈ ಕೃತಿಗಿಂತ ಪೂರ್ವದಲ್ಲಿ ಮಿಶನರಿಗಳಿಂದ ರಚಿತವಾದ ಕೃತಿಗಳ ಶೈಲಿ ಮತ್ತು ಸ್ವರೂಪದ ವಿವರಣೆಯನ್ನು ಮಾಡಲಾಗುತ್ತದೆ. ಬೈಬಲ್ ಅನುವಾದಗಳು ಕನ್ನಡದಲ್ಲಿ ಹೊಸಗನ್ನಡ ಸಾಹಿತ್ಯ ಜನ್ಮ ತಾಳುವುದಕ್ಕಿಂತ ಮೊದಲೆ ಇದ್ದವೇ? ಒಂದು ವೇಳೆ ಪೂರ್ವದಲ್ಲಿ ಮಿಶನರಿ ಸಾಹಿತ್ಯ ಇದ್ದರೆ ಅದಕ್ಕೂ ಬೈಬಲ್ ಅನುವಾದಕ್ಕೂ ಯಾವ ಸಂಬಂಧ ಇದೆ? ಕನ್ನಡ ಬೈಬಲಿನಲ್ಲಿ ಕಂಡುಬರುವ ಗದ್ಯದ ಸ್ವರೂಪ, ಇದರ ಪೂರ್ವದ ಕೃತಿಗಳಲ್ಲಿ ಕಂಡುಬರುವ ಗದ್ಯಕ್ಕೂ ಬೈಬಲಿನ ಗದ್ಯಕ್ಕೂ ಇರುವ ಸಂಬಂಧ ಮತ್ತು ಪ್ರಭಾವ ಇತ್ಯಾದಿಯಾಗಿ ಇಲ್ಲಿ ಅಧ್ಯಯನ ನಡೆಸಲಾಗುವುದು.

ಅಧ್ಯಾಯ ಐದು ಬೈಬಲ್ ಅನುವಾದದ ಸ್ವರೂಪ ಮತ್ತು ವೈಶಿಷ್ಟ್ಯ, ಕನ್ನಡ ಸಾಹಿತ್ಯದಲ್ಲಿ ಅನುವಾದ ಪರಂಪರೆ, ೧೯ನೇ ಶತಮಾನದಲ್ಲಿ ಆರಂಭದ ಅನುವಾದಗಳು, ಅವುಗಳ ವಸ್ತು, ಭಾಷಾ ಸ್ವರೂಪ ಮತ್ತು ಪ್ರಸರಣ, ಅನುವಾದಗಳಲ್ಲಿ ಧಾರ್ಮಿಕ ಕೃತಿಗಳ ಸ್ಥಾನ, ಬೈಬಲ್ ಅನುವಾದದ ಸಮಯದಲ್ಲಿ ಅನುವಾದಕರು ಇಟ್ಟುಕೊಂಡ ಉದ್ದೇಶ, ಆಸಕ್ತಿಗಳು ಹಾಗೂ ಸಾಹಿತ್ಯಗಳು, ಹಿಬ್ರೂ,

ಗ್ರೀಕ್, ಅರೇಬಿಕ್‌ನಂತಹ ಭಾಷೆಯಿಂದ ಭಾಷಾಂತರದಲ್ಲಿ ಉಂಟಾದ ಸಮಸ್ಯೆಗಳನ್ನು ಇಲ್ಲಿ ಚರ್ಚಿಸಲಾಗಿದೆ. ಅನುವಾದಕರ ವೈಯಕ್ತಿಕ ವಿದ್ವತ್ತು ಮತ್ತು ಅವರ ಸಾಧನೆ, ಪಡೆದುಕೊಂಡ ಮೂಲ ಭಾಷಾಜ್ಞಾನ, ಅನುವಾದ ಕಾರ್ಯದಲ್ಲಿ ಅವರಿಗಿದ್ದ ಅನುಭವ, ಅನುವಾದದಲ್ಲಿ ಸ್ಥಳೀಯ ವಿದ್ವಾಂಸರ ನೆರವು, ಅನುವಾದ ಕಾರ್ಯದಲ್ಲಿ ಉಂಟಾಗುವ ಸಮಸ್ಯೆ ಮತ್ತು ಅದರ ತಿದ್ದುಪಡಿಯ ಇತಿಮಿತಿಗಳು ಪರಿಷ್ಕರಣದ ಅಂತಿಮಪಾಠದ ಸಿದ್ಧತೆ ಮತ್ತು ಪ್ರಕಟಣೆಯಲ್ಲಿ ಅನುಸರಿಸಿದ ವಿಧಿವಿಧಾನಗಳು, ಅನುವಾದಿತ ಕೃತಿಗಳ ಉಪಯೋಗ ಮತ್ತು ಅವುಗಳ ಪ್ರಸಾರ ಬೈಬಲಿನ ಗದ್ಯಪದ್ಯಗಳ ಅನುವಾದದ ಯಶಸ್ಸು ಮತ್ತು ಸಾರ್ಥಕತೆ, ಅನುವಾದದ ಪ್ರಯೋಜನ, ಕನ್ನಡ ಬೈಬಲ್ ಅನುವಾದದ ಮೌಲ್ಯಮಾಪನ ಹಾಗೂ ವಸ್ತುನಿಷ್ಠತೆಯ ವಿವರಗಳನ್ನು ಇಲ್ಲಿ ಪರಿಶೀಲಿಸಲಾಗುವುದು.

ಅಧ್ಯಾಯ ಆರು : ಬೈಬಲ್ ಸಂವಹನ ಮಾಧ್ಯಮವಾಗಿ ಬಳಕೆಗೊಂಡ ವಿಧಿ ವಿಧಾನಗಳಲ್ಲಿ ಬೈಬಲ್ ಗ್ರಂಥ ಸಂವಹನದ ಪಾತ್ರ ಕ್ರೈಸ್ತ ಧರ್ಮದಲ್ಲಿ ಬಹುಪ್ರಮುಖವಾದುದು. ಇದು ಬಳಕೆಗೊಂಡ ಬಗೆ ಹಾಗೆಯೇ ಕಟ್ಟುನಿಟ್ಟಾಗಿ ಅದು ಅನುಸರಿಸುವ ಸಾಂದರ್ಭಿಕ, ಧಾರ್ಮಿಕ ವಿಧಿಕಾರ್ಯಾಚರಣೆಗಳು, ತನ್ನದೇ ಆದ ವೈಶಿಷ್ಟ್ಯತೆಯಿಂದ ಕೂಡಿವೆ. ಸಂಗೀತದ ಬಳಕೆಯು ಬೈಬಲ್ ಪಠಣ ಮಾಧ್ಯಮದಲ್ಲಿ ಗಮನಾರ್ಹವಾದುದು. ಸಂಗೀತದ ನಾದ, ಲಯ, ರಮ್ಯತೆ, ಗೇಯತೆ ಅದರ ಪರಿಕರ ಹಾಗೂ ಸಂಗೀತಗಳ ಬಳಕೆ ಇಲ್ಲಿ ತುಂಬ ಕುತೂಹಲಕಾರಿಯಾಗಿದೆ. ಅಲ್ಲದೆ ಪಾಶ್ಚಾತ್ಯ ಹಾಗೂ ಭಾರತೀಯ ಸಂಗೀತದ ಕೊಡುಕೊಳ್ಳುವಿಕೆಯ ಸಮ್ಮಿಲನ ಇಲ್ಲಿ ಏರ್ಪಟ್ಟಿರುವುದರ ಕುರಿತು ಕೂಡ ಪ್ರಸ್ತುತ ಅಧ್ಯಯನದಲ್ಲಿ ಗಮನಹರಿಸಲಾಗುವುದು. ಹಾಗೆಯೇ ಸಂವಹನ ರೀತಿಯಲ್ಲಿ ಜರುಗುವ ವಿಧಿಕ್ರಿಯೆಗಳಾದ ಜನನ, ಮುಂಜುವಿ, ಮದುವೆ, ಹಬ್ಬ ಹರಿದಿನ, ಉತ್ಸವ ಹಾಗೂ ಮರಣೋತ್ತರ ಕ್ರಿಯಾ ಸಂದರ್ಭದಲ್ಲಿ ಬೈಬಲ್ ಸಂವಹನಶೀಲಗೊಂಡ ವೈಶಿಷ್ಟ್ಯತೆಯನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗುವುದು.

ಅಧ್ಯಾಯ ಏಳು : ಸಮಾರೋಪದಲ್ಲಿ ಪ್ರಸ್ತುತ ಅಧ್ಯಯನದಿಂದ ಹೊರಬರುವ ಫಲಿತಗಳ ಕುರಿತಾದ ಸಮೀಕ್ಷೆಯನ್ನು ಒಳಗೊಂಡಿರುತ್ತದೆ.

೧.೩. ಅಧ್ಯಯನ ವಿಧಾನ

ಅಧ್ಯಯನ ವಿಧಾನವು ಕ್ಷೇತ್ರಕಾರ್ಯ ವಿಧಾನವಾಗಿದೆ. ಈ ಅಧ್ಯಯನಕ್ಕೆ ಎರಡು ಬಗೆಯ ಆಕರಗಳನ್ನು ಬಳಸಿಕೊಳ್ಳಲಾಗಿದೆ.

೧. ಮೂಲ ಆಕರ ಸಾಮಗ್ರಿ

೨. ಅನುಷಂಗಿಕ ಆಕರ ಸಾಮಗ್ರಿ

೧. ಮೂಲ ಆಕರ ಸಾಮಗ್ರಿ : ಪ್ರಸ್ತುತ ಅಧ್ಯಯನ ಪ್ರಾರಂಭಿಸಿದಾಗ ಕನ್ನಡ ಬೈಬಲ್ ಹಾಗೂ ಬೈಬಲ್ ಕುರಿತ ಮಾಹಿತಿ ಕನ್ನಡ ಸಾಹಿತ್ಯದಲ್ಲಿ ದೊರೆಯುವುದು ಬಹು ವಿರಳ. ಬೆರಳೆಣಿಕೆಗೂ ಕೂಡ ಸಿಗುವುದು

ಕಷ್ಟ. ಈ ಕಾರಣಕ್ಕಾಗಿ ಮೂಲ ಆಕರ ಸಂಗ್ರಹಕ್ಕೆ ವಿವಿಧ ಸ್ಥಳ ಭೇಟಿ ಅನಿವಾರ್ಯ. ಕ್ರೈಸ್ತ ಧಾರ್ಮಿಕ ಸ್ಥಳಗಳಾದ ಚರ್ಚ್‌ಗಳಲ್ಲಿ ಕೇವಲ ಪ್ರಥಮ ಮುದ್ರಣದ ಬೈಬಲ್ ಪ್ರತಿಗಳನ್ನು ಬಿಟ್ಟರೆ ಇನ್ನೇನು ಸಿಕ್ಕುವುದಿಲ್ಲ. ಪಾದ್ರಿಗಳನ್ನು ತರಬೇತುಗೊಳಿಸುವ ದೈವಜ್ಞಾನ ಕಾಲೇಜುಗಳಲ್ಲಿ ಮಾತ್ರ ಮಾಹಿತಿ ಸಿಗಲು ಸಾಧ್ಯವೆಂದು. ಕರ್ನಾಟಕ ಥಿಯೋಲಾಜಿಕಲ್ ಕಾಲೇಜ್ ಬಲ್ಮಠ, ಮಂಗಳೂರು ಹಾಗೂ ಅಲ್ಲಿಂದ ಎಂಟು ಕಿ.ಮೀ ದೂರವಿರುವ ಬಿಲಿವರ್ಸ್‌ಚರ್ಚ್ ಬೈಬಲ್ ಕಾಲೇಜು ಎಡುಪದು ಮಂಗಳೂರು ಮತ್ತು ಏಷಿಯಾದಲ್ಲಿ ದೊಡ್ಡದಾದ ಕ್ರೈಸ್ತ ಜ್ಞಾನ ಸಂಗ್ರಹದ ಗ್ರಂಥಾಲಯ ಯುನೈಟೆಡ್ ಥಿಯೋಲೋಜಿಕಲ್ ಕಾಲೇಜ್ ಹಾಗೂ ಥಿಯೋಲೋಜಿಕಲ್ ಕಾಲೇಜುಗಳು ಬೆಂಗಳೂರಿನಲ್ಲಿ ವಿವಿಧ ಒಳಪಂಗಡಗಳಿಂದ ಸಂಸ್ಥೆಗಳನ್ನು ನಡೆಸುತ್ತವೆ. ಅವುಗಳಲ್ಲಿ ಹೆಚ್ಚಿನ ಕಾಲೇಜುಗಳಿಗೆ ಭೇಟಿ ಇತ್ತು ಮಾಹಿತಿ ಸಂಗ್ರಹಿಸಿರುವೆ. ವಿಜಾಪುರದಲ್ಲಿಯ ಬಿಲಿವರ್ಸ್ ಚರ್ಚ್ ಕಾಲೇಜಿಗೆ ಕ್ರೈಸ್ತ ಮಿಶನರಿಗಳ ತರಬೇತಿ ಕಾಲೇಜಿಗೆ ಭೇಟಿ ಇತ್ತು ಮಾಹಿತಿ ಪಡೆದಿರುವೆ. ವಿಲಿಯಂ ಕೇರಿ ಪ್ರಥಮವಾಗಿ ಕನ್ನಡ ಬೈಬಲ್ ಭಾಷಾಂತರಿಸಿ ಮುದ್ರಿಸಿರುವುದರಿಂದ ಬಂಗಾಳದ ಸೆರಂಪುರ ವಿಶ್ವವಿದ್ಯಾಲಯಕ್ಕೂ ಭೇಟಿ ಇತ್ತು ಪ್ರಥಮ ಮುದ್ರಣದ ಬೈಬಲ್ ಮುಖಪುಟದ ಪ್ರತಿ ಸಂಗ್ರಹಿಸುವುದಲ್ಲದೆ ಕೇರಿ ಕುರಿತ ಮಾಹಿತಿ ಕೂಡ ಪಡೆದಿರುವೆ. ಬಳ್ಳಾರಿ ರೆ.ಜಾನ್ ಹ್ಯಾಂಡ್ಸರ್ ಸೇವೆ ಸಲ್ಲಿಸಿದ ಕ್ಷೇತ್ರ. ಅಲ್ಲಿನ ವಾರ್ಡಲಾ ಕಾಲೇಜ್ ಆವರಣದಲ್ಲಿಯ ಮಾಹಿತಿ ಪ್ರಥಮ ಮುದ್ರಣದ ಸ್ಥಳದ ಮಾಹಿತಿ ಪಡೆದಿರುವೆ. ಮೂಲ ಆಕರಗಳು ಇರಬಹುದೆಂದು ಅನೇಕ ವಿದ್ವಾಂಸರು ಹಾಗೂ ಹಿರಿಯರ ಮನೆಗಳನ್ನು ಸಂದರ್ಶಿಸಿ ಹರಕು ಮುರುಕು ಕಾಗದ ಪುಸ್ತಕ ಸಂಗ್ರಹಿಸಲಾಗಿದೆ.

೨. ಅನುಷಂಗಿಕ ಆಕರ ಸಾಮಗ್ರಿ : ಈವರೆಗೆ ನಡೆದ ಅಧ್ಯಯನ, ಅದರಲ್ಲಿಯೂ ಮುಖ್ಯವಾಗಿ ಸಂಶೋಧನ ಪ್ರಬಂಧಗಳು, ಬ್ರಿಟಾನಿಕಾ, ಅಮೇರಿಕಾ, ವಿಶ್ವಕೋಶಗಳು, ಧಾರ್ಮಿಕ, ನೀತಿಶಾಸ್ತ್ರದ ವಿಶ್ವಕೋಶಗಳು ಮತ್ತು ಪ್ರಕಟಿತ ಹಾಗೂ ಅಪ್ರಕಟಿತ ಕೃತಿಗಳನ್ನು ಬಳಸಲಾಗಿದೆ. ಬೈಬಲ್ ಆಧಾರಿತ ಕ್ರೈಸ್ತ ಸಾಹಿತ್ಯ ಕೃತಿಗಳು ಹಾಗೂ ಬೈಬಲ್ ಶಬ್ದಕೋಶಗಳು ನಿಯತಕಾಲಿಕೆಗಳು ಪ್ರಯೋಜನ ಪಡೆಲಾಗಿದೆ. ಚರ್ಚ್‌ನ ಪ್ರಮುಖ ಪಾದ್ರಿಗಳನ್ನು ಸಂದರ್ಶಿಸಿ ಬೈಬಲ್ ಕುರಿತ ವಿಚಾರಗಳ ಬಗ್ಗೆ ಚರ್ಚೆ, ಸಂವಾದಗಳನ್ನು ಮಾಡಲಾಗಿದೆ. ಕನ್ನಡ ಸಾಹಿತ್ಯದಲ್ಲಿ ಬೈಬಲ್ ಮಾಹಿತಿ ಕುರಿತು ಇವರೆಗೂ ಯಾವೊಂದು ಅಧ್ಯಯನವು ನೇರವಾಗಿ ನಡೆದುದಾಗಿಲ್ಲ. ಹೀಗಾಗಿ ಕ್ಷೇತ್ರಕಾರ್ಯದಲ್ಲಿ ಹೆಚ್ಚಿನ ಆಸಕ್ತಿ ಪರಿಶ್ರಮ ವಹಿಸುವ ಅನಿವಾರ್ಯತೆ ನನ್ನ ಅಧ್ಯಯನಕ್ಕೆ ಇದೆ ಎಂದು ಮನಗಂಡು ಮಾಹಿತಿ ಸಂಗ್ರಹಿಸಲಾಗಿದೆ.

೧.೪. ಈವರೆಗೆ ನಡೆದ ಅಧ್ಯಯನ

'ಕನ್ನಡ ಬೈಬಲ್ ಒಂದು ಅಧ್ಯಯನ' ಎಂಬ ಶೀರ್ಷಿಕೆ ಅಡಿಯಲ್ಲಿ ಕೈಕೊಂಡ ಅಧ್ಯಯನಕ್ಕೆ ಸಂಬಂಧಿಸಿ ಈವರೆಗೆ ನಡೆದ ಅಧ್ಯಯನವನ್ನು ಪರಿಶೀಲಿಸಿದರೆ, ನೇರವಾಗಿ ಯಾವೊಂದು ಅಧ್ಯಯನವು

ನಡೆದಿಲ್ಲವನ್ನೆಬಹುದು. ಕನ್ನಡ ಸಾಹಿತ್ಯ ಲೋಕದಲ್ಲಿ ಬೈಬಲ್ ಕುರಿತು ಪ್ರಬಂಧ ಹಾಗೂ ಮಾಹಿತಿಯು ಸಿಗುವುದಿಲ್ಲ. ಆದರೆ ಕ್ರೈಸ್ತ ಸಾಹಿತ್ಯ ಕುರಿತು ಅಧ್ಯಯನಗಳು ಬೆರಳೆಣಿಕೆಯಲ್ಲಿ ಕಂಡುಬರುತ್ತವೆ.

ಕನ್ನಡ ನಾಡು-ನುಡಿ, ಕನ್ನಡ ಸಾಹಿತ್ಯಕ್ಕೆ ಸಲ್ಲಿಸಿದ ಸೇವೆ ಕುರಿತು ಕೆಲವೊಂದು ಗ್ರಂಥಗಳು ಕಾಣಸಿಗುತ್ತವೆ. ಆದರೆ ಬೈಬಲ್ ಕುರಿತು ಈವರೆಗೂ ಸಮಗ್ರವಾದ ಅಧ್ಯಯನ ಒಂದೆಡೆ ಕಂಡುಬರುವುದಿಲ್ಲ. ಆದರೆ ಪರೋಕ್ಷವಾಗಿ ಕೆಲವೊಂದನ್ನು ಇಲ್ಲಿ ಹೆಸರಿಸಬಹುದು.

೧. ಹೊಸಗನ್ನಡ ಅರುಣೋದಯ - ಶ್ರೀನಿವಾಸ ಹಾವನೂರ, ೧೯೮೧

೨. ಕನ್ನಡ ಧಾರ್ಮಿಕ ಸಾಹಿತ್ಯಕ್ಕೆ ಕ್ರೈಸ್ತ ಮಿಶನರಿಗಳ ಕೊಡುಗೆ, ಎಡ್ವರ್ಡ ನೋರೋಸ್

೩. 'ಕ್ರೈಸ್ತ ಜನಪದ ಸಾಹಿತ್ಯ', ಬಿ.ಎಸ್.ತಲ್ವಾಡಿ

೪. 'ರೆ.ಎಫ್. ಕಿಟಲ್, ಒಂದು ಸಮಗ್ರ ಅಧ್ಯಯನ', ಡಾ.ಕೆ.ಎಂ.ಮ್ಯಾಥ್ಯೂ, ೧೯೯೫

೫. 'ಕನ್ನಡ ಸಾಹಿತ್ಯಕ್ಕೆ ಬಾಶೆಲ್ ಮಿಶನರಿಗಳ ಕೊಡುಗೆ' ಗೀತಾ ನಂದಿಹಾಳ

೬. ಕನ್ನಡ ಶಾಸ್ತ್ರ ಸಾಹಿತ್ಯಕ್ಕೆ ಕ್ರೈಸ್ತ ಮಿಶನರಿಗಳ ಕೊಡುಗೆ. ೧೯೯೨, ಬಿ.ವೀ.ಮಹೀದಾಸ

ಈ ಮೇಲಿನ ಮಹಾಪ್ರಬಂಧಗಳು ಕ್ರೈಸ್ತರ ಕೊಡುಗೆ ಕುರಿತು ಕ್ರೈಸ್ತ ಧಾರ್ಮಿಕ ಸಾಹಿತ್ಯ ಕುರಿತು ವಿವರಗಳನ್ನು ನೀಡುತ್ತವೆ.

೧. **'ಹೊಸಗನ್ನಡ ಅರುಣೋದಯ'** : ಈ ಪ್ರಬಂಧ ೧೯೬೪ರಂದು ಪುಣೆ ವಿಶ್ವವಿದ್ಯಾಲಯಕ್ಕೆ ಪಿ.ಎಚ್.ಡಿ ಪದವಿಗಾಗಿ ಸಾದರಪಡಿಸಿದುದಾಗಿದೆ. ಇದೊಂದು ಅಪರೂಪದ ಸಂಶೋಧನ ಗ್ರಂಥ. ಈ ಕೃತಿಯನ್ನು ಲೇಖಕರು ಎರಡು ಪ್ರಮುಖ ವಿಭಾಗಗಳಾಗಿ ಹೆಸರಿಸಿದ್ದಾರೆ. ಒಂದು ಪೂರ್ವಾರ್ಧ ಇನ್ನೊಂದು ಉತ್ತರಾರ್ಧ. ೧೮ನೇ ಶತಮಾನದದಿಂದ ಹೊಸಗನ್ನಡ ಸಾಹಿತ್ಯ ಬೆಳೆದು ಬಂದರೂ ಅದರ ನಸು ಬೆಳಕನ್ನು ಮಬ್ಬುಗತ್ತಲೆಯ ಸಾಹಿತ್ಯದ ಹೊಂಬೆಳಕನ್ನು ಗುರುತಿಸುವಲ್ಲಿ ಈ ಕೃತಿ ಯಶಸ್ಸನ್ನು ಸಾಧಿಸಿದೆ. ಮಿಶನರಿ ಜನರ ಸಾಹಿತ್ಯ ಕಾರ್ಯವನ್ನು ಪ್ರಪ್ರಥಮವಾಗಿ ಗುರುತಿಸಿದ, ಶ್ಲಾಘಿಸಿದ ಕೃತಿ ಇದಾಗಿದೆ.

ಭಾರತಕ್ಕೆ ಬ್ರಿಟೀಶ್‌ರ ಆಗಮನ ನಂತರ ಮಿಶನರಿಗಳ ಆಗಮನ. ಮಿಶನರಿ ಜನರ ಮತ ಪ್ರಚಾರ - ಮುದ್ರಣ ಯಂತ್ರ-ಶಿಕ್ಷಣ ಪದ್ಧತಿ ಹಾಗೂ ಆಡಳಿತ ವ್ಯವಹಾರ ಕುರಿತು ಈ ಕೃತಿ ವಿಶೇಷ ಮಾಹಿತಿ ಒದಗಿಸುವುದು. ಹೊಸಗನ್ನಡ ಸಾಹಿತ್ಯದ ಉದಯಕಾಲದಲ್ಲಿ ಹುಟ್ಟಿಬಂದ ಗದ್ಯ-ಪದ್ಯ-ಕಥೆ-ಕಾದಂಬರಿಗಳ ಸ್ವರೂಪ ಕುರಿತು ತಿಳಿಯಪಡಿಸುತ್ತದೆ. ಕ್ರೈಸ್ತ ಸಾಹಿತ್ಯ-ಪ್ರಮುಖ ಕೃತಿ ಹಾಗೂ ಲೇಖಕರ ಬಗ್ಗೆ ವಿವರಣೆ ಮತ್ತು ಮಿಶನರಿಗಳ ಅಪಾರ ಕೊಡುಗೆಯನ್ನು ಲೇಖಕರು ಗುರುತಿಸಿದ್ದಾರೆ. "ಹೊಸಗನ್ನಡ ಸಾಹಿತ್ಯ ತನ್ನ ಅತ್ಯಂತ ವೈಭವದ ಮತ್ತು ಸಮೃದ್ಧತೆಯ ಸ್ಥಿತಿಯಲ್ಲಿರುವ ಈ

ಕಾಲದವರಿಗೆ ಇದರ ನೆಲೆಗಟ್ಟಾಗಿ, ಜೀವನ ಪೋಷಕ ದ್ರವ್ಯವಾಗಿ ಹೆಚ್ಚು ಅಬ್ಬರವಿಲ್ಲದೆ ಕ್ರಿಯಾಶೀಲವಾಗಿದ್ದ ವಿದೇಶಿ ಮತ್ತು ಸ್ವದೇಶಿ ಲೇಖಕರ ಕನ್ನಡ ಅಭಿಮಾನ, ವಿಸ್ತಾರ ವಿದ್ವತ್ತು, ಅವಿರತ ಪರಿಶ್ರಮ, ಇವುಗಳಿಂದ ಉದ್ಭವಿಸಿದ ವೈವಿಧ್ಯಮಯವೂ, ವೈಶಿಷ್ಟ್ಯಮಯವೂ ಆದ ಭಾಷಾ-ಸಾಹಿತ್ಯ ಪ್ರಕ್ರಿಯೆಗಳನ್ನು ಅವರು ಈ ಕೃತಿಯಲ್ಲಿ ಅತ್ಯಂತ ವಿವರವಾಗಿ ಮತ್ತು ಸಮರ್ಥವಾಗಿ ನಿರೂಪಿಸಿದ್ದಾರೆ.

ಸೂರ್ಯೋದಯವನ್ನು ಬಹಳಜನ ಕಾಣಬಲ್ಲರು; ಸವಿಯಬಲ್ಲರು, ವರ್ಣಿಸಬಲ್ಲರು, ಆದರೆ ಅದರ ಪೂರ್ವಭಾವಿಯಾಗಿ ಮೂಡಿದ ಅರುಣೋದಯದ ಸೌಂದರ್ಯ ಮತ್ತು ವ್ಯಾಪ್ತಿಯನ್ನು ಬಹಳ ಜನ ಗಮನಿಸುವುದಿಲ್ಲ. ಹೊಸಗನ್ನಡ ಸಾಹಿತ್ಯದ ಇಂದಿನ ಸಂಪದ್ಭರಿತ ಬೆಳಕಿಗೆ ಬುನಾದಿಯನ್ನು ಕಲ್ಪಿಸಿಕೊಟ್ಟ ಅರುಣೋದಯ ಕಾಲದ ಚಟುವಟಿಕೆಗಳನ್ನು ಸಮರ್ಥವಾಗಿ ದಾಖಲಿಸಿರುವ ಈ ಗ್ರಂಥವು ಇಂದೂ ಮುಂದೂ ಸಾಹಿತ್ಯ ವ್ಯಾಸಂಗಿಗಳಿಗೆ ಒಂದು ಮಹತ್ತಾದ ಆಕರ ಗ್ರಂಥವಾಗಿದೆ.

೨. **ಕನ್ನಡ ಧಾರ್ಮಿಕ ಸಾಹಿತ್ಯಕ್ಕೆ ಕ್ರೈಸ್ತ ಮಿಶನರಿಗಳ ಕೊಡುಗೆ :** ಕ್ರೈಸ್ತ ಮಿಶನರಿಗಳ ಕೊಡುಗೆಯಲ್ಲಿ ಈ ಪ್ರಬಂಧ ಕೇವಲ ಕೆಥೋಲಿಕರನ್ನು ಅನುಲಕ್ಷಿಸಿ ವಿವರಣೆ ಕೊಡುತ್ತದೆ. ಕ್ರೈಸ್ತ ಮಿಶನರಿಗಳ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಪೂರ್ಣ ಪ್ರಮಾಣದ ಅಧ್ಯಯನಗಳು ನಮ್ಮಲ್ಲಿ ನಡೆದಿರುವುದೇ ಬಹಳ ಕಡಿಮೆ. ಮೊದಲನೆಯ ಸಲಕ್ಕೆ ಕೆಥೊಲಿಕರ ಸಾಹಿತ್ಯವನ್ನು ಲೇಖಕರು ತಮ್ಮ ಪ್ರಸ್ತುತ ಪ್ರಬಂಧದಲ್ಲಿ ಸಾಕಷ್ಟು ಕೂಲಂಕುಷವಾಗಿ ಚರ್ಚಿಸಿದ್ದಾರೆ.

ಕನ್ನಡದಲ್ಲಿ ಕ್ರೈಸ್ತ ಮಿಶನರಿಗಳೆಂದರೆ ಪ್ರಾಟೆಸ್ಟಂಟರು ಮಾತ್ರ ಎಂದು ಇದುವರೆಗೆ ಇದ್ದ ಭಾವನೆಗಳನ್ನು ಬದಿಗೊತ್ತಿ ಅವರಿಗಿಂತ ಮೊದಲೇ ತಕ್ಕ ಮಟ್ಟಿನ ಪ್ರಮಾಣದಲ್ಲಿ ಕನ್ನಡದಲ್ಲಿ ಕ್ರೈಸ್ತ ಧಾರ್ಮಿಕ ಸಾಹಿತ್ಯವನ್ನು ರಚಿಸಿಯೂ ಅವಜ್ಞೆಗೆ ಗುರಿಯಾಗಿದ್ದ ಕೆಥೋಲಿಕ ಕನ್ನಡ ಬರವಣಿಗೆಗಳನ್ನು ಕುರಿತು ವಿವಿಧ ಮೂಲಗಳಿಂದ ವಿಷಯ ಸಂಗ್ರಹಿಸಿ ವಿಸ್ತಾರವಾದ ಅಧ್ಯಯನ ಕೈಕೊಂಡಿದ್ದಾರೆ. ಕೆಥೊಲಿಕ ಜನರ ಕನ್ನಡ ಧಾರ್ಮಿಕ ಸಾಹಿತ್ಯದ ಸಂಪೂರ್ಣ ಮಾಹಿತಿಯನ್ನು ಮಾಡುವಲ್ಲಿ ಪ್ರಮುಖ ಕೃತಿಯಾಗಿದೆ. ಹೊಸಗನ್ನಡ ಉದಯಕಾಲವನ್ನು ವಿದ್ವಾಂಸರು ಈವರೆಗೆ ೧೭೬೪ ಎಂದು ಸಾಮಾನ್ಯವಾಗಿ ಒಪ್ಪಿಕೊಂಡಿದ್ದಾರೆ. ಆದರೆ ಪ್ರಸ್ತುತ ಅಧ್ಯಯನದಿಂದ ಇದು ಇನ್ನೂ ಸು.೭೦-೮೦ ವರ್ಷಗಳಷ್ಟು ಹಿಂದಕ್ಕೆ ಸರಿಯುವಂತೆ ಸಂಶೋಧನೆ ತಿಳಿಸುತ್ತದೆ. ಕನ್ನಡ ಸಾಹಿತ್ಯಕ್ಕೆ ಭಾಷೆಗಳಿಗೆ ತನ್ಮೂಲಕ ಸಂದ ಕೊಡುಗೆಗಳನ್ನು ಲೇಖಕರು ಎಚ್ಚರಗಣ್ಣಿನಿಂದ ಗುರುತಿಸಿದ್ದಾರೆ.

೩. **ಕ್ರೈಸ್ತ ಜನಪದ ಸಾಹಿತ್ಯ :** ಕ್ರೈಸ್ತರ ಜನಪದ ಗೀತ ಸಾಹಿತ್ಯ ಕುರಿತು ಈ ಅಧ್ಯಯನ ತಿಳಿಯಪಡಿಸುವುದು. ಪ್ರೊಟೆಸ್ಟೆಂಟ್‌ರಲ್ಲಿಯೂ, ವಿಫುಲವಾದ ಗೀತ ಸಾಹಿತ್ಯ ಕಂಡುಬಂದರೂ ಲೇಖಕರು ಕೇವಲ ಕೆಥೋಲಿಕ ಪಂಗಡವನ್ನು ಮಾತ್ರ ಅನುಲಕ್ಷಿಸಿ ಪ್ರಬಂಧವನ್ನು ಹೊರತಂದಿದ್ದಾರೆ.

ಕನ್ನಡ ಸಾಹಿತ್ಯ ಲೋಕದಲ್ಲಿ ಕ್ರೈಸ್ತರ ಕೊಡುಗೆ ಜಾನಪದ ಸಾಹಿತ್ಯಕ್ಕೆ ಏನೆಂಬುದನ್ನು ಗುರುತಿಸಿದ ಲೇಖಕರು ಸಂಪೂರ್ಣ ಮಾಹಿತಿಯನ್ನು ನೀಡುವಲ್ಲಿ ಶ್ರಮಿಸಿದ್ದಾರೆ. ಗೌಣವಾಗಿದ್ದ ಅನೇಕ ಗೀತ ಸಾಹಿತ್ಯ ಪ್ರಕಾರಗಳನ್ನು ಗುರುತಿಸುವಲ್ಲಿ ಯಶಸ್ಸು ಸಾಧಿಸಿ ಗೀತ ಸಾಹಿತ್ಯಕ್ಷೇತ್ರದಲ್ಲಿ ಸಂಶೋಧನೆಗೆ ಆಕರ ಗ್ರಂಥವಾಗಿ ಪರಿಣಮಿಸುವಂತೆ ಮೂಡಿ ಬಂದಿದೆ.

೪. **ರೆ.ಎಫ್.ಕಿಟೆಲ್ : ಒಂದು ಸಮಗ್ರ ಅಧ್ಯಯನ :** ಕನ್ನಡ ಸಾರಸ್ವತ ಲೋಕಕ್ಕೆ ನಿಘಂಟುವಿನ ಕೊಡುಗೆ ಇತ್ತ ಮಹಾನ್ ವ್ಯಕ್ತಿ ರೆ. ಕಿಟೆಲ್ ರವರ ಕುರಿತು ಸಂಪೂರ್ಣ ಮಾಹಿತಿ ನೀಡುತ್ತದೆ. ಈ ಕೃತಿ. ಕಿಟೆಲ್ ಜೀವನ ಚರಿತ್ರೆ ಅವರ ಬರವಣಿಗೆ ಸಾಧನೆಯನ್ನು ತಿಳಿಸುವ ವಿಶಿಷ್ಟ ಕೃತಿ. ಅವರು ಹೊಸಗನ್ನಡ ಸಾಹಿತ್ಯದ ಆದ್ಯ ಕವಿ ಎನ್ನುವಲ್ಲಿ ಸಂಶಯವಿಲ್ಲ. ಅವರ ಕಥಾಮಾಲೆ, ಕ್ರಿಸ್ತನ ಶ್ರಮಾ ಚರಿತ್ರವು, ಕ್ರೈಸ್ತ ಸಭಾಚರಿತ್ರೆ ಮುಂತಾದ ಕೃತಿಗಳ ಮಾಹಿತಿ ಸಂಗ್ರಹಗಳು ಒಂದು ಆಧಾರ ಕೃತಿಗಳ ಮಹತ್ವವನ್ನು ತಂದುಕೊಟ್ಟಿವೆ.

೫. **"ಕನ್ನಡ ಸಾಹಿತ್ಯಕ್ಕೆ ಬಾಶೆಲ್ ಮಿಶನರಿಗಳ ಕೊಡುಗೆ" :** ಕನ್ನಡ ಸಾಹಿತ್ಯಕ್ಕೆ ಮಿಶನರಿಗಳ ಕೊಡುಗೆ ಕುರಿತು ಅನೇಕ ಲೇಖಕರು ಬರೆಯುತ್ತಲೇ ಬಂದಿದ್ದಾರೆ. ಈ ಕುರಿತು ಶ್ರೀನಿವಾಸ ಹಾವನೂರ, ವರದರಾಜ ಹುಯಿಲಗೋಳ, ಐ.ಮಾ.ಮುತ್ತಣ್ಣ, ರಾ.ಯ.ಧಾರವಾಡಕರ ಹಾಗೂ ರೆ.ಜೆ.ಎಂ.ಜೋಗುಳ ರವರು ಬರೆದಿರುವುದನ್ನು ಗಮನದಲ್ಲಿರಿಸಿಕೊಂಡು ಕೈಕೊಂಡ ಪ್ರಬಂಧ ಇದಾಗಿದೆ.

ಭಾರತಕ್ಕೆ ಹಾಗೂ ಕರ್ನಾಟಕಕ್ಕೆ ಮಿಶನರಿಗಳ ಕೊಡುಗೆ ಅಪಾರ. ಅನೇಕ ಮಿಶನ್‌ಗಳು ಇಲ್ಲಿ ಕಾರ್ಯನಿರ್ವಹಿಸಿವೆ. ಆದರೆ ಪ್ರಸ್ತುತ ಅಧ್ಯಯನ ಕೇವಲ ಜರ್ಮನಿಯ ಬಾಶೆಲ್ ಮಿಶನರಿಗಳಿಂದ ಸಂದ ಕಾಣ್ಕೆಯನ್ನು ವಿವರಿಸುತ್ತದೆ. ಈ ಮಿಶನ್‌ನಲ್ಲಿ ಸೇವೆ ಸಲ್ಲಿಸಿರುವವರ ಮಾಹಿತಿ ಸಿಂಧುವಾಗಿ ಈ ಅಧ್ಯಯನದಲ್ಲಿ ಕಾಣಬಹುದು.

೬. **ಕನ್ನಡ ಶಾಸ್ತ್ರ ಸಾಹಿತ್ಯಕ್ಕೆ ಕ್ರೈಸ್ತ ಮಿಶನರಿಗಳ ಕೊಡುಗೆ :** ಕನ್ನಡ ಸಾಹಿತ್ಯದಲ್ಲಿ ಶಾಸ್ತ್ರಸಾಹಿತ್ಯ ಮಿಶನರಿಗಳು ಬರುವುದಕ್ಕಿಂತ ಮೊದಲೇ ಕಂಡುಬಂದ ಪ್ರಕಾರಗಳಲ್ಲಿ ಒಂದು. ಹಳೆಗನ್ನಡ ಸಾಹಿತ್ಯದಲ್ಲಿ ಕಾಣಿಸಿಕೊಂಡ ಶಾಸ್ತ್ರಸಾಹಿತ್ಯ ಹೊಸಗನ್ನಡ ಉದಯದ ಕಾಲಕ್ಕೆ ಪಾಶ್ಚಾತ್ಯ ದೃಷ್ಟಿಕೋನದಿಂದ, ನೂತನತೆಯನ್ನು ಪಡೆಯುವಲ್ಲಿ ಶ್ರಮಿಸಿದ ಶ್ರಮವನ್ನು ಈ ಕೃತಿ ಪ್ರತಿಬಿಂಬಿಸುತ್ತದೆ.

ಶಾಸ್ತ್ರಸಾಹಿತ್ಯವು ಮಿಶನರಿಗಳು ಆಸಕ್ತಿಯಿಂದ ಬೆಳೆಸಿದ ಕ್ಷೇತ್ರವಾಗಿದ್ದು, ಇವರ ಕಾರ್ಯದಿಂದ ಈ ಕ್ಷೇತ್ರದಲ್ಲಿ ಹೊಸ ತಿರುವುಗಳು ಉಂಟಾಗಿರುವುದನ್ನು ಹಾಗೂ ಇಂಗ್ಲೀಷ್ ಭಾಷೆ; ಪದ್ಯಮಾರ್ಗವನ್ನು ಬಿಟ್ಟು ಗದ್ಯದಲ್ಲಿ ನಿರೂಪಣೆ, ಗ್ರಂಥಸ್ಥ ಭಾಷೆಯ ಜೊತೆಗೆ ಆಡು ಭಾಷೆಗೂ ಮಾನ್ಯತೆ ಇವುಗಳ ಅಳವಡಿಕೆಯಿಂದ ಶಾಸ್ತ್ರ ಸಾಹಿತ್ಯವು ಹೊಸ ಮಾರ್ಗವನ್ನು ಹಿಡಿದಿರುವುದನ್ನು ಈ ಕೃತಿ ಗುರುತಿಸುವುದು.

ಕನ್ನಡ ಶಾಸ್ತ್ರಸಾಹಿತ್ಯದಲ್ಲಿ ನಿಘಂಟು ಮತ್ತು ವ್ಯಾಕರಣ ಇವು ಮಿಶನರಿಗಳು ವಿಶೇಷವಾಗಿ ಶ್ರೀಮಂತಗೊಳಿಸಿದ ಕ್ಷೇತ್ರಗಳು. ಛಂದಸ್ಸು, ಗ್ರಂಥಸಂಪಾಧನೆ ಮತ್ತು ಸಾಹಿತ್ಯ ಚರಿತ್ರೆಗೆ ಸಂಬಂಧಿಸಿದ ಮಿಶನರಿಗಳ ವಿಚಾರಗಳು ಅವರ ಸಂಪಾದಿತ ಕೃತಿಗಳಲ್ಲಿ ಮತ್ತು ಸಂಕಲನ ಗ್ರಂಥಗಳಲ್ಲಿ ಹರಡಿ ಹೋಗಿವೆ. ಆದರೂ ಇವೆರಡು ಕ್ಷೇತ್ರಗಳಲ್ಲಿ ಮಿಶನರಿಗಳು ಬಹಳ ಕಾಲ ನಿಲ್ಲುವಂತಹ ಬದಲಾವಣೆಗಳನ್ನು ತಂದಿರುವುದನ್ನು ಈ ಕೃತಿ ಗುರುತಿಸುವುದು.

ನನ್ನ ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಈವರೆಗೂ ಬೈಬಲ್ ಕುರಿತ ಅಧ್ಯಯನ ಹಾಗೂ ಮಾಹಿತಿ ನೀಡುವ ಯಾವೊಂದು ನೇರ ಕೃತಿ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಕಂಡುಬರುವುದಿಲ್ಲ. ಕ್ರೈಸ್ತೇತರ ಸಾಹಿತ್ಯ ಕ್ಷೇತ್ರದಲ್ಲಿ ಇದರ ಕೊರತೆ ತುಂಬಾ ಕಂಡುಬರುತ್ತದೆ. ಕ್ರೈಸ್ತ ಧರ್ಮ ಗುರುಗಳನ್ನು ತರಬೇತಿಗೊಳಿಸುವ ದೈವಜ್ಞಾನ ಶಾಸ್ತ್ರ ಅಧ್ಯಯನ ಸಂಸ್ಥೆಗಳಲ್ಲಿ ಮಾತ್ರ ಬೈಬಲ್ ಕುರಿತು ಮಾಹಿತಿ ದೊರೆಯುತ್ತದೆ. ಅವುಗಳಲ್ಲಿ ಪ್ರಮುಖವಾಗಿ ಇವುಗಳನ್ನು ಗುರುತಿಸಬಹುದು.

೧. **ಹಳೆ ಒಡಂಬಡಿಕೆಯ ಪ್ರವೇಶದಾಯಿನಿ :** ಈ ಕೃತಿ ಇಂಗ್ಲೀಷ್ ಮೂಲದಲ್ಲಿ ಘನ ಸಿ.ಸ್ಟ್ಯಾನ್ಲಿ ಥೊಬರ್ನನಿಂದ ಬರೆಯಲ್ಪಟ್ಟು ಕನ್ನಡಕ್ಕೆ ಎಸ್.ಎ.ಮಾರಾ ಅವರಿಂದ ತರ್ಜುಮೆಗೊಂಡಿದೆ. ಮಂಗಳೂರ ಕನ್ನಡ ದೈವಜ್ಞಾನ ಸಾಹಿತ್ಯ ಮಾಲೆಯವರಿಂದ ಪ್ರಕಾಶನಗೊಂಡಿದೆ. ಈ ಒಂದು ಕೃತಿಯು ಕನ್ನಡ ಸಾಹಿತ್ಯದಲ್ಲಿ ಬೈಬಲ್ ಮೂಲ ಬೆಳವಣಿಗೆ ಚರಿತ್ರೆ ಕುರಿತು (ಸುದೀರ್ಘವಾಗಿ ವಿವರಣೆ ಹೊಂದಿದೆ) ಹಾಗೂ ಭಾಷೆ-ಲಿಪಿ ಮೂಲ ಪಾಠಗಳ ಕುರಿತು ವಿವರಣೆ ಇದೆ.

೨. **ಹೊಸ ಒಡಂಬಡಿಕೆಯ ಪ್ರವೇಶದಾಯಿನಿ :** ಈ ಕೃತಿಯು ಮಂಗಳೂರಿನ ದೇವಜ್ಞಾನ ಸಾಹಿತ್ಯ ಮಾಲೆಯ ಪ್ರಕಟಣೆಯಾಗಿದ್ದು, ಕ್ರಿಸ್ತನ ತರುವಾಯ ೨೭ ಪುಸ್ತಕಗಳ ಕುರಿತು ಲೇಖಕ-ಕಾಲ-ಮಹತ್ವವನ್ನು ತಿಳಿಸುತ್ತದೆ.

೩. **ಹೊಸ ಒಡಂಬಡಿಕೆಯ ಚರಿತೆ ಮತ್ತು ಸಂದೇಶ ಪ್ರವೇಶಿಕೆ :** An interoduction to the History and message of the New Test ment ಎಂಬ ಇಂಗ್ಲೀಷ್ ಕೃತಿಯ ಲೇಖಕ ಜಿ.ಎಚ್.ಸಿ. ಆಂಗಸ್‌ರವರು ಬಂಗಾಳದ ಸಿರಾಂಪೂರ್ ಕಾಲೇಜ ಪ್ರಿನ್ಸಿಪಾಲರಾಗಿ ಕೆಲಸ ನಿರ್ವಹಿಸಿದರು. ಈ ಕೃತಿ ಮೈಸೂರ ವಿದ್ಯಾ ಇಲಾಖೆಯ ನಿವೃತ್ತ ಅಧ್ಯಾಪಕ ತಿಯಡೋರ್ ಕಾಸಿಂರವರಿಂದ ಕನ್ನಡಕ್ಕೆ ಅನುವಾದಗೊಂಡಿದ್ದು, ಬೈಬಲ್ ಶಾಸ್ತ್ರಗ್ರಂಥ ಲೇಖಕ, ದಾಖಲೆ, ಪ್ರಮಾಣ ಗ್ರಂಥ ಸಂಗ್ರಹ ಹಾಗೂ ಮೂಲಪ್ರತಿಯ ಭದ್ರತೆ ಕುರಿತು ಮಾಹಿತಿಯನ್ನು ಒದಗಿಸುತ್ತದೆ.

೪. **ಕ್ರೈಸ್ತ ವೇದಾಂತ ಸಾರದ ಪ್ರಸ್ತಾವನೆ :** ಕರ್ನಾಟಕ ಸತ್ಯವೇದ ವಿದ್ಯಾಲಯ ಗದಗದಿಂದ ಪ್ರಕಟಣೆಗೊಂಡಿದೆ. ರೆ. ರಾಯ್, ಇ.ಡೇವಿಸ್, ಬಿ.ಎ.ಬಿ. ಟಿ.ಎಚ್ .ರವರು ಇವರ ಲೇಖಕರಾಗಿದ್ದಾರೆ. ಸತ್ಯವೇದ (Bible) ಗ್ರಂಥದ ಅಧಿಕಾರಯುಕ್ತ ಸಂಗ್ರಹದ ಪ್ರಮಾಣೀಕರಣದ ಬಗ್ಗೆ ಅಂಶಿಕವಾಗಿ ಮಾಹಿತಿ ನೀಡುತ್ತದೆ.

೫. **ಗ್ರಂಥದಲ್ಲೆಲ್ಲಾ ಶ್ರೇಷ್ಠವಾದ ಗ್ರಂಥ :** ರೇ. ಸಂಸೋನ್.ಎಸ್. ಮಳೇಕರರವರು ೧೯೫೪ರಲ್ಲಿ ಪ್ರಕಟಪಡಿಸಿದ್ದಾರೆ. ಬೈಬಲ್ ಮೂಲ ಭಾಷೆಯಿಂದ ಇತರ ಜಾಗತಿಕ ಪ್ರಮುಖ ಭಾಷೆಗಳಿಗೆ ಅನುವಾದಗೊಂಡ ಬಗ್ಗೆ ತಿಳಿಸುತ್ತಾರೆ. ಜಗತ್ತಿನ ಗ್ರಂಥಗಳಲ್ಲಿ ಬೈಬಲ್ ಹೇಗೆ ಶ್ರೇಷ್ಠ ಗ್ರಂಥ ಎನ್ನುವ ಕುರಿತು ಬೈಬಲ್ ಆಧಾರದೊಂದಿಗೆ ವಿವರಿಸಿದ್ದಾರೆ.

೬. **ಕ್ರೈಸ್ತ ತತ್ತ್ವದರ್ಶನ :** ೧೯೬೬ರಲ್ಲಿ ವಿದ್ವಾನ್, ಎಡ್ವಿನ್ ಡಿಸೋಜರವರಿಂದ ರಚಿತಗೊಂಡಿದೆ. ಡಾ.ಕೆ.ವಿ.ಪುಟ್ಟಪ್ಪರವರ ಪ್ರಧಾನ ಸಂಪಾದಕತ್ವದಲ್ಲಿ ಕನ್ನಡ ಗ್ರಂಥಮಾಲೆ ನಂ-೭೯ರಲ್ಲಿ ಪ್ರಕಟಗೊಂಡಿದ್ದು, ಕ್ರೈಸ್ತ ತತ್ವದರ್ಶನದೊಂದಿಗೆ ಬೈಬಲ್ ಪರಿಚಯವನ್ನು ಪ್ರಸ್ತಾಪಿಸಲಾಗಿದ್ದು, ಕೆಥೊಲಿಕ ಪಂಗಡದವರ ದೃಷ್ಟಿಕೋನ ಮೂಡಿಬಂದಿದೆ. ಪ್ರೊಟೆಸ್ಟೆಂಟ್‌ರನ್ನು ಲಕ್ಷಿಕರಿಸಿಲ್ಲ.

೭. **ಟೆಸ್ಟಮೋನಿ ಆಫ್ ಗ್ರೇಟ್ ಮಾನ್ ಟು ದಿ ಬೈಬಲ್ ಮತ್ತು ಕ್ರಿಶ್ಚಿಯಾನಿಟಿ :** ೧೮೯೧, ಮದ್ರಾಸಿನ ದಿ ಕ್ರಿಶ್ಚಿಯನ್ ವೆರ್ನಾಕ್ಯೂಲರ್ ಎಜ್ಯುಕೇಶನ ಸೊಸೈಟಿಯಿಂದ ಇಂಗ್ಲೀಷ್‌ನಲ್ಲಿ ಪ್ರಕಟಗೊಂಡಿದ್ದು ಜಗತ್ತಿನ ಅತಿ ಪ್ರಮುಖ ಮಹಾನ್ ವ್ಯಕ್ತಿಗಳ ಬೈಬಲ್ ಕುರಿತ ಹೇಳಿಕೆಗಳ ಸಂಗ್ರಹ ಇದಾಗಿದೆ. ಸಮಾಜ ಸುಧಾರಕರು ಕವಿಗಳು, ಲೇಖಕರು, ವಿದ್ಯಾಜ್ಞಾನಿಗಳು, ಸಂತರು ಮುಂತಾದ ಎಲ್ಲಾ ವರ್ಗದ ಜನರ ಅಭಿಪ್ರಾಯಗಳನ್ನು ಅವರ ಅನುಭವಗಳ ಕುರಿತು ಮಾಹಿತಿ ಒದಗಿಸುತ್ತದೆ. ಒಂದು ಹೇಳಿಕೆಯನ್ನು ಹೀಗೆ ಗುರುತಿಸಬಹುದು. "The Bible of the history of the Divine education of the race"ಹಂಪಿ ಕನ್ನಡ ವಿಶ್ವವಿದ್ಯಾಲಯದ ಗ್ರಂಥಾಲಯದಲ್ಲಿದೆ.

೮. **ಕನ್ನಡದಲ್ಲಿ ಬೈಬಲ್ ಅನುವಾದಗಳು :** ೧೯೮೫ ಎಡ್ವರ್ಡ ನೋರೋನ (ಪ್ರಬುದ್ಧ ಕರ್ನಾಟಕ, ಸಂ.೬೭, ಸಂ.೧, ಮೈಸೂರು ವಿ.ವಿ.ಪ್ರಕಟಣೆ) ಕನ್ನಡದಲ್ಲಿ ಹಾಗೂ ೧೮೦೯ರಿಂದ ಕನ್ನಡ ಬೈಬಲ್ ನಡೆದುಬಂದ ದಾರಿಯ ಪರಿಚಯ ಇಲ್ಲಿ ಕಾಣಸಿಗುವುದು. J.S.M.Hoopr ಪ್ರಕಟಿಸಿದ ಬೈಬಲ್ ಟ್ರಾನ್ಸಲೇಷನ್ ಇನ್ ಇಂಡಿಯಾ, ಪಾಕಿಸ್ತಾನ ಮತ್ತು ಸಿಲೊನ ಎಂಬ ಪುಸ್ತಕದ ಮಾಹಿತಿ ಈ ಕೃತಿಯಲ್ಲಿ ಮೂಡಿ ಬಂದಿದೆ.

೯. **ಪಾಶ್ಚಾತ್ಯ ವಿದ್ವಾಂಸರ ಕನ್ನಡ ಸೇವೆ :** ಭಾರತೀಯ ಸಾಹಿತ್ಯ ಸಂಸ್ಕೃತಿಗೆ ಪಾಶ್ಚಾತ್ಯ ವಿದ್ವಾಂಸರ ಸೇವೆ ಎಂಬ ಶ್ರೀ ಐ.ಮಾ.ಮುತ್ತಣ್ಣನವರ ಎರಡು ಕೃತಿಗಳು ಬೈಬಲ್ ಸಾಹಿತ್ಯದಲ್ಲಿ ಸೇವೆ ಸಲ್ಲಿಸಿದ ವಿವರ ಹಾಗೂ ಬೈಬಲ್ ಮುದ್ರಣ ಆವೃತ್ತಿಗಳು ಮತ್ತು ಪ್ರಕಟಣೆ ಕುರಿತು ಹಾಗೂ ಮಿಶನರಿ ಸಾಹಿತ್ಯ ಕನ್ನಡ ಸಾಹಿತ್ಯದ ಮೇಲೆ ಮಾಡಿದ ಪ್ರಭಾವ ಕುರಿತು ಸಂಗ್ರಹಿತ ಮಾಹಿತಿ ದೊರೆಯುತ್ತದೆ.

ಕೆಥೋಲಿಕ ಹಾಗು ಪ್ರಾಟೆಸ್ಟೆಂಟ್ ದೈವಜ್ಞಾನ ಕಾಲೇಜಗಳಲ್ಲಿ ಹೊರತುಪಡಿಸಿ ಬೇರೆ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಬೈಬಲ್ ಬಗ್ಗೆ ವಿಷಯ ಸಿಗುವುದು ವಿರಳ. ಕನ್ನಡ ವಿಶ್ವಕೋಶ ಹಾಗೂ ನಿಘಂಟುಗಳಲ್ಲಿ ಸಂಕ್ಷಿಪ್ತ ಮಾಹಿತಿ ಮಾತ್ರ ಕಂಡುಬರುವುದು.

ಅಧ್ಯಾಯ ಎರಡು

ಬೈಬಲ್:ಹಸ್ತಪ್ರತಿ ಸ್ವರೂಪ ಸಂಗ್ರಹ ಹಾಗೂ ಸಂರಕ್ಷಣೆಯ ಇತಿಹಾಸ

೨.೧. ಬೈಬಲ್ ಎಂದರೇನು? ಬೈಬಲ್ ಮಹತ್ವ

೨.೨. ಬೈಬಲ್ ಹಸ್ತಪ್ರತಿಗಳು

೨.೩. ಪ್ರಮುಖ ಬೈಬಲ್ ಅನುವಾದಕರು

೨.೪. ಅನುವಾದದಲ್ಲಿ ಸಹಾಯಕರ ಪಾತ್ರ

೨.೫. ಅನುವಾದ ಹಾಗೂ ಪ್ರಕಟಣೆಗೆ ಆಯ್ದುಕೊಂಡ ಸ್ಥಳ

೨.೬. ಮುದ್ರಣಕ್ಕಾಗಿ ಬಳಸಿದ ಅಚ್ಚಿನ ವಿಧಾನಗಳು

೨.೭. ಅನುವಾದವನ್ನು ಪ್ರಕಟಿಸಿದ ಸಂಸ್ಥೆಗಳು

೨.೮. ಉಪಲಬ್ದ ಹಾಗೂ ಅನುಪಲಬ್ದ ಅನುವಾದಗಳು

೨

ಬೈಬಲ್ : ಹಸ್ತಪ್ರತಿ ಸ್ವರೂಪ ಸಂಗ್ರಹ ಹಾಗೂ ಸಂರಕ್ಷಣೆಯ ಇತಿಹಾಸ

೨.೧. ಬೈಬಲ್ ಎಂದರೇನು?

ಜಗತ್ತಿನ ಪೂಜ್ಯ ಕೃತಿಗಳಲ್ಲಿ ಬೈಬಲ್ ಗ್ರಂಥವೂ ಒಂದು. ಲೋಕದ ಎಲ್ಲಾ ಗ್ರಂಥಗಳಲ್ಲಿ ಬೈಬಲ್ ದೈವ ಪ್ರೇರಿತರಾದ ಭಕ್ತರಿಂದ ಬರೆಯಲಾದ ಅದ್ವಿತೀಯ ಗ್ರಂಥವಾಗಿದೆ. ಹಲವು ಪುಸ್ತಕಗಳ ಹೊತ್ತಿಗೆಯಾಗಿದ್ದರೂ ಒಂದೇ ಗ್ರಂಥವೆಂದು ಕರೆಯಿಸಿಕೊಳ್ಳುತ್ತದೆ. ಸುಮಾರು ೧೬೦೦ ವರ್ಷಗಳ ಅವಧಿಯಲ್ಲಿ ೪೦ಜನ ಲೇಖಕರಿಂದ ಬರೆಯಲಾದ ಈ ಕೃತಿ ಸು. ೧೮೦೦ ಭಾಷೆಗಳಲ್ಲಿ ಭಾಷಾಂತರಗೊಂಡು ಜಗತ್ತಿನಲ್ಲಿಯೇ ಅತೀ ಹೆಚ್ಚು ಮಾರಾಟವಾದ ಪುಸ್ತಕ (ಬೆಸ್ಟ ಸೆಲ್ಲರ್ ಆಫ್ ದಿ ವರ್ಲ್ಡ) ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

"ಪ್ರಮುಖವಾಗಿ ಬೈಬಲ್ ಎರಡು ಭಾಗಗಳನ್ನು ಹೊಂದಿದೆ. ಮೊದಲ ಭಾಗಕ್ಕೆ ಹಳೆ ಒಡಂಬಡಿಕೆ ಅಥವಾ ಪೂರ್ವ ನಿರ್ಧಾರ, ಮತ್ತು ಎರಡನೆ ಭಾಗ ಹೊಸ ಒಡಂಬಡಿಕೆ ಅಥವಾ ನವ ನಿರ್ಧಾರ ಎಂದು ಕರೆಯುವರು. ಪ್ರತಿಯೊಂದು ಭಾಗ ಅನೇಕ ಪುಸ್ತಕಗಳಾಗಿ ಆ ಪುಸ್ತಕಗಳು ಹಲವು ಅಧ್ಯಾಯಗಳಾಗಿ, ಆ ಅಧ್ಯಾಯಗಳು ಅನೇಕ ವಚನಗಳಾಗಿ ವಿಂಗಡನೆ ಪಡೆದಿವೆ."[೧] ಇಂಗ್ಲೀಷನಲ್ಲಿ Old Testment ಮತ್ತು New Testment ಎಂದು ಕರೆಯುವರು Testment ಎಂದು ಬಳಕೆಯಾದ ಪದ ಗ್ರೀಕ್ ಶಬ್ದವಾದ Diatheke ಎಂಬ ಶಬ್ದದ ಉತ್ಪತ್ತಿ. "ಇದು Covenant ಎಂದು ಬಳಕೆಗೆ ಬಂದು ನಂತರ ಇಂಗ್ಲೀಷನಲ್ಲಿ Testment ಎಂದು ಕರೆಯಿಸಿಕೊಳ್ಳುತ್ತಿದೆ. ಇದನ್ನೆ ಒಡಂಬಡಿಕೆ ಎಂದು ಕನ್ನಡದಲ್ಲಿ ಬಳಸಲಾಗಿದೆ. ದೇವರು ಇಸ್ರಯೇಲ್ ಜನಾಂಗದ ಮೂಲಕ ಜಗತ್ತಿನ ಜನರೊಂದಿಗೆ ಮಾಡಿಕೊಂಡ ಒಪ್ಪಂದವನ್ನು ಈ ಪದ ಪ್ರತಿನಿಧಿಸುತ್ತದೆ."[೨]

'ಬೈಬಲ್'ನ್ನು ಕನ್ನಡದಲ್ಲಿ 'ಸತ್ಯವೇದ', ದೇವರವಾಕ್ಯ, ಪವಿತ್ರ ಬೈಬಲ್, ಎಂದು ಬಳಸಲಾಗಿದೆ. ಈಗ ಪ್ರಚಲಿತವಿರುವ ಭಾಷಾಂತರ 'ಸತ್ಯವೇದ' ಎಂಬ ಶಿರೋನಾಮೆಯಿಂದ ಕಂಡುಬರುವುದು.

---

೧. T.G.B.Encyclopedia, 1939, Pp.162

೨. G.A.Encyclopedia, 1939, Pp.237

ಯಾವುದೇ ಘಟನೆ ಹಾಗೂ ಸಂಗತಿಗಳನ್ನು ಮುಚ್ಚುಮರೆಯಿಲ್ಲದೆ ತೆರೆದು ಹೇಳುವ ಕೃತಿ ಇದಾಗಿರುವುದರಿಂದ ಸತ್ಯವೇದ ಎಂಬ ತರ್ಜುಮೆ ಸೂಕ್ತವೇನೋ ಎಂಬಂತೆ ಕಂಡುಬರುವುದು.

'ಬೈಬಲ್' ಶಬ್ದ ಗ್ರಂಥ ಎನ್ನುವ ಅರ್ಥವಿವರಣೆ ಹೊಂದಿದೆ. ಕ್ರಿ.ಶ. ೩ನೇ ಶತಮಾನದ ಮಧ್ಯದಲ್ಲಿ ಕ್ಲಮೆಂಟ್ (Clement) ಎಂಬುವವನು ಪ್ರಪ್ರಥಮವಾಗಿ ಬೈಬಲ್ ಎಂದು ಕರೆಯಲು ಪ್ರಾರಂಭಿಸಿದನೆಂದು ಕಂಡು ಬರುವುದು"[೧] "೪ನೇ ಶತಮಾನದಲ್ಲಿ ಹೆಸರಾಂತ ಧರ್ಮ ಶಾಸ್ತ್ರಜ್ಞ ಸಂತ ಜರೋಮ (st.Jerome)ನು ಬೈಬಲ್ ಎಂದು ನೇರವಾಗಿ ಬಳಕೆಗೆ ತಂದನು."[೨]

ಬೈಬಲ್ ಬರಹಗಾರರು ಈಗಿರುವ ಅಧ್ಯಾಯ ವಚನಗಳನ್ನು ವಿಂಗಡಿಸಿ ಬರೆಯಲಿಲ್ಲ. "೧೨ನೇ ಶತಮಾನದಲ್ಲಿ ಕಾರ್ಡಿನಲ್ ಲ್ಯೋಗೊ (Cardinal Lugo) ಎಂಬುವವನು ಅಧ್ಯಾಯಗಳನ್ನಾಗಿ ಮೊಟ್ಟ ಮೊದಲು ಗುರುತಿಸಿದನು."[೩] ಹಿಬ್ರೂ ಹಳೆ ಒಡಂಬಡಿಕೆಯ ಅಧ್ಯಾಯ, ವಚನಗಳನ್ನು ವಿಂಗಡಿಸಿದವನು. ರೆಬ್ಬಿ ಮೋಡಿಕೆ ನಾಥನ್ (Rabbi Modecai Nathan)ನು. ಈಗಿರುವ ವಿಂಗಡನೆಗಳನ್ನು ಸೆಂಟರ್ ಬರಿಯ ಆರ್ಚ ಬಿಶಪ್‌ರಾಗಿದ್ದ ಸ್ಟಿಫನ್ ಲೆಂಗಟನ್ (Stephen Lengton) ವಿಂಗಡಿಸಿರುವನು. ಈಗಿರುವ ವಿಂಗಡನೆಯನ್ನು ೧೫೫೫ ರಲ್ಲಿಯೇ ಲ್ಯಾಟಿನ್ ಭಾಷೆಯಲ್ಲಿ ಮುದ್ರಣವಾದ 'ವಲ್ಗೇಟ್'*[೧]ನಲ್ಲಿ ಅಳವಡಿಸಲಾಗಿದೆ. ಕಿಂಗ್ ಜೇಮ್ಸ್ ಇಂಗ್ಲೀಷ ಆವೃತ್ತಿಯಿಂದ ಸಂಪೂರ್ಣ ಬಳಕೆಯನ್ನು ಕಂಡುಕೊಂಡಿದೆ.

"ಬೈಬಲ್'(Bible) ಇದು ಇಂಗ್ಲೀಷ ಪದ, ಗ್ರೀಕಿನ ಮುಖಾಂತರ ಲ್ಯಾಟಿನ್ ಭಾಷೆಯಿಂದ ಬಂದುದು. ಗ್ರೀಕ್‌ನಲ್ಲಿ ಕೇವಲ ಪುಸ್ತಕಗಳು ಎಂಬ ಬಹುವಚನದಲ್ಲಿ 'Biblia' ಎಂದರೆ ಪುಸ್ತಕಗಳ ಸಂಗ್ರಹ ಅಥವಾ ಸುರಳಿಗಳು ಎಂದು ಅರ್ಥ ಕೊಡುತ್ತದೆ....ಯಾವಾಗ ಗ್ರೀಕ್ ಬೈಬಲ್ ಲ್ಯಾಟಿನ್ ಭಾಷೆಗೆ ತರ್ಜುಮೆಗೊಳಿಸಲಾಯಿತೋ ಅಂದಿನಿಂದ ಬಹುವಚನದಲ್ಲಿಯ Biblia ಶಬ್ದವು ಏಕವಚನ ರೂಪತಾಳಿ Bible ಅಂದರೆ ಗ್ರಂಥ ಎಂದು ಕರೆಯಿಸಿಕೊಳ್ಳಲು ಪ್ರಾರಂಭಿಸಿತು."[೪]

ಗ್ರೀಕ್ ಶಬ್ದವಾದ Bublos ಅಥವಾ Biblia ಈ ಪದಗಳ ಉತ್ಪತ್ತಿಗೆ Papyras ಎನ್ನುವ ಗ್ರೀಕ್ ಶಬ್ದವೇ ಮೂಲ. ಪಪೈರಸ್ ಎನ್ನುವ ಸಸ್ಯ (ಆಪು/ ಜಂಬು ಹುಲ್ಲು) ದ ದೇಟನ್ನು ಹಿಂದಿನ ಕಾಲದಲ್ಲಿ ಕಾಗದದ ರೀತಿಯಲ್ಲಿ ಬರೆಯಲು ಬಳಸುತ್ತಿದ್ದರು.*[೨] ಬೈಬಲ್ ಎಂದರೆ ಗ್ರಂಥ ಎಂದು

೧. The Dakes(Bible) Pp.508

೨. Encyclopedia of Relegion, Pp.569

೩. ಸತ್ಯಶಾಸನ, ಪು.೧೬

೪. Encyclopedia of Relegion, Pp.569

*೧. ವಲ್ಗಟ್ ಇದು ಲ್ಯಾಟಿನ್ ಬೈಬಲ್ ಹೆಸರು ಕ್ರಿ.ಶ.೭ನೇ ಶತಮಾನ

*೨. ಈಜಿಪ್ತ ನೈಲ ನದಿಯ ದಂಡೆಯ ಮೇಲೆ ಬೆಳೆಯು ವ ಒಂದು ಬಗೆಯ ಹುಲ್ಲು City of Gebal famous for its papyras

ಕ್ರಿ.ಶ ೧೫೩೫ರಲ್ಲಿ ಮುದ್ರಣವಾದ ಪ್ರಥಮ ಇಂಗ್ಲೀಷ್ ಬೈಬಲ್, ಬಿಬ್ಲಿಯಾ(Biblia) ಎಂದು ಶಿರೋನಾಮೆ ಹೊಂದಿದೆ. ಇದು ಗ್ರಂಥಗಳು ಎಂದು ಪ್ರತಿನಿಧಿಸುತ್ತದೆ. ಕ್ರೈಸ್ತ ಧಾರ್ಮಿಕ ಸಾಹಿತ್ಯದಲ್ಲಿ ಈ ಬರಹಗಳ ಕುರಿತು ವಿಮರ್ಶಾತ್ಮಕ ಅಂಶಗಳು ಅಧಿಕ ಪ್ರಮಾಣದಲ್ಲಿ ರಚನೆಗೊಂಡಿವೆ. ಕ್ರೈಸ್ತ ಧಾರ್ಮಿಕ ಸಾಹಿತ್ಯ ಹರವು ವ್ಯಾಪಕವಾಗಿದ್ದು ಒಟ್ಟು ೧೩೧ ಪುಸ್ತಕಗಳೆಂದು ಗುರುತಿಸಲಾಗಿದೆ.* ಇವುಗಳಲ್ಲಿ ಕೆಥೋಲಿಕರನ್ನು ಹೊರತು ಪಡಿಸಿ ಉಳಿದೆಲ್ಲ ಕ್ರೈಸ್ತ ಜನಾಂಗವು ೬೬ ಪುಸ್ತಕಗಳನ್ನು ಪವಿತ್ರ ಬರಹಗಳೆಂದು ಸ್ವೀಕರಿಸಿವೆ.

ಹಳೆ ಒಡಂಬಡಿಕೆಯಲ್ಲಿ ೩೯ ಪುಸ್ತಕಗಳು, ಹೊಸ ಒಡಂಬಡಿಕೆಯಲ್ಲಿ ೨೭ ಪುಸ್ತಕಗಳು ಹೀಗೆ ಒಟ್ಟು ೬೬ರು. ಹೊಸ ಒಡಂಬಂಡಿಕೆಯ ಪುಸ್ತಕಗಳ ವಿಷಯದಲ್ಲಿ ಎಲ್ಲ ಕ್ರೈಸ್ತ ಪಂಗಡಗಳ ಒಮ್ಮತ ಒಂದೇ ಆಗಿದೆ. ಆದರೆ ಹಳೆ ಒಡಂಬಡಿಕೆಯ ಕುರಿತು ವಿಭಿನ್ನ ಅಭಿಪ್ರಾಯಗಳು ಇವೆ. ಇದಕ್ಕೆ ಕಾರಣ ಇಬ್ರಿಯ (Hebrew) ಮೂಲ ಹಾಗೂ ಯಹೂದಿ (Jewish) ಮೂಲಗಳಿಂದ ಹುಟ್ಟಿದ ಪಾಠಗಳು. ಗ್ರೀಕ್ ಸಂಪ್ರದಾಯದ ಹಿನ್ನಲೆಯಲ್ಲಿ ಬೆಳೆದು ಬಂದ ಹಳೆ ಒಡಂಬಡಿಕೆಯ ಬರಹಗಳು ಒಟ್ಟು ೫೨ ಪುಸ್ತಕಗಳಿವೆ. ಇವುಗಳಲ್ಲಿ ಸರ್ವ ಸಮ್ಮತವಾದಗಳು ೩೯ ಮಾತ್ರ. ಉಳಿದ ೧೩ ಬರಹಗಳು ವಿಭಿನ್ನಕಾರಣಗಳಿಂದ ಸ್ವೀಕೃತವಾಗಿಲ್ಲ. ಯಹೂದಿ ಮೂಲಗಳು ಅದರಲ್ಲಿ ಮುಖ್ಯವಾಗಿ ಪ್ರೊಟೆಸ್ಟಂಟ್ ಪಂಗಡದವರು ನೇರವಾಗಿ ತಳ್ಳಿಹಾಕಿದ್ದಾರೆ. ಈ ಬರಹಗಳು ಖಚಿತ (ಪವಿತ್ರ) ಸಾಹಿತ್ಯ ಸ್ಥಾನವನ್ನು ಪಡೆಯುವ ಅವಶ್ಯಕತೆ ಉಂಟಾದುದು ಕ್ರೈಸ್ತ ಬರಹಗಳ ನಂತರ (ಕ್ರಿಸ್ತನ ತರುವಾಯದ ಸಾಹಿತ್ಯ ನಿರ್ಮಾಣದ ನಂತರ). “ಕ್ರಿ.ಶ. ೩೯೭ರಲ್ಲಿ ಕಾರ್ತೇಜ ಎಂಬಲ್ಲಿ (ಸಿನೋಡ್) ಬೇರೆ ಬೇರೆ ಜನಾಂಗಗಳ ನಾಯಕರು ಕೂಡಿ ಬಂದು ಮೊಟ್ಟ ಮೊದಲ ಬಾರಿಗೆ ಹಳೆ ಹಾಗೂ ಹೊಸ ಒಡಂಬಡಿಕೆಯ ಗ್ರಂಥ ಸಂಗ್ರಹವನ್ನು ವಿಚಾರಿಸಿ, ಮೊದಲಿದ್ದ ಸಂಗ್ರಹಕ್ಕೆ ಸಂಯುಕ್ತ ಮನ್ನಣೆಯಿತ್ತು ದೃಢೀಕರಿಸಿದರು. ಅದೇ ಸಂಗ್ರಹ ಇಂದಿಗೂ ಕ್ರೈಸ್ತ ಸಭೆಗಳಿಂದ ಅನುಸರಿಸಲ್ಪಡುತ್ತದೆ.”

ಪಾಶ್ಚಾತ್ಯ ದೇಶಗಳಲ್ಲಿ ರೋಮನ್ ಕೆಥೊಲಿಕ ಸಂಪ್ರದಾಯದವರು. ಹಳೆ ಒಡಂಬಡಿಕೆಯ ೩೯ ಪುಸ್ತಕಗಳಿಗಿಂತ ಉಳಿದ ಬರಹಗಳನ್ನು ಪ್ರಾಮಾಣ್ಯವುಗಳೆಂದು*[೧] ಒಪ್ಪಿಕೊಂಡು ಬೈಬಲ್ ಗ್ರಂಥಗಳಲ್ಲಿ ಅಳವಡಿಸಿಕೊಂಡಿವೆ. ಇವುಗಳು ‘ಅಪೊಕ್ರಿಪ್’(Aporypha) ಎಂದು ಕರೆಯಿಸಿಕೊಳ್ಳುತ್ತವೆ “ಗ್ರೀಕ್‌ನಲ್ಲಿ Hidden/Reserved. ಅಂದರೆ ರಹಸ್ಯ/ ಕಾಯ್ದಿರಿಸಿದ ಎಂಬ ಅರ್ಥ ಉಂಟು. ಇವು ಸುಮಾರು ಕ್ರಿ.ಪೂ. ೩೦೦ (ಬ.ಸಿ.) ೭೦ರ ಅವಧಿಯಲ್ಲಿ ಬರೆದವುಗಳೆಂದು ಪಂಡಿತರು ಗುರುತಿಸಿದ್ದಾರೆ.[೧]

೧. Encyclopedia of Relegion, Pp.569

*೧. ಪ್ರಾಮಾಣ್ಯವೆಂದು ತರ್ಜುಮೆ ಮಾಡಿದ ಪದ ಇಂಗ್ಲೀಷ್ Canon ಪದದ ಉತ್ಪತ್ತಿ. ಇದು ಸಿಮೆಟಿಕ್ ಪದವೊಂದರ ಇಂಗ್ಲೀಷ್ ರೂಪ. ಅಧಿಕೃತ ಬರಹಗಳ ಪ್ರಮಾಣ ಇಲ್ಲವೆ ಮಟ್ಟವನ್ನು ಸೂಚಿಸಲು ಈ ಪದ ಪ್ರಯೋಗಿಸಲಾಗಿದೆ. ಇದರ ಅರ್ಥ ಅಳತೆಗೋಲು.

ಕ್ರೈಸ್ತ ಧಾರ್ಮಿಕ ಸಾಹಿತ್ಯ ಅಭ್ಯಸಿಸಿದರೆ ನಮಗೆ ಮೂರು ಪ್ರಮುಖ ಭಾಗಗಳು ಕಂಡು ಬರುತ್ತವೆ.

೧. ಬೈಬಲ್ ಸಾಹಿತ್ಯ (Biblical Litrature)

೨. ಅನುಗ್ರಂಥ (Apocrypha)

೩. ಮಿಥ್ಯಾ ಸಾಹಿತ್ಯ (Pseudepigrapha)

೧. ಬೈಬಲ್ ಸಾಹಿತ್ಯ: ಈ ಸಾಹಿತ್ಯವು ಮನುಷ್ಯನಿಂದ ರಚಿತಗೊಂಡಿದ್ದರೂ, ದೇವರ ಆತ್ಮನ ಪ್ರೇರಣೆಯಿಂದ ಬರೆದವುಗಳೆಂದು ಕ್ರೈಸ್ತರ, ಎಲ್ಲಾ ಪಂಗಡದವರಿಂದ ಒಪ್ಪಿಗೆ ಪಡೆದು, ಪ್ರಥಮ ದರ್ಜೆಯಲ್ಲಿ ನಿಲ್ಲುತ್ತವೆ. ಇವು ಒಟ್ಟು ೬೬ ಪುಸ್ತಕಗಳಾಗಿವೆ.

೨. ನೀತಿ ಬೋಧನಾ ಸಾಹಿತ್ಯ : ಈ ಸಾಹಿತ್ಯವನ್ನು ಕ್ರೈಸ್ತ ಜನಾಂಗದ ಎಲ್ಲಾ ಪಂಗಡದವರು ಶ್ರೇಷ್ಠವಾದವುಗಳೆಂದು ಅಥವಾ ದೈವ ಪ್ರೇರಿತವೆಂದು ಒಪ್ಪಿಕೊಂಡಿಲ್ಲ. ಆದರೆ ಕೆಥೋಲಿಕ ಪಂಗಡದವರು ಇವುಗಳನ್ನು ತಮ್ಮ ಲ್ಯಾಟೀನ್ ಭಾಷಾಂತರದಲ್ಲಿ ಇವೆ ಎಂಬ ಕಾರಣಕ್ಕೆ ಶ್ರೇಷ್ಠ ಗ್ರಂಥಗಳೆಂದು ಪರಿಗಣಿಸಿದ್ದಾರೆ. ೧೩ ಪುಸ್ತಕಗಳಲ್ಲಿ ಈ ಸಾಹಿತ್ಯವು ಕಂಡು ಬರುತ್ತದೆ. ಗ್ರೀಕ ಭಾಷಾಂತರದಲ್ಲಿ ಇವುಗಳು ಕಂಡು ಬಂದರೂ ಯಹೂದ್ಯರು ಇಬ್ರಿಯ ಭಾಷೆಗಳಲ್ಲಿ ಬರೆದ ಕಾರಣದಿಂದಾಗಿ ಇವುಗಳನ್ನು ಸ್ವೀಕರಿಸಲಿಲ್ಲ.

೩. ಮಿಥ್ಯಾ ಸಾಹಿತ್ಯ(Pseudepigrapha): ಮಿಥ್ಯಾ ಸಾಹಿತ್ಯ ಎನ್ನುವಲ್ಲಿ ಮನುಷ್ಯ ಕಲ್ಪಿತ ಎಂಬ ಅಂಶವನ್ನು ಹೊಂದಿದೆ. ಇವುಗಳು ದೈವ ಪ್ರೇರಿತವಲ್ಲ ಹಾಗೂ ಯಾವ ಪೂರ್ವದ ಹಾಗೂ ನಂತರದ ಬರಹಗಾರರು ಇವುಗಳನ್ನು ಉಲ್ಲೇಖಿಸಿಲ್ಲ ಎಂಬ ಕಾರಣದಿಂದ, ಕ್ರೈಸ್ತ ಧಾರ್ಮಿಕ ಪೂಜ್ಯ ಗ್ರಂಥಗಳ ಸಾಲಿನಲ್ಲಿ ಸೇರದೆ ಹೊರಗುಳಿದಿವೆ. ಹೀಗಾಗಿ ಯಾವ ಪಂಗಡದವರು ಇವುಗಳನ್ನು ಸ್ವೀಕರಿಸಿಲ್ಲ. ಇವುಗಳು ಒಟ್ಟು ೫೨ ಪುಸ್ತಕಗಳಾಗಿ ತೋರಿ ಬರುತ್ತಿವೆ.

ಈ ಬಗೆಯ ಕ್ರೈಸ್ತ ಸಾಹಿತ್ಯವು ಗ್ರೀಕ, ಹಿಬ್ರೂ, ಅರೆಬಿಕ್ ಭಾಷೆಗಳಲ್ಲಿ ಬರೆದವುಗಳಾಗಿವೆ. ಬೈಬಲ್‌ನ್ನು ಹೊರತುಪಡಿಸಿ ಉಳಿದ ಸಾಹಿತ್ಯ ಪ್ರವಾದಿಗಳ ಅಂಕಿತವನ್ನು ಒಳಗೊಂಡಿವೆ. ಈ ಗ್ರಂಥಕರ್ತರು ತಾವು ದೈವ ಪ್ರೇರಿತವಾಗಿ ಬರೆದಿರುವ ಬಗ್ಗೆ ಎಲ್ಲಿಯೂ ದಾಖಲಿಸಿಲ್ಲ. ಅಲ್ಲದೆ ವರ್ಣನಾತ್ಮಕ ಶೈಲಿಯನ್ನು ಅನುಸರಿಸಿದಂತೆ ತೋರಿ ಬರುತ್ತವೆ. ಐತಿಹಾಸಿಕ ಘಟನೆಗಳು, ಸಂಪ್ರದಾಯ-ಪದ್ಧತಿಗಳನ್ನು ಒಳಗೊಂಡಿವೆ ಎಂಬ ಕಾರಣದಿಂದ ಇವು ಕ್ರೈಸ್ತ ಸಾಹಿತ್ಯದಲ್ಲಿ ಸ್ಥಾನ ಪಡೆದು ನಿಂತಿವೆ.

ಅನುಗ್ರಂಥಗಳು(APOCRYPHA)

ಕ್ರೈಸ್ತ ಧಾರ್ಮಿಕ ಸಾಹಿತ್ಯದ ಬಹುದೊಡ್ಡ ಭಾಗ ಬೈಬಲ್. ಬೃಹತ್ತಿನಲ್ಲಿ ಹೇಗೆಯೋ ಹಾಗೆ ಮಹತ್ತಿನಲ್ಲಿ ಹಾಗೂ ಪ್ರಾಚೀನತೆಯಲ್ಲಿ ಪ್ರಪಂಚದಲ್ಲಿಯೇ ಗಣನೀಯ ಸ್ಥಾನ ಪಡೆದಿದೆ. ವಿಶಿಷ್ಟ

ಸಂಸ್ಕೃತಿ ಸಂಪ್ರದಾಯದಲ್ಲಿ "ಹಿಬ್ರೂ, ಗ್ರೀಕ್ ಮತ್ತು ಅರೆಮೀಕ್ ಭಾಷೆಗಳಲ್ಲಿ"[೧] ಬರೆಯಲಾದ ಈ ಕೃತಿಗಳು ಆಯಾ ಕಾಲದ ಜನರ ಧಾರ್ಮಿಕ ಅಂಶಗಳನ್ನು ಪ್ರತಿಬಿಂಬಿಸಿ, ಜನರು ಸನ್ಮಾರ್ಗದಲ್ಲಿ ನಡೆಯಬೇಕಾದ ಮಾರ್ಗವನ್ನು ಬೋಧಿಸುತ್ತವೆ.

ಕ್ರೈಸ್ತ ಸಾಹಿತ್ಯ ಕ್ಷೇತ್ರದಲ್ಲಿ ಬೈಬಲ್ ಒಂದು ಪ್ರಮುಖ ಭಾಗವಾದರೆ, ಇನ್ನುಳಿದ ಕ್ರೈಸ್ತ ಧಾರ್ಮಿಕ ಕೃತಿಗಳು ತಮ್ಮದೆ ಆದ ವಿಶಿಷ್ಟ ಸ್ಥಾನದಲ್ಲಿ ನಿಂತಿವೆ. ಬೈಬಲ್‌ನಲ್ಲಿಯ ೬೬ ಪುಸ್ತಕಗಳು ಶಾಸ್ತ್ರಬದ್ಧವಾದ ಅಥವಾ ದೇವರ ಆತ್ಮನಿಂದ ಪ್ರೇರೇಪಿಸಲ್ಪಟ್ಟ ಬರಹಗಳೆಂದು ಕರೆಯುತ್ತಿದ್ದರು. ಕೆಲವು ಪಂಗಡಗಳು ಅದರಲ್ಲಿಯೂ ಮುಖ್ಯವಾಗಿ ಕೆಥೋಲಿಕರಲ್ಲಿ ೭೮ ಪುಸ್ತಕಗಳು ಶಾಸ್ತ್ರಬದ್ದವಾದವೆಂದು (ಪ್ರಾಮುಖ್ಯವಾದವೆಂದು) ನಂಬುತ್ತವೆ. ಅಂದರೆ "ಗ್ರೀಕ ಬೈಬಲ್‌ನಲ್ಲಿ ಇದ್ದು, ಹಿಬ್ರೂ ಬೈಬಲ್‌ನಲ್ಲಿ ಇರದ ಬರಹ (ಪುಸ್ತಕ) ಗಳಿಗೆ ಅಪೋಕ್ರಿಫ(ಅನುಗ್ರಂಥ) ಎಂದು ಹೆಸರಾಯಿತು".[೨]

ಮೆಥೋಡಿಸ್ಟ, ಆಂಗ್ಲಿಕನ್, ಪ್ರೊಟೆಸ್ಟಂಟ್ ಮುಂತಾದ ಚರ್ಚಗಳು ಬೈಬಲ್‌ನಲ್ಲಿನ ೬೬ ಪುಸ್ತಕಗಳನ್ನು ಬಿಟ್ಟು ಉಳಿದ ಪುಸ್ತಕ (ಬರಹ) ಗಳನ್ನು ಅಪೊಕ್ರಿಫ ಎಂದು ಕರೆದರೆ ರೋಮನ್ ಕೆಥೋಲಿಕ್ ಗ್ರೀಕ್, ಅರೆಮೇನಿಯನ್, ಇಥಿಯೊಪಿಯನ ಮುಂತಾದ ಚರ್ಚಗಳು ಅಪೋಕ್ರಿಫ ಎಂದು ಬೇರೆಯಾಗಿ ಪರಿಗಣಿಸದೆ ಬೈಬಲ್‌ನಲ್ಲಿ ಅಳವಡಿಸಿಕೊಂಡಿವೆ."[1] ಆದರೆ ಈ ಪಂಗಡಗಳು ಅಪೊಕ್ರಿಫ ಅಂದರೆ ಮಿಥ್ಯಾಸಾಹಿತ್ಯವೆಂದು ಕರೆಯುವ ಪುಸ್ತಕ (ಬರಹ)ಗಳೇಬೇರೆ. ಅವು ಒಟ್ಟು ೫೨.[೩]

"ಈ ಬಗೆಯಲ್ಲಿ ಬೇರೆ ಬೇರೆ ಚರ್ಚ (Denomination)ಗಳು ಪ್ರಾಮಾಣ್ಯ (Canan) ಕೃತಿಗಳನ್ನು ತಮ್ಮ ತಮ್ಮ ದೃಷ್ಟಿಯಲ್ಲಿ ಸ್ವಿಕರಿಸಿದ್ದರಿಂದ, ಅಪೋಕ್ರಿಫ ಎನ್ನುವ ಪದದ ಅರ್ಥ, ಅದು ಉಪಯೊಗವಾದ ಸಂದರ್ಭಕ್ಕನುಸಾರವಾಗಿ ತಿಳಿಯಬೇಕು,"[೪] ಆದರೆ ಈ ಚರ್ಚಗಳು ಅಪೊಕ್ರಿಫ ಎಂದು ಕರೆಯುವ ಕೃತಿಗಳನ್ನು ಸುಡೆಫಿಗ್ರಾಫಾ (Pseudapicrapha) ಎಂದು ಕರೆಯಲಾಗುತ್ತಿದೆ.

ಅಪೊಕ್ರಿಫ (Apokrypha) ಈ ಶಬ್ದವು ಗ್ರೀಕಿನ ಅಪೊಕ್ರಿಫ (Apokrypha) ಪದದ ಉತ್ಪತ್ತಿ. 'ಗ್ರೀಕ್'ನಲ್ಲಿ "Hiddan"/"Reserved"[೫]ಅಂದರೆ ರಹಸ್ಯ ಅಥವಾ ಕಾಯ್ದಿರಿಸಿದ ಎಂಬ ಅರ್ಥ. ಇವುಗಳನ್ನು ಕನ್ನಡದಲ್ಲಿ ಅನುಗ್ರಂಥಗಳೆಂದು ಕರೆಯಲಾಗುತ್ತಿದೆ. ಒಟ್ಟು ೧೩ ಕೃತಿಗಳಾದ ಅಪೊಕ್ರಿಫ ಬರಹಗಳು ಸು ೩೦೦ B C E* ಇಂದ ೭೦ ಅವಧಿಯಲ್ಲಿ ಬರೆದವು ಎಂದು ಬಹು ಪಂಡಿತರು

೧. ಹಳೆ ಒಡಂಬಂಡಿಕೆ ಪ್ರವೇಶದಾಯನಿ, ಪಿ.ಎಸ್, ಥೋಬರ್ನ್, ಪು.೧೧

೨. American Encyclopedia, Pp.614

೩. Encyclopedia of Relegion, Pp.173

೪. ಹಳೆ ಒಡಂಬಂಡಿಕೆ ಪ್ರವೇಶದಾಯನಿ, ಪಿ.ಎಸ್, ಥೋಬರ್ನ್, ಪು.೧೧

೫. Encyclopedia of Relegion, Pp.173

* BCE= Before the comman Era

ಗುರುತಿಸಿದ್ದಾರೆ. ರೋಮನ್‌ರಿಂದ ಯರುಸಲೇಮ ದೇವಾಲಯ ಸುಟ್ಟು ಹೋದ ಕಾಲ (70 CE)* ದಲ್ಲಿ ಎಲ್ಲ ಅಪೊಕ್ರಿಫಗಳು ಸೆಮೆಟಿಕ್ (Semitic) ಭಾಷೆಯಲ್ಲಿ ಬರೆಯಲಾಗಿತ್ತು. ಹೀಗಾಗಿ ಕ್ರಿ.ಶ (೭೦ C E) ರ ಸುಮಾರಿಗೆ ಎಲ್ಲಿ ಅಪೊಕ್ರಫ ರಚಿತಗೊಂಡ ಕಾಲವೆಂದು ಖಚಿತ ಪಡಿಸಲಾಗಿದೆ.

"ಕ್ರಿ.ಪೂ ೯೫೦ ರಿಂದ ೧೬೫ ರಲ್ಲಿ ಇಬ್ರಿಯ ಬೈಬಲ್, ಮಾನದಂಡಕ್ಕೆ (Canonized) ಒಳಗಾದಾಗ, ಈ ಬರಹಗಳು ಇಬ್ರಿಯ ಬೈಬಲ್‌ಗೆ ಸಂಬಂಧಿಸಿದಾಗ್ಯೂ ಇವುಗಳು ಅಪೊಕ್ರಿಫ ಹಾಗೂ ಮಿಥ್ಯಾಸಾಹಿತ್ಯವೆಂದು (Pseudepigrapha) ಪರಿಗಣನೆಗೆ ಒಳಗಾದವು. ಇಬ್ರೀಯ ಮಾನದಂಡ ಸ್ಪಷ್ಟಗೊಂಡಾಗ, (ಅಧಿಕಾರ ಉಳ್ಳ ಪ್ರಮುಖ ಯಹೂದಿ ಹಾಗೂ ಕ್ರೈಸ್ತರು ಈ ಬರಹಗಳನ್ನು ಮಾನದಂಡಕ್ಕೆ ಒಳಗಾದವುಗಳೆಂದು ಬೈಬಲ್ಲಿನಲ್ಲಿ ಸೇರಿಸಲಿಲ್ಲ.) ಈ ಬರಹಗಳು ಬೈಬಲ್‌ನಿಂದ ಹೊರತಾದವು. ಬರುಬರುತ್ತಾ ತಮ್ಮ ಪ್ರಭಾವ ಮತ್ತು ಮಹತ್ವವನ್ನು ಕಳೆದುಕೊಂಡವು. ಆದುದರಿಂದ ಈ ಬರಹಗಳ ಹಸ್ತಪ್ರತಿಗಳನ್ನು ದ್ವಿತೀಯ ದರ್ಜೆಯ ಮತ್ತು ಮೂಲತ್ವವನ್ನು ಕಳೆದು ಕೊಂಡವುಗಳು ಎನ್ನಲಾಯಿತು. ಸತ್‌ಸಮುದ್ರದ ಸುರಳಿಗಳು (1947) ದೊರಕಿದ ಮೇಲೆ ಪೂರ್ವದ ಯಹೂದಿ ಚರಿತ್ರೆ (250 BCL-200CE) ಮತ್ತು ಕ್ರೈಸ್ತ ಆದಿ ಸಭೆಯ ಚರಿತ್ರೆ (FIRSt 4th Conturies) ಗಳು ಈ ಬರಹ (ಅಪೊಕ್ರಿಫ ಮಿಥ್ಯಾಸಾಹಿತ್ಯ)ಗಳ ಸಹಾಯವಿಲ್ಲದೆ ಬರೆಯಲ್ಪಡಲಿಲ್ಲವೆಂದು ಪಂಡಿತರು ಅಭಿಪ್ರಾಯ ಪಟ್ಟಿದ್ದಾರೆ."

ಪ್ರಾಚೀನ ಬರಹಗಾರರ ದೃಷ್ಟಿಯಲ್ಲಿ

"ಪ್ರಾಚೀನ ಬರಹಗಾರರಾದ ಹೆಸರಾಂತ, ಅಲೆಗ್ಸಾಂಡ್ರಿಯಾದ ತತ್ವಜ್ಞಾನಿ Philo Judocus (45-50 AD) ಮತ್ತು ಚರಿತ್ರಕಾರನಾದ Josephas Flavius (37-100 A D) ಗ್ರೀಕ್ ಬೈಬಲ್ ಬಳಸುವಾಗ ಅಪೊಕ್ರಿಫಗಳನ್ನು ಬೈಬಲ್ ಪುಸ್ತಕಗಳೆಂದು ಪ್ರಚುರ ಪಡಿಸಲಿಲ್ಲ"[೧]

"ಬೈಬಲ್ ಪಂಡಿತರಾದ Origen(253 A D) ಮತ್ತು Jerome (420 A D) ರು ಅಪೊಕ್ರಿಫಗಳ ಬಗ್ಗೆ ತಿಳಿದವರಾಗಿದ್ದು ಇವುಗಳಗೆ ಮನ್ನಣೆ ಕೊಡಲಿಲ್ಲ"[೨] ಆದರೆ ಗ್ರೀಕ್ ಮತ್ತು ಪಾಶ್ಚಿಮಾತ್ಯ (Eastern) ಚರ್ಚ್‌ಗಳು ಪ್ರಾಮಾಣ್ಯ ಧರ್ಮೋಪದೇಶ (deuterc canonical) ಗಳೆಂದು ಪರಿಗಣಿಸಿದ್ದ ಅಪೊಕ್ರಿಫಗಳನ್ನು ಮತ್ತು ಕೆಲವೊಂದು ಸಂದರ್ಭಗಳಲ್ಲಿ ಮಿಥ್ಯಾಸಾಹಿತ್ಯ (Pseude Pigropha) ಗಳನ್ನು ಅಧಿಕೃತವಾದವುಗಳೆಂದು ಬಳಸತೊಡಗಿದವು.

---

* C.D.=Comman Era

೧. American Encyclopedia, Pp.614

೨. ಹಳೆ ಒಡಂಬಂಡಿಕೆ ಪ್ರವೇಶದಾಯನಿ, ಪಿ.ಎಸ್, ಥೋಬರ್ನ್, ಪು.೨೨

ಈ ಕುರಿತು ವಾಗ್ವಾದ ಉಂಟಾದಾಗ ಸರಿಯಾದ ನಿರ್ಣಯ ಪಡೆಯಲೋಸುಗ ಕ್ರಿ ಶ ೪೧೯ ರಲ್ಲಿ ಕಾರ್ತೇಜ ಎಂಬಲ್ಲಿ ಸೇರಿದ ಪರಿಷತ್ತು, ಅಪೋಕ್ರಿಫಗಳನ್ನು ದ್ವಿತೀಯ ದರ್ಜೆ ಪ್ರಾಮಾಣ್ಯ (Canonized) ಗಳೆಂದು ತಿಳಿಸಿತು.

ಇದಾದ ಮೇಲೆ ೧೬ ನೇ ಶತಮಾನದ ವರೆಗೆ ವಾದದ ವಿಷಯವಾಗಿ ಮುಂದುವರೆಯಲಿಲ್ಲ. ಮಾರ್ಟಿನ್ ಲೂಥರನ ಸಮಯದಲ್ಲಿ ಕಾರ್ತೇಜ ಪರಿಷತ್ತಿನ ತೀರ್ಮಾನವೇ ಸಾಗುತ್ತಿತ್ತು. ತದನಂತರದಲ್ಲಿ ಮತ್ತೆ ಸಮಸ್ಯೆಯಾಗಿ ಉದ್ಭವಿಸಿದ್ದರಿಂದ ಇದನ್ನು ಎದುರಿಸಲು, "ರೋಮನ್ ಕೆಥೊಲಿಕ್ ಚರ್ಚ, ಟ್ರೆಂಟ್ (Trent) ಎಂಬಲ್ಲಿ ೧೫೪೬ ರಲ್ಲಿ ಸಭೆ ಕೂಡಿಸಿತು. ಈ ಸಭೆಯಲ್ಲಿ ಕೆಥೊಲಿಕ್ ಚರ್ಚ ಮಾತ್ರ ಅಪೋಕ್ರಿಫಗಳು ಪ್ರಾಮಾಣ್ಯ ಗ್ರಂಥಗಳೆಂದು ಸಮರ್ಥಿಸಿಕೊಂಡಿತಾದರೂ ಉಳಿದ ಚರ್ಚಗಳು ಇದನ್ನು ಅನುಸರಿಸಲಿಲ್ಲ."[೧]

"೧೫೬೩ ರಲ್ಲಿ ಎಲಿಜಬೆತ್ ರಾಣಿಯ ಕಾಲದಲ್ಲಿ ಇಂಗ್ಲೆಂಡಿನ್ ಆಂಗ್ಲಿಕನ್ ಚರ್ಚ '೩೯ ಧರ್ಮ ಸೂತ್ರಗಳು' ಎಂದು ಪ್ರಕಟಿಸಿತು. ಆಗಲೂ ಅಪೊಕ್ರಿಫ ಪ್ರಾಮುಖ್ಯತೆಯನ್ನು ಪಡೆಯಲಿಲ್ಲ. ಇವು ಜೀವನದ ಮಾದರಿಗಾಗಿಯೂ ಸದಾಚಾರದ ಉಪದೇಶಕ್ಕಾಗಿಯು ಉಪಯುಕ್ತವಾದವುಗಳೆಂದು, ಇವುಗಳ ಆಧಾರದ ಮೇಲೆ ಯಾವ ಧರ್ಮ ಸಿದ್ಧಾಂತವನ್ನೂ ಕಟ್ಟಲಾಗದೆಂದೂ ಹೇಳಲಾಯಿತು."[೨]

ಇಂಗ್ಲಂಡದ ೧ನೇ ಚಾರ್ಲ್ಸನು (1647) ತನ್ನ ರಾಜ್ಯದಲ್ಲಿ ಧಾರ್ಮಿಕ ಏಕರೂಪತೆಯನ್ನು ತರಲು ೧೨೧ ಜನ ಫಾದರಗಳ, ೩೦ ಜನ ಲೇಮನ್‌ಗಳಿಂದ ಕೂಡಿದ ಒಂದು ಸಮಿತಿ ರಚಿಸಿ. 'ವೆಸ್ಟೆ ಮಿನಿಸ್ಟರ್ ಅರಿಕೆ' ಎಂದು ಸಿದ್ದಪಡಿಸಿದನು. ೧೬೪೭ ರಲ್ಲಿ ಸ್ಕಾಟಲೆಂಡಿನ ಜನರಲ್ ಅಸೆಂಬ್ಲಿ ಈ ಅರಿಕೆಯನ್ನು ಅಂಗೀಕಾರಮಾಡಿತು. ಹ.ಬ.(O.T) ಸಂಬಂಧಿಸಿದ ೬೬ ಪುಸ್ತಕಗಳು ಪ್ರಾಮಾಣ್ಯ (Canonise) ಗ್ರಂಥಗಳೆಂದು 'ವೆಸ್ಟ ಮಿನಿಸ್ಟರ್ ಅರಿಕೆ' ಸಿದ್ಧಪಡಿಸಿದ್ದುದನ್ನೇ, ಬ್ರಿಟನ್ ಮತ್ತು ಅಮೇರಿಕಾ ಚರ್ಚಗಳು ಸ್ವೀಕರಿಸಿ. ಅಪೊಕ್ರಿಫ ಬೈಬಲ್ಲಿನ ಪ್ರಾಮಾಣ್ಯಗ್ರಂಥ ಭಾಗವಲ್ಲವಾದುದರಿಂದ ಅವುಗಳಿಗೆ ದೇವರ ಸಭಯಲ್ಲಿ (ಚರ್ಚ) ಯಾವ ಅಧಿಕೃತ ಸ್ಥಾನಮಾನವೂ ಇರುವುದಿಲ್ಲವೆಂದು ತಿಳಿಸಿದವು.

ಈ ಬಗೆಯ ಪರಿಷತ್ತು ಮತ್ತು ಸಭೆಗಳು ಆಗಾಗ ಒಟ್ಟುಗೂಡಿ ಕೊಟ್ಟ ನಿರ್ಣಯ ಸ್ಪಷ್ಟವಾಗಿದ್ದರೂ ರೋಮನ್ ಕೆಥೊಲಿಕ್ ಚರ್ಚ ಅಪೊಕ್ರಿಫ ಗ್ರಂಥಗಳನ್ನು ಪ್ರಮಾಣೀಕರಿಸಿದ ಬರಹಗಳೆಂದು ಈಗಲೂ(1992-93) ಬೈಬಲ್ ಜೊತೆ ಸೇರಿಸಿ ಬೈಬಲ್ಲಿಗೆ ದೊರೆಯುವ ಮಹತ್ವ ಸ್ಥಾನದೊಂದಿಗೆ ಸ್ವೀಕರಿಸಿದೆ. ಈ ಬರಹಗಳು (ಪುಸ್ತಕ) Valgate Bible (Latin version) ನಲ್ಲಿ ಇವೆ ಎಂಬ ಒಂದೇ

---

೧. American Encyclopedia, Pp.614

೨. ಹಳೆ ಒಡಂಬಂಡಿಕೆ ಪ್ರವೇಶದಾಯನಿ, ಪಿ.ಎಸ್, ಥೋಬರ್ನ್ಸ, ಪು.೨೨

ಕಾರಣಕ್ಕೆ ಕೆಥೊಲಿಕರು ಸ್ವೀಕರಿಸಿರುವರೆನ್ನಲಾಗಿದೆ.[೧] (2 Ezra ಹೊರತು ಪಡಿಸಿ) ಆದರೆ ಪ್ರೊಟೆಸ್ಟಂಟರು ಕೊಡುವ ಕಾರಣಗಳೇ ಬೇರೆ, ಅವುಗಳು ಈ ಕೆಳಗಿನಂತಿವೆ.

೧. ಪ್ರಾಚೀನ ಬರಹಗಾರರು ಹಾಗೂ ಪಂಡಿತರುಗಳಾದ Jaremorigin, Philc ಮತ್ತು Josephus. ಇವರುಗಳು ಇವುಗಳನ್ನು ಪ್ರಾಮಾಣ್ಯ(Canonized) ವೆಂದು ಪರಿಗಣಿಸಲಿಲ್ಲ.

೨. Council of Trent (A D 1546) ಗಿಂತ ಪೂರ್ವದಲ್ಲಿ ಇವುಗಳು ಧರ್ಮಶಾಸ್ತ್ರಯುಕ್ತವಾದವುಗಳೆಂದು ಯಾವ ಪರಿಷತ್ತು ಅಂಗೀಕರಿಸಿ ಪ್ರಕಟಿಸಲಿಲ್ಲ.

೩. ಓದುಗರ ಅಭಿಪ್ರಾಯದಂತೆ ಅಪೊಕ್ರಿಫಗಳ ಬರವಣಿಗೆಗಳ ಮಟ್ಟ ಕೆಳದರ್ಜೆಯದಾಗಿದ್ದು ಐತಿಹಾಸಿಕ ಮತ್ತು ಭೌಗೋಳಿಕ ಮಾಹಿತಿಯನ್ನು ಸರಿಯಾಗಿ ಹೊಂದದೇ, ಕಾಲಗಣನಾದೋಷದಿಂದ ಕೂಡಿದ್ದು ಪ್ರವಾದನಾ ಶಕ್ತಿಯ ಉಸಿರು ಇವುಗಳಲಿಲ್ಲ.

೪. ಕ್ರಿ.ಶ ೧೬೪೩ರ Westminster of Confeession ಪ್ರಕಾರ ಹಳೆ ಒಡಂಬಡಿಕೆ ಭಾಗವಾಗಿರದೆ, ದೈವ ಪ್ರೇರಣೆಯಿಂದ ಒಳಗೊಳ್ಳದೆ ಇರುವ ಬರಹಗಳಾಗಿವೆ.

೫. ಈ ಬರಹಗಳು ಯೇಸುಕ್ರಿಸ್ತನ ಕಾಲದಲ್ಲಿಹಳೆ ಒಡಂಬಡಿಕೆಯ ಪುಸ್ತಕಗಳಾಗಿರಲಿಲ್ಲ ಮತ್ತು ಈಗಲೂ ಬಳಸುವ ಹಿಬ್ರೂ ಹಾಗೂ ಯಹೂದಿ ಬೈಬಲ್ಲನಲ್ಲಿಯ ಧರ್ಮಶಾಸ್ತ್ರ, ಪ್ರವಾದನ, ಇತರ ಬರಹಗಳಲ್ಲಿ ಕಂಡು ಬರುವದಿಲ್ಲ.

೬. ಈ ಅಪೊಕ್ರಿಫಗಳು ಯೇಸುವಿಗೆ ಹಾಗೂ ಆತನ ಶಿಷ್ಯರಿಗೆ ಪರಿಚಯವಿದ್ದರೆ ಅಥವಾ ಪ್ರಮುಖ ವೆನಿಸಿದ್ದರೆ, ಇವುಗಳನ್ನು ತಮ್ಮಬರಹಗಳಲ್ಲಿ ಉಲ್ಲೇಖಿಸುತ್ತಿದ್ದರು.

ಕೆಥೋಲಿಕ ಹೊಸ ಒಡಂಬಡಿಕೆ ಕನ್ನಡದಲ್ಲಿ ೧೯೮೪ ರಿಂದ ಅಸ್ತಿತ್ವಕ್ಕೆ ಬಂದಿತು. ೧೯೯೨ ೯೩ರಲ್ಲಿ ಸಮಗ್ರ ಬೈಬಲ್ ಮುದ್ರಣಗೊಂಡಿತು. ಈ ಬೈಬಲ್ ಪ್ರೊಟಸ್ಟಂಟರಂತೇ ೬೬ ಪುಸ್ತಕಗಳನ್ನು ಹೊಂದದೇ, ಅನುಗ್ರಂಥ (Apocrypha) ಗಳೆಂದು. ೧೨ ಪುಸ್ತಕಗಳು ಸೇರ್ಪಡೆಯಾಗಿವೆ. ಹೀಗಾಗಿ ಕೆಥೊಲಿಕ ಬೈಬಲ್ ಈಗ ಒಟ್ಟು ೭೮ ಪುಸ್ತಕಗಳನ್ನು ಒಳಗೊಂಡಿದೆ ಹೊಸದಾಗಿ ಸೇರ್ಪಡೆಯಾದ ೧೨ ಅನುಗ್ರಂಥಗಳ ಸಂಕ್ಷಿಪ್ತ ವಿವರ ಹೀಗಿದೆ.

೧. ತೋಬಿತನ ಗ್ರಂಥ

ತೋಬಿತನ ಗ್ರಂಥ ಮೂಲತ ಹಿಬ್ರೂ ಅಥವಾ ಅರಮಾಯಿಕ್ ಭಾಷಯಲ್ಲಿ ಬರೆಯಲಾದುದು ಈ ಗ್ರಂಥ ಯೆಹೂದ್ಯ ಧರ್ಮಕ್ಕೆ ಪ್ರಾಮಾಣಿಕರಾಗಿ ನೆಡೆದುಕೊಳ್ಳುವ ಜನರಿಗೆ ದೇವರು ಅದ್ಭುತಕರವಾಗಿ ನೆರವಾಗುತ್ತಾರೆ ಎಂಬುದನ್ನೂ ಜೊತೆಗೆ ಯಹೂದ್ಯ ಭಕ್ತಿ ಮತ್ತು ನೈತಿಕತೆಯನ್ನು ಬೋಧಿಸುತ್ತದೆ.

---

೧. Encyclopedia of Religion, Pp.174

ಹೊಸ ಒಡಂಬಡಿಕೆಯ ಪೂರ್ವಕಾಲದಲ್ಲಿ ರೂಢಿಯಲ್ಲಿದ್ದ ಯೆಹೂದ್ಯ ಧರ್ಮ ಸಂಸ್ಕೃತಿಯನ್ನು ಕಣ್ಣಿಗೆ ಕಟ್ಟುವಂತೆ ವಿವರಿಸುತ್ತದೆ. ಅಲ್ಲದೆ ದಾನ, ಧರ್ಮ ಹಾಗೂ ಶವಸಂಸ್ಕಾರದಂತಹ ಸತ್ಕಾರ್ಯಗಳು ಶ್ರೇಷ್ಠ ಪುಣ್ಯ ಕಾರ್ಯಗಳೆಂಬುದನ್ನು ಒತ್ತಿ ಹೇಳುತ್ತದೆ. ಈ ಗ್ರಂಥದ ಕಾಲ ಸುಮಾರು ಕ್ರಿ.ಪೂ ೨೦೦

೨. ಜೂಡಿತಳು

ಅಸ್ಸೀರಿಯದ ಹೋಲೋಫರ್ನೆಸ್ ಎಂಬ ದಂಡನಾಯಕನು ಇಸ್ರಾಯೇಲ್ ನಾಡಿನ ಮೇಲೆ ಮಾಡಿದ ಆಕ್ರಮಣದಿಂದಾಗಿ ಯೆಹೂದ್ಯರು ದೊಡ್ಡ ಗಂಡಾಂತರಕ್ಕೆ ಸಿಕ್ಕಿಕೊಳ್ಳುತ್ತಾರೆ. ಆ ಸಂದರ್ಭದಲ್ಲಿ ದೇವರು ಜೂಡಿತ್ ಎಂಬ ವೀರನಾರಿ ಮಣಿಯೊಬ್ಬಳನ್ನು ಆರಿಸಿ, ಆಕೆಯ ಮುಖಾಂತರ ಯಹೂದ್ಯರನ್ನು ರಕ್ಷಿಸುತ್ತಾರೆ. ಈಕೆಯು ಆಳವಾದ ಭಕ್ತಿ ವಿಶ್ವಾಸದಿಂದ ಕೂಡಿದ ಒಬ್ಬ ವಿಧವೆಯಾಗಿದ್ದಳು. ಹೋಶೆಯ ಧರ್ಮ ಶಾಸ್ತ್ರವನ್ನು ಕೂಲಂಕುಶವಾಗಿ ಆಚರಿಸುತ್ತಿದ್ದಳು.

ಹೊಲೊಫರ್ನೆಸನ ಸಂಹಾರದ ನಂತರ ಜೂಡಿತ್ ದೇವರಿಗೆ ಮಾಡಿದ ಕೃತಜ್ಞತಾಗೀತೆಯೊಂದಿಗೆ ಈ ಗ್ರಂಥ ಮುಕ್ತಾಯಗೊಳ್ಳುತ್ತದೆ. ಐತಿಹಾಸಿಕ ಹಾಗೂ ಭೌಗೋಳಿಕ ವಿವರಗಳಿಗೆ ಹೆಚ್ಚು ಗಮನ ಕೊಡದೆ ಧಾರ್ಮಿಕತೆಯನ್ನೇ ಗುರಿಯಾಗಿರಿಸಿಕೊಂಡು ರಚಿಸಿದ ಗ್ರಂಥ ಇದು. ಇದರ ಕಾಲ ಕ್ರಿ.ಪೂ ಸುಮಾರು ಎರಡನೇ ಶತಮಾನದ ಮಧ್ಯಭಾಗ

೩. ಎಸ್ತೇರಳು

"ಎಸ್ತೇರಳು" ಎಂಬ ಬೈಬಲ್ಲಿನ ಗ್ರಂಥವನ್ನು ಮೂಲದಲ್ಲಿ ಹಿಬ್ರೂ ಹಾಗೂ ಗ್ರೀಕ್ ಭಾಷೆಯಲ್ಲಿ ಬರೆದಿದೆ. ಎರಡು ಮೂಲಗಳನ್ನು ನೋಡಿದಾಗ ಕೆಲವು ವ್ಯತ್ಯಾಸಗಳು ಕಂಡು ಬರುತ್ತವೆ. ಹಿಬ್ರೂ ಮೂಲಕ್ಕಿಂತ ಗ್ರೀಕ್ ವಿಭಾಗದಲ್ಲಿ ವಿವಿಧ ಹೆಸರುಗಳಿರುವದನ್ನು ವಾಚಕರು ಗಮನಿಸಬಹುದು.

ಹಿಬ್ರೂ ಮೂಲದಲ್ಲಿ ಕಾಣದ ಗ್ರೀಕ್ ವಿಭಾಗದಲ್ಲಿ ಮಾತ್ರ ಕಾಣುವ ವಿಷಯಗಳನ್ನು ಕನ್ನಡ ಅಂಕ ೧ ರಿಂದ೬ ರವರೆಗೆ ಸ್ಪಷ್ಟವಾಗಿ ವಿಂಗಡಿಸಲಾಗಿದೆ. ಇದು ವಿಭಿನ್ನವಾದ ಮುನ್ನುಡಿ ಹಾಗೂ ಮುಕ್ತಾಯಗಳನ್ನು ಒಳಗೊಂಡಿದೆ ದಾಖಲೆಗಳ ಅಧಿಕೃತ ನಿರೂಪಣೆ, ಪ್ರಾರ್ಥನೆ ಮತ್ತು ಅದರ ಪ್ರತಿಫಲ ಮುಂತಾದ ಧಾರ್ಮಿಕ ವಿಷಯಗಳ ಪ್ರಸ್ತಾಪ, ಗ್ರೀಕ್ ವಿಭಾಗದಲ್ಲಿ ಕಂಡುಬರುವ ಪ್ರಮುಖ ಅಂಶಗಳಾಗಿವೆ. ಈ ಗ್ರಂಥ ರಚನೆಯ ಕಾಲ ಕ್ರಿ.ಪೂ ಎರಡನೇ ಶತಮಾನದ ಪೂರ್ವಾರ್ಧಭಾಗ.

೪. ಸುಜ್ಞಾನ ಗ್ರಂಥ (ಸೊಲೊಮೋನನ ಜ್ಞಾನಗ್ರಂಥ)

ಗ್ರೀಕ್ ದೇಶದ ಮುಖ್ಯ ಪಟ್ಟಣವಾದ ಅಲೆಂಕ್ಸಾಂಡ್ರಿಯದಲ್ಲಿ ವಾಸವಾಗಿದ್ದ ಒಬ್ಬ ಯೆಹೂದ್ಯನಿಂದ, ಗ್ರೀಕ್ ಭಾಷೆಯಲ್ಲಿ ಈ ಗ್ರಂಥವು ರಚಿತವಾಗಿದೆ. ಸೊಲೊಮೋನನ ಕುರಿತ ಕೆಲವು ಪ್ರಸ್ತಾಪಗಳು ಇದರಲ್ಲಿವೆ.(ಅಧ್ಯಾಯ 8:9 - 15; 9:7-8 12) ಆದರೂ ಕಾಲದೃಷ್ಟಿಯಿಂದಲೂ, ವಿಷಯ ದೃಷ್ಟಿಯಿಂದಲೂ

ಇದು ಸೊಲೊಮೋನನ ಕೃತಿಯಲ್ಲವೆಂಬುದು ಸ್ಪಷ್ಟ. ಕ್ರಿ.ಪೂ ಮೊದಲನೇ ಶತಮಾನದ ಉತ್ತರಾರ್ಧದಲ್ಲಿ ಬರೆಯಲಾದ ಈ ಪುಸ್ತಕವನ್ನು ಹಳೇ ಒಡಂಬಡಿಕೆಯ ಕಾಲದ ಕಟ್ಟಕಡೆಯ ಗ್ರಂಥ ಎನ್ನಬಹುದು.

ಯೆಹೂದ್ಯರ ಸಾಂಪ್ರದಾಯಿಕ ವಸ್ತು, ವಿಷಯಗಳನ್ನು ಬಣ್ಣಿಸುವಾಗ ಗ್ರೀಕ್ ತತ್ವಶಾಸ್ತ್ರದ ವಿಚಾರಗಳು ಇಲ್ಲಿ ಬಳಕೆಯಾಗಿರುವದನ್ನು ಗುರುತಿಸಬಹುದು. ಇಸ್ರಾಯೇಲ್ ನಾಡಿನ ಹೊರಗೆ ಜೀವನ ನೆಡೆಸುತ್ತಿದ್ದ ಯೇಹೂದ್ಯರನ್ನು ಪ್ರತ್ಯೇಕವಾಗಿ ಉದ್ದೇಶಿಸಿ ಇದನ್ನು ರಚಿಸಲಾಗಿದೆ. ತನಗೆ ಪ್ರಾಮಾಣಿಕರಾಗಿರುವವರಿಗೆ ದೇವರು ತಕ್ಕ ಸಂಭಾವನೆ ನೀಡುತ್ತಾರೆಂಬ ಪಾಠವನ್ನು ಕಲಿಸುವದೇ ಈ ಕೃತಿಯ ಧ್ಯೇಯ. ಈ ಗ್ರಂಥದಲ್ಲಿ ವಿವರಿಸಲಾಗಿರುವ ಸುಜ್ಞಾನದ ಗುಣ ಲಕ್ಷಣಗಳನ್ನು ಪರಮತ್ರಿತ್ವದ ಪವಿತ್ರಾತ್ಮರಿಗೆ ಅನ್ವಯವಾಗುವದನ್ನು ಗಮನಿಸಬಹುದು.

೫. ಸಿರಾಖನು(ಸಿರಾಖನ ಮಗನಾದ ಯೆಷೂವನಜ್ಞಾನಾಮೃತ)

"ಸಿರಾಖನ ಮಗ ಯೆಷೂವನ ಜ್ಞಾನಮೃತ" ಪ್ರಪ್ರಥಮವಾಗಿ ಹಿಬ್ರೂ ಭಾಷೆಯಲ್ಲಿ ಬರೆಯಲಾಯಿತು. ಕಾಲ ಕ್ರಮೇಣ ಯೆಷೂವನ ಮೊಮ್ಮಗನು ಇದನ್ನು ಗ್ರೀಕ್‌ಭಾಷೆಗೆ ಭಾಷಾಂತರಿಸಿದನು. ಈ ಗ್ರಂಥವನ್ನು "ECCLESIASTES" ಎಂದು ಕೆಲವರು ಕರೆಯುವದುಂಟು.

ಯೆಹೂದ್ಯ ಜ್ಞಾನೋಕ್ತಿಗಳನ್ನೊಳಗೊಂಡ ಈ ಗ್ರಂಥ, ಯೆಹೂದ್ಯ ಧರ್ಮವನ್ನು ಯಶಸ್ವಿಯಾಗಿ ಸಮರ್ಥಿಸುತ್ತದೆ. ದೇವರು ತಮ್ಮ ಜನರಿಗೆ ನಿಜವಾದ ಸುಜ್ಞಾನವನ್ನು ದಯಪಾಲಿಸಿದ್ದಾರೆಂಬದನ್ನು ಸ್ಪಷ್ಟಪಡಿಸಿತ್ತದೆ. ಧರ್ಮ, ನೀತಿ, ನಿತ್ಯದ ಬದುಕು ಇವಕ್ಕೆ ಸಂಬಂಧ ಪಟ್ಟ ವಿಷಯಗಳನ್ನು ಸುದೀರ್ಘವಾಗಿಯೂ ಸಂಕ್ಷಿಪ್ತವಾಗಿಯೂ ಜ್ಞಾನೋಕ್ತಿಗಳ ರೂಪದಲ್ಲಿ ಕೊಡಲಾಗಿದೆ.

ದೇವರು ಎಂಬ ಪದಗಳಿಗೆ ಗೌರವಾರ್ಥವಾಗಿ "ಸರ್ವೇಶ್ವರ" ಎಂಬ ಬಹುವಚನವನ್ನು ಗದ್ಯಭಾಗದಲ್ಲಿ ಬಳಸಲಾಗಿದೆ. ಪದ್ಯಭಾಗಗಳಲ್ಲಿ ಏಕ ವಚನವನ್ನು ಉಪಯೋಗಿಸಲಾಗಿದೆಯಾದರೂ ಗಾದೆಗಳಲ್ಲೂ, ವಚನಗಳಲ್ಲೂ, ಸಂದರ್ಭಕ್ಕನುಸಾರ ಏಕವಚನ ಹಾಗೂ ಬಹುವಚನಗಳೆರಡನ್ನೂ ಪ್ರಯೋಗಿಸಲಾಗಿದೆ.

೬. ಬಾರೂಕನು

ವಿಭಿನ್ನವಾದ ಪುಟ್ಟ ಪ್ರವಚನಗಳ ಸಂಗ್ರಹವಾಗಿರುವ ಈ ಗ್ರಂಥವನ್ನು ರಚಿಸಿದವನು ಯರೆಮಾಯ ಪ್ರವಾದಿಯ ಕಾರ್ಯದರ್ಶಿ ಬಾರೂಕನು ಎಂದು ಊಹಿಸಲಾಗಿದೆ. (ಯೆರೆಮಾಯ 32:12.,36:4) ಮೊದಲು ಹಲವಾರು ಸಮಯ ಸಂದರ್ಭಗಳಲ್ಲಿ ಹಿಬ್ರೂ ಭಾಷೆಯಲ್ಲಿ ಬರೆದಿದ್ದ ಈ ಪ್ರವಚನಗಳನ್ನು ಕಾಲ ಕ್ರಮೇಣ ಒಂದೇ ಗ್ರಂಥದಲ್ಲಿ ಸೇರಿರಲಾಗಿದೆ.

ಇಸ್ರಾಯೇಲ್ಯರು ದೇವರ ಆಜ್ಞೆಗಳನ್ನು ಮಿರಿದ್ದರಿಂದಲೇ ಅವರು ಬಾಬೆಲ್ಲಿಗೆ ಗಡಿಪಾರಾಗುವದಕ್ಕೆ ಕಾರಣ, ಅವರು ತಮ್ಮ ಪಾಪಗಳಿಗೆ ಪಶ್ಚಾತ್ತಾಪ ಪಟ್ಟು, ದೇವರಾಭಿಮುಖರಾಗಬೇಕು, ಸುಜ್ಞಾನದ ಬುಗ್ಗೆಯಾಗಿರುವ ಧರ್ಮಶಾಸ್ತ್ರವನ್ನು ಪ್ರಾಮಾಣಿಕವಾಗಿ ಅನುಸರಿಸಬೇಕು. ಶೀಘ್ರದಲ್ಲಿ ದೇವರು ಅವರ ಸೆರೆವಾಸವನ್ನು ಕೊನೆಗಾಣಿಸಿ ರಕ್ಷಣೆಯನ್ನು ದಯಪಾಲಿಸುವರು ಎಂಬದೇ ಈ ಗ್ರಂಥದ ಸಂದೇಶ.

೭. ಪ್ರವಾದಿ ಯೆರೆಮಾಯನ ಪತ್ರ

ಬೈಬಲ್ಲಿನ ಈ ಒಂದು ಭಾಗ ಪುಟ್ಟಪತ್ರದ ರೂಪದಲ್ಲಿದೆ. ಬಾಬಿಲೋನಿಗೆ ಸೆರೆಹೋಗಲಿದ್ದ ಯೆಹೂದ್ಯ ಜನರಿಗೆ ಪ್ರವಾದಿ ಯೆರೆಮಾಯನು ಇದನ್ನು ಬರೆದನೆಂದು ಹೇಳಲಾಗಿದೆ. ಇದರಲ್ಲಿ ಪ್ರವಾದಿಯು ವಿಗ್ರಹ ಆರಾಧನೆಯನ್ನು ಖಂಡಿಸಿ ದೇವರು ತನಗೆ ಆಜ್ಞಾಪೂರ್ವಕವಾಗಿ ಹೇಳಿದ ವಿಷಯಗಳನ್ನು ಆ ಜನರೊಂದಿಗೆ ಹಂಚಿಕೊಂಡಿದ್ದಾನೆ.

೮. ಅಜರ್ಯನ ಗೀತೆ ಹಾಗೂ ಮೂವರು ಯುವಕರ ಕೀರ್ತನೆ

ಗ್ರೀಕ್ ಮೂಲದಲ್ಲಿರುವ ಪ್ರವಾದಿ ದಾನಿಯೇಲನ ಗ್ರಂಥಕ್ಕೆ ಸೇರ್ಪಡೆಯಾದ ಮೂರು ಮುಖ್ಯ ಭಾಗಗಳಲ್ಲಿ, ಅಜರ್ಯನ ಗೀತೆ ಹಾಗೂ ಮೂವರು ಯುವಕರ ಕೀರ್ತನೆ ಎಂಬುದು ಒಂದು ಭಾಗ. (ದಾನಿಯೇಲ 3 :24-89) ಅರಸನಾದ ನೆಬೂಕದ್ನೆಚ್ಚರನ ಆಜ್ಞೆಯ ಮೇರೆಗೆ ಅಜರ್ಯ ಮತ್ತು ಅವನ ಸಂಗಡಿಗರನ್ನು ಧಗಧಗನೆ ಉರಿಯುವ ಆವಿಗೆಯಲ್ಲಿ ಹಾಕಿದಾಗ ಅವರು ಸುಟ್ಟು ಹೋಗದೆ, ಸರ್ವೇಶ್ವರನ ಗುಣಗಾನ ಮಾಡುತ್ತಾ ಬೆಂಕಿಯ ನಡುವೆ ತಿರುಗಾಡುತ್ತಿದ್ದರು.ಆಗ ಅವರು ಮಾಡಿದ ದೈವ ಸ್ತುತಿಯನ್ನೇ ಈ ಗ್ರಂಥದ ರೂಪದಲ್ಲಿ ಕೊಡಲಾಗಿದೆ.

೯. ಸುಪ್ರಸನ್ನಳ ಗ್ರಂಥ

ಹಿಬ್ರೂ ಮೂಲದಿಂದ ಗ್ರೀಕ್ ಭಾಷಾಂತರಿಸಿದಾಗ ಪ್ರವಾದಿ ದಾನಿಯೇಲನ ಗ್ರಂಥಕ್ಕೆ ಸೇರ್ಪಡೆಯಾದ ಭಾಗಗಳಲ್ಲಿ ಸುಸನ್ನಳ ಕಥಯೂ ಒಂದು. ಸದ್ಗುಣ ಶೀಲ ಯೆಹೂದ್ಯ ಮಹಿಳೆಯಾಗಿದ್ದ ಸುಸನ್ನಳ ಮೇಲೆ ಮೋಹಮತ್ತರಾದ ನ್ಯಾಯಾಧೀಶರು ವ್ಯಭಿಚಾರವೆಂಬ ಸುಳ್ಳು ಅಪರಾಧವನ್ನು ಹೊರಿಸಿದಾಗ, ಧೀರ ಹಾಗೂ ಜ್ಞಾನಿಯಾದ ದಾನಿಯೇಲನು ಹೇಗೆ ಆಕೆಯನ್ನು ಬಿಡುಗಡೆಮಾಡಿದನೆಂದು ಈ ಕಥೆಯು ವಿವರಿಸುತ್ತದೆ.

೧೦. ಬೇಲ್‌ದೇವತೆ ಮತ್ತು ಘಟಸರ್ಪ

ಪ್ರವಾದಿ ದಾನಿಯೇಲನ ಗ್ರಂಥದ ಗ್ರೀಕ್ ಅನುವಾದಕ್ಕೆ 'ಬೇಲ್‌ದೇವತೆ ಮತ್ತು ಘಟಸರ್ಪ' ಎಂಬ ಭಾಗವನ್ನೂ ಸೇರಿಸಲಾಗಿದೆ. ಇದರಲ್ಲಿ ಎರಡು ಕಥಗಳವೆ. ಒಂದು ಬೇಲ್‌ದೇವತೆಯು ಅಸತ್ಯ

ಹಾಗೂ ಅಬದ್ಧವಾದುದೆಂದು ನಿರೂಪಿಸಿದ ಪ್ರವಾದಿ ದಾನಿಯೇಲನ ಧೈರ್ಯವನ್ನು ಕುರಿತಾಗಿದ್ದರೆ, ಇನ್ನೊಂದು ಬಾಬಿಲೋನಿನವರು ಪೂಜಿಸುತ್ತಿದ್ದ ಘಟಸರ್ಪವನ್ನು ದಾನಿಯೇಲನು ಹೇಗೆಕೊಂದು ಹಾಕಿದನೆಂದು ವಿವರಿಸುತ್ತದೆ.

೧೧. ಮಕ್ಕಬಿಯರ ಮೊದಲನೆಯ ಗ್ರಂಥ

ಕ್ರಿ.ಪೂ ೧೭೫ ರಿಂದ ಕ್ರಿ.ಪೂ ೧೩೪ ರವರೆಗೆ, ಅಂದರೆ ಅರಸನಾದ ಅಂತಿಯೋಕ ಎಫಿಫನೆಸನ ಕಾಲದಿಂದ, ಅರಸನಾದ ಯೊವಾನ್ನ ಹಿರ್ಕಾಕನ ಕಾಲದವರೆಗಿನ ಯೆಹೂದ್ಯ ಇತಿಹಾಸದ ಘಟನೆಗಳನ್ನು ಮಕ್ಕಬಿಯರ ಮೊದಲ ಗ್ರಂಥ ವಿವರಿಸುತ್ತದೆ.

ಐತಿಹಾಸಿಕ ದೃಷ್ಟಿಯಿಂದ ಈ ಗ್ರಂಥ ಹಸ್ಮೊಸೀಯರ ಅಥವಾ ಮಕ್ಕಾಬಿಯರ ಕುಟುಂಬಕ್ಕೆ ಪ್ರಾಮುಖ್ಯತೆ ನೀಡುತ್ತದೆ. ಇಸ್ರಾಯೇಲ ರಾಷ್ಟ್ರವನ್ನು ರಕ್ಷಿಸುವದಕ್ಕಾಗಿ ದೇವರು ಮಕ್ಕಬಿಯರ ಕುಟುಂಬ ವನ್ನು ಆರಿಸಿಕೊಂಡರು ಎಂಬ ಅಭಿಪ್ರಾಯವನ್ನು ದೃಢೀಕರಿಸುತ್ತದೆ. ದೇವರು ಚರಿತ್ರೆಯಲ್ಲಿ ಕಾರ್ಯೋನ್ಮುಖ ರಾಗಿದ್ದು, ತಮಗೆ ಪ್ರಾಮಾಣಿಕರಾಗಿ ಬಾಳುವವರಿಗೆ ಜಯವನ್ನು ಸಂಭಾವನೆಯಾಗಿ ದಯಪಾಲಿಸುತ್ತಾರೆ. ಎಂಬುದು ಈ ಗ್ರಂಥದ ವಿಶಿಷ್ಟವಾದ ಧಾರ್ಮಿಕ ವಿಷಯ.

೧೨. ಮಕ್ಕಬಿಯರ ಎರಡನೆಯ ಗ್ರಂಥ

ಸಿರೇನಿನ ಜಾಸೋನ್ ಎಂಬವನು ರಚಿಸಿದ ಐದು ಸಂಪುಟಗಳನ್ನು ಚರಿತ್ರೆಯ ಸಾರಾಂಶವೇ ಮಕ್ಕಬಿಯರ ಎರಡನೇ ಗ್ರಂಥ. ೩ನೇ ಪ್ರಧಾನ ಯಾಜಕ ಜಾನೀಯನ ಕಾಲದಿಂದ ನಿರನೋರನ ಮರಣದವರೆಗೆ ಕ್ರಿ ಪೂ ೧೮೦ರಿಂದ ಕ್ರಿ.ಪೂ.೧೬೧ ರವರೆಗೆ ಯಹೋದ್ಯರ ಚರಿತ್ರೆಯಲ್ಲಿನ ಮುಖ್ಯ ಘಟನೆಗಳನ್ನು ಈ ಗ್ರಂಥ ವರದಿ ಮಾಡುತ್ತದೆ. ಮಕ್ಕಬಿಯರ ಒಂದನೇ ಗ್ರಂಥದಲ್ಲಿರುವ ಸಮನಾಂತರ ಘಟನೆಗಳನ್ನು ಸಹ ಸ್ವಲ್ಪಮಟ್ಟಿಗೆ ಇದರಲ್ಲಿ ಕಾಣಬಹುದು. ಇದನ್ನು ಆ ಒಂದನೇ ಗ್ರಂಥದ ಮುಂದುವರಿದ ಭಾಗವೆಂದು ಕರೆಯಲಾಗುವದು.

ಧರ್ಮಶಾಸ್ತ್ರಕ್ಕೆ ಪ್ರಾಮಾಣಿಕತೆ ಹಾಗೂ ಧರ್ಮಕ್ಕಾಗಿ ಪ್ರಾಣತ್ಯಾಗ ಮಾಡಿದವರಿಗೆ ದೇವರು ನೀಡುವ ಸಂಭಾವನೆ ಇವು ಈ ಗ್ರಂಥದ ಮುಖ್ಯಾಂಶಗಳು.

ಬೈಬಲ್ ಮಹತ್ವ

ಹಿಂದೂಗಳಿಗೆ ಭಗವದ್ಗೀತೆ, ಇಸ್ಲಾಂ ಬಾಂಧವರಿಗೆ ಕುರ ಆನ್‌ನಂತೆ ಕ್ರೈಸ್ತರಿಗೆ ಬೈಬಲ್ ಪೂಜ್ಯ ಹಾಗೂ ಪವಿತ್ರ ಕೃತಿಯಾಗಿದೆ. ಜಾಗತಿಕ ಸಾಹಿತ್ಯ ಕ್ಷೇತ್ರದಲ್ಲಿ ಮಹಾ ಕೃತಿ, ಶ್ರೇಷ್ಟ ಕೃತಿ ಎಂದು ಹೆಸರುಗಳಿಸಿದೆ.

ಮನುಕುಲದ ಎಲ್ಲ ಲಿಖಿತ ಭಾಷೆಗಳಲ್ಲಿ ಮತ್ತು ಕೆಲವೊಂದು ಅಲಿಖಿತ ಭಾಷೆಗಳಲ್ಲಿ*[೧] ಭಾಷಾಂತರಿಸಿದ ಏಕೈಕ ಗ್ರಂಥ. ಇದು ಕಾಲಕಾಲಕ್ಕೆ ರಚಿಸಲ್ಪಟ್ಟ ಆಯಾ ಜನಾಂಗದ ಮಾರ್ಗದರ್ಶಿಯಾಗಿ, ಅವಶ್ಯಕ ಕೃತಿಯಾಗಿ, ಅನೇಕ ಜನರಿಂದ ರಚಿತಗೊಂಡಿದ್ದರೂ ಆದಿಯಿಂದ ಅಂತ್ಯದ ವರೆಗೆ ವಿಷಯ ಸಂಬಂಧವನ್ನು ಇಟ್ಟುಕೊಂಡು ಬಂದಿರುವ ಒಂದು ಅಪರೂಪದ ಶ್ರೇಷ್ಠ ಗ್ರಂಥವೆನ್ನಬಹುದು.

"ಬೈಬಲ್ ೬೬ ಪುಸ್ತಕಗಳ ಗ್ರಂಥ ಬಂಢಾರವಾಗಿದೆ. ಇದರಲ್ಲಿ ೧೧೮೯ ಅದ್ಯಾಯಗಳು, ೩೧ ೧೭೩ ವಚನಗಳು, ೭,೭೩,೬೯೨ ಶಬ್ದಗಳು (ಕಿಂಗ್ ಜೇಮ್ಸ್ ಆವೃತಿ) ಇವೆ."[೧] ಮೊದಲ ಭಾಗದಲ್ಲಿ ೩೯ ಪುಸ್ತಕಗಳು ಎರಡನೆ ಭಾಗದಲ್ಲಿ ೨೭ ಪುಸ್ತಕಗಳಿದ್ದು, ಇವೆರಡು ಭಾಗಗಳನ್ನು ಬರೆಯಲು ೧೬೦೦ ವರ್ಷ, ಸುಮಾರು ೪೦ ಜನ ಲೇಖಕರು ಈ ಧರ್ಮಗ್ರಂಥವನ್ನು ಬರೆದಿದ್ದಾರೆ. ಮೊದಲ ಭಾಗದಲ್ಲಿ ದಾನಿಯೇಲ ಹಾಗೂ ಎಜ್ರ ಪುಸ್ತಕಗಳಲ್ಲಿಯ ಕೆಲವು ಭಾಗ ಅರೆಮಾಯ ಭಾಷೆಯಲ್ಲಿ ಇದ್ದರೆ, ಉಳಿದ ಭಾಗ ಸಂಪೂರ್ಣ ಹಿಬ್ರೂ ಭಾಷೆಯಲ್ಲಿ ಬರೆಯಲಾಗಿದೆ. ನಂತರದ ಭಾಗ (ಹೊಸ ಒಡಂಬಡಿಕೆ) ಸಂಪೂರ್ಣ ಗ್ರೀಕ್ ಭಾಷೆಯಲ್ಲಿ ಬರೆಯಲಾಗಿದೆ. ಹೀಗಾಗಿ ಒಟ್ಟು ಮೂರು ಭಾಷೆಯಲ್ಲಿ ಬರೆಯಲಾಗಿದೆ.

ಬೈಬಲ್ ಮೊದಲ ಬರವಣಿಗೆ ಪ್ರವಾದಿಯಾದ ಮೋಶೇಯ (Moses) ಕಾಲದಿಂದ ಪ್ರಾರಂಭವಾಗುತ್ತದೆ. ಅಂದರೆ ಕಾಲ ಸುಮಾರು ಕ್ರಿ.ಪೂ ೧೬೮೮, ಇದನ್ನು ಬರೆಯಲು ಪ್ರಾರಂಭಿಸಿದವನು ದೇವರು ಎಂಬುದಕ್ಕೆ ಬೈಬಲ್ ಕೊಡುವ ಆಧಾರ ಹೀಗಿದೆ.

<u>ವಿಮೋಚನ ಕಾಂಡ</u> (Exodus) 34:1 ರಲ್ಲಿ "ನೀನು ಮೊದಲಿನ ಕಲ್ಪನೆ ಹಲಗೆಗಳಂತೆ ಇನ್ನೂ ಎರಡು ಕಲ್ಲಿನ ಹಲಗೆಗಳನ್ನು ಸಿದ್ಧ ಪಡಿಸಿಕೋ ನೀನು ಒಡೆದು ಬಿಟ್ಟ*[೨] ಮೊದಲನೆಯ ಹಲಗೆಗಳ ಮೇಲಿದ್ದ ವಾಕ್ಯಗಳನ್ನು ನಾನು ಈ ಹಲಗೆಗಳ ಮೇಲೆ ಬರೆಯುವೆನು ಎಂದು ಹೇಳಿ ಬರೆದುಕೊಟ್ಟನು"

<u>ಧರ್ಮೋಪದೇಶ ಕಾಂಡ</u> (Denteronomy) ಮೋಶೆ "ಇಸ್ರಾಯೇಲರಿಗೆ-" ಇಸ್ರಾಯೇಲರೆ ಕೇಳಿರಿ ನಿಮ್ಮ ದೇವರಾದ ಯಹೋವನು ಕೊಟ್ಟ ಆಜ್ಞೆಗಳನ್ನೇ ನಾನು ನಿಮಗೆ ತಿಳಿಸುತ್ತಾ ಇದ್ದೇನೆ. ಈ ಮಾತುಗಳನ್ನು ನೀವು ಕೈಕೊಳ್ಳ ಬೇಕೆ ಹೊರತು ಅವುಗಳಿಗೆ ಏನೂ ಕೂಡಿಸಬಾರದು, ಅವುಗಳಿಂದ ಏನೂ ತೆಗೆಯ ಬಾರದು".

ಬೈಬಲ್ ಗ್ರಂಥವನ್ನು ಸುಮಾರು ೪೦ ಜನ ಬರೆದಿರುವರು. ಈ ಲೇಖಕರಲ್ಲಿ ಕೆಲವೊಂದು ಜನರ ಅಭಿಪ್ರಾಯನ್ನು, ಅವರು ಬರೆಯಲು ಪಡೆದ ಸ್ಪೂರ್ತಿಯನ್ನು ಈ ಕೆಳಗಿನಂತೆ ನೋಡಬಹುದು.

---

೧. ಸತ್ಯವೇದಾಧ್ಯಯನ ಕೈಪಿಡಿ, ೧೯೮೨, ಪು.೨

*೧. ಉದಾ. ಲಂಬಾಣಿ ಬೈಬಲ್ ಹಿಂದಿಯಲ್ಲಿದೆ.

*೨. ಈ ಮೊದಲು ದೇವರು ಮೊಶೆಗೆ ಬರೆದು ಕೊಟ್ಟಿದ್ದ ಹಲಗೆಯನ್ನು(ಬಸವನ ಪೂಜೆ ಮಾಡುವ ಜನರನ್ನು) ಕಂಡು ಒಡೆದು ಬೀಸಾಕಿದ್ದನು.

2 ಸಮುವೇಲ ಪ್ರವಾದಿ ಪ್ರಕಾರ - 2 ಸಮು 23:2 ರಲ್ಲಿ "ಯೆಹೋವನ(ದೇವರ) ಆತ್ಮವು ನನ್ನಲ್ಲಿ ಉಸಿರಿತು ಆತನ ವಾಕ್ಯವು ನನ್ನ ಬಾಯಲ್ಲಿತ್ತು."

ಪೇತ್ರನ ಪ್ರಕಾರ (Peter) 2 ಪೇತ್ರ 1:20 ರಲ್ಲಿ "ಯಾವ ಪ್ರವಾದನೆಯೂ ಎಂದೂ ಮನುಷ್ಯರ ಚಿತ್ತದಿಂದ ಉಂಟಾಗಲಿಲ್ಲ. ಮನುಷ್ಯರು ಪವಿತ್ರಾತ್ಮ (ದೇವರ ಆತ್ಮ) ಪ್ರೇರಿತರಾಗಿ ದೇವರಿಂದ ಹೊಂದಿದ್ದನ್ನೇ ಮಾತನಾಡಿದರು"

ಜ್ಞಾನೋಕ್ತಿ (Proverbs) 1:23 "ಇಗೋ ನಿಮ್ಮ ಮೇಲೆ ನನ್ನ (ದೇವರ) ಆತ್ಮವನ್ನು ಸುರಿಸಿ ನನ್ನ ಮಾತುಗಳನ್ನು ನಿಮಗೆ ತಿಳಿಯ ಪಡಿಸುವೆನು."

ಬೈಬಲ್, ಜಗತ್ತಿನ ಲಿಖಿತ ಭಾಷೆ ಹಾಗೂ ಲಿಖಿತವಲ್ಲದ ಭಾಷೆಗಳಲ್ಲಿಯೂ ಭಾಷಾಂತರವಾಗಿದೆ. (ಒಟ್ಟು ಸು.1800 ಭಾಷೆ) ಹೀಗಿರುವಾಗ ಆಯಾ ಭಾಷೆಯ ಸಾಹಿತ್ಯ ಕೃತಿಯಾಗಿ ಅದು ರೂಪುಗೊಂಡಿಲ್ಲ. ಬೈಬಲ್ ಮೂಲ ಭಾಷೆ ಗ್ರೀಕ್ ಕೂಡ, ಗ್ರಾಂಥಿಕ ಗ್ರೀಕ ಭಾಷೆಯಾಗಿರದೇ, ಸಾಮಾನ್ಯ ಜನರು ಬಳಸುವ ಭಾಷೆ (Koine Greek) ಯಲ್ಲಿ ಬರೆಯಲಾಗಿದೆ. ಬೈಬಲ್ ಭಾಷಾಂತರ ಒಂದು ಭಾಷೆಯನ್ನು ಆಯ್ದು ನಡೆಯುತ್ತಿದೆ ವಿನ, ತನ್ನ ಮೂಲದ ಸ್ವರೂಪ, ಶೈಲಿ, ವಸ್ತುಸ್ಥಿತಿಯನ್ನು ಸಾದ್ಯವಾದಷ್ಟು ಮಟ್ಟಿಗೆ ಅದು ತನ್ನ ತನವನ್ನು ಉಳಿಸಿಕೊಂಡು ಬಂದಿದೆ. ಉದಾ ಕನ್ನಡ ಬೈಬಲ್, ಕನ್ನಡ ಸಾಹಿತ್ಯದಲ್ಲಿ ಸಾಹಿತ್ಯಿಕ ದೃಷ್ಟಿಯಿಂದ ಮೌಲ್ಯವನ್ನು ಪಡೆಯುವಲ್ಲಿ ಯಶಸ್ವಿಯಾಗಿಲ್ಲ. ಅನೇಕ ಪಂಡಿತರು ಸಾಹಿತಿಗಳು, ಕವಿಗಳು, ಲೇಖಕರು ಬೈಬಲ್ ಭಾಷೆ ಬದಲಿಸಬೇಕೆಂಬ ವಿಚಾರ ವ್ಯಕ್ತ ಪಡಿಸುತ್ತಲೇ ಬಂದಿದ್ದಾರೆ. ಆದರೆ ಕ್ರೈಸ್ತ ಬಾಂಧವರು ಇತ್ತಕಡೆ ಲಕ್ಷ ಹರಿಸಿದಂತೆ ಕಂಡು ಬರುವುದಿಲ್ಲ. ಸತ್ಯವೇದದ ಉದ್ದೇಶವು ಅದರ ಸಾಹಿತ್ಯ ಶೈಲಿಯಲ್ಲಿ ಅದನ್ನು ಕಂಡು ಕೊಳ್ಳಬೇಕೆಂಬ ನಿಲವು ತೋರಿ ಬರುತ್ತದೆ. ದೇವರು ಬೈಬಲನ್ನು ಒಂದು ಮಹಾ ಸಾಹಿತ್ಯ ಕೃತಿಯಾಗಿ ರೂಪಿಸಿಲ್ಲ ಎಂಬ ಭಾವನೆ.

ಈಗಿನ ದಿನಗಳಲ್ಲಿ ಬೈಬಲ್ ಇದ್ದ ಸ್ಥಿತಿಯಲ್ಲಿಯೇ ಆಯಾ ಭಾಷೆಯಲ್ಲಿ ಇದ್ದು ಮಿಲಿಯಾಂತರ ಜನರ ಮೇಲೆ ತನ್ನ ಪ್ರಭಾವ ಬೀರಿದೆ. ಜಗತ್ತಿನಲ್ಲಿಯೇ ಅತೀ ಹೆಚ್ಚು ಮಾರಾಟವಾದ ಗ್ರಂಥ (Best Seller) ಎಂದು ಪರಿಗಣಿಸಲ್ಪಟ್ಟಿದೆ.

ಬೈಬಲ್, ದೇವರು ತನ್ನ ಬಗೆಗೂ ಮಾನವರಿಗಾಗಿರುವ ತನ್ನ ದೈವೀಯ ಉದ್ದೇಶದ ಬಗೆಗೂ ಮಾಡಿರುವ ಪ್ರಕಟಣೆಯನ್ನು ಪವಿತ್ರಾತ್ಮನ ಶಕ್ತಿಯಿಂದ ಪ್ರೇರೇಪಿಸಲ್ಪಟ್ಟಿದೆ. ದೇವ ಜನರು ಸ್ವೀಕರಿಸಿ ಮಾಡಿದ ದಾಖಲೆಯಾಗಿದೆ. ಹೀಗಿರುವದರಿಂದ ಅದು ದೇವರ ಕುರಿತಾದ ತಿಳುವಳಿಕೆಯ ಮೂಲ ಪುಸ್ತಕವಾಗಿದೆ ಹಾಗೂ ದೈವೀಯ ಪಠ್ಯ ಪುಸ್ತಕವಾಗಿದೆ. ಮತ್ತು ನಿತ್ಯ ಜೀವಕ್ಕೆ ಮಾರ್ಗದರ್ಶಿ ಗ್ರಂಥವಾಗಿದೆ ಎನ್ನಬಹುದು.

"ದೇವರ ವಿಷಯದಲ್ಲಿ ಹಾಗೂ ಆತನು (ದೇವರು) ಮಾನವರೆಲ್ಲರ ಹಿತಕ್ಕಾಗಿ ಮಾಡಿದ ಯೋಜನೆಗಳ ಕುರಿತಾಗಿ ಮತ್ತು ದೇವರ ಮನಸ್ಸು, ಮಾನವನ ಸ್ಥಿತಿ, ರಕ್ಷಣಾ ಮಾರ್ಗ, ಪಾಪಿಗಳಿಗುಂಟಾಗುವ ನಿತ್ಯನಾಶನ ಹಾಗೂ ವಿಶ್ವಾಸಿಗಳಿಗೆ ದೊರೆಯುವ ಸಮಾಧಾನ ಸಂತೋಷಗಳನ್ನು ಸಾರಿ ತಿಳಿಸುತ್ತದೆ. ಬೈಬಲ್ ಸಿದ್ಧಾಂತಗಳು ಪವಿತ್ರವಾದವುಗಳಾಗಿದ್ದು ದೇವರ ಚಿತ್ತಾನುಸಾರ ಬಂಧನಕಾರಿಯಾಗಿವೆ.... ಸತ್ಯವೇದವು (ಬೈಬಲ್) ನಮಗೆ ಯೋಗ್ಯ ಬೆಳಕನ್ನು ದಯಪಾಲಿಸಿ ಆತ್ಮೀಕ ಆಹಾರವನ್ನು ಒದಗಿಸುತ್ತದೆ. ಅಲ್ಲದೇ ನಂಬುವವರೆಲ್ಲರನ್ನು ಸಂತೈಸಿ ಪರಲೋಕದ ಚೈತನ್ಯವನ್ನು ಕೊಡುವುದು.

ಇದು ಪ್ರಯಾಣಿಕರ ಮಾರ್ಗದರ್ಶಕ ಪುಸ್ತಕ ಹಾಗೂ ಯಾತ್ರಿಗಳ ಊರಿಗೋಲಿನಂತೆಯೂ, ಸೈನಿಕನ ಖಡ್ಗದೋಪಾದಿಯೂ ಹಾಗೂ ಹಡಗಿನ ಚುಕ್ಕಾಣಿಯಂತಿದ್ದು, ಮಾನವನು ಕಳೆದುಕೊಂಡ ಪರಲೋಕದ ಭಾಗ್ಯವನ್ನು ತಿರುಗಿ ದೊರೆಯುವಂತೆ ಮಾಡುತ್ತದೆ."[೧]

"ಬೈಬಲ್, ಇಸ್ರಾಯೇಲ್ ರಾಜ್ಯ ಜುದಾಯ, ಮೇದ್ಯ ಪಾರ್ಸಿ, ಈಜಿಪ್ಟ್, ರೋಮ್ ಮತ್ತು ಬೆಬಿಲೋನ ಮುಂತಾದ ಅನೇಕ ದೇಶಗಳಲ್ಲಿ ಆಳಿದ ಅರಸರು (ಡೇವಿಡ್ ಸೊಲೋಮೇನ ಸೌಲ etc) ಅವರು ಮಾಡಿದ ಯುದ್ಧ, ಆಯಾ ರಾಜ್ಯದ ವೈಭವ, ಸಾಹಸ, ಆಯಾ ರಾಜ್ಯದ ಉನ್ನತಿ ಹಾಗೂ ಅವನತಿಗಳ ಕುರಿತಾಗಿ ಬರೆಯಲ್ಪಟ್ಟಿದೆ. ಈ ಇತಿಹಾಸವು ಸತ್ಯ ಎಂಬುದಕ್ಕೆ ಕ್ರೈಸ್ತೇತರ ಬೇರೆ ಬೇರೆ ಪುಸ್ತಕ ಸಾಕ್ಷಿ ಕೊಡುತ್ತವೆ. ಆದರೆ ಬೈಬಲ್ ಕೇವಲ ಚಾರಿತ್ರಿಕ ಗ್ರಂಥವಲ್ಲ ಎಂಬುದನ್ನು ಎಂದೂ ಮರೆಯಬಾರದು. ಇದರಲ್ಲಿರುವ ಚರಿತ್ರೆ ಸಾಧಾರಣವಾದದ್ದೂ ಅಲ್ಲ; ಮತ್ತು ಅದರಲ್ಲಿರುವ ಐತಿಹಾಸಿಕ ಸಂಗತಿಗಳು ಅತಿ ಪ್ರಾಮುಖ್ಯವಾದವುಗಳು ಅಲ್ಲ; ಆದರೆ ಯಾವ ಐತಿಹಾಸಿಕ ಸಂಗತಿಗಳು ದೈವ ಭಕ್ತಿಗೆ ಸಂಬಂಧಪಟ್ಟವುಗಳಾಗಿರುತ್ತವೋ, ಯಾವ ಸಂಗತಿಗಳು ಉಪದೇಶಕ್ಕೆ ಉಪಯುಕ್ತವಾಗಿರುತ್ತವೋ, ಯಾವ ಸಂಗತಿಗಳು ನಿದರ್ಶನ ರೂಪವಾಗಿರುತ್ತವೋ, ಯಾವ ಸಂಗತಿಗಳು ಬೋಧನಾ ಪರವಾಗಿವೆಯೋ ಆ ಚಾರಿತ್ರಿಕ ಸಂಗತಿಗಳು ಮಾತ್ರ ಈ ಚಾರಿತ್ರಿಕ ಭಾಗದಲ್ಲಿ ಬರೆಯಲ್ಪಟ್ಟಿರುತ್ತವೆ."[೨]


"ತನ್ನ ಪ್ರಾಚೀನ ದಾಖಲೆಗಳಿಂದ ಬೈಬಲ್ ಮಹತ್ವ ಹೊರಿದಿವೆ. ಕರ್ನಾಕ (Karnak)ದೇವಾಲಯದ ಮೇಲಿನ ಚಿತ್ರ ಹಾಗೂ ಬರಹಗಳನ್ನು ನಾವು ಈಗ ಕಾಣುತ್ತೇವೆ. ೩೦೦೦ ವರ್ಷಗಳ ಹಿಂದೆ ಫರೋಹ ಅರಸ ಸಲಮೋನನ ಮಗ ರೆಹಬ್ಬಾಬನನ್ನು ಸೋಲಿಸಿದ ವಿವರಣೆ ಇಲ್ಲಿದೆ. ಇದನ್ನು ಬೈಬಲ್ (೧ ಅರಸು ೧೪:೨೪-೨೫ರಲ್ಲಿ ವಿವರಿಸುತ್ತದೆ.

ಫ್ರಾನ್ಸ್ ದೇಶದ ಪ್ಯಾರಿಸ Louvre Museum ನಲ್ಲಿ ಮೂಲದಲ್ಲಿ ಕೆತ್ತಿದ ಮೊವಾಬ್ಯಕ ಶಾಸನ ದೊರೆಯುವದು. ಮೊವಾಬ್ಯರು ಇಸ್ರಯೇಲರ ವಿರುದ್ಧವಾಗಿ ದಂಗೆ ಎದ್ದ ವಿಷಯವು ಈ ಶಾಸನದಲ್ಲಿದ್ದು ಬೈಬಲ್‌ನಲ್ಲಿ (೨ ಅರಸು ೧:೧ ಹಾಗೂ ೩:೪ ವಚನದಲ್ಲಿ) ದಾಖಲೆಗೊಂಡಿದೆ.

---

೧. ಕ್ರೈಸ್ತ ವೇದಾಂತಸಾರ ಪ್ರಸ್ತಾವನೆ, ರೆ.ರಾಯ ಇ.ಡೇವಿಸ್, ಪು.೪

೨. ಗ್ರಂಥದಲೆಲ್ಲಾ ಶ್ರೇಷ್ಠವಾದ ಗ್ರಂಥ ರೆ.ಎಸ್.ಎಸ್..ಮಳೇಕಾರ, ಪು.೧೨



ಬೈಬಲ್ಲಿನ ಮಹತ್ವವನ್ನು ಹೇಳುವ ಪ್ರಮುಖ
ಮೂರು ಅಂಶಗಳು ಇಂದಿಗೂ ಇವೆ.

ಅರಸನಾದ ಹಿಜ್ಕೀಯನು ೨೫೦೦ ವರ್ಷಗಳ ಹಿಂದೆ ಕಟ್ಟಿಸಿದ ಸಿಲೋವ ಕಾಲುವೆಯು ಈಗಲು ಜರುಸಲೇಮಿನಲ್ಲಿ ನೋಡಲು ಸಿಗುತ್ತದೆ ಇದು ೧೭೪೯ ಅಡಿ ಉದ್ದವಿದೆ. ಬೈಬಲ್ ಇದನ್ನು ೨ ಅರಸು ೨೦:೨೦ ಹಾಗೂ ೨ನೇ ಪೂರ್ವಕಾಲ ವೃತ್ತಾಂತ ೩೨:೨-೩ರಲ್ಲಿ ವಿವರಿಸುತ್ತದೆ"[೧]

ಬೈಬಲ್ ಕೇವಲ ಐತಿಹಾಸಿಕ ದಾಖಲೆಯನ್ನಷ್ಟೇ ಕೊಡದೆ ವಿಜ್ಞಾನಕ್ಕೆ ಸಂಬಂಧಿಸಿದ ಅಂಶಗಳನ್ನು ಹೊಂದಿದೆ. ಪ್ರಾಚೀನ ಕಾಲದಲ್ಲಿ ಈ ಭೂಮಿ ಯಾವುದೋ ಆಧಾರದ ಮೇಲೆ ನಿಂತಿದೆ. ಹಿಂದೂಗಳಲ್ಲಿ ಆದಿಶೇಷ ಈ ಭೂಮಿಯನ್ನು ತನ್ನ ಹೆಡೆ ಮೇಲೆ ಹೊತ್ತು ನಿಂತಿರುವನೆಂದು ನಂಬಿಕೆ ಇತ್ತು. ಆದರೆ ಬೈಬಲ್ ಹೀಗೆ ತಿಳಿಸುತ್ತದೆ. "ಆತನು (ದೇವರು) ಶೂನ್ಯದ ಮೇಲೆ ಉತ್ತರ ದಿಕ್ಕನ್ನು ವಿಸ್ತರಿಸಿ ಭೂಲೋಕವನ್ನು ಯಾವು ಆಧಾರವಿಲ್ಲದೆ ತೂಗು ಹಾಕಿದ್ದಾನೆ." (ಯೇಬ ೨೬:೭) (ಈ ಗ್ರಂಥ ಕರ್ತ ಕ್ರಿಸ್ತರಿಗಿಂತ ೬೦೦ ವರ್ಷ ಹಿಂದಿನವನು) ಎಂದಿದೆ.

"ಸತ್ಯವೇದ (ಬೈಬಲ್)ವೆಂಬ ತನ್ನ ಹೆಸರನ್ನು ಇಡೀ ಗ್ರಂಥದಲ್ಲಿಯೇ ಎತ್ತಿ ಸಾರುತ್ತಿದೆ. ಯಾವುದನ್ನೂ ಮರ್ಮವಾಗಿರಿಸಿಕೊಳ್ಳದೆ ಎಲ್ಲಾ ವಿಷಯಗಳನ್ನೂ ಯಥಾರ್ಥವಾಗಿ ಪ್ರಕಟಿಸಿದೆ. ಇತರರ ಟೀಕೆಗೆ ಆಸ್ಪದವಾಗುತ್ತದೆಂದು ಭಾವಿಸದೆ ಇರುವ ಸಂಗತಿಗಳನ್ನು ಇದ್ದಂತೆಯೇ ವಿವರಿಸುತ್ತದೆ. ಬಿದ್ದು ಹೋಗಿರುವ ಮಾನವನು ನೂತನ ಸ್ವಭಾವವನ್ನು ಧರಿಸಿ, ದೇವರ ಸಹವಾಸದಲ್ಲಿ ಪಾಲ್ಗೊಳ್ಳುವುದು ಹೇಗೆ ಎಂಬುದನ್ನು, ಅಜ್ಞಾನಿಯೂ ಸಹ ಅರಿತುಕೊಳ್ಳುವಂತೆ ಸುಲಭರೂಪದಲ್ಲಿ ಪ್ರಕಟಪಡಿಸಿರುತ್ತದೆ. ಒಂದು ಆಶ್ಚರ್ಯಕರ ಸಂಗತಿ ಎಂದರೆ ಲೋಕದ ಇತರ ಗ್ರಂಥಗಳ ರೀತಿಯಲ್ಲಿ ಇದು ಮಹಾ ಜ್ಞಾನಿಗಳಿಂದಾಗಲೀ ಅಥವಾ ಉದ್ದಾಮ ಪಂಡಿತರಿಂದಾಗಲೀ ಬರೆಯಲ್ಪಡಲಿಲ್ಲ. ಆದರೆ ವಿದ್ಯಾಹೀನರೂ, ಅಲ್ಪಮತಿಗಳೂ, ಗಣನೆಗೆ ಭಾರದವರೂ ಆದ ವ್ಯಕ್ತಿಗಳು ದೈವ ಪ್ರೇರಣೆಯಿಂದ ಪವಿತ್ರಾತ್ಮ ಭರಿತರಾಗಿ (ಬೈಬಲ್‌ನಲ್ಲಿ ಈ ಪರಿಚೋದಗಳನ್ನು ನೋಡಬಹುದು ೧ನೇ ಕೊರಿಥ ೧:೧೮, ೨೦, ೨೭ ೨ನೇ ಪೇತ್ರ ೧:೨೧ ನೇವಚನ) ಈ ಗ್ರಂಥಗಳನ್ನು ಬರೆದಿದ್ದಾರೆ".[೨]

"ಸತ್ಯವೇದವು ನಾಗರಿಕತೆಯ ದೀವಟಿಕೆ ಎಂದು ವಿಖ್ಯಾತಿ ಹೊಂದಿದೆ. ಇದು ಪ್ರವೇಶಿಸಿದ ಎಲ್ಲಾ ದೇಶಗಳೂ, ರಾಷ್ಟ್ರಗಳೂ ತಮ್ಮ ನಾಗರಿಕತೆಯನ್ನು, ಮೂಢನಂಬಿಕೆಗಳನ್ನು ಹಳೆ ಸಂಪ್ರದಾಯಗಳನ್ನೂ ಬದಿಗೊತ್ತಿ, ಹೊಸ ರೂಪವನ್ನು ಹೊಂದಿ ನಾಗರೀಕತೆಯ ಶಿಖರವನ್ನೇರಿ ಲೋಕದಲ್ಲಿ ಬೆಳಗುತ್ತಿವೆ. ಸಮಾನತೆಗೆ ಅಡಿಪಾಯವಾಗಿಯೂ, ದಾಸ್ಯ ಸಂಕೋಲನಕ್ಕೆ ಬಹಿಷ್ಕೃತವಾಗಿಯೂ ಸೇವಾವೃತ್ತಿಗೆ ಸ್ಥಾನ ಕೊಟ್ಟಿರುವ ಶ್ರೇಷ್ಠತೆಯ ಗ್ರಂಥವಾಗಿದೆ."[೩] ಬೈಬಲ್ ಮಹತ್ವವನ್ನು ಸಂದರ್ಭೋಚಿತವಾಗಿ ಈ ಅಧ್ಯಯನದಲ್ಲಿ ಗುರುತಿಸಲಾಗಿದೆ.

---

೧. You can live forever in Paradise on Earth, 1981, Pp.54

೨. T.K.B.C.Souvenir, 1845-1965, Pp.87

೩. Abid, Pp.90

ಕ್ರೈಸ್ತರ ನಂಬಿಕೆ

"ಬೈಬಲ್ ಏಸುಕ್ರಿಸ್ತನ ಎರಡನೆಯ ಆಗಮನವನ್ನು, ರಕ್ಷಣಾ ಯೋಜನೆಯನ್ನೂ ತಿಳಿಸುತ್ತದೆ. ಆತನ ನಿಜಭಕ್ತರು ಮರಣದಿಂದ ಪುನರುತ್ಥಾನ ಹೊಂದಿ ಆತನ ಜೊತೆಯಲ್ಲಿ ಆಳ್ವಿಕೆ ನಡೆಸುವರೆಂದೂ, ಕೆಟ್ಟು ಹೋಗಿರುವ ಈ ಲೋಕವನ್ನು ಮತ್ತೆ ಪ್ರಥಮದಲ್ಲಿದ್ದ ಏಡೆನ್ ಗಾರ್ಡನ್ ವನದಂತೆ ಮಾರ್ಪಡಿಸಿ, ಧರ್ಮರಾಜ್ಯ ಸ್ಥಾಪಿಸಲ್ಪಡುವದೆಂಬ ನಂಬಿಕೆ.

ಈ ಗ್ರಂಥದಲ್ಲಿ ಆದಿಯಿಂದಲೂ ಮರ್ಮವಾಗಿ ಕೇಂದ್ರೀಕರಿಸಿರುವ ವಿಷಯವೇನೆಂದರೆ. ದೈವ ಸೃಷ್ಟಿಯಾದ ಮಾನವನು ಪಾಪದ ದಾಸತ್ವಕ್ಕೆ ಒಳಗಾಗಿ ಮರಣವೆಂಬ ಸೆರೆಯ ಪ್ರತಿಫಲವನ್ನು ಹೊಂದಿಕೊಂಡಿರುವನು, ಇಂಥಾ ದಾಸ್ಯ ಸಂಕೋಲನೆಯಿಂದ ಮಾನವರನ್ನು ಬಿಡುಗಡೆ ಮಾಡಲು ದೇವರು, ಏಸು ಕ್ರಿಸ್ತನನ್ನು ಲೋಕಕ್ಕೆ ರಕ್ಷಕನನ್ನಾಗಿ ಕಳುಹಿಸಿರುವನೆಂದು ನಂಬಿರುತ್ತಾರೆ."[೧]

"ಈ ಭಂಡಾರ (ಬೈಬಲ್)ದಲ್ಲಿ ದೇವರು ಪರಲೋಕದಿಂದ ತನ್ನ ಅಮೂಲ್ಯವಾದ ನಿಧಿ ನಿಕ್ಷೇಪಗಳನ್ನು, ಭೂಲೋಕದ ಮಾನವರಿಗೆ ಹಂಚಿ ಕೊಟ್ಟಿದ್ದಾನೆ. ಮಾನವನ ಆತ್ಮೀಯ ಬೆಳವಣಿಗೆಗೆ ಬೇಕಾದದ್ದೆಲ್ಲವೂ ಈ ಭಂಡಾರದಲ್ಲಿರುತ್ತವೆ."[೨]

"ಸತ್ಯ ವೇದವು ಮುಕ್ತಿಘನವನ್ನು ತೋರಿಸುವ ಒಂದು ಕೈಮರದಂತೆಯೂ, ಪರಲೋರದ ಯಾತ್ರಿಕನಿಗೆ ಸ್ಥಳ, ದಿಕ್ಕನ್ನು ಸೂಚಿಸುವ ನಕ್ಷೆಯಂತೆಯೂ, ಆತ್ಮೀಯ ಪ್ರಯಾಣದಲ್ಲಿ ಬಳಲಿ, ಹಸಿವು ತೃಶೆಗೊಳಗಾದವರಿಗೆ ಜೀವದ ರೊಟ್ಟಿ ಮತ್ತು ಪಾನದಂತೆ ಇದೆ. ಇದು ಪ್ರತಿ ವ್ಯಕ್ತಿಯ ಜೀವನದ ಅವಸ್ಥೆಗೂ ಕ್ರೈಸ್ತ ಜನಾಂಗದ ಆರಾಧನೆ, ಸೇವೆಗಳಿಗೆ ಮಾರ್ಗದರ್ಶಕವಾಗಿದೆ. ದೇವರ ವಾಗ್ದಾನ ಮಾನವನ ಬಾಳಿನ ಗೂಡಾರ್ಥ ಕಂಡುಕೊಳ್ಳಬಹುದು".[೨]

ಸತ್ಯವೇದ ಮುಕ್ತಿ ಮಾರ್ಗದ ಎಲ್ಲಾ ಸೋಪಾನಗಳನ್ನು ಅಂದರೆ ಪಾಪ, ಪಶ್ಚಾತ್ತಾಪ, ಮಾನ ಸಾಂತರ, ನಂಬಿಕೆ, ಶುದ್ಧಿಕರಣ ನೀತಿ ನಿರ್ಣಯ, ಪುತ್ರ ಸ್ವೀಕಾರ ಎಂಬ ಕ್ರೈಸ್ತ ಜನಾಂಗದ ಮಹಾ ಸಿದ್ಧಾಂತಗಳನ್ನು ತಿಳಿಸುವ ಗ್ರಂಥವಾಗಿದೆ. ಒಬ್ಬ ವಿದ್ವಾಂಸನು "The bible was intend to be not a Text Book for scientist, but a hand book for sinners and guide book for pilgrims along the Haven ward way" ಎಂದು ಹೇಳಿರುತ್ತಾನೆ. ಮತ್ತೊಬ್ಬ ವಿದ್ವಾಂಸ "The bible is prescription for sinners If recommends the sick soul to find the medicine in christ" ಎಂದು ಹೇಳಿದ್ದಾನೆ.[೩]

---

೧. T.K.B.C.Souvenir, 1845-1965, Pp.87

೨. ಗ್ರಂಥಗಳಲೆಲ್ಲಾ ಶ್ರೇಷ್ಠವಾದ ಗ್ರಂಥ, ರೆ.ಸಂ.ಎಸ್.ಮಳೇಕಾರ, ಪು.೩

೩. T.K.B.C.Souvenir, 1845-1965, Pp.57

ಬೈಬಲ್ ಲಕ್ಷಣಗಳು

"ಈ ಗ್ರಂಥದಲ್ಲಿ ಯೇಸು ಕ್ರಿಸ್ತನೇ ದೇವರನ್ನು ಅದ್ವಿತೀಯವಾದ ರೀತಿಯಲ್ಲಿ ಪ್ರಕಟಪಡಿಸುತ್ತಾನೆ. ಆತನೆ ಸತ್ಯ ಸ್ವರೂಪನು (ಯಾಹಾ ೧೪:೦೦) ದೇವರೇ ಆತನನ್ನು ಈ ಲೋಕಕ್ಕೆ ಕಳುಹಿಸಿ ಕೊಟ್ಟನು. ಆತನಿಗೆ ದೇವರು ಏನನ್ನು ಆಜ್ಞಾಪಿಸಿದನೋ ಅದನ್ನೇ ಆತನು ಬೋಧಿಸಿದನು (ಯೇಹಾ ೭:೧೦, ೧೨:೪೮, ೧೪:೨೪). ಆತನು ಹೇಳುವ ಮಾತುಗಳು ಆತ್ಮೀಯವಾಗಿಯೂ ಜೀವವಾಗಿಯೂ ಇರುತ್ತವೆ (ಯೋಹಾ ೬:೬೩). ಹೀಗಿರುವಲ್ಲಿ ಆತನ ಜೀವಮಾನದ ಮತ್ತು ಬೋಧನೆಯ ಚರಿತ್ರೆಯನ್ನು ಒಳಗೊಂಡಿರುವ ಪುಸ್ತಕಗಳು ದೇವರನ್ನು ಪ್ರಕಟಿಸುವಂಥವುಗಳೇ"[೧]

"ಸತ್ಯವೇದವನ್ನು ಓದುವಾಗ ಅದರ ಬೋಧನೆಯು ಹೃದಯವನ್ನು ಪ್ರಕಾಶ ಪಡಿಸುವಂತೆ ಕಂಡು ಬರುವುದು. ಅದು ಮನಸ್ಸಾಕ್ಷಿಯನ್ನು ನಡೆಸಿ ಮನಸ್ಸಿಗೆ ತಿಳವಳಿಕೆಯನ್ನು ಕೊಟ್ಟು ಚಿತ್ತವನ್ನು ಪ್ರೇರಿಸುತ್ತದೆ. ಇದನ್ನು ಓದುತ್ತಿರುವ ಕಾಲದಲ್ಲಿ ಇದು ಸತ್ಯವಾದುದೆಂದೂ, ಇದರ ಮೂಲಕವಾಗಿ ದೇವರು ನಮ್ಮ ಸಂಗಡ ಮಾತನಾಡುತ್ತಿದ್ದಾನೆಂದೂ, ನಾವು ಮನದಟ್ಟುಮಾಡಿ ಕೊಳ್ಳುತ್ತೇವೆ. ಮಾನವರು ದೇವರ ಸಂಗಡ ಐಕ್ಯವಾಗಿರುವುದಕ್ಕೆ, ಸತ್ಯವೇದವು ದಾರಿಯನ್ನು ತೋರಿಸುತ್ತಿದೆಂದು ಕ್ರೈಸ್ತರು ನಂಬುತ್ತಾರೆ."[೨]

"ದೇವರು ತಾನೇ ಸತ್ಯವೇದವನ್ನು ಬರೆದುಕೊಟ್ಟಿರುವುದಿಲ್ಲ. ಈ ಪುಸ್ತಕವು ಆಕಾಶದಿಂದ ಬಿದ್ದುದಲ್ಲ. ದೇವರು ಮಾನವರನ್ನು ತನ್ನ ಸಾಧನಗಳನ್ನಾಗಿ ಮಾಡಿಕೊಂಡು, ಅವರು ಗ್ರಹಿಸಿಕೊಳ್ಳುವಷ್ಟರ ಮಟ್ಟಿನ ತಿಳುವಳಿಕೆಯನ್ನು ಅವರಿಗೆ ದಯಪಾಲಿಸಿ, ಅವರು ತಮ್ಮ ಮಾತುಗಳಿಂದಲೂ ತನ್ನ ಚಿತ್ತವನ್ನು, ಕೃಪಾತಿಶಯವನ್ನೂ, ಪ್ರಕಾಶಪಡಿಸುಂತೆ ಮಾಡಿದನು."[೩]

ಬೈಬಲ್ ಉದ್ದೇಶ

ವೇದವಾಕ್ಯಗಳೆಲ್ಲಾ ಮನುಷ್ಯನು ಪ್ರವೀಣನಾಗುವುದಕ್ಕೂ ಯಾವ ಸತ್ಕಾರ್ಯವನ್ನಾದರೂ ಮಾಡಲು ಯೋಗ್ಯನಾಗುವುದಕ್ಕೂ, ಬೋಧನೆಗೂ, ತಿದ್ದುಪಾಡಿಗೂ, ನೀತಿಯನ್ನು ಕಲಿಸಿಕೊಡುವುದಕ್ಕೂ, ಕೊಡಲ್ಪಟ್ಟಿರುತ್ತವೆ. ಬೈಬಲ್ ಚರಿತ್ರೆಗಳಲ್ಲಿಯೂ ಹಲವು ವಿಧವಾದ ವ್ಯಾಖ್ಯಾನಗಳಲ್ಲಿಯು ಸಣ್ಣ ಪುಟ್ಟ ತಪ್ಪುಗಳನ್ನು ನಾವು ಕಂಡುಹಿಡಿದರೆ ಬೈಬಲ್ ಉದ್ದೇಶವೇನೆಂಬುದನ್ನು ಜ್ಞಾಪಕ ಮಾಡಿಕೊಳ್ಳಬೇಕು. ಅದೇನೆಂದರೆ ಚರಿತ್ರೆಯನ್ನು, ಸಕಲ ಶಾಸ್ತ್ರಗಳನ್ನು, ತತ್ವಜ್ಞಾನವನ್ನು ಬೋಧನೆ ಮಾಡುವುದಕ್ಕಲ್ಲ.

೧. ವೇದಕೋಶ, ಹೊ.ಒ., ಪು.೫೩೯
೨. ಅದೇ, ಪು.೫೪೦
೩. ಅದೇ, ಪು.೫೪೦

ಲೋಕದವರು ತಮ್ಮನ್ನು ತಾವೇ ತಿಳುಕೊಳ್ಳುವಂತೆಯೂ, ದೇವರನ್ನು ಅನುಭವಿಸುತ್ತಾ ಬರುವಂತೆಯೂ, ದೇವರು ಈ ಗ್ರಂಥವನ್ನು ಬರೆಸಿಕೊಟ್ಟಿರುತ್ತಾನೆ ಎಂದು ನಂಬಿಕೆ.

೨.೨. ಬೈಬಲ್ ಹಸ್ತಪ್ರತಿಗಳು

ಪ್ರಾಚೀನ ಕ್ರೈಸ್ತ ಹಸ್ತಪ್ರತಿಗಳನ್ನು ಅಭ್ಯಸಿಸುವುದಾರೆ ಹಸ್ತಪ್ರತಿಗಳ ಚರಿತ್ರೆಯನ್ನು ಅಭ್ಯಸಿಸಿದಂತೆ. ಕ್ರೈಸ್ತ ಧಾರ್ಮಿಕ ಗ್ರಂಥವಾದ ಬೈಬಲ್, ಜಗತ್ತಿನ ಪ್ರಮುಖ ಭಾಷೆಗಳಲ್ಲಿ ತರ್ಜಮೆಗೊಂಡಿರುವುದರಿಂದ ಹಸ್ತಪ್ರತಿ ಬರವಣಿಗೆಯಲ್ಲಿ, ಸಂಗ್ರಹದಲ್ಲಿ ಅವುಗಳ ವಿಶ್ಲೇಷಣೆ ಹಾಗೂ ಸಂರಕ್ಷಣೆಯಲ್ಲಿ ಬಹು ವಿಧಗಳು ಕಾಣಸಿಗುತ್ತವೆ. ಹಸ್ತಪ್ರತಿಗಳ ಸಂಗ್ರಹದಲ್ಲಿ ಯಹೂದಿಗಳು ವಹಿಸಿದ್ದ ಕಾಳಜಿ ಜಗತ್ತನ್ನೇ ಬೆರಗುಗೊಳಿಸುವಂತಹುದು.

ಯಾವುದೇ ಧಾರ್ಮಿಕ ಗ್ರಂಥದ ಹಸ್ತಪ್ರತಿಗಳನ್ನು ವೀಕ್ಷಿಸಿದರೂ ಅದು ಒಂದು ಭಾಷೆ, ಒಂದು ಕಾಲ, ಒಬ್ಬ ಮೂಲ ಲೇಖಕನನ್ನು ಒಳಗೊಂಡಿರುತ್ತದೆ. ಈ ಮಾತು ಬೈಬಲ್ ಗ್ರಂಥಕ್ಕೆ ಅನ್ವಯಿಸುವುದಿಲ್ಲ. ಏಕೆಂದರೆ ಮೂಲ ಹಸ್ತಪ್ರತಿಗಳು ಗ್ರೀಕ್, ಹಿಬ್ರೂ ಹಾಗೂ ಅರೆಮಿಕ್ ಭಾಷೆಗಳಲ್ಲಿ ದೊರೆಯುತ್ತವೆ. ಹಳೆ ಒಡಂಬಡಿಕೆ ಪುಸ್ತಕಗಳು ಸಂಪೂರ್ಣ ಗ್ರೀಕ್ ಮೂಲವನ್ನೇ ಹೊಂದಿವೆ. ಕೆಲವೊಂದು ಪರಿಚ್ಛೇದ ಮಾತ್ರ ಅರೆಮಿಕ್ ಭಾಷೆಗಳನ್ನು ಒಳಗೊಂಡಿದೆ. ಆದರೆ ಹೊಸ ಒಡಂಬಡಿಕೆ ಸಂಪೂರ್ಣ ಹಿಬ್ರೂನಲ್ಲಿ ಬರೆಯಲಾಗಿದೆ. ಬೈಬಲ್ ಬರವಣಿಗೆ ಕಾಲದ ಅವಧಿ ಸುಮಾರು ಒಂದು ಸಾವಿರದ ಆರನೂರು ವರ್ಷ. ಈ ಅವಧಿಗಳಲ್ಲಿ ಮೇಲಿನ ಮೂರು ಭಾಷೆಗಳಲ್ಲಿ ಹಸ್ತಪ್ರತಿಗಳು ಕಾಣಸಿಗುತ್ತವೆ.

ಹಿಬ್ರೂ, ಗ್ರೀಕ್ ಬದಲಾಗಿ ರೋಮ ಸಾಮ್ರಾಜ್ಯದ ಅಧಿಪತ್ಯದಲ್ಲಿ ಲ್ಯಾಟಿನ್ ಆಡಳಿತ ಭಾಷೆಯಾಗಿ ಬಳಕೆಗೆ ಬಂದಿತು. ಆಗ ಬೈಬಲ್ ಲ್ಯಾಟಿನ್ ಭಾಷೆಗೆ ಭಾಷಾಂತರಗೊಂಡಿತು. ಹೆಸರಾಂತ ಪಂಡಿತನಾದ ಜರೋಮ (ಕಾ ಲ ೩೪೦-೪೨೦) ೨೫ ವರ್ಷಗಳ ಪರಿಶ್ರಮ ಫಲವಾಗಿ ವುಲ್‌ಗೇಟ್ (Vulgate ಲ್ಯಾಟಿನ್ ಭಾಷಾಂತರ) ಮೂಡಿ ಬಂದಿತು. ಪೂರ್ವದ ಎಲ್ಲ ಬರಹಗಳನ್ನು ಪರಿಷ್ಕರಿಸಿ ಪುಟ್ಟಕ್ಕೆ ಹಾಕಿದ ಆವೃತಿಯಾಗಿರುವುದರಿಂದ ರೋಮನ್ ಕೆಥೋಲಿಕ ಜನರು ಈ ಆವೃತ್ತಿಯೇ ಅಧಿಕೃತವೆಂದು ಸ್ವೀಕರಿಸಿರುವರು, ಈಗಲೂ ಈ ಆವೃತಿಯಿಂದ ಹೊರತಾದ ಸಾಹಿತ್ಯ ಕೆಥೋಲಿಕರಲ್ಲಿ ಒಮ್ಮತವಿಲ್ಲ. ಹೀಗೆ ಹಸ್ತಪ್ರತಿ ಕುರಿತಾಗಿ ಅವಲೋಕಿಸಿದಾಗ, ಬರವಣಿಗೆಗೆ ಆಯ್ದುಕೊಂಡ ವಸ್ತು ಶೈಲಿ, ಬಳಸಿದ ಸಾಧನಗಳು ವಿಧವಿಧವಾಗಿ ತೋರಿಬರುತ್ತಿವೆ.

ಬೈಬಲ್ ಸಾಹಿತ್ಯದ ಹಸ್ತಪ್ರತಿ ಪ್ರಾರಂಭವಾಗುವುದು ಶಿಲೆಯಿಂದ ಎಂಬುವಕ್ಕೆ ಬೈಬಲ್ ಲಾಖಲೆ ಹೀಗಿದೆ. ವಿಮೋಚನಕಾಂಡ ೩೧:೧೮ನೇ ವಚನದಲ್ಲಿ ದೇವರು ಸಿನಾಯ ಬೆಟ್ಟದಲ್ಲಿ ಮೋಶೆ (ಕಾಲ ೧೫೪೮ ಬಿ.ಸಿ)ಯ ಸಂಗಡ ಮಾತನಾಡುವುದನ್ನು ಮುಗಿಸಿದ ಮೇಲೆ, ಅವನಿಗೆ ಆ ಎರಡು ಆಜ್ಞಾ

ಶಾಸನಗಳನ್ನು (ಹತ್ತು ಆಜ್ಞೆ)ಕೊಟ್ಟನು. ಅವು ದೇವರ ಕೈಯಿಂದ ಕೆತ್ತಲ್ಪಟ್ಟ ಶಾಸನಗಳೇ ಯೋಬನ ಗ್ರಂಥ (ಕಾಲ ೧೮೪೫ ಬಿ.ಸಿ) ೧೯:೨೪ನೇ ವಚನ "ಕಬ್ಬಿಣದ ಕಂಠದಿಂದ ಬಂಡೆಯ ಮೇಲೆ ಕೆತ್ತಿ ಸೀಸ್ ಎರೆದು ಶಾಶ್ವತ ಶಾಸನವಾಗಿ ಮಾಡಿದರೆ ನನಗೆ ಎಷ್ಟೋ ಉಪಕಾರ"[೨] ಯಾವದೇ ಕಾರಣಕ್ಕೂ, ಕಾಲಕ್ಕೂ ನಶಿಸಬಾರದೆಂಬ ಉದ್ದೇಶದಿಂದ ಶಿಲೆಗಳ ಮೇಲೆ ಸಾಹಿತ್ಯ ಪ್ರಾರಂಭಿಸಿರಬಹುದು. ತದನಂತರದಲ್ಲಿ ಹಲಗೆಯ ಮೇಲೂ ಸಾಹಿತ್ಯ ಕಂಡು ಬರುತ್ತದೆ.

ಯೇಶಾಯನ ಗ್ರಂಥ (ಕಾಲ ೭೮೨-೭೨೨ ಬಿ.ಸಿ) ದೇವರು ನನಗೆ ಹೀಗೆ ಹೇಳಿದರು. "ನೀನೀಗ ಮನೆಗೆ ಹೋಗಿ ಈ ಮಾತು ಮುಂದಿನ ಕಾಲದಲ್ಲಿ ಶಾಶ್ವತ ಸಾಕ್ಷಿಯಾಗಿರುವಂತೆ ಇವರೆದುರಿಗೆ ಹಲಗೆಯ ಮೇಲೆ ಕೆತ್ತು..."[೩]

ಯೆರೆಮೀಯನ ಗ್ರಂಥ (೬೮೫-೬೧೬ ಬಿ.ಸಿ) "The sin of judha is written with a pen of pron and with the point of a dimond"[೪] ಯಹೂದ (ಜನಾಂಗ)ದ ಪಾಪವು ಉಕ್ಕಿನ ಕಂಠದಿಂದಲೂ ವಜ್ರದ ಮೊನೆಯಿಂದಲೂ ಲಿಖಿತವಾಗಿದೆ" ಎಂದಿದೆ.

ಈ ಮೇಲಿನ ಬೈಬಲ್ ಆಧಾರಗಳನ್ನು ಗ್ರಹಿಸಿದಾಗ ಯಹೋದಿ (ಕ್ರೈಸ್ತರಿಗೆ ಸಂಬಂಧಿಸಿ)ಗಳ ಧಾರ್ಮಿಕ ಸಾಹಿತ್ಯ ಕಲ್ಲಿನ ಕೆತ್ತನೆಯೊಂದಿಗೆ ಪ್ರಾರಂಭವಾಗಿರುವ ಬಗ್ಗೆ ಕಂಡು ಬರುತ್ತದೆ.

ಕೈ ಬರಹದ ಹಸ್ತಪ್ರತಿಗಳು ನೈಲ್ ನದಿ ದಂಡೆಯ ಮೇಲೆ ಬೆಳೆಯುತ್ತಿದ್ದ 'ಪೈಪರಸ್' ಎಂಬ ಜೊಂಡು ಹುಲ್ಲಿನ ಒಳ ದೇಟುಗಳನ್ನು ಜೋಡಿಸಿ ಸುರಳಿ ಸುತ್ತಲು ಬರುವ ರೀತಿಯಲ್ಲಿದ್ದವುಗಳ ಮೇಲೆ ಬರೆಯುತ್ತಿದ್ದರು. ಅವು ಬೇಗ ನಾಶವಾಗುತ್ತಿದ್ದವು. ಹೀಗಾಗಿ ಇವುಗಳಲ್ಲಿ ಈಗ ಒಂದನ್ನಾದರೂ ನೋಡಲು ಈಗ ಸಿಕ್ಕುವುದಿಲ್ಲ ಒಂದು ಸುವಾರ್ತೆಯಾಗಲಿ ಅಥವಾ ಎರಡು ಮೂರು ಪತ್ರಿಕೆಗಳಾಗಲಿ ಒಂದೇ ಚಿಕ್ಕ ಕಾಗದದ ಸುರಳಿಯಲ್ಲಿ ಬರೆಯಲ್ಪಡುವುದು ಸಾಧ್ಯವಾಗಿದ್ದಿತು. ಇವುಗಳನ್ನು ನೋಡಿ ಕೈ ಬರಹದಲ್ಲಿ ನಕಲುಗಳನ್ನು ಬರೆದು ತೆಗೆದುದರಿಂದ ಅನೇಕ ಪುಸ್ತಕಗಳ ಸುರಳಿಗಳು ಪ್ರಚಾರಕ್ಕೆ ಬಂದವು. ನಾಲ್ಕನೇ ಶತಮಾನದಲ್ಲಿ ಪೈಪರಸ್ ಎಂಬುದಕ್ಕೆ ಬದಲಾಗಿ ಪುಸ್ತಕರೂಪವನ್ನು ಪ್ರಚುರ ಮಾಡಿದವರು, ಕುರಿಯ ಚರ್ಮದಿಂದ ಮಾಡಿದ ಚರ್ಮದ ಕಾಗದಗಳನ್ನು ಉಪಯೋಗಿಸುವುದಕ್ಕೆ ತೊಡಗಿದರು. ಹೀಗೆ ಚರ್ಮದ ಹಾಳೆಗಳನ್ನು ಸೇರಿಸುತ್ತಾ ಬಂದುದರಿಂದ ಸುರಳಿಗಳಾಗಿ ಈಗ ನಮ್ಮಲ್ಲಿರುವ ಪುಸ್ತಕಗಳಂತೆಯೇ ಅವರು ತಮ್ಮ ಪುಸ್ತಕಗಳನ್ನು ಮಾಡಿಕೊಳ್ಳುತ್ತಾ ಬಂದರು. ಹೀಗೆ ಸೇರಿಸಲ್ಪಟ್ಟ ಪುಸ್ತಕಗಳನ್ನು ಅವರು

---

೧. ಸತ್ಯವೇದ (B.S.I), ೧೯೯೨, ಪು.೧೦೧

೨. ಅದೇ, ಪು.೫೬೪

೩. The Dakes Bible, Pp.730

೪. ಅದೇ, ಪು.೭೬೧

ತಮ್ಮ ಇಷ್ಟದ ಪ್ರಕಾರ ಎಷ್ಟು ದೊಡ್ಡದನ್ನಾಗಿಯಾದರೂ ಮಾಡಿಕೊಳ್ಳುವುದು ಸಾಧ್ಯವಾಗಿದ್ದಿತು. ಹೀಗೆಯೇ ನಾಲ್ಕನೆಯ ಶತಮಾನದಲ್ಲಿ ಸುವಾರ್ತೆಗಳನ್ನೂ ಪತ್ರಿಕೆಗಳನ್ನೂ ಸೇರಿಸಿ ಬರೆದು, ಒಂದೇ ಸತ್ಯವೇದ ಗ್ರಂಥವನ್ನಾಗಿ ಅವುಗಳನ್ನು ಉಪಯೋಗಿಸುತ್ತಾ ಬಂದರು. ಈ ಪುಸ್ತಕಗಳಲ್ಲಿ ಕೆಲವು ಅರ್ವಾಚೀನ ಕಾಲದಲ್ಲಿ ಕಂಡು ಹಿಡಿಯಲ್ಪಟ್ಟು ಈಗಿನವರೆಗೂ ಉಳಿದಿರುತ್ತವೆ. ಇವುಗಳಲ್ಲಿ ಪ್ರಮುಖವಾದ ಗ್ರೀಕ್ ಭಾಷೆಯ ಕೈ ಬರಹದ ಪ್ರತಿಗಳು ಯಾವುವೆಂದರೆ.

ಸೀನಾಯ ಬೆಟ್ಟದ ಒಂದು ಆಶ್ರಮದಲ್ಲಿ ೧೮೪೪ರಲ್ಲಿ ಒಬ್ಬ ವಿದ್ವಾಂಸನು ಕಂಡು ಹಿಡಿದ ಸತ್ಯವೇದವನ್ನೆಲ್ಲಾ ಒಳಗೊಂಡಿರುವ ಒಂದು ಪುಸ್ತಕ. ಇದು ನಾಲ್ಕನೇಯ ಶತಮಾನದಲ್ಲಿ ಪ್ರಾಯಶಃ ಕೈಸರೈಯ ಪಟ್ಟಣದಲ್ಲಿ ಬರೆಯಲ್ಪಟ್ಟಿರಬಹುದು.

ನಾಲ್ಕನೆಯ ಶತಮಾನದಲ್ಲಿ ಬರೆಯಲ್ಪಟ್ಟ ರೋಮಾಪುರದಲ್ಲಿರುವ ದೊಡ್ಡ ಗ್ರಂಥಾಲಯದಲ್ಲಿ ಇಡಲಾದ ಒಂದು ಸತ್ಯವೇದ ಪುಸ್ತಕ. ಇದರಿಂದ ಕೆಲವು ಪತ್ರಿಕೆಗಳೂ ಪ್ರಕಟಣೆಯ ಗ್ರಂಥವೂ ತೆಗೆಯಲ್ಪಟ್ಟಿರುತ್ತವೆ. ಐದನೆಯ ಶತಮಾನದಲ್ಲಿ ಬರೆಯಲ್ಪಟ್ಟ ಮತ್ತೊಂದು ಸತ್ಯವೇದ ಗ್ರಂಥವು ಈಗ ಲಂಡನ್ ಮ್ಯೂಜಿಯಂನಲ್ಲಿ ಇಡಲಾಗಿದೆ.

"ಈ ಪುರಾತನ ಪ್ರತಿಗಳಲ್ಲಿ ಕೆಲವು ಇಂತಿಂಥ ಕಾಲದಲ್ಲೇ ಬರೆದವುಗಳಾಗಿವೆ ಎಂದು ಅಮೂಲಾಗ್ರವಾಗಿ ಪರಿಶೋಧಿಸಿ, ವಿವಿಧವಾದ ಸೂಚನೆಗಳಿಂದ ಎಂದರೆ ಅಕ್ಷರಗಳ ಬಳಕೆಗಳಿಂದ, ಪದ ವಿಭಾಗಗಳಿಂದ ಬರೆಯಲಾದ ಕಾಗದ, ಚರ್ಮ ಮುಂತಾದವುಗಳಿಂದಲೂ ಈ ಪುರಾತನ ಪ್ರತಿಗಳು ಬರೆಯಲ್ಪಟ್ಟ ಕಾಲವನ್ನು ಸ್ವಲ್ಪ ಹೆಚ್ಚು ಕಡಿಮೆ ಸರಿಯಾಗಿ ಕಂಡುಹಿಡಿದಿರುತ್ತಾರೆ. ಈ ವಿಷಯಗಳಲ್ಲಿ ವೇದ ಪಂಡಿತರು ಏಕಾಭಿಪ್ರಾಯ ಉಳ್ಳವರಾಗಿದ್ದಾರೆ".[೧]

"ಕ್ರೈಸ್ತ ಧಾರ್ಮಿಕ ಬರಹಗಳನ್ನು ಒಟ್ಟಿನಲ್ಲಿ ಸ್ಕ್ರಿಪ್ಚರ್ (Scripture) ಎಂದು ಅಂದರೆ ಪವಿತ್ರ ಬರಹಗಳು ಎಂದು ಕರೆಯುತ್ತಾರೆ. ಪವಿತ್ರಗಳಲ್ಲದ ಬರಹ (ಉದಾ:ಅಪೂಕ್ರಪ್/ಮಿಥ್ಯಾ ಸಾಹಿತ್ಯ (Psuduapegraphic) ಗಳು ಇರುವುದನ್ನು ಇಲ್ಲಿ ಸ್ಮರಿಸಬಹುದು. ಕ್ರೈಸ್ತರ ಆದಿ ಬರಹಗಳಲ್ಲಿ ಮೂರು ಬಗೆಗಳು ಕಾಣಸಿಗುತ್ತವೆ.

೧. ಪೆಪೈರಸ್ (Papyrus)

೨. ಪಾರ್ಚಮೆಂಟ(Parchmant)

೩. ಹಲಗೆ ಬರಹ (Wooden Tablets)"[೨]

---

೧. ವೇದಕೋಶ ಹೊ.ಒ., ಪು.೫೩೮

೨. The Cambridge History Bible, Vol-2, Pp.54

ಪೆಪೈರಸ್ (Papyrus)

ನದಿ ದಂಡೆಯಲ್ಲಿ ಸರೋವರದ ದಡದಲ್ಲಿ ಬೆಳೆಯಲಾದ ಜಂಬು ಹುಲ್ಲನ್ನು ಪೆಪೈರಸ್ ಎಂದು ಕರೆಯುತ್ತಾರೆ. "ಇಜಿಪ್ತ ನೈಲ ನದಿಯ ದಂಡೆಗುಂಟ ಈ ಹುಲ್ಲು ಬೆಳೆಯುವಂತಹದು. ಈಗಲೂ ಸಸ್ಯೋದ್ಯಾನದಲ್ಲಿ ಪಾಲೆಸ್ತಾಯಿನ್ ಪೂರ್ವಕ್ಕೂ ಹಾಗೂ ಹುಲ್ಚ (Hulch) ಸರೋವರದ ಮತ್ತು ಕೈರೋ ಪಟ್ಟಣದ ಬುಟಾನಿಕಲ್ ಗಾರ್ಡನ್ನಿನಲ್ಲಿ ನೋಡಲು ಸಿಗುತ್ತದೆ."[೧] ಇದು ನೀರಿನಲ್ಲಿ ಬೇರು ಬಿಟ್ಟು ಸು ೧೦ ರಿಂದ ೧೫ ಅಡಿ ಎತ್ತರ ಬೆಳೆಯುತ್ತದೆ. ತ್ರಿಕೋನಾಕಾರದ ಈ ಹುಲ್ಲಿನ ದೇಟನ್ನು ಸೀಳಿ, ಅದರ ಬಿರುಸಾದ ಭಾಗದ ಮೇಲೆ ಮತ್ತೊಂದು ಸೀಳಿದ ದೇಟನ್ನು ಇಟ್ಟು, ಕೊಡತದಿಂದ ಹೊಡೆದು ಹದಗೊಳಿಸಿ ನಂತರ ಒಣಗಿಸಿ, ಪಾಲೀಶಗೊಳಿಸಿ ಬರವಣಿಗೆಗೆ ಸಿದ್ಧಗೊಳಿಸುತ್ತಿದ್ದರು. "ಅಲೇಕ್ಸಾಂಡರನ ಕಾಲದಿಂದ ಈ ಪೆಪೈರಸ ಬಳಕೆಗೆ ಬಂದಂತೆ ತೋರುತ್ತದೆ."[೨]

ಗ್ರೀಕೊ-ರೋಮನ್ ಅವಧಿಗಳಲ್ಲಿ ಈ ಪೈಪರಸ ಬಳಕೆ ಹೆಚ್ಚಾದಂತೆ ತೋರುತ್ತದೆ. ಬರವಣಿಗೆಗೆ ಸಿದ್ಧವಾದ ಪೆಪೈರಿನ (ದೇಟು) ರೀಡ್‌ನ್ನು ಒಂದರ ನಂತರ ಒಂದಾಗಿ ಜೋಡಿಸುತ್ತಿದ್ದರು. "ಸಾಮಾನ್ಯವಾಗಿ ೨೫ ಸೆ.ಮಿ. ಎತ್ತರ ೧೯ ಸೆ.ಮಿ. ಅಗಲವಿರುತಿತ್ತು. ಆದರೆ ಇಷ್ಟೇ ಗಾತ್ರ ಇರಬೇಕೆಂಬ ನಿಯಮ ನಿರ್ಬಂಧವಿರಲಿಲ್ಲ."[೩] ಸುರಳಿ ಸುತ್ತಲು ಬರುವಂತೆ ಮೊದಲು ಹಾಗೂ ಕೊನೆಯಲ್ಲಿ ಕಟ್ಟಿಗೆ ಬಳಸಲಾಗುತಿತ್ತು. ಈ ಪಪೈರಸ ನೈಲ ನದಿಯಲ್ಲಿ ದೊರೆಯುತಿತ್ತು ಎಂಬುದಕ್ಕೆ ಬೈಬಲ್‌ನಲ್ಲಿ ಈ ಆಧಾರಗಳನ್ನು ನೋಡಬಹುದು. "ವಿಮೋಚನಕಾಂಡ 2:30ನೇ ವಚನ, ಯೋಬನು 8:11 ಯೇಶಾಯನಗ್ರಂಥ 35:7ನೇವಚನ."[೪] ಹಿಬ್ರೂ ಜನಾಂಗದ ಆದಿ ಬರವಣಿಗೆಯಲ್ಲಿ ಪಪೈರಸನಲ್ಲಿ ಇದ್ದದ್ದು ಕಂಡು ಬರುವುದು.

ಚರ್ಮದ ಮೇಲಿನ ಬರಹಗಳು (Parchment)

ಬೈಬಲ್ ಮೂಲ ಬರವಣಿಗೆಯಲ್ಲಿ ಇನ್ನೊಂದು ವಿಧ. ಚರ್ಮದ ಸಾಹಿತ್ಯ ಲಭ್ಯವಿರುವುದನ್ನು ಗಮನಿಸಿದಾಗ (Lether) ಚರ್ಮ, (Parchment) ನುಣುಪಾದ ಚರ್ಮ, (Vellum) ಕರುವಿನ ಚರ್ಮ, ಎಂಬ ಮೂರು ಬಗೆಯ ಚರ್ಮದ ಅಂಶಗಳು ಕಂಡುಬರುತ್ತವೆ.

ಬರವಣಿಗೆಗೆ ಚರ್ಮದ ಎರಡು ಬದಿಯಲ್ಲಿ ಬರೆಯಲು ಬಳಸುತ್ತಿದ್ದುದು ಕಂಡುಬರುತ್ತದೆ. ಕೂದಲಿರುವ ಭಾಗ (hair side) ಹಾಗೂ ಮಾಂಸಕ್ಕೆ ಅಂಟಿಕೊಂಡಿರುವ (flesh side) ಭಾಗ"

---

೧. T.C.H. of Bible, Pp.55

೨. ಅದೇ, ಪು.೬೨

೩. ಅದೇ, ಪು.೫೬

೪. ಸತ್ಯವೇದ ಬೈಬಲ್ ಸತ್ಯವೇದ ಸಂಸ್ಥೆ, ಬೆಂಗಳೂರು, ಪು.೬೩, ೫೫೪, ೭೭೦

ಯಹೂದಿ ಜನರ ಮುಖ್ಯ ಕಸಬು ಕುರಿಕಾಯುವಿಕೆ. ಆದ್ದರಿಂದ ಕುರಿ ಹಾಗೂ ಆಡಿನ ಚರ್ಮವನ್ನೇ ಹೆಚ್ಚು ಬರವಣಿಗೆಗೆ ಬಳಸಿದಂತೆ ತೋರಿಬರುತ್ತದೆ.

ಲ್ಯಾಟಿನ್ Pergamena (ಪರ್ಗಮೆನಾ) ಎಂಬ ಶಬ್ದದ ಉತ್ಪತ್ತಿ ಪಾರ್ಚಮೆಂಟ್ ಎಂದಾಗಿದೆ. ಇಲ್ಲಿ ಚರ್ಮ Lether ಹಾಗೂ ಪಾರ್ಚಮೆಂಟ್ (Parchment)ಗಳ ವಿಭಿನ್ನತೆಯನ್ನು ಗುರುತಿಸುವುದು ಕಷ್ಟಸಾಧ್ಯ. ಹದಗೊಳಿಸುವ ಆಧಾರದ ಮೇಲಿಂದ ಭಿನ್ನತೆಯನ್ನು ಗುರುತಿಸಬಹುದು. ಚರ್ಮವನ್ನು ಹದಗೊಳಿಸುವಾಗ ಉಪ್ಪು ಸವರಿ, ಒಣಗಿಸಿ ನಂತರ ಸೊಪ್ಪು ಅರಿದು ಭಟ್ಟಿಹಾಕಿ ಹದಗೊಳಿಸಿ ಕೂದಲಿನ ಬೇರು ಹೋಗುವವರೆಗೆ ತಿಕ್ಕಿ ನಂತರ ಸಿದ್ದಗೊಳಿಸುತ್ತಿದ್ದರು. ಹದಗೊಳಿಸಲು ಲಿಂಬೆರಸದ ಬಳಕೆಯೂ ಇತ್ತು.


ಆದರೆ ಪಾರ್ಚಮೆಂಟ ಎಂದು ಕರೆಯಿಸಿಕೊಳ್ಳುವ ಚರ್ಮದ ಬರಹಗಳು ಸಿದ್ದಗೊಳ್ಳುವಿಕೆಯಲ್ಲಿ ವ್ಯತ್ಯಾಸ ಕಾಣುತ್ತದೆ. ಹದಗೊಳಿಸಿದ ಚರ್ಮವನ್ನು ಮತ್ತೆ ನೀರಿನಲ್ಲಿ ಅದ್ದಿ ಸಾಧ್ಯವಾದಷ್ಟು ಹಿಗ್ಗಿಸಿ, ಒಣಗಲು ಬಿಟ್ಟು ನಂತರ ಹರಿತವಾದ ಆಯುಧದಿಂದ ಬೇಕಾಗುವ ದಪ್ಪಕ್ಕೆ ಚರ್ಮವನ್ನು ಕೆತ್ತಿ ತದನಂತರ ನುಣುಪಾದ ಚರ್ಮವನ್ನು ಪಾಲೀಶ ಮಾಡಿ ಬರೆಯಲು ಬಳಸುತ್ತಿದ್ದರು.

ಚರ್ಮದಲ್ಲಿ ಮೂರು ಪದರುಗಳಿರುತ್ತವೆ. ಮೇಲಿನ ಪದರು ನಂತರ ಕೂದಲಿನ ಬೇರಿರುವ ಪದರು. ಅದರ ನಂತರ ಮಾಂಸಕ್ಕೆ ಅಂಟಿಕೊಂಡ ಪದರು. ಎಲ್ಲಕ್ಕೂ ಶ್ರೇಷ್ಠವಾದುದು ಮಾಂಸಕ್ಕೆ ಅಂಟಿಕೊಂಡ ಚರ್ಮದ ಪದರು. ಇದನ್ನೆ ಉತ್ಕೃಷ್ಟಮಟ್ಟದ ಬರವಣಿಗೆಗೆ ಬಳಸುತ್ತಿದ್ದರು.

“ಹಳೆ ಒಡಂಬಡಿಕೆಯ ಆರಂಭದ ಐದು ಗ್ರಂಥಗಳನ್ನು ಬರೆದಿಡುವುದಕ್ಕೆ ಸುಮಾರು ಮೂವತ್ತು ಕುರಿಯ ತೊಗಲು ಬೇಕಾಗುತ್ತಿತ್ತು... ಚರ್ಮದ ಮೇಲೆ ಬರೆದ ಬರಹಗಳು ಕೆಲವು ತಲೆಮಾರಿನವರೆಗೂ ಅಚ್ಚಳಿಯದೆ ಉಳಿಯುತ್ತಿದ್ದವು. ಅವುಗಳ ಮೇಲಿದ್ದ ಬರಹಗಳು ಮಾಸುತ್ತಾ ಬಂದಂತೆಲ್ಲಾ ಅದನ್ನು ಹೊಸ ಚರ್ಮದ ಮೇಲೆ ತಿರುಗಿ ಬರೆಯ ಬೇಕಾಗುತಿತ್ತು.”[೧] ಹೀಗೆ ಇದು ಬಹು ವೆಚ್ಚದಾಯಕವಾಗಿ ಕಂಡು ಬರುತ್ತಿತ್ತು. ಈಗ ಲಭ್ಯವಿರುವ ಐದನೇ ಶತಮಾನದ ಪಾರ್ಚಮೆಂಟ್ ನೋಡಬಹುದು(ಚಿತ್ರ-೧).

ಹೊಸ ಒಡಂಬಡೆಕೆಯ ಬರಹಗಳು ಗ್ರೀಕ್‌ನಲ್ಲಿ ಹೆಚ್ಚಾಗಿ ಬರೆದವುಗಳಾಗಿದ್ದು ಚರ್ಮದ ಮೇಲೆ ಬರೆದ ಬರಹಗಳೇ ಹೆಚ್ಚು. ಇವು ೩ನೇ ಶತಮಾನದಿಂದ ತೋರಿಬರುತ್ತವೆ. ಈಗ ದೊರೆಯುವ ಪಾರ್ಚಮೇಟ್‌ಗಳನ್ನು (ಚಿತ್ರ-೨) ನೋಡಬಹುದು. “ಹೊಸ ಒಡಂಬಡಿಕೆಯ ಗ್ರೀಕ್ ಮಾತೃಕೆಗಳು ೩,೮೦೦ಗಳಿದ್ದು, ಇವು ೪ನೇ ಶತಮಾನದಿಂದೀಚಿನವು.

೧. ಹ.ಬ.ಪ್ರವೇಶದಾಯಿನಿ ಪಿ.ಎಸ್.ಥೊಬರ್ನ, ಪು.೨೯



Greek Parchment manuscript of Psolm 118:33-45, early 5th century, with 8th century editions, Washington MS 2, Page 1282, The Psalms Courtesy of the smithsonion Institution, Freer Gallary of Art (೫ನೇ ಶತಮಾನದ ಚರ್ಮದ ಹಸ್ತಪ್ರತಿ)



Page from the Codex Sinaiticus, A 4th Century Greeak manuscript on Vellum, is preserved in the British Museum hese verses are from the Gospel According to John Gospel (೪ನೇ ಶತಮಾನದ ಚರ್ಮದ ಹಸ್ತಪ್ರತಿ)

೨.೩. ಪ್ರಮುಖ ಬೈಬಲ್ ಅನುವಾದಕರು

೧. ವಿಲಿಯಂ ಕೇರಿ (೧೭೬೧-೧೮೩೪)

ಮಿಶನರಿಗಳು ಧರ್ಮಪ್ರಚಾರಕ್ಕಾಗಿಯೇ ಭಾರತಕ್ಕೆ ಬಂದವರಾಗಿದ್ದರು. ಬ್ರಿಟಿಷ ಸರಕಾರ ಭಾರತದಲ್ಲಿ ತನ್ನ ಅಸ್ತಿತ್ವವನ್ನು ಸ್ಥಾಪಿಸುವ ಪೂರ್ವದಲ್ಲಿಯೇ ತಮ್ಮ ಅಧ್ಯಾಯವನ್ನು ರೋಮನ್ ಕೆಥೊಲಿಕ ಮಿಶನರಿಗಳು ಆರಂಭಿಸಿದ್ದರು. ಇವರುಗಳಲ್ಲಿ ಪ್ರಮುಖರು ಫ್ರಾನ್ಸಿಸ್ ಝೇವಿಯರ್, ರಾಬರ್ಟ ದಿ ನೋಬಲಿ, ಬಾರ್ತೋಲೋಮಾಯ್ ಹಾಗೂ ಜಿಗನ್ ಬಾಗ್ ಮುಂತಾದವರು.

ಇಂಗ್ಲಂಡಿನ ದೊರೆಗಳು ಭಾರತದಲ್ಲಿ ತಮ್ಮ ಸಾಮ್ರಾಜ್ಯ ಸ್ಥಾಪಿಸಿದ ನಂತರ ಕ್ರೈಸ್ತ ಧರ್ಮದ ಮತಬೋಧನೆಗೆ ಹೆಚ್ಚಿನ ಒಲವು ತೋರಿಸಲಿಲ್ಲ. ಹೀಗಾಗಿ ಮಿಶನರಿಗಳಲ್ಲ ಈ ಮಧ್ಯ ಮಿಶನರಿಗಳು ಭಾರತಕ್ಕೆ ಬರುವ ಅವಕಾಶ ಕಡಿಮೆಯಾದುದರ ಪರಿಣಾಮವಾಗಿ ಹಳೆಮಿಶನರಿಗಳೆಂದು ಮೊದಲು ಬಂದವರನ್ನು ಕರೆಯುವಂತಾಯಿತು.

ತದನಂತರದ ೧೮ನೇ ಶತಮಾನದಲ್ಲಿ ಆಗಮಿಸಿದ ಮಿಶನರಿಗಳನ್ನು ಆಧುನಿಕ (Modern Missionaries) ಮಿಶನರಿಗಳೆಂದು ಕರೆಯಬಹುದು. ಈ ಸಾಲಿನಲ್ಲಿ ಪ್ರಮುಖವಾಗಿ ಕಂಡುಬರುವ ವ್ಯಕ್ತಿಗಳು ಅನೇಕರು. ಅವರಲ್ಲಿ ಪ್ರಥಮವಾಗಿ ವಿಲಿಯಂ ಕೇರಿಯನ್ನು ಗುರುತಿಸಬಹುದು. ಈತನನ್ನು ಫಾದರ ಆಫ್ ಮಾಡರ್ನ ಮಿಶನ್ ಎಂದು ಕರೆಯಬಹುದು.

"ಬೈಬಲ್‌ನ್ನು ಭಾರತೀಯ ಮೂಲ ಭಾಷೆಗೆ ಭಾಷಾಂತರಿಸುವ ಸಾಹಸಿಗನೆಂದರೆ ವಿಲಿಯಂ ಕೇರಿ ಎನ್ನಬಹುದು. ಏಷ್ಯಾ ಖಂಡದ ಜನಾಂಗದವರಿಗೆ ಅವರವರ ಸ್ವಭಾಷೆಯಲ್ಲಿಯೇ ಬೈಬಲ್ ಗ್ರಂಥವನ್ನು ಒದಗಿಸಿಕೊಡಬೇಕೆಂಬ ಮಹತ್ವಾಕಾಂಕ್ಷೆ ಕೇರಿಯವರಿಗೆ ಯಾವಾಗಲೂ ಇದ್ದದ್ದು ಕಂಡು ಬರುತ್ತದೆ."[೧]

ಬೈಬಲ್ ಅನುವಾದಕರಲ್ಲಿ ಈತನನ್ನು ಪ್ರಥಮನೆಂದೇ ಕರೆಯಬೇಕು. ಒಂದು ವೇಳೆ ಈತನು ಬೈಬಲ್ ಭಾಷಾಂತರ ಕಾರ್ಯಕ್ಕೆ ಕೈಹಾಕದಿದ್ದರೆ ನಾವು ಇನ್ನು ಪಲವು ವರ್ಷಗಳ ನಂತರವೇ ಇಂತಹ ಕಾರ್ಯವನ್ನು ಕಾಣಬೇಕಾಗಿರುತ್ತಿತ್ತೇನೋ!

ವಿಲಿಯಂ ಕೇರಿ ಇಂಗ್ಲಂಡದ ನಾರ್ಥಹೆಮ್ಸ್‌ಶೈರ್‌ನಲ್ಲಿ ಅಗಸ್ಟ ೧೭, ೧೭೬೧ರಲ್ಲಿ ಜನಿಸಿದ ಈತನ ತಂದೆ ನೇಕಾರ ವೃತ್ತಿಯವನಾಗಿದ್ದ. ಈತನು ಹೆಚ್ಚಿನ ಶಿಕ್ಷಣ ಮಾಡುವ ಸ್ಥಿತಿಯಲ್ಲಿರಲಿಲ್ಲ. ಹೀಗಾಗಿ ತನ್ನ ೧೨ನೇ ವರ್ಷದಲ್ಲಿಯೇ ಶಿಕ್ಷಣಕ್ಕೆ ವಿದಾಯ ಹೇಳಬೇಕಾಯಿತು. ಬದುಕಲು ತೋಟದ ಉಸ್ತುವಾರಿಕಾರ್ಯ ಪ್ರಾರಂಭಿಸಿದ. ನಂತರದ ಶೊಮೇಕರ್ ಕೋರ್ಸ ಮುಗಿಸಿದ. ಒಂದು ದಿನ ತನ್ನ

೧. K.B.C.Sourvenir, 1865-1965, Pp.53

ಮಾಲಕನ ದೃಷ್ಟಿಯಲ್ಲಿ ಕರ್ತವ್ಯಚ್ಯುತಿ ಎಸಗಿ ಶಿಕ್ಷೆಗೆ ಒಳಗಾಗಿ ಸಾರ್ವಜನಿಕರ ಎದುರಿನಲ್ಲಿ ಅವಮಾನಕ್ಕೊಳಗಾದ. ಈ ಘಟನೆ ಆತನ ಜೀವನವನ್ನು ಬದಲಾಯಿಸಿತು. ಚರ್ಚಿನ ಪಾದ್ರಿ ಕೇವಲ ಚರ್ಚನಲ್ಲಿ ಭಾಗವಹಿಸುವುದು ನಿಜಕ್ರೈಸ್ತನ ಲಕ್ಷಣವಲ್ಲ, ತಪ್ಪನ್ನು ಒಪ್ಪಿಕೊಂಡು ಒಳ್ಳೆಯ ನಡತೆಯಲ್ಲಿ ನಡೆಯುವುದು ಕ್ರೈಸ್ತತ್ವ ಎಂದಾಗ ಇದು ಕೇರಿಯ ಮೇಲೆ ಪರಿಣಾಮ ಬೀರಿತು. ವಿಲಿಯಂ ಕೇರಿ ಮೊಣಕಾಲೂರಿ ದೇವರೆದುರು ಪಶ್ಚಾತಾಪವನ್ನು ಬಹುದುಃಖದಿಂದ ತೋಡಿಕೊಂಡನು. ಅನೇಕ ದಿನಗಳವರೆಗೆ ತನ್ನ ಮೋಚಿ ವೃತ್ತಿಯೊಂದಿಗೆ ಬೈಬಲ್ ಅಭ್ಯಸಿಸಲು ತೊಡಗಿ ಅದರಲ್ಲಿ ಸಂಪೂರ್ಣ ಜ್ಞಾನ ಸಂಪಾದಿಸುವ ಹಂಬಲದಿಂದ ಬೈಬಲ್ ಮೂಲ ಭಾಷೆಗಳಾದ ಗ್ರೀಕ, ಹಿಬ್ರೂ, ಲ್ಯಾಟಿನ್ ಭಾಷೆಗಳನ್ನು ಅಭ್ಯಸಿಸ ತೊಡಗಿದನು. ಇವುಗಳೊಂದಿಗೆ ಫ್ರೆಂಚ್ ಹಾಗೂ ಡಚ್ ಭಾಷೆಗಳನ್ನು ಕಲಿತನು.

ತನ್ನ ಇಪ್ಪತ್ತನೇ ವಯಸ್ಸಿನಲ್ಲಿ ಡೊರೋತಿ ಎಂಬವಳನ್ನು ತನ್ನ ಬಾಳ ಸಂಗಾತಿಯಾಗಿ ಪಡೆದನು. ನಂತರದ ದಿನಗಳು ಕೇರಿಗೆ ಬಡತನದ ದಿನಗಳಾಗಿದ್ದವು. ೧೭೮೫ರ ಸುಮಾರಿಗೆ ಮಾಲ್ಟನ್ ಪ್ರದೇಶದ ಬ್ಯಾಪ್ಟಿಸ್ಟ ಚರ್ಚನಲ್ಲಿ ಉಪದೇಶಕ(Lay Paster)ನಾಗಿ ಸೇರಿ ಬೋಧಕ ವೃತ್ತಿಯನ್ನು ಪ್ರಾರಂಭಿಸಿದನು. ಕ್ಯಾಪ್ಟನ್ ಕುಕ್ ವಾಯೇಜ (Captain Cooks Vayages) ಎಂಬ ಸಮುದ್ರಯಾನದ ಪುಸ್ತಕ ಓದಿ ಸಂಘಸಂಸ್ಥೆಗಳ ಕುರಿತು ತತ್ವ-ಸಿದ್ಧಾಂತಗಳನ್ನು ಅರಿತುಕೊಂಡನು. ತತ್ಫಲವಾಗಿ ಬೈಬಲ್ ಪ್ರಗತಿ ಕುರಿತು ಸಂಘವನ್ನು ಸ್ಥಾಪಿಸುವ ಯೋಜನೆಯನ್ನು ಚರ್ಚುಗಳಿಗೆ ತಿಳಿಸಿದ. ತಾನು ಅನೇಕ ದಿನಗಳವರೆಗೆ ಜಗತ್ತಿನ ನಕ್ಷೆಯನ್ನು ಮುಂದಿಟ್ಟುಕೊಂಡು ಮೊಣಕಾಲೂರಿ ಕ್ರಿಸ್ತನ ಪರಿಚಯವಿಲ್ಲದ ದೇಶಗಳ ಕುರಿತು ಕ್ರಿಸ್ತನ ಸಂದೇಶ ಸಾರುವ ಬಗ್ಗೆ ಪ್ರಾರ್ಥಿಸಿದನು. ಕ್ರಿಸ್ತನ ಸಂದೇಶವನ್ನು ಸಾರುವ ಕುರಿತು ಸಂಘ ನಿರ್ಮಾಣ ಮಾಡುವಲ್ಲಿ ಚಿಂತಿಸತೊಡಗಿದನು. *[೧]ಅಪೊಸ್ತಲರೆನಿಸಿಕೊಳ್ಳುವ ದೇವರ ಸೇವಕರಿಗೆ ಮಾತ್ರ ಸಂಸ್ಥೆಗಳ ನಿರ್ವಹಣೆ ಕಾರ್ಯವನ್ನು ಒಪ್ಪಿಸುತ್ತಿದ್ದ ಕಾಲವದು. ವಿಲಿಯ್ ಕೇರಿಗೆ ಇಂತಹ ಜವಾಬ್ದಾರಿಸಿಗುವ ಹಾಗಿರಲ್ಲಿಲ್ಲ. ಆವೇಶಕ್ಕೊಳಗಾಗಿ ತಾನು ಮಾತನಾಡಿದಾಗ ಓರ್ವ ವೃದ್ಧನಿಂದ 'ಏ ಯುವಕನೆ ಕುಳಿತುಕೋ' (Sit down young man) ಎಂದು ಅವಮಾನಕ್ಕೆ ಒಳಗಾಗಬೇಕಾಯಿತು. ನಂತರ ಮತ್ತೊಂದು ಸಾರಿ ಅಸೋಶಿಎಶನ್ ಮಿಟಿಂಗ್‌ನಲ್ಲಿ ಬೈಬಲ್‌ನಲ್ಲಿಯ ಯೇಶಾಯ ಪ್ರವಾದಿ ಬರೆದ ಗ್ರಂಥದ ೫೪ ಅಧ್ಯಾಯದ ೨ ಹಾಗೂ ೩ನೇ ವಚನವನ್ನಾಧರಿಸಿ ಪ್ರಸಂಗಿಸಿದನು. ಆ ವಿಷಯ ಹೀಗಿದೆ Expect great things from God Attempt great things for God."

ವಿಲಿಯಂ ಕೇರಿಯ ಈ ಮಾತಿನ ಪ್ರಭಾವದಿಂದ ಸಂಘದ ಸದಸ್ಯರು ಬಾಪ್ಟಿಸ್ಟ ಮಿಶನರಿ ಸೋಸೈಟಿ (BMS) ಎಂಬ ಹೊಸ ಸಂಸ್ಥೆಯನ್ನು ಸ್ಥಾಪಿಸಲು ತೀರ್ಮಾನಿಸಿದರು. ಮತ್ತು ವಿಲಿಯಂ ಕೇರಿಯನ್ನೇ ಭಾರತಕ್ಕೆ ಕಳುಹಿಸಲು ನಿರ್ಣಯಿಸಿದರು.

೧. 'ಅಪೊಸ್ತಲ' ಎಂದು ಕ್ರಿಸ್ತನ ನೇರ ಶಿಷ್ಯರಿಗೆ(೧೨ ಮಂದಿ) ಮಾತ್ರ ಬಳಸುತ್ತಾರೆ.

ಬಂಗಾಲದಲ್ಲಿ ಬಡಜನರ ಆರೋಗ್ಯ ವಿಚಾರಿಸಿಕೊಳ್ಳುತ್ತಿದ್ದ ಆಧುನಿಕ ಶಸ್ತ್ರ ಚಿಕಿತ್ಸಕನಾಗಿದ್ದ ಇಂಗ್ಲಂಡಿನ ಜಾನ್ ಥಾಮಸ್ಸ ತನ್ನ ಸ್ವದೇಶಕ್ಕೆ ಮರಳುವ ಇಚ್ಛೆಯಲ್ಲಿದ್ದನು. ಈ ಕಾರಣದಿಂದ ಆತನ ಬದಲು ಕೇರಿ ಭಾರತಕ್ಕೆ ಬರುವುದು ನಿಶ್ಚಯವಾಯಿತು. ೧೩ ಜೂನ್ ೧೭೯೩ರಲ್ಲಿ ಕೇರಿ ಹಾಗೂ ಆತನ ಕುಟುಂಬ, ಹಡಗಿನ ಪ್ರಯಾಣ ಕೈಕೊಂಡು ನವೆಂಬರ ೧೯ರಂದು ಭಾರತವನ್ನು ತಲುಪಿದರು. ಪ್ರಯಾಣದುದ್ದಕ್ಕೂ ಬಂಗಾಲ, ಹಿಂದೂಸ್ತಾನಿ, ಪರ್ಶಿಯನ್ ಮರಾಠಿ ಹಾಗೂ ಸಂಸ್ಕೃತಗಳನ್ನು ಅಭ್ಯಸಿಸಿದನು.

ಭಾರತದಲ್ಲಿ ಆತನು ಪ್ರಾರಂಭಿಸಿದ ದಿನಗಳು ಬಹು ಕಠಿಣವಾಗಿದ್ದವು. ಈಸ್ಟ ಇಂಡಿಯಾ ಕಂಪನಿ ಮಿಶನರಿ ಕಾರ್ಯಕ್ಕೆ ಪ್ರೋತ್ಸಾಹಿಸುತ್ತಿರಲಿಲ್ಲ. ಆದುದರಿಂದ ಕಲ್ಕತ್ತಾದಲ್ಲಿ ಇರಬೇಕಾಗಿರುವಾಗ ೧೫ ಮೈಲು ದೂರದಲ್ಲಿರುವ ಸೆರಾಂಪುರದಲ್ಲಿ ಹೋಗಿ ಇರಬೇಕಾಯಿತು. ಆರ್ಥಿಕ ಮುಗ್ಗಟ್ಟು ಹಾಗೂ ಕಲುಷಿತ ವಾತಾವರಣದಿಂದ ಹೆಂಡತಿ ಹಾಗೂ ಮಕ್ಕಳು ಕಾಯಿಲೆಗೆ ತುತ್ತಾದರು. 'ಮಾಲ್ದ' ಎಂಬಲ್ಲಿ ಕೇರಿಯು ಇಂಡಿಗೋ ಫ್ಯಾಕ್ಟರಿಯಲ್ಲಿ ಮ್ಯಾನೇಜರಾಗಿ ಕೆಲಸಕ್ಕೆ ಸೇರಬೇಕಾಯಿತು. ೫ ವರ್ಷದ ಮಗನು ಕಾಯಿಲೆಯಿಂದ ನರಳಿ ತೀರಿಹೋದನು. ಮಗನನ್ನು ಕಳೆದುಕೊಂಡ ತಾಯಿ ಮಾನಸಿಕ ಕಾಯಿಲೆಗೆ ತುತ್ತಾದಳು. ಮುಂದೆ ಈ ಕಾಯಿಲೆಯಿಂದ ಅವಳು ಮುಕ್ತಳಾಗಲೇ ಇಲ್ಲ. ಈ ಸಂದರ್ಭದಲ್ಲಿ ಕೇರಿಯು ತನ್ನ ಗೆಳೆಯನಿಗೆ "I am in a strange land alone. no christian friend, a large family and nothing to supply their wants" ಎಂದು ಪತ್ರ ಬರೆದನು.

ಕಾರ್ಯ ಸಾಧನೆ

ವಿಲಿಯಂ ಕೇರಿ, ತಾನು ಭಾರತಕ್ಕೆ ಬಂದ ಉದ್ದೇಶವನ್ನು ಸದಾ ನೆನಪಿಗೆ ತಂದುಕೊಂಡು ಅನೇಕ ಘಂಟೆಗಳ ಕಾಲ ಬೈಬಲ್ ಭಾಷಾಂತರ ಹಾಗೂ ಬೋಧನೆಯಲ್ಲಿ ಕಳೆಯ ತೊಡಗಿದನು. ಕೇರಿ ಭಾರತಕ್ಕೆ ಬಂದು ೫ ವರ್ಷಗಳ ನಂತರ ಅಂದರೆ ೧೭೯೯ ರಲ್ಲಿ ಅಮೆರಿಕನ್ ಹಡಗು ಒಂದರಲ್ಲಿ ಮತ್ತೆ ನಾಲ್ಕು ಕುಟುಂಬಗಳು ಹೂಗಳಿ ನದಿಗೆ ಬಂದು ಮುಟ್ಟಿದವು. ಈ ಕುಟುಂಬಗಳ ಸಂದಸ್ಯರು ಕಂಪನಿಯ ಅಪ್ಪಣೆಯನ್ನು ಪಡೆದುಕೊಳ್ಳದೆ ಇಲ್ಲಿಗೆ ಬಂದದ್ದರಿಂದ ಅವರು ನೇರವಾಗಿ ಕಲ್ಕತ್ತೆಗೆ ಹೋಗದೆ ಸೆರಾಂಪೂರಿಗೆ ಬಂದರು. ಅಲ್ಲಿನ ಡೇನಿಷ್ ರಾಜ್ಯಪಾಲನು (ಗವ್ಹರ್ನರ್) ಹಿಂದೆ ತ್ರಾಂಕ್ವೆಬಾರನಲ್ಲಿ ಇದ್ದವನೂ ಶ್ಯಾಟ್ಸ '(Schwarti) ನನ್ನು ಬಲ್ಲವನೂ ಆಗಿದ್ದುದರಿಂದ ತನ್ನ ಬಳಿಗೆ ಬಂದ ಆ ಮಿಶನರಿಗಳನ್ನು ಆದರದಿಂದ ಸ್ವೀಕರಿಸಿದುದಲ್ಲದೆ ಅವರನ್ನು ಹೊರಗೆ ತಳ್ಳಲು ಯತ್ನಿಸಿದ ಬ್ರಿಟೀಷ್ ಅಧಿಕಾರಿಗಳ ಕೈಯಿಂದ ಅವರನ್ನು ತಪ್ಪಿಸಿದನು."[೧] ಮುಂದೆ ನಿಶ್ಚಿಂತೆಯಿಂದ ಈ ಕುಟುಂಬಗಳು

---

೧. ಭಾರತೀಯ ಕ್ರೈಸ್ತ ಸಭಾ ಚರಿತ್ರೆಯ ಪ್ರವೇಶಿಕೆ, ಎಸ್.ವಿ.ಮಾರಾ, ಪು.೨೨೪

ಬಾಳತೊಡಗಿದವು. ೧೮೦೦ರಲ್ಲಿ ಕೇರಿ ಇವರೊಂದಿಗೆ ಸೇರಿಕೊಂಡಾಗ ಸೆರಾಂಪುರ ಭಾರತದಲ್ಲಿ ಬ್ಯಾಪ್ಟಿಸ್ಟ ಮಿಶನ್ನಿನ ಕಾರ್ಯಕ್ಷೇತ್ರವಾಗಿ ಪರಿಣಮಿಸಿತು. ಜೋಶುವ ಮಾರ್ಷಮನ್ (೧೭೬೮-೧೮೩೭) ಶಾಲಾ ಶಿಕ್ಷಕ ಹಾಗೂ ವಿಲಿಯ್ ವಾರ್ಡ (೧೭೬೯-೧೮೨೩) ಮುದ್ರಣ ಕಲೆಯ ಜ್ಞಾನವನ್ನು ಹೊಂದಿದ ವ್ಯಕ್ತಿ ಇವರುಗಳು ವಿಲಿಯಂ ಕೇರಿಯೊಂದಿಗೆ ಕೂಡಿ ಭಾಷಾಂತರ ಪರಂಪರೆಯ ಇತಿಹಾಸವನ್ನು ಸೃಷ್ಟಿಸಿದರು.

೧೯ನೇ ಶತಮಾನದ ಬ್ರಿಟೀಷ್ ಹಾಗೂ ಫಾರೆನ್ ಬೈಬಲ್ ಸೊಸೈಟಿಗಳು ಕಲ್ಕತ್ತದಲ್ಲಿ ಅಸ್ತಿತ್ವದಲ್ಲಿದ್ದು ಬೇರೆ ಬೇರೆಯಾಗಿ ಅನುವಾದ ಕಾರ್ಯದಲ್ಲಿ ಮುದ್ರಣಾಲಯಗಳನ್ನು ಹೊಂದಿದ್ದವು. ಲಾರ್ಡ ವೆಸ್ಲಿಯಿಂದ ಸ್ಥಾಪಿತಗೊಂಡ ಪೋರ್ಟ ವಿಲಿಯಂ ಕಾಲೇಜಿನಲ್ಲಿ ವಿಲಿಯಂ ಕೇರಿ ಬಂಗಾಲಿ, ಸಂಸ್ಕೃತ ಮತ್ತು ಮರಾಠಿ ಪ್ರೊಫೆಸರನಾಗಿ ಸೇವೆಸಲ್ಲಿಸಲು ಪ್ರಾರಂಭಿಸಿದ್ದನು. ಈತನಿಗೆ ೨೮ ರಿಂದ ೩೩ ಭಾಷೆಗಳು ತಿಳಿದಿದ್ದವೆಂಬ ಐತಿಹ್ಯವಿದೆ. ಏನೇ ಆದರೂ ಇವನೊಬ್ಬ ಪ್ರಬಲವಾದ ಭಾಷಾ ಶಾಸ್ತ್ರಜ್ಞನೆಂಬುದು ಸರ್ವವಿದಿತ. ಮುಂದೆ ಕೇರಿಯ ಪರಿಶ್ರಮದ ಫಲದಿಂದ ಪೊರ್ಟ ವಿಲಿಯಂ ಕಾಲೇಜಿನಲ್ಲಿ ಭಾಷಾಂತರ ಶಾಖೆ ಪ್ರಾರಂಭವಾಯಿತು. ಮೊದಲು ಪಾಶ್ಚಾತ್ಯ ಶಿಕ್ಷಣ ಹಾಗೂ ವಿಜ್ಞಾನದ ಮಾಹಿತಿಗಾಗಿ ಹಾಗೂ ಯುವಕ ಇಂಗ್ಲೀಷ ಕೆಡೆಟ್‌ಗಳಿಗೆ ಭಾರತೀಯ ಭಾಷಾಜ್ಞಾನ ನೀಡಲು ರೇ ಡೇವಿಡ್ ಬ್ರೌನ್ ೧೭೮೬ ರಿಂದ ಭಾಷಾಂತರ ಕಾರ್ಯದಲ್ಲಿ ನಿರತನಾಗಿದ್ದನು. ಆಗ ಭಾಷಾಂತರ ಕಾರ್ಯಕ್ಕೆ ಸಹಾಯ ನೀಡಲು ದೇಶಿಯ ಅನೇಕ ಪಂಡಿತರು ನಿಯೋಜಿತ ಹಣದ ಮೇಲೆ ಆಕರ್ಷಿಸಲ್ಪಟ್ಟಿದ್ದರು.

"೧೮೦೧ ರ ಮಾರ್ಚ ತಿಂಗಳಿನಲ್ಲಿ ಬಂಗಾಲ ಭಾಷೆಯಲ್ಲಿ ಬೈಬಲ್ ಎರಡನೆ ಭಾಗ ಹೊಸ ಒಡಂಬಡಿಕೆಯು ಪ್ರಕಟಗೊಂಡಿತು. ಇದು ಮುಂದೆ ಭಾರತೀಯ ೩೪ ಭಾಷೆಗಳಲ್ಲಿ ಪ್ರಕಟಗೊಂಡ ಬಗ್ಗೆ ತಿಳಿದು ಬರುತ್ತದೆ."[೧] ಇದರಲ್ಲಿ ಪೂರ್ಣ ಹಾಗೂ ೨೫ ಖಂಡ-ಖಂಡವಾಗಿ ಮುದ್ರಣಗೊಂಡವು.

ವಿಲಿಯಂ ಕೇರಿಯು ಬೈಬಲ್‌ನ್ನು ಕನ್ನಡದಲ್ಲಿ ನೀಡಬೇಕೆಂಬ ಆಕಾಂಕ್ಷೆಯಿಂದ ಕಾರ್ಯದಲ್ಲಿ ತೊಡಗಿದನು. ಆಗ ಸೆರಾಂಪುರನಲ್ಲಿ ಕೇರಿ ಜೊತೆಗೆ ದೇಶಿಯ ಪಂಡಿತರಾದ ಭಾರತ ರಮಣ ಮತ್ತು ಸುಬ್ಬರಾವ್ ಹಾಗೂ ಮನೋಹರನೆಂಬುವರು ಕನ್ನಡ ವಿಷಯಕ್ಕೆ ಭಾಷಾಂತರಕ್ಕಾಗಿ ಸಹಾಯಿಸುತ್ತಿದ್ದರೆಂದು ತಿಳಿದುಬರುವುದು.[೨] ೧೮೦೯ ರಲ್ಲಿ ವಿಲಿಯಂ ಕೇರಿ ಹೊಸ ಒಡಂಬಡಿಕೆಯನ್ನು ಕನ್ನಡಕ್ಕೆ ಭಾಷಾಂತರಿಸಿ ಮುದ್ರಣಕ್ಕಾಗಿ ಸಿದ್ಧಪಡಿಸಿದನು. ಅದು ಮುದ್ರಣಗೊಳ್ಳುವ ಮೊದಲೆ ನಾಶವಾಯಿತು. ಕಾರಣ ೧೮೧೨ ರಲ್ಲಿ ಮುದ್ರಣಾಲಯಕ್ಕೆ ಬೆಂಕಿ ತಗುಲಿ ಶಬ್ದಕೋಶ ಭಾಷಾಂತರಗೊಂಡ ಪ್ರತಿಗಳು ಸುಟ್ಟುಹೊದವು. ನಂತರದ ಕೇರಿ ೧೮೨೩ ರಲ್ಲಿ ಪುನಃ ತರ್ಜುಮೆಗೊಳಿಸಿ ಮುದ್ರಿಸಲು ಯಶಸ್ವಿಯಾದನು.

---

೧. B.T.I.I.P & Ccylan, J.S.M.Hooper, Pp.90

೨. Calcutta Review Mysore, 1942, P.Sen, Pp.163

ವಿಲಿಯಂ ಕೇರಿ ಕನ್ನಡದಲ್ಲಿ ಬೈಬಲ್ ಭಾಷಾಂತರಿಸಿದನೆಂದು ಶ್ರೀನಿವಾಸ ಹಾವನೂರವರು ತಿಳಿಸಿರುವರು.[೧] ಇದನ್ನು ಪರಿಶೀಲಿಸಿದ ಎಡ್ವರ್ಡ ನೊರೋನರವರು 'ಕನ್ನಡದಲ್ಲಿ ಬೈಬಲ್ ಅನುವಾದಗಳು' ಎಂಬ ಪುಸ್ತಕದಲ್ಲಿ ವಿಲಿಯಂ ಕೇರಿ ಬೈಬಲಿನ ಹೊಸ ಒಡಂಬಡಿಕೆಯ ಕನ್ನಡ ಅನುವಾದದಲ್ಲಿ ಮೊತ್ತಮೊದಲನೆಯದನ್ನು ಮಾಡಿದನು."[೨] ಎಂದಿದ್ದಾರೆ. ೧೮೦೧ ರಿಂದ ೧೮೦೫ ರವರೆಗೆ ಪರ್ಶನ್ ಹಿಂದೂಸ್ಥಾನಿ, ಮಲೆಶಿಯಾ, ಒರಿಯಾ, ಮರಾಠಿ ಭಾಷೆಗಳಲ್ಲಿ ಹೊಸ ಒಡಂಬಡಿಕಂ ಅನುವಾದ ಕಾರ್ಯ ಕೇರಿಯ ನೇತೃತ್ವದಲ್ಲಿಯೇ ಸಾಗಿ ಬಂದಿದೆ. ಕನ್ನಡ ಭಾಷಾಂತರಕ್ಕೆ ಸಂಬಂಧಿಸಿದಂತೆ ಕೇರಿ, ಶ್ರೀನಿವಾಸ ಹಾವನೂರರ ಅಭಿಪ್ರಾಯದಂತೆ ಸಂಪೂರ್ಣ ಬೈಬಲ್ ಭಾಷಾಂತರಗೊಳ್ಳಲಿಲ್ಲ. ಹಾಗೂ ಎಡ್ವರ್ಡ ನೊರೋನಾರಂತೆ ಕೇವಲ ಒಂದನ್ನು ಮಾಡಿದನೆಂಬುವಲ್ಲಿ ಅಷ್ಟು ಸಮಂಜಸತೆ ಕಂಡುಬರುವುದಿಲ್ಲ. ಬೈಬಲ್ ಎರಡನೇ ಭಾಗದಲ್ಲಿ ಒಟ್ಟು ೨೭ ಒಳ ಪುಸ್ತಕಗಳಿವೆ. ಇವುಗಳಲ್ಲಿ ಒಂದನ್ನು ಮಾತ್ರ ಮಾಡಿರದೆ ಹೊಸ ಒಡಂಬಡಿಕೆಯನ್ನು ೧೮೦೯ರಲ್ಲಿ ಸಿದ್ದಗೊಳಿಸಿ ಮುದ್ರಣಾಲಯದಲ್ಲಿ ಪ್ರಕಟಣೆಗೆ ಸಿದ್ದಗೊಳಿಸ ಬೇಕೆನ್ನುವುದರಲ್ಲಿ ತತ್ತ್ಯವಿದೆ. ಪಾಶ್ಚಾತ್ಯರ ಬೈಬಲ್ ಭಾಷಾಂತರ ಕಾರ್ಯದ ಪದ್ಧತಿ ಏನೆಂದರೆ "ಮೊದಲ ನಾಲ್ಕು ಸುವಾರ್ತೆ (Gospel) ಗಳನ್ನು ಪ್ರಕಟಿಸುವುದು ಕ್ರಮ. ಅನಂತರದ ಪತ್ರಿಕೆಗಳು ಮತ್ತು ಕೊನೆ ಪುಸ್ತಕ ಪ್ರಕಟಣೆ ಗ್ರಂಥ"[೩] ಈ ಆಧಾರದ ಮೇಲೆ ಮೊದಲ ಒಂದನ್ನು ಕೇರಿ ಮಾಡಿದನೆಂಬುದು ಎಡ್ವರ್ಡ ನೊರೋನಾರವರ ಅಭಿಪ್ರಾಯ. ಆದರೆ ಕನ್ನಡ ಬೈಬಲ್ ಭಾಷಾಂತರಿಸುವ ಪೂರ್ವದಲ್ಲಿ ವಿಲಿಯಂಕೇರಿ ಅನೇಕ ಭಾಷೆಗಳ ಆವೃತ್ತಿಯನ್ನು ಮಾಡಿ ಒಮ್ಮೆ ಮುದ್ರಿಸುವಲ್ಲಿ ಸಂಪೂರ್ಣ ಎರಡನೆ ಭಾಗವನ್ನು ಸಿದ್ಧಗೊಳಿಸುವ ಕ್ರಮದಲ್ಲಿ ಇದ್ದನು. ೧೮೦೬ರಲ್ಲಿ ಸಂಸ್ಕೃತ ಹೊಸ ಒಡಂಬಡಿಕೆ ಸಿದ್ದಗೊಂಡು ೧೮೦೮ರಲ್ಲಿ ಮುದ್ರಣಗೊಂಡಿತ್ತು"[೪] ಕನ್ನಡ ಭಾಷಾಂತರ ವಿಲಿಯಂ ಕೇರಿಗೆ ಒಂದು ಬಗೆಯಲ್ಲಿ ಸರಳವೆನಿಸಿರಲಿಕ್ಕೆ ಸಾಕು! ಏನೇ ಆದರೂ "ಕನ್ನಡ ಮುದ್ರಣದ ಮೊದಲ ಬಿತ್ತನೆಯು ಕರ್ನಾಟಕದಲ್ಲಿ ಆಗದೆ ಭಾರತದ ಇತರ ಪ್ರದೇಶಗಳಲ್ಲಿ ನಡೆದುದು ವಿಚಿತ್ರ ಸನ್ನಿವೇಶವಾಗಿದೆ."[೫]

ವಿಲಿಯಂ ಕೇರಿಯ ಪ್ರಥಮ ಕನ್ನಡ ಬೈಬಲ್ ಭಾಷಾಂತರ ಸಾಹಿತ್ಯಿಕ ಮಟ್ಟದಲ್ಲಿ ಹಾಗೂ ಭಾಷಾ ಪ್ರೌಢಿಮೆಯ ದೃಷ್ಟಿಯಿಂದ ಉತ್ಕೃಷ್ಟವಾದದ್ದಲ್ಲದಿದ್ದರೂ ಅಂದಿನ ಆತನ ಪರಿಶ್ರಮ, ಪ್ರಯತ್ನ, ಪ್ರಶಂಸಾರ್ಹ. ೧೮೧೨ರಲ್ಲಿ ಬಳ್ಳಾರಿಯ ರೆ.ಜಾನ್ ಹ್ಯಾಂಡ್ಸನಿಂದ ಹೊಸ ಒಡಬಂಡಿಕೆ ಕನ್ನಡದಲ್ಲಿ ಮುದ್ರಣಗೊಂಡಾಗ ಕೇರಿಯ ಬೈಬಲ್ ಬಳಕೆ ನಿಂತು ಹೋದಂತೆ ಕಂಡುಬರುತ್ತದೆ.

---

೧. ಹೊ..ಅ.ಶ್ರೀಹಾ, ಪು.೩೫

೨. ಕ.ಬೈ.ಅನುವಾದ ಎಡ್ವರ್ಡ್ ನೊರೋನ, ಪು.೨೮

೩. ಹೊ.ಅ.ಶ್ರೀಹಾ, ಪು.೩೩೬

೪. B.I.I.P & Ceylon J.S.M.Hooper, 1963, Pp.23

೫. ಹೊ.ಅ.ಶ್ರೀಹಾ, ಪು.೩೫

ವಿಲಿಯಂ ಕೇರಿಯ ಕನ್ನಡ ಸೇವೆಗಿಂತ ಇತರ ಭಾರತೀಯ ಭಾಷೆಗಳಲ್ಲಿ ಆತನ ಸೇವೆ ಮೆಚ್ಚುವಂತಹುದು. ಹಾಗೂ ಸಾಮಾಜಿಕ ಕೊಡುಗೆ ಅಪಾರ. ಅವುಗಳನ್ನು ಹೀಗೆ ನೋಡಬಹುದು"[3]

೧. ೧೭೯೫ರಲ್ಲಿ ಸೆರಾಂಪುರದಲ್ಲಿ ಬ್ಯಾಪ್ಟಿಸ್ಟ ಚರ್ಚನ್ನು ಪ್ರಾರಂಭಿಸಿದ.

೨. ಭಾರತದಲ್ಲಿ ಭಾಷಾಂತರದ ಪರಂಪರೆಯನ್ನು ಹುಟ್ಟು ಹಾಕಿದ.

೩. ಭಾರತಕ್ಕೆ ಪ್ರಪಥಮ ಮುದ್ರಣ ಕಲೆಯನ್ನು ಪ್ರಾರಂಭಿಸಿ ಮುದ್ರಣ ಕಲೆಯ ಪಿತಾಮಹನೆನಸಿದ.

೪. ೧೮೨೦ರಲ್ಲಿ ಹಾರ್ಟಿಕಲ್ಚರಲ್ ಹಾಗೂ ಅಗ್ರಿಕಲ್ಚರಲ್ ಸಂಸ್ಥೆಗಳನ್ನು ಪ್ರಾರಂಭಿಸಿದ.

೫. ಪ್ರಥಮವಾಗಿ ಪತ್ರಿಕೆಗಳನ್ನು ಪ್ರಾರಂಭಿಸಿದವನು ಈತನೆ.

೬. ರಾಮಾಯಣ ಹಾಗೂ ಸಂಖ್ಯಾತತ್ವಶಾಸ್ತ್ರವನ್ನು ಇಂಗ್ಲೀಷಿನಲ್ಲಿ ತರ್ಜುಮೆಮಾಡಿದ ಮೊದಲ ಬಿಳೀ ಮನುಷ್ಯನೆಂಬ ಬಿರುದಿಗೆ ಪಾತ್ರನಾಗಿದ್ದಾನೆ.

೭. ಭಾರತೀಯ ಭಾಷೆಗಳಾದ ಬಂಗಾಲಿ, ಸಂಸ್ಕೃತ ಹಾಗೂ ಮರಾಠಿ ಭಾಷೆಗಳಲ್ಲಿ ಬೋಧಿಸಿದ ಪ್ರಥಮ ಹೊರದೇಶೀ ಮನುಷ್ಯ.

೮. ಉಳಿತಾಯ ಬ್ಯಾಂಕ ಯೋಜನೆಯ ಸೃಷ್ಟಿಕರ್ತ (ಭಾರತದಲ್ಲಿ)

೯. ಪ್ರಥಮ ಆಸ್ಪತ್ರೆಯ ಆರಂಭಕಾರ ವಿಲಿಯಂ ಕೇರಿ.

೧೦.ಭಾರತಕ್ಕೆ ಉಗಿ ಬಂಡಿಯ ಪರಿಚಯಕ್ಕೆ ಈತನೆ ಕಾರಣೀಪುರುಷ.

೧೧.ಲಾರ್ಡ ವಿಲಿಯಂ ಬೆಂಟಿಕ್‌ನಿಗೆ ಶಿಶುಹತ್ಯೆ ಸಹಗಮನ ಪದ್ಧತಿ ನಿರ್ಮೂಲನೆಗೆ ಒತ್ತಾಯಿಸಿ ಜಾರಿಗೆ ತಂದವನು.

೧೨. ೧೯ ಹಾಗೂ ೨೦ನೇ ಶತಮಾನದ ಸುಧಾರಣೆಯ ಪಿತಾಮಹನೆನ್ನುವ ಪಾತ್ರಕ್ಕೆ ಬದ್ಧನಾದನು".[೧]

ಹೀಗೆ ಮುಂತಾದ ಸುಧಾರಣಗಳನ್ನು ಕೈಕೊಂಡ ವಿಲಿಯಂ ಕೇರಿಗೆ ಕೃತಜ್ಞತೆ ಸಲ್ಲಿಸಲು ಭಾರತ ಸರಕಾರ ೧೯೯೩ರಲ್ಲಿ ಆತನ ಭಾವ ಚಿತ್ರವಿರುವ ಒಂದು ಅಂಚೆಚೀಟಿ (ರೂ. ೬.೦೦) ಯನ್ನು ಬಿಡುಗಡೆ ಮಾಡಿತು.

ವಿಲಿಯಂ ಕೇರಿ ತನ್ನ ೭೨ನೇ ವಯಸ್ಸಿನಲ್ಲಿ ಬಂಗಾಲಿ ಬೈಬಲ್ (೮ನೇ ಪರಿಷ್ಕೃತ)ಮುದ್ರಿಸುವ ಸಮಯದಲ್ಲಿ ಹೀಗೆಂದು ಉದ್ಗಾರತೆಗೆದನು ನನ್ನ ಕೆಲಸ ಮುಗಿಯಿತು. ಇನ್ನೇನು ಹೆಚ್ಚಿನದನ್ನು ನಾನು ಮಾಡಲಾರೆ. ಆದರೆ ದೇವರ ಕರೆಗಾಗಿ ನಾನು ಕಾಯುತ್ತಿರುವೆ. ಹೀಗೆ ಹೇಳಿ ಮುಂದಿನ ಮೂರು ವರ್ಷ.

೧. Sowing circle Vol.8, No.1, 1993, Pp.

ಅಂದರೆ ೧೮೩೪ರಲ್ಲಿ ಕೊನೆ ಉಸಿರೆಳೆದನು. ಆತನ ಅಂತಿಮ ಸಂಸ್ಕಾರವನ್ನು ನಮ್ಮ ದೇಶದಲ್ಲಿಯೇ (ಸೆರಾಂಪುರ) ಮಾಡಲಾಯಿತು. ವಿಲಿಯಂ ಕೇರಿ ಒಟ್ಟು ೪೧ ವರ್ಷಗಳನ್ನು ಭಾರತದಲ್ಲಿದ್ದುಕೊಂಡು ಇಲ್ಲಿನ ಏಳ್ಗೆಗಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟಿರುವುದನ್ನು ತುಂಬುಹೃದಯದಿಂದ ಸ್ಮರಿಸಬಹುದು. In sprite of all his success. cary remained a humbale man of simple piety. once he said to a friend when I am going say nothing about carry speek about cary's savioar (jesus)

೨. ರೆ. ಜಾನ್ ಹ್ಯಾಂಡ್ಸ

೧೮೦೯ನೇ ಇಸವಿ ನವೆಂಬರ್ ತಿಂಗಳಿನಲ್ಲಿ ಹಡಗ ಪ್ರಯಾಣ ಮಾಡುತ್ತಾ ಫೆಬ್ರವರಿ ೫, ೧೮೧೦ ರಂದು ಜಾನ್‌ಹ್ಯಾಂಡ್ಸ್ ಮದ್ರಾಸ ಪಟ್ಟಣ ತಲುಪಿದನು. ಆಗ ಈಸ್ಟ ಇಂಡಿಯಾ ಕಂಪನಿಯ ಅನುಮತಿ ಇಲ್ಲದೆ ಭಾರತಕ್ಕೆ ಬಂದುದರಿಂದ ಗವರ್ನರ್ ಜಾರ್ಜ ಬಾರ್ಲೊ ಕೂಡಲೆ ಇಂಗ್ಲಂಡಿಗೆ ಮರಳುವಂತೆ ಹ್ಯಾಂಡ್ಸನಿಗೆ ಆದೇಶವಿತ್ತನು. ಎಂ ಥಾಮಸ್ ಎಂಬ ಧರ್ಮಗುರು ಹ್ಯಾಂಡ್ಸ ಪರವಾಗಿ ವಿನಂತಿಸಿ ಭಾರತ ದೇಶದಲ್ಲಿಯೇ ಉಳಿಯುವಂತೆ ಮಾಡಿದರು. "ಅನಂತರ ಬೆಂಗಳೂರಿನಲ್ಲಿಳಿದು ಕನ್ನಡದ ದೀಕ್ಷೆ ಕೈಕೊಂಡು ಕರ್ನಾಟಕದ ಕೆಲವೆಡೆ ಸಂಚರಿಸಿ ಕಡೆಗೆ ಬಳ್ಳಾರಿಯಲ್ಲಿ ನೆಲೆಸಿದನು."[೧] ಹೀಗೆ ಲಂಡನ್ ಮಿಶನ್ ಸೊಸೈಟಿಯಿಂದ ಆಗಮಿಸಿದ ರೆ, ಜಾನ್ ಹ್ಯಾಂಡ್ಸ ಅದೇ ವರ್ಷ ಮೇ ೫ ರಿಂದ ಬಳ್ಳಾರಿಯನ್ನೇ ತನ್ನ ಕಾರ್ಯಕ್ಷೇತ್ರವಾಗಿ ಮಾಡಿಕೊಂಡು, ಸುಮಾರು ೨೫ ವರ್ಷಕಾಲ ಕನ್ನಡ ಸಾಹಿತ್ಯ ಲೋಕಕ್ಕೆ ಅಪಾರ ಸೇವೆ ಸಲ್ಲಿಸಿರುವನು.

ಕರ್ನಾಟಕದ ಜನತೆಗೆ ಕನ್ನಡದಲ್ಲಿ ಬೈಬಲ್ ಒದಗಿಸಬೇಕೆಂಬ ಕುತೂಹಲ ಇದ್ದುದರಿಂದ, ಕನ್ನಡ ಕಲಿಯಲು ಒಬ್ಬ ಬ್ರಾಹ್ಮಣ ಪಂಡಿತನನ್ನು ನೇಮಿಸಿಕೊಂಡನು. ಆಗಲೇ ಕನ್ನಡ ವ್ಯಾಕರಣ ಹಾಗೂ ಕನ್ನಡ ಭಾಷಾ ನಿಘಂಟನ್ನು ರಚಿಸಲು ಉದ್ಯುಕ್ತನಾದಂತಿದೆ. ಈತನೇ ಆದ್ಯ ಮಿಶನರಿಯಾಗಿದ್ದರಿಂದ ಈತನಿಗೆ ಕನ್ನಡ ಕಲಿಯಲು ಸಹಾಯ ಒದಗಿಸಬಲ್ಲ ಯಾವ ಪುಸ್ತಕವು ಇದ್ದಂತೆ ಕಾಣುವುದಿಲ್ಲ ಬಳ್ಳಾರಿಗೆ ಬಂದು ಒಂದು ವರ್ಷದೊಳಗಾಗಿ ವ್ಯಾಕರಣ ಹಾಗೂ ಕನ್ನಡ ಭಾಷಾ ನಿಘಂಟನ್ನು ರಚಿಸಿದನು."[೨]

೧೭೮೦ ನೇ ಇಸವಿ ಡಿಸೆಂಬರ್ ೫ ರಂದು ಇಂಗ್ಲಂಡ ನಾರ್ತ ಹೆಂಪ್ಟನ್ ಪಟ್ಟಣದಲ್ಲಿ ಜನಿಸಿದ ಜಾನ್ ಹ್ಯಾಂಡ್ಸ್‌ನು ವೈದ್ಯಕೀಯ ಸೇವೆ ಅನುಸರಿಸುವವನಾಗಿದ್ದನು. ಆದರೆ ತನ್ನ ೨೯ ನೇ ವಯಸ್ಸಿನಲ್ಲಿ ಲಂಡನ್ ಮಿಶನರಿಯಾಗಿ ಭಾರತಕ್ಕೆ ಕಳುಹಿಸಲ್ಪಟ್ಟಿರುವುದರಿಂದ ಈತನ ಮುಖ್ಯಕಾರ್ಯ ಧರ್ಮಪ್ರಚಾರವೇ ಆಯಿತು." ಹೀಗಾಗಿ "ಬೈಬಲ್ ಅನುವಾದ ಕೆಲಸವನ್ನು ಮಾತ್ರ ಕನ್ನಡ ವಾಕ್ಯ ರಚನೆಯನ್ನು ಕಲಿತ

೧. ಕ.ಬಾ.ಮಿಶನ್ ರೆ.ಜೆ.ಎಸ್.ಜೋಗುಳ, ಪು.೩೭೯

೨. T.K.B.C.Sourvenir, 1865-1965, Pp.54

ದಿನದಿಂದಲೇ ಆರಂಭಿಸಿದನೆನೋ"[೧] ಮೊದಲು ಆತನು ಲೂಕನ ಸುವಾರ್ತೆಯನ್ನು ಭಾಷಾಂತರಿಸಲು ತೊಡಗಿ "೧೮೧೨ ರ ಹೊತ್ತಿಗೆ ಹೊಸ ಒಡಂಬಡಿಕೆಯ ಮೊದಲ ನಾಲ್ಕು ಪುಸ್ತಕಗಳನ್ನು ಭಾಷಾಂತರಿಸಿ ಮುಗಿಸಿದನು."[೨]

ಗೋವಾದಲ್ಲಿಯ ಹೆನ್ರಿ ಮಾರ್ಟಿನ್ (Henry Martyn) ರವರಿಂದ ಪೋರ್ತುಗಿಜ ಪ್ರದೇಶದಲ್ಲಿ ೩೦,೦೦೦ ಜನ ಕನ್ನಡ ಮಾತನಾಡುವವರಿದ್ದಾರೆ. ಅವರಿಗೆ ಕನ್ನಡ ಬೈಬಲ್ ಅವಶ್ಯವಿದೆ ಎಂದು ಕಲ್ಕತ್ತ ಬೈಬಲ್ ಸೊಸೈಟಿಗೆ ತಿಳಿದು ಬಂದಾಗ, ಗೋವೆಯ ಆರ್ಚ ಬಿಷಪ್ಪ ಬೈಬಲ್ ದ್ವಿತೀಯ ಭಾಗ ಹೊಸ ಒಡಂಬಡಿಕೆ ಬೇಡಿಕೆ ಮುಂದಿಟ್ಟರು.[೩] ೧೮೧೯ ರಲ್ಲಿ ಮುದ್ರಣಗೊಳ್ಳಬೇಕಾದ ಕೇರಿಯ ಬೈಬಲ್ (ಹೊ.ಒ) ಬೆಂಕಿಗೆ ಆಹುತಿಯಾಗಿದ್ದರ ಹಿನ್ನಲೆಯಲ್ಲಿ ಆರ್ಚ ಬಿಷಪ್ಪ ಕನ್ನಡ ಜನರಿಗಾಗಿ ಬೈಬಲ್ ಕೇಳಿರಲೂಬಹುದು. ೧೮೧೭ ರಲ್ಲಿ ಸತ್ಯವೇದ ಸಂಘದ ಕಲ್ಕತ್ತಾ ಶಾಖೆಯವರು ಜಾನ್ ಹ್ಯಾಂಡ್ಸ ಎಂಬಾತನು ಒಂದು ಭಾಷಾಂತರವನ್ನು ಮಾಡಿರುವನೆಂದೂ ಅದರ ಒಂದು ಭಾಗವು ಮುದ್ರಿಸಲು ಸಿದ್ಧವಾಗಿರುವುದೆಂದೂ ತಿಳಿದು ಇದನ್ನು ಮುದ್ರಿಸಲು ೧೦೦೦ ರೂ ಮಂಜೂರು ಮಾಡಿದರು.

ಜಾನ್ ಹ್ಯಾಂಡ್ಸ ಬೈಬಲ್ ದ್ವಿತೀಯ ಭಾಗದ ಪ್ರಾರಂಭಿಕ ಪುಸ್ತಕ (Luak) ಮುದ್ರಣಗಳಿಸುವ ಮೊದಲು ತನ್ನ ಮೂರು ಸುವಾರ್ತೆಯ ಅನುವಾದಗಳ ಹಸ್ತಪ್ರತಿಗಳನ್ನು ಸಿದ್ಧಗೊಳಿಸಿದ್ದನು. "ಓರ್ವ ಶಾಲಾ ಮಾಸ್ತರರನ್ನು ಸಂಬಳಕ್ಕೆ ಇಟ್ಟುಕೊಂಡು ಅವನಿಂದ ಪ್ರತಿ ಮಾಡಿಸಿ ಅವನ್ನು ಹಂಚುತ್ತಲಿದ್ದನು"[1] ಮುಂದೆ ಮುದ್ರಣದ ಬೈಬಲ್ ೧೮೧೨ ರಲ್ಲಿ ಹ್ಯಾಂಡ್ಸ ಹೊರತಂದಿದ್ದರೂ ಹೊಸಗನ್ನಡದ ಗದ್ಯ ಹಸ್ತಪ್ರತಿಗಳ ಮೂಲಕ ಜನರ ಮೇಲೆ ಪರಿಣಾಮ ಬೀರಲು ೧೮೧೦ ರಿಂದಲೇ ಪ್ರಾರಂಭಿಸಿರಬಹುದು.

ಕಲ್ಕತ್ತೆಯಲಿದ್ದ ಬೈಬಲ್ ಸೊಸೈಟಿಯವರಿಗೆ ತನ್ನ ಹಸ್ತಪ್ರತಿಯನ್ನು ಕಳಿಸಿ ಅವರ ಆರ್ಥಿಕ ನೆರವನ್ನು ಕೋರಿದನು. ಸೊಸೈಟಿಯವರು ಆತನಿಗೆ "ಒಂದು ಸಾವಿರ ರೂಪಾಯಿಗಳನ್ನು ಕೊಟ್ಟು ಮದ್ರಾಸಿನಲ್ಲಿ ಖಾಸಗಿಯಾಗಿ ಮುದ್ರಿಸಬಹುದೆಂಬ ಸೂಚನೆ ಮಾಡಿದರು. ಆಗ ಮದ್ರಾಸದಲ್ಲಿದ್ದ ಲವಲೆಸ್ ಎಂಬವನ ಸಹಾಯ ಪಡೆದು ಹ್ಯಾಂಡ್ಸನು ಕಮರ್ಶಿಯಲ್ ಪ್ರೆಸ ಎಂಬಲ್ಲಿ ಹೊಸ ಒಡಂಬಡಿಕೆಯ ಪೂರ್ವಾರ್ಧವನ್ನು ಮುದ್ರಿಸಲು ಅಣಿಯಾದನು. ಕ್ರಿ.ಶ ೧೮೨೦ ರಲ್ಲಿ ಮುದ್ರಣ ಮುಗಿದು ಹೊರ ಬಂದ ಈ ಕೃತಿಯು ಸಂಪೂರ್ಣವಾಗಿ ಕನ್ನಡ ಭಾಷೆ ಮತ್ತು ಲಿಪಿಯಲ್ಲಿರುವ ಆದ್ಯ ಮುದ್ರಿತ ಗ್ರಂಥವಾಗಿದೆ."[೪]

---

೧. ಹೊ.ಅ.ಶ್ರೀಹಾ., ಪು.೯೧

೨. Madras Missonary Register Vol-1, Pp.32

೩. B.I.IT.P. & Ceylon, Pp.96

೪. ಹೊ.ಅ.ಶ್ರೀಹಾ., ಪು.೩೭

ಮುದ್ರಣಕ್ಕಾಗಿ ಮದ್ರಾಸಿಗೆ ಅಲೆಯುವುದು ಅಂದಿನ ಕಾಲದಲ್ಲಿ ಸುಲಭಸಾಧ್ಯವಾಗಿರಲಿಲ್ಲ. ಹೀಗಾಗಿ ದಿನಾಂಕ ೧೪.೭.೧೮೨೩ ರಂದು ಲಂಡನ್ನಿನಲ್ಲಿರುವ ತನ್ನ ಕೇಂದ್ರ ಕಚೇರಿಗೆ ಬರೆದ ಪತ್ರದಲ್ಲಿ ಒಂದು ಪ್ರೆಸ್ ಹಾಗೂ ಓರ್ವ ಮುದ್ರಕನನ್ನೂ ಕಳುಹಿಸಬೇಕೆಂದು ಕೇಳಿಕೊಂಡನು.

೧೮೨೨ ರಲ್ಲಿ ಹೊಸ ಒಡಂಬಡಿಕೆಯ ಮೊದಲ ನಾಲ್ಕು ಸುವಾರ್ತೆಗಳನ್ನು ನಂತರದಲ್ಲಿ ಎಫಸ್ಸಿಯನ್ ಮತ್ತು ಪಿಲಿಪ್ಪಿ ಪುಸ್ತಕಗಳು ಕೂಡ ಮುದ್ರಣಗೊಂಡವು. ಇವುಗಳನ್ನೇ ಹ್ಯಾಂಡ್ಸ ೧೮೨೫ ರಲ್ಲಿ ಪುನಃ ಪರಿಷ್ಕರಿಸಿದನು. ಹ್ಯಾಂಡ್ಸನ ದೇಹ ಸ್ಥಿತಿ ಹದಗೆಡುತ್ತಲಿತ್ತು. ಈ ಕಾರಣ ೧೮೨೮ ರಲ್ಲಿ ಅನಾರೋಗ್ಯದ ನಿಮಿತ್ತ ಇಂಗ್ಲಂಡಿಗೆ ಹೋಗಬೇಕಾಯಿತು. ಆ ಸಮಯದಲ್ಲಿ ಆತನಾಡಿದ ಮಾತುಗಳು ಗಮನಾರ್ಹವಾಗಿವೆ.

"ಈ ಕೆಲಸವನ್ನು ಸುಮಾರು ೧೬ ವರ್ಷ ಹಿಂದೆ ಪ್ರಾರಂಭಿಸಿದ್ದು ಪ್ರತಿಯೊಂದು ದಿನ (ಅನಾರೋಗ್ಯದ ದಿನಗಳನ್ನು ಹೊರತುಪಡಿಸಿ)ವನ್ನು ಬಹಳ ಪ್ರಾಮುಖ್ಯವಾಗಿ ಕಳೆದಿದ್ದು ನನ್ನ ಅಮೂಲ್ಯ ಸಮಯ ಹಾಗೂ ಶಕ್ತಿಯನ್ನು ಸರಿಯಾದ ರೀತಿಯಲ್ಲಿ ವ್ಯಯಿಸಿದ್ದೇನೆ. ೭-೮ ಬಾರಿ ಅದನ್ನು ನಕಲು ಮಾಡಿ ಸಿದ್ಧಪಡಿಸಿದ್ದೇನೆ. ಈ ಅನುವಾದವು ಪರಿಣಾಮಕಾರಿಯಾದುದಾಗಿದೆ.[೧]

೧೮೩೧ ರಲ್ಲಿ ಇಂಗ್ಲಂಡಿನಿಂದ ಮರಳಿ ಬಂದ ಹ್ಯಾಂಡ್ಸ ತನ್ನ ನೇತೃತ್ವದಲ್ಲಿ ಕನ್ನಡ ಮುದ್ರಣಕ್ಕೆ ಹೊಸ ಆಯಾಮವನ್ನು ತಂದು ಕೊಟ್ಟನು. ಈತನ ಜೊತೆಗೆ ಪೇಯನ್ ಎಂಬ ಮುದ್ರಕನು ಭಾರತಕ್ಕೆ ಬಂದನು.೧೮೩೭ರ ಸಮಯದಲ್ಲಿ ಬೈಬಲ್‌ನ ಬಹುಭಾಗ ಮುದ್ರಣಕ್ಕೆ ಅಣಿಯಾಯಿತು. ಮದ್ರಾಸ ಆಕ್ಸಲರಿ ಕಮೀಟಿಯವರ ಅವಗಾಹನೆಯಲ್ಲಿ ಮುದ್ರಾಸ ಕಾರ್ಯ ಮುಂದುವರೆಯಿತು.

೧೮೪೫ರಲ್ಲಿ ಹ್ಯಾಂಡ್ಸರವರು ಹಳೆ ಒಡಂಬಡಿಕೆ ಪ್ರಾರಂಭದ ಪುಸ್ತಕ ಆದಿಕಾಂಡ (ಹೊರಡೋಣ) (Genesis)ನ್ನು ಅನುವಾದಿಸುವಾಗ ಹೀಗೆ ಹೇಳಿದ್ದಾರೆ -"I am happy to say; I think it much improved. I greatly rejoice that the Lord is raising up and qualitying so many valuable men to improved and perfect those translation of this holy word"

ನಿಜವಾಗಿಯೂ ಹ್ಯಾಂಡ್ಸರವರ ಸೇವೆ ಶ್ಲಾಘನಿಯ. ಅವರ "ಪ್ರಥಮ ಮುದ್ರಿತ ಬೈಬಲ್ ಕೃತಿ (ಡೆಮಿ) ೫೧೧ ಪುಟಗಳಷ್ಟಿದೆ. ನಂತರದ ಹಳೆ ಒಡಂಬಡಿಕೆ ೧೦೦೦ (ಡೆಮಿ) ಪುಟಗಳು. ೧೮೭೦ ರಲ್ಲಿ ಪ್ರಕಟವಾದ ಭಾಷಾಂತರ ಕೃತಿ ೩೦೦೦ (ಡೆಮಿ) ಪುಟಗಳಲ್ಲಿದೆ"[೨] "ಹ್ಯಾಂಡ್ಸ ಬದುಕಿನ ಅವಲೋಕನದಿಂದ ತೋರಿ ಬರುವ ಅಂಶಗಳೇನೆಂದರೆ ಆತನ ಕಾರ್ಯಶ್ರದ್ಧೆ ಮತ್ತು ಸಹನ ಗುಣ.. ಕರ್ನಾಟಕದಲ್ಲಿ

---

೧. B.I.IT.P. & Ceylon, Pp.97

೨. ಹೊ.ಗ.ಸಾ.ಉದಯಕಾಲ ರಾ.ಯ. ಧಾರವಾಡಕರ ಪು.೬೭

ಪ್ರೊಟೆಸ್ಟೆಂಟ್ ಮತ ಕಾರ್ಯದ ಭದ್ರಬುನಾದಿಯನ್ನು ಹಾಕಿ, ಕನ್ನಡದ ಮುದ್ರಣದ ಸಸಿಯನ್ನು ನೆಟ್ಟವನು ಇವನೇ."[೧]

"ಲಂಡನ್ ಮಿಶನ್ನಿನ ಅನೇಕ ಮಿಶನರಿಗಳು ಇಲ್ಲಿಗೆ ಬಂದಿದ್ದರೂ ಹ್ಯಾಂಡ್ಸನೇ ಅನ್ಯರಿಗೆಲ್ಲ ಮುಖ್ಯಸ್ಥನಾಗಿ ಬಹು ಕಾಲವನ್ನು ಬಳ್ಳಾರಿಯಲ್ಲಿಯೇ ಕಳೆದಿದ್ದನು. ಕ್ರಿ.ಶ ೧೮೨೯ ರಲ್ಲಿ ಈತ ನಿವೃತ್ತನಾಗಿ ಲಂಡನ್ನಿಗೆ ಹಿಂತಿರುಗಿದನು. ಆದರೆ ಭಾರತವು ಇನ್ನೂ ಇವನನ್ನು ಕರೆಯುತ್ತಿದ್ದಿತು. ಕ್ರಿ.ಶ ೧೮೩೨ ರಿಂದ ಲಂಡನ್ ಮಿಶನ್ನಿನ ಮದ್ರಾಸ ವಿಭಾಗದ ಕಾರ್ಯದರ್ಶಿಯಾಗಿ ಕೆಲವು ಕಾಲ ಸೇವೆ ಸಲ್ಲಿಸಿ ೧೮೩೯ ರಲ್ಲಿ ಸ್ವದೇಶಕ್ಕೆ ಹಿಂತಿರುಗಿದರು."[೨]

ಆದರೂ ಕರ್ನಾಟಕ ವ್ಯಾಮೋಹ ಆತನನ್ನು ಬಿಟ್ಟಿರಲಿಲ್ಲ. ಅಗತ್ಯ ಬಿದ್ದರೆ ತಾನು ಮಿಶನರಿಯಾಗಿ ಹೋಗಲು ಸಿದ್ದನೆಂದು ತಿಳಿಸಿದ್ದನು. ಹೀಗಾಗಿ ಕೇಂದ್ರದವರು ಬೆಂಗಳೂರಿಗೆ ಬೇರೊಂದು ಕೆಲಸಕ್ಕಾಗಿ ಕಳುಹಿಸಿ ಕೊಟ್ಟರು. ಹ್ಯಾಂಡ್ಸ ಆ ಕಾರ್ಯವನ್ನು ಮುಗಿಸಿ ೧೮೪೧ ಕ್ಕೆ ಮತ್ತೆ ಸ್ವದೇಶಕ್ಕೆ ಮರಳಿದನು.

ಚರಿತ್ರೆಕಾರರಾದ ರಿಚರ್ಡ ಲೊವೆಟ್‌ರು ಹ್ಯಾಂಡ್ಸ ವಿಚಾರವಾಗಿ ಹೀಗೆ ಬರೆದಿರುವರು. "ಬಳ್ಳಾರಿ ಮಿಶನ್ನಿಗೆ ನಿರಂತರವಾದ ಮತ್ತು ಬಲವಾದ ಅಸ್ತಿವಾರ ಹಾಕಿದ ಜಾನ್ ಹ್ಯಾಂಡ್ಸರವರ ಹೆಸರು ದಕ್ಷಿಣ ಹಿಂದೂಸ್ಥಾನದಲ್ಲಿ ಸೇವೆ ಸಲ್ಲಿಸಿದ್ದ ಎಲ್ಲಾ ಮಿಶನರಿಗಳಲ್ಲಿ ಎದ್ದು ಕಾಣಿಸುವಂಥದ್ದಾಗಿದೆ." ಎಂದಿದ್ದಾರೆ.

೩. ಜಾರ್ಜ ಎಚ್ ವೀಗಲ್ (George. H. Weigle)

ಕ್ರಿ.ಶ ೧೮೧೬ರಲ್ಲಿ ಕ್ರೈಸ್ತಧರ್ಮದ ಪಾದ್ರಿಯ ಮಗನಾಗಿ ಜಿ.ಎಚ್. ವೀಗಲ್ ಜರ್ಮನ್ ದೇಶದ ತ್ಸಲ್ ಎಂಬ ಹಳ್ಳಿಯಲ್ಲಿ ಜನಿಸಿದನು. ತನ್ನ ೧೮ ನೇ ವಯಸ್ಸಿನಲ್ಲಿ ತಂದೆ ತಾಯಿಯನ್ನು ಕಳೆದುಕೊಂಡ ದುರ್ದೈವಿ ಈತ. ಅಂದಿನ ದಿನಗಳಲ್ಲಿ ಪ್ರಸಿದ್ದವಾದ ತಿಬಿಂಜನ್ ವಿಶ್ವವಿದ್ಯಾಲಯದಲ್ಲಿ ವೀಗಲ್ ತನ್ನ ಉನ್ನತ ಶಿಕ್ಷಣ ಪ್ರಾರಂಭಿಸಿದ. ಅಲ್ಲಿ ಅರಬ್ಬಿ ಹಾಗೂ ಸಂಸ್ಕೃತ ವಿಷಯಗಳನ್ನು ಕಲಿತನು.

ಕ್ರೈಸ್ತ ಸಾಹಿತ್ಯದಲ್ಲಿ ವೈಗಲೆ ಅಥವಾ ವೀಗಲ್ ಎನ್ನುವ ವ್ಯಕ್ತಿಯನ್ನು ಅನೇಕರು ಪರಿಚಯಿಸಿದ್ದಾರೆ. ಬಾಶೆಲ್ ಮಿಶನ್ನಿನ ಮಿಶನರಿಗಳಲ್ಲಿ ಇಬ್ಬರು Weigle ಎನ್ನುವ ವ್ಯಕ್ತಿಗಳು ಕಂಡು ಬರುತ್ತಾರೆ. ಆದರೆ ಇನ್ನೂ ಕೆಲವುಕಡೆ ಹಣಿಕಿಗಾದ ಮೂರು ವ್ಯಕ್ತಿಗಳೆನೋ ಎಂಬ ಸಂಶಯ ಬರುವುದು ಸಹಜ. ಪ್ರಮುಖವಾಗಿ ಜಾರ್ಜ. ಎಚ್. ವೀಗಲ್ ಹಾಗೂ ಕ್ರಿಶ್ಚಿಯನ್ ವೈಗಲ್ (Weigle) ಬಿಜಾಪೂರ ಜಿಲ್ಲೆಯ ಗುಳೇದಗುಡ್ಡ ಊರಲ್ಲಿ ಬಹುಕಾಲ ಸೇವೆ ಸಲ್ಲಿಸಿ ಕೊನೆಗೆ ಅಲ್ಲಿಯ ಜನರಿಗಾಗಿ ಪ್ರಾಣಾರ್ಪಣೆ ಗೈದವರು.* (೧೮೬೭-೭೭)

---

೧. ಹೊ.ಅ.ಶ್ರೀಹಾ., ಪು.೬೭

೨. ಅದೇ ಪು.೯೧

೩. ಘನ ಜಾನ್‌ಹ್ಯಾಂಡ್ಸ್, ಸಭಾಪತಿ ಎನ್., ಪು.೯

*ಈಗಲೂ ಚರ್ಚಿಗೆ ಹತ್ತಿಕೊಂಡೆ ಗುಳೇದಗುಡ್ಡದಲ್ಲಿ ಸಮಾಧಿ ಇದೆ.

ಶ್ರೀ ಐ. ಮಾ. ಮುತ್ತಣ್ಣ, ವರದರಾಜ ಹುಯಿಲಗೋಳ, ಶ್ರೀನಿವಾಸ ಹಾವನೂರ, ಎಡ್ವರ್ಡ ನೊರೋನ ಮುಂತಾದವರು ವೀಗಲ್ ಕುರಿತು ಬರೆದಿದ್ದಾರೆ. ಆದರೆ ಧಾರವಾಡದ ಬಾಶೆಲ್ ಮಿಶನ್ನಿನ ಹೆಬಿಕ್ ಮೆಮೋರಿಯಲ್ ಚರ್ಚಿನ ೧೫೦ ನೇ ವರ್ಷದ ಸವಿ ನೆನಪಿಗಾಗಿ ಹೊರತಂದ 'ಕರ್ನಾಟಕದಲ್ಲಿ ಬಾಶೆಲ್ ಮಿಶನ್' ಎಂಬ ಪುಸ್ತಕದಲ್ಲಿ ಶ್ರೀನಿವಾಸ ಹಾವನೂರವರು ವೀಗಲ್‌ನನ್ನು ಕುರಿತು ಲೇಖನದಲ್ಲಿ ಬಳಸಿದ ಹೆಸರು ಗಾಡ್‌ಫ್ರೆ ವೈಗಲ್ (Godfrey Weigle) ಕಾಲ ೧೮೧೬-೧೮೫೫(ಪು.೧೩೫). ಕನ್ನಡದಲ್ಲಿ ಬೈಬಲ್ ಅನುವಾದಗಳು ಎಂಬ ಪುಸ್ತಕದಲ್ಲಿ ಎಡ್ವರ್ಡ ನೊರೋನ ರವರು ಜಿ. ಎಚ್. ವೀಗಲ್ ಎಂದು ಬಳಸಿರುವರು. ಹಾವನೂರವರು ತಮ್ಮ ಸಂಶೋಧನ ಪ್ರಬಂಧದಲ್ಲಿ ಬಳಸಿದ ಹೆಸರನ್ನು ಮೇಲಿನ ಕೃತಿಯಲ್ಲಿ ಏಕೆ ಬದಲಿಸಿದರು ಎಂಬುದನ್ನು ಮನಗಾಣ ಬೇಕಾಗಿದೆ. ಆದರೆ ಈ ವಿಭಿನ್ನ ರೀತಿಯ ಹೆಸರಿನ ವಿವರಣೆ ಒಂದೇ ಆಗಿದೆ. ಬೈಬಲ್ ಪರಿಸ್ಕರಿಸಿದವನು ಕ್ರೈಸ್ತ ಗೀತೆಗಳನ್ನು ಬರೆದವನು ಮೋಗ್ಲಿಂಗ್ ಜೊತೆ ಕೆಲಸ ಮಾಡಿದವನು, ಭಗವದ್ಗೀತೆಯ ಅನುವಾದದಲ್ಲಿ ಜಾನ್ ಗ್ಯಾರೆಟ್‌ನಿಗೆ ಸಹಾಯ ಸಲ್ಲಿಸಿದವನು ಈತನೆ. ಹೀಗಿದ್ದಾಗ ಯಾವ ಹೆಸರು ಸೂಕ್ತ? ಒಬ್ಬ ಲೇಖಕ ಎರಡು ಬಗೆ ಹೆಸರು ಬಳಸಿರುವುದೇ ಇದಕ್ಕೆ ಕಾರಣ. ಹಾವನೂರವರ ಈ ಒಂದು ಲೇಖನ ಒಟ್ಟಾರೆ ಉಳಿದೆಲ್ಲ ಕಡೆ ಜಿ.ಎಚ್.ವೀಗಲ್ ಎಂಬ ಬಳಕೆ ಕಂಡು ಬರುತ್ತದೆ.

"ಜಾರ್ಜ.ಎಚ್. ವೀಗಲ್ ಕಳೆದ ಶತಮಾನದ ಮಧ್ಯಕಾಲದಲ್ಲಿ ಇದ್ದ ಓರ್ವ ಪ್ರಬಲ ಕನ್ನಡ ವಿದ್ವಾಂಸ. ಬಹು ದೊಡ್ಡ ತತ್ವಶಾಸ್ತ್ರಜ್ಞನೂ ಆಗಿದ್ದನು. ಬೈಬಲ್‌ನ್ನು ಕುರಿತು ಹಲವು ಲೇಖನಗಳನ್ನು ಹೊತ್ತಿಗೆ ತನ್ನ ಸ್ವಭಾಷೆಯಾದ ಜರ್ಮನಿಯಲ್ಲಿ ಬರೆಯುತ್ತಿದ್ದನು. ಅವನ ಸಂಸ್ಕೃತ ಜ್ಞಾನವೂ ಅಪಾರವಾಗಿತ್ತು. ಹಿಂದೂ ಶಾಸ್ತ್ರಗ್ರಂಥಗಳನ್ನು ಮೂಲತ ಪಠಿಸಿ ಅವುಗಳನ್ನು ತನ್ನ ಕ್ರೈಸ್ತ ಧರ್ಮದೊಡನೆ ಹೋಲಿಸಿ ಲೇಖನಗಳನ್ನು ಬರೆದವನಾಗಿರುವನು."[೧]

೧೮೪೦ ರಲ್ಲಿ ವೀಗಲ್ ಭಾರತಕ್ಕೆ ಬಂದನು. ಈತನಿಗಿಂತ ನಾಲ್ಕು ವರ್ಷ ಮೊದಲೇ ಬಂದ ರೇ.ಹರ್ಮನ್ ಮೋಗ್ಲಿಂಗ್ ಈತನಿಗೆ ಕನ್ನಡ ಕಲಿಯುವುದರಲ್ಲಿ ಸಹಾಯ ಸಲ್ಲಿಸಿದನು. ಕನ್ನಡ ಕಲಿತ ಬಗ್ಗೆ ಮೋಗ್ಲಿಂಗ್ ಹೀಗೆ ಹೇಳುತ್ತಾನೇ - "When and how he learned canarese in which I did't, and if any missionary excelled him, I cannot tell though we lived day and night together for several days"[೨]

ವಿಲಿಯಂ ಕೇರಿ ಮತ್ತು ಜಾನ್ ಹ್ಯಾಂಡ್ಸ ನಂತರ ಬಂದ ಮಿಶನರಿಗಳು ಪ್ರವಚನ, ಅನುವಾದ, ಮುದ್ರಣ, ಶಿಕ್ಷಣ, ವೃತ್ತಿ ತರಬೇತಿ ಎಂಬವುಗಳಲ್ಲಿ ಆಸಕ್ತಿ ಹಾಗೂ ಪರಿಣತಿಯನ್ನು ಪಡೆಯಲೇ

---

೧. ಪಾ.ವಿ.ಕ.ಸೇವೆ ಐ.ಮಾ.ಮುತ್ತಣ್ಣ, ಪು.೨೭೭-೨೭೮

೨. ಕ.ಬಾ.ಮಿಶನ್, ರ.ಜೆ.ಎನ್.ಜೋಗುಳ, ಪು.೧೩೬

ಬೇಕಾಗಿತ್ತು. ವೀಗಲ್‌ನಿಗೆ ಕನ್ನಡದಲ್ಲಿ ಬಹು ಆಸಕ್ತಿ ಇದ್ದ ಕಾರಣ ಅನುವಾದ ಮತ್ತು ಮುದ್ರಣ ಕಾರ್ಯದಲ್ಲಿ ಪ್ರವೃತ್ತನಾಗಲು ಬಯಸಿ ತಾನೇ ಮುಂಬಯಿಗೆ ಹೋಗಿ ೧೮೪೨ ರಲ್ಲಿ ಮುದ್ರಣ ಯಂತ್ರವನ್ನು ತಂದನು.ಮಂಗಳೂರಿನಲ್ಲಿ ಸ್ಥಾಪಿತಗೊಂಡ ಈ ಮುದ್ರಣಾಲಯ ಮುಂದೆ ಸು. ೬೦ ೭೦ವರ್ಷಗಳ ಕಾಲ ದಕ್ಷಿಣ ಭಾರತದಲ್ಲಿಯೇ ಶ್ರೇಷ್ಠ ಮುದ್ರಣಾಲಯವೆಂದು ಪ್ರಖ್ಯಾತಿಯನ್ನು ಹೊಂದಿರುವುದು ಕಂಡು ಬರುತ್ತದೆ.

ಬೈಬಲ್ ಅನುವಾದ ಕಾರ್ಯದಲ್ಲಿ ವೀಗಲ್‌ನ ಪಾತ್ರ ಪ್ರಮುಖವಾದುದು. ಕೇವಲ ಭಾಷಿಕ ಅನುವಾದವಾಗದೆ ಮೂಲ ಭಾಷೆಯಾದ ಗ್ರೀಕ್ ಹಿಬ್ರೂಗಳಲ್ಲಿಯ ಸ್ವರೂಪ ಹಾಗೂ ಸೂಕ್ತತೆಯತ್ತ ಗಮನ ಹರಿಸುವವನಾಗಿದ್ದು ಭಾಷಾಂತರಿಸುವ ವಿಶೇಷ ಕಲೆಯನ್ನು ಪಡೆದವನಾಗಿದ್ದನು. ಈತನಿಗಿಂತ ಮೊದಲು ನಡೆದಿದ್ದ ಅನುವಾದಗಳಿಗೆ ಒಂದು ಸ್ಪಷ್ಟತೆ ಬರುವಂತೆ ಶ್ರಮವಹಿಸಿದವನು. ಅಲ್ಲದೇ ಬೈಬಲ್ ಕನ್ನಡ ಸಾಹಿತ್ಯದಲ್ಲಿ ಒಂದು ಪ್ರಮುಖ ಗದ್ಯಸಾಹಿತ್ಯವಾಗಿ ಪರಿಣಮಿಸುವಲ್ಲಿ ವೀಗಲ್ ಶ್ರಮಪಟ್ಟಿದ್ದಾನೆ.

"ಕ್ರಿ.ಶ.೧೮೪೦ ರಿಂದ ಬೈಬಲ್ ಭಾಷಾಂತರ ಹಾಗೂ ಆ ಕುರಿತ ಪ್ರಸಂಗಗಳನ್ನು, ಲೇಖನಗಳನ್ನು ಬರೆಯುತ್ತಾ ಇದ್ದು ,೧೮೪೫ ರಲ್ಲಿ ರೆ ಮೋಗ್ಲಿಂಗ್ ಜೊತೆ ಸೇರಿ ಕ್ರೈಸ್ತ ಗೀತೆಗಳು ಎಂಬುದಾಗಿ ಒಂದನೂರು ಹಾಡುಗಳಿಂದ ಕೂಡಿದ ಪುಸ್ತಕವೊಂದನ್ನು ರಚಿಸಿದನು. ಇಂತಹ ಗೀತೆಗಳನ್ನು ಹಲವರು ರಚಿಸಿದರಾದರೂ ಕನ್ನಡದಲ್ಲಿ ಅದಕ್ಕೆ ನಾಂದಿಯನ್ನು ಹಾಕಿದವನು ಜಿ.ಎಚ್. ವೀಗಲ್ ಎಂದೇ ಹೇಳಬೇಕು."[೧]

"ಕ್ರೈಸ್ತ ಸಾಹಿತ್ಯಕ್ಕೆ ಈತನಿಂದ ಸಂದ ಬಹು ದೊಡ್ಡ ಕೊಡುಗೆ ಎಂದರೆ ಬೈಬಲ್ಲಿನ ಕನ್ನಡಾನುವಾದದ ಪರಿಷ್ಕರಣ ಕಾರ್ಯ. ಮದ್ರಾಸ್ ಆಕ್ಸಲರಿ ಬೈಬಲ್ ಸೊಸೈಟಿಯು ೧೮೪೮ ರಲ್ಲಿ ಕರ್ನಾಟಕದ ಎಲ್ಲ ಪ್ರೊಟೆಸ್ಟೆಂಟ್ ಮಿಶನ್ ಸಂಸ್ಥೆಗಳ ಪ್ರತಿನಿದಿಗಳಿರುವ ಒಂದು ಸಮಿತಿಯನ್ನು ರಚಿಸಿ ಕನ್ನಡ ಬೈಬಲ್ಲಿನ ನವೀಕರಣ (Revision)ದ ಕೆಲಸವನ್ನು ಒಪ್ಪಿಸಿತು. ವೆಸ್ಲಿಯನ್ ಲಂಡನ್ ಮಿಶನ್ ಸಂಸ್ಥೆಗಳಿಂದ ಬಂದ ಪ್ರತಿನಿಧಿಗಳಲ್ಲಿ ಕೆಲವರು ಹಿರಿಯ ಮಿಶನರಿಗಳದ್ದಾಗ್ಯೂ ಇದರ ಅಧ್ಯಕ್ಷತೆಯನ್ನು ವಹಿಸಿಕೊಟ್ಟಿದ್ದು ೩೪ ವರ್ಷದ ವೀಗಲ್‌ನಿಗೆ".[೨]

ಬೈಬಲ್ ಅನುವಾದ ಕ್ರಮದಲ್ಲಿ ಮೊದಲಿಗೆ ಹೊಸ ಒಡಂಬಡಿಕೆಯನ್ನು ಮಾತ್ರ ನವೀಕರಿಸುವುದು ಇಲ್ಲವೇ ಅನುವಾದಿಸುವುದು ವಾಡಿಕೆ. ವೀಗಲ್‌ನಿಗೆ ಹೊಸ ಒಡಂಬಡಿಕೆಯ ಪರಿಷ್ಕರಣ ಕಾರ್ಯ ಕೊಡಲಾಗಿತ್ತು. ಇಂತಹ ಅನುವಾದ ಕಾರ್ಯದಲ್ಲಿ ವೈಗಲ್ ಯಾವ ದೇಶಿಯ ಮುನಶಿಯ ಅಥವಾ

೧. ಭಾ.ಸಾ.ಸಂ.ಷಾ.ವಿ.ಸೇವೆ, ೧೯೮೭, ಐ.ಮಾ.ಮುತ್ತಣ್ಣ, ಪು.೨೭೭

೨. ಕ.ಬಾ.ಮಿಶನ್, ರ.ಜೆ.ಎನ್.ಜೋಗುಳ, ಪು.೧೪೦

ಪಂಡಿತರ ಸಹಾಯವಿಲ್ಲದೆ ಸ್ವತಂತ್ರವಾಗಿ ಪೂರೈಸಿದ್ದಾನೆ. ಇದು ಆತನ ಕನ್ನಡ ಭಾಷೆಯ ಪರಿಣತಿಯನ್ನು ಎತ್ತಿ ತೋರಿಸುತ್ತದೆ. ನಂತರದಲ್ಲಿ ವೀಗಲ್‌ನ ಕಾರ್ಯವೈಖರಿಯನ್ನು ಕಂಡ ಸಂಸ್ಥೆ ಬೈಬಲ್ ಎರಡನೇ ಭಾಗದ ಅನುವಾದ ಕಾರ್ಯವನ್ನು ಈತನಿಗೆ ಒಪ್ಪಿಸಿತು. ಕಾರಣ, ವೀಗಲ್ ತನ್ನ ಹೊಸ ಒಡಂಬಡಿಕೆಯ ಪ್ರಕಟಣೆಯ ನಂತರ ಓರ್ವ ಶ್ರೇಷ್ಠ ವ್ಯಕ್ತಿ ಎಂದು ಗೌರವಿಸಲ್ಪಟ್ಟನು. "ಕ್ರಿ.ಶ. ೧೮೫೪ ರಲ್ಲಿ ಕರ್ನಾಟಕದ ಎಲ್ಲಾ ಕನ್ನಡ ಬೈಬಲ್ ಕೃತಿಗಳನ್ನು ಪರೀಷ್ಕರಿಸಲು ಒಂದು ಸಮಿತಿಯನ್ನು ಕೇಂದ್ರ ಕ್ರೈಸ್ತ ಮತ ಪ್ರಚಾರ ಸಂಸ್ಥೆಯವರು ನೇಮಿಸಿದಾಗ ರೆ, ವೀಗಲ್‌ನ ಇವನ ಹೆಸರೇ ಮೊದಲಾಗಿ ಸೂಚಿಸಲಾಗಿತ್ತು. ಆ ಸಮಿತಿಯಲ್ಲಿದ್ದ ಕ್ರೈಸ್ತ ವಿದ್ವಾಂಸರು ವೀಗಲ್‌ನ ಬೈಬಲ್ ಗ್ರಂಥವೇ ಕನ್ನಡದಲ್ಲಿ ಈ ವರೆಗೆ ಬರೆದವುಗಳ ಪೈಕಿ ಸಮರ್ಪಕವಾದುದೆಂದು ಒಪ್ಪಿದರು"[೧] ಈ ಕ್ಷೇತ್ರದಲ್ಲಿ ಈ ಹಿಂದೆ ಕೃಷಿಗೈಯಿದಿದ್ದ ರೆ, ಜಾನ್ ಹ್ಯಾಂಡ್ಸ್, ರೆ, ವಿಲಿಯಂ ಕೇರಿ, ರೆ, ರೀವ್ ಹಾಗೂ ರೆ, ರೀಡ್‌ರವರ ಕನ್ನಡ ಬೈಬಲ್ ಗ್ರಂಥಗಳು ಕ್ರಮೇಣ ಮಹತ್ವ ಕಳೆದುಕೊಂಡವು. ಹೀಗೆ ವೀಗಲ್ ಭಾಷಾಂತರ ಉತ್ತಮ ಗುಣ ಮಟ್ಟವನ್ನು ಹೊಂದಿತ್ತು. ಹೀಗೆ ವೀಗಲ್ ಎರಡನೇ ಭಾಗದ ಭಾಷಾಂತರವನ್ನು ಪ್ರಾರಂಭಿಸಿದನು. "ಅದನ್ನು ಸಂಪೂರ್ಣ ಮಾಡದೇ ಜ್ವರದ ತಾಪದಿಂದ ೧೮೫೫ ರಲ್ಲಿ ಅಸುನೀಗಿದನು. ಕನ್ನಡದ ಗದ್ಯ ಸಾಹಿತ್ಯಕ್ಕಾಗಿ ದುಡಿದ ಒಂದು ಮಿಶನರಿ ಜೀವ ಹೀಗೆ ಕಣ್ಮರೆಯಾಯಿತು. ನಂತರದಲ್ಲಿ ಕಮೀಟಿಯ ಸದಸ್ಯರಾದ ಲಂಡನ್ ಮಿಶನ್ ಸೊಸೈಟಿಯ ಸದಸ್ಯರಾದ ಪಿ. ಕ್ಯಾಂಪಬೆಲ್, ಮತ್ತು ಬಿ. ರೈಸರವರು ಮುಂದುವರೆಸಿದರು".[೨]

"ತತ್ವಜ್ಞಾನದ ಈ ಕ್ರೈಸ್ತ ಗುರುವು ಬಹು ಉಚ್ಚ ಪರಂಪರೆಗೆ ಸೇರಿದ್ದ ಓರ್ವ ದಾರ್ಶನಿಕನಾಗಿದ್ದನು. ಇವನು ಈ ದೇಶದಲ್ಲಿ ಇರುವವರೆಗೂ ಕನ್ನಡದಲ್ಲಿಯೇ ಬೈಬಲನ್ನು ವಿವಿಧ ರೀತಿಯಲ್ಲಿ ಬರೆಯುತ್ತಾ ಕನ್ನಡ ಗದ್ಯ ಶೈಲಿಗೆ ತನ್ನದೆ ಆದ ಒಂದು ಹೊಸ ಮೆರುಗನ್ನು ಕೊಟ್ಟನು"[೩] "೧೮೪೭ ರ ಸುಮಾರಿಗೆ ಲಂಡನ ಮಿಶನ್ನಿನ ಜಾನ್ ಗ್ಯಾರೆಟ್ ಭಗವದ್ಗೀತೆಯ ವಿವಿಧ ಭಾಷಾನುವಾದಗಳುಳ್ಳ, ಹಾಗೂ ವ್ಯಾಖ್ಯೆ ಇರುವ ಆವೃತ್ತಿಯನ್ನು ಹೊರತರ ಬಯಸಿದಾಗ ವೀಗಲ್ ಅವನಿಗೆ ಸಲಹೆ ಇತ್ತುದಲ್ಲದೆ ಗೀತೆಯ ಕನ್ನಡ ಅನುವಾದದ ತಿದ್ದುಗೆಯಲ್ಲಿ ಆಸರೆಯಾಗಿದ್ದಾನೆ" ಜರ್ಮನ್ ಭಾಷೆಯಲ್ಲಿ ಭಗವದ್ಗೀತೆಯನ್ನು ಬರೆದ ಮೇಧಾವಿಕೂಡ ಹೌದು.

"೧೮೪೭ ರಲ್ಲಿ ಜಾನ್ ಬುನಿಯನ್‌ಯ 'ಪಿಲಿಗ್ರಿಮ್ಸ ಪ್ರೊಗ್ರೇಸ್' ಎಂಬ ಇಂಗ್ಲೀಷ ಭಾಷೆಯ ಶ್ರೇಷ್ಠ ಕೃತಿಯ ಮೊದಲ ಸಲ ಕನ್ನಡದಲ್ಲಿ 'ಯಾತ್ರಿಕನ ಸಂಚಾರ' ಎಂಬ ಹೆಸರನ್ನು ಕೊಡಲಾಗಿದೆ. ರೆವರೆಂಡ್ ವೀಗಲ್ ಅವರು ಭಾಷಾಂತರಿಸಿದ ಈ ಯಾತ್ರಿಕನ ಸಂಚಾರದ ಬಗ್ಗೆ ಡಾ. ರಂ.ಶ್ರೀ

---

೧. ಭಾ.ಸಾ.ಸಂ.ಷಾ.ವಿ.ಸೇವೆ, ೧೯೮೭, ಐ.ಮಾ.ಮುತ್ತಣ್ಣ, ಪು.೨೭೯

೨. B.I.IT.P. & Ceylon, J.S.M.Hooper, Pp.99

೩. ಭಾ.ಸಾ.ಸಂ.ಷಾ.ವಿ.ಸೇವೆ, ೧೯೮೭, ಐ.ಮಾ.ಮುತ್ತಣ್ಣ, ಪು.೨೮

ಮುಗಳಿಯವರು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಬರೆಯುತ್ತ ಸುದೀರ್ಘ ಕಥೆ ಅಥವಾ ಕಾದಂಬರಿಯಾಗಿ ಕನ್ನಡದಲ್ಲಿ ಇದೇ ಮೊದಲನೆಯದಾಗಿ ಪರಿಣಮಿಸಿತು ಎಂದು ಅಭಿಪ್ರಾಯ ಪಟ್ಟಿದ್ದಾರೆ."[೧]

ವೀಗಲ್ ಕನ್ನಡಕ್ಕಾಗಿ ಮಾಡಿದ ಒಂದು ಔಚಿತ್ಯ ಪೂರ್ಣ ಕೆಲಸವೆಂದರೆ ZDMG ಪತ್ರಿಕೆಯಲ್ಲಿ (ಜರ್ಮನ್ ಪತ್ರಿಕೆ) ಕನ್ನಡ ಭಾಷೆ ಮತ್ತು ಸಾಹಿತ್ಯಗಳ ಕುರಿತು ಸವಿವರವಾದ ಲೇಖನವನ್ನು ಬರೆದುದು (೧೮೪೬ ಪ್ರಕಟಣೆ ಸಂಪುಟ-೨.೨೫೭-೨೮೪). ಕನ್ನಡ ಭಾಷೆ ಯಾವ ವರ್ಗಕ್ಕೆ ಸೇರಿದುದೆಂಬ ವಿವೇಚನೆ ಮಾಡಿದ ಮೇಲೆ ಅದರ ವ್ಯಾಕರಣ ವಿಷಯಗಳನ್ನು ಸಂಸ್ಕೃತ, ಪ್ರಾಕೃತ ಮತ್ತು ದ್ರಾವಿಡ ಭಾಷೆಗಳೊಡನೆ ಹೋಲಿಸುತ್ತ ವಿವರಣೆ ಕೊಟ್ಟಿದ್ದಾನೆ. ಕನ್ನಡ ಸಾಹಿತ್ಯವೂ ವಿಶಾಲವೂ ಪ್ರೌಢವೂ ಆಗಿದ್ದು ಮಿಶನರಿಗಳಿಗೆ ತಮ್ಮ ಪ್ರಚಾರ ಕಾರ್ಯವಸರದಲ್ಲಿ ಅದನ್ನು ಅಭ್ಯಾಸ ಮಾಡಲು ವೇಳೆ ಸಿಗುತ್ತಿಲ್ಲವೆಂಬ ಕಾರಣದಿಂದ ಅದರ ಸಾಹಿತ್ಯ ಚರಿತ್ರೆಯನ್ನು ತಾನು ಕೊಡುತ್ತಿರುವುದಾಗಿ ಆ ಲೇಖನದಲ್ಲಿ ಹೇಳಿಕೊಂಡಿದ್ದಾನೆ. ಮುಂದೆ ಹಲವಾರು ಕವಿ, ಕೃತಿಗಳ ಉಲ್ಲೇಖ ಮಾಡಿದ್ದಾನೆ. ಕ್ರಿ.ಶ. ೧೮೭೫ ರಲ್ಲಿ ರೆವರೆಂಡ್ ಕಿಟೆಲ್ ಕನ್ನಡ ಸಾಹಿತ್ಯ ಚರಿತ್ರೆಯನ್ನು ಅಧಿಕೃತವಾಗಿ ಬರೆದದ್ದಕ್ಕಿಂತ ಮೂವತ್ತು ವರ್ಷಗಳಷ್ಟು ಹಿಂದೆಯೇ ವೀಗಲ್ ಆ ಕುರಿತು ಆಸ್ಥೆಯನ್ನು ತೋರಿದುದನ್ನು ಗಮನಿಸಬೇಕು"[೨]

೪ ರೆ. ಜಾನ್ ರೀಡ್

ಕರ್ನಾಟಕಕ್ಕೆ ಆದ್ಯ ಮಿಶನರಿಯಾದ ಜಾನ್ ಹ್ಯಾಂಡ್ಸನ ನೇತೃತ್ವದಲ್ಲಿ ವಿಲಿಯಂ ರೀವ್, ಕನ್ನಡ ಸಾಹಿತ್ಯದ ಕಾರ್ಯವನ್ನು ಮಾಡುವಲ್ಲಿ ಸಹಾಯಕರಾಗಿದ್ದರು. ಹಾಗೆಯೇ ಲಂಡನ್ ಮಿಶನ್ ಸೊಸೈಟಿಯ ಮತ್ತೋರ್ವ ಕ್ರೈಸ್ತಗುರು ಡಾನ್ ರೀಡ್ ಕೂಡ ಕನ್ನಡದ ಬೆಳವಣಿಗೆಗೆ ಶ್ರಮಿಸಿದ ಪ್ರಮುಖನು. ಈತನು ಭಾರತಕ್ಕೆ ಬರುವ ಮೊದಲೇ ಕನ್ನಡ ಕಲಿತ ವ್ಯಕ್ತಿಯಾಗಿದ್ದನು.

೧೮೨೮ ರಲ್ಲಿ ಹ್ಯಾಂಡ್ಸ ಸ್ವದೇಶಕ್ಕೆ ಮರಳಿದಾಗ ಜಾನ್‌ರೀಡ್ ಹ್ಯಾಂಡ್ಸನ ಕಾರ್ಯದಲ್ಲಿ ಸಹಾಯ ಸಲ್ಲಿಸುವ ಉದ್ದೇಶದಿಂದ ೧೮೩೦ ರ ಸುಮಾರಿಗೆ ಕನ್ನಡದ ಕಲಿಕೆ ಪ್ರಾರಂಭಿಸಿ ಕೇವಲ ಐದು ವಾರಗಳಲ್ಲಿ ಕನ್ನಡದ ಸಾಧನೆ ತೋರಿಸುವಲ್ಲಿ ಯಶಸ್ವಿಗೊಂಡಿದ್ದಾನೆ. ಈತನ ಕುರಿತು ಹ್ಯಾಂಡ್ಸ ಹೀಗೆ ಬರೆದಿದ್ದಾನೆ.

"ಈ ಅವಧಿಯಲ್ಲಿ ಅವನು ಪಟ್ಟ ಶ್ರಮ ತೋರಿದ ಪ್ರಗತಿ ನನ್ನನ್ನು ಬೆರಗುಗೊಳಿಸಿದುವು. ಅಷ್ಟರೊಳಗೆ ಅವನು ಹೊಸ ಒಡಂಬಡಿಕೆಯ ಕನ್ನಡ ರೂಪವನ್ನು ಸುಲಭವಾಗಿ ಓದಬಲ್ಲವನಾಗಿದ್ದನು, ವ್ಯಾಕರಣದ ತೊಡಕಿನ ಅಂಶಗಳನ್ನು ಅರಿತುಕೊಂಡಿದ್ದು ಇಂಗ್ಲೀಷ್-ಕನ್ನಡ ಕೋಶದಿಂದ ಜನ ಬಳಕೆಯ ಐದಾರು ಸಾವಿರ ಕನ್ನಡ ಶಬ್ಧಗಳನ್ನು ಆಯ್ದು ಕನ್ನಡದಲ್ಲಿ ಬರೆದಿಟ್ಟುಕೊಂಡಿದ್ದನು. ಹಡಗಿನ

---

೧. ಕ್ರೈ.ಕೆ.ಕಾಣಿಕೆ ವ.ಹುಯಿಲಗೋಳ, ಪು.೨೮

೨. ಹೊ.ಅ.ಶ್ರೀಹಾ., ಪು.೧೧೭

ಪ್ರಯಾಣದಲ್ಲಿಯೂ ಕನ್ನಡ ಅಭ್ಯಸಿಸುತ್ತಲೇ ಭಾರತಕ್ಕೆ ಬಂದನು. ನಿಜವಾಗಿಯೂ ಮಿಶನರಿಗಳ ಕನ್ನಡದ ಭಾಷಾ ಅಭ್ಯಾಸದ ಶ್ರದ್ಧೆಗೆ ಇದೊಂದು ನಿದರ್ಶನವಾಗಿದೆ.”[೧]

ಹ್ಯಾಂಡ್ಸ ಮರಳಿ ಭಾರತಕ್ಕೆ ಬಂದಾಗ, ರೀಡ್‌ನೇ ಆ ಕೇಂದ್ರದ ಮುಖ್ಯಸ್ಥನಾಗಿ ಮುಂದುವರೆದಿದ್ದನೆಂದು ತಿಳಿದು ಬರುವುದು.[೨] “೧೮೩೧ ಕ್ಕೆ ಹ್ಯಾಂಡ್ಸ ಇಂಗ್ಲೆಂಡಿನಿಂದ ಮರಳಿ ಬರುವಾಗ ಕನ್ನಡದ ಅಚ್ಚಿನ ಮೊಳೆಗಳನ್ನು ತಂದನು.”[೩] ಅಂದಿನಿಂದ ಮುದ್ರಣ ಕಾರ್ಯವು ಭರದಿಂದ ಸಾಗಿತು. “ಎಫೆಸಿಯನ್ (ಎಫೆಸ್‌ದವರಿಗೆ ಬರೆದ ಪತ್ರಿಕೆ) ಹಾಗೂ (ಪಿಲಪ್ಪಿಯನ್ ಪಿಲಪ್ಪಿ ಸಭೆಯವರಿಗೆ ಬರೆದ ಪತ್ರಿಕೆ) ಎಂಬೆರಡು ಪುಸ್ತಕಗಳನ್ನು ಭಾಷಾಂತರಿಸಲು ರೀಡನು ಹ್ಯಾಂಡ್ಸ ನೊಂದಿಗೆ ಸಹಕರಿಸಿದನು”[೪]

ಈತನು ತೆಲುಗು ಬಲ್ಲವನಾಗಿದ್ದು ಕನ್ನಡ ಮತ್ತು ಇಂಗ್ಲೀಷಿನ ಕೆಲ ಮತ ಪುಸ್ತಕಗಳನ್ನು ತೆಲುಗಿಗೆ ಭಾಷಾಂತರಿಸಿದ್ದಾನೆ “ರೀಡ್ ಬೈಬಲ್ ತತ್ವಗಳನ್ನು ಚನ್ನಾಗಿ ಅರಿತವನಿದ್ದು ಅನುವಾದ ವಿಚಾರದಲ್ಲಿ ಆಳವಾದ ಆಸ್ಥೆವಹಿಸಿದ್ದ”[5]. ಅಂತೆಯೇ ೧೮೩೦ರ ಸುಮಾರಿಗೆ ಬೈಬಲಿನ ಎರಡು ಭಾಗಗಳನ್ನು ಕನ್ನಡಕ್ಕೆ ಅನುವಾದಿಸಿದನು. ಈ ಕಾರ್ಯ ಪ್ರಾರಂಭಿಸುವಾಗ ಅನುದಿನವು ಅತ್ಯಂತ ಭಕ್ತಿ ಭಾವನೆಯಿಂದ ದೇವರಲ್ಲಿ ಪ್ರಾರ್ಥನೆ ಸಲ್ಲಿಸುತ್ತಿದ್ದನಂತೆ. “ಸ್ವತಃ ತಾನು ೩ ಹಾಗೂ ೪ ಬಾರಿ ಪರೀಕ್ಷಿಸಿ ಬೈಬಲನ್ ಮೂಲ ಅರ್ಥವು ಸಮರ್ಪಕವಾಗಿ ಕನ್ನಡದಲ್ಲಿ ವ್ಯಕ್ತವಾಗಿದೆಯೇ ಇಲ್ಲವೆ ಎನ್ನುವುದರ ಬಗ್ಗೆ ಇತರರಿಗೆ ತೋರಿಸಿ ನಂತರ ಮುದ್ರಣಕ್ಕೆ ಕೊಡುತ್ತಿದ್ದನು.”[೫]

“೧೮೩೬ರಲ್ಲಿ C.Rennius ತಮಿಳಿನಲ್ಲಿ ಬರೆದಿದ್ದ ಬೈಬಲ್‌ನ್ನು ರೀಡನು ಕನ್ನಡಕ್ಕೆ ಭಾಷಾಂತರಿಸಿದ್ದಾನೆ. ಇವು ೧೮೪೯ ರ ಸುಮಾರಿಗೆ ಬಳ್ಳಾರಿ ಮುದ್ರಣಾಲಯದಲ್ಲಿಯೇ ಪ್ರಕಟಗೊಂಡಿವೆ. ರೀಡನು ಸಹ ತನ್ನ ಸಮಕಾಲೀನ ಕ್ರೈಸ್ತ ವಿದ್ವಾಂಸರಂತೆ ಸು. ೧೨೦೦ (ಡೆಮ್ಮಿ) ಪುಟಗಳಷ್ಟು ಬೈಬಲ್ ಹೊತ್ತಿಗೆಯನ್ನು ಪ್ರಕಟಿಸಿದ್ದಾನೆ”.[೬] ಬೈಬಲ್ ಅನುವಾದಗಳಷ್ಟೇ ಅಲ್ಲದೆ ಮತ ಪುಸ್ತಕಗಳಾದ ‘Song of Solomon’ Minor Prophats ಮತ್ತು ಕೆಲವು ಕ್ರೈಸ್ತ ಗೀತೆಗಳನ್ನು ರಚಿಸಿದ್ದಾನೆ. “ಇಂಗ್ಲೀಷ ಭಾಷೆಯನ್ನು ಕಲಿಯುವುದಕ್ಕೆ ಸಹಾಯವು ಎಂಬುದು ಈತನ ಒಂದು ವಿಶಿಷ್ಟ ಕೃತಿಯಾಗಿದೆ. ಇದನ್ನು ೧೮೩೫ರಲ್ಲಿ ಕನ್ನಡ ಹಾಗೂ ತೆಲುಗು ಭಾಷೆಯಲ್ಲಿ ಬರೆದಿರುವನು.”[೧] “ಇಂಗ್ಲೀಷ್ ದೊರೆಗಳ ಸಂಗಡ

---

೧. ಹೊ.ಅ.ಶ್ರೀಹಾ., ಪು.೧೧೬

೨. B.T.I.I.P. & Ceylon, J.S.M.Hooper, Pp.98

೩. ಭಾ.ಸಾ.ಸಂ.ಷಾ.ವಿ.ಸೇವೆ, ೧೯೮೬, ಐ.ಮಾ.ಮುತ್ತಣ್ಣ, ಪು.೨೬೪

೪. ಹೊ.ಅ.ಶ್ರೀಹಾ., ಪು.೯೫

೫. ಅದೇ, ಪು.೯೬

೬. ಭಾ.ಸಾ.ಸಂ.ಷಾ.ವಿ.ಸೇವೆ, ೧೯೮೬, ಐ.ಮಾ.ಮುತ್ತಣ್ಣ, ಪು.೨೬೪

ಸಂಪರ್ಕ ಇರುವವರಿಗೆ ಅವರ ಬುದ್ಧಿ ವೃದ್ಧಿಯಾಗುವುದಕ್ಕೂ ಸಹ ಇಂಗ್ಲೀಷ್ ವಿದ್ಯೆಗಳನ್ನು ಶಾಸ್ತ್ರಗಳನ್ನು ಕಲಿಯುವುದಕ್ಕೆ ಇಚ್ಚಿಸುವವರಿಗೂ ಬಹು ಪ್ರಯೋಜನಕಾರಿ ಎಂದು ಈ ಪುಸ್ತಕ ರಚಿಸಿದುದಾಗಿ ಹೇಳಿಕೊಂಡಿದ್ದಾನೆ."[೨] Evidence of the Christion Revelation ಎಂಬ ಕೃತಿಯನ್ನು ಇಂಗ್ಲೀಷ್‌ನಲ್ಲಿ Mundy ಎಂಬವನು ರಚಿಸಿರುವುದನ್ನು ರೀಡನು, ಕನ್ನಡ ತೆಲುಗು ಭಾಷೆಗೆ ಅನುವಾದಿಸಿದ್ದಾನೆ. ತದನಂತರ ಭೂಗೋಲ ವಿಷಯಕ್ಕೆ ಸಂಬಂಧಿಸಿ ಪಠ್ಯ ಪುಸ್ತಕ ರಚನೆಗೂ ಕೈ ಹಾಕಿದ್ದಾನೆ.

ಕನ್ನಡದಲ್ಲಿ ಉತ್ತಮವಾದ ಹೊಸಗನ್ನಡ ಗದ್ಯ ರೂಪುಗೊಳ್ಳುವಲ್ಲಿ ರೆ. ಜಾನ್ ರೀಡನ ಸಹಾಯ ಮರೆಯುವಂತಿಲ್ಲ. ಈತ ಸತತವಾಗಿ ಸಾಹಿತ್ಯ ಸೇವೆಯಲ್ಲಿಯೇ ಮುಂದುವರೆದಿದ್ದರೆ ಕನ್ನಡಕ್ಕೆ ಇನ್ನೂ ಹೆಚ್ಚಿನ ಪುಸ್ತಕಗಳ ಒದಗುವಿಕೆ ಸಂದರ್ಭವಿತ್ತು. ಈತನ ಮೇಲಾಧಿಕಾರಿಗಳಿಗೆ ಭಾಷಾಂತರ ಕಾರ್ಯಕ್ಕಿಂತ ಧರ್ಮ ಬೋಧನೆಯ ಕೆಲಸವೇ ಮುಖ್ಯವಾಗಿದ್ದಿತು. ಈ ಕುರಿತು ಆತನ ದಿನಚರಿಯಲ್ಲಿ ಹೀಗೆ ನೋಡಬಹುದು. "ಮುದ್ರಣ ಕಾರ್ಯದಲ್ಲಿ ನಾನು ಮೊದಲಿಗಿಂತ ಹೆಚ್ಚು ಗಮನಕೊಡುವುದು ಅಗತ್ಯದ್ದಾಗಿದೆ. ನಮ್ಮ ಮಾನ್ಯ ಡೈರೆಕ್ಟರರಿಗೋ ಇದು ಸರಿ ಕಾಣುತ್ತಿಲ್ಲ. ಜರ್ಮನ್ ಮಿಶನ್‌ಗಳನ್ನು ಸ್ಥಾಪಿಸಿದ್ದು ಅವರಿಗೆ ಕನ್ನಡ ಬೈಬಲ್ ಮೊದಲಾದವು ಅಗತ್ಯವಾಗಿ ಬೇಕಾಗಿವೆ. ನಮ್ಮ ಡೈರೆಕ್ಟರ ಜನರು ಇದೇ ಕೆಲಸಕ್ಕೆ ನನ್ನನ್ನು ಪೂರ್ಣವಾಗಿ ಬಿಟ್ಟರೆ ಎಷ್ಟು ಒಳಿತಾಗುವುದು! ಇದು ನಿಜವಾಗಿಯೂ ಮಹತ್ವದ್ದಾಗಿದ್ದು ನಾನು ಈ ದಿಶೆಯಲ್ಲಿ ತಜ್ಞತೆ ಹೊಂದಿದ್ದೇನೆ."[೩]

ರೀಡನಿಗೆ ಗ್ರಂಥೋದ್ಯಮ ಹೆಚ್ಚು ಪ್ರಿಯವಾದಂತೆ ಕಂಡುಬರುತ್ತದೆ. ಆತನೆ ಹೇಳಿದಂತೆ ಧರ್ಮ ಗ್ರಂಥಗಳ ಅನುವಾದ ಕಾರ್ಯವು ನನ್ನ ಪಾಲಿಗೆ ಕೇವಲ ಮಾಮೂಲಿಯ ಕೆಲಸವಾಗಿರಲಿಲ್ಲ. ಬೆಂಗಳೂರಿನಲ್ಲಿ ದೇಶಿಯ ಬೋಧಕರಿಗಾಗಿ ತರಬೇತಿ ಕೇಂದ್ರವನ್ನು ತೆರೆದು ಅದಕ್ಕೆ ರೀಡನೆ ಸಂಚಾಲಕನಾಗಬೇಕೆಂಬ ವದಂತಿ ಇದ್ದಾಗ ತಾನು ಈ ಕರೆಯನ್ನು ನಿರಾಕರಿಸುವುದಾಗಿ ಲಂಡನ್ನಿಗೆ ಖಾಸಗಿ ಪತ್ರ ಬರೆದಿರುವುದು ಕಂಡು ಬರುತ್ತದೆ. "ದೇಶಿಯ ಕ್ರೈಸ್ತ ಗುರುಗಳಾರೂ ಆ ಕಾಲಕ್ಕೆ ಇಷ್ಟು ವಿಸ್ತಾರವಾಗಿ, ವಿವರವಾಗಿ ಮತ್ತು ಉತ್ಕೃಷ್ಟವಾಗಿ ಕನ್ನಡವನ್ನು ಬರೆಯುವ ನೈಪುಣ್ಯತೆಯನ್ನು ತೋರಿಸಿದ್ದೇ ಇಲ್ಲ. ಜಾನ್ ರೀಡನ ಕನ್ನಡ ಬರವಣಿಗೆಯು ವಿಲಿಯಂ ರೀವ್‌ನಂತೆ ಉತ್ತಮವಾಗಿದ್ದು ಭಾಷೆಯು ನಿರರ್ಗಳವಾಗಿ ಹರಿಯುತ್ತಿದ್ದಿತೆಂಬುದು ಅವನ ಬೈಬಲ್ ಗದ್ಯ ಗ್ರಂಥಗಳಿಂದ ತಿಳಿಯುತ್ತದೆ."[೪]

---

೧. ಹೊ.ಅ.ಶ್ರೀಹಾ., ಪು.೧೧೭

೨. Memory of the Rev.J.Reid, Pp.342

೩. ಅದೇ, ಪು.೩೦೪

೪. ಭಾ.ಸಾ.ಸಂ.ಪಾ.ವಿ.ಸೇವೆ, ೧೯೮೭, ಐ.ಮಾ.ಮುತ್ತಣ್ಣ, ಪು.೨೭೪

ಸತತವಾಗಿ ಸು. ೨೦ ವರ್ಷ ಕನ್ನಡ ಅಭಿವೃದ್ಧಿಗಾಗಿ ಶ್ರಮಿಸಿದ ರೀಡನು ಕೊನೆಗೆ ತೀವ್ರತರವಾದ ಕರಳು ಬೇನೆಯಿಂದ ಬಳಲಿ ತನ್ನ ೩೫ ನೇ ವಯಸ್ಸಿನಲ್ಲಿಯೇ ಬಳ್ಳಾರಿಯಲ್ಲಿ ಅಸುನೀಗಿದನು. "ಕನ್ನಡ ಕ್ರೈಸ್ತ ಸಾಹಿತ್ಯ ನಿರ್ಮಿತಿಯಲ್ಲಿ ವಿಶೇಷ ಕಳಕಳಿಯಿಂದ ಶ್ರಮಿಸುತ್ತಿದ್ದ ಒಂದು ಜೀವ ಕಣ್ಮರೆಯಾಯಿತು."[೧]

೫. ವಿಲಿಯಂ ರೀವ್ (WILLIAM REEVE)

"೧೮೧೬ ರಲ್ಲಿ ರೆವರೆಂಡ ವಿಲಿಯಂ ರೀವ್‌ರವರು ಬಳ್ಳಾರಿಗೆ ಜಾನ್ ಹ್ಯಾಂಡ್ಸನ ಕೈಗಳನ್ನು ಬಲಪಡಿಸಲು ಬಂದರು".[೨] "ಈತ ನಿಸ್ಸಂಶಯವಾಗಿ ಭಾಷಾಕೋವಿದನಿದ್ದನು. ಬಳ್ಳಾರಿಯಲ್ಲಿ ನಡೆದಿದ್ದ ಅನುವಾದ ಕಾರ್ಯದಲ್ಲಿ ನೆರವಾಗಬೇಕೆನ್ನುವ ಸ್ಪಷ್ಟ ಉದ್ದೇಶದಿಂದಲೇ ಅವನನ್ನು ಕಳುಹಿಸಲಾಗಿದ್ದಿತು" "೧೮೧೬ ರಿಂದ ಹಳೆ ಒಡಂಬಡಿಕೆಯ ಹಲವು ಭಾಗಗಳನ್ನು ಹ್ಯಾಂಡ್ಸ ಮತ್ತು ಅವನ ಸಹೊದ್ಯೋಗಿ ರೀವ್ ಎಂಬುವನು ಅನುವಾದಿಸಿದರು"[೩] "ಕ್ರಿ.ಶ. ೧೮೨೪ರಲ್ಲಿ ರೆ. ಹ್ಯಾಂಡ್ಸ ಸ್ವದೇಶಕ್ಕೆ ತೆರಳುವ ಮುನ್ನ ರೆ. ರೀವ್‌ರವರು ಅವರ ಜೊತೆಗೂಡಿ ಹಳೆ ಒಡಂಬಡಿಕೆಯ ಅನುವಾದ ಕಾರ್ಯವನ್ನು ಕೈಕೊಂಡರು."

ಈ ಬಗೆಯಲ್ಲಿ ಬೈಬಲ್ ಅನುವಾದಕ್ಕೆ ಕೈ ಹಾಕಿದ ರೀವ್‌ರವರಿಗೆ ಕರ್ನಾಟಕದಲ್ಲಿ ಕನ್ನಡದ ಅಭ್ಯಾಸದ ಸಲುವಾಗಿ ಸಹಾಯ ಮಾಡುವ ಯೋಗ್ಯ ಪಂಡಿತರೇ ಸಿಗಲಿಲ್ಲವಂತೆ. ಮದ್ರಾಸದ ಪೋರ್ಟ ಸೆಂಟ್ ಜಾರ್ಜ್ ಕಾಲೇಜಿನಲ್ಲಿ ಕಾಯದೆಯ ಅಭ್ಯಾಸ ಮಾಡುವ ವಿದ್ಯಾರ್ಥಿ ಕೃಷ್ಣಮಾಚಾರಿ ಇವರಿಗೆ ಕನ್ನಡದ ಪಾಂಡಿತ್ಯ ಬಹು ಚನ್ನಾಗಿತ್ತೆಂದೂ ಅವರೇ ತಮ್ಮ ಶಬ್ದಕೋಶ ಕಾರ್ಯಕ್ಕೆ ಬಹು ವಿಶೇಷವಾಗಿ ನೆರವಾದರೆಂದೂ ರೀವ್ ಹೇಳಿದ್ದಾರೆ. ಈ ಕೃಷ್ಣಮಾಚಾರಿ ಮುಂದೆ (೧೮೮೨ ಕ್ಕಿಂತ ಮೊದಲು) ಒಂದು ಕನ್ನಡ ವ್ಯಾಕರಣವನ್ನು ಬರೆದು ಪ್ರಕಟಿಸಿದ್ದಾರೆ.

ತಿರುಳ್ಗನ್ನಡ ಬಗ್ಗೆಯೂ ರೆ. ರೀವ್ ಅವರು ಕೆಲವು ಮಾತು ಹೇಳಿದ್ದಾರೆ. ಬಳ್ಳಾರಿ ಮತ್ತು ಬೆಂಗಳೂರುಗಳಲ್ಲಿಯ ಕನ್ನಡ ಅಷ್ಟು ಅಚ್ಚಗನ್ನಡವಲ್ಲವಂತೆ. ಏಕೆಂದರೆ ಅವು ಮಿಲಿಟರಿಯ ದೊಡ್ಡ ಕೇಂದ್ರಗಳಿರುವುದರಿಂದ ಅಲ್ಲಿಯ ಕನ್ನಡದಲ್ಲಿ ಬೇರೆ ಭಾಷೆಗಳ ಸಮ್ಮಿಶ್ರಣವಿದೆ. ಆದರೆ ಅದೇ ನಗ್ಗೇರಿ ಮತ್ತು ಹರಪನಹಳ್ಳಿಗಳಲ್ಲಿ ತಿರುಳ್ಗನ್ನಡವನ್ನು ಜನ ಮಾತನಾಡುವರೆಂದೂ ರೆ. ರೀವ್ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಅಂದಿನ ಮಿಶನರಿಗಳು ಕನ್ನಡ ಭಾಷೆಯನ್ನು ತಾವು ತಿಳಿಯಲು ಅಭ್ಯಸಿಸುವುದಲ್ಲದೆ ಅದನ್ನು ಮಾತನಾಡುವ ಜನರಿಗೆ ಮುಂದೆ ಉಪಯುಕ್ತವಾಗಲೆಂದು ಶಬ್ದಕೋಶಗಳ ರಚನೆಗೆ ಹಾಗೂ ವ್ಯಾಕರಣ

---

೧. ಹೊ.ಅ.ಶ್ರೀಹಾ., ಪು.೯೭

೨. ಘನ ಜಾನ್ ಹ್ಯಾಂಡ್ಸ್, ಸಭಾಪತಿ ಎಸ್., ಪು.೬

೩. ಕ.ಬೈ.ಅನುವಾದ ಎಡ್ವರ್ಡ್ ನೊರೋನ, ಪು.೩

ಸಂಬಂಧವಾದ ಪುಸ್ತಕ ರಚನೆಗೆ ತೊಡಗಿದುದು ಕಂಡು ಬರುತ್ತದೆ. ಹಾಗೆಯೇ ರೀವ್ ಕೂಡ ಭಾಷಾಂತರ ಕಾರ್ಯಕ್ಕೆ ಅನುಕೂಲವಾಗಲೆಂದು ಶಬ್ದಕೋಶ ಕಾರ್ಯಕ್ಕೆ ಕೈ ಹಾಕಿದ್ದಾನೆ. ೧೮೧೭ ರಲ್ಲಿ ಪ್ರಕಟವಾದ ಈ ಕನ್ನಡದ ಶಬ್ದಕೋಶ ಕನ್ನಡದಲ್ಲಿ ಪ್ರಥಮ ಪ್ರಯತ್ನವೆನ್ನಬಹುದು.

ವಿಲಿಯಂ ರೀವ್ "ಮದ್ರಾಸಿನಲ್ಲಿ ತಾನು ಬರೆದ 'ಮೋಶೆಯ ಮೊದಲನೇ ಕಾಂಡ' ಎಂಬ ಹೆಸರಿನಿಂದ ಮುದ್ರಣಗೊಳಿಸಿದನು. ಇದು ೧೮೪ (ಡೆಮ್ಮಿ) ಪುಟಗಳಷ್ಟು ಚಿಕ್ಕ ಹೊತ್ತಿಗೆಯಾದರೂ ಅದರ ಭಾಷೆ ಮತ್ತು ಶೈಲಿಯು ಉತ್ತಮವಾಗಿದ್ದಿತು. ಈತನು ೧೮೩೦ ರಿಂದ ಆರೆಂಟು ವರ್ಷಗಳ ಕಾಲ ಬೈಬಲ್ ಭಾಷಾಂತರ ಕಾರ್ಯದಲ್ಲಿಯೇ ನಿರತನಾಗಿದ್ದನು. ಕಡೆಗೆ ೧೮೩೯ ರಲ್ಲಿ ೧೨೦೦(ಡೆಮ್ಮಿ) ಪುಟಗಳಿಗೂ ಮಿರಿದ ಅವನ ಕನ್ನಡ ಬೈಬಲ್ ಗ್ರಂಥವು ಪ್ರಕಟವಾಯಿತು. ಈ ಸಂಪೂರ್ಣ ಕನ್ನಡ ಬೈಬಲ್ ಹೊರ ಬಂದ ಕೂಡಲೇ ಅದರ ಪುಟಗಳನ್ನು ಕರ್ನಾಟಕದ ಎಲ್ಲ ಕ್ರೈಸ್ತ ಮಂದಿರಗಳಿಗೂ ಹಂಚಲಾಯಿತು. ಉತ್ತಮ ಶೈಲಿಯಲ್ಲಿ ಬರೆಯಲ್ಪಟ್ಟ ಈ ಧರ್ಮಗ್ರಂಥವು ಅಂದಿನ ದೇಶಿಯ ಕ್ರೈಸ್ತರ ಕೈಗನ್ನಡಿಯಾಗಿತ್ತು. ಇವರೊಡನೆಯೇ ವಿಲಿಯಂ ರೀವ್ ಹಿಂದೆ ಬರೆದಿದ್ದ ಹಳೆ ಒಡಂಬಡಿಕೆ ಇದರ ಕನ್ನಡ ಅನುವಾದವು ಪುನಃ ಮುದ್ರಣವಾಯಿತು. ಅಷ್ಟೇ ಅಲ್ಲ ಈ ಕೃತಿ ಕ್ರಿ.ಶ. ೧೮೬೦ರ ಒಳಗಾಗಿ ಒಂದೆರಡು ಬಾರಿ ಮುದ್ರಣವಾಯಿತೆಂದರೆ ಅದು ಅವನ ಕನ್ನಡ ಭಾಷಾ ಜ್ಞಾನಕ್ಕೂ ವಿಷಯ ಪ್ರತಿ ಪಾದನೆಗೂ ತಕ್ಕ ಪ್ರಶಸ್ತಿಯಾಗಿದೆನ್ನಬಹುದು."[೧]

ವಿಲಿಯಂ ರೀವ್ ತನಗಿಂತ ಹಿಂದೆ ಇದ್ದ ಡಾ. ರೆ. ಜಾನ್ ಹ್ಯಾಂಡ್ಸ ಮತ್ತು ರೆ. ವಿಲಿಯಂ ಕೇರಿ ಪ್ರಾರಂಭಿಸಿ ಪೂರ್ತಿಗೊಳಿಸಿದ್ದ ಕನ್ನಡ ಬೈಬಲ್ ರಚನೆಗೆ ಕಳಶವನ್ನಿಟ್ಟಂತೆ ತನ್ನ ಬೈಬಲನ್ನೂ ಅಷ್ಟೇ ದೊಡ್ಡ ಪ್ರಮಾಣದಲ್ಲಿ ಬರೆದು ಜಯಪ್ರದನಾದನು. ಈ ಮೂವರ ಅಸಾಮಾನ್ಯ ಸಾಹಸದ ಪರಿಣಾಮವಾಗಿ ಕನ್ನಡ ಗದ್ಯ ರಚನೆ ಗ್ರಂಥ ರಚನೆ ಅವುಗಳ ಮುದ್ರಣ ಇತ್ಯಾದಿಗಳೆಲ್ಲವೂ ಇನ್ನೂ ಭರದಿಂದ ಸಾಗಿದವು. ಅಲ್ಲದೆ ಅವರ ಬೃಹತ್ಪ್ರಮಾಣದ ಕೃತಿ ಕ್ರಿ.ಶ. ೧೮೧೦ ರಿಂದ ೧೮೪೦ ರ ವರೆಗಿನ ಮೂವತ್ತು ವರ್ಷಗಳ ಅವಧಿಯಲ್ಲಿ ಹೊರಬಿದ್ದು ಅವು ಅವರ ನಂತರದ ವಿದ್ವಾಂಸರಿಗೆ ತಕ್ಕ ಸ್ಫೂರ್ತಿಯನ್ನು ಆಧಾರವನ್ನು ಕೊಡತಕ್ಕಂಥ ಅಮೂಲ್ಯ ಕೃತಿಗಳೆಂದು ಪ್ರಸಿದ್ಧವಾದವು.

೬ ಹೆನ್ರಿ ಹೆಗ್ (HENRY HAIGH)

ಹತ್ತೊಂಬತ್ತನೆಯ ಶತಮಾನದ ಅಂತ್ಯದಲ್ಲಿ ವೆಸ್ಲಿಯನ್ ಮಿಶನ್ನಿನ ಪ್ರಮುಖ ಹಾಗೂ ಕೊನೆಯ ಮಿಶನರಿಯಾದ ಹೆನ್ರಿ ಹೆಗ್ ಬೈಬಲ್ ಅನುವಾದ ಕಾರ್ಯಗಳ ಜೊತೆಗೆ ಇತರ ಮತೀಯ ಪುಸ್ತಕಗಳನ್ನು ರಚಿಸಿದ್ದಾನೆ. ಭಾರತಕ್ಕೆ ಅದರಲ್ಲಿಯೂ ಕರ್ನಾಟಕಕ್ಕೆ ಮೊದಲ ಬಂದ ಮಿಶನರಿಗಳ ಕೆಲಸ ಬೈಬಲ್

---

೧. ಭಾ.ಸಾ.ಸಂ.ಪಾ.ವಿ.ಸೇವೆ, ೧೯೮೭, ಐ.ಮಾ.ಮುತ್ತಣ್ಣ, ಪು.೨೭೧

ಅನುವಾದವೇ ಮುಖ್ಯವಾಗಿದ್ದಿತು.ಅನಂತರದಲ್ಲಿ ಅನ್ಯಧರ್ಮೀಯತೆ ಅಂಶ ತಲೆ ಎತ್ತಿ ಹಿಂದೂ ಧರ್ಮದ ಪ್ರಮುಖ ಗ್ರಂಥಗಳ ಮೇಲೆ ಮಿಶನರಿಗಳು ತಮ್ಮದೇ ಆದ ರೀತಿಯಲ್ಲಿ ಅವುಗಳನ್ನು ಅರ್ಥೈಸಿ ವೈವಿಧ್ಯಮಯ ವಿಚಾರಗಳನ್ನು ಹೊರ ಹಾಕತೊಡಗಿದರು. ಇಂತಹ ಸಮಯದಲ್ಲಿ ಬೈಬಲ್ಲಿನ ವಿವರಣೆಯ ಅಗತ್ಯ ಕಂಡು ಬಂದಿತು. ಈ ಅವಶ್ಯಕತೆಯನ್ನು ಗಮನದಲ್ಲಿಟ್ಟುಕೊಂಡು ಹೆನ್ರಿ ಹೆಗ್ ಬೈಬಲ್ ಪೂರಕ ಸಾಹಿತ್ಯ ರಚಿಸತೊಡಗಿದ. ಕ್ರೈಸ್ತ ಜೀವನ ಮುಕ್ತಿ 'ವಿವೇಕ' ಹಾಗೂ 'ಯಾಕೋಬನ ಪತ್ರಿಕೆ' ಗಳು ವ್ಯಾಖ್ಯಾನ ರೂಪಕ ಸಾಹಿತ್ಯಗಳಾಗಿವೆ. "ಬೈಬಲ್ ಅಧ್ಯಾಪನ ಕಾಲದಲ್ಲಿ ವಿದ್ಯಾರ್ಥಿಗಳಿಗೆ ಕೊಟ್ಟ ಉಪನ್ಯಾಸಗಳಲ್ಲಿ ಒಂದಾದ 'ಯಾಕೋಬನ ಪತ್ರಿಕೆ'ಯಲ್ಲಿ ಹೆಗ್ ಅನುಬಂಧ ರೂಪಕವಾಗಿ ಭಗವದ್ಗೀತೆಯ ಸಮಾನ ಶ್ಲೋಕಗಳನ್ನು ಕೊಟ್ಟಿದ್ದಾನೆ. ಟಿಪ್ಪಣಿ ಬರೆಯುವಲ್ಲಿ ಹಿಂದಿನ ವ್ಯಾಖ್ಯಾನಕಾರರ ವಿಚಾರಗಳನ್ನೆತ್ತಿಕೊಂಡಿದ್ದರೂ ಸ್ವತಂತ್ರವಾಗಿ ವಿವೇಚಿಸುವ ಪ್ರಯತ್ನ ಮಾಡಿದ್ದುದು, ಬೈಬಲ್ ಅಧ್ಯಯನದಲ್ಲಿ ಮುಂದಿಟ್ಟ ಹೆಜ್ಜೆಯಾಗಿದೆ. ಈ ಕೃತಿಯ ಪ್ರಕಟಣೆಗೆ ಸಂಬಂಧಿಸಿದಂತೆ ಇನ್ನೊಂದು ವಿಶಿಷ್ಟ ಅಂಶವೆಂದರೆ ಅದರ ಹಸ್ತಪ್ರತಿಯನ್ನು ಪಿ. ಕರಿಬಸವಶಾಸ್ತ್ರಿಗಳಿಗೆ ಒಪ್ಪಿಸಿ ಭಾಷೆಯ ದೃಷ್ಟಿಯಿಂದ ತಿದ್ದಿಕೊಂಡಿದ್ದು ತಮ್ಮ ಕೃತಿಗಳನ್ನು ಬಹುಜನ ಗ್ರಾಹ್ಯವಾಗಬೇಕೆನ್ನುವ ಪ್ರಜ್ಞೆ ಕ್ರೈಸ್ತ ಲೇಖಕರಲ್ಲಿ ಜಾಗೃತವಾಗಿತ್ತೆನ್ನಬಹುದು."[೧]

ವೆಸ್ಲಿಯನ್ ಹಾಗೂ ಬಾಶೆಲ್ ಮಿಶನ್‌ರವರು ಒಟ್ಟಿಗೆ ಅನುವಾದ ಕಾರ್ಯದಲ್ಲಿ ಸಹಕರಿಸುತ್ತಿದ್ದರು. ಮಿಶನ್ ಯಾವುದಾದರೇನು ಎಲ್ಲರೂ ಕ್ರೈಸ್ತ ಧರ್ಮ ಪ್ರಚಾರಕರೆ. ಹೆನ್ರಿಹೆಗ್ ಸಹ ಬಾಶೆಲ್ ಮಿಶನ್ನಿನ ತ್ರಿಗ್ಲರ್‌ನೊಂದಿಗೆ ಕೂಡಿ ಹೊಸ ಒಡಂಬಡಿಕೆಯ ಲೂಕ ಮತ್ತು ಮಾರ್ಕ ಇವರ ಸುವಾರ್ತೆಗಳನ್ನು ಅನುವಾದಿಸಿದ್ದಾನೆ.

ಭಾಷಾಂತರ ಕಮೀಟಿಯ ಸದಸ್ಯನಾಗಿದ್ದ ಹೆನ್ರಿಹೆಗ್ ೧೮೬೭ರಲ್ಲಿ ಆ ಕಮೀಟಿಯ ಅಧ್ಯಕ್ಷರಾಗಿದ್ದ ಇ. ಲೇವಿಸ್ ತೀರಿಹೋದ ಮೇಲೆ ಆರು ವರ್ಷಗಳವರೆಗೆ ಹೆಗ್‌ನು ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡು ಕಾರ್ಯನಿರ್ವಹಿಸಿದನು. ಈತನ ಅವಧಿಯಲ್ಲಿ ಬೈಬಲ್‌ನ ಪ್ರಮುಖ ಅನುವಾದ ಕಾರ್ಯ ಜರುಗಿದವು. ಟೀಕೆ ಟಿಪ್ಪಣೆಯ ಕ್ರೈಸ್ತ ಸಾಹಿತ್ಯ ಬೆಳೆದ ಹಾಗೆ ಜನರಲ್ಲಿ ಈ ಕುರಿತು ಜಾಗ್ರತೆ ಮೂಡಲಾರಂಭಿಸಿ ಹಾಗೂ ಅಂದಿನ ಆವೃತ್ತಿಗಳಲ್ಲಿ ಕೆಲ ಭಾಷಾಂತರಗಳ ನ್ಯೂನ್ಯತೆಯನ್ನು ಕಂಡುಕೊಳ್ಳಲಾಯಿತು. ೧೮೪೩ ರಿಂದ ೧೮೫೯ರ ವರೆಗಿನ ನವೀಕರಣಗಳು ಹಾಗೂ ಬಳ್ಳಾರಿಯಲ್ಲಿ ಸಿದ್ದಗೊಂಡಿದ್ದ ಆವೃತಿಗಳು ಹೊಸ ಪೀಳಿಗೆಯ ಜನರಿಗೆ ಬದಲಾಗಬೇಕೆಂಬ ಅಂಶವನ್ನು ಹುಟ್ಟಿಸಲಾರಂಭಿಸಿದವು.

"ಈ ಹಿನ್ನೆಯೊಂದಿಗೆ ೧೮೯೩ ರಲ್ಲಿ ಕನ್ನಡ ಬೈಬಲ್ಲಿನ ಪರಿಷ್ಕರಣಕ್ಕೆಂದು ಮತ್ತೊಂದು ಸಂಯುಕ್ತ ಸಮಿತಿಯು ಕಾರ್ಯ ಪ್ರವೃತವಾಯಿತು. ಹಿಂದಿನ ಸಮಿತಿಯಲ್ಲಿದ್ದಷ್ಟರ ಮಟ್ಟಿಗಿನ ಸೌಹಾರ್ದ

---

೧. ಹೊ.ಅ.ಶ್ರೀಹಾ., ಪು.೯೭

ಮತ್ತು ಏಕಾಭಿಪ್ರಾಯ ಇದರಲ್ಲಿ ಕಂಡು ಬರಲಿಲ್ಲ ಆಗ ಎರಡು ಬೇರೆ ಬೇರೆ ಭಾಷಾಂತರಗಳಿರಬೇಕೆಂಬ ಸೂಚನೆ ಮತ್ತೊಮ್ಮೆ ಮುಂಬಂದಿತು.''[೧]

ಪ್ರಾದೇಶಿಕ ಬೇಧ, ಭಾಷಾ ಪ್ರೌಢಿಮೆಗಳ ಪ್ರಶ್ನೆ ತಲೆ ಎತ್ತಿದಾಗ ಕರ್ನಾಟಕದ ಎಲ್ಲ ಪ್ರಾದೇಶಿಕ ಭಾಷೆಗಳ ಬಳಕೆಯನ್ನು ಅನುಸರಿಸುವುದು ಒಳಿತೆಂದು ಹೆನ್ರಿಹೆಗ್'ನ ಅಧ್ಯಕ್ಷತೆಯಲ್ಲಿ ಕೆಲಸವು ಮುಂದುವರೆದು ೧೯೦೧ ರಲ್ಲಿ ಹೊಸ ಒಡಂಬಡಿಕೆಯ ತಿದ್ದಿದ ಆವೃತ್ತಿಯು ಹೊರ ಬಂದಿತು. ೧೯೦೩ ರಲ್ಲಿ ಹೆನ್ರಿಹೆಗ್ ನಿವೃತ್ತಿಯಾದ ನಂತರ ಖಾಲಿಯಾದ ಅಧ್ಯಕ್ಷ ಹುದ್ದೆಯನ್ನು ಬಿ ರೈಸ್‌ರವರ ಮಗ ಇ.ಪಿ.ರೈಸ್‌ರವರು ಅಲಂಕರಿಸಿದರು.

೨.೪. ಅನುವಾದದಲ್ಲಿ ಸಹಾಯಕರ ಪಾತ್ರ

ಬೈಬಲ್ ಅನುವಾದದಲ್ಲಿ ಏಕ ವ್ಯಕ್ತಿಯ ಭಾಷಾಂತರದ ಆವೃತ್ತಿ ಕನ್ನಡದಲ್ಲಿ ಬರಲೇ ಇಲ್ಲ. ಬೈಬಲ್ ಪುಸ್ತಕಗಳ ಒಂದೊಂದು ಅಥವಾ ಹಲವು ಒಳ ಪುಸ್ತಕಗಳನ್ನು ಒಬ್ಬ ವ್ಯಕ್ತಿ ಭಾಷಾಂತರಿಸಿದ ಉದಾಹರಣೆ ಸಾಕಷ್ಟು ಇವೆ. ಆದರೆ ಭಾಷಾಂತರಕಾರರಲ್ಲಿ ಪ್ರಧಾನ (ಚೇರಮನ್) ಭಾಷಾಂತರಕಾರ ಹಾಗೂ ಸಮಿತಿ ಸದಸ್ಯರಾಗಿರುತ್ತಾರೆ. ಇವರುಗಳನ್ನು ಹೊರತು ಪಡಿಸಿ ಬೇರೆಯವರು ಸಹಾಯ ಸಲ್ಲಿಸಿದ್ದರೆ ಅಂಥವರನ್ನು ಗುರುತಿಸುವ ಪ್ರಯತ್ನ ಇಲ್ಲಿದೆ.

ಮೊದಲ ಕನ್ನಡ ಬೈಬಲ್ ಅನುವಾದಕ ವಿಲಿಯಂ ಕೇರಿ ಜೊತೆಗೆ ಜೊಹೋಶುವ ಮಾರ್ಶಮನ್ ಮತ್ತು ವಿಲಿಯಂ ವಾರ್ಡರು ಸಹಾಯಕರಾಗಿ ಸೇವೆಸಲ್ಲಿಸಿದ್ದಾರೆ. ಸೆರಾಂಪುರದಲ್ಲಿ ಭಾರತೀಯ ಪ್ರಮುಖ ಭಾಷೆಗಳ ಅನುವಾದ ಕಾರ್ಯನಡೆಯುವಾಗ ಇವರಿರ್ವರೂ ಅಪಾರ ಸೇವೆ ಸಲ್ಲಿಸಿದ್ದಾರೆ. ಆದರೆ ಕನ್ನಡ ಬೈಬಲ್ ಅನುವಾದದಲ್ಲಿ ಸೇವೆ ಸಲ್ಲಿಸಿದ ಬಗ್ಗೆ ಸ್ಪಷ್ಟ ಮಾಹಿತಿ ಇಲ್ಲ. ಒಟ್ಟಿನಲ್ಲಿ ಕೇರಿಯ ಕಾರ್ಯದಲ್ಲಿ ಸಹಭಾಗಿಗಳಾಗಿ ದುಡಿದಿರುವುದು ಸತ್ಯ. ಆ ಸಮಯದಲ್ಲಿ ಭಾಷಾಂತರ ಕಾರ್ಯಕ್ಕೆ ಸಾಹಾಯ ನೀಡಲು ಅನೇಕ ದೇಶಿಯ ಪಂಡಿತರು ನಿಯೋಜಿತ ಹಣದ ಮೇಲೆ ಆಕರ್ಷಿಸಲ್ಪಟ್ಟಿದ್ದರೆಂದು''[೨] ತಿಳಿದು ಬರುವುದು.

ವಿಲಿಯಂ ಕೇರಿಯ ಜೊತೆಗೆ ದೇಶೀಯ ಪಂಡಿತರಾದ ಭಾರತ ರಮಣ, ಸುಬ್ಬರಾವ ಮತ್ತು ಮನೋಹರ ಕನ್ನಡ ವಿಷಯದಲ್ಲಿ ಸಹಾಯಕರಾಗಿದ್ದರೆಂದು ಕಂಡು ಬರುವುದು.''[೨*] ಕೃಷ್ಣಾಪಾಲ ಕೇರಿಯಿಂದ ಮತಾಂತರ ಹೊಂದಿದ ಮೊದಲ ವ್ಯಕ್ತಿ. ೧೮೧೫ರಲ್ಲಿ ಕೇರಿಯ ಜೊತೆ ಕೆಲಸದಲ್ಲಿ ಸಹಾಯ ಸಲ್ಲಿಸುತ್ತಿದ್ದ ಮನೋಹರನೆಂಬ ವ್ಯಂಗಿಯನು ಕನ್ನಡ ಮೊಳೆಗಳನ್ನು ಸಿದ್ಧಪಡಿಸಿದನಂತೆ.''[೩]

---

೧. ಹೊ.ಅ.ಶ್ರೀಹಾ., ಪು.೪೨೧

೨. BTIIP & Ceylone, Pp.15

೨* ಕೃಷ್ಣಪಾಲ ಕೇರಿಯಿಂದ ಮತಾಂತರ ಹೊಂದಿದ ಮೊದಲ ವ್ಯಕ್ತಿ

೩. ಹೊ.ಅ.ಶ್ರೀಹಾ., ಪು.೩೩೬

ಕೇರಿಯ ನಂತರ ಕನ್ನಡ ಬೈಬಲ್ ಅನುವಾದದಲ್ಲಿ ಕಂಡು ಬರುವ ಹೆಸರು ಬಳ್ಳಾರಿಯಲ್ಲಿಯ ರೆ. ಜಾನ್ ಹ್ಯಾಂಡ್ಸನದು. ಕನ್ನಡ ವ್ಯಾಕರಣ ಹಾಗೂ ಶಬ್ದಕೋಶ ರಚಿಸುವಷ್ಟು ಈತನು ಕನ್ನಡದಲ್ಲಿ ಸಾಮರ್ಥ್ಯ ಹೊಂದಿದ್ದರಿಂದ ಬೇರೆಯವರ ಸಹಾಯ ಅಷ್ಟೊಂದು ಅವಶ್ಯಕವೆಂದು ತೋರಿ ಬಂದಂತಿಲ್ಲ. ಆದರು ವಿಲಿಯಂ ರೀವ್ ಈತನ ಆಪ್ತ ಸಹಾಯಕನಾಗಿ ಕಾರ್ಯ ನಿರ್ವಹಿಸಿದನು. ಮದ್ರಾಸ ಸೇಂಟ್ ಜಾರ್ಜ್ ಕಾಲೇಜಿನ ಕಾಯ್ದೆಯ ವಿಷಯದ ವಿದ್ಯಾರ್ಥಿ ಕೃಷ್ಣಮಾಚಾರಿ, ವಿಲಿಯಂ ರೀವ್‌ನಿಗೆ ಸಹಾಯಕನಾಗಿ ಕೆಲಸ ಮಾಡಿರುವುದು ತಿಳಿದು ಬರುತ್ತದೆ. "ಜಾನ್ ಹ್ಯಾಂಡ್ಸ ಇವನ ಹಲವು ಬರವಣಿಗೆಗಳಿಗೆ ಸಹಾಯಕರಾಗಿ ಅಂದಿನ ಕನ್ನಡ ಭಾಷಾ ತಜ್ಞರಾದ ಎ.ಡಿ.ಕ್ಯಾಂಪಬೆಲ್ ಮತ್ತು ಆರ್.ಸಿ. ಗೋಸ್ಲಿಂಗ್ ಇವರು ಇದ್ದರು."[೧] ವಿಲಿಯಂ ರೀವ್ ಮೋಶೆಯ ಮೊದಲನೇಕಾಂಡ ಎಂಬ ಪುಸ್ತಕವನ್ನು ತರ್ಜುಮೆಗೊಳಿಸಿದನು. ೧೮೪ ಡೆಮ್ಮಿ (demy) ಪುಟಗಳ ಹೊತ್ತಿಗೆ ಇದನ್ನು ಲಂಡನ್ ಮಿಶನ್ ಸೊಸೈಟಿಯವರಿಂದ ಮದ್ರಾಸಿನಲ್ಲಿ ಪ್ರಕಟಿಸಲಾಯಿತು. "೧೮೩೦ ರಲ್ಲಿ ೧೨೦೦(ಡೆಮ್ಮಿ) ಪುಟಗಳ ಕನ್ನಡ ಬೈಬಲ್ ಗ್ರಂಥ ಪ್ರಕಟವಾಯಿತು."[೨]

"ಕರ್ನಾಟಕದಲ್ಲಿ ಪ್ರೊಟೆಸ್ಟೆಂಟ್ ಮತಕಾರ್ಯದ ಭದ್ರ ಬುನಾದಿಯನ್ನು ಹಾಕಿ ಕನ್ನಡ ಮುದ್ರಣದ ಸಸಿಯನ್ನು ನೆಟ್ಟವನು ಇವನೇ"[೩] ಕನ್ನಡ ಬೈಬಲ್ ಅನುವಾದದಲ್ಲಿ ಕೇರಿ, ಹ್ಯಾಂಡ್ಸನಂತರ ಪ್ರಮುಖ ಅನುವಾದಕನೆಂದರೆ ರೆ|| ಜಿ. ಎಚ್. ವೀಗಲ್ ಈತನ ಜೊತೆ ಲಂಡನ್ ಮಿಶನ್ನಿನ ಕ್ಯಾಂಪಬೆಲ್ ಹಾಗೂ ಬಿ. ರೈಸ ಅವರು ಸೇವೆ ಸಲ್ಲಿಸಿರುವರು.

ಬೆಂಜಮಿನ್ ರೈಸ

ಜಾನ್ ಹ್ಯಾಂಡ್ಸನಿಂದ ಪ್ರಭಾವಿತನಾಗಿ ಭಾರತಕ್ಕೆ ಬಂದು ಸೇವೆಮಾಡಬೇಕೆಂದು ತಾನು ಲಂಡನ್ನಿನಲ್ಲಿರುವಾಗಲೇ ಬಿ.ರೈಸ ಸಂಕಲ್ಪಮಾಡಿದ್ದನಂತೆ. ಅದರಂತೆ ಭಾರತಕ್ಕೆ ಬಂದು ಕನ್ನಡ, ತೆಲುಗು, ತಮಿಳು ಭಾಷೆಗಳಲ್ಲಿ ಪ್ರಾವಿಣ್ಯತೆಯನ್ನು ಪಡೆದುಕೊಂಡನು "ಕ್ರೈಸ್ತ ಶಿಕ್ಷಣವನ್ನು ಎಳೆಯರಲ್ಲಿ ರೂಢಿಸಿ ಜ್ಞಾನವಂತರನ್ನಾಗಿ ಮಾಡಬೇಕೆನ್ನುವ ಅವನ ವಿಚಾರದಿಂದಾಗಿ, ಶಿಕ್ಷಣ, ಪಠ್ಯಪುಸ್ತಕ ರಚನೆ ಮತ್ತು ಮತೀಯ ಗ್ರಂಥ ವಿಶೇಷವಾಗಿ ತೋರಿ ಬಂದವು."[೪]

"ಮತೀಯ ಸಾಹಿತ್ಯ ನಿರ್ಮಿತಿಯಲ್ಲಿ ಬೆಂಜಮಿನ್ ರೈಸ ಹೊಸ ದೃಷ್ಟಿಯನ್ನಿಟ್ಟುಕೊಂಡಿದ್ದನು. ಅದುವರೆಗಿನ ಕ್ರೈಸ್ತಮತೀಯ ಕನ್ನಡ ಪುಸ್ತಕಗಳೆಲ್ಲ ಹೆಚ್ಚಾಗಿ ಇಂಗ್ಲೀಷ್‌ನಿಂದ ಇನ್ನೂ ಕೆಲವು ತಮಿಳಿನಿಂದ ಅನುವಾದಿತವಾಗಿದ್ದವು. ಇದ್ದಕ್ಕಿದ್ದಂತೆ ಅನುವಾದಿಸಿದ ಆ ಪುಸ್ತಕಗಳ ನಿಜವಾದ

೧. ಷಾ.ವಿ.ಕ.ಸೇವೆ, ಪು.೨೬೮
೨. ಅದೇ, ಪು.೩೫
೩. ಹೊ.ಅ.ಶ್ರೀಹಾ., ಪು.೯೨
೪. ಅದೇ, ಪು.೯೮

ಪ್ರಯೋಜನ ಆಗಿದೆಯೇ? ಎಷ್ಟು ಜನದ ಮನಸ್ಸನ್ನು ಪರಿವರ್ತಿಸಲು ಅವು ಸಮರ್ಥವಾಗಿವೆ? ಎಂಬುದಾಗಿ ಅವುಗಳ ಸಾರ್ಥಕ್ಯವನ್ನು ಪ್ರಶ್ನಿಸಿದವರಲ್ಲಿ ಇವನೇ ಮೊದಲಿಗನೆನ್ನಬಹುದು."[೧] ಬಿ. ರೈಸಗಿಂತ ಪೂರ್ವದಲ್ಲಿ ಕ್ರೈಸ್ತಮತೀಯ ಪುಸ್ತಕಗಳು ಹಿಂದೂ ವಿಚಾರಗಳ ಹಿನ್ನಲೆಯಲ್ಲಿ ಮೂಡಿ ಬರುವುದನ್ನು ಆತನು ಗಮನಿಸಿ ತನ್ನ ವಿಚಾರಗಳನ್ನು ಹೀಗೆ ವ್ಯಕ್ತಪಡಿಸಿದ್ದಾನೆ.

"ದೇಶೀಯರಲ್ಲಿ ಜಿಜ್ಞಾಸಾ ಭಾವ ಬೆಳೆಯುತ್ತಲಿದೆ. ಅದನ್ನು ತಣಿಸುವಂತಹ ಪುಸ್ತಕ ಹೊರಡಿಸಬೇಕು. ಆ ದಿಶೆಯಲ್ಲಿ ದೇಶೀಯ ಮತ ಪ್ರಸಾರಕರು ಉಪಯುಕ್ತ ಸಾಹಿತ್ಯವನ್ನು ರಚಿಸಬಲ್ಲವರಾದ್ದರಿಂದ ಅವರಿಗೆ ಹೆಚ್ಚು ಅವಕಾಶವನ್ನು ಕಲ್ಪಿಸಿಕೊಡಬೇಕು. ವಿಸ್ತಾರವಾದ ಬೈಬಲ್ಲಿನ ಸಾರವನ್ನೊಳಗೊಂಡ ಮತ್ತು ಅದರ ಸತ್ಯವನ್ನು ನೇರವಾಗಿ ಎತ್ತಿತೋರಿಸುವ ಅಧಿಕೃತ ಸಂಕ್ಷಿಪ್ತ ಕೃತಿಯೊಂದು ದೇಶೀಯ ಭಾಷೆಯಲ್ಲಿ ಸಿದ್ಧವಾಗಬೇಕು. ಹಿಂದೂ ಧರ್ಮದೊಂದಿಗೆ ಹೋಲಿಸಿ, ಕ್ರೈಸ್ತ ತತ್ವಗಳನ್ನು ಪ್ರಕಾಶಿಸಬೇಕು. ಮಹಿಳೆಯರಿಗಾಗಿ ಇದುವರೆಗೆ ರಚಿತವಾಗಿಲ್ಲ ಒಂದು ದೇಶ ಭಾಷೆಯಿಂದ ಇನ್ನೊಂದಕ್ಕೆ ಉತ್ತಮ ಕೃತಿಗಳ ಅನುವಾದ ಕಾರ್ಯವು ನಡೆಯಬೇಕಾಗಿದೆ"[೨] ಎಂದಿದ್ದಾನೆ. ಈತನು ೧೮೫೦ ರಲ್ಲಿ ಬೈಬಲ್ಲಿನ ಪರಿಷ್ಕರಣ ಸಮಿತಿ ಸದಸ್ಯನಾಗಿ ಪ್ರಮುಖ ಪಾತ್ರ ನಿರ್ವಹಿಸಿದನು.

ರೆ. ಹರ್ಮನ್ ರೀಶ್

೧೮೮೮ ರಲ್ಲಿ ಭಾರತಕ್ಕೆ ಮಿಶನರಿಯಾಗಿ ಬಂದು ಸುವಾರ್ತಿಕರನ್ನು ತರಬೇತಿಗೊಳಿಸುವುದರಲ್ಲಿ ಹಾಗೂ ಶಾಲಾ ಉಸ್ತುವಾರಿ ಕಾರ್ಯ ನಿರ್ವಹಿಸುವಲ್ಲಿ ಪ್ರಮುಖ ನೆನಿಸಿದ್ದಾನೆ. "ಜಾಗತಿಕ ಯುದ್ಧ ಪ್ರಾರಂಭವಾಗುವ ಮೊದಲು ಬ್ರಿಟಿಷ್ ಆ್ಯಂಡ ಫಾರೆನ್ ಬೈಬಲ್ ಸೊಸೈಟಿಯವರು ಕನ್ನಡ ಸತ್ಯವೇದ ಪರಿಷ್ಕರಣ ಸಮಿತಿಗೆ ಇವರನ್ನು ಅಧ್ಯಕ್ಷರನ್ನಾಗಿ ನೇಮಿಸಿದ್ದರು. ಇವರು ಕೊಡೈಕೆನಾಲದಲ್ಲಿ ಇದ್ದಾಗಲೂ ಸತ್ಯವೇದದ ಪರಿಷ್ಕರಣದಲ್ಲಿ ನೆರವಾದರು."[೩] ೧೯೨೭-೨೮ ರಲ್ಲಿ ಇವರು ಧಾರವಾಡದಲ್ಲಿಯ ಬಾಶೆಲ್ ಮಿಶನ್ ಹೈಸ್ಕೂಲಿನ ಪ್ರಿನ್ಸಿಪಾಲರಾಗಿಯೂ ಸೇವೆ ಮಾಡಿದರು. ಅಲ್ಲದೇ ಅನೇಕ ಜರ್ಮನ್ ಸಂಗೀತ ಪದ್ಯಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಈಗಲೂ ಪ್ರೊಟೆಸ್ಟೆಂಟ್ ಚರ್ಚ ನಡೆಯುವಾಗ ಈ ಗೀತಗಳ ಬಳಕೆಯಾಗುತ್ತಿರುವುದು ಸ್ತುತ್ಯಾರ್ಹ.

ಡಾ ಹೆರ್ಮನ್ ಫ್ರೆಡರಿಕ್ ಮೊಗ್ಲಿಂಗ್

೧೮೧೧ ಮೇ ೨೯ ರಂದು ಜರ್ಮನಿಯಲ್ಲಿ ಜನಿಸಿದ ಮೋಗ್ಲಿಂಗ್. ಭಾರತಕ್ಕೆ ಬಂದದ್ದು ೧೮೩೬ ರಲ್ಲಿ. ಧಾರವಾಡ ಈತನ ಕಾರ್ಯಕ್ಷೇತ್ರವಾಯಿತು. "ಮೊಗ್ಲಿಂಗ್‌ರ ಸಾಧನೆಗಳಲ್ಲಿ ಪ್ರಾಮುಖ್ಯವಾದದ್ದು

೧. ಹೊ.ಅ.ಶ್ರೀಹಾ., ಪು.೯೮
೨. ಅದೇ, ಪು.೯೯
೩. ಕ.ಬಾ.ಮಿಶನ, ಜಿ.ಎಂ.ಜೋಗುಳ, ಪು.೧೯೯

ಅವರ ಕನ್ನಡ ಸಾಹಿತ್ಯಸೇವೆ. ಕನ್ನಡದ ಪ್ರಮುಖ ಕೃತಿಗಳನ್ನು 'Bibliotheca Carnatica' ಎಂಬ ಶಿರೋನಾಮೆಯಿಂದ ಸಂಗ್ರಹಿಸಿ ಸಂಪಾದಿಸಿದರು. ಬೈಬಲನ್ನು ಕನ್ನಡ ಭಾಷೆಗೆ ತರ್ಜುಮೆ ಮಾಡುವಲ್ಲಿ ವೈಗಲ್ ಅವರ ನಂತರದ ಸ್ಥಾನ ಮೊಗ್ಲಿಂಗ್‌ರಿಗೆ ಸಲ್ಲುತ್ತದೆ"[೧] ಕನ್ನಡ ಭಾಷ್ಯವನ್ನು ಅನುವಾದಿಸುವುದಕ್ಕಾಗಿ ಸಂಪೂರ್ಣ ಸಮಯ ಕಳೆಯುವಂತೆ ೧೮೬೯ ರಲ್ಲಿ ರೆಕ್ಟರ(Warden) ಕೆಲಸದಿಂದ ನಿವೃತ್ತಿಹೊಂದಿದರು. ನಂತರ ಬೈಬಲ್ ಒಳ ಪುಸ್ತಕದಲ್ಲಿ ಒಂದಾದ ಜ್ಞಾನೋಕ್ತಿಗಳ ಪುಸ್ತಕ ೨೭ನೇ ಅಧ್ಯಾಯದ ೫ನೇ ವಚನದವರೆಗೆ ಭಾಷಾಂತರಿಸಿದರು. ಆ ಅಧ್ಯಾಯದ ಆರಂಭದ ವಚನವು ಇಂತಿದೆ. "ನಾಳೆ ಎಂದು ಕೊಚ್ಚಿಕೊಳ್ಳಬೇಡ ಒಂದು ದಿನದೊಳಗೆ ಏನಾಗುವುದೋ ನಿನಗೆ ತಿಳಿಯದು" ಈ ಅಧ್ಯಾಯದ ಅನುವಾದ ಮಾಡುತ್ತಿರುವಾಗಲೇ ಪರಲೋಕದ ಒಡೆಯನು ಇವರನ್ನು ಮೇಲಿನ ಲೋಕಕ್ಕೆ ಆಹ್ವಾನಿಸಿದನು."[೨] ಹೀಗೆ ಕೊನೆ ಉಸಿರಿನವರೆಗೂ ಭಾಷಾಂತರದಲ್ಲಿ ಕಾಲಕಳೆದನು. ಇಂದಿಗೂ ಅಸ್ತಿತ್ವದಲ್ಲಿರುವ ಧಾರವಾಡದ ಬಾಶೆಲ್ ಮಿಶನ್ ಸ್ಕೂಲನ್ನು ಸ್ಥಾಪಿಸಿದವನು ಮೋಗ್ಲಿಂಗನೇ.

ಡ್ಯಾನಿಯಲ್ ಸ್ಯಾಂಡರ್ಸನ್

ಕನ್ನಡ ಕಥಾ ಸಂಗ್ರಹ ಹಾಗೂ ಸಿ.ಎನ್.ಹಾಲ್ ವಿರಚಿತ Come to Jesus ಎಂಬ ಪುಸ್ತಕವನ್ನು ಕನ್ನಡಕ್ಕೆ ಅನುವಾದಿಸಿದ ಸ್ಯಾಂಡರ್ಸನ್ ಯುರೋಪಿನ ಜನರಿಗೆ ಕನ್ನಡ ಭಾಷೆಯ ಪರಿಚಯವನ್ನು ಹಂತ ಹಂತವಾಗಿ ಮಾಡಿಕೊಡುವ ಉದ್ದೇಶವನ್ನು ಹೊಂದಿದ್ದನು. ಈತನು ಕನ್ನಡ ಬೈಬಲ್‌ನ ಅಧಿಕೃತ ಪರಿಷ್ಕರಣ ಸಮಿತಿಯಲ್ಲಿದ್ದು ಬೈಬಲ್ ಭಾಷಾಂತರಕ್ಕೆ ಸೇವೆ ಸಲ್ಲಿಸಿದ್ದಾನೆ.

ರೆ. ಬೂರರ್ (Rev. J. A. BUHRER)

ಮಂಗಳೂರಿನ ಬಾಸೆಲ್ ಮಿಶನ್ ಮುದ್ರಣಾಲಯದ ಸಂಸ್ಥಾಪಕರಲ್ಲೊಬ್ಬನಾದ ರೆ|| ಜೆ.ಎ. ಬೂರರ್ ೧೮೩೪ ರಲ್ಲಿ ವಿಲಿಯಂ ಹಾಕ್ ಇವನಿಂದ ಐರೋಪ್ಯ ಭಾಷೆಯಲ್ಲೆ ಬರೆಯಲ್ಪಟ್ಟ ಬೈಬಲ್ ಕಥಾ ಸೂಕ್ತಿಗಳನ್ನು ಕನ್ನಡಕ್ಕಿಳಿಸಿದನು. ಇದನ್ನು ದೇವವಾಕ್ಯ ದ್ವಿಪಂಚಾಶತೌ ಪೂರ್ವನಿರ್ಧಾರ ದ್ವಿಪಂಚಾಶತಿ, ನವನಿರ್ಧಾರ ದ್ವಿಪಂಚಾಶತಿ" ಎಂದು ದೀರ್ಘವಾದ ಹೆಸರಿನಿಂದ ಕರೆದಿದ್ದಾನೆ. ಈ ಗ್ರಂಥವು ೧೩೮ ಮತ್ತು ೧೦೭(ಡೆಮ್ಮಿ) ಪುಟಗಳ ಎರಡು ಕಾಂಡಗಳಾಗಿ ಈತನ ಇವನ ಮುದ್ರಣಾಲಯದಲ್ಲಿಯೇ ಅಚ್ಚಾಗಿ ಹೊರಬಂತು. ಈತನ ಕನ್ನಡ ಭಾಷಾ ಶೈಲಿಯು ಇತರರ ಬರವಣಿಗೆಯಿಂದ ಭಿನ್ನವಾಗಿದೆ. ಉದಾ

"......ಯಕೋಬನು ಬಹಳ ದಿವಸ ಪ್ರಯಾಣದಲ್ಲಿದ್ದ ಮೇಲೆ ಷಹನಿನಲ್ಲಿರುವ ಲಬಾನನ ಬಳಿಗೆ ಬಂದನು. ಲೋಲಿಯೇಜರನು ಮುಂಚೆ ರೆಬೆಕ್ಕಳಂನು ಭಾವಿಯ ಹತ್ತರ ನೊದಿದ ಹಣಗೆ

---

೧. ಕ.ಬಾ.ಮಿಶನ, ಜೆ.ಎಂ.ಜೋಗುಳ, ಪು.೧೯೯

೨. ಅದೇ, ಪು.೧೨೫

ಯಕೋಬನು ಸೌಂದರ್ಯವಾದರ ಹೆಂಣಳಂನುವೊಂದು ಭಾವಿಯ ಹತ್ತರ ತಂದು ಅವಳ ಮೇಲೆ ಪ್ರೀತಿಯಿಟ್ಟು ಅವಳಿಗೋಸ್ಕರ ಲಬಾನನಿಗೆ ಯೇಳು ವರ್ಷ ಪರ್ಯಂತರ ಸೇವೆ ಮಾಡಿದನು(ಬೈಬಲ್).

ಇದೇ ಗ್ರಂಥವು ರೆ. ಬೂಬರ್ ಬರೆದ ಹಳೇ ಮತ್ತು ಹೊಸ ಒಡಂಬಡಿಕೆಗಳ ಪ್ರಸಂಗಗಳ ಸಮೇತವಾಗಿ ಎರಡು ಕಾಂಡಗಳಲ್ಲಿ ಪುನಃ ಎರಡು ಬಾರಿ ಮುದ್ರಣವಾಯಿತು. ಈ ಗ್ರಂಥದ ೫ನೇ ಆವೃತ್ತಿಯು ಸು. ೪೩೫ ಪುಟಗಳ ಎರಡು ಕಾಂಡಗಳಾಗಿ ೧೮೬೫ ರಲ್ಲಿ ಮರುಮುದ್ರಣಗೊಂಡಿತು.

ಸಿ. ಬಿ. ಬರ್ತ ಜರ್ಮನ್ ಭಾಷೆಯಲ್ಲಿ ಬರೆದಿದ್ದ ಬೈಬಲ್ ಕಥೆಗಳನ್ನು ಕ್ರಿ.ಶ. ೧೮೬೮ ರಲ್ಲಿ ಬೂರರ್ ಕನ್ನಡಕ್ಕಿಳಿಸಿದನು. ೧೮೪೩ ರಲ್ಲಿ ಬಾಶೆಲ್ ಮಿಶನ್‌ರವರು ನಡೆಸುತ್ತಿದ್ದ 'ಮಂಗಳೂರು ಸಮಾಚಾರ' ಪತ್ರಿಕೆಯಲ್ಲಿ ಬೈಬಲ್ಲಿನ ಹೊಸ ಒಡಂಬಡಿಕೆಯನ್ನು ಕನ್ನಡದಲ್ಲಿ ಬರೆದು ಧಾರಾವಾಹಿಯಾಗಿ ಪ್ರಕಟಿಸಿದನು.


ರೆ. ಕಿಟೆಲ್

ರೆ|| ಕಿಟೆಲ್‌ರವರ ಹೆಸರು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಬಹುಮುಖ್ಯವಾದದು. ಬಹು ದೊಡ್ಡ ಕಾರ್ಯವನ್ನು ನಿರ್ವಹಿಸಿರುವ ಕಿಟಲ್‌ಅವರು. ಬೈಬಲ್ ಭಾಷಾಂತರವನ್ನು ನೇರವಾಗಿ ಮಾಡಿದ ಬಗ್ಗೆ ಉಲ್ಲೇಖ ಇಲ್ಲವಾದರೂ ಭಾಷಾಂತರ ಕಾರ್ಯಕ್ಕೆ ಶಬ್ದಗಳಿಗೆ ಸಂಬಂಧಿಸಿ ಅನೇಕ ಸಲಹೆ ಇತ್ತಿದ್ದಾರೆ. ಉದಾಹರಣೆ "In the begining was word and the word was with God (st lohnl:l)ಎಂಬುದನ್ನು "ಆದಿಯಲ್ಲಿ ವಾಕ್ಯವಿತ್ತು; ಆ ವಾಕ್ಯವು ದೇವರ ಬಳಿಯಲ್ಲಿತ್ತು" ಎಂದು ಅನುವಾದಿಸಲಾಗಿತ್ತು. word ಇದನ್ನು 'ವಾಕ್ಯ' ಎಂಬುದರ ಬದಲಾಗಿ 'ವಾಕ್ಕು' ಎಂದು ಭಾಷಾಂತರಿಸಬೇಕೆಂದು ಕಿಟೆಲ್ ತನ್ನ ಟಿಪ್ಪಣಿಯಲ್ಲಿ ಸೂಚಿಸಿದ್ದಾರೆ."[೧]

ಇನ್ನು ಅನೇಕ ದೇಶೀಯ ಪಂಡಿತರು ಭಾಷಾಂತರ ಕಾರ್ಯದಲ್ಲಿ ಸಹಾಯ ಸಲ್ಲಿಸಿದ್ದಾರೆ. "ಸರಕಾರದ ಭಾಷಾಂತರಕಾರರಾಗಿ ವಿ.ಸೀ.ಯವರಿದ್ದರೆಂದು ತಿಳಿದುಬರುತ್ತದೆ."[೨] "ಬೈಬಲ್ ಪರಿಷ್ಕರಣದ ಅಧ್ಯಕ್ಷನಾದ ಹೆನ್ರಿಹೇಗ್ ತನ್ನ ಹಸ್ತ ಪ್ರತಿಯನ್ನು ಪಿ. ಕರಿಬಸವಶಾಸ್ತ್ರಿಗಳಿಂದ ತಿದ್ದಿಸಿಕೊಂಡ ಬಗ್ಗೆ ತಿಳಿದುಬರುವುದು."[೩] ಮದ್ರಾಸ್ ಸೆಂಟ್ ಜಾರ್ಜ ಕಾಲೇಜಿನ ಕನ್ನಡ ಸಹಾಧ್ಯಾಪಕನಾಗಿದ್ದ ಕಾಡಂಬಿ ರಂಗಾಚಾರಿ ಮದ್ರಾಸ್ ಕೋರ್ಟಿನಲ್ಲಿ ಹೆಡ್ ಮುನ್ಸಿಯಾಗಿದ್ದ ಶಂಭುಪತಿ ಮೀನಾಕ್ಷಯ್ಯ ಮತ್ತು ಮೂಡಂಬಿ ಶ್ರೀನಿವಾಸಾಚಾರಿ ಎಂಬ ದೇಶೀಯರು ಬೈಬಲ್ ಅನುವಾದ ಹಾಗೂ ಕ್ರೈಸ್ತ ಸಾಹಿತ್ಯಸೇವೆಯನ್ನು ಮಾಡುವಲ್ಲಿ ಶ್ರಮಿಸಿರುವುದು ಕಂಡುಬರುತ್ತದೆ.


---

೧. ಹೊ.ಅ.ಶ್ರೀಹಾ., ಪು.೪೨೫
೨. Memory of the Rov.J.Reid, Pp.342
೩. ಹೊ.ಅ.ಶ್ರೀಹಾ., ಪು.೪೨೮





ರೆ. ಡಾ. ಹರ್ಮನ್ ಮೊಗ್ಲಿಂಗ್



ರೆ. ಫರ್ಡಿನಾಂಡ್ ಕಿಟೆಲ್

ಆಗಿನ ವಿದ್ವಾಂಸ ಮಂಡಲಿಯಲ್ಲಿ ಒಬ್ಬನಾಗಿದ್ದ ಜಿ. ಪೋಪನು ಇಂಗ್ಲೀಷ, ತಮಿಳು, ಕನ್ನಡ, ತೆಲುಗು, ಮಲೆಯಾಳಿ ಈ ಐದು ಭಾಷೆಗಳಲ್ಲಿಯೂ ಅನುವಾದಿಸಿ, (ಮತ್ತಾಯನ ಸುವಾರ್ತೆ) ಶಬ್ದಕೋಶ ವ್ಯಾಕರಣ ವಿಚಾರಗಳೊಂದಿಗೆ ಪ್ರಕಟಿಸಿದ್ದಾನೆ. ಇದು ೧೮೬೦ ರಲ್ಲಿ ಬಾಶೆಲ್ ಮಿಶನ್‌ರವರಿಂದ ಹೊರಬಂದಿದೆ.

ಕನ್ನಡದ ಶೈಕ್ಷಣಿಕ ಕ್ಷೇತ್ರಕ್ಕೆ ಅಪಾರ ಸೇವೆಸಲ್ಲಿಸಿದ ರೆ|| ಫ್ರೆಡರಿಕ್ ಜೀಗ್ಲರ್‌ರವರು. ಅಂದಿನ ಪರಿಷ್ಕರಣ ಸಮಿತಿ ಅಧ್ಯಕ್ಷರಾದ ಹೆನ್ರಿಹೆಗ್‌ರವರ ಸಹಾಯದಿಂದ ಮಾರ್ಕ ಹಾಗೂ ಲೂಕನ ಸುವಾರ್ತೆಯನ್ನು ಭಾಷಾಂತರಿಸಿದ್ದಾರೆ.

ಅನುವಾದದ ಶೈಲಿ

"ಕ್ರೈಸ್ತ ಸಾಹಿತ್ಯ ಹೆಚ್ಚಾಗಿ ಅನುವಾದ ಇಲ್ಲವೆ ಪರಿವರ್ತನ ರೂಪದಲ್ಲಿದೆ. ಸ್ವತಂತ್ರ ರಚನೆಯನ್ನು ಮಾಡುವ ಸಾಮರ್ಥ್ಯವು ಕರ್ನಾಟಕದ ಅಂದಿನ ಅನೇಕ ಮಿಶನರಿಗಳಲ್ಲಿ ಇದ್ದಿಲ್ಲವೆಂದಲ್ಲ. ಅವರ ಮುಖ್ಯ ಉದ್ದೇಶವು ಸಾಹಿತ್ಯ ನಿರ್ಮಿತಿಯಾಗಲೀ, ತಾತ್ವಿಕ ವಿವೇಚನೆಯಾಗಲೀ ಅಲ್ಲ. ಮತ ಪ್ರಚಾರ"[೧] ಬೈಬಲ್ ಅನುವಾದದಲ್ಲಿಯೂ ಅವರು ಅನುಸರಿಸಿದುದು ಮೂಲದಲ್ಲಿ ಇದ್ದದ್ದು ಹಾಗೆಯೇ ಭಾಷಾಂತರದಲ್ಲಿ ಕಂಡು ಬರಬೇಕೆನ್ನುವ ಅಂಶ, ಎದ್ದು ಕಾಣುತ್ತದೆ. ಭಾಷಾಂತರದಲ್ಲಿ ಎರಡು ಬಗೆಯ ಮೂಲ ಸಿದ್ಧಾಂತಗಳಿವೆ. ಶಬ್ದಗಳನ್ನು ಭಾಷಾಂತರಿಸುವುದು. ಇನ್ನೊಂದು ವಿಚಾರಕ್ಕೆ ತಕ್ಕಂತೆ ಭಾಷಾಂತರಿಸುವುದು. ಮೊದಲನೆಯದರಲ್ಲಿ ಶಬ್ದಗಳನ್ನು ಹಾಗೂ ಶಬ್ದಗಳ ನಿಯಮವನ್ನು ಮೂಲದಂತೆ ಕಾಯ್ದಿರಿಸುವದು. ಇದನ್ನು Literal Translation ಎನ್ನುವರು. ಇದೇ ನಿಯಮವನ್ನು ಭಾಷಾಂತರದಲ್ಲಿ ಅದರಲ್ಲೂ ಮುಖ್ಯವಾಗಿ ಇಂಗ್ಲೀಷ ತರ್ಜುಮೆಯಲ್ಲಿ ಬಹುಕಾಲ ಅನುಸರಿಸಲಾಗಿದೆ. ಭಾವನೆಗಳನ್ನು ವಿಚಾರಗಳನ್ನು ಕೈ ಬಿಡದಂತೆ ಎಚ್ಚರಿಕೆ ವಹಿಸಿ ಭಾಷಾಂತರಿಸುವುದು ನಂತರದ ಕ್ರಮವಾಯಿತು. ಈಗಾಗಲೇ ಅಸ್ತಿತ್ವದಲ್ಲಿರುವ ಕನ್ನಡ ಬೈಬಲ್ ಭಾಷಾಂತರಗಳ ಆವೃತ್ತಿಗಲು ಆಯಾ ಕಾಲಕ್ಕೆ ತಕ್ಕಂತೆ ಬದಲಾಗುತ್ತ ಸರಳೀಕರಣಗೊಂಡು ಜನರಿಗೆ ಅದರ ವಿಚಾರ, ಉದ್ದೇಶಗಳು ತಿಳಿದರೆ ಸಾಕೆಂಬ ಅಭಿಪ್ರಾಯದತ್ತ ಸಾಗಿ ನಡೆದಿವೆ. ನೇರವಾದ ಸರಳ ನಿರೂಪಣೆ, ಗ್ರೀಕ್ ಭಾಷೆಯ ಪ್ರಭಾವದಿಂದ ವೈವಿಧ್ಯಮಯವಾದ ಶೈಲಿ ಕಾಣಸಿಗುವುದು. ೧೮೦೯ ರಿಂದ ನಡೆದು ಬಂದ ಕನ್ನಡ ಬೈಬಲ್‌ಗಳ ಭಾಷಾಂತರ ಇಂದಿನವರೆಗೂ ಅವಿರತವಾಗಿ ನಡೆದಿದೆ. ಬೈಬಲ್ ಸೊಸೈಟಿಯಿಂದ ಹಾಗೂ ಪಾಶ್ಚಾತ್ಯ ಸಂಘ, ಸಂಸ್ಥೆಗಳಿಂದ ಹೊಸ ತರ್ಜುಮೆಗಳು ಹೊರಬರುತ್ತಲಿವೆ. ಕಾರಣಗಳು ಹಲವು ಬೈಬಲ್ ಸಾಹಿತ್ಯಕ್ಕೆ ಮೂಲದಲ್ಲಿರುವ ಗ್ರೀಕ್, ಹಿಬ್ರೂ ಭಾಷೆಗಳ ಪ್ರಭಾವ ಈ ಮೂಲದ ಶಬ್ದಗಳಿಗೆ ಕನ್ನಡದಲ್ಲಿ

---

೧. ಹೊ.ಅ.ಶ್ರೀಹಾ., ಪು.೪೧೮

ಸ್ಪಷ್ಟ ಹಾಗೂ ನೇರ ಶಬ್ದಗಳಿಗಾಗಿ ತಡಕಾಡುವ ಪ್ರವೃತ್ತಿ ಇದೆ. "ಬೈಬಲಿನ ವಿವಿಧ (೬೬ /೭೮) ಗ್ರಂಥಗಳು ವಿವಿಧ ಉದ್ದೇಶಗಳಿಂದ ರಚಿತವಾದವು ಆದುದರಿಂದ ಅವುಗಳಲ್ಲಿ ಪುನರಾವರ್ತನೆ, ಸದೃಶ ನಾಮವಳಿಗಳು, ಒಂದೇ ಘಟನೆಯ ಹೊಂದಾಣಿಕೆಯಿಲ್ಲದ ವಿವಿಧ ವರದಿಗಳು ಆರೋಪಿತ ಕರ್ತೃತ್ವ ಹಿಬ್ರೂ ಕಥನಕ್ರಮದ ಕೆಲವು ವೈಶಿಷ್ಟ್ಯಗಳು, ಸಂಕೇತಗಳು ಇವೇ ಮೊದಲಾದ ಅನೇಕ ಸಂಕೀರ್ಣತೆಗಳಿವೆ. ಆದುದರಿಂದ ಬೈಬಲಿನ ಎಲ್ಲಾ ಭಾಗಗಳು ಎಲ್ಲರಿಗೂ ಸುಲಭ ಗ್ರಾಹ್ಯವಾಗುವುದಿಲ್ಲ. ಅನೇಕ ವೇಳೆ ಓದುಗ ಗೊಂದಲಕ್ಕೀಡಾಗುವ ಅಥವಾ ದಿಕ್ಕುಗೆಡುವ ಸಾಧ್ಯತೆಯೂ ಇಲ್ಲದಿಲ್ಲ"[೧] ಈ ಸಮಸ್ಯೆಗಳನ್ನು ಮನಸ್ಸಿನಲ್ಲಿಟ್ಟು ವಿಶೇಷ ವಿದ್ಯಾರ್ಹತೆ ಅದರಲ್ಲಿಯೂ ಬೈಬಲ್ ಅಧ್ಯಯನದ ಅರ್ಹತೆ ಹೊಂದಿದವರಿಂದ ಅನುವಾದಗೊಳಿಸುವಲ್ಲಿ ಹೆಚ್ಚಿನ ಕಾಳಜಿ ವಹಿಸುವ ಅವಶ್ಯಕತೆ ಕಂಡು ಬರುತ್ತದೆ.

ಲ್ಯಾಟಿನ ಮೂಲವಾದ ಬೈಬಲ್‌ನ್ನು ಕನ್ನಡಕ್ಕೆ ಭಾಷಾಂತರಿಸಿದರೆ ತಪ್ಪುಗಳು ಹಾಗೂ ಅದು ಅಸಮರ್ಪಕ ಎಂಬ ಭಾವನೆ ಕೆಥೂಲಿಕ ಪಂಗಡದಲ್ಲಿ ಇದ್ದಂತೆ ತೋರಿಬರುವುದರಿಂದ, ಕರ್ನಾಟಕಕ್ಕೆ ೧೬ ನೇ ಶತಮಾನದ ಅಂತ್ಯದಲ್ಲಿ ಬಂದು ನೆಲೆಸಿದ್ದರೂ ೧೯೮೨ ರವರೆಗೆ ಬೈಬಲ್ ಅನುವಾದಕ್ಕೆ ಅವರು ಕೈ ಹಾಕಲಿಲ್ಲ. ಕನ್ನಡಾನುವಾದ ಬೈಬಲ್‌ಗಳಿದ್ದರೂ ಕೇವಲ ಲ್ಯಾಟಿನ್ ಬೈಬಲ್ ಬಳಕೆಯಲ್ಲಿಯೇ ಕಾಲ ಕಳೆದುದನ್ನು ಗಮನಿಸಬಹುದು. ಇಂದಿಗೂ ಚರ್ಚ ಆರಾಧನೆ ಕನ್ನಡದಲ್ಲಿ ನಡೆಯಲಿ ಎಂಬ ಕೂಗು ಬೆಂಗಳೂರಲ್ಲಿ ಕೇಳಿ ಬರುತ್ತಲೇ ಇರುವುದು.

ಕೆಥೂಲಿಕ ಸಾಹಿತ್ಯ ಬೈಬಲ್ ಭಾಷಾಂತರವಾಗದೇ "ನವ ಕ್ರೈಸ್ತರಿಗೋಸ್ಕರ ಮತ್ತು ದೈವಜ್ಞಾನವನ್ನು ಅಭ್ಯಸಿಸುವ ಅಭ್ಯರ್ಥಿಗಳಿಗಾಗಿ ಭಾಷಾಂತರಗೊಂಡಿದುದೇ ಹೆಚ್ಚು"[೨] ಕ್ರಿ.ಶ. ೧೬ ನೇ ಶತಮಾನದ ಪ್ರಾರಂಭದಲ್ಲಿ ಭಾರತದಲ್ಲಿ ಕೆಥೂಲಿಕ ಸಾಹಿತ್ಯ ಸೃಷ್ಟಿಯಲ್ಲಿ ಕೆಲಸ ಮಾಡಿದವರಲ್ಲಿ ನೊಬಿಲಿ ಕೂಡ ಒಬ್ಬನು. ಈತನ ಕೃತಿಗಳು ತಮಿಳಿನಲ್ಲಿ ಅಧಿಕವಾಗಿ ಸೃಷ್ಟಿಯಾಗಿದ್ದರಿಂದ, ಪ್ರಾರಂಭದಲ್ಲಿ ಕನ್ನಡದಲ್ಲಿ ಸೃಷ್ಟಿಯಾದ ಕೆಥೂಲಿಕ ಸಾಹಿತ್ಯ ಕೂಡ ತಮಿಳಿನ ಅನುವಾದವೆಂದರೆ ತಪ್ಪಾಗದು.

ಪ್ರೊಟೆಸ್ಟೆಂಟ್ ಸಾಹಿತ್ಯ ದೃಷ್ಟಿಯಲ್ಲಿ ಅನ್ಯಮತವರಿಗೆ ಉಪಯುಕ್ತವಾಗುವ ಉದ್ದೇಶವನ್ನಿಟ್ಟು ಕೊಂಡು ಕನ್ನಡ ಭಾಷಾಂತರ ನಡೆದ ಹಾಗೆ ತೋರಿಬರುತ್ತದೆ. ಯಾವುದೇ ಧರ್ಮಿಯರ ಗ್ರಂಥ ತನ್ನದೇ ಆದ ಪಾರಿಭಾಷಿಕ ಶಬ್ದಗಳನ್ನು ಒಳಗೊಂಡಿರುತ್ತದೆ. ಇಲ್ಲಿಯೂ, ಕ್ರೈಸ್ತ ಧಾರ್ಮಿಕ ವಿಚಾರಗಳ ಪರಿಚಯವಿಲ್ಲದ ಓದುಗನಿಗೆ ಅವು ಕನ್ನಡದಲ್ಲಿವೆ ಎಂಬೊಂದು ಕಾರಣಕ್ಕೆ ಅರ್ಥವಾಗುವುವೆಂದು ಹೇಳಲು ಬಾರದು. ಒಂದು ಪದದ ಅರ್ಥ ಇಂಥದ್ದೇ ಇರಬೇಕೆಂದು ತೀರ್ಮಾನಿಸಲು ಕೃತಿಯ ಒಟ್ಟು ಸಂದರ್ಭ ಮತ್ತು ಕೃತಿಗಳಲ್ಲಿ ಬರುವ ಬೈಬಲ್ ಭಾಗಗಳ ಪ್ರಸಿದ್ಧ ಕ್ರೈಸ್ತ ತತ್ವಗಳ ಬೋಧನೆಗಳ

---

೧. ಕ.ಧಾ.ಸಾ.ಕ್ರೈಮಿ ಕೊಡುಗೆ ಎಡ್ವರ್ಡ್ ನೊರೋನ ಪು.೧೭೧

೨. ಅದೇ, ಪು.೨೦೫

ಮತ್ತು ಆಚಾರ ವಿಚಾರಗಳ ಪರಿಚಯ ಆಧಾರವಾಗುತ್ತದೆ. ಹೀಗೆ ಕೃತಿಗಳಲ್ಲಿ ಸಿಗುವ ಬೈಬಲ್ ಭಾಗಗಳಲ್ಲಿ ಧರ್ಮದರ್ಶನದಲ್ಲಿ ಮತ್ತು ತತ್ವಗಳಲ್ಲಿ ಉಪಯೋಗವಾದ ಪಾರಿಭಾಷೆಯು ಅನ್ಯಭಾಷೆಯಲ್ಲಿ ಓದಗನಿಗೆ ತಿಳಿದಿದ್ದರೆ, ಕನ್ನಡದಲ್ಲಿ ಇವುಗಳಿಗೆ ಸಮಾನಾರ್ಥಕವಾಗಿ ಏರ್ಪಟ್ಟ ಪದಗಳ ಖಚಿತಾರ್ಥವನ್ನು ನಿಗದಿಗೊಳಿಸುವಲ್ಲಿ ಭಾಷಾಂತರಕಾರ ಹೆಣಗಬೇಕಾಗುವುದು.

ಪ್ರಾರಂಭದ ಬೈಬಲ್ ಅನುವಾದಗಳಲ್ಲಿ ಮಿಶನರಿಗಳ ಭಾಷಾ ಸಾಮರ್ಥ್ಯ ವಿಶೇಷವಾಗಿತ್ತೆಂದು ಕಂಡು ಬರುವುದಿಲ್ಲ. ಮತ ಪ್ರಚಾರ ಮತ ವಿವರಗಳ ನಿರ್ದಿಷ್ಟ ಬೌದ್ಧಿಕ ಬೋಧನೆ ಅತ್ಯಂತ ಪ್ರಮುಖ ಗುರಿಯಾಗಿದ್ದ ಕಾಲದಲ್ಲಿ, ಭಾವ ಪ್ರಧಾನ ಪಾಠಗಳ ಅನುವಾದದಲ್ಲಿ ಖಚಿತತೆ ಇಲ್ಲದಿದ್ದರೂ ನಡೆಯುತ್ತದೆ ಎಂದೂ, ಈ ಅನುವಾದಗಳು ಯಶಸ್ಸನ್ನು ಪಡೆಯದಿದ್ದರೆ ಅಪಾಯವೆಂತೂ ಇಲ್ಲವೆಂದೂ ಅವರು ಭಾವಿಸಿದಂತೆ ತೋರುತ್ತದೆ. ಏಕೆಂದರೆ ಅಂಥ ಪಾಠಗಳು ಏನಿದ್ದರೂ ಹೆಚ್ಚಿನ ಧಾರ್ಮಿಕ ಸಾಧನೆಗೆ ಸಂಬಂಧಿಸಿದವೇ ವಿನಃ ಕನಿಷ್ಟ ಹಾಗೂ ಮೂಲಭೂತ ವಿಷಯಗಳಿಗಾಗಿರಲಿಲ್ಲ[೧] ಎಂಬುದು ಸ್ಪಷ್ಟ. ಅನುವಾದದ ಸಮಯದಲ್ಲಿ ಬಳಸಿದ ರೀತಿ ನೀತಿಗಳ ಕುರಿತು ಬರೆಯುವಲ್ಲಿ ಕೇವಲ ಪ್ರೊಟೆಸ್ಟೆಂಟ್‌ರ ಕುರಿತು ಹೇಳುವುದು ಸೂಕ್ತ. ಕಾರಣ ಕೆಥೂಲಿಕ ಕನ್ನಡ ಸಮಗ್ರ ಬೈಬಲ್ ರೂಪುಗೊಂಡಿದ್ದು ೧೯೬೨ ರಿಂದ ೧೯೬೩ ರಲ್ಲಿ. ೧೯೮೨ರಲ್ಲಿ ಹೊಸ ಒಡಂಬಡಿಕೆ ಪ್ರಕಟವಾಗಿತ್ತು. ಇಲ್ಲಿ ಬಳಸಿದ ಪದ ಕನ್ನಡದಲ್ಲಿ ಬಳಕೆಯಾಗಿದ್ದರೂ ಅದನ್ನು ಕೈ ಬಿಟ್ಟು ಈ ಮೊದಲು ತಮಿಳಿನಿಂದ ಭಾಷಾಂತರಗೊಂಡ ಬೈಬಲ್ಲೇತರ ಸಾಹಿತ್ಯ ಪ್ರಭಾವದಿಂದ ಬಳಸಿದವುಗಳಾಗಿವೆ ಉದಾ. ಪೀಟರ್ ಬದಲಾಗಿ ಪೇತ್ರ, ತೈತಸ ಬದಲಾಗಿ ತೀತ ಎಂದಿದ್ದರೇ ಕೆಥೂಲಿಕರು ಇವುಗಳ ಬದಲಾಗಿ ಪೀಟರಿಗೆ ರಾಯಪ್ಪ, ತೀತಸನಿಗೆ ಚಿನ್ನಪ್ಪ ಎಂದು ಉಪಯೋಗಿಸಿದ್ದಾರೆ.

ಕರ್ನಾಟಕದಲ್ಲಿ ಕ್ರೈಸ್ತ ಧರ್ಮ ಪ್ರಸಾರ ಮಾಡಿದ ಪ್ರೊಟೆಸ್ಟೆಂಟ್ ಮಿಶನ್‌ಗಳಲ್ಲಿ ಲಂಡನ್ ಮಿಶನ್, ವೆಸ್ಲಿಯನ್ ಮೆಥೊಡಿಸ್ಟ ಮಿಶನ್ ಹಾಗೂ ಬಾಶೆಲ್ ಮಿಶನ್‌ಗಳು ಪ್ರಮುಖವಾದವುಗಳು. ಈ ಕ್ರೈಸ್ತ ಸಂಘದ ಉದ್ದೇಶಗಳು ಬೇರೆ ಬೇರೆ ದೇಶಗಳಲ್ಲಿರುವ ನಿಜವಾದ ನಂಬಿಕೆವುಳ್ಳ ಎಲ್ಲ ಕ್ರೈಸ್ತರನ್ನು ಒಂದು ವಿಧವಾದ ಐಕ್ಯದಲ್ಲಿ ತರುವುದು ಮತ್ತು ಆಗ ಎಲ್ಲಾ ಕಡೆಗಳಲ್ಲಿ ಪ್ರಸಾರವಾಗುತ್ತಲಿದ್ದ ವಿಚಾರವಾದಿತ್ವ (Rationalism) ಕ್ರೈಸ್ತತ್ವದ ವಿರುದ್ಧವಾಗಿ ಮಾಡುತ್ತಿದ್ದ ಖಂಡನೆಗಳನ್ನು ಎದುರಿಸಿ ಕ್ರೈಸ್ತ ಸತ್ಯವನ್ನು ಕಾಪಾಡುವಂಥದ್ದೂ ಕಂಡು ಬರುತ್ತದೆ. ಇಂತಹ ಸಂಘದ ಕಾರ್ಯದರ್ಶಿಗಳು, ಪದಾಧಿಕಾರಿಗಳು ಪ್ರಮುಖ ವಿಶ್ವವಿದ್ಯಾಲಯದಲ್ಲಿ ದೈವಜ್ಞಾನ (Theology) ಶಾಸ್ತ್ರಗಳನ್ನು ಅಭ್ಯಸಿಸಿದ ಪದವೀಧರರು.

---

೧. ಕ.ಧಾ.ಸಾ.ಕ್ರೈಮಿ ಕೊಡುಗೆ ಎಡ್ವರ್ಡ್ ನೊರೋನ ಪು.೧೭೧

ಕನ್ನಡದ ಪ್ರಥಮ ಬೈಬಲ್ ಮುದ್ರಣದಲ್ಲಿ ಅನುವಾದಕ ರೆ ಜಾನ್ ಹ್ಯಾಂಡ್ಸನ ನಂತರ, ಮದ್ರಾಸ ಆಕ್ಸಲರಿ ಬೈಬಲ್ ಸೊಸೈಟಿಯು ಭಾಷಾಂತರ ಕಾರ್ಯದಲ್ಲಿ ಅನುಭವಿ ಹಾಗೂ ನುರಿತ ತಜ್ಞರನ್ನು ಗುರುತಿಸುವ ಕಾರ್ಯದಲ್ಲಿ ತೊಡಗಿ ಬೇರೆ ಬೇರೆ ಭಾಷಾ ಕೋವಿದರನ್ನು ಕಂಡು ಕೊಂಡಿತು. ೧೮೪೪ ರಲ್ಲಿ ರೆ|| ಜಿ. ಎಚ್ ವೀಗಲ್ (Weigle) ರವರನ್ನು ಹೊಸ ಒಡಂಬಡಿಕೆ ಭಾಗವನ್ನು ಭಾಷಾಂತರಿಸಲು ನೇಮಿಸಿತು. ಅನಂತರ ಸಮಗ್ರ ಬೈಬಲ್ ಭಾಷಾಂತರಕ್ಕೆ ಅವರನ್ನೇ ಜವಾಬ್ದಾರಿ ವ್ಯಕ್ತಿಯಾಗಿ ಮುಂದುವರೆಸಿತು. ಈತನ ಭಾಷಾಂತರದಲ್ಲಿ ಸರಳತೆ ವಿವಿಧ ಶಬ್ದಗಳ ಬಳಕೆ ಕಂಡು ಬರುತ್ತವೆ. ಇಂತಹ ಅನುವಾದದಲ್ಲಿ ವ್ಯಕ್ತಿಯೋರ್ವನ ನಿಯಮ ಬಳಸದೇ ಸಾರ್ವತ್ರಿಕ ದೃಷ್ಟಿಕೋನದಲ್ಲಿ ವೀಗಲ್‌ನ ಅನುವಾದಗಳು ರೂಪಗೊಂಡ ಬಗ್ಗೆ ಎಲ್ಲರ ಮೆಚ್ಚುಗೆ ನಿರ್ಣಯವನ್ನು ಪಡೆದಿದೆ.

To present the inspired writings in their own unaltered and undiminished beauty and prose in language, Simple perspicuous and dignified ಎಂಬುದೇ ಪ್ರಥಮ ಪರಿಷ್ಕರಣ ಸಮಿತಿಯ ಗುರಿಯಾಗಿದ್ದಿತು.

ಇನ್ನೂ ಕನ್ನಡ ಭಾಷೆಯ ದೃಷ್ಟಿಯಿಂದ ಅವರು ವಿಚಾರಮಾಡಿ, ಸುಲಭವಾಗಿ ಅರ್ಥವಾಗುವ ದೇಶ್ಯ ಮತ್ತು ತದ್ಭವ ಶಬ್ದಗಳನ್ನೇ ಆಯ್ದುಕೊಳ್ಳಬೇಕು; ಅವು ಸಿಕ್ಕದೆಹೋದಲ್ಲಿ ಸಂಸ್ಕೃತ ಶಬ್ದಗಳಿಗೆ ಶರಣುಹೋಗಬೇಕು. ಗ್ರಾಮ್ಯ ಅಥವಾ ಅನ್ಯದೇಶ್ಯ ಶಬ್ದಗಳನ್ನು ಅನಿವಾರ್ಯವೆಂದಿದ್ದರೆ ಮಾತ್ರ ಬಳಸಬೇಕು ಎಂದು ಗೊತ್ತು ಪಡಿಸಿಕೊಂಡರು. ಮುಂದುವರೆದು ಬೈಬಲ್ಲಿನಲ್ಲಿ ಬರುವ ಹಿಬ್ರೂ, ಗ್ರೀಕ್ ಅಂಕಿತ ನಾಮಗಳನ್ನು ಆ ಭಾಷೆಗಳ ಮೂಲ ಸ್ವರೂಪದಲ್ಲಿಯೇ ಇಟ್ಟುಕೊಳ್ಳಬೇಕು ಮತ್ತು ಕನ್ನಡ ನಾಲಗೆಗೆ ಒಗ್ಗುವ ಮಟ್ಟಿಗೆ ಮಾತ್ರ ಅಕ್ಷರಿಕೆಯಲ್ಲಿ ಬದಲು ಮಾಡಿ ಕೊಳ್ಳಬಹುದು ಎಂದು ನಿರ್ಧರಿಸಿದರು. (ಉದಾ- John ಇದರ ಮೂಲ ಹಿಬ್ರೂ ಶಬ್ದವಾದ Yohann ಎಂಬುದನ್ನು ಅನುಸರಿಸಿ ಯೋಹಾನ್ ಎಂದು ಅನುವಾದಿಸಿದರಲ್ಲದೆ ಜಾನ್ ಎಂದು ಅಲ್ಲ)"[1] ಇಸ್ಲಾಂ ಧರ್ಮೀಯರು ಯೊಹಾನ್ನಾ ಎಂದು ಬಳಸಿರುವರು.

ಅನುವಾದ ಕಾರ್ಯದಲ್ಲಿ ಸಮರ್ಪಕವಾದ ಶಬ್ದಗಳು ಸಿಕ್ಕದೆ ಇದ್ದಾಗ ಮಿಶನರಿಗಳು ಕನ್ನಡ ಭಾಷೆಯನ್ನು ಜರಿದುದೂ ಇದೆ. ಹಳೆಗನ್ನಡವು ಅವರಿಗೆ ಬೇಡವಾಗಿತ್ತು. ಹೊಸಗನ್ನಡವು ಅವರ ಕಾಲಕ್ಕೆ ಪುಷ್ಟಿಯನ್ನು ಹೊಂದಿರಲಿಲ್ಲ. ಸಂಸ್ಕೃತದ ಸಹಾಯವನ್ನು ನಿರಾಕರಿಸಿದರು. ಆ ನಿಮಿತ್ತದಿಂದ ಅನೇಕ ಹೊಸ ಶಬ್ದಗಳ ಸೃಷ್ಟಿಯಾಯಿತು. ಅನೇಕ ಶಬ್ದಗಳ ಪ್ರಚಲಿತ ಅರ್ಥವು ಹೊಸ ರೂಪ ತಾಳಿತು.

೧. ಹೊ.ಅ.ಶ್ರೀಹಾ., ಪು.೪೧೮

೨.೫. ಅನುವಾದಕ್ಕಾಗಿ ಮತ್ತು ಪ್ರಕಟನೆಗೆ ಆಯ್ದುಕೊಂಡ ಸ್ಥಳ

ಭಾರತದಲ್ಲಿ ಅನುವಾದಕ್ಕಾಗಿ ಆಯ್ದು ಕೊಂಡ ಪ್ರಮುಖ ಕೇಂದ್ರಗಳೆಂದರೆ ಕಲ್ಕತ್ತೆಯ ಸಿರಾಂಪುರ, (Serampore)* ಮದ್ರಾಸ್ ಪೋರ್ಟ ಸೆಂಟ್ ಜಾರ್ಜ ಕಾಲೇಜ, ಬಳ್ಳಾರಿಯ ವಾರ್ಡಲಾ ಕಾಲೇಜ, ಮಂಗಳೂರ ಬಾಶಲ್ ಕೇಂದ್ರ, ಬೆಂಗಳೂರಿನ ಬೈಬಲ್ ಸೊಸೈಟಿ ಆಫ್ ಇಂಡಿಯಾ ಹಾಗೂ ಧಾರವಾಡದ ಬಾಶಲ್ ಕೇಂದ್ರ.

ಸೆರಾಂಪುರ (Serampore)

ಕೇವಲ ಬೈಬಲ್ ಭಾಷಾಂತರದ ಉದ್ದೇಶವಾಗದೆ ಪಾಶ್ಚಾತ್ಯ ಶಿಕ್ಷಣ, ಸಾಹಿತ್ಯ ಹಾಗೂ ವಿಜ್ಞಾನದ ಮಾಹಿತಿಗಾಗಿ ಮತ್ತು ಯುವಕ ಇಂಗ್ಲೀಷ್ ಕೆಡೆಟ್ (Cadets) ಗಳಿಗೆ ಭಾರತೀಯ ಭಾಷಾಜ್ಞಾನ ನೀಡುವ ಉದ್ದೇಶವನ್ನು ಹೊಂದಿತ್ತು. ಲಾರ್ಡ ವೆಲ್ಲಸ್ಲಿ ಸ್ಥಾಪಿಸಿದ್ದ ಪೋರ್ಟ ವಿಲಿಯಂ ಕಾಲೇಜ ಜೊತೆಗೆ ಭಾಷಾಂತರಕಾರರ ಸಂಬಂಧವಿತ್ತು. "ಈ ಭಾಷಾಂತರದ ಶಾಖೆಗೆ ಮುಖ್ಯಸ್ಥನಾಗಿ ರೆ ಡೇವಿಡ್ ಬ್ರೌನ್ (David Brown) ಮತ್ತು ಉಪಮುಖ್ಯಸ್ಥನಾಗಿ ರೆ ಕ್ಲೌಡಿಯಸ್ ಬುಚನಾನ (Claudius Buchanan) ರವರು ನೇಮಕಗೊಂಡಿದ್ದರು - "ಭಾಷಾಂತರ ಕಾರ್ಯಕ್ಕೆ ಅನೇಕ ದೇಶೀಯ ಪಂಡಿತರು ನಿಯೋಜಿತ ಹಣದ ಮೇಲೆ ಆಕರ್ಷಿಸಲ್ಪಟ್ಟಿದ್ದರು."[೧]

"ಕ್ರೈಸ್ತ ಮತ ಬೋಧಕ ಜಾನ್ ಗಿಲ್‌ಕ್ರಿಸ್ಟ (John Gilchrist) ಮತ್ತು ಇತರರು ಕನ್ನಡ ಅಚ್ಚು ಮೊಳೆಗಳ ನಿರ್ಮಾಣದಲ್ಲಿ ಜಯಪ್ರದರಾದರು. ಪರಿಣಾಮವಾಗಿ ಸುಮಾರು ಕ್ರಿ.ಶ ೧೭೯೦ ರ ಕಾಲಕ್ಕೆ ಬಂಗಾಳದ ಶ್ರೀರಾಮಪುರ ಮುದ್ರಣಾಲಯದಲ್ಲಿ ಕನ್ನಡ ಮುದ್ರಣಕ್ಕೆ ಪ್ರಾರಂಭಿಸಿದರು"[೨] ಮುಂದೆ ೧೮೦೫ ರಲ್ಲಿ ವಿಧ್ಯುಕ್ತವಾಗಿ ಕಾರ್ಯಪ್ರಾರಂಭಿಸಿ ಪರ್ಶಿಯನ್, ಹಿಂದೂಸ್ಥಾನಿ, ವೆಸ್ಟರನ್ ಮಲೆಯಾ, ಓರಿಯಾ ಮತ್ತು ಮರಾಠಿ ಭಾಷಾಂತರ ಸಿದ್ದಗೊಳಿಸಿತ್ತು. ೧೮೦೬ ರಲ್ಲಿ ಈಸ್ಟ ಇಂಡಿಯಾ ಕಂಪನಿಯ ನಿರ್ದೇಶಕರು ಕಾಲೇಜಿನ (Fort williom college) ಕಾರ್ಯದ ಕಡೆಗೆ ಹೆಚ್ಚು ಗಮನ ಹರಿಸಲೆಂದು ಭಾಷಾಂತರ ಕಾರ್ಯವನ್ನು ನಿಲ್ಲಿಸಿದರು. ಆದರೆ ಅದು ಸಾಧ್ಯವಾಗಲಿಲ್ಲ. ಏಕೆಂದರೆ ಈಸ್ಟ ಇಂಡಿಯಾ ಕಂಪನಿಯ ಕೆಡೆಟ್‌ಗಳು ನಾಗರೀಕ ಭಾಷೆ ಹಾಗೂ ಜನಾಂಗಗಳನ್ನು ಅಭ್ಯಸಿಸಬೇಕಾಗಿತ್ತು. ವಿಶೇಷತಃ ಭಾಷಾಂತರ ಶಾಖೆ ಕಾಲೇಜಿನ ಒಂದು ಅಂಗವಾಗಿ ಪರಿಣಮಿಸಿತ್ತು.

"ಕೆಂಬ್ರಜ್ಜಿನ ಚಾರ್ಲ ಸೈಮನ್ನರ ಆ ದೇಶದಂತೆ ಬ್ರೌನ್ ಮತ್ತು ಬುಚನಾನರು ೧೭೯೭ ರಲ್ಲಿ ಈ ಕಾರಣಕ್ಕಾಗಿ ಭಾರತಕ್ಕೆ ಬಂದವರಾಗಿದ್ದರು"[೩] ಕೊನೆಯಲ್ಲಿ ಈಸ್ಟ ಇಂಡಿಯಾ ಕಂಪನಿಗೆ ಭಾಷಾಂತರ

* ಸೆರಾಂಪುರ ಬಂಗಾಳದಲ್ಲಿದೆ. ಮಿಶನರಿಗಳ ಮೊದಲ ಮುದ್ರಣಕಾರ್ಯ ಇಲ್ಲಿಯೇ ಪ್ರಾರಂಭಗೊಂಡಿದೆ. ಇದು ಕಲ್ಕತ್ತದಿಂದ ೧೫ ಮೈಲಿ ದೂರದಲ್ಲಿದೆ.

೧. B.T.I.I.P & Ceylone, J.S.M.Hooper, Pp.15

೨. ಪಾ.ವಿ.ಕ.ಸೇವೆ ಐ.ಮಾ.ಮುತ್ತಣ್ಣ, ಪು.೨೬೬

೩. B.T.I.I.P & Ceylone, J.S.M.Hooper, Pp.15

ಕಾರ್ಯ ನಿಲ್ಲಿಸುವುದು ಅಸಾಧ್ಯವಾಯಿತು. ಈ ಸಂದರ್ಭದಲ್ಲಿ ಬ್ರೌನ್ ಹಾಗೂ ಬುಚನಾನರು ಭಾಷಾಂತರ ಕಾರ್ಯಕ್ಕೆಂದು 1600\- ರೂ ಹಣ(Fund) ಎಂಬುದಾಗಿ ಪ್ರತ್ಯೇಕ ಇಡಬೇಕೆಂದು ಸೂಚನೆ ಇತ್ತರು.

ಈ ಬೇಡಿಕೆ "೧೮೦೪ ರಲ್ಲಿ ಅಸ್ತಿತ್ವಕ್ಕೆ ಬಂದಿದ್ದ ಬ್ರಿಟಿಷ್ ಪಾರೆನ್ ಬೈಬಲ್ ಸೊಸೈಟಿಗಳು ರೂ.೧೦೦೦.೦೦ ಹಣವನ್ನು ಕರಸ್ಪಾಂಡಿಂಗ್ ಕಮೀಟಿಗೆ ನೀಡಿದವು".[೧] ಇದಲ್ಲದೆ ೧೮೧೨ ರಲ್ಲಿ ಸಿರಾಂಪುರ ಪ್ರಸ್ಸಿಗೆ ಬೆಂಕಿ ತಗುಲಿದಾಗ ಅಲ್ಲಿದ್ದ ಸಂಗ್ರಹಿತ ಕಾಗದವೆಲ್ಲಾ ನಾಶವಾಗಿದ್ದಿತು. ಇದರ ಮೌಲ್ಯದ ರೂ ೩೦೦೦.೦೦ಗಳನ್ನು ಸಂಸ್ಥೆ ಭರಿಸಿತು. ಹೀಗೆ ಒದಗಿ ಬಂದ ಹಣದ ಸಹಾಯದಿಂದ ಭಾಷಾಂತರ ಕಾರ್ಯ ಭರದಿಂದ ಸಾಗಿತು. ಭಾರತದ ಜನತೆಗೆ ಅವರವರ ಭಾಷೆಯಲ್ಲಿ ದೇವರ ವಾಕ್ಯ ಬೈಬಲ್ ಒದಗಿಸುವಲ್ಲಿ ೧೮೧೧ ರಿಂದ ತಲೆಎತ್ತಿ ನಿಂತಿತು. ರೆ ಬ್ರೌನ್ ಈ ಸಂಸ್ಥೆಯ ಕಾರ್ಯದರ್ಶಿ ಸ್ಥಾನದಲ್ಲಿ ಮುಂದುವರೆದರು. ನಂತರದ ವರ್ಷಗಳಲ್ಲಿ ಕರಸ್ಪಾಂಡಿಂಗ್ ಕಮೀಟಿಯು ನಿಂತು ಹೋಗಿ ಬೈಬಲ್‌ಸೊಸೈಟಿಯ ಆಕ್ಸಲರಿ ಕಮೀಟಿ ಭಾಷಾಂತರ ಕಾರ್ಯವನ್ನು ಕೈಗೆತ್ತಿಕೊಂಡಿತು.

ಭಾಷಾಂತರದ ಎರಡನೆಯ ಹಂತವಾಗಿ ಬ್ಯಾಪ್ಟಿಸ್ಟಮಿಶನ್ ಸಿರಾಂಪುರದಲ್ಲಿ ಅಸ್ತಿತ್ವವನ್ನು ಸ್ಥಾಪಿಸಿತು. ೧೭೯೩ ರಲ್ಲಿ ವಿಲಿಯಂ ಕೇರಿ ಬಂಗಾಲಕ್ಕೆ ಬಂದು ತಲುಪಿದನು. ತದನಂತರದಲ್ಲಿ ಕೇರಿಯೊಂದಿಗೆ ಭಾಷಾಂತರದಲ್ಲಿ ಸಹಕರಿಸಲು ಬಂದ ಮಾರ್ಶಮನ್ ಮತ್ತು ವಿಲಿಯಂ ವಾರ್ಡರವರು ಕಾರ್ಯವನ್ನು ಮುಂದುವರೆಸಿದರು. ಆ ಸಮಯದಲ್ಲಿ ದೇಶೀಯ ಪಂಡಿತರ ಸಹಾಯವನ್ನು ಪಡೆಯಲಾಗುತಿತ್ತು. ೧೮೦೧ ರಲ್ಲಿ ಬಂಗಾಲ, ೧೮೦೬ ರಲ್ಲಿ ಸಂಸ್ಕೃತ ಹೊಸ ಒಡಂಬಡಿಕೆಯ ಭಾಷಾಂತರ ಮುಗಿದಿತ್ತು. ಆಗ ಭಾರತದಲ್ಲಿ ಸಂಸ್ಕೃತ ಮಾತನಾಡುವ ಭಾಷೆಯಾಗಿರಲಿಲ್ಲ ಎಂಬುದನ್ನು ಗಮನಿಸಬೇಕು. ಸಂಸ್ಕೃತ ಒಂದರಲ್ಲಿ ಬೈಬಲ್ ಭಾಷಾಂತರಗೊಂಡರೆ ಅದರ ಮೂಲಕ ಭಾರತೀಯ ಎಲ್ಲ ಭಾಷೆಗಳಲ್ಲಿ ಸರಳವಾಗಿ ಭಾಷಾಂತರಿಸಬಹುದೆಂದು ಕೇರಿ ಭಾವಿಸಿದಂತೆ ತೋರುತ್ತದೆ.

೧೮೦೯ ರಲ್ಲಿ ಕೇರಿ ಕನ್ನಡದಲ್ಲಿ ಹೊಸ ಒಡಂಬಡಿಕೆಯನ್ನು ಭಾಷಾಂತರಿಸಿದನು. ಇತರ ಭಾಷೆಯ ಭಾಷಾಂತರ ಕೇಂದ್ರವೆನಿಸಿದ್ದ ಸೆರಾಂಪುರ, ಕನ್ನಡ ಬೈಬಲ್ ಅನುವಾದಕ್ಕೂ ಪ್ರಥಮ ಕೇಂದ್ರ ಸ್ಥಳವಾಗಿ ಪರಿಣಮಿಸಿತು.

ಮದ್ರಾಸ

ಮದ್ರಾಸ ಆಕ್ಸಲರಿ ಸೊಸೈಟಿಯು ೧೮೨೦ ರಲ್ಲಿ ಅಸ್ತಿತ್ವಕ್ಕೆ ಬಂದಿತು. ಬೈಬಲ್ ಮುದ್ರಣ ಹಾಗೂ ಪ್ರಕಟಣೆ ಕಾರ್ಯವನ್ನು ಕೈಗೆತ್ತಿಕೊಂಡು ಕೇವಲ ಪ್ರಾದೇಶಿಕ ಭಾಷೆಗಷ್ಟೇ ಮಹತ್ವಕೊಡದೆ ದಕ್ಷಿಣ ಭಾರತದ ಭಾಷೆಗಳಿಗೆ ಸಹಾಯ ಸಲ್ಲಿಸುವ ಸಹಾಯಕ ಬೈಬಲ್ ಸಂಘವಾಗಿ ಕಂಡು ಬಂದಿತು.

---

೧. B.T.I.I.P & Ceylone, J.S.M.Hooper, Pp.18

ಕರ್ನಾಟಕ ಮಿಶನರಿಗಳು ಬೈಬಲ್ ಅನುವಾದ ಪ್ರಕಟಣೆಗೆ ಮದ್ರಾಸ ಆಕ್ಸಲರಿಯನ್ನು ಅವಲಂಬಿಸಿದ್ದರು. ಬೈಬಲ್ ಭಾಷಾಂತರದ ಮೊದಲ ಆವೃತ್ತಿ ಪ್ರಕಟಗೊಂಡಿದ್ದರೂ ಕರ್ನಾಟಕದ ಎಲ್ಲ ಪ್ರಾಂತ್ಯಗಳ ಜನರ ಕನ್ನಡ ಶಬ್ದ ಶೈಲಿಯನ್ನು ಆ ಆವೃತ್ತಿ ಹೊಂದಿದಂತೆ ಕಂಡು ಬರದ ಕಾರಣ ಬದಲಾವಣೆಯ ಅಗತ್ಯತೆಯನ್ನು ತೋರ್ಪಡಿಸಿತು. ಇಂತಹ ಸಮಯದಲ್ಲಿ ಮದ್ರಾಸ ಆಕ್ಸಲರಿ ೧೮೪೩ ರಲ್ಲಿ ಅಸ್ತಿತ್ವದಲ್ಲಿದ್ದ ಎಲ್ಲ ಮಿಶನ್‌ಗಳನ್ನು ಒಂದು ಗೂಡಿಸಿ ಏಕ ರೂಪದ ಬೈಬಲ್ ಆವೃತ್ತಿ ತರುವಲ್ಲಿ ಶ್ರಮಿಸಿತು. ಮುಂದೆ ೧೮೪೯ ರಲ್ಲಿ ಕರ್ನಾಟಕದ ಎಲ್ಲ ಪ್ರೊಟೆಸ್ಟೆಂಟ್ ಮಿಶನ್ ಸಂಸ್ಥೆಗಳ ಪ್ರತಿನಿಧಿಗಳಿರುವ ಒಂದು ಸಮಿತಿಯನ್ನು ರಚಿಸಿ, ಆಗಿನ ಬೈಬಲ್ ಆವೃತ್ತಿಯ ಪರಿಷ್ಕರಣದ ಕೆಲಸವನ್ನು ಒಪ್ಪಿಸಿತು. ಈ ಸಮಿತಿಗೆ ವೈಗಲನೇ ಮುಖ್ಯಸ್ಥನಿದ್ದನೆಂಬುದು ಅವನ ಭಾಷಾಂತರದ ಕೃತ್ಯತ್ವ ಶಕ್ತಿಗೆ ನಿದರ್ಶನವಾಗಿದೆ.

೧೮೭೫ ರವರೆಗೆ ಬೆಂಗಳೂರಿನಲ್ಲಿ ಆಕ್ಸಲರಿ ಸೊಸೈಟಿ ಪ್ರಾರಂಭವಾಗುವ ಮೊದಲು ಮದ್ರಾಸ ಆಕ್ಸಲರಿ ಸಂಪೂರ್ಣ ಕನ್ನಡ ಬೈಬಲ್ ಅಭಿವೃದ್ಧಿಗೆ ಶ್ರಮಿಸುತ್ತ ಬಂದಿದೆ. ಮದ್ರಾಸ ಆಕ್ಸಲರಿ ಬೈಬಲ್ ಅನುವಾದಕ್ಕೆ ಸಹಾಯ ಸಲ್ಲಿಸುವುದರೊಂದಿಗೆ ಕನ್ನಡ ಸಾಹಿತ್ಯದ ಅಭಿವೃದ್ಧಿಗೂ ಪರೋಕ್ಷವಾಗಿ ಸಹಾಯ ಸಲ್ಲಿಸಿದೆ.

ಇಂದಿಗೂ ಬೆಂಗಳೂರು ಆಕ್ಸಲರಿ ಸೊಸೈಟಿಯ ಪ್ರಮುಖ ಕಾರ್ಯ ಮದ್ರಾಸ ಆಫೀಸಿನ ಮೂಲಕವೇ ಸಾಗಿ ಬರುವಂತದಾಗಿದೆ. ೧೯೪೪ ರ ನಂತರ ಬೆಂಗಳೂರ ಆಕ್ಸಲರಿ ಸಂಘ, ಬೈಬಲ್ ಸೊಸೈಟಿ ಆಫ್ ಇಂಡಿಯಾ (B.S.I) ಎಂಬ ಹೆಸರಿನಿಂದ ಇಂದಿಗೂ ಕರ್ನಾಟಕದಲ್ಲಿ ಬೈಬಲ್ ವಿತರಣ ಕಾರ್ಯದಲ್ಲಿ ತೊಡಗಿದೆ. ಕರ್ನಾಟಕ ಜನತೆಗೆ ಬೈಬಲ್ ಮುದ್ರಿಸಿಕೊಂಡು ಒದಗಿಸುವಲ್ಲಿ ಮದ್ರಾಸ ಆಕ್ಸಲರಿ ಪಾತ್ರ ಪ್ರಮುಖವಾಗಿದೆ.

ಬಳ್ಳಾರಿ

ಲಂಡನ್ ಮಿಶನ್ ಸೊಸೈಟಿಯವರು ೨೯ ವರ್ಷದ ರೆ. ಜಾನ್ ಹ್ಯಾಂಡ್ಸನನ್ನು ಭಾರತ ದೇಶಕ್ಕೆ ಮಿಶನರಿಗಳಾಗಿ ಕಳುಹಿಸಿಕೊಟ್ಟರು. "೧೮೦೯ ನೇ ಇಸವಿ ನವೆಂಬರ್ ತಿಂಗಳಿನಲ್ಲಿ ಹಡಗು ಪ್ರಯಾಣ ಮಾಡುತ್ತಾ ಮದ್ರಾಸ ಪಟ್ಟಣವನ್ನು ೧೮೧೦ ಫೆಬ್ರುವರಿ ೫ ನೇ ತಾರೀಖಿನ ದಿನದಂದು ತಲುಪಿದನು"[೧]

ಈಸ್ಟ ಇಂಡಿಯಾ ಕಂಪನಿಯ ನಿರ್ದೇಶಕ ಮಂಡಳಿಯ ಅನುಮತಿ ಇಲ್ಲದೆ ಮದ್ರಾಸಿಗೆ ಬಂದುದರಿಂದ ಅಲ್ಲಿಯ ಗವ್ಹರ್ನರ್ ಜಾರ್ಜ ಬಾರ್ಲೊ ಎಂಬುವರು ಕೂಡಲೆ ಇಂಗ್ಲೆಂಡಿಗೆ ಹಿಂದಿರುಗಬೇಕೆಂದು ಆಜ್ಞಾಪಿಸಿದರು. ಅಲ್ಲಿಯೇ ಇದ್ದ ಮದ್ರಾಸಿನ ಆಜ್ಞೇಯ ಸೈನಿಕರ ಧರ್ಮ ಬೋಧಕ

೧. ಘುನ ಜಾನ್ ಹ್ಯಾಂಡ್ಸ್, ಸಭಾಪತಿ ಎನ್., ಪು.೩

ಎಂ. ಥಾಮಸನ್‌ರು ಜಾನ್ ಹ್ಯಾಂಡ್ಸ ಪರವಾಗಿ ಕಾಡಿ,ಬೇಡಿ ಅವರು ಭಾರತದಲ್ಲಿಯೇ ಉಳಿಯುವಂತೆ ಮಾಡಿದರು. ಹ್ಯಾಂಡ್ಸನಿಗೆ ಬಳ್ಳಾರಿಗೆ ಬರುವಂತಾಯಿತು. ಆಗ ರೈಲಿನ ಸೌಕರ್ಯವಿರಲಿಲ್ಲ. ಎತ್ತಿನ ಗಾಡಿಯಲ್ಲಿ ಕುಳಿತುಕೊಂಡು ಬಳ್ಳಾರಿಯನ್ನು ತಲುಪಿದರೆಂದು ಹೇಳಲಾಗುತ್ತದೆ.

ಬಳ್ಳಾರಿಗೆ ಬಂದನಂತರ ಕನ್ನಡ ಭಾಷೆ ಕಲಿಯಲು ಓರ್ವ ಬ್ರಾಹ್ಮಣ ಪಂಡಿತನನ್ನು ನೇಮಿಸಿಕೊಂಡನು. ಆ ಸಮಯದಲ್ಲಿ ಕನ್ನಡ ಭಾಷಾ ನಿಘಂಟು, ವ್ಯಾಕರಣ ಇರಲಿಲ್ಲ. ಜಾನ್ ಹ್ಯಾಂಡ್ಸ ಸ್ವತಃ ಇವುಗಳ ಕುರಿತು ಪುಸ್ತಕ ಸಿದ್ಧಪಡಿಸಿದನು. ಜೊತೆಗೆ ಹೊಸ ಒಡಂಬಡಿಕೆಯ ಮೂರನೇ ಪುಸ್ತಕವಾದ ಲೂಕನು ಬರೆದ ಭಾಗವನ್ನು ಭಾಷಾಂತರಿಸಿದನು. ಹೀಗೆ ಕನ್ನಡ ಬೈಬಲ್ ಭಾಷಾಂತರ ಕಾರ್ಯ ಬಳ್ಳಾರಿಯಲ್ಲಿ ಪ್ರಾರಂಭವಾಗಿ ಮೊಟ್ಟ ಮೊದಲ ಮುದ್ರಿತ ಕನ್ನಡ ಹೊಸ ಒಡಂಬಡಿಕೆಯು ೧೮೧೨ ರಲ್ಲಿ ಮೂಡಿ ಬಂದಿತು. "ಜಾನ್ ಹ್ಯಾಂಡ್ಸ ಮತ್ತು ಅವನ ಸಂಗಡಿಗರು ಬರೆದ ಲೂಕನ ಸುವಾರ್ತೆಯು ಬ್ರಿಟೀಷ ವಸ್ತುಸಂಗ್ರಹಾಲಯದಲ್ಲಿ ಇಡಲಾಗಿದೆ"[೧]

ಬಳ್ಳಾರಿಯಲ್ಲಿ ಆಗ ಮುದ್ರಣಾಲಯವಿರಲಿಲ್ಲ. ಹ್ಯಾಂಡ್ಸನಿಂದ ಭಾಷಾಂತರಗೊಂಡ ಹೊಸ ಒಡಂಬಡಿಕೆಯ ಸತ್ಯವೇದ ಸಂಘದ ಕಲ್ಕತ್ತ ವಲಯದವರ ಹಣ ಸಹಾಯದ ಮೂಲಕ ಮದ್ರಾಸಿನಲ್ಲಿ ಅಚ್ಚು ಹಾಕಲಾಯಿತು.

ಮಂಗಳೂರು

"ಕನ್ನಡ ಮುದ್ರಣ ವಿಚಾರದಲ್ಲಿ ಮಂಗಳೂರ ಬಾಸೆಲ್ ಮಿಶನ್ನಿನ ಹೆಸರು ಅಜರಾಮರವಾದುದು"[೨] ೧೮೩೪ ರಿಂದ ಮಂಗಳೂರಿನಲ್ಲಿ ಬಾಸೆಲ್ ಮಿಶನ್ ಕಾರ್ಯ ಪ್ರಾರಂಭವಾಯಿತು. ಬೈಬಲ್ ಅನುವಾದದಲ್ಲಿ ಪ್ರಮುಖ ಮಿಶನರಿ ಎನಿಸಿದ್ದ ರೆ. ವೀಗಲ್ ಮಂಗಳೂರನ್ನು ಕೇಂದ್ರ ಸ್ಥಾನವಾಗಿ ಪಡೆದುಕೊಂಡು ವಿಶಿಷ್ಟ ಸೇವೆಯನ್ನು ಕನ್ನಡ ಬೈಬಲ್ ಭಾಷಾಂತರಕ್ಕಾಗಿ ಕೊಟ್ಟಿರುವನು. ೧೮೪೦ ರಲ್ಲಿ ಜರ್ಮನಿಯಿಂದ ಭಾರತಕ್ಕೆ ಬಂದ ವೀಗಲ್ ಈ ಮೊದಲೇ ಭಾರತದಲ್ಲಿದ್ದ ಹರ್ಮನ್ ಮೋಗ್ಲಿಂಗನ ಸಂಬಂಧಿ. ಭಾಷಾಂತರದ ಕಾರ್ಯವನ್ನು ಮುದ್ರಣ ರೂಪದಲ್ಲಿ ತರುವಲ್ಲಿ ಮುದ್ರಣಾಲಯದ ಕೊರತೆಯನ್ನು ಕಂಡ ವೀಗಲ್ "ಸ್ವದೇಶದಿಂದ ಹೊರಟು ಇಲ್ಲಿಗೆ ಬರುವ ಮುಂಚೆ ಮುಂಬೈನಲ್ಲಿ ಕೈ ಮುದ್ರಣ ಯಂತ್ರವನ್ನು ಕಂಡಿದ್ದನು. ಅಲ್ಲಿದ್ದವರ ಅಲ್ಪ ಪರಿಚಯದ ಆಸರೆಯನ್ನು ನೆಚ್ಚಿಕೊಂಡು ಮುಂಬಯಿಗೆ ಹೋಗಿ ಒಂದು ಮುದ್ರಣ ಯಂತ್ರವನ್ನು ೧೮೪೨ ರಲ್ಲಿ ತಂದನು. ಕರ್ನಾಟಕ ಅಷ್ಟೇ ಅಲ್ಲದೆ ದಕ್ಷಿಣ ಭಾರತದಲ್ಲಿಯೇ ಶ್ರೇಷ್ಠ ಮುದ್ರಣಾಲಯವೆಂದು ೬೦-೭೦ ವರ್ಷಗಳ ಕಾಲ ಖ್ಯಾತಿಯನ್ನು ಪಡೆದಿದ್ದ ಬಾಸೆಲ್ ಮಿಶನ್ ಮುದ್ರಣ ಕಾರ್ಯಕ್ಕೆ ವೀಗಲ್‌ನು ನಾಂದಿಯನ್ನು ಹಾಡಿದನೆಂಬುದು ಗಮನಿಸತಕ್ಕದ್ದು"[೩]

---

೧. ಘನ ಜಾನ್ ಹ್ಯಾಂಡ್ಸ್, ಸಭಾಪತಿ ಎನ್., ಪು.೧೫

೨. ಪುಸ್ತಕ ಭಾಗ್ಯ, ಹಿ.ಮ.ನಾಗಯ್ಯ, ಪು.೨೨೦

೩. ಕ.ಬಾ.ಮಿಶನ್, ರೆ.ಜೆ.ಎಂ.ಜ್ಯೋಗುಳ, ಪು.೧೩೬

೧೮೫೦ರಲ್ಲಿ ಮತ್ತು ೧೮೬೫ ರ ಪರಿಷ್ಕೃತಗೊಂಡ ಕನ್ನಡ ಬೈಬಲ್ ಸುಂದರ ಅಚ್ಚಿನಿಂದ ಮುದ್ರಣಗೊಂಡಿದ್ದು ಮಂಗಳೂರಿನಲ್ಲಿಯೇ. ಈ "ಮುದ್ರಣಾಲಯದ ಸಂಸ್ಥಾಪಕರಲ್ಲೊಬ್ಬನಾದ Rev, J.A. Buhrer ಇವನು ೧೮೪೩ ರಲ್ಲಿ William Hoch ಇವನಿಂದ ಐರೋಪ್ಯಾ ಭಾಷೆಯಲ್ಲಿ ಬರೆಯಲ್ಪಟ್ಟ ಬೈಬಲ್ ಕಥಾ ಸೂಕ್ತಿಗಳನ್ನು ಕನ್ನಡಕ್ಕಿಳಿಸಿದನು." ಇದನ್ನು 'ದೇವವಾಕ್ಯ ದ್ವಿಪಂಚಾಶತಾ ಪೂರ್ವನಿರ್ಧಾರ ದ್ವಿಪಂಚಾಶತಿ, ನವನಿರ್ಧಾರ ದ್ವಿಪಂಚಾಶತಿ' ಎಂದು ದೀರ್ಘವಾದ ಹೆಸರಿನಿಂದ ಕರೆದಿದ್ದಾನೆ. ಈ ಗ್ರಂಥವು ೧೩೮ ಮತ್ತು ೧೦೭ demy ಪುಟಗಳ ಎರಡು ಕಾಂಡಗಳಾಗಿ Rev, Buhrer ಇವನ ಮುದ್ರಣಾಲಯದಲ್ಲಿಯೇ ಅಚ್ಚಾಗಿ ಹೊರಬಂತು.[೧]

ಮಂಗಳೂರಿನಲ್ಲಿ ಇನ್ನೊಂದು ಪ್ರಸಿದ್ಧ ಕ್ರೈಸ್ತ ಮುದ್ರಣಾಲಯವೆಂದರೆ 'ಕೋಡಿಯಾಲ್ ಬೈಲ್ ಪ್ರೆಸ್' ಇದು ಕೆಥೂಲಿಕರ ನೇತೃತ್ವದಲ್ಲಿ ಸ್ಥಾಪಿತವಾದದ್ದು. ಇಲ್ಲಿ ಕ್ರೈಸ್ತ ಸಾಹಿತ್ಯವು ವಿಪುಲವಾಗಿ ಮುದ್ರಿತಗೊಂಡಿದೆ. ಇದರ ವೈಶಿಷ್ಟವೆಂದರೆ ಕನ್ನಡ ಲಿಪಿಯಲ್ಲಿ ಕೊಂಕಣಿ ಸಾಹಿತ್ಯ ಮುದ್ರಿಸುತ್ತಿದ್ದುದು.

ಬೆಂಗಳೂರು

"೧೮೪೦ ಕ್ಕೆ ಮುಂಚೆ ಬೆಂಗಳೂರಿನಲ್ಲಿ ಯಾವ ಕನ್ನಡ ಮುದ್ರಣಾಲವೂ ಇಲಲಿಲ್ಲ"[೨] ವೆಂದು ಹಾವನೂರವರು ಅಭಿಪ್ರಾಯಪಟ್ಟಿದ್ದಾರೆ. ಆದರೆ ಬೆಂಗಳೂರಿನಲ್ಲಿ ೧೮೨೯ ರಲ್ಲಿ The Bangalore Bible Religious Book and Tract Society ಅಸ್ತಿತ್ವದಲ್ಲಿ ಅನೇಕ (tract) ಕರಪತ್ರಗಳನ್ನು ಮುದ್ರಿಸುತ್ತಿರುವ ಬಗ್ಗೆ ಉಲ್ಲೇಖವಿದೆ.ನಂತರ ಈ ಸಂಸ್ಥೆ ಬ್ರಿಟಿಷ್ ಮತ್ತು ಫಾರೆನ್ ಬೈಬಲ್ ಸೊಸೈಟಿಯ ಧಾರ್ಮಿಕ ಕರಪತ್ರಗಳ ಸೊಸೈಟಿಯಾಗಿ ಕಾರ್ಯ ನಿರ್ವಹಿಸಿತು. ಬಳ್ಳಾರಿಯಲ್ಲಿದ್ದ ಪ್ರೆಸ್ ಲಂಡನ್ ಮಿಶನ್ನಿನವರಿಗೆ ಸೇರಿತ್ತಾದ್ದರಿಂದ ವೆಸ್ಲಿಯನ್ನರು ಮತ ಪ್ರಸಾರ, ಶಿಕ್ಷಣ ಮುಂತಾದ ಸ್ವಕಾರ್ಯಗಳಿಗೆಂದು ಪ್ರತ್ಯೇಕ ಮುದ್ರಣಾಲಯದ ಅವಶ್ಯಕತೆ ಇತ್ತು. ಈ ಪ್ರೆಸ್ಸಿನ್ ಮೊದಲ ಕೃತಿ ಪ್ರಶ್ನೋತ್ತರ ಶಾಲಾ ಪುಸ್ತಕ. ಈ ಪ್ರೆಸ್ಸಿಗೆ ಕನ್ನಡ ಮೊಳೆಗಳನ್ನು ಮದ್ರಾಸ್‌ನಿಂದಲೇ ತರಲಾಗಿತ್ತು. ಬಹು ಸಂಖ್ಯೆಯ ಮೊಳೆಗಳನ್ನು ಕಡಿತಗೊಳಿಸಲು ಥಾಮಸ್ ಹಾಡ್ಸನ್‌ನು ಪ್ರಯತ್ನಿಸಿದರೂ ಅದರಲ್ಲಿ ಯಶಸ್ಸು ದೊರೆಯಲಿಲ್ಲ. "೧೮೪೩ ರಲ್ಲಿ ಲಂಡನ್‌ನಿಂದ ಮರಳಿ ಬರುವಾಗ ಹ್ಯಾಂಡ್ಸನು ಕನ್ನಡ ಮೊಳೆಗಳನ್ನು ಪ್ರತ್ಯೇಕವಾಗಿ ಮಾಡಿಸಿ ತಂದನು. ವ್ಯಾಟ್ಸ ಮತ್ತು ಗ್ಯಾರೆಟ್, ಜೊತೆಗೆ ಬಿ. ರಂಗಯ್ಯನೆಂಬ ದೇಶಿಯನು ವೆಸ್ಲಿಯನ್ ಮುದ್ರಣದ ಪ್ರಗತಿಗೆ ಮುಖ್ಯ ಕಾರಣರಾದರು."[೩]

ಪರಿಷ್ಕೃತ ಬೈಬಲಿನ ಹಾಗೂ ರೀವನ ಕನ್ನಡ ಇಂಗ್ಲೀಷ್ ಕೋಶದ ಸುಧಾರಿತ ಆವೃತ್ತಿಯ ಪ್ರಕಟನೆ ಅವುಗಳಿಗಾಗಿ ಬೇರೆ ಮೊಳೆಗಳನ್ನು ಸಿದ್ಧ ಪಡಿಸುವ ಅಗತ್ಯ ತೋರಿತು. "೧೮೫೮ ರಲ್ಲಿ ಬೈಬಲ್

೧. ಪಾ.ವಿ.ಕ.ಸೇವೆ, ಐ.ಮಾ.ಮುತ್ತಣ್ಣ, ಪು.೨೭೬
೨. ಪುಸ್ತಕ ಭಾಗ್ಯ, ಹಿ.ಮ.ನಾಗಯ್ಯ, ಪು.೨೧೯
೩. ಅದೇ, ಪು.೨೧೯

ಪರಿಷ್ಕರಣ ಕಾರ್ಯ ಮುಗಿದಿತ್ತು. ಹೀಗಾಗಿ ಪ್ರತ್ಯೇಕವಾಗಿ ಬೆಂಗಳೂರಿನಲ್ಲಿ ಮೊಳೆಗಳನ್ನು ಎರಕ ಹೊಯ್ಯಲಾಯಿತು. ಮುಂದೆ ೧೮೬೫ ರಲ್ಲಿ ಇದೇ ಪ್ರೆಸ್ಸಿನಿಂದ ಸುಂದರ ಅಕ್ಷರಗಳ ಬೈಬಲ್ ಆವೃತ್ತಿ ಹೊರ ಬಂದಿತು."

ಜಿ. ಎಚ್. ವೀಗಲ್ ನಂತರ ಕನ್ನಡ ಬೈಬಲ್ ಭಾಷಾಂತರದ ಅಧ್ಯಕ್ಷನಾಗಿದ್ದ ರೆ. ಹೆನ್ರಿಹೆಗ್ ನೇತೃತ್ವದಲ್ಲಿ ೧೮೯೦ ರ ಸುಮಾರಿಗೆ ವೆಸ್ಲಿಯನ್ ಮುದ್ರಣವು ಮೈಸೂರಿನಲ್ಲಿ ಸ್ಥಾಪಿಸಲಾಯಿತು. ಇಲ್ಲಿಯು ಬೈಬಲ ಹಾಗೂ ಬೈಬಲ್ಲೇತರ ಮತ್ತು ಹಳೆಗನ್ನಡ ಕಾವ್ಯಗಳ ಸಾಹಿತ್ಯ ಮುದ್ರಣಗೊಳ್ಳುತ್ತಿತ್ತು.

ಚಾರ್ಬೊನಾ ಮತ್ತು ಬೌತಮೋ ಇವರ ಸಹಾಯದಿಂದ ೧೮೫೨ ರ ಸುಮಾರಿಗೆ ಸ್ಥಾಪಿತವಾದ ಕೆಥೊಲಿಕ್ ಮಿಶನರಿ ಪ್ರೆಸ್ ಮತೀಯ ಪುಸ್ತಕ ಹಾಗೂ ಶೈಕ್ಷಣಿಕ ಪುಸ್ತಕಗಳನ್ನು ಮುದ್ರಿಸಿ ಪ್ರಕಟಿಸುತ್ತ ಬೆಂಗಳೂರಿನಲ್ಲಿ ತನ್ನದೇ ಆದ ಹೆಸರು ಹೊಂದಿತ್ತು.

ಈಗಲೂ ಅಸ್ತಿತ್ವದಲ್ಲಿರುವ ಹಳೇಯದಾದ ಬೈಬಲ್ ಪ್ರಕಟಿತ ಹಾಗೂ ಮುದ್ರಿತ ಸಂಸ್ಥೆಯೆಂದರೆ ಮಹಾತ್ಮಾ ಗಾಂಧಿ ರಸ್ತೆಯಲ್ಲಿರುವ ಬೈಬಲ್ ಸೊಸೈಟಿ ಆಫ್ ಇಂಡಿಯಾ ಸಂಸ್ಥೆ. ಇದು ೧೮೨೫ ರಿಂದ ೧೮೫೩ ರ ವರೆಗೆ ಬೆಂಗಳೂರ ಬೈಬಲ್ ರಿಲೀಜಿಯಸ್ ಬುಕ್ ಮತ್ತು ಟ್ರ್ಯಾಕ್ಟ (tract) ಸೊಸೈಟಿಯಾಗಿ, ೧೮೫೩ ರಿಂದ ೧೮೬೫ ರ ವರೆಗೆ ಮದ್ರಾಸ ಆಕ್ಸಲರಿ ಬೈಬಲ್ ಸೊಸೈಟಿಯಾಗಿ, ಕೊನೆಗೆ ೧೯೪೫ ರಿಂದ ಇಂದಿನವರೆಗೆ ಕರ್ನಾಟಕ ಆಕ್ಸಲರಿ ಬೈಬಲ್ ಸೊಸೈಟಿ ಆಫ್ ಇಂಡಿಯಾ ಎಂಬ ಹೆಸರಿನಿಂದ ಕಾರ್ಯನಿರ್ವಹಿಸುತ್ತಿದೆ. ಶ್ರೀ. ಬಿ.ಕೆ. ಪ್ರಮಾಣಿಕ ರವರು ಜನರಲ್ ಸೆಕ್ರೆಟರಿಯಾಗಿ ಇಂದಿನ ತನಕವೂ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಸಂಸ್ಥೆ ಕರ್ನಾಟಕದಲ್ಲಿ ಈಗ ಸದ್ಯ ಉಪಯೋಗಿಸುತ್ತಿರುವ ಬೈಬಲ್ ಮುದ್ರಣಕ್ಕೆ ಕಾರಣವಾಗಿದೆ. ಈ ಸಂಸ್ಥೆಯ ದೃಷ್ಟಿಯಲ್ಲಿ ಕ್ರೈಸ್ತರ ಒಳ ಪಂಗಡಗಳ ಭೇದಭಾವ ಇಲ್ಲ, ಪ್ರೊಟೆಸ್ಟೆಂಟ್‌ರಿಗೆ ಸೇರಿದ ಈ ಸಂಸ್ಥೆ ಬೈಬಲ್ ಪ್ರತಿ ಮುದ್ರಣ, ಪರಿಷ್ಕರಣ ಹಾಗೂ ನೂತನ ಆವೃತ್ತಿಗಳನ್ನು ಮುದ್ರಿಸುವುದಲ್ಲದೆ, ಕಾಲ ಬದಲಾದಂತೆ ಭಾಷಾ ಬೆಳವಣಿಗೆ ಕಂಡು ಬಂದಂತೆ ಬೈಬಲ್‌ನ್ನು ನವೀಕರಿಸುವ ಜವಾಬ್ದಾರಿ ಹೊತ್ತಿದೆ. ಇಲ್ಲಿ ಕೇವಲ ಕನ್ನಡ ಬೈಬಲ್ ಮುದ್ರಣಗೊಳ್ಳದೇ ಭಾರತೀಯ ಎಲ್ಲ ಭಾಷೆಯಲ್ಲಿ ಮುದ್ರಣವಾಗುತ್ತಿದೆ. ಇತ್ತೀಚಿನ ಅಂಕಿ ಅಂಶಗಳ ಪ್ರಕಾರ ಬೆಂಗಳೂರ ಬೈಬಲ್ ಸೊಸೈಟಿಯು "೧೯೯೯ ರಿಂದ ೨೦೦೦ ಸಾಲಿನಲ್ಲಿ ಒಟ್ಟು (ಎಲ್ಲಾ ಭಾಷೆ ಸೇರಿ) ೫೮,೦೭೩೯೬೩. ಬೈಬಲ್‌ಗಳು ಮುದ್ರಿತವಾಗಿವೆ. ಪ್ರಮುಖ ಇತರ ಭಾಷೆಗಳೆಂದರೆ ರೆಂಗಮಾ ನಾಗಾ ಬೈಬಲ್ (Rengma Naga Bible) ಕಾಶ್ಮೀರಿ, ಮಾಲ್ಟೊ ಕೆಯಾಂಗ ನಾಗಾ ಬೈಬಲ್ (Kyong Naga Bible) ಸೋರಾ ಬೈಬಲ್, ಓರಿಯಾ, ಕನ್‌ರುಕಾ (Kunkura) ರಬಾ (Rabha N.T.)ಮತ್ತು ಸುಮಿ ನಾಗಾ ಬೈಬಲ್ (Sumi Naga bible)"[೧]

---

೧. Sowing Circle Vol.16, No.2, (Magzine) 2001, Pp.8

ಅಂದಿನ ಮಿಶನರಿಗಳು ತಾವು ಇದ್ದ ಸ್ಥಳವನ್ನೇ ಅನುವಾದಕ ಕಾರ್ಯಕ್ಷೇತ್ರವೆಂದು ಆಯ್ಕೆ ಮಾಡಿದರು. ಪ್ರಮುಖ ಕೇಂದ್ರಗಳೆಂದರೆ ಬಂಗಾಲದ ಸೆರಾಂಪುರ ಶ್ರೀರಾಮಪುರ ಕಲ್ಕತ್, ಕರ್ನಾಟಕದ ಬಳ್ಳಾರಿ, ಮಂಗಳೂರ, ಧಾರವಾಡ ಮತ್ತು ಬೆಂಗಳೂರ. ಕನ್ನಡ ಬೈಬಲ್ ಅನುವಾದ ಹಾಗೂ ಪ್ರಕಟನೆ ಕರ್ನಾಟಕದಲ್ಲಿ ಮೊದಲಾಗಿದೆ. ಮದ್ರಾಸ್, ಕಲ್ಕತ್‌ಗಳಲ್ಲಿ ನಡೆಯಿತು. ಮೊದಲು ಅಚ್ಚಾದ ಕನ್ನಡ ಬೈಬಲ್ ಮದ್ರಾಸಿನಲ್ಲಿ ಪ್ರಕಟಗೊಂಡಿದೆ. ನಂತರ ಕಲ್ಕತ್ ಹಾಗೂ ಬಳ್ಳಾರಿ ಮಿಶನ್ ಪ್ರೆಸ್ ಬೆಂಗಳೂರಿನ ಲಂಡನ್ ಮಿಶನ್ನಿಗೆ ಸೇರಿದ ವೆಸ್ಲಿಪ್ರೆಸ್, ಕೆಥೊಲಿಕ್ ಮಿಶನ್ ಪ್ರೆಸ್, ಬೆಂಗಳೂರ ಟ್ರ್ಯಾಕ್ಟ್ ಮತ್ತು ಬುಕ್ ಸೊಸೈಟಿ ಪ್ರೆಸ್, ಬೈಬಲ್ ಸೊಸೈಟಿ ಆಫ್ ಇಂಡಿಯಾ ಬೆಂಗಳೂರ ಪ್ರೆಸ್ ಮಂಗಳೂರಿನ ಬಾಸೆಲ್ ಮಿಶನ್ ಪ್ರೆಸ್ ಮತ್ತು ಕೊಡಿಯಾಲ್ ಬೈಲ್ ಪ್ರೆಸ್ ಇವು ಪ್ರಮುಖವಾಗಿ ಬೈಬಲ್ ಪ್ರಕಟನೆಗೆ ಹಾಗೂ ಅನುವಾದಕ್ಕೆ ಆಯ್ದುಕೊಂಡ ಸ್ಥಳಗಳಾಗಿವೆ.

೨.೬. ಬೈಬಲ್ ಮುದ್ರಣಕ್ಕಾಗಿ ಬಳಸಿದ ಅಚ್ಚಿನ ವಿಧಾನಗಳು

"ಚೀನಾ ದೇಶದಲ್ಲಿ ಕ್ರಿ.ಶ.೮೬೮ ರಷ್ಟು ಹಿಂದೆಯೇ ಆ ದೇಶದ ಭಾಷೆಯ ಅಕ್ಷರ ಮೊಳೆಗಳನ್ನು ಕಂಡು ಹಿಡಿಯಲಾಗಿದ್ದು ಹಿರಾಕ ಸೂತ್ರ ಎಂಬ ಪುಸ್ತಕವನ್ನು ಮುದ್ರಿಸಲಾಗಿತ್ತು. ವಾಂಗ್ ಚಿಕ್ ಎಂಬವವನು ಕ್ರಿ.ಶ.೮೬೮ನೇ ಮೇ ೨೨ನೇ ದಿನಾಂಕ ಪ್ರಕಟಿಸಿದನು."[೧] ಆದರೆ ಪಾಶ್ಚಾತ್ಯ ದೇಶದಲ್ಲಿ ಮುದ್ರಣ ಕಲೆ ಕಾಣಿಸಿಕೊಂಡಿದ್ದು ೧೪ ನೇ ಶತಮಾನದಲ್ಲಿ. ಜ್ಞಾನ ವಿಕಾಸಕ್ಕೆ ಕಾರಣವಾದ ಮುದ್ರಣ ಕಲೆ ಆಯಾ ದೇಶದವರ ಬಳಕೆಯ ಸಾಧನವಾಗಿ ವಿವಿಧ ಘಟ್ಟಗಳನ್ನು ಕಾಣುತ್ತಾ, ಅವರಿವರ ವಿಚಾರಧಾರೆಗೆ ಓ ಗೊಡುತ್ತಾ ತನ್ನದೇ ಆದ ಅಸ್ತಿತ್ವಕ್ಕೆ ಬರತೊಡಗಿದಾಗ, ೧೬ ನೇ ಶತಮಾನದ ವೇಳೆಗೆ ಯುರೋಪ ಖಂಡದ ಎಲ್ಲಾ ಭಾಷೆಗಳಲ್ಲಿಯೂ ಗ್ರಂಥಗಳು ಮುದ್ರಣಗೊಳ್ಳಲಾರಂಭಿಸಿದವು.

"ಯಾವ ದೇಶವೇ ಆಗಲಿ, ಮುದ್ರಣವು ಕಾಲಿರಿಸಿದ ಕೆಲವೇ ಕಾಲದಲ್ಲಿ ಆ ದೇಶವು ಪ್ರಗತಿ ಪಥದಲ್ಲಿ ಮುನ್ನಡೆದುದು ಗಮನಾರ್ಹ ಸಂಗತಿಯಾಗಿದೆ. ನಮ್ಮ ನಾಡಿನಲ್ಲಿಯೂ ಹಾಗೆ ಆಯಿತು; ಮುದ್ರಣದ ಅಭಿಯೋಗವು ಶೈಕ್ಷಣಿಕ ಹಾಗೂ ಸಾಹಿತ್ಯಿಕ ರಂಗದಲ್ಲಿ ಕ್ರಾಂತಿಯನ್ನುಂಟು ಮಾಡಿತು. ಹೊಸಗನ್ನಡ ವಾಙ್ಮಯದ ಉದಯಕ್ಕೂ ಮುಂದೆ ಅದು ವ್ಯಾಪಕವಾಗಿ ಹಬ್ಬುವುದಕ್ಕೂ ಮುದ್ರಣವು ಕಾರಣವಾಗಿದೆ."[೨] ಈ ಕುರಿತು ನಾವು ಮಿಶನರಿಗಳಿಗೆ ಎಷ್ಟು ಕೃತಜ್ಞತೆ ಸಲ್ಲಿಸಿದರೂ ಕಡಿಮೆಯೇ! "ಮಿಶನರಿ ಜನರ ವಾಙ್ಮಯ ಕಾರ್ಯವು ಸು. ೧೬೫೦ ಕ್ಕೆ ಆರಂಭವಾಗಿ ಮೊದಲ ಮಹಾಯುದ್ಧದ ವರೆಗೆ (ಸು ೧೯೧೫) ನಡೆದುಕೊಂಡು ಬಂದಿತು. ಸು.೨೮೦ ವರ್ಷಗಳ ಈ ಸಾಹಿತ್ಯ ಚರಿತ್ರೆಯಲ್ಲಿ

೧. ಭಾರತೀಯ ಪತ್ರಿಕೋದ್ಯಮ ನಾಡಿಗ ಕೃಷ್ಣಮೂರ್ತಿ, ಪು.೧೧

೨.ಕ.ಕ್ರೈ.ಸಾ.ಹ.ಕಂ.ಶ್ರೀ.ಹಾ., ಪು.೨೨ ಮತ್ತು ೨೩

ಎರಡು ಘಟ್ಟಗಳನ್ನು ಗುರುತಿಸಬಹುದು. 1) 1650-1815 ಮುದ್ರಣ ಪೂರ್ವ ಯುಗ ಕೇವಲ ಕೆಥೊಲಿಕ್ ಸಾಹಿತ್ಯ ರಚನೆ ಹಸ್ತಪ್ರತಿಗಳ ರೂಪದಲ್ಲಿ ದೊರೆಯತ್ತದೆ. 2) 1815-1915 ಮುದ್ರಣ ಯಗವಾದ ಈ ದ್ವಿತಿಯ ಘಟ್ಟದಲ್ಲಿ ಪ್ರೊಟೆಸ್ಟಂಟ್‌ದೇ ಮೇಲುಗೈ"[೧]

"೧೪೫೦ ರಲ್ಲಿ ಯುರೋಪಿನಲ್ಲಿ ಚಾಪಾಖಾನೆ ಪ್ರಾರಂಭದ ನಂತರ ಮೇನ್ಜ (MAINZ) ಪಟ್ಟಣದ ಗುಟನ್‌ಬರ್ಗ್ (Gutenburg) ಯೆಂಬವನು ಬೈಬಲನ್ನು ಅಚ್ಚು ಹಾಕಿದನಂತೆ. ೧೪೭೬ ರಲ್ಲಿ ಕಾಕ್ಸಟನ್(Caxton) ಎಂಬವನು ಇಂಗ್ಲಂಡಿನಲ್ಲಿ ಅಚ್ಚು ಹಾಕಿದವರಲ್ಲಿ ಪ್ರಥಮನು."[೨] ಹೀಗೆ ಬೈಬಲ್ ಕೃತಿ ಹಾಗೂ ಬೈಬಲ್ಲಿಗೆ ಸಂಬಂಧಿಸಿದ ಸಾಹಿತ್ಯ ಹೊರತರುವಲ್ಲಿ ಮುದ್ರಣ ಕಲೆಯು ವಿವಿಧ ಶೈಲಿಯನ್ನು ಹೊಂದಲು ಪ್ರಾರಂಭಿಸಿದಂತೆ ತೋರುತ್ತದೆ.

ಹಿಂದೂಸ್ಥಾನಗದಲ್ಲಿ ಯುರೋಪಿಯನ್ ಜನಕ್ಕೆ ತಮ್ಮ ಸರ್ಕಾರಿ ಪತ್ರಗಳ ಪ್ರಕಟಣೆಗೂ, ವಾರ್ತಾ ಪತ್ರಿಕೆಗಳನ್ನು ಹೊರಡಿಸುವುದಕ್ಕೂ ಮುದ್ರಣ ಯಂತ್ರಗಳು ಅವಶ್ಯಕವಾಗಿ ಬೇಕಾಗಿದ್ದವು. ಕೆಲವು ಪ್ರಧಾನ ಪತ್ರಗಳನ್ನು ಆಂಗ್ಲೇಯರು ಇಂಗ್ಲಂಡಿಗೆ ಕಳುಹಿಸಿ ಅಲ್ಲಿಂದ ಮುದ್ರಿಸಿ ತರಿಸುತ್ತಿದ್ದರು. ಹೇಗೋ ಆಂಗ್ಲ ಭಾಷಾ ಮುದ್ರಣಕ್ಕೆ ಅವಕಾಶವಾದಾಗ ಕೆಲವು ಪಾಶ್ಚಾತ್ಯ ಪಂಡಿತರು ಭಾರತೀಯ ಭಾಷಾ ಹಸ್ತ ಪ್ರತಿಗಳನ್ನು ಇಂಗ್ಲೀಷ್ ಅಕ್ಷರದಲ್ಲಿ ಬರೆದು ಮುದ್ರಿಸುತ್ತಿದ್ದರು."[೩]

"ಕ್ರಿ.ಶ ೧೬ ನೇ ಶತಮಾನದಲ್ಲಿ ಬ್ರಿಟೀಷ್‌ರು ಇಂಗೀಷ್ ಮುದ್ರಣ ಯಂತ್ರವನ್ನು ತಂದು ಕಲ್ಕತ್ತದಲ್ಲಿ ಇಟ್ಟರು. ಅನಂತರದ ಐವತ್ತು ವರ್ಷಗಳಲ್ಲಿ ಬೊಂಬಾಯಿ ಮತ್ತು ಮದ್ರಾಸಗಳಲ್ಲೂ ಅವು ಇಡಲ್ಪಟ್ಟವು. ಭಾರತೀಯ ಭಾಷಾಅಕ್ಷರಗಳ ಮೊಳೆಗಳನ್ನು ಮೊದಲ ಬಾರಿಗೆ ಗೋವಾದಲ್ಲಿದ್ದ Joade Bustamautc ಇವನು ೧೫೫೬ ರಲ್ಲೂ ಕೊಟ್ಟಿನಲ್ಲಿದ್ದ Joa Gousalves ಇವನು ತಮಿಳು ಅಕ್ಷರ ಮೊಳೆಗಳನ್ನು ೧೫೭೮ರಲ್ಲಿ ಕಂಡು ಹಿಡಿದನು."[೪] ಸ್ಪ್ಯಾನಿಷ್ ಸಂಸ್ಥೆಗೆ ಸೇರಿದ ಇವರ ಸಾಹಸದಿಂದ ಭಾರತದಲ್ಲಿ ಮುದ್ರಿತ ಸಾಹಿತ್ಯ ಹೊರ ಬರಲು ಅನುಕೂಲವಾಯಿತು.

ತಮಿಳು ಭಾಷೆಯನ್ನು ಕಲಿತು ತಮಿಳಿನಲ್ಲಿ ಕೃತಿ ರಚಿಸಲು ಸಾಮರ್ಥ್ಯ ಹೊಂದಿದ್ದ ಡೆನಿಷ್ ವಿದ್ವಾಂಸ Fr Bartolomeus Zeigen balg ನು "೧೭೧೨ ರಲ್ಲಿ ಯುರೋಪಿನಿಂದ ಉಚಿತವಾಗಿ ಬಂದ ಮುದ್ರಣ ಯಂತ್ರದಿಂದ ತಾನು ಬರೆದ ಬರಹಗಳನ್ನು ಮುದ್ರಿಸ ತೊಡಗಿದನು"[೫] ಇಲ್ಲಿಂದಲೇ ಬೈಬಲ್ ಸಾಹಿತ್ಯ ಭಾರತೀಯ ಭಾಷೆಯಲ್ಲಿ ಮುದ್ರಣಗೊಳ್ಳಲು ಪ್ರಾರಂಭವಾಯಿತೆನ್ನಬಹುದು.

೧.ಕ.ಕ್ರೈ.ಸಾಹ.ಹ.ಕಂ. ಇತ್ಯಾ ಶ್ರೀ.ಹಾ., ಪು.೨೨ ಮತ್ತು ೨೩

೨. ಸತ್ಯಶಾಸನ, ಪು.೧೬

೩.ಭಾ.ಸಾ.ಸಂ.ಪಾ.ವಿ.ಸೇವೆ, ಐ.ಮಾ.ಮುತ್ತಣ್ಣ, ಪು.೭೭

೪. ಅದೇ, ಪು.೭೮

೫. ಭಾ.ಕ್ರೈಸ.ಚ.ಪ್ರವೇಶಿಕ, ಎಸ್.ವಿ.ಮಾರಾ, ಪು.೧೯೯

ಕನ್ನಡದಲ್ಲಿ ಸಾಹಿತ್ಯ ನಿರ್ಮಾಣವಾಗಬೇಕೆಂಬ ಲವಲವಿಕೆ ಪ್ರಾರಂಭವಾದ ಕೂಡಲೇ ಸ್ವಾಭಾವಿಕ ವಾಗಿಯೇ ಅದಕ್ಕೆ ಅಚ್ಚುಕೂಟ ಬೇಕಾಯಿತು. ಈ ದಿಶೆಯಲ್ಲಿ ಅದ್ಭುತವಾದ ಕೆಲಸವನ್ನು ಮಾಡಿದವರು ವಿದೇಶೀಯ ಮಿಶನರಿಗಳು. ಈ ಬಗ್ಗೆ ಇ.ಪಿ ರೈಸ್ ಅವರು ಹೇಳಿದ ಮಾತು ಮನನೀಯವಾಗಿದೆ.

"Christianity has entered the field with versions of the Biblical commentaries, books for the instruction of the Indian chrition community in the history and teaching of christianity, translations of such christian classies as Bunyan's pilgrim's progress (Desantriya prayana or yatrika sanchara) , Augustinc confessions etc, and lyrics for use in christion worship

It deserves to be added that kanarese is indebted to the missiionsries probably for the introduction of printing and certainly for the improvement of its typography by tha preparation of fresh founts of beautiful type for the printing of successive editions of the Bible"

"ಕನ್ನಡದಲ್ಲಿ ಪ್ರಥಮತಃ ಮುದ್ರಿತವಾದ ಪುಸ್ತಕವೆಂದರೆ ವಿಲಿಯಮನ್ ಕ್ಯಾರಿಯವರ 'ಗ್ರಾಮರ್ ಆಫ್ ದಿ ಕರ್ನಾಟಕ ಲ್ಯಾಂಗ್ವೇಜ್'. ಇದು ಸನ್ ೧೮೧೭ ರಲ್ಲಿ ಅಂದರೆ ಸುಮಾರು ವರುಷಗಳ ಹಿಂದೆ ದೂರದ ಕಲ್ಕತ್ತೆಯ ಬಳಿ ಇರುವ ಶ್ರೀ ರಾಮಪುರ ಪ್ರೆಸ್ಸಿನಲ್ಲಿ ಮುದ್ರಿತವಾಯಿತು. ನಂತರದ ಪುಸ್ತಕವು ಸಹ ಹೆಚ್ಚು ಕಡಿಮೆ ಅಷ್ಟೇ ದೂರದ ಮದ್ರಾಸಿನ ಪೋರ್ಟ ಸೆಂಟ ಜಾರ್ಜ್ ಕಾಲೇಜಿನ ಪ್ರೆಸ್ಸಿನಲ್ಲಿ ಮುದ್ರಿತವಾಯಿತು. ಇದೂ 'ಎ ಗ್ರಾಮರ್ ಆಫ್ ದಿ ಕರ್ನಾಟಕ ಲ್ಯಾಂಗ್ವೇಜ್' ಎಂಬ ವ್ಯಾಕರಣ ಗ್ರಂಥವೇ. ಇದು ಮುದ್ರಿತವಾದದ್ದು ಸನ್ ೧೮೨೦ರಲ್ಲಿ. ಮುಂದೆ ಎರಡು ಬಹಳ ಬೃಹತ್ ಗಾತ್ರದ ಶಬ್ದಕೋಶಗಳೂ ಮದ್ರಾಸಿನಲ್ಲಿಯೇ ಮುದ್ರಿತವಾದವು"[೧] "ಇವುಗಳಲ್ಲಿ ಉಪಯೋಗಿಸಲಾದ ಮೊಳೆಗಳ ದೊಡ್ಡ ಆಕಾರವೇ ಈ ಗಾತ್ರಕ್ಕೆ ಕಾರಣವಾಯ್ತು"[೨] ಹೀಗೆ ಮದ್ರಾಸ್, ಕಲ್ಕತ್ತೆಯಲ್ಲಿ ಕನ್ನಡನಾಡಿನ ಸಾಹಿತ್ಯ ಮುದ್ರಿಸುವಲ್ಲಿ ಬಹು ವೆಚ್ಚದಾಯಕ ಹಾಗೂ ಬಲು ದೂರ ಪ್ರಯಾಣ ಕಷ್ಟಸಾಧ್ಯವಾಯಿತು. ಇದನ್ನು ಮನಗಂಡ ಬಳ್ಳಾರಿಯ ಮಿಶನರಿ ರೆ. ಜಾನ್ ಹ್ಯಾಂಡ್ಸರವರು "೧೮೧೩ ರಿಂದಲೇ ಈಸ್ಟ ಇಂಡಿಯಾ ಕಂಪನಿಯ ಮುದ್ರಣಯಂತ್ರವನ್ನು ತಾವು ಪಡೆದುಕೊಂಡು ೧೮೨೧ ರಲ್ಲಿ ಬಳ್ಳಾರಿಯಲ್ಲಿ ಮಿಶನ್ನಿಗೆ ಸೇರಿದ್ದ ಒಂದು ತೋಟದಲ್ಲಿ ತಂದು ಮುದ್ರಣಾಲಯವನ್ನು ಸ್ಥಾಪಿಸಿದರು."[೩] "೧೮೨೬ ರಲ್ಲಿ ಬಿ.ಎಚ್. ಪೆಯಿನ್ (Paine) ಎಂಬುವರು ಭಾರತದೇಶಕ್ಕೆ ಬಂದರು. ಇವರು ಕರ್ನಾಟಕದಲ್ಲಿ ಒಂದು ವ್ಯವಸ್ಥಿತ ಮುದ್ರಣಾಲಯವನ್ನು ಪ್ರಾರಂಭಿಸಿ ಕನ್ನಡ, ತೆಲಗು ಮತ್ತು ಇಂಗ್ಲಿಷ್ ಭಾಷೆಗಳಲ್ಲಿ

೧.ಹೊ.ಸಾ.ಉದಯಕಾಲ, ರಾ.ಯ.ಧಾರವಾಡಕರ, ಪು.೩೪

೨.ಪುಸ್ತಕ ಭಾಗ, ಹಿ.ಮ.ನಾಗಯ್ಯ, ಪು.೨೧೭

೩. ಘನಜಾನ್ ಹ್ಯಾಂಡ್ಸ್, ಸಭಾಪತಿ ಎನ್., ಪು.೧೬

ಧಾರ್ಮಿಕ ಮತ್ತು ಸಾಮಾಜಿಕ ಪುಸ್ತಕಗಳನ್ನು ಮುದ್ರಿಸಲು ಪ್ರಾರಂಭಿಸಿದರು"[೧] ೧೮೨೭ ರಿಂದ ಬಳ್ಳಾರಿಯಲ್ಲಿ ಒಂದು ಸುವ್ಯವಸ್ಥಿತ ಮುದ್ರಣಾಲಯ ಕನ್ನಡಕ್ಕಾಗಿ ಪ್ರಾರಂಭಗೊಂಡಂತಾಯಿತು.

"೧೮೩೧ ರಲ್ಲಿ ಹ್ಯಾಂಡ್ಸ್ ಇಂಗ್ಲೆಂಡಿನಿಂದ ಮರಳಿ ಭಾರತಕ್ಕೆ ಬರುವಾಗ ನೂತನ ಮಾದರಿಯ ಕನ್ನಡ ಅಚ್ಚಿನ್ ಮೊಳೆಗಳನ್ನು ತಂದನು"[೨] "ಮುಂದೆ ಹ್ಯಾಂಡ್ಸನ ಉತ್ತರಾಧಿಕಾರಿಯಾದ ಜಾನ್ ರೀಡ್ ಮತ್ತು (ಇದು ಪೆಯಿನ್ ಇರಬಹುದು) ನೇತೃತ್ವದಲ್ಲಿ ಮುದ್ರಣ ಕಾರ್ಯವು ಭರದಿಂದ ನಡೆಯಿತು."[೩] ಬೈಬಲ್ ಸಾಹಿತ್ಯ ಮುದ್ರಣದ ಜೊತೆಗೆ ತಾಳೆಗರಿ, ಕಡತಗಳಲ್ಲಿನ ಧಾರ್ಮಿಕ ಗ್ರಂಥಗಳನ್ನು ಮುದ್ರಿಸಲು ತೊಡಗಿದರು. ಕಾರಣ ಧಾರ್ಮಿಕ ಸಮನ್ವಯಕ್ಕಿಂತ ಭಿನ್ನತೆಯ ದೃಷ್ಟಿಕೋನವೇ ಅವರಿಗೆ ಮೊದಲಾಗಿತ್ತು. ಹೀಗಾಗಿ ಪ್ರಾರಂಭದ ಮಿಶನರಿ ಸಾಹಿತ್ಯವು ಹಿಂದೂ ಧರ್ಮದಲ್ಲಿಯ ದೋಷವನ್ನು ಹೊರಹಾಕುವ ಪ್ರಯತ್ನದಲ್ಲಿಯೇ ಸಾಗಿತು. ಈ ಕುರಿತು ಕಿರು ಹೊತ್ತಿಗೆ ಕರಪತ್ರಗಳು ಲಭ್ಯವಿವೆ.

ಡಾ. ಶ್ರೀನಿವಾಸ ಹಾವನೂರವರು ಪುಸ್ತಕ ಭಾಗ್ಯ(ಪು.೨೧೮)ದಲ್ಲಿ "ಹ್ಯಾಂಡ್ಸನ ಕನ್ನಡ ಬೈಬಲ್ಲಿನ ಹಸ್ತಪ್ರತಿಯು ಮುದ್ರಣಕ್ಕೆಂದು ಬಂದಾಗ ಅರ್ಕ್‌ಹಾರ್ಟನು ಸ್ವಧರ್ಮ ನಿಷ್ಠೆಯಿಂದ ಪ್ರೇರಿತನಾಗಿ ಕನ್ನಡ ಮೊಳೆಗಳನ್ನು ಪ್ರತ್ಯೇಕವಾಗಿ ಎರಕ ಹೊಯ್ದನಂತೆ. ಕನ್ನಡ ಮೊಳೆಗಳ ತಯಾರಿಕೆಯಲ್ಲಿ ಇದು ಮೂರನೆಯ ಬಿಡಿ ಪ್ರಯತ್ನವಾಗಿದೆ" ಎಂದಿದ್ದಾರೆ

ವಿಲಿಯಂ ಕೇರಿ ಕಲ್ಕತ್ತಾದ ಸೆರಾಂಪುರದಲ್ಲಿ ಕನ್ನಡ ಬೈಬಲ್ ಮುದ್ರಣಕಾಲಕ್ಕೆ John Gilchrist ಹಾಗೂ ಸಂಗಡಿಗರು ಸಿದ್ಧಗೊಳಿಸಿದ್ದ ಕನ್ನಡ ಮೊಳೆಗಳೆ ಮೊದಲನೆಯ ಪ್ರಯತ್ನವೆನ್ನಬಹುದು.

ರೆ. ಜಾನ್ ಹ್ಯಾಂಡ್ಸ್ ೧೮೨೦ ರಲ್ಲಿ ಮುದ್ರಿಸಿದ ಹೊಸ ಒಡಂಬಡಿಕೆಯ ಪೂರ್ವಾರ್ಧವು ಮದ್ರಾಸಿನ ಅಚ್ಚು ಕೂಟದ ಮೂಲಕ, ಆಗ ಮದ್ರಾಸಿನಲ್ಲಿ ಕನ್ನಡ ಲಿಪಿ ಲಭ್ಯವಿತ್ತು. ಇದು ಎರಡನೇಯ ಹಂತವಾಗಿರಬಹುದು.

೧೮೩೧ ರಲ್ಲಿ ಇಂಗ್ಲೆಂಡಿನಿಂದ ಮರಳಿ ಬರುವಾಗ ಹ್ಯಾಂಡ್ಸ್ ತಂದ ನೂತನ ಕನ್ನಡ ಮೊಳೆಗಳು ಮೂರನೇ ಪ್ರಯತ್ನವಾಗಿರಬಹುದು. ಕನ್ನಡ ಅಚ್ಚಿನ ಮೊಳೆಗಳ ವಿನ್ಯಾಸ ಹಾಗೂ ಬಹುಸಂಖ್ಯೆಗೆ ಬದಲಾಗಿ ಮಿತ ಮೊಳೆಗಳನ್ನು ಗುರುತಿಸುವುದರಲ್ಲಿ ವೆಸ್ಲಿಯನ್ ಮಿಶನ್‌ರವರು ಹೆಚ್ಚು ಆಸಕ್ತಿ ತೋರಿದಂತಿದೆ. ಆಗ ಮದ್ರಾಸಿನಲ್ಲಿ ಮುದ್ರಿತವಾಗುತ್ತಿದ್ದ ಕನ್ನಡದ ಒಟ್ಟು ಮೊಳೆಗಳು ಏಳು ನೂರು ಸಂಜ್ಞೆಗಳಿಂದ ಕೂಡಿದ್ದವು. ಬಳ್ಳಾರಿಯ ಮಿಶನ್ ಪ್ರೆಸ್ ಬೇರೆ ಮಿಶನ್ನಿನ ಮುದ್ರಣ ಕಾರ್ಯವನ್ನು

೧.ಘನಜಾನ್ ಹ್ಯಾಂಡ್ಸ್, ಸಭಾಪತಿ ಎನ್., ಪು.೧೬

೨. B.T.I.I.P & Ceylon, J.S.M.Hooper, Pp.99

೩. ಪುಸ್ತಕ ಭಾಗ್ಯ, ಹಿ.ಮ.ನಾಗಯ್ಯ, ಪು.೨೧೯

ಆಸ್ತೆಯಿಂದ ನಿರ್ವಹಿಸಲಾರದೆಂಬ ಸಂಶಯದಿಂದ, ವೆಸ್ಲಿಯನ್ ಮಿಶನ್ನಿನ ಮುದ್ರಣಾಲಯ ಸ್ವತಃ ಅಸ್ತಿತ್ವಕ್ಕೆ ಬರಲು ಪ್ರಯತ್ನಿಸುತ್ತಿತ್ತು. "ಮೊದಲಿದ್ದ ಬಹು ಸಂಖ್ಯೆಯ ಸಂಜ್ಞೆಗಳನ್ನು ತಗ್ಗಿಸಲು ಥಾಮಸ್ ಹ್ಯಾಡಸನ್ ಪಣತೊಟ್ಟನು. ಹೊಸ ಸಂಜ್ಞೆಗಳ ಎರಕವನ್ನು ಸ್ಥಳೀಯವಾಗಿ ಹೊಯ್ಸಿದನು. ಈ ಮೊಳೆಗಳು ಚನ್ನಾಗಿ ಇರಲಿಲ್ಲವಾದ್ದರಿಂದ ೧೮೪೩ ರಲ್ಲಿ ತಾನು ಲಂಡನ್‌ನಿಂದ ಹಿಂತಿರುವಾಗ ಕನ್ನಡ ಮೊಳೆಗಳನ್ನು ಪ್ರತ್ಯೆಕ ಮಾಡಿ ತಂದನು".[೧]

ಈ ಸಮಯದಲ್ಲಿ ಕಲ್ಲಚ್ಚಿನ ಮುದ್ರಣವು ಬರದಿಂದ ನಡೆಯುತ್ತಿತ್ತು. "೧೮೫೪ ರಲ್ಲಿ ಜರ್ಮನ್ ಭಾಷೆಯಲ್ಲಿ Geschide weltನು ಬರೆದ ಕ್ರೈಸ್ತ ಪುರಾಣ ಅನುಸರಿಸಿ ಕನ್ನಡದಲ್ಲಿ ಬರೆದ 'ಲೋಕ ಚರಿತೆ"[೨] ನಮಗಿಂದು ಲಭ್ಯವಿದೆ.*

ಆಗಿನ ವೆಸ್ಲಿಯನ್ ಪ್ರೆಸ್‌ನಲ್ಲಿ ನಾಲ್ಕು ಬಗೆಯ ಗಾತ್ರಗಳುಳ್ಳ ಕನ್ನಡ ಮೊಳೆಗಳು ಲಭ್ಯವಿದ್ದವು. ಮುಂದಿನ ದಿನಗಳಲ್ಲಿ ಇನ್ನೂ ಚಿಕ್ಕ ಗಾತ್ರದ ಮೊಳೆಗಳು ಇದ್ದಷ್ಟು ಒಳಿತೆಂದು ಬಗೆದು ೧೦ ಪಾಯಿಂಟಿನ ಮೊಳೆಗಳನ್ನು ತಯಾರಿಸಲಾಯಿತು. ಬೈಬಲ್ ಮುದ್ರಣ ಸಮಯದಲ್ಲಿ ಬೆಂಗಳೂರಿನಲ್ಲಿ ಎರಕ ಹೊಯ್ಯಲಾಯಿತು. ಇದರ ಫಲವಾಗಿ ೧೮೬೫ರಲ್ಲಿ ಪ್ರಕಟಗೊಂಡ ಸಮಗ್ರ ಬೈಬಲ್ ಸುಂದರವಾಗಿ ತೋರಿಬಂದಿತು. ಬೈಬಲ್ ಸಾಹಿತ್ಯ ಬಲು ವಿಸ್ತಾರವಾದುದರಿಂದ ಒಂದೇ ಪುಸ್ತಕವಾಗಿ ಹೊರ ಬರಲು ಬೃಹತ್‌ಗ್ರಂಥವಾಗಿ ಮುದ್ರಿತವಾಗುತಿತ್ತು. ಈ ಗಾತ್ರವನ್ನು ತಪ್ಪಿಸಲು ಮಾಡಿದ ಪ್ರಯತ್ನವೇ ಚಿಕ್ಕ ಮೊಳೆಗಳ ಅವಶ್ಯಕತೆಗೆ ಕಾರಣವಾಗಿದೆ.

೧೮೪೦ರಲ್ಲಿ ವೆಸ್ಲಿಯನ್ ಮಿಶನ್ ಮೂಲಕ ಮೈಸೂರಿನಲ್ಲಿ ಹೆನ್ರಿಹೆಗ್ ನೇತೃತ್ವದಲ್ಲಿ ಸ್ಥಾಪಿತವಾಯಿತು. ಇದರಿಂದ ಮುದ್ರಣ ಕಾರ್ಯದಲ್ಲಿ ಹೆಚ್ಚು ಅನುಕೂಲ ಒದಗಿ ಬಂತು. ಮಂಗಳೂರಿನ ಮಿಶನ್ ಪ್ರೆಸ್, ಕನ್ನಡ ಸಾಹಿತ್ಯಕ್ಕೆ ವರದಾನವಿದ್ದಂತೆ. ರೆ. ಜಿ. ಎಚ್. ವೀಗಲ್ ನೇತೃತ್ವದಿಂದ ಸಾಗಿ ಬಂದ ಜರ್ಮನ್ ಇವ್ಯಾಂಜಿಕಲ್ ಮಿಶನ್ ಪ್ರೆಸ್ ೧೮೪೧ರ ಫೆಬ್ರುವರಿಯಲ್ಲಿ ಸ್ಥಾಪಿತಗೊಂಡು ಬಹು ಅಂದವಾದ ಚಂದವಾದ ರೂಪವಿನ್ಯಾಸದಿಂದ ಕರ್ನಾಟಕದ ಜನಮನವನ್ನು ಗೆದ್ದುಕೊಂಡಿತು. ಇಲ್ಲಿ ಜರ್ಮನ್-ದೇವನಾಗರಿ ಹಾಗೂ ದಕ್ಷಿಣ ಭಾರತದ ಎಲ್ಲ ಭಾಷೆಗಳು ಮುದ್ರಿತವಾಗುತ್ತಿದ್ದವು. ಈ ಪ್ರೆಸ್ ಭಾರತದಲ್ಲಿ ಸುಂದರತೆಗೆ ಹೆಸರುವಾಸಿಯಾಗಿದ್ದುದನ್ನು ಸ್ಮರಿಸಬಹುದು. ಇಲ್ಲಿ ಮೋಗ್ಲಿಂಗ್ ಸಮಯದಲ್ಲಿ ಕನ್ನಡದ ಲಿಪಿ ಬದಲಾವಣೆಯಾದುದು ಮಿಶನ್ನಿನವರು ಮಾಡಿದ ಮಹತ್ಕಾರ್ಯವೆನ್ನಬಹುದು. - "ಈ ಬದಲಿಗೇ ಇ ಇತ್ತು. ಹಾಗೆ ಕೊ=ಕು, ಅಕ್ಕ=ಅಕ್ಕ; ಸೂರ್ಯ=ಸೂರಯ. ಸ್ವಾತಂತ್ರ್ಯ ಸ್‌ವಾತಂತ್‌ರ್‌ಯ

೧. ಪುಸ್ತಕ ಭಾಗ್ಯ ಹಿ.ಮ.ನಾಗಯ್ಯ, ಪು.೨೧೯

೨. ಕ.ಸಾ. ಮತ್ತು ಧರ್ಮ ಹೊ.ಗ.ಮನೋಹರ, ಪು.೭೫

*ರೆ.ಟಿ.ಜೆ.ಪುನೀತ್‌ರವರು ಕಾಪಾಡಿಕೊಂಡು ಬಂದ ಪುಸ್ತಕಗಳ ಸಂಗ್ರಹದಿಂದ ದೊರೆಯಿತು. ಇದು ೧೮೫೪ರಲ್ಲಿ ಮುದ್ರಿತಗೊಂಡಿದೆ.

ಇತ್ಯಾದಿ. ಇವುಗಳಲ್ಲಿ ಒತ್ತಕ್ಷರನ್ನು ಕೆಳಗೆ ಬರೆಯದೇ ಒಂದೇ ಸಾಲಿನಲ್ಲಿ ಬರೆಯುವುದು ಎದ್ದು ತೋರುವ ಸುಧಾರಣೆಯಾಗಿದ್ದಿತು. ಮೋಗ್ಲಿಂಗ್ ಸಂಪಾದಿಸಿದ 'ರಾಜೇಂದ್ರರ್ ನಾಮೆ' ಯಲ್ಲಿ ಈ ಕ್ರಾಂತಿಕಾರಕ ಬದಲಾವಣೆ ಮೊದಲಿಗೆ ಬಂದದ್ದು, ಮೊಗ್ಲಿಂಗ್ ಅದನ್ನು ಈ ರೀತಿಯಾಗಿ ಸಮರ್ಥಿಸಿದ್ದಾನೆ.

"ಸದ್ಯ ಒತ್ತಕ್ಷರಗಳಿಗೂ ಪ್ರತ್ಯೇಕವಾದ ಅಚ್ಚು ಮೊಳೆಗಳಿವೆ. ಅದನ್ನು ಬಿಟ್ಟುಕೊಟ್ಟಾಗ ಮೊಳೆಗಳ ಸಂಖ್ಯೆಯು ಸಾಕಷ್ಟು ಕಡಿಮೆಯಾಗುವುದು. ಮೊಳೆ ಜೋಡಿಸುವ ಕೆಲಸದಲ್ಲಿ ವೇಳೆಯ ಉಳಿತಾಯವಾಗುವುದು. ಒತ್ತಕ್ಷರಗಳಿಗಾಗಿ ಎರಡು ಸಾಲುಗಳ ನಡುವೆ ಹೆಚ್ಚು ಜಾಗವನ್ನು ಬಿಡಬೇಕಾಗುವುದಷ್ಟೇ. ಒಂದೇ ಪಂಕ್ತಿಯಲ್ಲಿ ಬರೆದರೆ ಕಾಗದದ ಉಳಿತಾಯವೂ ಆಗುವುದು. ಹೀಗೆ ಇದರಿಂದ ಮೂರುಬಗೆಯ ಪ್ರಯೋಜನವಿದೆ."[೧]

ಅಂದು ಪ್ರೊಟೆಸ್ಟಂಟ್ ಸಾಹಿತ್ಯ ಸೇವೆ ಅಧಿಕವಾಗಿ ನಡೆಯುತ್ತಿದ್ದಾಗ ರೊಮನ್ ಕೆಥೊಲಿಕರ ವಿಚಾರಧಾರೆಗೆ ಅವರು ಸ್ಪಂದಿಸಿದಂತೆ ಕಾಣಲಿಲ್ಲ. ಹೀಗಾಗಿ ಕೆಥೊಲಿಕರ ಸಾಹಿತ್ಯ ಮುದ್ರಣ ಕಾರ್ಯ ನಿರಾಕರ್ಣೀಯವಾದಂತೆ ಕಂಡು ಬಂದುದರಿಂದ ಮತ್ತೊಂದು ಮುದ್ರಣಾಲಯದ ಅವಶ್ಯಕತೆ ಕಂಡು ಬಂತು. ಆಗ ಉದ್ಭವವಾದ ಪ್ರೆಸ್ ಕೊಡಿಯಾಲ ಬೈಲ್ ಮುದ್ರಣಾಲಯ. ಈ ಮುದ್ರಣಾಲಯದಲ್ಲಿ ಕೊಂಕಣಿ ಭಾಷೆಗೆ ಹೆಚ್ಚು ಪ್ರಾಶಸ್ತವಿತ್ತು. ಇಲ್ಲಿ ಕೊಂಕಣಿ ಭಾಷೆಯ ಪುಸ್ತಕಗಳನ್ನು ಕನ್ನಡದಲ್ಲಿ ಮುದ್ರಿಸಲಾಗುತ್ತಿತ್ತು. ಇಲ್ಲಿನ ಲಿಪಿಗಳು ಬಾಶಲ್ ಮಿಶನ್ ಪ್ರೆಸ್ ಲಿಪಿಯಂತೆ ಸುಂದರವಾಗಿದ್ದವು. ನಂತರ "೧೮೯೦ರ ಸುಮಾರಿಗೆ ಸ್ವತಃ ಮೊಳೆ ತಯಾರಿಸಲು ಪ್ರಾರಂಭಿಸಿದಾಗ, ಸುಪ್ರಸಿದ್ಧ ಅಕ್ಷರ ಶಿಲ್ಪಿಯೆನಿಸಿದ ಅತ್ತಾವರ ಅನಂತಾಚಾರಿಯು ಕೆಲವು ವರ್ಷ ಕೆಲಸಮಾಡಿ ವಿವಿಧ ಗ್ರಾತ್ರಗಳ ಹಾಗೂ ಮೇಲ್ಮಟ್ಟದ ಮೊಳೆಗಳನ್ನು ತಯಾರಿಸಿದನು."[೨] ಈತನು ಧಾರವಾಡದ ಒಂದು ಮುದ್ರಣಾಲಯಕ್ಕೂ ನೂತನ ಮೊಳೆಗಳನ್ನು ತಯಾರಿಸಿಕೊಟ್ಟನೆಂದು ತಿಳಿಯುತ್ತದೆ.

ಕನ್ನಡ ಬೈಬಲ್ ಅನುವಾದಕ್ಕೆಂದು ಅಣಿಗೊಂಡ ಮುದ್ರಣ ಕಾರ್ಯವು ಹಂತ ಹಂತವಾಗಿ ವಿಕಾಸಹೊಂದುತ್ತಾ ಇಂದಿನ ರೂಪ ಪಡೆಯುವಲ್ಲಿ ಯಶಸ್ವಿಯಾಗಿದೆ. ಮೊದಲು ವಿಲಿಯಂ ಕೇರಿಯ ಮುದ್ರಣದಲ್ಲಿ ತೆಲುಗು ಅಕ್ಷರವನ್ನು ಹೋಲುವ ಅಚ್ಚಿನ ವಿಧಾನ ನಂತರ ಕಲ್ಲಚ್ಚಿನ ಮುದ್ರಣ ರೂಪ (೧೮೨೪ ಹಿಂದೆ) ದಲ್ಲಿದ್ದು (ಲಿಥೊಮಾದರಿ) ಇಂದು ಸುಂದರ ರೂಪ ವಿನ್ಯಾಸ ಪಡೆದು ಕಂಗೊಳಿಸುತ್ತಿದೆ.

೨.೭. ಅನುವಾದವನ್ನು ಪ್ರಕಟಿಸಿದ ಸಂಸ್ಥೆಗಳು ಮತ್ತು ಪ್ರಕಟನೆಯ ವಿಧಾನ

ಕನ್ನಡ ಬೈಬಲ್ ಅನುವಾದಗಳನ್ನು ಪ್ರಕಟಿಸಿದ ಸಂಸ್ಥೆಗಳು ನಮಗೆ ಕಂಡು ಬಂದರೂ ಅವುಗಳ ಆಗಮನ ಕುರಿತು ಇಲ್ಲಿ ವಿವೇಚಿಸಬಹುದಾಗಿದೆ.

---

೧. ಪುಸ್ತಕ ಭಾಗ್ಯ ಹಿ.ಮ.ನಾಗಯ್ಯ, ಪು.೨೨೧

೨. ಅದೇ ಪು.೨೨೨

೧೭೬೩ ರಿಂದ ಕಂಪನಿ ಸರ್ಕಾರದ ವ್ಯವಹಾರ ನೀತಿಯು, ಮಿಶನರಿಗಳ ಆಗಮನಕ್ಕೆ ವಿರೋಧ ವಾಗಿದ್ದರೂ ಅವರು ಇಲ್ಲಿ ಬಂದು ನಿವಾಸ ಮಾಡುವುದನ್ನು ಪೂರ್ತಿ ಪ್ರತಿಬಂಧಿಸಿರಲಿಲ್ಲ. ಹೀಗೆ ಕಂಪನಿಯು ಮಿಶನರಿಗಳು ಬಂದು ಹೋಗುವ ವಿಷಯದಲ್ಲಿ ತಾನಿಟ್ಟುಕೊಂಡಿದ್ದ ವ್ಯವಹಾರ ನೀತಿಯನ್ನು ಅಷ್ಟು ಕಟ್ಟುನಿಟ್ಟಾಗಿ ಜಾರಿಗೆ ತರುತ್ತಿರಲಿಲ್ಲ. ಹೀಗಿದ್ದರೂ ಅವರು ಬಾರದಂತೆ ತಡೆಹಿಡೆಯುವ ಅಧಿಕಾರವು ತನ್ನದೇ ಎಂಬುದು ಅದರ ನಿಲುವು.

ಬಂದಂತಹ ಮಿಶನರಿಗಳು ಒದಗಿಬರುವ ಎಲ್ಲ ಸಮಸ್ಯೆಯನ್ನು ಎದುರಿಸಲು ಸಿದ್ಧರಾಗಿರ ಬೇಕಾಗಿದ್ದಿತು. ಬ್ರಿಟೀಷ ಸರಕಾರದಿಂದ ಯಾವ ಸಂರಕ್ಷಣೆ ಅವರಿಗೆ ಒದಗುತ್ತಿರಲಿಲ್ಲ. "ಈ ಪರಿಸ್ಥಿತಿಯನ್ನು ಅರಿತ ವಿಲ್ಬರ್ ಫೋರ್ ಮತ್ತು ಕ್ಲಾರಿಯಸ್ ಬುಖನನ್ ಮತ್ತು ಇನ್ನು ಕೆಲವರು ಇಂಗ್ಲಂಡಿನಲ್ಲಿ ಕಂಪನಿಯ ವಿರೋಧವಾಗಿ ಭಾರಿ ಚಳುವಳಿಯನ್ನೇ ಎಬ್ಬಿಸಿದ ಮಿಶನರಿಗಳು ಭಾರತಕ್ಕೆ ಹೋಗಿ ಯಾವ ತರಹದ ತೊಡಕೂ ಇಲ್ಲದೆ ಕೆಲಸಮಾಡಲು ಅನುವು ದೊರೆಯುವಂತೆ ಬ್ರಿಟೀಷ ಸರಕಾರದಿಂದ ಶಾಸನಮಾಡಿಸಲು ಪ್ರಯತ್ನಿಸಿದರು.

೧೮೧೩ರಲ್ಲಿ ಕಂಪನಿಗೆ ಹೊಸ ಸನ್ನದನ್ನು ನೀಡಲಾಯಿತು. ಇದರಿಂದ ಇನ್ನೂ ಮುಂದೆ ಭಾರತಕ್ಕೆ ಧಾರ್ಮಿಕ ಹಾಗೂ ಇನ್ನಿತರ ಜ್ಞಾನವನ್ನು ಹಬ್ಬಿಸುವ ಮತ್ತು ಅದರ ನೈತಿಕ ಮಟ್ಟವನ್ನು ಸುಧಾರಿಸುವ ಸದುದ್ದೇಶದಿಂದ ಅಲ್ಲಿಗೆ ಹೋಗಿ ಇರಲು ಆಶಿಸುವ ಜನರಿಗೆ ಶಾಸನ ಬದ್ಧವಾಗಿ ಸಕಲ ಸೌಕರ್ಯಗಳನ್ನು ಒದಗಿಸಿಕೊಡಬೇಕು ಮತ್ತು ಭಾರತಕ್ಕೆ ಹೋಗುವ ಮಿಶನರಿಗಳು ಅಲ್ಲಿನ ಸರಕಾರಕ್ಕೆ ವಿಧೇಯರಾಗಿರಬೇಕೆಂದು ಸೂಚಿಸಲಾಯಿತು. ಇದರಿಂದ ಮಿಶನರಿ ಸಂಸ್ಥೆಗಳು ಭಾರತದಲ್ಲಿ ಕಾಲೂರಲು ಅನುಕೂಲವಾಯಿತು.

"ಬ್ರಿಟೀಷ ಸರಕಾರವು ಈಸ್ಟ ಇಂಡಿಯಾ ಕಂಪನಿಗೆ ಕೊಟ್ಟ ಹೊಸ ಸನ್ನದಿನಿಂದ ಅದು ಭಾರತದಲ್ಲಿ ಒಂದು ವ್ಯಾಪಾರೀ ಸಂಘವಾಗಿರುವ ಕಾಲವು ಮುಗಿದು ಹೊಯಿತು. ಈ ಸನ್ನದಿನಿಂದ ಅದು ತನ್ನ ವ್ಯಾಪಾರಿ ಹಕ್ಕನ್ನು ಕಳೆದುಕೊಂಡು ಪೂರ್ಣ ಜವಾಬ್ದಾರಿಕೆಯನ್ನು ಸ್ವೀಕರಿಸಲು ಸಿದ್ಧವಾದಂತೆ, ದೂರದಲ್ಲಿದ್ದ ಬ್ರಿಟಿಷ್ ಪಾರ್ಲಿಮೆಂಟಿನ ಕೈಕೆಳಗೆ ಭಾರತ ದೇಶವನ್ನು ಆಳುವ ಒಂದು ಸಂಸ್ಥೆಯಾಗಿ ನಿಂತಿತು."[೧]

ಹೀಗೆ ಮಿಶನರಿಗಳಿಗೆ ಧರ್ಮ ಪ್ರಚಾರಕ್ಕೆ ಅನುವು ದೊರೆತ ಮೇಲೆ ಪ್ರೊಟೆಸ್ಟೆಂಟ್ ಮಿಶನ್ ಸಂಸ್ಥೆ ಭಾರತದಲ್ಲಿ ಕಾಲಿರಿಸಿತು. ಭಾರತಕ್ಕೆ ಬಂದ ಮಿಶನರಿ ಸಂಸ್ಥೆಗಳಲ್ಲಿ ಪ್ರೊಟೆಸ್ಟೆಂಟ್‌ರದೇ ಸಿಂಹ ಪಾಲು.

೧. ಭಾ.ಕ್ರೈ.ಸ.ಚ.ಪ್ರವೇಶಿಕೆ ಎಸ್.ವಿ.ಮಾರಾ, ಪು.೨೪೧

"೧೮೮೧ರ ಸುಮಾರಿಗೆ ೩೭ ಮಿಶನರಿ ಸೊಸೈಟಿಗಳು ಭಾರತದಲ್ಲಿ ಸೇವೆ ಸಲ್ಲಿಸಿವೆ. ಆಗ ಸು. ೬೫೮ ವಿದೇಶಿ ಮಿಶನರಿಗಳು ಭಾರತದಲ್ಲಿದ್ದರೆಂದು"[೧] ತಿಳಿದು ಬರುವುದು. ಭಾರತದಲ್ಲಿ ಮಿಶನರಿ ಸೇವೆ ಮಾಡಲು ಬಂದ ಪ್ರಮುಖ ಸಂಸ್ಥೆಗಳು ಈ ಕೆಳಗಿನಂತಿವೆ

೧. ಬ್ಯಾಪ್ಟಿಸ್ಟ ಮಿಶನರಿ ಸೊಸೈಟಿ, ಇಂಗ್ಲೆಂಡ್	೧೭೯೩
೨. ಲಂಡನ್ ಮಿಶನ್ ಸೊಸೈಟಿ, ಇಂಗ್ಲೆಂಡ್	೧೭೯೮
೩. ಚರ್ಚ ಆಫ್ ಇಂಗ್ಲೆಂಡ ಸೊಸೈಟಿ, ಇಂಗ್ಲೆಂಡ್	೧೮೧೪
೪. ಗಾಸ್ಪೆಲ್ ಪ್ರೊಪಗೇಶನ್ ಸೊಸೈಟಿ, ಇಂಗ್ಲೆಂಡ್	೧೮೧೭
೫. ವೆಸ್ಲಿಯನ್ ಮಿಶನರಿ ಸೊಸೈಟಿ, ಇಂಗ್ಲೆಂಡ್	೧೮೧೭
೬. ಜನರಲ್ ಬ್ಯಾಪ್ಟಿಸ್ಟ ಸೊಸೈಟಿ, ಇಂಗ್ಲೆಂಡ್	೧೮೧೭
೭. ಚರ್ಚ ಆಫ್ ಸ್ಕೊಟಲಿಂಡ ಸೊಸೈಟಿ, ಇಂಗ್ಲೆಂಡ್	೧೮೨೮
೮. ಫ್ರೀ ಚರ್ಚ ಆಫ್ ಸ್ಕೊಟಲಿಂಡ ಸೊಸೈಟಿ, ಇಂಗ್ಲೆಂಡ್	೧೮೨೮
೯. ಅಮೇರಿಕನ್ ಪ್ರಸ್ಬಟೇರಿಯನ್ ಮಿಶನ್, ಇಂಗ್ಲೆಂಡ್	೧೮೩೪
೧೦. ಬಾಶೆಲ್ ಮಿಶನ್, ಜರ್ಮನಿ	೧೮೩೪[೨]

ಈ ಮೇಲಿನ ಸೊಸೈಟಿಗಳು ಭಾರತದಲ್ಲಿ ಕ್ರೈಸ್ತ ಧರ್ಮ ಹಾಗೂ ಬೈಬಲ್ ಅನುವಾದ ಕಾರ್ಯದಲ್ಲಿ ಸಕ್ರೀಯವಾಗಿ ಭಾಗವಹಿಸಿ ತಮ್ಮ ಅಸ್ತಿತ್ವವನ್ನು ಪಡೆದುಕೊಂಡಿದ್ದವು.

ಈ ಸೊಸೈಟಿಗಳಲ್ಲಿ ಬೈಬಲ್ ಕುರಿತು ಅನುವಾದ ಹಾಗೂ ಸಾಹಿತ್ಯ ಕಾರ್ಯ ನಡೆದಿದ್ದರೂ ಕೊನೆಯಲ್ಲಿ ಮುದ್ರಣಕ್ಕಾಗಿ ಸಹಾಯಕ ಸಂಸ್ಥೆಗಳನ್ನು ಅವಲಂಬಿಸುತ್ತಿದ್ದವು. ಇಂತಹ ಸಹಾಯಕ ಸಂಸ್ಥೆಗಳಲ್ಲಿ ಮೂರು ಮುಖ್ಯ ಸಂಸ್ಥೆಗಳನ್ನು ಗುರುತಿಬಹುದು.

೧. ಕಲ್ಕತ್ ಆಕ್ಸಲರಿ ಸೊಸೈಟಿ

೨. ಮದ್ರಾಸ್ ಆಕ್ಸಲರಿ ಸೊಸೈಟಿ

೩. ಬೆಂಗಳೂರ ಆಕ್ಸಲರಿ ಸೊಸೈಟಿ

---

೧. Indian Missionary Directory Published 1899

೨. ಕ.ಬಾ.ಮಿಶನ್, ರೆ.ಜೆ.ಎಂ.ಜೋಗುಳ, ಪು.೫ ಮತ್ತು ೬

ಭಾರತದಲ್ಲಿ ಬೈಬಲ್ ಅಥವಾ ಕ್ರೈಸ್ತ ಸಾಹಿತ್ಯ ಸೇವೆ ಕಾರ್ಯ ಕುರಿತು, "ಕಲ್ಕತ್ತೆಯಲ್ಲಿ ಪ್ರಪ್ರಥಮವಾಗಿ ಬ್ರಿಟಿಷ್ ಮತ್ತು ಫಾರೆನ್ ಬೈಬಲ್ ಸೊಸೈಟಿ ನೇತೃತ್ವದಲ್ಲಿ, ಆಕ್ಸಲರಿ ಸಂಸ್ಥೆ ೨೧ನೇ ಫೆಬ್ರುವರಿ ೧೮೧೧ರಲ್ಲಿ ಸ್ಥಾಪಿತವಾಯಿತು."[೧] ಈ ಕಾರ್ಯ ಪ್ರಾರಂಭದ ಸವಿನೆನಪಿಗಾಗಿ "೨೦ ಫೆಬ್ರುವರಿ ೨೦೦೧ರಂದು ಬೈಬಲ್ ಸೊಸೈಟಿ ಆಫ್ ಇಂಡಿಯಾ ಬೆಂಗಳೂರ ಶಾಖೆಯು ೧೯೦ನೇ ವರ್ಷವನ್ನು ಆಚರಿಸಿತು."[೨]

ಕಲ್ಕತ್ ಆಕ್ಸಲರಿ ಸಂಸ್ಥೆಯು ಸೆರಂಪುರನ್ನು ಮುದ್ರಣ ಕಾರ್ಯಕ್ಕೆ ಕೇಂದ್ರ ಸ್ಥಾನವನ್ನಾಗಿ ಮಾಡಿಕೊಂಡು, ಬೈಬಲ್ ಹಾಗೂ ಬೈಬಲೇತರ ಸಾಹಿತ್ಯ ಮುದ್ರಿಸಲು ಪ್ರಾರಂಭಿಸಿತು. ಕನ್ನಡ ಸಾಹಿತ್ಯಕ್ಕೆ ಜೀವಾಳವಾಗಿ ಅನೇಕ ವರ್ಷಗಳ ಕಾಲ ಸೇವೆ ಸಲ್ಲಿಸಿ ಪ್ರಥಮ ಕನ್ನಡ ಕೃತಿಗಳು ಮುದ್ರಣಗೊಳ್ಳಲು ಕಾರಣಿಭೂತವಾಯಿತು. ಕನ್ನಡಿಗರು ಈ ಸಂಸ್ಥೆಗೆ ಕೃತಜ್ಞತೆ ಸಲ್ಲಿಸಬೇಕಾದುದು ಧರ್ಮ. ೧೮೧೧ರಲ್ಲಿ ಸ್ಥಾಪಿತಗೊಂಡ ಈ ಸಂಸ್ಥೆಗೆ ಜಾನ್ ಅರ್ಬರ್ಟ ಹೆರಿಂಗಟನ್‌ರು ಪ್ರಥಮ ಅಧ್ಯಕ್ಷರಾಗಿ ಹಾಗೂ ಎನ್.ಬಿ. ಎಡ್‌ಮಂಡಸ್ಟೋನ ಉಪಾಧ್ಯಕ್ಷರಾಗಿ, ಡೇವಿಡ್ ಬ್ರೌನ್ ಕಾರ್ಯದರ್ಶಿಯಾಗಿ ಈ ಸಂಸ್ಥೆಯನ್ನು ಪ್ರಾರಂಭಿಸಿದರು. "ಬ್ರಿಟಿಷ್ ಫಾರೆನ್ ಬೈಬಲ್ ಸೊಸೈಟಿ ಇವರಿಂದ ೧೮೪೫ರಲ್ಲಿ ಆಗ್ರಾದಲ್ಲಿ, ೧೮೬೩ ಲಾಹೋರನಲ್ಲಿ, ೧೮೭೫ರಲ್ಲಿ ಬೆಂಗಳೂರಲ್ಲಿ ಆಕ್ಸಲರಿ ಸೊಸೈಟಿಗಳು ಪ್ರಾರಂಭವಾದವು"[೩]

ಇನ್ನೊಂದು ಪ್ರಮುಖ ಸಂಸ್ಥೆ ಮದ್ರಾಸ್ ಆಕ್ಸಲರಿ ಇದು ೧೮೨೦ರಿಂದ ಅಸ್ತಿತ್ವದಲ್ಲಿರುವ ಸಂಸ್ಥೆ. ಕನ್ನಡಕ್ಕೆ ಬೈಬಲ್ ಅನುವಾದದಲ್ಲಿ ಹೆಚ್ಚಿನ ಸೇವೆ ಸಲ್ಲಿಸಿದೆ. ಇಂದಿಗೂ ಪ್ರತಿ ವರ್ಷ ಲಕ್ಷಗಟ್ಟಲೆ ಬೈಬಲ್ ಪೂರಕ ಸಾಹಿತ್ಯ ಮುದ್ರಣದಲ್ಲಿ ತೊಡಿಗಿದ ಸಂಸ್ಥೆ ಇದಾಗಿದೆ.

ಬೆಂಗಳೂರ ಆಕ್ಸಲರಿ ಸಂಸ್ಥೆಯು ಪೂರ್ವದಲ್ಲಿ ಚಿಕ್ಕ ಪುಸ್ತಕ ಹಾಗೂ ಕರಪತ್ರಗಳನ್ನು ಮುದ್ರಿಸುತ್ತಿತ್ತು. (೧೮೨೫-೧೮೫೩) ನಂತರ ಮದ್ರಾಸ್ ಆಕ್ಸಲರಿಯ ಶಾಖೆಯಾಗಿ (೧೮೫೩-೧೮೭೫) ಕಾರ್ಯನಿರ್ವಹಿಸಿತು. ಆಗ ಕನ್ನಡ ಮಾತನಾಡುವವರ ಸಂಖ್ಯೆ ಹತ್ತು ಮಿಲಿಯನ್ ಆಗಿತ್ತು. ಈ ಎಲ್ಲ ಜನರಿಗೆ ಬೈಬಲ್ ಸಾಹಿತ್ಯ ಒದಗಿಸುವ ಜವಾಬ್ದಾರಿ ಹೊತ್ತು ಮೈಸೂರ ಪ್ರಾಂತಕ್ಕೆ ಸಿಮಿತಗೊಳಿಸಿತ್ತು. ತದನಂತರದಲ್ಲಿ ಬಾಂಬೆ ಕರ್ನಾಟಕ, ಸೌತ ಕೆನರಾ ಹಾಗೂ ಕರ್ನಾಟಕ ತುಂಬೆಲ್ಲಾ ವ್ಯಾಪ್ತಿಯನ್ನು ವಿಸ್ತಾರಗೊಳಿಸಿತು.

---

೧. Sowing Circle Vol-16, No.2, May-Aug 2001, Pp.12

೨. ಅದೇ, ಪು.೧೨

೩. ಅದೇ, ಪು.೧೨

೧೯೪೫ ರಿಂದ The Karnataka Aaxilary of The Bible Society of India ಎಂದು ಅಸ್ತಿತ್ವ ಪಡೆದು ಕಾರ್ಯನಿರ್ವಹಿಸಲು ಪ್ರಾರಂಭಿಸಿತು. ೧೯೫೦ರ ನಂತರ Bible Society of India & Ceylon ಎಂದು ಶ್ರೀಲಂಕಾದವರೆಗೂ ತನ್ನ ವ್ಯಾಪ್ತಿ ಬೆಳೆಸಿತು.

ಈ ಅವಧಿಗಳಲ್ಲಿ ಬೆಂಗಳೂರ ಆಕ್ಸಲರಿ ಸಂಸ್ಥೆ ಅಥವಾ ಬೈಬಲ್ ಸೊಸೈಟಿ ಆಫ್ ಇಂಡಿಯಾ ಕೆಳಕಂಡಂತೆ ಬೈಬಲ್ ಸಾಹಿತ್ಯ ಮುದ್ರಿಸಿದೆ.

"Scripture Circulation in one Hundured Years.

1875-1884	89,176
1885-1894	1,37,590
1895-1904	1,56,674
1905-1914	3,38,400
1915-1924	4,97,747
1925-1934	3,99,068
1935-1944	4,59,937
1945-1954	3,56,742
1955-1964	12,22,358
1965-1974	74,73,247
	1,11,30939[೧]

ಪ್ರತಿಯೊಬ್ಬ ಮಿಶನರಿ ಒಂದು ಸಂಸ್ಥೆಯ ಪ್ರತಿನಿಧಿಯಾಗಿರುವುದರಿಂದ ತಾವು ಅನುವಾದಿಸಿದ ಅಥವಾ ಪರಿಷ್ಕರಿಸಿದ ಪುಸ್ತಕ ಅಥವಾ ಬೈಬಲಿನ ಭಾಗಶಃ ಪೂರ್ಣ ಭಾಗವನ್ನು ತಮ್ಮ ಸಂಸ್ಥೆಗೆ ಒಪ್ಪಿಸುತ್ತಿದ್ದರು. ನಂತರ ಸಂಸ್ಥೆ ಆಕ್ಸಲರಿ ಸೊಸೈಟಿಯ ಮೂಲಕ ಮುದ್ರಣಕ್ಕೆ ಅಣಿಗೊಳಿಸುತ್ತಿತ್ತು. ಈ ವರೆಗಿನ ಕನ್ನಡ ಬೈಬಲ್ ಮುದ್ರಣ ಒಬ್ಬ ವ್ಯಕ್ತಿಯಿಂದ ಆಗುವುದಿಲ್ಲ. ಒಂದು ಕಮೀಟಿ ಮೂಲಕ ಕೆಲವು ಸದಸ್ಯರನ್ನೊಳಗೊಂಡ ನಂತರ ಪರಿಷ್ಕರಣ ಸಮಿತಿಯ ಸಿಫಾರಸ್ಸಿನಿಂದ ಮುದ್ರಣ ಕಾರ್ಯಸಾಗಿದೆ.

ಈಗಲೂ ಪರದೇಶದ ಸಂಸ್ಥೆಗಳು ಧನಸಹಾಯ ಒದಗಿಸುವುದರಿಂದ, ಇಂಗ್ಲೀಷಿನ ಯಾವುದಾದರೊಂದು ಜನಪ್ರಿಯ ಆವೃತಿಯನ್ನು ಆಧಾರವಾಗಿಟ್ಟುಕೊಂಡು ಅದರ ನೆರಳಿನಲ್ಲಿಯೇ ತರ್ಜುಮೆಗೊಳಿಸಿ,

೧. Pastors Conference(Magzine) 29 Sep to 3 Oct, 1975, Pp.36

ಯಾವ ಸಂಸ್ಥೆ ಧನ ಸಹಾಯವನ್ನು ಒದಗಿಸಿತ್ತೊ ಆ ಸಂಸ್ಥೆಯ ಹೆಸರಿನಲ್ಲಿ ಮುದ್ರಣಗೊಂಡು ಬೈಬಲ್ ಹೊರ ಬರುವುದು ರೂಢಿ.

೧೯೮೪ ರಲ್ಲಿ ಕೆಥೊಲಿಕರಿಗಾಗಿ ಪ್ರಕಟವಾದ ಹೊಸ ಒಡಂಬಡಿಕೆ ಎಂಬ ಬೈಬಲ್ ಎರಡನೇ ಭಾಗವು ಹಾಗೂ ೧೯೯೨-೯೩ ರಲ್ಲಿ ಪ್ರಕಟವಾದ ಸಮಗ್ರ ಬೈಬಲ್ (ಕೆಥೊಲಿಕ್) ಗಳು ಇಂಗ್ಲೀಷಿನ Good News Bible ಮಾದರಿಯಲ್ಲಿ ಸಿದ್ಧಗೊಂಡಿದೆ ಹಾಗೂ ೧೯೯೯ ರಲ್ಲಿ ಪ್ರಕಟವಾದ ಪವಿತ್ರ ಗ್ರಂಥ ಇಂಗ್ಲೀಷಿನ (THE HOLY BIBLE) ನ್ಯೂ ಇಂಟರ್‌ನ್ಯಾಷನಲ್ ವರ್ಶನ್ (NIV) ಮಾದರಿಯಲ್ಲಿ ಕನ್ನಡದಲ್ಲಿ ಮುದ್ರಿತವಾಗಿದೆ.

೧೯೯೨ ರಲ್ಲಿ ಹೊಸ ಒಡಂಬಡಿಕೆಯ ಆವೃತಿಯು ಹೊರ ಬಂದಿದೆ. ವರ್ಲ್ಡ್ ಬೈಬಲ್ ಟ್ರಾನ್ಸಲೇಶನ್ ಸೆಂಟರ್ (WBTC) ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಇವರ ಸಹಾಯದಿಂದ Allied publishers Limited with king assistance of Russian in Agency Novosti ಯವರಿಂದ ಮುದ್ರಿತಗೊಂಡಿದೆ.

ಇಂದಿನವರೆಗೂ ಕನ್ನಡದಲ್ಲಿ ಬೇರೆ ಬೇರೆ ಪರದೇಶದ ಸಂಸ್ಥೆಗಳ ಸಹಾಯದಿಂದ ಸ್ವತಂತ್ರ ಅನುವಾದಗಳು ಹೊರ ಬರುತ್ತಲೆ ಇವೆ.

ಕನ್ನಡ ಬೈಬಲ್ ಅನುವಾದದ ವರದಿ

ಸೆರಂಪುರ ಮಿಶನರಿಗಳಿಂದ ಹಾಗೂ ರೆ ವಿಲಿಯಂ ಕೇರಿ ನೇತೃತ್ವದಲ್ಲಿ

೧೮೦೯ ಹೊಸ ಒಡಂಬಡಿಕೆ

೧೮೧೨ ಬೆಂಕಿ ಅನಾಹುತಕ್ಕೆ ತುತ್ತಾದುದು.

೧೮೨೩ ಪುನಃ ಅನುವಾದಗೊಂಡು ಮುದ್ರಣಗೊಂಡಿತು.

ಕರ್ನಾಟಕದಲ್ಲಿ

೧೮೧೨ - ಲಂಡನ್ ಮಿಷನ್ ಸಂಸ್ಥೆ ಬಳ್ಳಾರಿ, ರೆ ಜಾನ್ ಹ್ಯಾಂಡ್ಸ

೧೮೨೦ - ನಾಲ್ಕು ಸುವಾರ್ತೆಗಳನ್ನು ಹಾಗೂ ಅಪೊಸ್ತಲಕೃತ್ಯವನ್ನು ಕಲ್ಕತ್ ಆಗ್ಸಿಲರಿ

೧೮೨೫ - ಹೊಸ ಒಡಂಬಡಿಕೆ ಪ್ರಕಟಣೆ, ಮದ್ರಾಸ್ ಆಗ್ಸಿಲರಿಯಿಂದ

೧೮೩೧ - ಹಳೆ ಒಡಂಬಡಿಕೆ

೧೮೩೭ - ಪುನರಾವೃತ್ತಿ ನಾಲ್ಕು ಸುವಾರ್ತೆ ಹಾಗೂ ಅಪೊಸ್ತಲದ ಕೃತ್ಯ

೧೮೪೮ - ಪುನರಾವೃತ್ತಿಯ ಹೊಸ ಒಡಂಬಡಿಕೆ ಮದ್ರಾಸ್ ಆಗ್ಜಿಲರಿ ರೆ ಜಿ.ಎಚ್.ವೈಗಲ್

೧೮೫೦ - ಹೊಸ ಆವೃತ್ತಿಯ ಹೊಸ ಒಡಂಬಡಿಕೆ

೧೮೫೪ - ಮದ್ರಾಸ್ ಆಗ್ಜಿಲರಿ ನೇಮಕವಾದ ಪುನರ್ ಪರಿಶೀಲನೆಯ ಸದಸ್ಯರಿಂದ ಸುಧಾರಿಸಿದ ಆವೃತ್ತಿ

೧೮೬೦ - ಸಂಪೂರ್ಣ ಬೈಬಲ್ಲಿನ ತಾತ್ಕಾಲಿಕ ಆವೃತ್ತಿ

೧೮೬೫ - ಸಂಪೂರ್ಣ ಬೈಬಲ್ ತಲೆಬರಹ ಹಾಗೂ ಅಡಿಟಿಪ್ಪಣಿ ಸಹಿತ

೧೮೯೧ - ಹೊಸ ಪರಿಷ್ಕರಣ ಸಮಿತಿ ಆಯ್ಕೆ

೧೯೦೧ - ತಾತ್ಕಾಲಿಕ ಹೊಸ ಒಡಂಬಡಿಕೆಯ ಅಂತಿಮ ಆವೃತ್ತಿ

೧೯೩೪ - ಸುಧಾರಿಸಿದ ಆಧಾರ ಅಡಿ ಟಿಪ್ಪಣಿಯ ಸತ್ಯವೇದ

೧೯೭೨ - ರೋಮನ್ ಕೆಥೊಲಿಕ್ ಹಾಗೂ ಬೈಬಲ್ ಸೊಸೈಟಿಗಳ ಜಂಟಿ ಕಾರ್ಯಾರಂಭ.

೨.೮. ಉಪಲಬ್ದ ಮತ್ತು ಅನುಪಲಬ್ದ ಅನುವಾದಗಳು

ಕನ್ನಡ ಬೈಬಲ್ ಅನುವಾದದ ಆವೃತ್ತಿಗಳು ಕರ್ನಾಟಕದಲ್ಲಿ ಮುದ್ರಿತಗೊಳ್ಳದೇ ಕಲ್ಕತ್, ಮದ್ರಾಸ್‌ಗಳಲ್ಲಿ ಪ್ರಕಟವಾಗಿದ್ದರಿಂದ, ಹಾಗೂ ಪ್ರಾರಂಭದ ಆವೃತ್ತಿಗಳು ಭಾಗಶಃ ಇರುವುದರಿಂದ ಅವುಗಳು ಇಲ್ಲಿಯವರೆಗೂ ಉಳಿಯುವಲ್ಲಿ ಸಾಧ್ಯವಾಗದೆ ಹೋಗಿರಬಹುದು. ಮತ್ತು ಕೆಲವೇ ವರ್ಷಗಳಲ್ಲಿ ಪುನಃ ಮುದ್ರಣಗೊಂಡಿದ್ದರಿಂದ ಮೂಲ ಆವೃತ್ತಿಯನ್ನು ಕಾಯ್ದಿರಿಸಬೇಕೆಂಬ ಹಂಬಲ ಇಲ್ಲದೆ ಹೋದಂತಿದೆ. ಹೀಗಾಗಿ ಕೆಲವೊಂದು ಉಪಲಬ್ದವಾದರೆ ಇನ್ನೂ ಕೆಲವು ಅನುಪಲಬ್ದವಾಗಿ ಕಂಡು ಬರುತ್ತವೆ.

ಅನುಪಲಬ್ದ	ಉಪಲಬ್ದ
೧. ೧೮೦೯ ಹೊ. ಒಡಂಬಡಿಕೆ ಸೆರಾಂಪುರ ಪ್ರೆಸ್	೧. ೧೮೧೨ ಲೂಕನ ಸುವಾರ್ತೆ ಜಾನ್ ಹ್ಯಾಂಡ್ಸರಚಿತ
೨. ೧೮೧೨ ಹೊ. ಒಡಂಬಡಿಕೆ ಅಗ್ನಿದಗ್ದವಾದದ್ದು	೨. ೧೮೨೩ ಹೊ.ಒ.ಕೇರಿ ಅನುವಾದ ಕೇರಿ ರಚಿತ
೩. ವೀಗಲ್ ಮತ್ತು ಮೋಗ್ಲಿಲಿಂಗ ಅನುವಾದ	೩. ೧೮೨೦ ನಾಲ್ಕು ಸುವಾರ್ತೆ ಹಾಗೂ ಅ.ಕೃತ್ಯ ಜಾನ್ ಹ್ಯಾಂಡ್ಸ್
೪. ಜಾರ್ಜ್ ಕಾಸಾ ವೇಜರ್ ಹಾಗೂ ಮೆಕ್ ರಿಕಿ ಬಳ್ಳಾರಿ	೪. ೧೮೩೦ ಹೊ.ಒ ಹ್ಯಾಂಡ್ಸ ಮತ್ತು ರೀವ್ (Macricke) ಹೊ.ಒ. ೧೮೫೨
೫. ರೆ.ಜೆ.ಕನಕ (ಭಾರತೀಯ ಗಾರು) ಹ. ಒಡಂಬಡಿಕೆ	೫. ೧೮೪೧ ಹೊ.ಒಡಂಬಡಿಕೆ ಬೆಂಗಳೂರ, ಪ್ರೆಸ್

೬. ೧೮೩೭ ಪರಿಷ್ಕೃತ ಸುವಾರ್ತೆ ಅ. ಕೃತ್ಯ

೭. ೧೮೬೦ ತಾತ್ಪೂರ್ತ ಆವೃತ್ತಿ ಸಂಪೂರ್ಣ ಬೈಬಲ್

೮. ೧೯೦೧ ಪರಿಷ್ಕೃತ ತಾತ್ಪೂರ್ತಕ ಹೊ.ಒ ಪ್ರಕಟ

ಜೋನ ೧೯೦೨

೬. ೧೮೪೧ ಹೊ. ಒಡಂಬಡಿಕೆ ಬೆಂಗಳೂರ, ಪ್ರೆಸ್

೭. ೧೮೪೮ ಹೊ. ಒ. ಜಿ.ಎಚ್. ವೀಗಲ್

೮. ೧೮೫೦ ಹೊ. ಒ. ಪರಿಶ್ಕರಣ ಆವೃತ್ತಿ ಬಳ್ಳಾರಿ

೯. ೧೮೫೪ ಪರಿಷ್ಕರಣ ಮದ್ರಾಸ್ ಆಕ್ಸಲರಿ

೧೦. ೧೮೬೫ ಸಮಗ್ರ ಬೈಬಲ್ ಬೆಂಗಳೂರ
ಮುದ್ರಣ ಮಂಗಳೂರ ಮಿಶನ್ ಪ್ರೆಸ್

೧೧. ೧೮೬೫ ರ ಹೊ. ಒ. ೧೯೦೭ರಲ್ಲಿ ಪರಿಷ್ಕರಣ
ಹ.ಒಡಂಬಡಿಕೆ ೧೯೩೪

೧೨. ೧೯೭೨ ರೋಮನ್ ಕೆಥೊಲಿಕ ಪ್ರೊಟೆಸ್ಟೆಂಟ್
ಜಂಟಿ ಹೊ.ಒಡಂಬಡಿಕೆ

೧೩. ೧೯೮೮,೮೯ ಹೊ.ಒಡಂಬಡಿಕೆ ಸರಳ
ಭಾಷಾಂತರ ರೊಮನ್ ಕೆಥೊಲಿಕ

೧೪. ೧೯೯೨,೯೩ ಸಮಗ್ರ ಬೆಬಲ್ ಕೈಥೊಲಿಕ
ಮತ್ತು ಪ್ರೊಟೆಸ್ಟೆಂಟ್

೧೫. ೧೯೯೨,೯೩ ಸಮಗ್ರ ಹಾಗೂ ಅನುಗ್ರಂಥಗಳು

೧೬. ೧೯೯೨ ಹೊಸ ಒಡಂಬಡಿಕೆ ವರ್ಲ್ಡ್ ಬೈಬಲ್
ಟ್ರಾನ್ಲೇಶನ್ ಸೆಂಟರ್ ಬೆಂಗಳೂರು

೧೭. ೧೯೯೯ ಪವಿತ್ರ ಗ್ರಂಥ ನ್ಯೂ ಇಂಡಿಯಾ
ಬೈಬಲ್ ಸೊಸೈಟಿ ಬೆಂಗಳೂರು

ಅಧ್ಯಾಯ ೩

ಕನ್ನಡ ಧಾರ್ಮಿಕ ಸಾಹಿತ್ಯಕ್ಕೆ ಬೈಬಲಿನ ಕೊಡುಗೆ

೩.೧. ಬಹುಧರ್ಮೀಯತೆ, ವೈದಿಕ-ವೀರಶೈವ-ಇಸ್ಲಾಂ-ಕ್ರೈಸ್ತ ಮುಂ...

೩.೨. ಕನ್ನಡ ಸಾಹಿತ್ಯಕ್ಕೆ ಕ್ರೈಸ್ತರ ಕೊಡುಗೆ

೩.೩. ಬೈಬಲ್ ಆಧಾರಿತ ಕೃತಿಗಳ ಸ್ಥಾನ ಹಾಗೂ ಮಹತ್ವ

೩.೪. ಕ್ರೈಸ್ತ ಸಾಹಿತ್ಯದ ಕೃತಿಗಳ ಮಹತ್ವ, ಸ್ಥಾನ, ಪ್ರಮಾಣ

೩

ಕನ್ನಡ ಧಾರ್ಮಿಕ ಸಾಹಿತ್ಯಕ್ಕೆ ಬೈಬಲಿನ ಕೊಡುಗೆ

೩.೧. ಬಹುಧರ್ಮೀಯತೆ, ವೈದಿಕ-ವೀರಶೈವ-ಇಸ್ಲಾಂ-ಕ್ರೈಸ್ತ ಮುಂ...

"ಹಿಂದೂ ದೇಶವು ವಿಚಾರದ ಆಗರವು ಧರ್ಮದ ತವರು ಮನೆಯು ದೇವಾನುಭವಕ್ಕೆ ಸದನವು! ಇದು ಬಹುಪ್ರಾಚೀನ ಕಾಲದಿಂದಲೇ ಧರ್ಮದ ದೆಸೆಯಿಂದ ಪ್ರಸಿದ್ಧವಾದ ದೇಶವು. ಇಲ್ಲಿ ಅತಿ ಶೀತವಲಯದಿಂದ ಉಷ್ಣವಲಯದವರೆಗಿರುವ ಜಗತ್ತಿನ ಸಕಲ ತರದ ಹವಾಮಾನಗಳು ಹೇಗೆ ದೊರೆಯುತ್ತವೆಯೋ ಹಾಗೆಯೇ ಸಕಲ ತರದ ಧರ್ಮಗಳೂ ನೋಡಲಿಕ್ಕೆ ಸಿಗುತ್ತಿರುವುದರಿಂದ ಇದಕ್ಕೆ (Museum of Religions) ಅಂದರೆ "ಧರ್ಮ ಪ್ರದರ್ಶನ ಶಾಲೆ" ಎಂದು ನಾಮಧೇಯವು ದೊರೆತಿರುತ್ತದೆ.

ಭಾರತ ದೇಶ ಜ್ಯಾತ್ಯಾತೀತ ರಾಷ್ಟ್ರವೆಂದು ಕರೆಯಿಸಿಕೊಳ್ಳುತ್ತದೆ. ಇಲ್ಲಿ ಎಲ್ಲ ಧರ್ಮೀಯರು ಬಾಳಿ ಬದುಕಲು ಸಂವಿಧಾನಾತ್ಮಕವಾಗಿ ಅವಕಾಶವನ್ನು ಕಲ್ಪಿಸಲಾಗಿದೆ. ವ್ಯಕ್ತಿ ತನ್ನ ತಿಳುವಳಿಕೆಯ ಹಂತ ಅಂದರೆ ಹದಿನೆಂಟು ವರುಷದ ನಂತರ ತಾನು ಹುಟ್ಟಿದ ಧರ್ಮವನ್ನು ಬಿಟ್ಟು ತಾನು ಬಯಸಿದ ಧರ್ಮವನ್ನು ಸ್ವೀಕರಿಸಬಹುದು, ಅನುಸರಿಸಬಹುದು. ತಾನು ಇಚ್ಛಿಸಿದರೆ ಮತಾಂತರ ಹೊಂದಬಹುದು. ಒಂದು ಧರ್ಮ ಇನ್ನೊಂದು ಧರ್ಮವನ್ನು ಪ್ರತಿಸ್ಪರ್ಧಿಸಿ ಬೆಳೆಯಲು ಅವಕಾಶವಿರುವಾಗ ಆಯಾ ಧರ್ಮದ ತಿರುಳನ್ನು ಜನರಿಗೆ ತಿಳಿಸುವಲ್ಲಿ ಸ್ವಧರ್ಮೀಯರು ಪ್ರಯತ್ನಜಸಿದ್ದು, ಪ್ರಯತ್ನಿಸುತ್ತಿರುವುದು ಸಹಜ ಪ್ರಕ್ರಿಯೆ ಆಗಿ ಕಂಡುಬರುವುದು.

ಈ ಹಿನ್ನೆಲಯಲ್ಲಿ ಧರ್ಮ ಪ್ರಚಾರಗಳು ನಡೆದು, ಯುದ್ಧಗಳು ನಡೆದು, ಮಾನವ ಕುಲದ ಧಾರ್ಮಿಕ ನಂಬಿಕೆಗಳನ್ನು ನಾಶಕ್ಕೆ ಒಯ್ದ ಘಟನೆಗಳು ಐತಿಹಾಸಿಕ ಸಾಕ್ಷಿಗಳಾಗಿವೆ. ಭಾರತ ದೇಶ ಬಹು ಧರ್ಮೀಯರ ರಾಷ್ಟ್ರ. ಈ ಹಿನ್ನೆಲೆಯಲ್ಲಿ ರೂಪುಗೊಂಡ ಕನ್ನಡ ಸಾಹಿತ್ಯ ಕೂಡ ಧರ್ಮವನ್ನು ತನ್ನ ತಿರುಳಾಗಿಟ್ಟುಕೊಂಡು ಸಾಗಿ ಬಂದುದಾಗಿದೆ. ಭಾರತಕ್ಕೆ ಬ್ರಿಟೀಷರು ಬಂದ ನಂತರ ಈ ಧಾರ್ಮಿಕ ಮನೋಭಾವಗಳ ಮತೀಯ ಘಟನೆಗಳ ಬಗ್ಗೆ ಅವಕಾಶಗಳು ಇಲ್ಲದಾದವೆಂದರೆ ತಪ್ಪಾಗಲಾರದು.

ಭಾರತ ಎಲ್ಲ ಧರ್ಮಗಳಿಗೆ ತಾಣವಾಗಿದ್ದು, Museum of Relgion ಎಂದು ಕರೆಯಿಸಿ ಕೊಳ್ಳುತ್ತಿದ್ದುದು ಶ್ಲಾಘನೀಯ. ಹೀಗೆ ಬಹುಧರ್ಮೀಯರು ಕಂಡುಬಂದರೂ ಅಂತಹ ಪೈಪೋಟಿ

೧. ಚ.ಉ.ಸ.ಸಾಹಿತ್ಯ ರೆ.ಜೆ.ಎಂ.ಜೋಗುಳ, ಪು.೪೧೭

ಧಾರ್ಮಿಕ ವಿಷಯದಲ್ಲಿ ಸಾಗಿ ಬಂದಿದೆ. ನಾವು ಕನ್ನಡಿಗರು ನಾವೆಲ್ಲಾ ಒಂದು ಎಂದು, ನಮ್ಮ ಧರ್ಮಗಳು ಹಲವು, ಈ ದೃಷ್ಟಿಯಿಂದ ಬೆಳೆದು ಬಂದ ಸಾಹಿತ್ಯ ಕೂಡ ಮತೀಯ ದೃಷ್ಟಿಕೋನದಿಂದ ಬದಲಾಗಲಿಲ್ಲ. ಕನ್ನಡ ಸಾಹಿತ್ಯವನ್ನು ಮೊಟ್ಟ ಮೊದಲಿಗೆ ದೃಷ್ಟಿಸಿ, ಅದರ ಚರಿತ್ರೆಯನ್ನು ಬರೆದವರು ಪ್ರಾಶ್ಚಾತ್ಯರಾದ ಇ.ಪಿ.ರೈಸರವರು.* ಅವರ ದೃಷ್ಟಿಕೋನವೇ ಇಂದು ಬೆಳೆದು ನಿಂತಿದೆ. ಕನ್ನಡ ಸಾಹಿತ್ಯ ಚರಿತ್ರೆಯನ್ನು ರಚಿಸಿದ ಆರ್.ನರಸಿಂಹಾಚಾರ್ಯ, ರಂ.ಶ್ರೀ ಮುಗುಳಿ ಅವರು ರೈಸ್ ರವರನ್ನು ಅನುಸರಿಸಿ ಜೈನ-ವೀರಶೈವ-ಬ್ರಾಹ್ಮಣ ಸಾಹಿತ್ಯವನ್ನಾಗಿ ವಿಂಗಡಿಸಿದರು.

ಕನ್ನಡ ಸಾಹಿತ್ಯ ಬೆಳೆದು ನಿಂತಿದ್ದು, ಧಾರ್ಮಿಕ ನೆಲೆಗಟ್ಟಿನ ಮೇಲೆ. ಧರ್ಮ ಪ್ರಚಾರವೇ ಇಲ್ಲಿ ಎದ್ದು ಕಾಣುವ ಅಂಶ.ಕವಿ ತನ್ನ ಧರ್ಮ ಪ್ರತಿಪಾದನೆಗೆ ಶ್ರಮಿಸಿರುವುದು ಒಂದು ಅಂಶವಾದರೆ, ಧರ್ಮದ ಚೌಕಟ್ಟನ್ನು ಮೀರದೆ ನಡೆದಿರುವುದು ಇನ್ನೊಂದು ಅಂಶ. ತನ್ನ ಒಡೆಯನು ಆಶ್ರಯದಾತನ ಧರ್ಮವನ್ನು ಎತ್ತಿ ಹಿಡಿಯುವಲ್ಲಿ ಮತ್ತೊಂದು ಪ್ರಮುಖ ಅಂಶವನ್ನು ತೋರಿಸಿದ್ದಾರೆ.

ಒಂದು ಧರ್ಮ ಇನ್ನೊಂದು ಧರ್ಮಕ್ಕೆ ಪೂರಕವೂ ಅಲ್ಲ ಮಾರಕವೂ ಅಲ್ಲ. ಹೀಗಾಗಿ, ತಮ್ಮ ಧರ್ಮ ತತ್ವ ಅವರ ಸಹಜ ಪ್ರವೃತ್ತಿಗಳಲ್ಲಿ ಒಂದಾಗಿ ಕಂಡುಬರುತ್ತದೆ. ಸನಾತನ ಧರ್ಮದ ಮೂಲ ಅಂಶಗಳನ್ನು ಗಮನಿಸಿದರೆ, ಶಿವನ ಭಕ್ತರು ವಿಷ್ಣುವನ್ನು ತೆಗಳಿದ್ದು, ವಿಷ್ಣುವಿನ ಭಕ್ತರು ಶಿವನನ್ನು ತೆಗಳಿದ್ದು, ಭಾರತದ ಮೂಲ ಗ್ರಂಥಗಳಾದ ವೇದಗಳ ಕುರಿತು ಸ್ವಲ್ಪ ವಿವೇಚಿಸಿದರೆ ಧರ್ಮದ ಸೆಳೆತ ಹೇಗೆ ಪ್ರಭಾವ ಬೀರಬಲ್ಲುದೆಂಬುದನ್ನು ತಿಳಿದುಕೊಳ್ಳಬಹುದು.

ಭಾರತದಲ್ಲಿ ಸನಾತನ ಧರ್ಮ ಯಾವುದು? ವರ್ಣಾಶ್ರಮಗಳು ಧರ್ಮಗಳೇ? ಹಿಂದೂ ಇದು ಒಂದು ಧರ್ಮವೇ? ಅಥವಾ ಸ್ಥಳದ ಹೆಸರೋ? ಹೀಗೆ ಪ್ರಶ್ನೆಗಳಿಗೆ ಉತ್ತರ ಹುಡುಕಲು ಹೊರಟರೆ ನಾವು ಸೂಕ್ತವಾದ ಯಾವ ನೆಲೆಗೆ ಮುಟ್ಟಲು ಸಾಧ್ಯವಾಗುವುದಿಲ್ಲ.

ಬಹು ಧರ್ಮೀಯತೆ ಕಂಡುಬಂದರೂ ಆಯಾ ಕಾಲಕ್ಕೆ ಆಯಾ ಸಂದರ್ಭದಲ್ಲಿ ಇತರ ಧರ್ಮಗಳ ಮೇಲೆ ಗದಾಪ್ರಹಾರ ನಡೆದುದು ಕಂಡುಬರುವುದು. ಉದಾಹರಣೆಗೆ ೧೨ನೇ ಶತಮಾನದಲ್ಲಿ ಪ್ರವರ್ಧಮಾನದಲ್ಲಿದ್ದ ವಚನ ಸಾಹಿತ್ಯ, ಶೈವ ತತ್ವವನ್ನು ಪ್ರತಿಪಾಧಿಸಲು ಇತರ ಎಲ್ಲ ಅಸ್ತಿತ್ವದಲ್ಲಿದ್ದ ಧರ್ಮ ಸಿದ್ಧಾಂತಗಳನ್ನು ಒರೆಗೆ ಹಚ್ಚಲು ಪ್ರಯತ್ನಿಸಿದ ಈ ಪರಂಪರೆ, ಕನ್ನಡ ಸಾಹಿತ್ಯದಲ್ಲಿ ಮುಂದೆ ನೇರವಾಗಿ ಕಂಡುಬರದಿದ್ದರು ಕ್ರೈಸ್ತ ಮಿಶನರಿಗಳು ಕರ್ನಾಟಕಕ್ಕೆ ನೆಲೆಯೂರಿದ ನಂತರ ಮತ್ತೆ ಮುಂದುವರೆದಿದ್ದು ಕಂಡುಬರುವುದು. ವೀರಶೈವ ಸಾಹಿತ್ಯ ಹಾಗೂ ಧರ್ಮಗಳು ಏಕದೇವೋಪಾಸನೆಯಲ್ಲಿ ಬೆಳೆದುದಾಗಿರುವುದರಿಂದ ಕ್ರೈಸ್ತ ಧರ್ಮ ತತ್ವಗಳನ್ನು ಇದು ಪ್ರತಿಪಾದಿಸಿರುವುದರಿಂದ, ಬಹು ಬೇಗ ಈ ಸಾಹಿತ್ಯ ಮಿಶನರಿಗಳನ್ನು ಆಕರ್ಷಿಸಿತು. ಹಾಗೂ ವಚನಕಾರರು ಅನುಸರಿಸಿದ ಮಾರ್ಗವನ್ನು ಕೆಲ

* The history of canrese litrature by E.P.Rice

ಮಿಶನರಿಗಳು ಅನುಸರಿಸಿ ಹಿಂದೂ ಧರ್ಮದ ಮೂಲವನ್ನು ಪ್ರಶ್ನಿಸುವ ಮತೀಯ ಸಾಹಿತ್ಯವನ್ನು ಸೃಷ್ಟಿಸಿದ್ದು ಈ ಕಾರಣಕ್ಕಾಗಿಯೇ.

ಮಿಶನರಿಗಳ ನಂತರ ಮತೀಯ ಸಾಹಿತ್ಯ ಕಂಡುಬಂದಿತೆಂಬುದು ಮಾತ್ರವಲ್ಲ, ಇದು ಕನ್ನಡ ಸಾಹಿತ್ಯದಲ್ಲಿ ಹಾಗೂ ಸಂಸ್ಕೃತ ಸಾಹಿತ್ಯದಲ್ಲಿ ಮೊದಲಿನಿಂದಲೂ ಇದ್ದುದಾಗಿದೆ. ಆದರೆ ಹೆಚ್ಚು ಹಾಗೂ ನೇರ ಚಾಲನೆ ದೊರೆತದ್ದು ಮಿಶನರಿಗಳ ಪ್ರಭಾವದಿಂದೆಂದು ಹೇಳಿದರೆ ಸೂಕ್ತವೆನೋ ಅನಿಸುವುದು.

ವೈದಿಕ ಧರ್ಮ

"ವೈದಿಕ ಧರ್ಮ ಎಂದರೆ ವೇದಾನುಸಾರಿಯಾಗಿ ಅಥವಾ ವೇದೋಕ್ತ ಧರ್ಮ ಎಂದು ಅರ್ಥವಾಗುತ್ತದೆ. ಭಾರತೀಯರು ತಮ್ಮ ಧರ್ಮ, ಮತ, ಸಂಪ್ರದಾಯಗಳ ಮೂಲವನ್ನು ವೇದಗಳಲ್ಲಿ ಅರಸುತ್ತಾರೆ. ಪ್ರಮಾಣಗಳೆಂದೂ ನಂಬಿದ್ದಾರೆ. ಆದುದರಿಂದ ವೇದೋಕ್ತವಾದುದೇ ಧರ್ಮ, ಅದಕ್ಕೆ ವಿರುದ್ಧವಾದುದೆಲ್ಲವೂ ಅಧರ್ಮ ಎಂಬ ಭಾವನೆಯೂ ಅವರಲ್ಲಿದೆ."[೧]

"ಭಾರತೀಯ ವೇದಗಳನ್ನು ಅನಾದಿ ನಿತ್ಯವೆಂದು ನಂಬಿರುವುದರಿಂದ ತಮ್ಮ ಧರ್ಮವನ್ನು ಸನಾತನ ಧರ್ಮವೆಂದು ಕರೆದಿರುತ್ತಾರೆ. ಭಾರತವನ್ನು ಹಿಂದೂ ದೇಶವೆಂದು ಕರೆಯುವುದು ವಾಡಿಕೆಯಾದ ಮೇಲೆ ಇಲ್ಲಿನ ಬಹುಸಂಖ್ಯಾತರ ಧರ್ಮವನ್ನು ಹಿಂದೂ ಧರ್ಮವೆಂದು ಕರೆಯುತ್ತಾರೆ. ಅಂತೆಯೇ ಈ ಧರ್ಮಕ್ಕೆ ಆಕರವಾದ ವೇದಾದಿ ವಾಙ್ಮಯವನ್ನು ವಂಶಪಾರಂಪರ್ಯವಾಗಿ ಅಭ್ಯಾಸ ಮಾಡುತ್ತ ಬಂದವರು ಬ್ರಾಹ್ಮಣರಾದ್ದರಿಂದ, ಈ ಧರ್ಮವನ್ನು ಜೈನ ಬೌದ್ಧಾದಿ ಧರ್ಮದಿಂದ ಭಿನ್ನವಾಗಿ ಗುರುತಿಸಲು ಬ್ರಾಹ್ಮಣಧರ್ಮ ಎಂದು ಹೆಸರಿಸಿರುವುದೂ ವಾಡಿಕೆ. ಒಟ್ಟಿನಲ್ಲಿ ವೈದಿಕ ಧರ್ಮ, ಸನಾತನ ಧರ್ಮ, ಹಿಂದೂ ಧರ್ಮ, ಬ್ರಾಹ್ಮಣ ಧರ್ಮ ಎಲ್ಲವೂ ಪರ್ಯಾಯವಾದಿಗಳಾಗಿವೆ." ವೈದಿಕ ಧರ್ಮ ಅಥವಾ ಬ್ರಾಹ್ಮಣ ಮತ ಇಲ್ಲವೇ ಹಿಂದೂಮತವೆಂದು ಕರೆಯಬಹುದು.

ಈ ಮೇಲಿನ ಮೂರು ಹೆಸರುಗಳಿಂದ ನಾವು ಕರೆದರು ಅದು ಒಂದೇ ಮತವಾಗಿ ಕಂಡುಬರುತ್ತದೆ. ಆದರೆ ಒಬ್ಬ ದೇವರು, ಒಂದು ನಂಬಿಕೆ, ಒಂದು ಆಚಾರ, ಒಂದು ವಿಚಾರ, ಒಂದು ಸಂಪ್ರದಾಯ, ಒಂದು ಹಿನ್ನೆಲೆ, ಮುನ್ನೆಲೆ ಹೀಗೆ ಒಂದೆಂದು ನಿರ್ದೇಶಿಸಬಹುದಾದ ಯಾವುದೂ ಇದಕ್ಕೆ ಮೀಸಲಾದ ವೈಶಿಷ್ಟ್ಯವಲ್ಲ. ಇದು ಒಂದು ಮತವೆಂದು ಹೇಳುವುದಕ್ಕಿಂತ ಹಲವು ಮತಗಳ ಸಮುಚ್ಚಯವೆಂದು ಹೇಳುವುದು ಹೆಚ್ಚು ಒಪ್ಪುತ್ತದೆ.

---

೧. ಕನ್ನಡ ವಿಷಯ ವಿಶ್ವಕೋಶ, ಪು.೧೩೬೬

೨. ಅದೇ, ಪು.೧೩೬೬

ಈ ಮತದ ವೈಶಿಷ್ಟ್ಯವೆಂದರೆ ಎಲ್ಲ ವರ್ಗಗಳಿಗೆ ಮತ ಸ್ಥಾಪಕರು ಇರುವಂತೆ ಇಲ್ಲಿ ಕಂಡುಬರುವುದಿಲ್ಲ. ವೈದಿಕ ಮತವೆಂದರೆ ವೇದಗಳನ್ನು ಅವಲಂಬಿಸಿದ ಮತವೆಂದು ಹೇಳುತ್ತಾರೆ. ಅನೇಕ ಋಷಿಗಳು, ಅನೇಕ ಸಂದರ್ಭಗಳಲ್ಲಿ ಭಾವೋದ್ದೀಪಿತರಾಗಿದ್ದಾಗ ಅವರ ಮುಖದಿಂದ ಹೊರಟ ಉದ್ಗಾರಗಳ ಸಮುದಾಯಕ್ಕೆ ವೇದವೆಂದು ಹೆಸರು. ವೈದಿಕ ಕರ್ಮಗಳ ರೀತಿ-ರಚನೆಗಳನ್ನೂ ಪ್ರಯೋಗ ಪದ್ಧತಿಗಳನ್ನೂ ವಿಸ್ತಾರವಾಗಿ ವಿವರಿಸಿರುವ ಗ್ರಂಥಗಳಿಗೆ ಬ್ರಾಹ್ಮಣಗಳೆಂದು ಹೆಸರು. ಅಥವಾ ವೈದಿಕ ಕರ್ಮಗಳನ್ನು ಸಾಂಗವಾಗಿ ನಿರ್ವಹಿಸುವುದಕ್ಕೆ ದೀಕ್ಷೆಯನ್ನು ವಹಿಸಿ ಮುಖ್ಯ ಪಾತ್ರವನ್ನು ತೆಗೆದುಕೊಂಡ ಜನರಿಗೆ ಬ್ರಾಹ್ಮಣರೆಂದು ಹೆಸರು. ಈ ಸಂಬಂಧದಿಂದ ಬ್ರಾಹ್ಮಣ ಮತವೆಂಬ ಹೆಸರು ಸಫಲವಾಯಿತು. ಒಂದು ಕಾಲದಲ್ಲಿ ಬ್ರಹ್ಮಜ್ಞಾನ ಉಳ್ಳವನಿಗೆ ಮಾತ್ರ ಬ್ರಾಹ್ಮಣ ಎಂದು ಕರೆಯಲಾಗುತ್ತಿತ್ತೆಂಬುದನ್ನು ಇಲ್ಲಿ ಗ್ರಹಿಸಬೇಕು.

ವೈದಿಕ ಧರ್ಮ, ವೇದಗಳನ್ನವಲಂಬಿಸಿಯೇ ಬೆಳೆದುದು ಎಂಬುದಾಗಿದೆ. ಆ ವೇದಗಳ ಹುಟ್ಟು-ಉಗಮ ವಿಕಾಸವನ್ನು ತಿಳಿಯುವುದು ಸೂಕ್ತ. ವೇದಗಳು ಅನಾದಿಯೆಂದು ಹೇಳುವುದುಂಟು. ಬ್ರಹ್ಮನ ನಾಲ್ಕು ಮುಖದಿಂದ ಹುಟ್ಟಿದವುಗಳಾಗಿದ್ದರೆ ಅನಾದಿ ಎನ್ನಲು ಸಾಧ್ಯವೇ?

ಕದಾ ಚಿದ್ಧ್ಯಯ ಸ್ರಷ್ಟುರ್ವೇದಾ ಆಸಂಶ್ಚತು ರ್ಮುಖಾತ |
ಕಥಂ ಸ್ರಕ್ಷ್ಯಾಮ್ಯ ಹರಿಲೋಕಾನ್ ಸಮವೇತಾನ್ ಯಥಾ ಪುರಾ ||
ಋಗ್ಯಜುಸ್ಸಾಮಾಥರ್ವಾಖ್ಯಾನ್ ವೇದಾನ್ ಪೂರ್ವಾದಿಭಿರು ಖೈಃ |
ಶಾಸ್ತ್ರಮಿಜ್ಯಾಂ ಸ್ತುತಿಸ್ತೋಮಂ ಪ್ರಾಯಶ್ಚಿತ್ತಂ ವ್ಯಧಾತ್
ಕ್ರಮಾತ್ | (೩೪, ೩೭)

ಮುಂಚೆ ಯಾವ ವಿಧವಾಗಿತ್ತೋ, ಆ ವಿಧವಾಗಿ ಅನೇಕ ಲೋಕಗಳನ್ನು ನಾನು ಹ್ಯಾಗೆ ಸೃಷ್ಟಿಸುವೆನೆಂದು ಧ್ಯಾನಿಸಿ ಕೊಂಡಿದ್ದ ನಾಲ್ಕು ಮುಖದವನಾದ ಬ್ರಹ್ಮನಿಂದ ವೇದಗಳು ಉಂಟಾದವು.

ಆ ಬ್ರಹ್ಮನು ತನ್ನ ನಾಲ್ಕು ಮುಖಗಳಿಂದ ಕ್ರಮವಾಗಿ ಋಗ್ವೇದವನ್ನೂ ಯಜುರ್ವೇದವನ್ನೂ, ಸಾಮವೇದವನ್ನೂ, ಅಥರ್ವಣವೇದವನ್ನೂ ಉಂಟು ಮಾಡಿದನು. ಇದಲ್ಲದೆ ಮಂತ್ರ ಶಾಸ್ತ್ರವನ್ನೂ ಯಾಗವನ್ನೂ ಗೀತವನ್ನೂ ಪ್ರಾಯಶ್ಚಿತ್ತವನ್ನೂ ಉಂಟು ಮಾಡಿದನು.

*ಮನು ಧರ್ಮ ಶಾಸ್ತ್ರದ ೧ನೇ ಅಧ್ಯಾಯ-೨೩ನೇ ಶ್ಲೋಕ
ಅಗ್ನಿ ವಾಯುರವಿಭ್ಯಸ್ತು | ತ್ರಯಂಬ್ರಹ್ಮಸನಾಂತನಂ ||
ದುದೋಹಯಜ್ಞಸಿದ್ಧ್ಯರ್ಥ | ಮೃಗ್ಯಜುಸ್ಸಾಮಲಕ್ಷಣಂ ||

---

* ಮನುಧರ್ಮಶಾಸ್ತ್ರ ಎನ್ನುವ ಪೂರ್ವದಲ್ಲಿ ಮಾನವಧರ್ಮ ಶಾಸ್ತ್ರ ಎಂದು ಕರೆಯುತ್ತಿದ್ದರೆಂದು ಕಂಡುಬರುತ್ತದೆ. ಬೈಬಲ್ ಪ್ರವಾದಿ ನೋವಾನನ್ನು ಮಹಾನೋವಾ ಎಂದು ಕರೆಯುವ ವಾಡಿಕೆ ಈ ಹೆಸರೆ ಮನು ಎಂದಾಗಿರಬಹುದು. ಯಾಕೆಂದರೆ ಜಲಪ್ರಳಯದ ನಂತರ ಎಲ್ಲವನ್ನು ತಿಳಿದಾತನು ಆತನೊಬ್ಬನೇ.

ಯಾಗದ ಸಿದ್ಧಿಗೆ ಬ್ರಹ್ಮನು ಬೆಂಕಿಯಿಂದ ಋಗ್ವೇದವನ್ನೂ, ಗಾಳಿಯಿಂದ ಯಜುರ್ವೇದವನ್ನೂ, ಸೂರ್ಯನಿಂದ ಸಾಮುವೇದವನ್ನೂ ಕರೆದನು.

ಬ್ರಹ್ಮನಿಂದ ಉಂಟಾದ ವೇದ ಹೀಗೆ ಎರಡು ಬಗೆಯಾದರೆ ಇನ್ನೊಂದು ಬಗೆ - ತ್ರಿಭ್ಯ ಏವತು ವೇದೇಭ್ಯಃ | ಪಾದಂಪಾದ ಮದೂದುಹತ್ || ತದಿತ್ಯೃಚೋಸ್ಯಾಸ್ಸಾವಿತ್ರ್ಯಾಃ| ಪರಮೇಷ್ಠೀ ಪ್ರಜಾಪತಿ|| (ಮನು. ೨ನೇ ಅಧ್ಯಾಯ, ೭೭ನೇ ಶ್ಲೋಕ)

ತತ್ ಎಂಬ ಮಾತನ್ನು ಮೊದಲಿನಲ್ಲಿ ಹೊಂದಿದ್ದಾಗಿರುವ ಗಾಯತ್ರಿ ಮಂತ್ರದ ಮೂರು ಪಾದಗಳನ್ನು ಬ್ರಹ್ಮನು ಮೂರು ವೇದಗಳಿಂದಲೇ ಕ್ರಮವಾಗಿ ಕರೆದನು. ಇದಕ್ಕೆ ಪೂರಕವಾಗಿ ವೇದಾರ್ಥ ಪ್ರಕಾಶವೆಂಬ ಗ್ರಂಥದಲ್ಲಿ ಹೀಗೆ ತಸ್ಮಾದುಪನೀತೈದೇವತ್ರೈವರ್ಣಿಕೈರ್ವೇದಸ್ಯ ಸಂಬಂಧ. ಅಂದರೆ - ವೇದವು ಜನಿವಾರ ಧರಿಸಿಕೊಂಡಿರುವ ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಎಂಬ ಮೂರು ಜಾತಿಯರಿಗೆ ಹೊರ್ತು ಬೇರೆ ಯಾರಿಗೂ ತಕ್ಕದಲ್ಲ.

ಸ್ತ್ರೀಶೂದ್ರದ್ವಿಜಬಂಧೂ ನಾಂ | ತ್ರಯೀನ ಶ್ರುತಿಗೋಚರಾ || ಋಗ್, ಯಜುರ್, ಸಾಮ ಎಂಬ ಮೂರು ವೇದಗಳನ್ನು ಸ್ತ್ರೀಯೂ ಶೂದ್ರರೂ ಜಾತಿಕೆಟ್ಟ ದ್ವಿಜರೂ ಕಿವಿಯಿಂದ ಕೇಳಬಾರದು.

ಬ್ರಹ್ಮನಿಂದ ಉಂಟಾದ ವೇದದ ಕುರಿತು ತಿಳಿದುದಾಯಿತು. ಇನ್ನು ವಿಷ್ಣುವಿನಿಂದ ವೇದಗಳು ಉಂಟಾದ ಬಗ್ಗೆ ತಿಳಿಯುವ ವಿಷ್ಣುಪುರಾಣವನ್ನು ಆದರಿಸಿ

ವಿಷ್ಣುವು ದ್ವಾಪರಯುಗದಲ್ಲಿ ವೇದವ್ಯಾಸನಾಗಿ ರೂಪವೆತ್ತಿ ಬಂದು ವೇದಗಳನ್ನು ನಾಲ್ಕು ವಿಧವಾಗಿ ವಿಂಗಡಿಸಿದನೆಂದು ಹೇಳುವಂಥಾದ್ದು

ವೇದಮೇಕಂಚತುಭೇದಂ | ಕೃತ್ವಾಶಾಖಾಶತೈರ್ವಿಭುಃ ||
ಕರೋತಿಬಹುಲಂಭೂಯೋ | ವೇದವ್ಯಾಸ ಸ್ವರೂಪ ಭೃತ್ ||

ಅಂದರೆ - ವಿಷ್ಣುವಾದವನು ವೇದವ್ಯಾಸನಾಗಿ ರೂಪವೆತ್ತಿ ಬಂದು ವೇದವನ್ನು ನಾಲ್ಕು ವೇದಗಳಾಗಿ ವಿಂಗಡಿಸಿ. ಅನೇಕ ವಿಭಾಗಗಳಿಂದ ವಿಸ್ತಾರ ಮಾಡಿದನು.

'ಹರಿವಂಶದ ೧೧ನೇ ಅಧ್ಯಾಯ ೫೧೭ನೇ ಶ್ಲೋಕದಲ್ಲಿ
ತತೋಸೃಜತ್ ಮೈತ್ರಿಪದಾಂ | ಗಾಯತ್ರೀಂವೇದ ಮಾತರಂ ||
ಆಕರೋಚ್ಚ್ಯವಚತುರೋ | ವೇದಾನ್ ಗಾಯತ್ರಿ ಸಂಭವಾನ್ |

ಅಂದರೆ - ವೇದಗಳಿಗೆ ತಾಯಾಗಿಯೂ ಮೂರು ಪಾದಗಳುಳ್ಳದ್ದಾಗಿಯೂ ಇರುವ ಗಾಯತ್ರಿ ಮಂತ್ರವನ್ನು ಬ್ರಹ್ಮನು ಉಂಟುಮಾಡಿದನು. ಈ ಗಾಯತ್ರಿಯಿಂದ ನಾಲ್ಕು ವೇದಗಳು ಉಂಟಾದವು.

ಈ ಮೇಲಿನ ಬ್ರಹ್ಮ-ವಿಷ್ಣುಗಳಿಂದ ಉಂಟಾದ ವೇದಗಳಿಗಿಂತ ವಿಭಿನ್ನ ರೂಪದ ವಿಚಾರವು ಭಾಗವತದ ೯ನೇ ಸ್ಕಂಧ ೧೪ನೇ ಅಧ್ಯಾಯದ ೪೮ ಹಾಗೂ ೪೯ನೇ ಶ್ಲೋಕಗಳು ಹೀಗೆ ಹೇಳುತ್ತವೆ.

ಏಕ ಏವಪುರಾವೇದಃ | ಪ್ರಣಾವಸ್ಸರ್ವವಾಙ್ಮಯಃ ||
ಪುರೂರವಸ ಏವಾಸೀ | ತ್ರಯೀತ್ರೇತಾಮುಖೇನೃಪ ||

ಅಂದರೆ ಓ ಅರಸನೇ ಆದಿಯಲ್ಲಿ ಎಲ್ಲ ವಚನ ರೂಪವಾಗಿಯೂ ಓಂಕಾರ ರೂಪವಾಗಿಯೂ ಇರುವ ಒಂದೇ ವೇದವು ಇತ್ತು. ತ್ರೇತಾಯುಗದ ಮೊದಲಿನಲ್ಲಿ ಪುರೂರವರು ಎಂಬ ಅರಸಿನಿಂದ ಮೂರು ವೇದಗಳು ಉಂಟಾದವು. ಈ ಭಾಗವತದ ಪ್ರಕಾರ ಮೊದಲು ವೇದ ಒಂದೇ ಇದ್ದರೆ ಅದು ಯಾವುದು?

ಬ್ರಹ್ಮನು ವಿಷ್ಣುವಿನ ನಾಭಿಯಿಂದ ಕಮಲದಲ್ಲಿ ಜನಿಸಿದನೆಂದು ಕಂಡುಬಂದರೆ, ಬ್ರಹ್ಮೋತ್ತರ ಕಾಂಡದಲ್ಲಿ ಶಿವನು ಬ್ರಹ್ಮನನ್ನುಂಟು ಮಾಡಿ ಆ ಬ್ರಹ್ಮನಿಗೆ ವೇದಗಳನ್ನು ಬೋಧಿಸಿದನೆಂದು ತಿಳಿದುಬರುತ್ತದೆ.

ಮನುಧರ್ಮಶಾಸ್ತ್ರದ ಮೊದಲ ಅಧ್ಯಾಯದಲ್ಲಿ ಬ್ರಹ್ಮನ ಹುಟ್ಟು ಕುರಿತು ಹೀಗೆ ತಿಳಿಯಬಹುದು.

ಶೋಭಿಧ್ಯಾಯ ಶರೀರಾತ್ ಸ್ವಾತ್ | ಸಿಸೃಕ್ಷುರ್ವಿವಿಧಾ : ಪ್ರಜಾ: ||
ಅಪ ಏವಸರ್ವಾದೌ | ತಾಸುಬೀಜ ಮವಾಸೃಜತ್ || ೮
ತದಂಡಮಭವದ್ಧೈಮಂ | ಸಹ ಸ್ರಾಂಶುಸಮ ಪ್ರಭಂ ||
ತಸ್ಮಿನ್ ಜಜ್ಞೇಸ್ವಯಂ ಬ್ರಹ್ಮಾ | ಸರ್ವಲೋಕಪಿತಾಮಹಃ || ೯
ತಸ್ಮಿನ್ನಂಡೇಸಭಗವಾ | ನುಷಿತ್ವಾ ಪರಿವತ್ಸರಂ ||
ಸ್ವಯಮೇವಾತ್ಮನೋಧ್ಯಾನಾತ್ | ತದಂಡಮಕರೋದ್ವಿಧಾ || ೧೨
ತಾಭ್ಯಾಂಸಶಕಲಾಭ್ಯಾಂಚ | ದಿವಂಭೂಮಿಂಚ ನಿರ್ಮಮೇ ||
ಮಧ್ಯೇವ್ಯೋಮದಿಶಶ್ಚಾಷ್ಟಾ | ವಪಾಂಸ್ಥಾನಂಚಶಾಶ್ವತಂ || ೨೩

ಅಂದರೆ

೮ ದೇವರು ದ್ಯಾನ ಮಾಡಿ ಅನೇಕ ವಿಧವಾದ ಪ್ರಜೆಗಳನ್ನು ಸೃಷ್ಟಿಸಬೇಕೆಂದು ಆಶೆಗೊಂಡು, ಮೊದಲು ನೀರನ್ನು ಸೃಷ್ಟಿಸಿದನು. ತರುವಾಯ ಆ ನೀರಿನೊಳಗೆ ಒಂದು ಬೀಜವನ್ನು ನಿರ್ಮಿಸಿದನು.

೯ ಆ ಬೀಜವು ಚಿನ್ನದ ರೂಪವಾಗಿಯೂ ಸೂರ್ಯ ಪ್ರಕಾಶವಾಗಿಯೂ ಇರುವ ಒಂದು ಮೊಟ್ಟೆಯಾಯಿತು. ಆ ಮೊಟ್ಟೆಯಲ್ಲಿ ಆ ದೇವರು ಬ್ರಹ್ಮನಾಗಿ ಹುಟ್ಟಿದನು.

೧೨ ಆ ಭಗವಂತನು ಆ ಮೊಟ್ಟೆಯಲ್ಲಿ ಒಂದು ವರುಷವಾಸ ಮಾಡಿ, ತರುವಾಯ ತನ್ನ ಧ್ಯಾನದಿಂದ ಆ ಮೊಟ್ಟೆಯನ್ನು ಎರಡು ತುಂಡಾಗಿ ಸೀಳಿದನು.

೨೩ ಆ ಎರಡು ಮೊಟ್ಟೆಯ ತುಂಡುಗಳಿಂದ ಆಕಾಶವನ್ನೂ ಭೂಮಿಯನ್ನು ಏರ್ಪಡಿಸಿದನು. ಮಧ್ಯದಲ್ಲಿ ಅಂತರಿಕ್ಷವನ್ನೂ ಎಂಟು ದಿಕ್ಕುಗಳನ್ನು ನೀರಿನ ಸ್ಥಳಗಳನ್ನೂ ಸ್ಥಾಪಿಸಿದನು.

ಹೀಗೆ ದೇವರು ಆ ಮೊಟ್ಟೆಯಲ್ಲಿ ಅವಧರಿಸಿದ್ದುದರಿಂದ ಬ್ರಹ್ಮನನ್ನು ಹೊಂದಿದ ಆ ಮೊಟ್ಟೆ ಮುಂದೆ ಬ್ರಹ್ಮಾಂಡವಾಯಿತು.

ಬ್ರಹ್ಮನಾಗುವ ಮೊದಲು ದೇವರು ಎಂದು ಸಂಬೋಧಿಸಲಾಗಿದೆ. ಹಾಗಾದರೆ, ಆ ದೇವ ಶಿವನೋ? ವಿಷ್ಣುವೋ? ಹೇಗಿದ್ದರು ತ್ರಿಮೂರ್ತಿಗಳ ಮೇಲೆಯೇ ಸನಾಥನ ವೈದಿಕ ಧರ್ಮ ರೂಪುಗೊಂಡಿದೆ. ಇದೇ ವೈಧಿಕ ಧರ್ಮದಲ್ಲಿ ರೂಪ ತಳೆದ ಮಹಾನ್ ಗ್ರಂಥಗಳು ವಿಭಿನ್ನ ರೂಪದಲ್ಲಿ, ಈ ದೇವರುಗಳ ಕುರಿತಿರುವ ಅಭಿಪ್ರಾಯ ಹಾಗೂ ವಿಚಾರಗಳನ್ನು ತಿಳಿಯೋಣ.

"ಸರ್ವವ್ಯಾಪೀಸ ಭಗವಾನ್ ತಸ್ಮಾತ್ಸರ್ವಗತಃ ಶಿವಃ"

ಸ್ಥಾವರ ಜಂಗಮಾತ್ಮಕವಾದ ಸಮಸ್ತ ವಸ್ತುಗಳಲ್ಲಿಯೂ ಶಿವನೇ ವ್ಯಾಪಿಸಿದ್ದಾನಾದ ಕಾರಣ ಆತನೇ ಶ್ರೇಷ್ಠನೆಂಬುವುದು.

ಶಿವನನ್ನು ದೇವರೆಂದು ಒಪ್ಪಿಕೊಳ್ಳದವರು ವಿಷ್ಣುವೇ ಶ್ರೇಷ್ಠವೆಂದು ಹೇಳಲು, ಶಿವನನ್ನು ಅವರು ತೆಗಳಿದ್ದು ಹೀಗೆ

ಭವಿವ್ರತಧಾರಾಯೇಚ ಮೇಚತಾನ್ ತಮನುವ್ರತಾಃ |
ಪಾಷಂಡಿನಸ್ತೇಭವಂತು ಸಚ್ಛಾಸ್ತ್ರಪರಿಷಂಥಿನಃ ||
ಮುಮುಕ್ಷವೊ ಘೊರರೂಪಾನ ಹಿಚ್ಛಾಭೂತಪತೀನಥ |
ನಾರಾಯಣ ಕಲಾಃ ಶಾಂತಾ ಭಜಂತೆಹ್ಯೆನಸೂಯವಃ ||

ಶಿವ ಭಕ್ತಿ ಉಳ್ಳವರೂ ಆ ಶಿವ ಭಕ್ತರನ್ನು ಅನುಸರಿಸುವವರೂ, ಮೋಕ್ಷ ಕೊಡುವ ಶಾಸ್ತ್ರವನ್ನು ಬಿಟ್ಟು, ಭ್ರಷ್ಟರಾಗಿದ್ದಾರೆ. ಭಯಂಕರವಾದ ರುದ್ರರನ್ನು ಸೇವಿಸದೆ, ಕ್ರೋಧವನ್ನು ಬಿಟ್ಟು, ಶಾಂತನಾದ ವಿಷ್ಣುವನ್ನು ಸೇವಿಸುತ್ತಾರೆ.

ಇಂಥ ವಿಷ್ಣುವು ಶ್ರೇಷ್ಠನು ಎಂದು ಹೇಳುವ ಇನ್ನೊಂದು ಶ್ಲೋಕ-
ಯಸ್ತುನಾರಾಯಣಂದೇವಂ ಬ್ರಹ್ಮರುದ್ರಾದಿದೈವತೈಃ |
ಸಮಮನ್ಯೈರ್ನಿರೋಕ್ಷೇತಸ ಪಾಷಂಡೀಭವೇತ್ಸದಾ ||
ಕಿಮತ್ರಬಹುನೊಕ್ತೇನ ಬ್ರಾಹ್ಮಣಾಯೇಷ್ಯ ವೈಷ್ಣವಾಃ |
ಸಸ್ಪೃಷ್ಟವ್ಯಾನವಕ್ತವ್ಯಾ ನದೃಷ್ಟವ್ಯಾಃ ಕದಾಚನ ||

ಯಾವನು ವಿಷ್ಣುವನ್ನು, ಬ್ರಹ್ಮನು ಮೊದಲಾದ ದೇವತೆಗಳಿಗೆ ಸಮಾನ ಮಾಡುತ್ತಾನೋ ಅವನು ಎಂದೆಂದಿಗೂ ಭ್ರಷ್ಟನಾಗಲಿ, ವಿಷ್ಣುಭಕ್ತರಲ್ಲದ ಬ್ರಾಹ್ಮಣರನ್ನು ಮುಟ್ಟಲೂ ಮಾತಾಡಲೂ, ನೋಡಲೂ ಬಾರದು.

ಇಂಥ ಶ್ಲೋಕಗಳನ್ನು ಓದುವವರಿಗೆ ವಿಷ್ಣು ಶ್ರೇಷ್ಠನೆಂದು ಕಂಡುಬಂದರು, ವಿಷ್ಣುವನ್ನು ಅನುಸರಿಸುವವರು ನಿತ್ಯ ನರಕಕ್ಕೆ ಹೋಗುವರು ಎಂದು ಹೇಳುವವರೂ ಇದ್ದರು. ಹೀಗೆ ನೋಡಬಹುದು

> ವಿಷ್ಣುದರ್ಶನಮಾತ್ರೇಣ ಶಿವದ್ರೋಹಃ ಪ್ರಜಾಯತೇ |
> ಶಿವದ್ರೋಹನ್ನ ಸಂದೇಹೊ ನರಕಂಯಾಂತಿದಾರುಣಂ ||
> ತಸ್ಮಾನ್ನ ವಿಷ್ಣುನಾಮಾಪಿ ನವಕ್ತವ್ಯಂಕದಾಚನ |

ವಿಷ್ಣುವನ್ನು ದರ್ಶಿಸುವಂಥಾದ್ದೇ ಶಿವ ದ್ರೋಹವಾಗಿದೆ. ಶಿವ ದ್ರೋಹದಿಂದ ನರಕ ಲಭಿಸುವುದು. ಆದುದರಿಂದ ವಿಷ್ಣುವಿನ ನಾಮವನ್ನೂ ಕೂಡ ಎಂದಿಗೂ ಉಚ್ಚರಿಸಬಾರದು.

ಈ ತ್ರಿಮೂರ್ತಿಗಳ ಕುರಿತು ಆಂತರಿಕ ಭಿನ್ನಾಭಿಪ್ರಾಯ ಒಂದೆಡೆಗೆ ನೋಡಿದರೆ. ಆಕಾರ ಸ್ವರೂಪನಾದವನು ದೇವರಲ್ಲ ಎಂಬ ಅಭಿಪ್ರಾಯವನ್ನು ಹೊಂದಿದವರು, ದೇವರು ನಿರಾಕಾರಿ ಸ್ವರೂಪನೆಂದು ಇದೇ ವೈದಿಕ ಸಂಪ್ರದಾಯದವರು ತಿಳಿದಿರುವುದು ಕಂಡುಬರುವುದು.

> ಅಪಾಣಿ ಪಾದೋಜನ ನೋಗ್ರಹೀತಾಪಶ್ಯತ್ಯಚಕ್ಷುಃ ಸಶ್ರು ಣೋತ್ಯಕರ್ಣ |
> ಸವೇತ್ತಿ ವೇದ್ಯನಂ ಚತಸ್ಯ ವೇತ್ತಾತಮಾಹು ರಗ್ರ್ಯಂ ಪುರುಷಂಮಹಾಂತಂ ||

ಕೈಕಾಲುಗಳಿಲ್ಲದೆ ನಡೆಯುವವನಾಗಿಯೂ, ಗ್ರಹಿಸುವವನಾಗಿಯೂ, ಕಣ್ಣಿಲ್ಲದವನಾಗಿದ್ದರ, ನೋಡುವವನಾಗಿಯೂ, ಕಿವಿ ಇಲ್ಲದವನಾಗಿದ್ದರೂ ಕೇಳುವವನಾಗಿಯೂ, ತಿಳಿಯತಕ್ಕದ್ದನ್ನು ತಿಳಿದುಕೊಳ್ಳುವವನಾಗಿಯೂ, ಒಬ್ಬರಿಂದಲೂ ತಿಳಿಯಲ್ಪಡದವನಾಗಿಯೂ, ಇರುವವನ್ಯಾವನೋ ಆತನನ್ನೇ ದೇವರೆಂದು ಹೇಳುತ್ತಾರೆ. ಹೀಗೆ ವೈದಿಕ ಧರ್ಮವನ್ನು ಹೆಕ್ಕುತ್ತಾ ಹೋದರೆ ಕೊನೆಗೆ ಯಾವ ನೆಲೆಯನ್ನು ಕಾಣದೆ ದಾರಿ ತಪ್ಪಬೇಕಾದ ಸಂದರ್ಭಕಂಡುಬರುವುದು ಒಂದರ್ಥದಲ್ಲಿ ಹುರುಳಿಲ್ಲದ್ದು.

"ಅನೇಕ ವಿದ್ವಾಂಸರು ವೇದ ಮತ್ತು ಉಪನಿಷತ್ತುಗಳಲ್ಲಿ ವ್ಯಕ್ತವಾಗುವ ಉದಾತ್ತ ವಿಚಾರಗಳನ್ನು ಮತ್ತು ಆಧ್ಯಾತ್ಮ ಹಿರಿಮೆಗಳನ್ನು ಅಭಿಮಾನದಿಂದ ಉಲ್ಲೇಖಿಸಿದ್ದಾರೆ. ಆದರೆ ಅನಂತರ ರಚನೆಯಾದ ಸ್ಮೃತಿ ಅಥವಾ ಧರ್ಮಶಾಸ್ತ್ರಗಳು ಪ್ರತಿಪಾದಿಸುವ ಚಾತುರ್ವರ್ಣ್ಯ ಅಥವಾ ಜಾತಿ ವ್ಯವಸ್ಥೆಗಳ ಬಗ್ಗೆ ದಿವ್ಯ ನಿರ್ಲಕ್ಷ್ಯ ತಾಳುತ್ತಾರೆ. ಜಾತಿಗಳಲ್ಲಿ ಕಂಡುಬರುವ ಅಸಮಾನತೆಯನ್ನು ಸಮರ್ಥಿಸಿಕೊಳ್ಳಲು ಪುರೋಹಿತ ವರ್ಗವು ಕರ್ಮಸಿದ್ಧಾಂತವನ್ನು ಕಂಡುಹಿಡಿಯಿತು".[೧] ಮುಂದೆ ಹಿಂದೂ ಧರ್ಮ ಸಿದ್ಧಾಂತವನ್ನೇ ಬೇರೊಂದು ಕಡೆ ತಿರುಚಿದಂತಾಗಿ ಧರ್ಮ ದುರಂತ ಕಂಡು ಅವನತಿ ಎಡೆಗೆ ಸಾಗಿತು.

---

೧. ಧರ್ಮ, ರಹಮತ್ ತರೀಕೆರೆ, ಪು.೩೩೨-೩೩೩

ಹಿಂದೂ ಧರ್ಮ ಅನ್ಯ ಧರ್ಮೀಯರನ್ನು (ತನ್ನ ದೇಶದವರನ್ನು) ಮ್ಲೇಚ್ಛರೆಂದು ತುಚ್ಛೀಕರಿಸುವುದರ ಜೊತೆಗೆ ತನ್ನ ಧರ್ಮದವರಲ್ಲಿಯೇ ತಾರತಮ್ಯವನ್ನು ಕಲ್ಪಿಸಿ ಶೂದ್ರರರನ್ನು ಪಶುಗಳಿಗಿಂತಲೂ ಕಡೆಯಾಗಿ ಕಾಣುತ್ತಾ ಬಂದಿದೆ. ಶೂದ್ರರು ವೇದ-ಮಂತ್ರಗಳ ಪಠಣವನ್ನು ಕೇಳಿದರೆ ಅವರ ಕಿವಿಯಲ್ಲಿ ಸೀಸದ ಎರಕವನ್ನು ಸುರಿಯಬೇಕು. ಅವರು ಮಂತ್ರಗಳನ್ನು ಪಠಿಸಿದರೆ, ಅವರ ನಾಲಗೆಯನ್ನು ಕತ್ತರಿಸಬೇಕು ಎಂದು ಧರ್ಮಗ್ರಂಥಗಳು ಸಾರುತ್ತವೆ.''[೧](ಉದಾ-ಮನುಸ್ಮೃತಿ)

ಹಿಂದೂ ಅಥವಾ ವೈದಿಕ ಧರ್ಮ ಯಾವ ಮೂಲ ಉದ್ದೇಶವನ್ನು ಹೊಂದಿ ಬೆಳೆಯಲು ಪ್ರಾರಂಭಿಸಿತೋ, ಆದರೆ ಕಾಲಕಾಲಕ್ಕೆ ಬದಲಾಗುತ್ತ ತಾನು ಸೃಷ್ಟಿಸಿದ ಅಸ್ಪಶ್ಯತೆ ವಿರುದ್ಧ ಹೋರಾಡುವುದನ್ನು ನೀಗಿಸಿಕೊಳ್ಳಲು ಹವಣಿಸುತ್ತಿರುವುದು ಇಂದಿಗೂ ಸತ್ಯ. ಜೊತೆಗೆ ಉಳಿದ ಧರ್ಮಗಳಿಗೆ ಮಣಿ ಹಾಕಿದ್ದು ಅಷ್ಟೇ ಸತ್ಯ.

''ಭಾರತೀಯ ಸಂಸ್ಕೃತಿಯ ಉತ್ತುಂಗ ಸ್ಥಿತಿಯನ್ನು ತಿಳಿದಿದ್ದ ವೇದಗಳು ಮತ್ತು ಉಪನಿಷತ್ತುಗಳ ಕಾಲದಲ್ಲಿಯೇ ಅನೇಕ ದುಷ್ಟ ಪದ್ಧತಿಗಳು ಸಾಮಾಜಿಕ ಜೀವನದಲ್ಲಿ ಬೇರು ಬಿಟ್ಟಿದ್ದವು. ದಾಸ್ಯ ಪದ್ಧತಿಯು ರೂಢಿಯಲ್ಲಿದ್ದುದಕ್ಕೆ ವೇದ ಮತ್ತು ಉಪನಿಷತ್ತುಗಳಿಂದ ಹೇರಳವಾಗಿ ಉದಾಹರಣೆಗಳನ್ನು ನೀಡಬಹುದು.

ಒಂದು ದೇಶದಲ್ಲಿ ಹುಟ್ಟಿದ ಧಾರ್ಮಿಕ ಅಂಶಗಳು ಅದೇ ದೇಶದಲ್ಲಿ ವಿಭಿನ್ನ ಸ್ವರೂಪ ತಳೆದು ಒಂದನ್ನೊಂದು ಹಳಿಯುತ್ತಿದ್ದರೆ ಆ ದೇಶ ಅಥವಾ ಆ ಜನಾಂಗ ಬೇರೊಂದು ಜನಾಂಗಕ್ಕೂ ಹಾಗೂ ದೇಶಕ್ಕೂ ಏನನ್ನೂ ಕೊಡಲಾರದು ಹೀಗಾಗಿ ವೈದಿಕ ಧರ್ಮ ತನ್ನ ಹುಟ್ಟಿನ ಸ್ಥಾನದಲ್ಲಿಯೇ ಅವನತಿ ಅನುಭವಿಸಲು ಕಾರಣವಾಗಿ ಇತರ ಧಾರ್ಮಿಕ ನೂತನ ವಿಚಾರಗಳಿಗೆ, ಹುಟ್ಟಿಗೆ, ಕಾರಣವಾಗಿದ್ದು, ಅದರ ದುರಂತ. ಅನ್ಯ ದೇಶದ ಮೇಲೆ ಅನ್ಯ ಪ್ರಭಾವ ಬೀರದೆ ನಿಷ್ಕ್ರಿಯೆ ಆದದ್ದು ಇನ್ನೊಂದು ದುರಂತ.

ಈ ವೈದಿಕ ಧರ್ಮದ ವಿಭಿನ್ನತೆಯೇ, ಜೈನ, ಬೌದ್ಧ, ವೀರಶೈವ ಧರ್ಮಗಳ ಬೆಳವಣಿಗೆಗೆ ನಾಂದಿಯಾಯಿತು.

ವೀರಶೈವ ಧರ್ಮ

ಹತ್ತನೆಯ ಶತಮಾನದಲ್ಲಿ ಕನ್ನಡ ಸಾಹಿತ್ಯ? ಸುವರ್ಣಯುಗವನ್ನು ಕಂಡಂತೆ ಮತ್ತಾವ ಶತಮಾನದಲ್ಲೂ ಅಷ್ಟೊಂದು ಉಚ್ಛ್ರಾಯ ಹಂತವನ್ನು ತಲುಪಿಲ್ಲ ಎನ್ನುವುದು ಸರ್ವಸಮ್ಮತವಾದುದು. ಈ ಶತಮಾನದಲ್ಲಿ ಕನ್ನಡ ಪ್ರೌಢವಸ್ಥೆಯನ್ನು ತಲುಪಿ ನಲಿದಾಡಿದ ಸ್ಥಿತಿಯನ್ನು ಕಾಣುತ್ತೇವೆ. ಇಂದಿಗೂ ಪಂಪ, ರನ್ನರನ್ನು ಮೀರುವ ಸಾಹಿತಿಗಳು ಬಂದಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು.

---

೧. ಧರ್ಮ, ರಹಮತ್ ತರೀಕೆರೆ, ಪು.೩೩೫

ಇಷ್ಟೊಂದು ಶ್ರೇಷ್ಠ ಮಟ್ಟದ ಸಾಹಿತ್ಯ ಬಳಕೆಯಲ್ಲಿದ್ದರು ೧೨ನೇ ಶತಮಾನದಲ್ಲಿ ಈ ಸಾಹಿತ್ಯ ಯಾಕೆ ಮುಂದುವರೆಯಲಿಲ್ಲ? ಅನುಕರಣೆಗೆ ಯೋಗ್ಯವಾಗಿ ಕಂಡುಬರದೆ ಇರಲು ಕಾರಣವೇನು? ಎಂಬಿತ್ಯಾದಿ ಪ್ರಶ್ನೆಗಳಿಗೆ ಸುಲಭವಾಗಿ ಉತ್ತರ ದೊರಕುವಂತಿಲ್ಲ. ಆದರೂ ಧರ್ಮದ ದೃಷ್ಟಿಕೋನವೇ ಇಲ್ಲಿ ಪ್ರಮುಖವಾದ ಅಂಶವಾಗಿ ಕಂಡುಬರುತ್ತದೆ.

"ವಚನ ವಾಙ್ಮಯದ ಹುಟ್ಟಿಗೆ ಅಂದಿನ ಕಾಲದ ಸಾಮಾಜಿಕ ಸ್ಥಿತಿಯೂ ಬಹುಮಟ್ಟಿಗೆ ಕಾರಣವಾಗಿದೆ. ಈ ವೇಳೆಗಾಗಲೇ ಕನ್ನಡ ನಾಡಿನಲ್ಲಿ ಜೈನಮತ ಅವನತಿ ಹೊಂದುತ್ತಿತ್ತು. ಅನಾದಿಕಾಲದಿಂದಲೂ ಹರಿದು ಬಂದಿದ್ದ ವೈಧಿಕ ಮತ ತನ್ನ ಸತ್ವವನ್ನು ಕಳೆದುಕೊಂಡ್ಪು ಮೂಢನಂಬಿಕೆ ಅಂಧಶ್ರದ್ಧೆ ಡಾಂಭಿಕತೆ ಜಾತೀಯತೆ ಮಡಿವಂತಿಕೆಗಳಲ್ಲಿ ಮುಳುಗಿ ಹೋಗಿತ್ತು. ಇದನ್ನು ಪ್ರತಿಭಟಿಸಿ ಸರ್ವಸಮಾನತೆ, ಮಾನವ ಪ್ರೇಮ, ದೈವಭಕ್ತಿ ನೈತಿಕ ಜೀವನಗಳಿಗೆ ಸ್ಥಾನಕೊಡುವ ಹೊಸ ಸಮಾಜವೊಂದರ ಸೃಷ್ಟಿ ಅತ್ಯವಶ್ಯಕವಾಗಿತ್ತು. ಇದರ ಪೂರೈಕೆಯೇ ಎಂಬಂತೆ ವೀರಶೈವ ಧರ್ಮ ಕಾಣಿಸಿಕೊಂಡಿತು. ವಚನಕಾರರ ಮೂಲ ಗುರಿ. ದೇವರು ಒಬ್ಬನೇ ಆ ಒಬ್ಬನನ್ನೇ ಹಲವು ನಾಮಗಳಿಂದ ಆರಾಧಿಸಬಹುದೆಂಬ ಹೊಸ ಕಲ್ಪನೆ ಭಾರತದಲ್ಲಿ ಮೊಟ್ಟ ಮೊದಲು ವಚನ ಕಾರರಿಂದ ಹುಟ್ಟಿತು. ಇದು ಹುಟ್ಟಲು ಕಾರಣವೇನು? ಯಾವ ಮೂಲದಿಂದ ಈ ಕಲ್ಪನೆಗೆ ಆಸ್ಪದ ದೊರಕಿತು? ಯಾಕೆಂದರೆ ಬಹುಕೋಟಿ ದೇವರ ದೇಶ ನಮ್ಮದು. ದೇವರು ಒಬ್ಬನೇ ಎನ್ನುವ ಕಲ್ಪನೆಗೆ ನಮ್ಮ ದೇಶದಲ್ಲಿ ಪುರಸ್ಕಾರ ಹಾಗೂ ಹಿನ್ನೆಲೆ ಇಲ್ಲ. ದೇವತೆಗಳು ದೇವರಷ್ಟೇ ಮಹತ್ವ ಪಡೆದ ದೇಶ ನಮ್ಮದು. ಇದನ್ನು ಕೂಲಂಕುಷವಾಗಿ ವಿಚಾರಿಸಿದಲ್ಲಿ ಅನ್ಯ ದೇಶಗಳಲ್ಲಿರುವ ಏಕದೇವೋಪಾಸನೆಯೇ ವಚನಕಾರರಿಗೆ ಚಾಲನೆ ನೀಡಿರಲಿಕ್ಕೆ ಸಾಕು! ಇದು ಪಾಶ್ಚಾತ್ಯರ ಏಕದೇವೋಪಾಸನೆಯೇ ಇರಬಹುದೆನ್ನಲು ಆಧಾರಗಳನ್ನು ನಾವು ಗ್ರಹಿಸಬಹುದು.

ಕ್ರಿ.ಶ.೨೦೦ರಲ್ಲಿದ್ದ ಅಲೆಕ್ಯಾಂಡ್ರ ಪಟ್ಟಣದ ಪಾಂಡೆನೋಸ್(Pantaenus) ಎಂಬುವನು ಕೊಚೀನದ ದಂಡೆಗುಂಟ ವಾಸಿಸುತ್ತಿದ್ದ ಕ್ರೈಸ್ತರ ಬಳಿಯಲ್ಲಿ ಸೆಯ್‌ನೆಟ್ ಸಿದ್ಧ ಮ್ಯಾಥ್ಯೂ ಹಿಬ್ರೂ ಭಾಷೆಯಲ್ಲಿ ಬರೆದ ಸುವಾರ್ತೆಗಳನ್ನು ಕಂಡಿದ್ದನೆಂದು, ಅಲ್ಲಿಯ ಜನರಿಗೆ ಸಿದ್ಧ ಬಾರ್ಥೋಲೋಮ್ಯ ಎಂಬುವನು ಕ್ರೈಸ್ತಮತವನ್ನು ಬೋಧಿಸಿದ್ದನೆಂದು ಹೇಳಿಕೆಯಿದೆ. ಅಲೆಕ್ಸಾಂಡ್ರಿಯ ಪಟ್ಟಣದ ವರ್ತಕನಾದ ಕಾಸ್ಮಸ್ ಇಂಡಿಕೊ ಪಾಸ್ಟರ್(Cosmos Indicoplustes) ಎಂಬುವನು ಹಿಂದೂಸ್ಥಾನ, ಸಿಂಹಲ ದ್ವೀಪಗಳಲ್ಲಿ ಸಂಚರಿಸಿ ಇಲ್ಲಿ ಇದ್ದ ಅನೇಕ ಕ್ರೈಸ್ತರ ದೇವಾಲಯಗಳನ್ನು ಕಂಡಿದ್ದನೆಂದು, ಇಲ್ಲಿಯ ಕ್ರೈಸ್ತರ ಮೇಲಿನ ಅಧಿಕಾರಿ ಪರ್ಶಿಯಾ ದೇಶದಲ್ಲಿದ್ದ ಸೆಲ್ಯೂಸಿಯ(Celucia) ಎಂಬ ಧರ್ಮಾಧಿಕಾರಿ(Arch Bishop) ಕೈಯಲ್ಲಿತ್ತೆಂದು ಅವನು ಕ್ರಿ.೫೪೭ ಮತ್ತು ೫೬೦ರಲ್ಲಿ ಬರೆದ ಗ್ರಂಥಗಳಲ್ಲಿ ಉಲ್ಲೇಖಿಸಿದ್ದಾನೆ.

೧.ಕರ್ನಾಟಕದ ಧರ್ಮಗಳು, ಎಸ್.ಸಿ.ನಂದಿಮಠ, ಪು.೨೦೬

"ಸುಮಾರು ಕ್ರಿ.ಶ.ಆರನೆಯ ಶತಮಾನದಲ್ಲಿ ಕ್ರೈಸ್ತಮತ ಕರ್ನಾಟಕಕ್ಕೆ ಬಂದಿತೆಂಬುದಾಗಿ ಅನೇಕರು ಅಧಿಕೃತವಾಗಿ ಒಪ್ಪಿಕೊಂಡ ವಿಚಾರವಾಗಿದೆ. ಆರನೆಯ ಶತಮಾನದಲ್ಲಿ ಈಗಿನ ಉಡುಪಿಯ ಬಳಿ ಇರುವ ಕಲ್ಯಾಣಪುರದಲ್ಲಿ ಒಬ್ಬ ಧರ್ಮಾಧ್ಯಕ್ಷನಿದ್ದನೆಂದು ಖಚಿತವಾದ ಮೂಲಗಳಿಂದ ತಿಳಿದುಬರುತ್ತದೆ".[೧] ಇದನ್ನು ಶ್ರೀ.ಸಿ.ಹಯವದನರಾವ್ ಮೈಸೂರು ಗೆಜೆಟಿಯರ್‌ನಲ್ಲಿ ಹೀಗೆ ಉಲ್ಲೇಖಿಸುತ್ತಾರೆ.

"The earlist Seltlements of christionity in the s'ate of Karnataka seems to be in kalyanpur near Udupi where a christiahn bishop in the 6th century greatly iufluenced and inspirted the Vedautic reformers with the christian thought".[೨]

ಈ ಮೇಲಿನ ಹೇಳಿಕೆಗೆ ಆಧಾರ ಎಂಬಂತೆ

"There is a tradition that the A post-s-Barthlomen preached at kalyan. in the grtndles'Indiea' we find a quotalion from st Jerome A.D. 410. He says Dametrius Bishop of Alexadria sent pantaenus in about AD 189 to India and Pantaenas found Christians at kalyan and the Gospel accordougs to st mathew in Hebrew with Them."[೩]

"ಏಸು ಕ್ರಿಸ್ತನ ಹನ್ನೆರಡು ಮಂದಿ ಶಿಷ್ಯರಲ್ಲಿ ಒಬ್ಬನಾದ ಶ್ರೀ ತೋಮನು (Thomas). ಆಫ್ರಿಕಾದ ವಾಯುವ್ಯಕ್ಕೆ ಅರಬ್ಬಿಸಮುದ್ರದಲ್ಲಿರುವ ಸೊಕೊತ್ರಾ ದ್ವೀಪವನ್ನು ಸಂದರ್ಶಿಸಿದ ತರುವಾಯ, ಕ್ರಿ.ಶ.೫೨ರ ಸುಮಾರಿಗೆ ಕೋಚೀನದ ಉತ್ತರಕ್ಕೆ ಪೆರಿಯಾರ್ ಸಮುದ್ರದ ಕೊಲ್ಲಿಯಲ್ಲಿರುವ ಕ್ರ್ಯಾಂಗನೂರು (ಕೊಡಂಗಲ್ಲೂರು) ಎಂಬಲ್ಲಿ ಬಂದಿಳಿದನು. ಮೊದಲು ಅವನು ಅಲ್ಲಿ ವಸಾಹತು ಮಾಡಿಕೊಂಡಿದ್ದ ಯಹೂದಿಯರನ್ನು ಸಂಧಿಸಿ ಅವರ ಸಭಾಮಂದಿರಗಳಲ್ಲಿ ಸುವಾರ್ತೆಯನ್ನು ಸಾರಲಾರಂಭಿಸಿದನು... ಕೆಲವು ಜನರು ಸುವಾರ್ತೆಯನ್ನು ಸ್ವೀಕರಿಸಿ ಕ್ರೈಸ್ತ ಸಭೆಗೆ ಸೇರಿಕೊಂಡರು. ಮುಂದೆ ಅವರು ತೆಂಕಣ ಕರಾವಳಿಗುಂಟ ಪ್ರವಾಸ ಕೈಕೊಂಡು ಆ ಭಾಗದಲ್ಲಿ ಏಳು ಕಡೆಗಳಲ್ಲಿ ಸಭೆಯನ್ನು ಸ್ಥಾಪಿಸಿದನು. ಆ ಏಳು ಯಾವುವೆಂದರೆ (ಕೊಡಂಗಲ್ಲೂರಿನ ಹತ್ತಿರವಿರುವ) ಮಲಿಯಂಕಾರಾ, ಪಲಯೂರು, ಪರೂರು, ಗೋರಮಂಗಲಂ, ನಿರಾನಂ, ಚಾಯಲ್ ಮತ್ತು ಕ್ವಿಲನ್ ಎಂಬವುಗಳೇ. ಇವುಗಳಲ್ಲಿ ನಾಲ್ಕು ಊರುಗಳಲ್ಲಿ ಈಗಲೂ ಸಿರಿಯನ್ ಸಭೆಗಳು ಇವೆ... ಮುಂದೆ ಅವನು ನಾಲ್ಕು ಬ್ರಾಹ್ಮಣ ಮನೆತನಗಳಿಂದ ಬಂದವರಲ್ಲಿ ಕೆಲವರನ್ನು ಆಯ್ದುಕೊಂಡು ಅವರಿಗೆ ಪ್ರೆಸ್ಬಿಟರರ ದೀಕ್ಷೆ*ಯನ್ನು

೧. ಕ.ಕ್ರೈ ಇತಿಹಾಸ ಬಿ.ಎಸ್.ತಲ್ವಾಡಿ, ಪು.೩೫

೨. Gazetter, Ed.C.Hayavadana Rao, 1927, Pp.341

೩. ALP D'Saza, History of the Catholic Community of South Canara, 1983, P.19-20

*ಸಂಪೂರ್ಣ ಗುರುದೀಕ್ಷೆ

ಕೊಟ್ಟನು. ಇಷ್ಟಾದ ಮೇಲೆ ಅವನು ಅಲ್ಲಿಂದ ಹೊರಟು ಪೂರ್ವ ಸಮುದ್ರದ ಕರಾವಳಿಯ ಕಡೆಗೆ ಹೋಗಿ ಅಲ್ಲಿಂದ ಮಲಕ್ಕಾಕ್ಕೂ ಮುಂದೆ ಚೀನಾಕ್ಕೂ ಹೋಗಿ ಅಲ್ಲಿಂದ ಹಿಂತಿರುಗಿ ಈಗ ಮದ್ರಾಸಿನ ಒಂದು ಭಾಗವಾಗಿರುವ ಮೈಲಾಪುರಕ್ಕೆ ಬಂದನು. ಈತನ ವಿರುದ್ಧವಾಗಿ ಬ್ರಾಹ್ಮಣರು ದಂಗೆ ಎದ್ದರು. ಆ ಗೊಂದಲದಲ್ಲಿ ಯಾರೋ ಒಬ್ಬನು ಅವನನ್ನು ಭಲ್ಲೆಯಿಂದ ಇರಿದುಕೊಂದನು. ಹೀಗೆ ತೋಮನು ಕ್ರಿ.ಶ.೭೨ರಲ್ಲಿ ರಕ್ತ ಸಾಕ್ಷಿಯಾದನು''.[೧] ''ಅಂದರೆ ಮದರಾಸಿಗೂ ಕರ್ನಾಟಕಕ್ಕೂ ಒಂದನೇ ಶತಮಾನ ದಿಂದಲೂ ಸಂಪರ್ಕವೇರ್ಪಟ್ಟಿತ್ತು. ಅದ್ದರಿಂದ ಸಂತ ಥೋಮಸ್ ಮದ್ರಾಸಿನ ಬಳಿಯ ಮೈಲಾಪುರದಲ್ಲಿ ಸಮಾಧಿಯಾಗಿದ್ದಾನೆ ಎಂದರೆ, ಅವನು ಕಂಡಿತ ಕನ್ನಡನಾಡಿನ ಗಡಿಗಳನ್ನಾದರೂ ತುಳಿದಿರಬೇಕು. ಕನ್ನಡಿಗರು ಕೂಡ ಬೇರೆ ಬೇರೆ ಪ್ರಾಂತಗಳಲ್ಲಿ ಹರಿದು ಹಂಚಿ ಹೋಗಿದ್ದರು. ಹೀಗಾಗಿ ಸಂತ ಥೋಮಸ್‌ನ ಕಾಲದಲ್ಲಿಯೇ ಕನ್ನಡಿಗರಿಗೆ ಕ್ರೈಸ್ತಮತದ ಪರಿಚಯವಾಗಿರಲೇ ಬೇಕೆಂಬುದರಲ್ಲಿ ಸಂಶಯವಿಲ್ಲ''.[೨]

ಕ್ರೈಸ್ತಮತದ ಮೂಲ ದೇವಪುರುಷ ಯೇಸುಕ್ರೈಸ್ತನ ನಡೆನುಡಿಗಳನ್ನು ವೀರಶೈವ ಧರ್ಮದ ತಳಹದಿಯ ಮೂಲರಾದ ಬಸವಾದಿ ಶಿವಶರಣರ ಆಚಾರ-ವಿಚಾರಗಳನ್ನು ಪ್ರಮುಖ ಆಧಾರವಾಗಿರಿಸಿಕೊಂಡು ರೆ.ಉತ್ತಂಗಿಯವರು ''ಲಿಂಗಾಯತ ಧರ್ಮ ಹಾಗೂ ಕ್ರೈಸ್ತಧರ್ಮ'' ಎಂಬ ಲೇಖನ ಬರೆದಿರುವರು. ಒಟ್ಟಾರೆ ಹೇಳಿದರೆ ಲಿಂಗಾಯತ ಧರ್ಮಕ್ಕೂ ಕ್ರೈಸ್ತ ವಿಚಾರಗಳಿಗೂ ಕೆಲವು ವಿಷಯಗಳಲ್ಲಿ ಬಹು ಸಮೀಪದ ಸಾಮ್ಯವು ತೋರಿಬರುವುದು ಮಾತ್ರ ಸತ್ಯವಾದುದು.

ಬಿಶಪ್.ಎನ್.ಸಿ. ಸಾರ್ಜೇಂಟ್ ಎಂಬುವರು ನೆಸ್ಟೋರಿಯನ್ ಕ್ರೈಸ್ತರನ್ನು ಕುರಿತು ಮಾತನಾಡುತ್ತಾ, ವೀರಶೈವ ಧರ್ಮೀಯರಲ್ಲಿ ಕ್ರೈಸ್ತರ ಬೋಧನೆಯ ಸಾರಸರ್ವಸ್ವವು ಕಂಡುಬರುತ್ತದೆ ಎಂದೂ, ವಿಶೇಷವಾದ ಪರಿಶ್ರಮ ಹಾಗೂ ವಿದ್ವತ್ಪೂರ್ಣ ಅಧ್ಯಯನದಿಂದ ಬಹಳ ಮುಖ್ಯ ಹಾಗೂ ಕುತೂಹಲ ಪೇರಿತವಾದ ಈ ವಿಷಯವನ್ನು ತಿಳಿದುಕೊಳ್ಳಬೇಕಾಗುತ್ತದೆ ಎಂದಿದ್ದರು. ಡಾ.ಫ.ಗು.ಹಳಕಟ್ಟಿ ಅವರು ಕ್ರೈಸ್ತಧರ್ಮಕ್ಕೆ ಸಂಬಂಧಿಸಿದ ೨೫೦ ವಚನಗಳನ್ನು ಗುರುತಿಸಿದ್ದಾರೆ. ಉದಾಹರಣೆಗೆ ಕೋಡೆಕಲ್ಲು ಬಸವಣ್ಣನವರ ಭಕ್ತರ ಹಿನ್ನೆಲೆಯಿಂದ ಬಾಯಿಂದ ಬಾಯಿಗೆ ಬೆಳೆದು ಬಂದ ಕ್ರಿಸ್ತನ ಕುರಿತು, ಆತನ ಅಸ್ತಿತ್ವವನ್ನು ಪ್ರಚುರಪಡಿಸುವ ವಚನಗಳು ಹೀಗಿವೆ.

> ''ಪಡುವಣ ದೇಶದಿಂದ ಒಡೆಯ ತಾ ಬರುತ್ತಾನೆ
> ಬಡಗಿಯ ಹುಡುಗಿಯಲ್ಲಿ ಜನಿಸಿ ಲೋಕದ
> ಕಡದು ಒಳದುಗಳೆಲ್ಲಾ ಸಮ ಮಾಡುತ ಮರ್ತ್ಯದ
> ಹುಡುಗ ಮಾನವರೇನು ಬಲ್ಲರು'' ಬಸವಣ್ಣ

೧. ಭಾ.ಕ್ರೈ.ಸ.ಚರಿತ್ರೆ ಮಾರಾ, ಪು.೫

೨. ಕ.ಕ್ರೈ.ಇತಿಹಾಸ ಬಿ.ಎಸ್.ತಲ್ವಾಡಿ, ಪು.೪೩

ಲೋಕಕ್ಕೆ ಒಡೆಯನಾದ ಕ್ರಿಸ್ತನು ಬಡಿಗರ ಮನೆಯ ಕನ್ಯೆಯಲ್ಲಿ ಜನಿಸಿ ಲೋಕದಲ್ಲಿ ಸಮಸ್ಯೆಗಳಿಗೆ ಪರಿಹಾರಕನಾಗಿ ಪರಲೋಕದಿಂದ ಜನಿಸಿ ಬರುವನೆಂಬ ಬಗ್ಗೆ ಈ ಮೇಲಿನ ವಚನದಿಂದ ತಿಳಿದುಬರುವುದು.

> "ಹರನೇ ಬಡಗಿಯವನಾಗಿ ನರರ ರೂಪವನು ತಾಳಿ
> ಸರ್ವಕಾರ್ಯಕ್ಕೆ ಉಪದೇಶ ಕೊಟ್ಟಂಥ
> ಗುರುವಿನ ಮುಂದೆ ಗುರುವಿಲ್ಲ"

ದೇವರೇ ನರವತಾರವೆತ್ತಿ ಈ ಲೋಕಕ್ಕೆ ಬಂದನೆಂಬ ಬೈಬಲ್ ಉಕ್ತಿಯಂತೇ ದೇವರು ಬಡಗಿಯವನಾಗಿ ಜನಿಸಿ ಬಂದು ಜಗತ್ತಿನ ಪ್ರತಿಯೊಂದಕ್ಕೂ ಉಪದೇಶ ನೀಡಿ ತನ್ನೆದುರು ಇನ್ನಾರೂ ಗುರುವಿಲ್ಲ ಎಂಬ ಕ್ರಿಸ್ತನ ಸಾರುಪ್ಯವನ್ನು ಈ ವಚನ ವಿಷಧಿಕರಿಸುತ್ತದೆ.

ಈ ಮೇಲಿನ ಆಧಾರಾಂಶಗಳನ್ನು ಗಮನಿಸಿ ಭಾರತದಲ್ಲಿ ಹಾಗೂ ಕರ್ನಾಟಕದಲ್ಲಿ ಕ್ರೈಸ್ತಧರ್ಮ ಕಾಲಿರಿಸಿದಾಗಿನಿಂದ ಧಾರ್ಮಿಕ ಸಾಹಿತ್ಯದಲ್ಲಿ ಕಂಡುಬಂದಂತ ವಿಶೇಷ ಬದಲಾವಣೆಯ ಘಟ್ಟಗಳನ್ನು ಗುರುತಿಸಬಹುದು.

ಏಕದೇವೋಪಾಸನೆಯನ್ನು ಪ್ರತಿಪಾಧಿಸಬೇಕೆಂಬ ಭರದಲ್ಲಿ ತಮ್ಮ ಪೂರ್ವದಲ್ಲಿದ್ದ ಧಾರ್ಮಿಕ ನಂಬಿಕೆಗಳನ್ನು ಹಳಿಯಬೇಕಾದ ಪ್ರಸಂಗ ವಚನಕಾರರ ಮುಂದೆ ಕಂಡುಬಂದುದರಿಂದ, ವೈದಿಕ ಧರ್ಮ ಹಾಗೂ ಶಾಸ್ತ್ರ ಪುರಾಣಗಳನ್ನು ವರೆಗೆ ಹಚ್ಚಲು ತೊಡಗಿರುವುದು ಕಂಡುಬರುತ್ತದೆ. ಅದನ್ನು ವಚನಗಳ ಮೂಲಕ ಕಾಣಬಹುದು.

ಅಲ್ಲಮಪ್ರಭು

ವೇದಗಳೆಂಬವು ಬ್ರಹ್ಮನ ಬೂತಾಟ
ಶಾಸ್ತ್ರಂಗಳೆಂಬವು ಸರಸ್ವತಿಯ ಗೊದ್ದಾಟ
ಆಗಮಗಳೆಂಬವು ಪೂರ್ವದವರ ಗೊದ್ದಾಟ
ಇಂತು ಇವನು ಅರಿಯದವರ
ನೀತಿಗಳಿದು ನಿಜದಲ್ಲಿ ನಿಂದಿಪ್ಪಾತನೇ
ಗುಹೇಶ್ವರನಲ್ಲಿ ಅಚ್ಚಲಿಂಗೈಕ್ಯನು

ಬಸವಣ್ಣ

ಆದಿ ಪುರಾಣ ಅಸುರರಿಗೆ ಮಾರಿ
ವೇದ ಪುರಾಣ ಹೋತಿಂಗೆ ಮಾರಿ
ರಾಮ ಪುರಾಣ ರಕ್ಕಸರಿಗೆ ಮಾರಿ
ಭಾರತಪುರಾಣ ಗೋತ್ರಕ್ಕೆ ಮಾರಿ

ಅಕ್ಕಮಹಾದೇವಿ

ವೇದ ಶಾಸ್ತ್ರಾಗಮ ಪುರಾಣಂಗಳೆಲ್ಲವು
ಕೊಟ್ಟಣವ ಕುಟ್ಟಿದ ನುಚ್ಚು ತೌಡು
ಕಾಣಿಭೋರವನು ಕುಟ್ಟಲೇಕೆ (ಕುಸುಕಲೇಕೆ)
ಅತ್ತಿತ್ತ ಹರಿವ ಮನದ

ಎಲ್ಲ ಪುರಾಣ ಕರ್ಮಕ್ಕೆ ಮೊದಲು ಶಿವನರಿದಡೆ

ನಮ್ಮ ಪುರಾಣಕ್ಕೆ ಪ್ರೀತಿಯಿಲ್ಲ ಬಟ್ಟಬಯಲು ಚನ್ನಮಲ್ಲಿಕಾರ್ಜುನ

ಕೂಡ ಸಂಗಮ ದೇವ

ಮಡಿವಾಳ ಮಾಚಿದೇವ

ವೇದ ವಿಪ್ರರ ಬೋಧೆ

ಶಾಸ್ತ್ರ ಸಂತೆಯ ಮಾತು

ಪುರಾಣ ಪುಂಡರ ಗೋಷ್ಠಿ

ಆಗಮ ಅನ್ನತದ ನುಡಿ

ತರ್ಕ ವ್ಯಾಕರಣ ಕನಿಷ್ಠವಾದ

ಇಂತವರ ಅಂಗದ ಮೇಲೆ

ಲಿಂಗವಿಲ್ಲದ ಭಾಷೆ

ಇದು ಕಾರಣ ತನ್ನೊಳಗನ್ನರಿದ

ಅನುಭವದಿಂದ ಘನವಿಲ್ಲೆಂದ

ನಮ್ಮ ಕಲಿದೇವರ ದೇವ

೧. ಬೆನಕನು (ಗಣಪತಿ) ಹರನ ಮಗನೆಂಬ ಪಾತಕರು ನೀವು
ಕೇಳಿರೋ ! ಪಾರ್ವತಿಯು ಹರನ ಸತಿ ಎಂಬ ಶಿವದ್ರೋಹಿಗಳು
ಕೇಳಿರೋ ! ಲಿಂಗದ್ರೋಹಿಗಳು ಕೇಳಿರೋ ! ಅಜಾತ ಪವಿತ್ರ
ನೊಬ್ಬನೇ ಕೂಡಲ ಸಂಗಮದೇವಾ

೨. ವೀರಭದ್ರ ಬಸವಣ್ಣ, ಮಲ್ಲಿಕಾರ್ಜುನನೆಂಬ ದೈವಂಗಳಿಗೆ
ನಮ್ಮ ಕುಲದೈವಂಗಳೆಂಬ ಹೇಳುವವರಿಗೆ ಗುರುವಿಲ್ಲ ಲಿಂಗವಿಲ್ಲ
ಜಂಗಮವಿಲ್ಲ ಪಾದೋದಕವಿಲ್ಲ ಪ್ರಸಾದವಿಲ್ಲ
ಕೂಡಲ ಚನ್ನಸಂಗಮದೇವಾ

ಹತ್ತನೇ ಶತಮಾನದ ಕನ್ನಡ ಸಾಹಿತ್ಯ ಸುವರ್ಣ ಯುಗವನ್ನು ಕಂಡಿದ್ದರೂ ವಚನಕಾರರ ತತ್ವದೃಷ್ಟಿಗೆ ನಿಲುಕಿ ಹೊಸ ಪ್ರವಾಹಕ್ಕೆ ಬಗ್ಗಲೇ ಬೇಕಾಯಿತು. ಹೊಸ ಓಗಕ್ಕೆ ಜಗ್ಗಿ ಒಂದು ಹಂತಕ್ಕೆ ತಲುಪಲೇ ಬೇಕಾಯಿತೇನೋ.

ಅಂದು ಹೊಸ ದೃಷ್ಟಿ ಬೀರಿದ ವಚನ ಸಾಹಿತ್ಯ ಇಂದಿಗೂ ತನ್ನದಾದ ವ್ಯಕ್ತಿತ್ವವನ್ನು ತಳೆದುಕೊಂಡು ಬಂದಿದೆಯೇ? ಹನ್ನೆರಡನೆ ಶತಮಾನದ ಅಂದಿನ ನವ್ಯ ವಿಚಾರಗಳಿಗೆ ಇಂದು ಆಚರಸದೆ ಬೆಲೆ ನೀಡದೆ ಇರುವುದು ಯಾಕೆ? ಇವರುಗಳು ಅಂದು ಶ್ರೇಷ್ಠ ಧಾರ್ಮಿಕ ಜ್ಞಾನಿಗಳಾದರೆ ಇಂದಿನವರು

ಇವುಗಳ ಆಚರಣೆಗೆ ಬದ್ಧರಾಗದಿರಲು ಏನು ಕಾರಣ ? ಅಥವಾ ಇವೆರಡನ್ನೂ ಅರಿತ ಇಂದಿನ ಜನರಿಗೆ ಯಾವುದು ಸರಿ ಎಂಬ ತೀರ್ಮಾನಕ್ಕೆ ಬಂದಿಲ್ಲವೇ? ಅಥವಾ ಸತ್ಯವನ್ನು ಕಂಡು, ಓದಿ, ತಿಳಿದು ಅದನ್ನು ಅನುಸರಿಸದೆ ಇರುವುದು ಭಾರತೀಯ ಸಂಸ್ಕೃತಿಯ ಒಂದು ಜಾಡ್ಯ, ಮೌಢ್ಯ ಲಕ್ಷಣವೇ?

ಒಂದು ಕಾಲದಲ್ಲಿ ನಂಬಿದ ಧಾರ್ಮಿಕ ನಂಬಿಕೆಗಳು ಮತ್ತೊಂದು ಕಾಲಕ್ಕೆ ಅಮೌಲ್ಯವಾದರೆ, ಅಂಥವುಗಳ ಉಳಿವಿಗೆ ಶ್ರಮಿಸುವುದು ನಿರರ್ಥಕ. ಒಂದು ದೇಶದ ಜನತೆ ಆ ದೇಶದ ಸಂಸ್ಕೃತಿಯ ಸಂಕೇತವಾಗಬೇಕಾದರೆ ನಿಂತ ನಿರಾಗಿರಬಾರದು. ಕಾರಣ ಸಂಸ್ಕೃತಿ ಕೂಡ ಚಲಿಸುವಂತಹುದು. ಕಾಲಾಯ ತಸ್ಮಯೇ ನಮಃ. ಭಾರತದಲ್ಲಿ ಹಿಂದುಗಳೆನಿಸಿಕೊಂಡವರು ಇಂದು ಅನೇಕ ಜಾತಿ-ಧರ್ಮಗಳ ಪರಿಕಲ್ಪನೆಯಲ್ಲಿ ತಮ್ಮನ್ನು ಬದಲಾಯಿಸಿಕೊಳ್ಳುವುದನ್ನು ವಿಚಾರಿಸಿದರೆ, ಇಷ್ಟೊಂದು ಬದಲಾವಣೆಗೆ ಅಸ್ಥಿರತೆಯೇ (ಧಾರ್ಮಿಕ ದೃಷ್ಟಿಯಲ್ಲಿ) ಕಾರಣ. ಒಂದು ಕಾಲಕ್ಕೆ ಸತ್ಯವೆಂದು ನಂಬಿದ್ದು, ಇನ್ನೊಂದು ಕಾಲಕ್ಕೆ ಆ ಜನಾಂಗವೇ ಟೀಕೆ ಮಾಡುವುದು. ಇದು ಧಾರ್ಮಿಕ ಅಸ್ಥಿರತೆಗೆ ಕಾರಣವೆನ್ನುವಲ್ಲಿ ಸತ್ಯಾಂಶ ಇಲ್ಲದಿಲ್ಲ. ಹಿಂದೂ ಎಂದು ಕರೆಸಿಕೊಂಡಾಗಲೇ ಇದು ಧರ್ಮವನ್ನು ಜಾತಿಯನ್ನು ಪ್ರತಿಪಾಧಿಸುವ ಶಬ್ದವಲ್ಲ ಕೇವಲ, ಸ್ಥಳದ ಹೆಸರೆಂಬುದನ್ನು ನಾವಿಂದು ಮರೆತು ಈ ಹೆಸರಿನಿಂದ ಮತೀಯ ಭಾವನೆಗಳನ್ನು ಕೆರಳಿಸಿ ಮಾನವೀಯತೆಗೆ ಧಕ್ಕೆ ತರುತ್ತಿರುವುದಂತು ಸತ್ಯ.

ಹಿಂದೂಸ್ಥಾನದಲ್ಲಿ ಹುಟ್ಟಿದ ಮನುಷ್ಯ ಆತನ ಸಾಹಿತ್ಯ, ನಂಬಿಕೆ, ಆಚಾರ, ಸಂಪ್ರದಾಯಗಳು ಸ್ಥಿರವಾದ ಮೂಲ ತಳಹದಿಯನ್ನು ಹೊಂದದೆ ಇರುವುದರಿಂದಲೇ ಏನೋ, ಭಾರತದಲ್ಲಿ ಜೈನ, ಬೌದ್ಧ ಧರ್ಮಗಳಿಗೆ ಹುಟ್ಟಿಗೆ ಸ್ಥಾನದೊರೆಯಿತು. ಇದರಲ್ಲಿಯೂ ತೃಪ್ತಿ ಕಾಣದ ಜನ ಅನೇಕ ಶಾಖೆಗಳಿಗೆ ಕಾರಣರಾದರು. ವೀರಶೈವ ತನ್ನೆಲ್ಲಾ ಪೂರ್ವದ ಸನಾತನತೆಯನ್ನು ಟೀಕಿಸಿತು. ದಾಸರು ಪುನಶ್ಚೇತನಗೊಳಿಸಲು ಪ್ರಯತ್ನಿಸಿದರು. ದ್ವೈತ-ಅದ್ವೈತ-ವಿಶಿಷ್ಟಾದ್ವೈಯಿತಗಳು ಸಂಪೂರ್ಣವಾಗಿ ಪ್ರತಿಸ್ಪಂದಿಸದೇ ಪರಸ್ಪರ ಟೀಕೆಗೆ ಒಳಗಾದವು. ಈ ಎಲ್ಲ ಹಿನ್ನೆಲೆಯನ್ನು ಇಂದಿನವರೆಗೂ ಗ್ರಹಿಸುವುದಾದರೆ, ದೇವರನ್ನು ಅರಿಯುವಲ್ಲಿ ಅಸ್ಥಿರತೆ ಕಂಡುಬರುವುದು.

ವಚನಕಾರರೆಲ್ಲರು ತಮ್ಮ ಧರ್ಮತತ್ವಗಳನ್ನು ಧರ್ಮದ ನಿಲುವನ್ನು ಜನರಿಗೆ ತಿಳಿಸುವಲ್ಲಿ, ಪೂರ್ವದಲ್ಲಿದ್ದ ಧಾರ್ಮಿಕ (ಹಿಂದೂ) ನಂಬಿಕೆಗಳನ್ನು ಟೀಕಿಸಬೇಕಾದದ್ದು ಸಹಜ ಹಾಗೂ ಅದು ಅವರ ಅನಿವಾರ್ಯತೆಯೂ ಹೌದು. ಹೀಗಾಗಿ ವೇದಶಾಸ್ತ್ರ, ಪುರಾಣ, ರಾಮಾಯಣಗಳನ್ನು ಅವರು ಹಳಿದರು. ವೀರ ಶೈವಧರ್ಮವನ್ನು ದೃಷ್ಟಿಸಿದರೆ ಮುಂದೆ ಬಂದಂತ ಯಾವುದೇ ಭಾರತೀಯ ಹಾಗೂ ಪಾಶ್ಚಾತ್ಯ ಧಾರ್ಮಿಕ ದೃಷ್ಟಿಕೋನಗಳು ಇತರ ಧರ್ಮತತ್ವಗಳನ್ನು, ಧರ್ಮಗಳನ್ನು ಇಷ್ಟು ಹಳಿದಂತೆ ತೋರಿಬರುವುದಿಲ್ಲ.

---

೧. ಹೊ.ಅ. ಶ್ರೀ ಹಾವನೂರ, ಪು.೪೪೨

"ಸ್ವಮತ ಪ್ರಚಾರ ಕಾರ್ಯದಲ್ಲಿ ಅನ್ಯಮತ ಪಂಥದ ವಿಚಾರಗಳನ್ನು ಟೀಕಿಸುವುದು ಅಗತ್ಯವಾಗಿ ಮಾಡಬೇಕಾದ ಕಾರ್ಯವೆಂದು ಅಂದಿನ ಮಿಶನರಿಗಳು ಭಾವಿಸಿದ್ದರು. ಹಿಂದೂ ಧರ್ಮದ ವಿರುದ್ಧ ತಮ್ಮ ಲೇಖನಿಯನ್ನೆತ್ತುವುದರಲ್ಲಿ ಅವರು ವಿಶೇಷ ಪರಿಶ್ರಮವನ್ನು ತೋರಿದ್ದಾರೆ ಎಂದು ಶ್ರೀ. ಹಾವನೂರವರು ತಮ್ಮ ಹೊಸಗನ್ನಡ ಅರುಣೋದಯ ಪ್ರಬಂಧದಲ್ಲಿ ಬರೆಯುತ್ತಾ, ಹಿಂದೂ ಧರ್ಮದ ಟೀಕೆ ಪ್ರತಿಟೀಕೆ ಎನ್ನುವ ಅಧ್ಯಾಯವನ್ನೇ ಕೊಟ್ಟಿರುವರು."[೧]

ಭಾರತದಲ್ಲಿ ಬ್ರಿಟೀಷ್ ಆಗಮನದ ನಂತರ ಹಾಗೂ ಕ್ರೈಸ್ತ ಧರ್ಮ ಪ್ರಚಾರಕರಾಗಿ ಮಿಶನರಿಗಳು ಬಂದನಂತರ, ಅವರಿಗೂ ತಮ್ಮ ಧರ್ಮ ತತ್ವಗಳನ್ನು ಇಲ್ಲಿನ ಜನರಿಗೆ ಬಿತ್ತರಿಸಬೇಕಾದುದು ತುಂಬಾ ಅವಶ್ಯಕವಾಗಿತ್ತು. ಈ ಕಾರಣಕ್ಕಾಗಿಯೇ ಅವರು ಭಾರತಕ್ಕೆ ಬಂದವರಾಗಿದ್ದರು. ಆಗ ಅವರು ಕನ್ನಡ ಹಾಗೂ ಧಾರ್ಮಿಕ ಸಾಹಿತ್ಯಕ್ಕೆ ಹೆಚ್ಚು ಮಹತ್ವ ಕೊಟ್ಟಂತಿದೆ. ಇಲ್ಲಿ ವೇದ-ಪುರಾಣ-ಶಾಸ್ತ್ರಗಳನ್ನು ಹಳಿದ ವಚನ ಸಾಹಿತ್ಯ ಇಂಗ್ಲೀಷರನ್ನು ಹೆಚ್ಚು ಆಕರ್ಶಿಸಿದಂತಿದೆ. ಇದನ್ನು ಅಂದು ಮಿಶನರಿಗಳು ತಮ್ಮ ಧರ್ಮ ಪ್ರಚಾರವಾಗಲು ಅಸ್ತ್ರವೆಂಬಂತೆ ಬಳಸಿದರು.

ಕ್ರೈಸ್ತ ಮಿಶನರಿಗಳು ಹಿಂದೂ ಶಾಸ್ತ್ರವನ್ನು ನಿಂದಿಸಿದರೆ ಮಾತ್ರ ಅದು ಹಿಂದೂ ಧರ್ಮದ ಟೀಕೆಯಾಗುತ್ತೆ, ಅದನ್ನೇ ವೀರಶೈವ ವಚನಕಾರರು ಹಳಿದರೆ ಟೀಕೆ ಆಗುವುದಿಲ್ಲವೇ ಎಂದು ಕೇಳಬೇಕಾದ ಪ್ರಸಂಗ ಉಂಟಾಗಬಹುದು. ಮಿಶನರಿಗಳು ಹಿಂದೂ ಧರ್ಮವನ್ನು ಟೀಕಿಸಿದರೆಂದು ಎಲ್ಲ ಚರಿತ್ರೆಕಾರರ ಆರೋಪವಾಗಿದೆ. ಎಂಬುದನ್ನು ಗಮನಿಸಬಹುದು.

ಹಾಗಾದರೆ ವಚನಕಾರರು ಹಿಂದಿನ ಎಲ್ಲ ಪ್ರಮುಖ ಧಾರ್ಮಿಕ ಕೃತಿಗಳನ್ನು ಹಳಿದಿದ್ದು ಅದು ವೀರಶೈವ ಧರ್ಮ ಪ್ರಚಾರಾರ್ಥವಾಗಿಯೇ ಅಲ್ಲವೇ? ಒಂದು ಧರ್ಮವನ್ನು ಸ್ಥಾಪಿಸಬೇಕಾದರೆ ಆ ಧರ್ಮಕ್ಕೆ ಅನ್ವಯಿಸದ ಹಾಗೂ ತತ್ವಕ್ಕೆ ವಿರುದ್ಧ ಕಂಡುಬಂದ ಅಂಶಗಳನ್ನು ಅವರು ತೆಗಳಲೇ ಬೇಕಾಗುತ್ತದೆ. ಇದನ್ನೇ ಕ್ರೈಸ್ತ ಮಿಶನರಿಗಳು ಕೈಕೊಂಡು ಬಂದರು. ನಂತರದ ಧಾರ್ಮಿಕ ನಿಲುವನ್ನು ತುಲನಾತ್ಮಕ ದೃಷ್ಟಿಕೋನದತ್ತ ತಿರುಗಿಸಿದರು. ಉದಾಹರಣೆಗಾಗಿ ಸ್ಯಾಮುಯೆಟ್ ಅಬ್ಬೆಜನು ವಿರಚಿತ 'ಬಜಾರ ಬುಕ್' ಅಥವಾ ಕಿರಣಕ ಮಾಲಿಕೆಯನ್ನು ನೋಡಬಹುದು. ಇದು ತುಲನಾತ್ಮಕ ಮತೀಯ ಸಾಹಿತ್ಯ. ಇದರ ಕುರಿತು ಮುಂದೆ ನೋಡಬಹುದು.

"ತಮ್ಮ ಧರ್ಮದ ಪ್ರಚಾರದ ಹುರುಪಿನಲ್ಲಿ ಕ್ರೈಸ್ತರು ಹಿಂದೂ ಧರ್ಮವನ್ನು ಟೀಕಿಸಿದ್ದಾರೆ. ಈ ಪ್ರವೃತ್ತಿಯಿಂದ ಹಿಂದೂಗಳು ಎಚ್ಚೆತ್ತುಕೊಳ್ಳಲು, ತಮ್ಮ ಧರ್ಮ ಸಮರ್ಥನೆಗೆ ತೊಡಗಲು, ತಮ್ಮ ಲೋಪದೋಷಗಳನ್ನು ವಿಮರ್ಶಿಸಿಕೊಳ್ಳಲು, ಧರ್ಮದ ಬಗೆಗೆ ಮುಕ್ತವಾಗಿ ಚರ್ಚಿಸಲು ಅವಕಾಶವಾಗಿದೆ. ಕನ್ನಡದಲ್ಲಿ ವೈಚಾರಿಕತೆ ಮೂಡಲು ಕ್ರೈಸ್ತರ ಧರ್ಮಾಭಿಮತ ಸಾಹಿತ್ಯವೂ ಸಾಕಷ್ಟು ಕಾರಣವಾಗಿದೆ

ಎನ್ನಬಹುದು. ಕ್ರೈಸ್ತರಿಂದ ಜರ್ಮನ್ ಇಂಗ್ಲೀಷ್ ಮೊದಲಾದ ಅನ್ಯಭಾಷೆಯ ಗ್ರಂಥಗಳು ಕನ್ನಡಕ್ಕೆ ಅನುವಾದವಾದುದರಿಂದ ಕನ್ನಡ ಸಾಹಿತ್ಯ ಪುಷ್ಟವಾಗಿದೆ. ಪ್ರಾಪಂಚಿಕ ವಿಷಯಗಳಿಗೆ ಸಂಬಂಧಿಸಿದ ಕವಿತೆ, ಕತೆ, ಕಾದಂಬರಿ, ನಿಘಂಟು, ಪ್ರಬಂಧ ಮೊದಲಾದ ಸಾಹಿತ್ಯ ಪ್ರಕಾರಗಳ ಪರಿಚಯ ಕನ್ನಡಕ್ಕಾಗಿದೆ. ಕನ್ನಡ ಪ್ರಾಚೀನ ಗ್ರಂಥ ಸಮೂಹ ಸಾಂಸ್ಕೃತಿಕ ಅಧ್ಯಯನದ ಮಾಹಿತಿ ಸಂಗ್ರಹಗಳ ಅಗತ್ಯ ತಿಳಿಯುವಂತಾಗಿದೆ. ಮಿಗಿಲಾಗಿ ಹೊಸಗನ್ನಡ ಸಾಹಿತ್ಯ ಸೃಷ್ಟಿಗೆ ಕ್ರೈಸ್ತರು ಸ್ಫೂರ್ತಿ ನೀಡಿದ್ದಾರೆ".[೧]

ಹತ್ತನೇ ಶತಮಾನದ ಸಾಹಿತ್ಯ, ಹನ್ನೆರಡನೆ ಶತಮಾನದಲ್ಲಿ ಮುಂದುವರೆಯದೆ ವಚನ ಸಾಹಿತ್ಯ ವನ್ನು ಧಾರ್ಮಿಕ ದೃಷ್ಟಿಕೋನದ ಹಿನ್ನೆಲೆಗೆ ಸಿಲುಕಿ ಹೇಗೆ ಪಡೆದುಕೊಂಡಿತೋ ಹಾಗೆ ಹಳೆಗನ್ನಡವು ಮಿಶನರಿಗಳ ಆಗಮನದಿಂದ ಕ್ರೈಸ್ತ ಧರ್ಮ ಸಂಸ್ಥಾಪನಾರ್ಥವಾಗಿ ಹೊಸಗನ್ನಡ ಎಂಬ ಹೊಸ ರೂಪವನ್ನು ತಾಳಲು ಪ್ರಾರಂಭಿಸಿದಂತಿದೆ. ಕನ್ನಡ ಸಾಹಿತ್ಯದ ಹೊಸಗನ್ನಡ ರೂಪ ಪಡೆಯುವ ಅವಶ್ಯಕತೆ ಮಿಶನರಿಗಳು ಆಗಮಿಸದೇ ಇದ್ದಲ್ಲಿ ಕಂಡುಬರುವುದೆಂಬ ಹಂತದಲ್ಲಿ ಇರಲಿಲ್ಲ. ಮತ್ತು ಹೊಸಗನ್ನಡ ಸಾಹಿತ್ಯದ ಅವಶ್ಯಕತೆಯೇ ಇತ್ತು ಎಂಬ ಸನ್ನಿವೇಶದ ಕುರುಹುಗಳಾವುವು ಗುರುತಿಸಲ್ಪಡುವ ಹಂತದಲ್ಲಿ ಇರಲಿಲ್ಲವೆಂಬುದು ಸ್ಪಷ್ಟವೆಂದೆನಿಸುವುದು. ಹೀಗಾಗಿ ಮಿಶನರಿಗಳು ಬಾರದೆ ಇದ್ದಿದ್ದರೆ ಕನ್ನಡ ಸಾಹಿತ್ಯ ಹೊಸಗನ್ನಡ ಸಾಹಿತ್ಯದ ಶೈಲಿ ಪ್ರಕಾರಗಳನ್ನು ಕಾಣುವಲ್ಲಿ ನಾವು ಎಷ್ಟೋ ವರ್ಷಗಳನ್ನು ನಿರೀಕ್ಷಿಸ ಬಹುದಿತ್ತೆನೊ. ಊಹೆಗೂ ನಿಲುಕದು.

ಹೀಗೆ ಪಾಶ್ಚಾತ್ಯ ವಿದ್ವಾಂಸರು, ಮಿಶನರಿಗಳು ಕನ್ನಡ ಸಾಹಿತ್ಯದ ಹಲವು ಹೊಸ ಮುಖಗಳಿಗೆ ಅಂಕುರಾರ್ಪಣೆ ಮಾಡಿದರು. ವಸ್ತುನಿಷ್ಠವಾದ ಆಧುನಿಕ ಸಾಹಿತ್ಯ ವಿಮರ್ಶೆಗೆ ತಳಹದಿ ಹಾಕಿದರು. ಮೊಟ್ಟ ಮೊದಲ ಸಾಹಿತ್ಯ ಚರಿತ್ರೆ ಬರೆದ ಕೀರ್ತಿ ಇ.ಪಿ.ರೈಸ. (ಮೊದಲ ಮುದ್ರಣ ೧೯೧೫) ಅವರಿಗೆ ಸಲ್ಲುತ್ತದೆ. ಕನ್ನಡದ ಶಾಸನಗಳನ್ನು ಕಲೆ ಹಾಕಿದ ಕೀರ್ತಿ ಫ್ಲೀಟ್ (ಮೊದಲ ಮುದ್ರಣ, ೧೮೭೮) ಅವರದಾದರೆ, ಮೈಸೂರ ಗೆಜೆಟಿಯರನ ಎರಡು ಸಂಪುಟಗಳನ್ನು ಎಫಿಗ್ರಾಫಿಯಾ ಕರ್ನಾಟಕದ ಹನ್ನೆರಡು ಸಂಪುಟಗಳನ್ನು ಹೊರ ತಂದ ಕೀರ್ತಿ ಬಿ.ಎಲ್.ರೈಸ್ ರವರಿಗೆ ಸಲ್ಲುತ್ತದೆ. ದ್ರಾವಿಡ ಭಾಷೆಗಳ ತುಲಾತ್ಮಕ ವ್ಯಾಕರಣ ನೀಡಿದ ಕಾಲ್ಡವೆಲ್ಲರು ಹಲವು ದೃಷ್ಟಿಗಳಿಂದ ಚಿರಸ್ಮರಣೀಯರು.

ವರದರಾಜ ಹುಯಿಲಗೊಳ್ಳರವರು ಕ್ರೈಸ್ತರಿಂದ ಕನ್ನಡಕ್ಕೆ ಕಾಣಿಕೆ ಎಂಬ ತಮ್ಮ ಪುಸ್ತಕದಲ್ಲಿ ಮಿಶನರಿಗಳ ಕುರಿತು ಹೀಗೆ ನುಡಿದಿದ್ದಾರೆ. "ಮಿಶನರಿಗಳು ಯಾವುದೋ ಕೆಲಸಕ್ಕಾಗಿ ಇಲ್ಲಿಗೆ ಆಗಮಿಸಿದ ಕ್ರಿಶ್ಚಿನ್ ಅಧಿಕಾರಿಗಳು, ನಮ್ಮ ಕನ್ನಡವನ್ನು ಇಷ್ಟು ಆಳವಾಗಿ ವಿವರವಾಗಿ ಅಭ್ಯಾಸ ಮಾಡಲು ಹೇಗೆ ಮನಸ್ಸು ಮಾಡಿದರೊ? ಕನ್ನಡವೇ ಮಾತೃಭಾಷೆಯಾದ ನಮಗೆ ಕನ್ನಡದ ಬಗ್ಗೆ ಲವಲವಿಕೆ ಇಲ್ಲದಿರುವಾಗ,

೧. ಅವಲೋಕನ ಎಚ್‌ಸ್ಕೆ, ಪು.೨೫೫

ಆ ಜನರ ಹಂಬಲ ಅದೆಂಥದ್ದು!! ಅವರು ಮಾಡಿದಷ್ಟು ಸರ್ವರೀತಿಯಿಂದಲೂ ಪರಿಪೂರ್ಣವಾದ ಕಾರ್ಯವನ್ನು ನಮಗಿನ್ನೂ ಕೈಕೊಳ್ಳಲು ಶಕ್ಯವಾಗಿಲ್ಲ."[೧] "ಈ ಹೊಸಯುಗದಲ್ಲಿ ಬೆಳಕು ಕಂಡವರು ಮತ್ತು ಬೆಳಕು ತೋರಿಸಿದವರು ಕ್ರಿಶ್ಚಿನ್ ಮಿಶನರಿಗಳೇ ಎಂದು ಧಾರಾಳವಾಗಿ ಹೇಳಬಹುದು."[೨]

ಪಾಶ್ಚಾತ್ಯರು ಭಾರತಕ್ಕೆ ಬಂದು ಅದರಲ್ಲೂ ಕರ್ನಾಟಕ ನೆಲದಲ್ಲಿ ಕಾಲಿರಿಸಿ, ನಮ್ಮ ಪ್ರಮುಖ ಕೃತಿಗಳನ್ನು ಒಂದು ಬಿಡದೆ ಅಭ್ಯಸಿಸಿ, ಅಧ್ಯಯನ ಕೈಕೊಂಡು ಅವುಗಳಿಗೆ ಟೀಕೆ-ವಿಮರ್ಶೆ ಬರೆದು, ಹಳೆಯ ಗ್ರಂಥಗಳಿಗೆ ಹೊಸ ದೃಷ್ಟಿಯನ್ನು ತೋರಿಸಿ ಕೊಡುವಲ್ಲಿ ಶತಾಯ ಗತಾಯ ಶ್ರಮಿಸಿದ್ದಾರೆಂಬುದರಲ್ಲಿ ಎರಡು ಮಾತಿಲ್ಲ. ಅಂದು ಅವರು ನಮ್ಮ ಧರ್ಮಗ್ರಂಥಗಳನ್ನು ಇಂಗ್ಲೀಷ್, ಜರ್ಮನ್, ಫ್ರಾನ್ಸ್ ಭಾಷೆಗಳಲ್ಲಿ ತರ್ಜುಮೆ ಮಾಡಿದ್ದರ ಫಲವನ್ನು ನಾವಿಂದು ಜಾಗತಿಕ ಮಟ್ಟದಲ್ಲಿ ಅವುಗಳನ್ನು ಸಾಧಿಸಿದ್ದೇವೆಂದರೆ ತಪ್ಪಾಗದು. ಜಾನ್ ಗ್ಯಾರೆಟ್ ೧೮೪೬-೪೮ರಲ್ಲಿ ಭಗವದ್ಗೀತೆಯ ಆವೃತ್ತಿ ಹೊರತಂದು ಅಖಿಲ ಭಾರತ ಮಟ್ಟದಲ್ಲಿ ಕೀರ್ತಿಗೆ ಪಾತ್ರನಾದನು. ಕನ್ನಡದಲ್ಲಿ ೧೮೭೦ರಲ್ಲಿ ಭಗವದ್ಗೀತೆ ಹೊರಬರಲು ಈತನೆ ಕಾರಣನು. ಸುಪ್ರಸಿದ್ಧ ಚಾರ್ಲಸ್ ವಿಲ್ಕಿನ್ಸನು ಇಂಗ್ಲಿಷ್ ಆವೃತ್ತಿಯನ್ನು ಹಾಗೂ ಶೆಗೆಲ್ ಎಂಬುವನು ಲ್ಯಾಟಿನ್ ಆವೃತ್ತಿಯನ್ನು ಹೊರತರಲು ಶ್ರಮಿಸಿದವರು.

ಕನ್ನಡಕ್ಕೆ ಹೊಸಗನ್ನಡದ ಸಾಹಿತ್ಯದ ಉದಯವನ್ನುಂಟು ಮಾಡಿದ ಜಾತಿ, ಧರ್ಮವೆನ್ನದೆ ದೃಷ್ಟಿಸಿದ ಇವರ ಸಾಹಿತ್ಯ ಕಾರ್ಯಕ್ಕೆ ಬದಲಾಗಿ, ನಮ್ಮ ಕವಿಗಳು ಬೈಬಲ್ ಓದಿ ಅರ್ಥೈಸಿ ಕ್ರೈಸ್ತ ಸಾಹಿತ್ಯಕ್ಕೆ ತಮ್ಮದೆಯಾದ ಕೊಡುಗೆ ಕೊಟ್ಟಿರುವರೇ? ಶ್ರೀ ಗೋವಿಂದ ಪೈಗಳೊಬ್ಬರನ್ನು ಬಿಟ್ಟರೆ ಮತ್ತಾವ ಕನ್ನಡದ ಶ್ರೇಷ್ಠ ಕವಿಯು ಇಂತಹ ಕಾರ್ಯಕ್ಕೆ ಕೈ ಹಾಕಲಿಲ್ಲ. ಮಿಶನರಿಗಳು ವೇದ, ಪುರಾಣ, ಭಗವದ್ಗೀತಯನ್ನು ಇಂಗ್ಲಿಷಿಗೆ, ಜರ್ಮನ್ ಭಾಷೆಗೆ ತರ್ಜುಮೆ ಮಾಡಿರುವುದನ್ನು ಕಂಡಿದ್ದೇವೆ. ಕೇಳಿದ್ದೇವೆ. ಓದಿದ್ದೇವೆ. ಆ ಕಾರ್ಯಕ್ಕೆ ಪ್ರತಿ ಋಣಕ್ಕಾಗಿ ಕ್ರೈಸ್ತೇತರರು ಕ್ರೈಸ್ತ ಧಾರ್ಮಿಕ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವ ಕೊರತೆ ಇಂದು ಕನ್ನಡ ಸಾಹಿತ್ಯದಲ್ಲಿ ಕಂಡುಬರುತ್ತದೆ.

"ಶೈವಧರ್ಮದ ವಿವಿಧ ಶಾಖೆಗಳಲ್ಲಿ ಒಂದಾದ ವೀರಶೈವ ಧರ್ಮ ಬಹುಮಟ್ಟಿಗೆ ಕರ್ನಾಟಕದಲ್ಲಿ ರೂಪುಗೊಂಡು ಅನಂತರ ನೆರೆ ಹೊರೆಯ ಪ್ರಾಂತ್ಯಗಳಾದ ಆಂಧ್ರ, ಮಹಾರಾಷ್ಟ್ರ ಮತ್ತು ತಮಿಳುನಾಡಿನ ಗಡಿ ಪ್ರಾಂತ್ಯಗಳನ್ನು ವ್ಯಾಪಿಸಿತು. ಅನೇಕ ವಿಚಾರಗಳಲ್ಲಿ ವೈದಿಕ ಧರ್ಮದಿಂದ ಭಿನ್ನವಾದ ವೀರಶೈವ ಧರ್ಮ ಕರ್ನಾಟಕದ ಜನ ಜೀವನ, ಅವರ ಸಂಸ್ಕೃತಿ ಮತ್ತು ಸಾಹಿತ್ಯ ಇವುಗಳ ಮೇಲೆ ಆಳವಾದ ಪ್ರಭಾವವನ್ನು ಬೀರಿವೆ".[೩]

---

೧. ಮುನ್ನುಡಿಯ ಪುಟದಿಂದ

೨. ಅದೇ, ಪು.೧

೩. ಕನ್ನಡ ವಿಶ್ವವಿದ್ಯಾಲಯದ ವಿಶ್ವಕೋಶ, ಪು.೧೩೪೪

ವೀರಶೈವಧರ್ಮ ಶಾಸ್ತ್ರಾಧಾರಿಗಳನ್ನು ಗೌರವಿಸುವುದಾದರೂ ಇದಕ್ಕೆ ಯಾವುದೇ ಒಂದು ನಿರ್ದಿಷ್ಟವಾದ ಪ್ರಸ್ತಾವನ ಗ್ರಂಥ ಆಧಾರವಿಲ್ಲ. ಶಬ್ದ ಪ್ರಮಾಣದ ಹೆಸರಿನಲ್ಲಿ ವಿಚಾರ ಮತ್ತು ಅನುಭವಾತ್ಮಕವಾಗಿ ಸದಾ ವಿನೂತನಗೊಂಡು ಬರುತ್ತಿರುತ್ತದೆ. ಅನುಭವ ಮಾನ್ಯವಲ್ಲದ ಆಚರಣೆ ಅದಕ್ಕೆ ಎಷ್ಟೇ ಶಾಸ್ತ್ರ ಆಧಾರವಿದ್ದರೂ ಅದನ್ನು ಗೌರವಿಸಲು ವೀರಶೈವ ಧರ್ಮ ಸಿದ್ಧವಿಲ್ಲ. ಲೌಕಿಕ ಪ್ರಜ್ಞೆ ಅನುಭವದಿಂದ ದೊರೆಯುವುದಾದರೆ ಅಲೌಕಿಕ ಅಥವಾ ದೈವಿಕ ಪ್ರಜ್ಞೆ ಅನುಭಾವದಿಂದ ಲಭಿಸುವಂಥದ್ದು. ವೀರಶೈವ ದರ್ಶನವನ್ನು ಶಕ್ತಿ ವಿಶಿಷ್ಟಾ ದ್ವೈತ ಸಿದ್ಧಾಂತ ಎಂದು ಕರೆಯಲಾಗಿದೆ.

ಧಾರ್ಮಿಕ ರಂಗದಲ್ಲಿ ಮಾನವರೆಲ್ಲರೂ ಸಮಾನರು. ಭಗವಂತನ ಸಾಕ್ಷಾತ್ಕಾರ ಮಾನವನ ಹಕ್ಕು ಎಂದು ಬೋಧಿಸಿದ ವೀರಶೈವ ಧರ್ಮ ಹನ್ನೆರಡನೇಯ ಶತಮಾನದಲ್ಲಿ ಬಂದ ಶರಣ ಸಂತತಿಯಿಂದಾಗಿ ಕರ್ನಾಟಕದಲ್ಲಿ ಸುವರ್ಣ ಯುಗವನ್ನೇ ಕಂಡಿತು. ಸ್ಪೃಶ್ಯ-ಅಸ್ಪೃಶ್ಯ, ಬ್ರಾಹ್ಮಣ-ಶೂದ್ರ, ಸ್ತ್ರೀ-ಪುರುಷ ಎಂಬ ಯಾವ ಭೇದವೂ ಇಲ್ಲದೆ ಪಂಡಿತ ಪಾಮರರೆಲ್ಲರೂ ಈ ಧರ್ಮದ ಬೋಧನೆಗೆ ಕಿವಿಗೊಟ್ಟರು. ವರ್ಣಾಶ್ರಮ ಧರ್ಮಗಳ ಹೆಸರಿನಲ್ಲಿ ಹಿಂದೂ ಸಮಾಜದಲ್ಲಿ ರೂಢಿಯಲ್ಲಿದ್ದ ಮೇಲು-ಕೀಳು ಎಂಬ ಸಾಮಾಜಿಕ ತಾರತಮ್ಯ ಮಾಯವಾಗಿ ಶರಣ ಧರ್ಮದ ನೆರಳಿನಲ್ಲಿ ವರ್ಣರಹಿತ ವರ್ಗರಹಿತ ಧಾರ್ಮಿಕ ತೃಷೆಯುಳ್ಳ ಸಮಾಜವೊಂದು ರೂಪಿತಗೊಂಡಿತು. 'ಧರ್ಮದ ಹೆಸರಿನಲ್ಲಿ ಅಂಧಶ್ರದ್ಧೆ, ಶುಷ್ಕ ಆಚರಣೆಗಳು ಆಡಂಬರದ ಪೂಜೆ, ಪಶುಬಲಿ ಮುಂತಾದ ಕುರುಡು ಆಚರಣೆಗಳನ್ನು ವೀರಶೈವ ಧರ್ಮ ಅತ್ಯಂತ ಕಟುವಾಗಿ ಟೀಕಿಸಿತು. ತನ್ನ ಬಿಟ್ಟರೆ ದೇವರಿಲ್ಲ. ಮಣ್ಣು ಬಿಟ್ಟರೆ ಮಡಕೆ ಇಲ್ಲ ಎಂಬ ಶ್ರೇಷ್ಠ ತತ್ವವು ಸುಲಭಸಾಧ್ಯ ಎಂದು ಜೀವಂತವಾಗಿ ಬದುಕಿ ತೋರಿಸಿದುದೇ ಈ ಧರ್ಮದ ವೈಶಿಷ್ಟತೆ. ಧಾರ್ಮಿಕ ಆಚರಣೆ ಪರಿಶುದ್ಧ ಜೀವನ ಮತ್ತು ವೈಚಾರಿಕ ಸ್ವಾತಂತ್ರ್ಯ ಇವು ಜೊತೆಗೂಡಿ ಹೋಗಬಲ್ಲವೆಂಬುದನ್ನು ವೀರಶೈವ ಧರ್ಮ ಸಾಧಿಸಿ ತೋರಿಸಿತು.

ಶೈವ ಧರ್ಮ - ವೀರಶೈವ ಧರ್ಮ ಎಂದು ಕರೆಯುತ್ತಿರುವುದು ವೈದಿಕ ಧರ್ಮದಿಂದ ಹುಟ್ಟಿ ಬೆಳೆದ ಧರ್ಮ ಇದಾಗಿದೆ. ಹಿಂದೂ ಧರ್ಮದ ಅವನತಿಯೊಂದಿಗೆ ಉದ್ಭವಗೊಳಗಾದ ಈ ಧರ್ಮ ಸನಾತನ ಧರ್ಮ ತತ್ವಗಳನ್ನು ಟೀಕಿಸಿತು. ಶಿವನೊಬ್ಬನೇ ದೇವ, ತ್ರಿಮೂರ್ತಿಗಳಲ್ಲಿ ಒಬ್ಬನಾಗಿದ್ದನು. ಶೈವರು ಶಿವನೊಬ್ಬನನ್ನೇ ಆರಾಧಕರೆಂದು ನಂಬಿದರು. ಶಿವನನ್ನೆ ಹಲವು ನಾಮದಿಂದ ಕರೆದು ಇವರು ದೇವನೊಬ್ಬ ನಾಮ ಹಲವು ಎಂದು ಸಾರಲು ಪ್ರಾರಂಭಿಸಿದರು. ಹಲವು ದೇವರುಗಳ ಹೆಸರಿನಲ್ಲಿ ದೇವನೊಬ್ಬನೆಂದು ಶೈವರು ಒಪ್ಪುವುದಿಲ್ಲ. ಶೈವ-ವೀರಶೈವ ಎಂದು ಹೆಸರುಗೊಂಡಿದ್ದು ಸು.೧೪ನೇ ಶತಮಾನದಲ್ಲಿ ಭೀಮ ಕವಿಯ ಬಸವಪುರಾಣದಲ್ಲಿ ಈ ಶಬ್ದ ಪ್ರಪ್ರಥಮವಾಗಿ ಬಳಕೆಯಾಗಿದ್ದುದು ಕಂಡುಬರುತ್ತದೆ.

ಭಾರತದ ಧರ್ಮಗಳಲ್ಲಿ ವೀರಶೈವಧರ್ಮ ವಿಶಿಷ್ಟವಾದುದು. ಕಾರಣ ಹಲವು ದೇವರು ಹಾಗೂ ದೇವತೆಗಳಾದ ಈ ನಾಡಿನಲ್ಲಿ ಏಕ ದೇವೋಪಾಸನೆ ಹುಟ್ಟಿ ಬರಲು ಸಾಧ್ಯವೆ? ಹಾಗಾದರೆ ವೀರಶೈವ/ಶೈವ ಧರ್ಮದ ಹುಟ್ಟಿಗೆ ಏನು ಕಾರಣ? ಪ್ರಪ್ರಥಮವಾಗಿ ಭಾರತೀಯ ಧರ್ಮಗಳಲ್ಲಿ ಏಕದೇವೋಪಾಸನೆ ಹಣಿಕಿ ಹಾಕಿದ್ದು, ಶೈವಧರ್ಮದಲ್ಲಿ ಮಾತ್ರ ನಾಲ್ಕು ವೇದಗಳಿದ್ದರೂ, ಮೂಲದಲ್ಲಿ ಒಂದೇ ವೇದ ಇದ್ದ ಹಾಗೆ ಎಲ್ಲ ದೇವರುಗಳಲ್ಲಿ ಶಿವನೊಬ್ಬನೇ ದೇವ ಎನ್ನುವ ಪರಿ ಶೈವರದು.

ಹೊಸ ವಿಚಾರ, ಹೊಸ ಸಿದ್ಧಾಂತಗಳನ್ನು ತಳೆದ ಶೈವ ಮತ, ತನ್ನ ಅಭಿಪ್ರಾಯಗಳನ್ನು ನಂಬಿಕೆಗಳನ್ನು ಇತರರಿಗೆ ಭಿತ್ತರಿಸಲು ಪ್ರಾರಂಬಿಸಿ, ಅಂದು ಹಿಂದೂ ವಿಧಿ-ವಿಧಾನಗಳಿಂದ ವಂಚಿತರಾದ ಶೋಷಿತ ವರ್ಗಗಳನ್ನು ತನ್ನೆಡೆಗೆ ಸೆಳೆಯಲು ಪ್ರಾರಂಭಿಸಿ, ಅನಾಥರನ್ನು ಧರ್ಮ ದೀಕ್ಷೆ ಮೂಲಕ ಲಿಂಗವಂತರನ್ನಾಗಿ ಲಿಂಗವನ್ನು ಆಯತ ಮಾಡಿಕೊಂಡು ಲಿಂಗಾಯತರೆಂದು ಕರೆಯಿಸಿಕೊಳ್ಳಲು ಪ್ರಾರಂಭಿಸಿತು. ಬರಬರುತ್ತಾ ಹಿಂದೂ ಧರ್ಮವನ್ನು ಹಳಿಯಲು ಪ್ರಾರಂಭಿಸಿ ವೇದ-ಪುರಾಣ-ಮಹಾಭಾರತ-ರಾಮಾಯಣಗಳಿಂದ ತತ್ವಗಳನ್ನು ಹುರುಳಿಲ್ಲದಂತೆ ತೋರಿಸಿಕೊಟ್ಟಿತು. ಉದಾ

ಹಾದರದ ಕಥೆಯನ್ನು ಸೋದರರ ಒದೆಯನ್ನು ಆಧರಿಸಿ ಕೇಳುವವರು ಮಾದಿಗರು ನೋಡಾ ಎಂದು ಮಹಾಭಾರತವನ್ನು ಹಳಿದದ್ದು ಕಂಡುಬರುವುದು.

ಧರ್ಮ ಸಮನ್ವಯತೆಯನ್ನು ಬಸವಣ್ಣನವರು ತರಲು ಪ್ರಯತ್ನಿಸಿದ್ದಾಗ, ಕಲ್ಯಾಣ ಕ್ರಾಂತಿಯ ಮೂಲಕ ಆ ಸಮನ್ವಯ ಭಾವ ಬಿದ್ದು ಹೋಯಿತೇನೋ ಎಂಬಂತೆ, ಬರಬರುತ್ತ ವೈದಿಕ ಧರ್ಮ ಸಿದ್ಧಾಂತಗಳಿಗೆ ಅಂಟಿಕೊಳ್ಳುತ್ತಾ ಇಂದು ಹಿಂದೂ ಧರ್ಮದಿಂದ ಒಂದು ವಿಭಿನ್ನ ಧರ್ಮ ಎಂದು ಅನ್ನಿಸಿಕೊಳ್ಳದೆ, ಹಿಂದೂ ಧರ್ಮ ಶಾಖೆಯಾಗಿ ಕಂಡುಬರುತ್ತದೆ.

ಲಿಂಗ ಪೂಜೆ ಒಂದು ಪ್ರಮುಖ ಪಾತ್ರವಹಿಸಿ ಆತ್ಮಲಿಂಗದ ಪರಿಕಲ್ಪನೆಗೆ ಜನ ಸಾಮನ್ಯರಿಂದ ದೂರವಾಗಿದೆ.

> ಪೃಥ್ವಿಗಾಗಿ ಹುಟ್ಟಿದ ಶಿಲೆ
> ಕಲ್ಲುಕುಟಕನಿಗಾಗಿ ಹುಟ್ಟಿದ ಮೂರ್ತಿ
> ಮಂತ್ರಕ್ಕೆ ಲಿಂಗವಾಯಿತ್ತು
> ಉಳಿಮುಟ್ಟಿದ ಲಿಂಗ ಮನಮುಟ್ಟದು

ಎಂಬ ಅಲ್ಲಮರ ಜ್ಞಾನ ಇಂದು ಅರಿಯದಾಗಿದೆ.

> ಆರು ಕಾಸಿಂದ ಲಿಂಗವ ತಂದು
> ಮೂರು ಕಾಸಿನ ವಸ್ತ್ರವ ತಂದು

ಕಟ್ಟುವವನೊಬ್ಬ ಕಳ್ಳ ನಾಯಿ

ಕಟ್ಟಿಸಿಕೊಳ್ಳುವವನೊಬ್ಬ ಮೂಳ ನಾಯಿ

ಎಂಬ ಅರಿವು ಇಂದಿನವರ ದೃಷ್ಟಿಯಲ್ಲಿ ಬೆಲೆಯಿಲ್ಲದಾಗಿದೆ.

ಹುಟ್ಟಿದಾಗ ಎಲ್ಲವೂ ಶ್ರೇಷ್ಠವೇ ಆದರೂ ಬೆಳೆಯುತ್ತಾ ಹೋದಂತೆಲ್ಲ ಅನೇಕ ಭಿನ್ನಾಭಿಪ್ರಾಯಕ್ಕೆ ಒಳಗಾಗುವುದು ಸಹಜ. ಶೈವ ಧರ್ಮವೂ ಇದಕ್ಕೆ ಹೊರತಾಗಿಲ್ಲ ಎನ್ನಬಹುದು.

ಇಸ್ಲಾಂಮತ

ಒಂದು ಧರ್ಮ ಅಸ್ತಿತ್ವಕ್ಕೆ ಬರುವಾಗ ತನಗಿಂತ ಪೂರ್ವದಲ್ಲಿದ್ದ ಧರ್ಮದ ನೂನ್ಯತೆಗಳನ್ನು ಬಲಿಗೆಳೆದು ತನ್ನ ತನವನ್ನು ಪ್ರಚಾರಕ್ಕೆ ಅಣಿಗೊಳಿಸುವುದು ಸಹಜ. ಧರ್ಮ ಸ್ಥಾಪಕನು ತನ್ನ ತತ್ವ ಜನರ ಮೇಲೆ ಪ್ರಭಾವ ಬೀರಲು ಪೂರ್ವ ಧರ್ಮವನ್ನು ಹಳಿಯುವುದು ಹೆಚ್ಚು. ಯಾಕೆಂದರೆ ಒಂದು ಧರ್ಮ ಇನ್ನೊಂದನ್ನು ಪೂರಕವಾಗಿ ಹೊಂದುವುದು ಕಷ್ಟ. ಭಾರತೀಯ ಧರ್ಮಗಳಾದ ಬೌದ್ಧ-ಜೈನ-ವೀರಶೈವ ಮುಂತಾದವುಗಳು ಹಿಂದೂ ಧರ್ಮ ತತ್ವದ ತಳಹದಿಯಿಂದ ಭಿನ್ನತೆಯನ್ನು ರೂಪಿಸಿ ಅಸ್ತಿತ್ವಕ್ಕೆ ಬಂದವುಗಳಾಗಿವೆ.

ಇಸ್ಲಾಂ ಧರ್ಮದ ಅಸ್ತಿತ್ವವನ್ನು ನೋಡುವುದಾದರೆ ಮಹಮ್ಮದ ಪೈಗಂಬರರಿಗೆ ತನ್ನ ಜನರಿಗಾಗಿ ರೂಪಿಸುವ ಧರ್ಮತತ್ವಗಳು ಕ್ರೈಸ್ತ ಮತ್ತು ಯಹೂದಿ ಧರ್ಮದ ತಳಹದಿಯನ್ನು ಅವಲಂಬಿಸಬೇಕಾಗಿತ್ತು. ಯಹೂದಿ ಧರ್ಮದ ತಳಹದಿ ಅಷ್ಟೊಂದು ಬಲವಾಗಿದ್ದುದರಿಂದ ಕುರ್ ಆನ್ ಆದಾಮ (Adam)ನಿಂದ ಕ್ರಿಸ್ತನವರೆಗಿನ ಪ್ರವಾದಿಕ್ರಮವನ್ನು ಗೌರವಿಸುತ್ತ ಇಂದಿಗೂ ಬಂದಿದೆ. ಕುರ್ ಆನ್ ಕ್ರಿಸ್ತನನ್ನು ಕರೆದದು ಕಲಿಮುಲ್ಲಾ ಎಂದು. ಅಂದರೆ ದೇವರಾತ್ಮನು ಎನ್ನಲಾಗಿದೆ. ಮಹಮ್ಮದ ಪೈಗಂಬರನಿಗೆ ಕ್ರೈಸ್ತ ಧರ್ಮದ ಹಾಗೆ ತನ್ನ ಜನರು ಒಬ್ಬ ದೇವರನ್ನು ಆರಾಧಿಸಬೇಕು ಎಂಬ ಬಲವಾದ ನಂಬಿಕೆ ಹಾಗೂ ಆಶೆಯಿದ್ದುದರಿಂದ ಈ ನಿಟ್ಟಿನತ್ತ ತನ್ನ ಜನರನ್ನು ಒಯ್ಯಲು ಪ್ರಾರಂಭಿಸಿದ. ಆದರೆ ಹಲವು ದೇವರನ್ನು ಆರಾಧಿಸುವ ಸಂಚಾರಿ ಮನೋಭಾವದ ವ್ಯಾಪಾರಿ ಜನರು ಧಾರ್ಮಿಕ ದೃಷ್ಟಿಯಲ್ಲಿ ಯಾವುದನ್ನೂ ನಿಶ್ಚಯವಾಗಿ ಅವಲಂಬಿಸದವರಾಗಿದ್ದರು.

ಇಸ್ಲಾಂ ಮತದ ಜನ್ಮಭೂಮಿಯು ಅರೇಬಿಯ ದೇಶ. ಇದೊಂದು ದೊಡ್ಡ ವಿಶಾಲವಾದ ಮರುಭೂಮಿ. ಅಲ್ಲೊಂದು ಇಲ್ಲೊಂದು ಅತ್ಯಂತ ವಿರಳವಾಗಿ ನೀರಿನ ಅನುಕೂಲವಿದ್ದೆಡೆಯಲ್ಲಿ ನಗರಗಳಿರುತ್ತಿದ್ದುವು. ಅಲ್ಲಿಯೇ ಸ್ವಲ್ಪ ಭೂವ್ಯವಸಾಯ, ಅಲ್ಲಿಯೇ ರಮಣೀಯವಾದ ಖರ್ಜೂದ ತೋಪುಗಳು, ಉಳಿದೆಡೆಗಳೆಲ್ಲೆಲ್ಲ ಜನಸಂಖ್ಯೆಯು ಬಹುಸ್ವಲ್ಪ. ವ್ಯಾಪಾರಕ್ಕೆಂದು ಗುಂಪು ಕಟ್ಟಿಕೊಂಡು ದೇಶಪರ್ಯಾಟಣದಿಂದ ಜೀವಿಸುವ ಪ್ರಯಾಣಿಕರ ತಂಡಗಳು ದೇಶದಲ್ಲೆಲ್ಲ ಕಾಣಬರುತ್ತಿದ್ದುವು.

ಅವರು ಮಾರಾಟಕ್ಕಾಗಿ ತಮ್ಮ ಜೊತೆಯಲ್ಲಿ ಅನೇಕ ಪಶುಗಳನ್ನು ತೆಗೆದುಕೊಂಡು ಹೋಗುತ್ತಿದ್ದರು. ತಮಗೂ ತಮ್ಮ ಪಶುಗಳಿಗೂ ಬೇಕಾದ ಆಹಾರ ಸೌಕರ್ಯ ಮೊದಲಾದವುಗಳನ್ನು ದೊರಕಿಸಿಕೊಳ್ಳುವುದಕ್ಕಾಗಿ ಲೂಟಿ, ದರೋಡೆ ಮಾಡುವುದು, ಯುದ್ಧ ಮಾಡಿ ಸೋತವರಿಂದ ಕಪ್ಪ ಕಾಣಿಕೆಗಳನ್ನು ಸುಲಿಯುವುದು ಇವೇ ಅವರ ಉದ್ಯೋಗವಾಗಿತ್ತು. ಅವರು ಸೋತು ಪರಾಧೀನರಾಗಿದ್ದುದೂ ಉಂಟು. ಅವರ ಪ್ರಜಾ ಸಂಖ್ಯೆಯು ಹೆಚ್ಚಿದಾಗ ಅನೇಕರು ಪರರಾಜ್ಯಗಳಿಗೆ ವಲಸೆ ಹೋಗಿ ನೆಲಸಿ ಪ್ರಖ್ಯಾತಿ ಪಡೆದಿದ್ದರು. ಆದರೂ ಸ್ಥಳದಲ್ಲಿ ಸಾಕಾದಷ್ಟು ಜನರಿದ್ದರು. ಭೂಮಿಯು ಫಲವತ್ತಾಗಿಲ್ಲದಿದ್ದುದರಿಂದ ಅವರು ವ್ಯವಸಾಯಾದಿ ಉದ್ಯೋಗಗಳಿಲ್ಲದೆ ದಾರಿಗಳ್ಳರ ಅಂತಸ್ತಿನಲ್ಲಿದ್ದರು. ಅವರು ತುಷ್ಟಿ ಪುಷ್ಟಿಗಳನ್ನು ಕಾಣದಿದ್ದುದರಿಂದ ಕಷ್ಟಸಹಿಷ್ಣುಗಳಾಗಿ ಗಟ್ಟಿಗರಾಗಿ ಒರಟರಾಗಿದ್ದರು. ಅವರ ಹಾವಳಿಯನ್ನು ತಪ್ಪಿಸಿಕೊಳ್ಳುವುದಕ್ಕಾಗಿ ನಗರ ನಿವಾಸಿಗಳು ಸುತ್ತಲೂ ಗೋಡೆಯನ್ನು ಕಟ್ಟಿಕೊಂಡು ಕಂದಕವನ್ನು ತೋಡಿಕೊಂಡು ತಮ್ಮನ್ನು ತಾವು ಸಂರಕ್ಷಿಸಿಕೊಳ್ಳುತ್ತಿದ್ದರು. ದೇಶೀಯರಾಗಿದ್ದ ಅರಬರ ಲಕ್ಷಣವು ಹೀಗೆ ಕಾಡು ಮನುಷ್ಯರ ಜಾತಿಗೆ ಸೇರಿತ್ತು. ಬುದ್ಧನಿಗೂ ಜೀಸಸನಿಗೂ ಸಿಕ್ಕಿದ್ದ ಜನರು ತಕ್ಕ ಮಟ್ಟಿಗೆ ಸುಶಿಕ್ಷಿತರಾಗಿ ನಾಗರಿಕ ಸಂಸ್ಕೃತಿಯನ್ನು ಪಡೆದಿದ್ದರು. ಮಹಮ್ಮದನ ಕಾಲದ ಅವನ ದೇಶದ, ಅರಬರಿಗೆ ಆ ಶಿಕ್ಷಣವೂ ಇರಲಿಲ್ಲ. ಆ ಸಂಸ್ಕೃತಿಯೂ ಇರಲಿಲ್ಲ. ಇಂತಹವರ ನಡುವೆ ಅವನ ಕಾರ್ಯ ಕ್ಷೇತ್ರವಿದ್ದುದರಿಂದ ಅವನ ವರ್ತನೆಯ ರೀತಿಗೆ ಆಶ್ಚರ್ಯಪಡಬೇಕಾದುದಿಲ್ಲ."[೧]

ಮಹಮ್ಮದ ಬೋಧಿಸಿದ ಬೋಧನೆಗೆ ಪರಂಪರೆಯ ತಳಹದಿ ಇಲ್ಲದಿದ್ದರೆ ಅದು ಧರ್ಮ ಪ್ರಚಾರವಾಗುತ್ತಿರಲಿಲ್ಲ. 'ಯೇಹೂದ್ಯರ ಮತ ಸ್ಥಾಪಕನಾದ ಅಬ್ರಹಾಯನೂ, ಕ್ರೈಸ್ತರ ಮತಾಶ್ರಯನಾದ ಜೀಸಸನೂ ಹೇಳಿದ್ದುದನ್ನು ತಾನು ಪುಷ್ಟಿಗೊಳಿಸಿ ಪೂರ್ಣ ಮಾಡುವುದಾಗಿ ಮಹಮ್ಮದನು ಹೇಳುತ್ತಿದ್ದನು."[೨] ಇದಕ್ಕಾಗಿ ಮಹಮ್ಮದ ಪೈಗಂಗರ ತನ್ನ ೪೦ನೇ ವಯಸ್ಸಿನಲ್ಲಿ ಉಪದೇಶ ಪ್ರಾರಂಭಿಸಿ ಮೊಟ್ಟಮೊದಲು ಹೆಂಡತಿಗೆ ಮತ್ತು ಪರಮಾಪ್ತರಾದ ಕೆಲವರಿಗೆ ಮಾತ್ರ ಹೇಳಿದನು. ಕೆಲವು ಕವನಗಳನ್ನು ಮಾಡಿ ಅವು ತನಗೆ ದೈವ ಪ್ರೇರಿತವಾಗಿ ಬಂದುವೆಂದು ಹೇಳಿ ಅವುಗಳಲ್ಲಿ ಅವರಿಗೆ ನಂಬಿಕೆಯು ಹುಟ್ಟುವಂತೆ ಮಾಡಿದನು. ನೀತಿಮಾರ್ಗದ ಕೆಲವು ಸರ್ವಸಮ್ಮತವಾದ ಹಿತೋಕ್ತಿಗಳು ದೇವರು ಒಬ್ಬನೆಂಬ ಪ್ರತಿಪಾದನೆ, ಆ ದೇವರನ್ನು ನಂಬಿದವರಿಗೆ ಸ್ವರ್ಗ ಸುಖದ ಆಸೆ ನಂಬದೆ ಅಡ್ಡದಾರಿ ಹಿಡಿದವರಿಗೆ ನರಕ ಪ್ರಾಪ್ತಿಯ ಭೀತಿ. ದೇಹಾವಸಾನವಾದ ಮೇಲೂ ಜೀವದ ಜೀವನವು ಸ್ವರ್ಗದಲ್ಲಿಯೋ, ನರಕದಲ್ಲಿಯೋ ನಡೆಯುವುದೆಂಬ ನಂಬಿಕೆ. ಇವುಗಳೇ ಕವನದ ವಿಷಗಳು. ಇತರೆ ಮತಗಳವರು ಹೇಳದೆ ಬಿಟ್ಟಿದ್ದ ಹೊಸ ವಿಚಾರಗಳೇನೂ ಈ ಕವನದಲ್ಲಿರಲಿಲ್ಲ. ಆದರೆ ಈ ಉಪದೇಶವು ಮಕ್ಕದವರಿಗೆ

---

೧. ವಿ.ಮ.ಚಾ.ವಿ. ಮತ್ತು ಸಮನ್ವಯ, ರಾಮನಾಥಯ್ಯ ಕೆ.ಪಿ., ಪು.೧೬೧-೧೬೨

೨. ಅದೇ, ಪುಟ

ಸರಿಹೋಗಲಿಲ್ಲ. ಕಾರಣ ವಿಗ್ರಹಾರಾಧನೆಯೇ ತುಂಬಿಕೊಂಡಿರುವಾಗ ಅದನ್ನು ಮೀರುವ ಯಾವ ಬೋಧನೆಗೂ ಅಲ್ಲಿ ಅವಕಾಶವಿರಲಿಲ್ಲ. ಅವರು ಗೌಪ್ಯವಾಗಿ ಬೋಧನೆ ಮಾಡುತ್ತಾ ಬರಬರುತ್ತ ಬಹಿರಂಗವಾಗಿ ಬೋಧಿಸತೊಡಗಿದಾಗ ಮಹಮ್ಮದ ಘೋರ ಹಿಂಸೆಗೆ ಗುರಿಯಾಗಬೇಕಾಯಿತು. ಊರಿನಲ್ಲಿ ಯಾರು ಮಹಮ್ಮದನ ಅನುಯಾಯಿಗಳ ಜೊತೆ ಸೇರದಂತೆ, ಬಳಕೆ ಮಾಡದಂತೆ ನಿರ್ಬಧಿಸಲಾಯಿತು. ಕೊನೆಗೆ ಅಲ್ಲಿ ವಾಸಿಸುವದೇ ಕಷ್ಟವಾದಾಗ ಊರನ್ನು ಬಿಡಬೇಕಾಯಿತು. ಅಲ್ಲಿಂದ ಎಪ್ಪತ್ತು ಮೈಲುಗಳ ಆಚೆಯಿದ್ದ ತಾಯೋಪ್ ಎಂಬ ಊರಿಗೆ ಮಹಮ್ಮದ್ ಹೋದನು. ಮುಂದೆ "ಮೂರು ವರುಷಗಳ ತರುವಾಯ ಮಕ್ಕ ಪಟ್ಟಣದವರು ತಾವು ಮಾಡಿದ್ದ ಕಟ್ಟುಪಾಡನ್ನು ಬಿಟ್ಟು ತಿರುಗಿ ಪಟ್ಟಣದಲ್ಲಿ ಸಂಚಾರ ಮಾಡುವಂತೆ ಮಹಮ್ಮದ ಮೊದಲಾದವರಿಗೆ ಅಪ್ಪಣೆ ಕೊಟ್ಟರು."[೧]

"ಒಂದು ದಿನ ಮಹಮ್ಮದ ಕಾಬಾ ದೇವಾಲಯದ ಪ್ರಕಾರದೊಳಗೆ ಪ್ರವೇಶಿಸಿ, ತಾನು ಅದೂವರೆಗೆ ಮಾಡಿದುದು ತಪ್ಪಾಯಿತೆಂತಲೂ, ಮಕ್ಕಾದಲ್ಲಿ ನೆಲೆಸಿರುವ ಹಲವು ದೇವರು ದೇವಿಯರೂ ನಿಜವಾಗಿದ್ದರೂ ಇರಬಹುದೆಂತಲೂ ಘೋಷಿಸಿದನು. ಈ ಘೋಷಣೆ ಅವನ ವಿರೋಧಿಗಳಲ್ಲಿ ಅಮಿತ ಉತ್ಸಾಹ ಸಂತೃಪ್ತಿಗಳನ್ನುಂಟು ಮಾಡಿತು. ಆದರು ಮಹಮ್ಮದನು ಹಿಂದೆಯೇ ತನ್ನ ವಿಲಕ್ಷಣ ನಡತೆಗೆ ವಿಶೇಷ ಪಶ್ಚಾತಾಪಪಟ್ಟು, ಯಾವುದೋ ಪಿಶಾಚಿಯು ತನ್ನೊಳ ಹೊಕ್ಕು ತನ್ನ ನಾಲಿಗೆಯಿಂದ ಘೋಷಣೆಯ ವಾಕ್ಯಗಳನ್ನು ಆಡಿಸಿತೆಂದು ತನ್ನನ್ನು ತಾನೇ ದೂಷಿಸಿಕೊಂಡನು. ಬಹುದೇವತ್ವವನ್ನು ವಿಗ್ರಹಾರಾಧನೆಯನ್ನೂ ಇನ್ನಷ್ಟು ತೀಕ್ಷ್ಣವಾಗಿ ಖಂಡಿಸಿ ಉಪದೇಶದ ಪರಿಣಾಮವನ್ನು ಹೆಚ್ಚಿಸಿದನು.[೨] ಮುಂದೆ ಏಕದೇವೋಪಾಸನೆಯನ್ನು ಜಾರಿಗೆ ತಂದನು.

ಕಾಬಾದ ಹೆಸರಿನಲ್ಲಿ ಸುತ್ತಮುತ್ತಲಿಂದ ವರ್ಷಕೊಂದಾವರ್ತಿ ಜನರು ತಂಡೋಪ ತಂಡವಾಗಿ ಬಂದು ಆರಾಧನೆ ಮಾಡುತ್ತಿದ್ದರು. ಅಲ್ಲಿ ಹಲವು ದೇವರುಗಳ ಆರಾಧನೆಗೆ ಬೆತ್ತಲೆ ಕುಣಿತಕ್ಕೆ ಅವಕಾಶವಿತ್ತು. ಇಂತಹ ಸಂದರ್ಭದಲ್ಲಿ ತಮ್ಮಲ್ಲಿ ವಿರೋಧಗಳಿದ್ದರು ಎಲ್ಲ ಮರೆತು ಶಾಂತಿ ಸೌಹಾರ್ದ ವಾತಾವರಣ ಕಾಪಾಡಿಕೊಂಡು ಬರುತ್ತಿದ್ದರಿಂದ ಆ ಸಮಯದಲ್ಲಿ ಅಶಾಂತಿಗೆ ಅವಕಾಶ ಇರಲಿಲ್ಲ. ಇಂತಹ ಸಂದರ್ಭದಲ್ಲಿ ಏಕದೇವೋಪಸನೆ ಕುರಿತು ಅಥವಾ ವಿಗ್ರಹಾರಾಧನೆಯನ್ನು ವಿರೋಧಿಸುವುದೆಂದರೆ ಕಾಬಾ ಕಲ್ಲನ್ನು ಗೌರವಿಸುತ್ತಿರುವವರ ಕುರಿತು ವಿರೋಧವಾಗಿ ಮಾತನಾಡಲು ಅಸಾಧ್ಯವಾಗಿತ್ತು. ಹೀಗಾಗಿ ಆ ಕಲ್ಲನ್ನು ಗೌರವಿಸುವ ಪೂಜ್ಯ ಭಾವನೆಯಿಂದ ನಡೆದುಕೊಂಡು ಬರುವ ಸಂಪ್ರದಾಯವನ್ನು ಏನು ಮಾಡುವಂತಿರದೆ ಕೊನೆಗೆ ತನ್ನ ಧರ್ಮ ತತ್ವವನ್ನು ಬದಲಾಯಿಸಿ ಕಾಬಾ ಕಲ್ಲನ್ನು ಗೌರವಿಸಲು ಪೂಜಿಸಲು ಮಹಮ್ಮದ ಒಪ್ಪಿದಂತಿದೆ. ಇದಕ್ಕೆ ಇನ್ನೊಂದು ಬಲವಾದ ಕಾರಣ ಮಹ್ಮದನ ಉಪದೇಶ

೧. ವೇದಕೋಶ, ಹೊ.ಒ., ಪು.೧೮೫
೨. ವಿ.ಮ.ಚಾ.ವಿ. ಮತ್ತು ಸಮನ್ವಯ, ರಾಮನಾಥಯ್ಯ ಕೆ.ಪಿ., ಪು.೧೬೧-೧೬೨

ಹೆಚ್ಚಿದಂತೆಲ್ಲ ಯಹೂದಿಗಳು, ಕ್ರೈಸ್ತರು ಕಾಬಾದ ಕರಿಕಲ್ಲ (ಉಲ್ಕಾಜಾತದ ಕಲ್ಲ)ನ್ನು ಬಹಳವಾಗಿ ತಿರಸ್ಕರಿಸಿ ಮಾತನಾಡಲಾರಂಭಿಸಿದರು. ಇದರಿಂದ ಕಾಬಾದ ದೈವತ್ವದ ಒಲವು ಅಧಿಕವಾಗತೊಡಗಿ ಅದುವರೆಗೆ ಭಕ್ತರು ಜರುಸಲೇಂ ನಗರಕ್ಕೆ ಅಭಿಮುಖವಾಗಿ ಕುಳಿತು ದೇವರನ್ನು ಪ್ರಾರ್ಥಿಸುತ್ತಿದ್ದುದನ್ನು ಬಿಟ್ಟು ಮಕ್ಕಾಕ್ಕೆ ಮುಖಮಾಡಿ ಪ್ರಾರ್ಥಿಸುವುದು ಪ್ರಾರಂಭವಾಯಿತು. ಅಲ್ಲಾ ದೇವರು ಹೆಚ್ಚು ಹೆಚ್ಚಾಗಿ ಅವನ ಅನುಯಾಯಿಗಳಿಗೆ ಮಾತ್ರ ಮೀಸಲಾದ ದೇವರಾದನು. "ಕಾಬಾದ ಕರಿಯ ಕಲ್ಲಿನ ಋಣಾನು ಬಂಧವು ಗಂಟು ಬಿದ್ದ ಮೇಲೆ ಆ ದೇವರು ಜಗತ್ತಿನ ಮಾನವ ಕುಲಕ್ಕೆಲ್ಲ ತಂದೆ ಎಂದಿದ್ದ ಭಾವನೆಯು ಕಡಿಮೆಯಾಗುತ್ತಾ ಬಂತು." ಒಂದು ಅರ್ಥದಲ್ಲಿ ವಿಗ್ರಹಾರಾಧನೆಯನ್ನು ವಿರೋಧಿಸಬೇಕಾಗಿದ್ದ ಧರ್ಮ (ಕ್ರೈಸ್ತ ಧರ್ಮದಂತೆ) ಏಕದೇವೋಪಾಸನೆ ಹೆಸರಿನಲ್ಲಿ ಪೂರ್ವದ ವಿಗ್ರಹಾರಾಧನೆಯ ಸ್ಥಳವಾದ ಮಕ್ಕಕ್ಕೆ ಅದೇ ಕಾಬಾದ ಕರಿಕಲ್ಲಿಗೆ ಇಂದಿಗೂ ಗೌರವ ಪೂಜೆಯನ್ನು ಸಲ್ಲಿಸಿ, ವಿಗ್ರಹಾರಾಧನೆಯನ್ನು ಕೊನೆಗೂ ತಡೆಹಿಡಿಯದೆ ವಿಫಲತೆಯನ್ನು ಅನುಭವಿಸುತ್ತಿದೆ ಎಂದರೆ ತಪ್ಪಾಗಲಾರದು. ಅದರ ಛಾಯೆಯೇ ಸಂತರ ಗೋರಿಗಳ ಪೂಜೆ.

ಮಕ್ಕದಲ್ಲಿ ಅದೇ ಕರಿಕಲ್ಲಿಗೆ ಸುತ್ತಲೂ ನಮಸ್ಕರಿಸಿ ನಮಾಜ ಮಾಡುವುದು. ಒಬ್ಬನೇ ದೇವರಾದ ಅಲ್ಲಾನಿಗೆ ಗೌರವ ಸಲ್ಲಿಸಿದಂತಾಗುತ್ತದೆಯೇ? ದೇವರು ಮೇಲೆ ಆಕಾಶದಲ್ಲಿರುವಾಗ ಕಾಬಾದ ಕಲ್ಲಿಗೆ ಗೌರವ ಏತಕ್ಕೆ? ಎಂಬ ಪ್ರಶ್ನೆಗೆ ಉತ್ತರ ಅರಸುವುದು ಇಂದು ಕಷ್ಟದ ಕೆಲಸ. ಇಸ್ಲಾಂ ಬೋಧನೆಯಲ್ಲಿರುವ ವೈಶಿಷ್ಟ್ಯ ಅದರ ಆಚರಣೆಯಲ್ಲಿಲ್ಲ.

ಬಹುಪತ್ನಿತ್ವಕ್ಕೆ ಅವಕಾಶ ನೀಡಿದ್ದ ಇಸ್ಲಾಂ ಧರ್ಮದ ತತ್ವಗಳು ಇಂದಿಗೂ ಪ್ರಸ್ತುತವೇ? 'ವ್ಯಭಿಚಾರ ಮಾಡುವುದಕ್ಕಿಂತ ಪರಸ್ತ್ರೀಯನ್ನು ಮನಸ್ಸಿನಲ್ಲಿ ಬಯಸುವುದು ಮಾನಸಿಕ ವ್ಯಭಿಚಾರ ಮಾಡಿದಂತೆ' ಎಂದು ಬೋಧಿಸಿದ ಕ್ರಿಸ್ತನೆಲ್ಲಿ, ಆತನ ತರುವಾಯ ಐದು ಶತಮಾನಗಳ ನಂತರ ಅದೇ ಪ್ರವಾದಿ ಪರಂಪರೆಯ ಸಂಬಂಧ ಹೇಳಿಕೊಂಡು ಬಹುಪತ್ನಿತ್ವಕ್ಕೆ ಸಮ್ಮತಿಸಿದ ಇಸ್ಲಾಂ ಧರ್ಮದ (ಪೈಗಂಬರರ) ಬೋಧನೆ ಎಲ್ಲಿ.

"ಈಗಿನ ಸಂಸ್ಕೃತಿಯ ದೃಷ್ಟಿಯಿಂದ ನೋಡಿದರೆ ಹೆಣ್ಣು ಮಕ್ಕಳ ವಿಷಯದಲ್ಲಿ, ಗುಲಾಮರ ವಿಷಯದಲ್ಲಿ, ಏಕದೇವೋಪಾಸನೆಯ ವಿಷಯದಲ್ಲಿಯೂ ಉಪದೇಶ ಅಷ್ಟು ಉತ್ತಕೃಷ್ಟವಲ್ಲವೆಂದು ತೋರಬಹುದು. ಆದರೆ ಆಗಿನ, ಆದೇಶದ ಆ ಸಮಾಜದ ಪರಿಸ್ಥಿತಿಯನ್ನು ಪರಿಗಣಿಸಬೇಕಾಗುತ್ತದೆ. ಆಗ ಅಲ್ಲಿ ಹೆಣ್ಣು ಮಕ್ಕಳು ಹುಟ್ಟುವ ಸಂಖ್ಯೆ ಹೆಚ್ಚಾಗಿತ್ತು. ಅದು ಜನರಿಗೆ ಬೇಕಿರಲಿಲ್ಲ. ಮಾರ್ಗಾಂತರವನ್ನು ಕಾಣದೆ ಹುಟ್ಟಿದ ಮಕ್ಕಳನ್ನು ಜೀವಂತವಾಗಿ ಹೂಳುವುದು ಕೂಡ ವಾಡಿಕೆಯಾಗಿತ್ತು. ಈ ಕರ್ಕಶತನದ ಕಟುಕ ಪದ್ಧತಿಯ ದೃಷ್ಟಿಯಿಂದ ನೋಡಿದರೆ ಮಹಮ್ಮದನ ವ್ಯವಸ್ಥೆಯು

ದಯಾಮಯವಾದುದೆಂದೇ ಹೇಳಬೇಕು. ಹೆಣ್ಣು ಮಕ್ಕಳ ಪ್ರಜಾಬಾಹುಳ್ಯದಿಂದಲೋ ಎಂಬಂತೆ ಒಬ್ಬ ಗಂಡಸು ಅನೇಕ ಹೆಂಗಸರನ್ನು ಮದುವೆಯಾಗ ಬಹುದೆಂತಲೂ ಕ್ರಮವಾದ ಮದುವೆ ಇಲ್ಲದಿದ್ದರೂ ಧರ್ಮ ಗ್ರಂಥಗಳಲ್ಲಿ ಅವಕಾಶವು ಕಲ್ಪಿತವಾಗಿದೆ. ಈ ಬಗೆಯ ವ್ಯವಸ್ಥೆಯು ಈಗಿನ ಸಂಸ್ಕೃತಿಯಲ್ಲಿ ಯೋಗ್ಯವಲ್ಲದಿದ್ದರೂ ಆಗಿನ ಪರಿಸ್ಥಿತಿಯಲ್ಲಿ ಶ್ರೇಯಸ್ಸಿಗೆ ಕಾರಣವಾಗಿತ್ತು. ಈ ಕಾರಣದಿಂದ ಜನಗಳು ಧಾರಾಳವಾಗಿ ಆ ಮತವನ್ನು ಅವಲಂಬಿಸಿದರು. ಮುಂದೆ ಇದೇ ಅವರ ಪಥನಕ್ಕೆ ಕಾರಣವಾಗುತ್ತಾ ಬಂತು."[೧] ಬಹುಪತ್ನಿತ್ವ ಧಾರ್ಮಿಕ ಅನುಮತಿಗೆ ಇನ್ನೊಂದು ಬಲವಾದ ಕಾರಣ. ಸ್ವತಃ ಮಹಮ್ಮದ ಪೈಗಂಬರಿಗೆ ಹಲವು ಪತ್ನಿಯರಿದ್ದುದರಿಂದ ಏಕ ಪತ್ನಿವ್ರತವನ್ನು ಆತನೆ ಬೋಧಿಸಲು ಅಸಮರ್ಥನಾಗಿದ್ದನು.

ಇನ್ನೊಂದು ಬಲವಾದ ಕಾರಣ. ಜಿಹಾದ ಹೆಸರಿನಲ್ಲಿ ಧರ್ಮಯುದ್ಧವು ಅತೀಯಾಗಿ ನಡೆಯುವ ಕಾಲವದು. ಯುದ್ಧದಲ್ಲಿ ಮಡಿಯುವವರ ಸಂಖ್ಯೆ ಅಧಿಕ ಅವರೆಲ್ಲಾ ಪುರುಷರೇ. ಹಾಗಾಗಿ, ಸಮಾಜದಲ್ಲಿ ಪುರುಷ ಸಂಖ್ಯೆ ಕ್ಷೀಣಿಸಿ, ವಿಧವೆಯರ ಸಂಖ್ಯೆ ಹೆಚ್ಚುವುದರಿಂದ ವಿಧವೆಯರಿಗೆ ಇನ್ನೊಬ್ಬ ಪುರುಷ ಆಶ್ರಯ ಸಹಜ. ಇದು ಬಹುಪತ್ನಿತ್ವಕ್ಕೆ ಒಂದು ಕಾರಣವೆನ್ನಬಹುದು.

ದೇವರಿಗೂ ಭಕ್ತರಿಗೂ ನಡುವೆ ಇತರರು (ಪುರೋಹಿತ ವರ್ಗ) ಮಧ್ಯ ಪ್ರವೇಶಿಸಿ ದೇವರ ಅನುಗ್ರಹವನ್ನು ಭಕ್ತರಿಗೆ ದೊರಕಿಸಿಕೊಟ್ಟು ಅವರನ್ನುದ್ಧರಿಸಬೇಕಾದ ಅಗತ್ಯವನ್ನು ತಪ್ಪಿಸಿ, ಭಕ್ತರು ದೇವರನ್ನು ನೇರವಾಗಿ ಪ್ರಾರ್ಥಿಸಿ ತಮ್ಮ ಇಷ್ಟಾರ್ಥವನ್ನು ಸಾಧಿಸಿಕೊಳ್ಳಬಹುದೆಂಬ ವ್ಯವಸ್ಥೆಯನ್ನು ರೂಢ ಮೂಲವಾಗಿ ಮಾಡಿದ ಹೆಚ್ಚುಗಾರಿಕೆಯು ಇಸ್ಲಾಂ ಮತ ಒಂದಕ್ಕೆ ಸಲ್ಲುತ್ತದೆನ್ನುವಲ್ಲಿ ಸಂಶಯವಿಲ್ಲ.

ಕ್ರಿ.ಶ.೫೭೦-೬೩೨ರಲ್ಲಿ ಇಸ್ಲಾಂ ಅಥವಾ ಮಹಮ್ಮದೀಯ ಮತವನ್ನು ಸ್ಥಾಪಿಸಿದವನು ಮಹಮ್ಮದ್ ಪೈಗಂಬರ್. "ಇಸ್ಲಾಂ ಶಬ್ದಕ್ಕೆ ತನ್ನನ್ನು ಈಶ್ವರನಿಗೆ ಒಪ್ಪಿಸಿಬಿಡುವುದು ಎಂದು ಅರ್ಥ." "ಇಸ್ಲಾಂ ಎಂದರೆ ಶರಣು. ಎಂದರೆ ಜಗತ್ತಿಗೆ ಒಬ್ಬನೇ ದೇವರಾದ ಅಲ್ಲಾಹನಿಗೆ ಶರಣು ಹೋಗುವುದು, ವಿನಮ್ರನಾಗಿರುವುದು ಎಂದರ್ಥ." ಲಾ ಇಲಾಹ ಇಲ್ಲಲ್ಲಾಹು ಮಹಮ್ಮದಾರರಸೂಲುಲ್ಲಾಹ ಎಂದರೆ ಅಲ್ಲಹ ಎಂಬ ಪರಮೇಶ್ವರನೊಬ್ಬನ ಹೊರತು ಇನ್ನಾರೂ ಉಪಾಸ್ಯರಿಲ್ಲ. "ಮಹಮ್ಮದನು ಆ ಪರಮೇಶ್ವರ ದೂತನೂ, ಭೃತ್ಯನೂ ಆಗಿರುವನು ಎಂಬುದು ಇಸ್ಲಾಂ ಧರ್ಮದ ಮೂಲ ಸೂತ್ರ."

ಮತಸ್ಥಾಪನೆಯಲ್ಲಿ ಬುದ್ಧನ ಮತ್ತು ಜೀಸಸನ ರೀತಿಗೂ ಮಹಮ್ಮದನ ರೀತಿಗೂ ವ್ಯತ್ಯಾಸವುಂಟು. ಯಾರು ಯಾವ ಹೊಸಮತವನ್ನು ಸ್ಥಾಪಿಸಬೇಕೆಂದರೂ ಸುಲಭವಾಗಿ ಸುಗಮವಾಗಿ ಸ್ಥಾಪಿಸುವುದಕ್ಕೆ ಆಗುವುದಿಲ್ಲ. ಮತಸ್ಥಾಪಕರು ಯಾರೇ ಆದರೂ ಬಹಳ ಶ್ರಮಪಟ್ಟು ಕಷ್ಟನಿಷ್ಠುರಗಳಿಗೊಳಗಾಗಿ ತಮ್ಮ ಮಿತ್ರರಾಗಿದ್ದವರನ್ನೂ ಶತ್ರುಗಳನ್ನಾಗಿ ಮಾಡಿಕೊಂಡು ಸ್ವಪ್ರಯೋಜನದ ಕಡೆಗೆ ಸ್ವಲ್ಪವು ಗಮನಕೊಡದೆ ಕೊನೆಗೆ ಶತ್ರುಗಳನ್ನು ಜಯಿಸಿ, ಕೃತಾರ್ಥರಾಗಬೇಕು. ಇದು ಎಲ್ಲ ಮತಸ್ಥಾಪಕರಿಗೂ ಸಾಮಾನ್ಯವಾಗಿ

೧. ವಿ.ಮ.ಚಾ.ವಿ. ಮತ್ತು ಸಮನ್ವಯ, ರಾಮನಾಥಯ್ಯ ಕೆ.ಪಿ., ಪು.೧೭೪

ಅನ್ವಯಿಸುವ ಮಾತು. ಶತ್ರುಗಳನ್ನು ಜಯಿಸುವ ವಿಧಾನದಲ್ಲಿ ಒಬ್ಬರಿಂದೊಬ್ಬರಿಗೆ ವ್ಯತ್ಯಾಸವುಂಟು. ಬುದ್ಧನು ವಿರೋಧಿಗಳ ವಿಷಯದಲ್ಲಿ ಉದ್ವೇಗಗೊಳ್ಳದೆ ಶಾಂತಮೂರ್ತಿಯಾಗಿ ವಿಷಯಗಳನ್ನು ಚರ್ಚಿಸಿ ಪರಿಶೀಲಿಸಿ ಕರುಣೆಯಿಂದಲೂ ಸಹಾನುಭೂತಿಯಿಂದಲೂ ಅವರನ್ನು ಒಪ್ಪಿಸಿ ಜಯಶಾಲಿಯಾಗುತ್ತಿದ್ದನು. ಜೀಸಸನು ತನ್ನ ಶಾಂತಚಿತ್ತತೆಯಿಮದಲೂ ವಿರೋಧಿಗಳ ಅಪಚಾರದ ಸಹನೆಯಿಂದಲೂ ವಿರೋಧಿಗಳು ತಮ್ಮ ಹಿಂಸಾಚರಣೆಗೆ ತಾವೇ ನಾಚಿಕೊಂಡು ತಿದ್ದಿಕೊಳ್ಳುವಂತೆ ಮಾಡುತ್ತಿದ್ದನು. ಶಾಂತಿ ಸಮಾಧಾನ, ಸಹನೆ, ಸಹಾನುಭೂತಿ ಇವು ಅವನ ಅಸ್ತ್ರಗಳಾಗಿದ್ದವು. ಮಹಮ್ಮದನ ವಿಧಾನವು ಹಾಗಿರಲಿಲ್ಲ. ಯಾರಾದರೂ ಒಂದು ಕೆನ್ನೆಗೆ ಒಂದು ಏಟು ಕೊಟ್ಟರೆ ಎರಡನೆಯ ಏಟನ್ನು ಕೊಡುವುದಕ್ಕೆ ಇನ್ನೊಂದು ಕೆನ್ನೆಯನ್ನು ತೋರಿಸುವುದು ಜೀಜಸನ ಪಂಥವಾದರೆ ಮೊದಲು ತಿಂದ ಒಂದು ಸಾಮಾನ್ಯ ಏಟಿಗೆ ಪ್ರತಿಯಾಗಿ ಹತ್ತು ಬಲವಾದ ಏಟುಗಳನ್ನು ಕೊಟ್ಟು ವಿರೋಧಿಗಳನ್ನು ದಯಾದಾಕ್ಷಿಣ್ಯಗಳಿಲ್ಲದೆ ಮರ್ದನ ಮಾಡುವುದು ಮಹಮ್ಮದನ ಪಂಥ ಕೈಯಲ್ಲಿ ಕತ್ತಿಯನ್ನು ಹಿಡಿದು ಅದರ ಪ್ರಯೋಗದಿಂದಲೇ ಅವನು ಮತವನ್ನು ಬೆಳಸಿದನು.

ಕುರ್ ಆನ್ (ಕೊರಾನ್ -ಖುರಾನ್) ಎಂಬುದು ಮುಸಲ್ಮಾನರ ಪವಿತ್ರ ಗ್ರಂಥ. (೧೧೪ ಸುರಾಗಳೆಂಬ ಅಧ್ಯಾಯಗಳಿರುತ್ತವೆ) ಅವರು ಅದರ ಪಾವಿತ್ರ್ಯತೆಯನ್ನು ಅಕ್ಷರಶಃ ಬಹಳ ಕಟ್ಟುನಿಟ್ಟಾಗಿ ಪಾಲಿಸುತ್ತಾರೆ. ಇದರಲ್ಲಿ ದೇವರು ದಯಪಾಲಿಸಿದ ವಾಕ್ಯಗಳು ಸ್ಪಷ್ಟವಾಗಿರುತ್ತವೆಂದು, ಇದು ಇಸ್ಲಾಂ ಎಂಬ ಬೋಧನೆಗೆ ಮೂಲಾಧಾರವಾಗಿದೆ ಎಂದೂ ಇದರಲ್ಲಿರುವ ಕಟ್ಟಳೆಗಳ ಪ್ರಕಾರ ಸರ್ವ ವಿಧೇಯರಾಗಿ ನಡೆಯಬೇಕೆಂದೂ ಮತ್ತು ಕೈಯನ್ನು ಶುದ್ಧಿ(ಸ್ನಾನ) ಮಾಡಿಕೊಳ್ಳದ ಹೊರತು ಅದನ್ನು ಮುಟ್ಟಬಾರದೆಂದು, ಭಾವಿಸಿ ಅವರು ಅದನ್ನು ಚಾಚೂತಪ್ಪದೆ ಪಾಲಿಸುತ್ತಾ ಬಂದಿರುವರು. ಇದರಲ್ಲಿರುವುದೆಲ್ಲವೂ ದೇವವಾಣಿಯೆಂದು ಅವರ ನಂಬಿಕೆ.

'ಕೂರಾನಿನಲ್ಲಿ ೧೧೪ ಅಧ್ಯಾಯಗಳಿವೆ. ಕೆಲವು ದೊಡ್ಡದಾಗಿಯೂ ಕೆಲವು ಚಿಕ್ಕದಾಗಿಯೂ ಇವೆ. ಅವುಗಳ ಕ್ರಮವು ಉದ್ದವನ್ನು ಅವಲಂಬಿಸಿದೆ. ಎಲ್ಲಕ್ಕಿಂತ ದೊಡ್ಡದು ಮೊದಲು ಬಂದು ಅದಕ್ಕಿಂತ ಚಿಕ್ಕದು ಆಮೇಲೆ, ಹೀಗೆ ಕ್ರಮವಾಗಿ ನಡೆದು, ಎಲ್ಲಕ್ಕಿಂತ ಚಿಕ್ಕ ಅಧ್ಯಾಯವು ಕೊನೆಯದಾಗಿದೆ. ಪ್ರಾಯಶಃ ಕಾಲಕ್ರಮದಲ್ಲಿ ಕೊನೆಯ ಅಧ್ಯಾಯವೇ ಮೊದಲು ಹೇಳಲ್ಪಟ್ಟಿರಬಹುದು. ಅಧ್ಯಾಯಗಳನ್ನು ಕಾಲಕ್ರಮದಂತೆ ವಿಂಗಡಿಸುವುದಕ್ಕೂ ಪ್ರಯತ್ನವು ನಡೆಯಿತು. ಆದರೆ ಫಲವಾಗಲಿಲ್ಲ. ಅದು ಬಹಳ ಕಷ್ಟದ ಕೆಲಸ, ಅನೇಕ ಸಂದರ್ಭಗಳಲ್ಲಿ ಮಹಮ್ಮದನು ಒಂದು ಸಾರಿ ಹೇಳಿದುದನ್ನು ಆ ಮೇಲೆ ಬದಲಾಯಿಸಿಕೊಂಡು ಹೇಳಿರುವುದುಂಟು. ಇಂತಹ ಸಂದರ್ಭಗಳು ೫ ರಿಂದ ೫೦೦ರವರೆಗೂ ಆಗಬಹುದೆಂದು ವ್ಯಾಖ್ಯಾನಕಾರರು ಅಭಿಪ್ರಾಯಪಡುತ್ತಾರೆ. ಇದರಿಂದ ವಿಗ್ರಹಾರಾಧಕರ ವಿಷಯದಲ್ಲಿ ಯಾವ ರೀತಿ ವರ್ತಿಸಬೇಕೆಂಬ ವಿಚಾರದಲ್ಲಿ ಕೂರಾನಿನಲ್ಲಿ ವಿವಿಧ ಸೂಚನೆಗಳಿವೆ. ಕೊನೆಯ ೧೧೪

ಹೇಳಿಕೆಯಿಂದ ಹಿಂದಿನ ಹೇಳೀಕೆಯು ರದ್ದಾಯಿತೆಂದು ತಿಳಿಯಬೇಕೆಂದು ಮಹಮ್ಮದನೇ ಹೇಳಿದ್ದಾನೆ. ಎಚ್ಚರಿಕೆಗಳನ್ನು ಕೊಡುವುದಕ್ಕಾಗಿ ಹೇಳಿರುವ ಅಖ್ಯಾಯಿಕೆಗಳಲ್ಲಿಯೂ, ದೇವದೂತರು ಮತ್ತು ಕಾಲಜ್ಞಾನಿಗಳ ಮಾತಿನಂತೆ ನಡೆಯದಿದ್ದವರಿಗೆ, ದೇವರು ಹೇಗೆ ಶಿಕ್ಷಿಸಿದನೆಂದು ಹೇಳಿರುವ ಉಪವ್ಯಾಖ್ಯಾನಗಳಲ್ಲಿಯೂ ದೇವದೂತರು ಮತ್ತು ಕಾಲಜ್ಞಾನಿಗಳ ಮಾತಿನಂತೆ ನಡೆಯದಿದ್ದವರಿಗೆ ದೇವರು ಹೇಗೆ ಶಿಕ್ಷಿಸಿದನೆಂದು, ಹೇಳಿರುವ ಉಪಾಖ್ಯಾನಗಳಲ್ಲಿಯೂ, ಅನೇಕ ತಪ್ಪುಗಳು ಬಿದ್ದಿವೆ. ಅವನು ಸ್ವತಃ ವಿದ್ಯಾವಂತನಾಗಿರದೆ ಇತರರ ಹೇಳಿಕೆಯ ನೆನಪಿನ ಮೇಲೆ ಹೇಳಿದಾದುದರಿಂದ ಈ ತಪ್ಪುಗಳಿಗೆ ಅವಕಾಶಗಳಾಗಿರಬಹುದು."[೧]

"ಮಹಮ್ಮದನು ಜೀವಂತನಾಗಿರುವಾಗಲೇ ಪ್ರಾಯಶಃ ಎಲ್ಲ ಭಾಗವನ್ನೂ ಬರೆದುದಾಗಿತ್ತು. ಆದರೆ ಎಲ್ಲವನ್ನೂ ಒಂದು ಕಡೆ ಸೇರಿಸಿ ಒಂದು ಕ್ರಮವರಿತು ವಿಂಗಡಿಸಿ ಪ್ರಚುರ ಪಡಿಸಿರಲಿಲ್ಲ. ಈ ಕೆಲಸವನ್ನು ಮಹಮ್ಮದನು ತೀರಿಕೊಂಡ ಮೇಲೆ ಕೈಕೊಂಡರು. ಅಬೂಬಾಕರನ ಆಳ್ವಿಕೆಯಲ್ಲಿ. ನಂತರ ಕೆಲವು ಕಾಲದ ಬಳಿಕ ಹಲವು ಸಂಶಯಗಳು (ಅಪೌರುಶೇಯ ಎಂಬ ಸಿದ್ಧಾಂತ ಹುಟ್ಟಿ) ತಲೆದೋರಿದವು. ತದನಂತರ ಉತ್ಮಾನನ ಆಳ್ವಿಕೆಯಲ್ಲಿ ಬಿಡಿ ಬಿಡಿಯಾಗಿ ಬೇರೆ ಕಡೆ ಚದುರಿ ಹೋಗಿದ್ದ ಭಾಗಗಳನ್ನೆಲ್ಲ ಒಂದು ಕಡೆ ಸೇರಿಸಿ ಪ್ರಕಟಿಸಿದರು. ಉತ್ಮಾನನ ಕಾಲದಲ್ಲಿ ಪ್ರಕಟವಾದ ಗ್ರಂಥವೇ ಇವೊತ್ತಿಗೂ ಅಧಿಕೃತ ಪ್ರಮಾಣ ಗ್ರಂಥವಾಗಿ (ಕುರ್‌ಆನ್) ಪರಿಗಣಿಸಲ್ಪಟ್ಟಿದೆ".[೨]

"ಖೂರಾನ್ ಎಂದರೆ ಓದುವುದೆಂದರ್ಥ. ರಂಜಾನ್ ಮಾಸದ ೨೭ನೇ ರಾತ್ರಿಯಲ್ಲಿ ನಿತ್ಯವಾಗಿದ್ದ ಖೂರಾನ್ ಎಂಬ ಆಗಮನವು ಸಂಪೂರ್ಣವಾಗಿ ಇತರ ಆರು ಆಕಾಶ ಲೋಕಗಳ ಕೆಳಗಿರುವ ಏಳನೆಯ ಲೋಕಕ್ಕೆ ಇಳಿದು ಬಂದಿತೆಂದೂ, ಪ್ರಧಾನ ದೂತನಾದ ಗಬ್ರಿಯೇಲನು ಆದಿಯಿಂದಲೂ ಮಹಮ್ಮದನಿಗೆ ಬೇಕಾಗಿದ್ದ ವಚನಗಳನ್ನು ಆಯಾ ಕಾಲದಲ್ಲಿ ತಿಳಿಸುತ್ತಾ ಬಂದನೆಂದು ಸಂಪ್ರದಾಯವುಂಟು. ಮಹ್ಮದನು ತಾನು ಈ ರೀತಿಯಲ್ಲಿ ತಿಳಿದುಕೊಂಡ ಈ ವಚನಗಳನ್ನು ಜನರಿಗೆ ತಿಳಿಸುತ್ತಾ ಬರುವನು. ಈತನು ದೈವಾದೀನನಾದ ತರುವಾಯ ಇಸ್ಲಾಂ ಮತೀಯರು ಈ ವಚನಗಳನ್ನೆಲ್ಲಾ ಸೇರಿಸಿ ಅವುಗಳನ್ನು ಒಂದೇ ಗ್ರಂಥವಾಗಿ ಸಂಗ್ರಹಿಸಿ ಬರೆದು ಇತರ ಪ್ರತಿಗಳನ್ನೆಲ್ಲಾ ನಾಶ ಮಾಡಿ ಬಿಟ್ಟು, ಈಗಿರುವ ಖೂರಾನೆಂಬುದನ್ನು ಬರೆದರು."[೩] ಮೂಲ ಪ್ರತಿಗಳನ್ನು ನಾಶಮಾಡುವ ಅವಶ್ಯಕತೆಯಾದರು ಏನು? ಮೂಲದಿಂದ ಕೆಲವು ಬದಲಾವಣೆ ಮಾಡಿದುದರಿಂದ ಮೂಲ ಪ್ರತಿಗಳ ನಾಶ ಅವಶ್ಯಕವೆಂದು ಅವರು ಭಾವಿಸಿದಂತಿದೆ. ಇದಲ್ಲದೆ, ಯಹೂದಿ ಹಾಗೂ ಕ್ರೈಸ್ತಧರ್ಮದಲ್ಲಿದ್ದ ಭಿನ್ನಾಭಿಪ್ರಾಯಗಳು ಬಹುವಾಗಿ ಬೆಳೆದು ನಿಂತಿದ್ದವು. ಕ್ರಿಸ್ತನು ಶಿಲುಬೆ ಮೇಲೆ ಮರಣ ಹೊಂದಿದ್ದು ಸತ್ತು ಮೂರು ದಿನದ ಮೇಲೆ ಎದ್ದು

೧. ವಿ.ಮ.ಚಾ.ವಿ. ಮತ್ತು ಸಮನ್ವಯ, ರಾಮನಾಥಯ್ಯ ಕೆ.ಪಿ., ಪು.೧೭೭

೨.ಅದೇ, ಪು.೧೭೬

೩. ವೇದಕೋಶ, ಭಾಗ ೨, ಪು.೩೮೭

ಬಂದಿದ್ದು, ಕ್ರೈಸ್ತರು ಇದನ್ನೆ ತಮ್ಮ ಧರ್ಮ ಪ್ರಸಾರಕ್ಕಾಗಿ ಅಧಿಕವಾಗಿ ಬಳಸುತ್ತಿರುವುದು, ಇವೇ ಮೊದಲಾದ ವಿಷಯಗಳು ಭಿನ್ನಾಭಿಪ್ರಾಯಕ್ಕೆ ರಾಸವಾಗಿತ್ತು. ಕ್ರಿಸ್ತನ ಕುರಿತು ಪ್ರವಾದಿ ಮಹಮ್ಮದರಿಗೆ ಯಾವ ಭಾವನೆ ಇತ್ತೋ ಆದರೆ ಅನಂತರದ ದಿನಗಳಲ್ಲಿ 'ಕುರ್ ಆನ್ ' ಒಂದು ರೂಪ ತಳೆಯುವಾಗ ಮಹಮ್ಮದರ ವಿಚಾರಗಳೆಲ್ಲಾ ಯಥಾ ಸ್ಥಿತಿಯಲ್ಲಿಯೇ ಉಳಿದು ಬಂದಿರುವಲ್ಲಿ ಸ್ಪಷ್ಟತೆ ಕಂಡುಬರುವುದಿಲ್ಲ. ಮಹಮ್ಮದರ ತರುವಾಯ ಎರಡು ಪಂಗಡಗಳಾಗಿ ಬೆಳೆದು ಮೂಲ ವಿಚಾರ ಇಬ್ಬಾಗವಾಗಿದ್ದು ಕಂಡು ಬರುತ್ತದೆ. ಅಳಿಯನ ಧರ್ಮ - ಅನುಯಾಯಿಗಳ ಧರ್ಮ ಎಂದು ಎರಡಾಯಿತು.

ಮಹಮ್ಮದನು, ಭಕ್ತಿ-ಪದ್ಧತಿಗಳು, ಮತಾಚಾರಗಳು, ತಾನು ನ್ಯಾಯ ತೀರ್ಪು ಮಾಡಿದ ಹಲವು ವಿಷಯಗಳು, ಇವೇ ಮೊದಲಾದವುಗಳನ್ನು ಕುರಿತು ಹೇಳಿದ ಮಾತುಗಳನ್ನು ಆತನ ಶಿಷ್ಯರು ನೆನಪಿನಲ್ಲಿಟ್ಟುಕೊಂಡು, ಅವುಗಳನ್ನು ತಮ್ಮ ಹಿಂಬಾಲಕರಿಗೆ ತಿಳಿಸುತ್ತ ಬಂದರು. ಈ ಮಾತುಗಳಿಗೆ ಸಂಪ್ರದಾಯವೆಂಬ ಅರ್ಥವುಳ್ಳ 'ಹದಿತ್' ಎಂದು ಹೆಸರು. ಈ ಸಂಪ್ರದಾಯದಲ್ಲಿ ಸಹಜವಾದ ಭಕ್ತಿಯನ್ನು ಕುರಿತೂ ಒಳ್ಳೆಯ ಕ್ರಮವನ್ನು ಕುರಿತೂ ತಿಳಿಯಪಡಿಸುವ ಗ್ರಂಥಕ್ಕೆ 'ಸುನ್ನ' ಎಂದು ಹೆಸರು. ಖೊರಾನ ಮಹಮ್ಮದಿಯ ಮತಕ್ಕೆ ಹೇಗೆ ಮೂಲಾಧಾರವಾಗಿದೆಯೋ ಹಾಗೆಯೇ 'ಸುನ್ನ' ಎಂಬೀ ಗ್ರಂಥವು ಅದಕ್ಕೆ ಎರಡನೆಯ ಆಧಾರವಾಗಿರುತ್ತದೆ. ಸಾಂಪ್ರದಾಯಿಕತ್ವವನ್ನು ಒಳಗೊಂಡ ಸುನ್ನ ಪದದಿಂದ ಸುನ್ನಿ ಪದ ಉತ್ಪತ್ತಿಗೊಂಡಿರಬಹುದು.

"ಈ ಧರ್ಮದ ಅನುಯಾಯಿಗಳಲ್ಲಿ ಪ್ರಮುಖವಾಗಿ ಎರಡು ಬಗೆಯಾಗಿ ಕಾಣುತ್ತೇವೆ. ಪೈಗಂಬರರ ಅಂತ್ಯ ಪ್ರವಾದಿತ್ವವನ್ನೂ ನಾಯಕತ್ವವನ್ನೂ ಅನುಸರಿಸಿ ಬರುವವರು 'ಸುನ್ನಿ' ಪಂತದವರು. ಪೈಗಂಬರ ನಂತರ ಇವರ ಸಂತಾನದಲ್ಲೇ ಮತ್ತೊಂದು ನಾಯಕತ್ವವನ್ನು ಆರಿಸಿದ ವರ್ಗ ಷಿಯಾ".[೧] ಹೀಗೆ ಎರಡು ವರ್ಗಗಳಾಗಿ ಬೆಳೆದು ನಿಂತಿದೆ.

"ಇಸ್ಲಾಂ ಧರ್ಮ ಅನುಯಾಯಿಗಳಲ್ಲಿ ಷಿಯಾ ಮತ್ತು ಸುನ್ನಿ ಎಂಬ ಎರಡು ಮುಖ್ಯ ವರ್ಗ (ಪಂಗಡ)ಗಳು ಇವೆ. "ಇವರೀರ್ವರ ನಡುವಿನ ಧಾರ್ಮಿಕ ಭಿನ್ನಾಭಿಪ್ರಾಯವು ಕುರಾನಿನ ಪ್ರವಾದಿ ಮಹಮ್ಮದ ಮತ್ತು ಹದೀಸ್‌ಗಳ ಅರ್ಥಪರಂಪರೆಗೆ ಸಂಬಂಧಿಸಿದುದಾಗಿದೆ. ಇದು ಪ್ರವಾದಿ ಮಹಮ್ಮದನ ಚಿಂತನೆ ಮತ್ತು ಕ್ರಿಯಾಚರಣೆಗಳನ್ನು ಅರ್ಥೈಸುವ ಧರ್ಮಶಾಸ್ತ್ರವಾಗಿದೆ. ಎರಡೂ ಪಂಗಡಗಳಿಗೆ ಒಂದೇ ಕುರಾನ್ ಇರುವುದಾದರೂ ಅವುಗಳ ಹದೀಸ್ ಬೇರೆ ಬೇರೆಯಾಗಿರುವುದರಿಂದ ಮಹಮ್ಮದನ ಬಳಿಕದ ತತ್ವಗಳು ಬದಲಾವಣೆಯಾಗುತ್ತವೆ. ಸುನ್ನಿಗಳ ಪ್ರಕಾರ ಮಹಮ್ಮದನು ಯಾವುದೇ ಉತ್ತರಾಧಿಕಾರಿಯನ್ನು ನೇಮಿಸಿಲ್ಲ. ಇದನ್ನು ಅವನು 'ಉಮ್ಮಾ'ಗಳಲ್ಲಿ ಗಣ್ಯರಾದವರ ವಿವೇಕಕ್ಕೆ ಬಿಟ್ಟಿದ್ದಾನೆ. ಶಿಯಾಗಳ ಪ್ರಕಾರ ಪ್ರವಾದಿ ಮಹಮ್ಮದನು ಶ್ರದ್ಧಾಳುಗಳ ಪ್ರವಾದಿಗಳಲ್ಲೇ ಉತ್ತಮೋತ್ತಮವಾಗಿರುವುದರಿಂದ ದೇವರು ಮತ್ತು ಜನರ ನಡುವೆ ಮಧ್ಯವರ್ತಿಯೊಬ್ಬನನ್ನು ನಿರಾಕರಿಸಲಿಲ್ಲ. ಆದುದರಿಂದ ಶಿಯಾಗಳು

ಮಹಮ್ಮದನ ಅಳಿಯ ಆಲಿಯೇ ಮೊದಲ 'ಇಮಾಮ್' ಆಗಿದ್ದಾನೆ ಎಂದು ವಾದಿಸುತ್ತಾರೆ. ಅವರ ತೀರ್ಮಾನ ಮತ್ತು ಧಾರ್ಮಿಕ ಆಚರಣೆಗಳು ಅವರವರ ಇಮಾಮ್‌ನ ಬೋಧನೆಗನುಗುಣವಾಗಿ ನಡೆಯುತ್ತವೆ".[೧]

ಒಟ್ಟು ಏಕದೇವೋಪಾಸನೆ ಮತ್ತು ಪ್ರವಾದಿ ಮಹಮ್ಮದನ ಧಾರ್ಮಿಕ ಗುರಿಗಳನ್ನು ನಂಬಿಕೆಗಳ ಕ್ರಿಯಾಚಾರಣೆಯಲ್ಲಿ ಪರಿಗಣಿಸಲಾಗಿದೆ. ಅಲ್ಲಾಹನೊಬ್ಬನೇ ದೇವರು ಮತ್ತು ಮಹಮ್ಮದ ಆತನ ಪ್ರವಾದಿ. ದಿನದಲ್ಲಿ ಐದು ಸಲ ಮುಸ್ಲಿಮರು ಮಕ್ಕಾದ ಕಡೆಗೆ ಮುಖ ಮಾಡಿ (ಮೊದಲು ಯಿರೂಸಲೇಮ್ ಕಡೆ ಮುಖ ಮಾಡುತ್ತಿದ್ದರೆಂದು ಕಂಡುಬರುತ್ತದೆ) ನಿರ್ದಿಷ್ಟವಾದ ರೀತಿಯಲ್ಲಿ ಪ್ರಾರ್ಥನೆಯನ್ನು ಸಲ್ಲಿಸಲು ಸಾಮೂಹಿಕವಾಗಿ ಸೇರಬೇಕು. ಶುಕ್ರವಾರದ ಸಾಮೂಹಿಕ ಪ್ರಾರ್ಥನೆಯು ಸಾರ್ವಜನಿಕವಾದುದು. ಈ ಸಾಮೂಹಿಕ ಪ್ರಾರ್ಥನೆಯು ಅರಸರೂ, ಖಾಸಗಿ ವ್ಯಕ್ತಿಗಳೂ ಮಸೀದಿಗಳನ್ನು ಕಟ್ಟಿಸುವಂತೆ ಪ್ರೇರೇಪಿಸಿತು. ಇನ್ನೊಂದು ನಿಯಮವೆಂದರೆ ಮುಸ್ಲಿಂರಾದವರು ತಮ್ಮ ಆಸ್ತಿಯ ಒಂದು ನಿರ್ದಿಷ್ಟ ಭಾಗವನ್ನು ಭಿಕ್ಷೆಯಾಗಿ ನೀಡಬೇಕು ಎನ್ನುವುದು. ಮುಸ್ಲಿಮರ ಕಾಲ ಗಣನೆಯ ಪ್ರಕಾರ ಒಂಭತ್ತನೇಯ ತಿಂಗಳಲ್ಲಿ ಬರುವ 'ರಮ್ ಜಾನ್' ಹಬ್ಬವನ್ನು ಆಚರಿಸಬೇಕು. ಈ ತಿಂಗಳಲ್ಲೇ 'ಕುರಾನ್ ' ಗ್ರಂಥವು ಅವತೀರ್ಣವಾದುದರಿಂದ ಅದು ಮುಂಜಾನೆಯಿಂದ ಸಂಜೆಯವರೆಗೆ ತಿನ್ನುವುದಾಗಲೀ, ಕುಡಿಯುವುದಾಗಲೀ ನಿಷಿದ್ಧ. ಇಸ್ಲಾಂ ಧರ್ಮದ ಅನುಯಾಯಿಗಳು ಆತನ ಜೀವಮಾನದಲ್ಲಿ ಒಮ್ಮೆಯಾದರೂ ಮಕ್ಕಾ ಯಾತ್ರೆಯನ್ನು (ಹಜ್)* ಕೈಗೊಳ್ಳಬೇಕು. ಶುಕ್ರವಾರವು ನಮಾಜಿನ ವಿಶೇಷ ದಿನ ಹಾಗೂ ಪವಿತ್ರದಿನ.

ಈ ಮತದಲ್ಲಿ ಹಲವು ಮುಖ್ಯಾಂಶಗಳು ವ್ಯಕ್ತವಾಗುತ್ತವೆ. ದೃಷ್ಟಾಂತವಾಗಿ "ಒಂದು ಕಾಲದಲ್ಲಿ ಪ್ರಧಾನ ದೂತನಾದ ಗೆಬ್ರಿಯೇಲನು ಮಾನವ ರೂಪವನ್ನು ಧರಿಸಿಕೊಂಡು ಮಹಮ್ಮದನ ಬಳಿಗೆ ಬಂದು ಶಿಷ್ಯನಂತಿದ್ದು ಕೆಲವು ಪ್ರಶ್ನೆಗಳನ್ನು ಕೇಳಿದನಂತೆ. ಅವುಗಳು ಯಾವುವೆಂದರೆ

೧. ದೇವರು ಕಳುಹಿಸಿಕೊಟ್ಟ ಅಪೊಸ್ತಲನಾದ ಮಹಮ್ಮದನೇ ಮಹಮ್ಮದೀಯ ಮತ(ಇಸ್ಲಾಂ) ಎಂದರೇನು? ಅದಕ್ಕೆ ಮಹಮ್ಮದನು, ದೇವರು ಒಬ್ಬನೆಯಾಗಿದ್ದಾನೆಂದೂ ಆತನು ನನ್ನನ್ನು ಕಳುಹಿಸಿಕೊಟ್ಟಿದ್ದೆಂದೂ, ಅರಿಕೆ ಮಾಡುವುದೂ ನಿಯಾಮಕವಾದ ಜಪಗಳನ್ನು ಕ್ರಮದ ಮಾಸದಲ್ಲಿ ಉಪವಾಸ ಮಾಡುವುದೂ, ಮಕ್ಕ ಪಟ್ಟಣಕ್ಕೆ ಪ್ರಯಾಣ ಮಾಡುವುದೂ ಇವುಗಳೇ ಮಹಮ್ಮದೀಯ

೧.ಧರ್ಮ, ರಹಮತ್ ತರೀಕೆರೆ, ಪು.೨೯೩

* ಇಂದಿಗೂ ಹಜ್ ನಡೆದುಕೊಂಡು ಬರುತ್ತಿದೆ. ಅಂದು ಕಾಬಾಕಲ್ಲಿಗೆ ಬಲಿಅರ್ಪಣೆ, ಕುಡಿಕತನ, ದುಂದೌತಣ ನಡೆಯುತ್ತಿತ್ತು. ಆದರೆ ಇಂದಿಗೂ ಪ್ರತಿವರ್ಷ ಅನಾಹುತಗಳ ನೆಪದಲ್ಲಿ ನರಬಲಿ ಆಗುತ್ತಿರುವುದನ್ನು ಗಮನಿಸಬಹುದು.

ಮತ ಧರ್ಮಗಳೆಂದು ಹೇಳಿದನು. ಅದಕ್ಕೆ ಗಬ್ರಿಯೇಲನು ಇದೆಲ್ಲಾ ಸರಿಯೆಂದು ಹೇಳಿ ಇನ್ನೊಂದು ಪ್ರಶ್ನೆಯನ್ನು ಕೇಳಿದನಂತೆ.

೨. ಇಮಾನ್ ಎಂದರೇನು? ಅದಕ್ಕೆ ಮಹಮ್ಮದನು - ದೇವರು, ದೇವದೂತರು. ದೇವರು ಅನುಗ್ರಹಿಸಿದ ಆಗಮಗಳು, ಪ್ರವಾದಿಗಳು ನ್ಯಾಯತೀರ್ವಿಕೆಯ ದಿನ ದೇವರು ಮುಂದಾಗಿ ವಿಧಿಸಿದ ವಿಧಿಯು ಇವರನ್ನೂ ಇವುಗಳನ್ನೂ ಮನಸ್ಸಿನಲ್ಲಿ ಸ್ವೀಕಾರ ಮಾಡಿಕೊಳ್ಳುವುದೇ ಎಂದು ಹೇಳಿದನು. ಅದಕ್ಕೆ ಗೆಬ್ರಿಯೇಲನು ಇದೆಲ್ಲಾ ಸರಿಯೆಂದು ಹೇಳಿ ಕಡೆಯಲ್ಲಿ ಮತ್ತೊಂದು ಪ್ರಶ್ನೆಯನ್ನು ಕೇಳಿದನಂತೆ.

೩. ಇಹಷಾನ್ ಎಂಬುದು ಏನು? ಅದಕ್ಕೆ ಮಹಮ್ಮದನು - ನಾವು ದೇವರನ್ನು ನೋಡದಿದ್ದರೂ ಆತನು ನಮ್ಮನ್ನು ನೋಡುತ್ತಿದ್ದಾನೆಂದು, ನಾವು ತಿಳಿದುಕೊಂಡು ಆತನನ್ನು ಮುಖಾಮುಖಿಯಾಗಿ ಕಂಡಂತೆ ಆರಾಧನೆ ಮಾಡುವುದೇ ಇಹಷಾನ್ ಎಂದು ಉತ್ತರಕೊಟ್ಟನಂತೆ. ಇದನ್ನೆಲ್ಲಾ ನೋಡಿದರೆ ಮಹಮ್ಮದನು ಉಪದೇಶ ಮಾಡಿದ ಮತವೇ ಇಸ್ಲಾಮ್ ಮತವೆಂದೂ, ಮಹಮ್ಮದನು ಬೋಧನೆ ಮಾಡಿದವುಗಳನ್ನು ನಂಬುವುದೇ ಇಮಾನ್ ಎಂದೂ, ಭಯಭಕ್ತಿ ಉಳ್ಳವರಾಗಿರುವುದೇ ಇಹಷಾನ್ ಎಂದೂ ನಾವು ಸಂಕ್ಷೇಪವಾಗಿ ಹೇಳಬಹುದು.

ಭಕ್ತಿಯ ದೃಷ್ಟಿಕೋನ ಇಸ್ಲಾಂ ಮತದಲ್ಲಿ

ಇಸ್ಲಾಂ ಧರ್ಮ ಜ್ಞಾನಕ್ಕೆ ಅತ್ಯಂತ ಮಹತ್ವವನ್ನು ನೀಡಿದೆ. "ಜ್ಞಾನವನ್ನು ಸಂಪಾದಿಸು, ಸರಿ ತಪ್ಪುಗಳನ್ನು ಗುರುತಿಸಲು ಇದರಿಂದ ನಿಮಗೆ ಸಾಧ್ಯವಾಗುತ್ತದೆ. ನೀವು ಏಕಾಕಿಯಾಗಿರುವಾಗ ಜ್ಞಾನವೇ ನಿಮ್ಮ ಸಮಾಜ, ಇದೇ ನಿಮ್ಮ ಸಂಗತಿ". ಇದು ಪ್ರವಾದಿ ಮಹಮ್ಮದನ ಮುಖ್ಯ ಉಪದೇಶಗಳಲ್ಲಿ ಒಂದು. ಒಬ್ಬ ಮುಸ್ಲಿಂ ಪಡೆದಿರಬೇಕಾದ ಜ್ಞಾನ ಪರಮಾತ್ಮನು ಒಬ್ಬನೇ ಎಂಬ ಅರಿವು. ಈ ಏಕೈಕ ಪರಮಾತ್ಮನನ್ನು ಪ್ರಾರ್ಥಿಸುವುದೇ ಮಾನವನ ಮುಖ್ಯ ಕರ್ತವ್ಯವೆಂದು ಪವಿತ್ರ ಕುರಾನ್ ಸಾರುತ್ತದೆ. ಹೀಗೆ ಜೀವನದುದ್ದಕ್ಕೂ ಪರಮಾತ್ಮನನ್ನು ಪ್ರಾರ್ಥಿಸಲು ಭಕ್ತನೊಬ್ಬನು ಆಚರಿಸಬೇಕಾದ ಭಕ್ತಿಯ ವಿವಿಧ ಪ್ರಕಾರಗಳನ್ನು ಕುರಾನ್ ಬೋಧಿಸುತ್ತದೆ. ಅವುಗಳಲ್ಲಿ ಮುಖ್ಯವಾದುದು ಅಲ್ಲಾನ ನಿರಂತರ ಸ್ಮರಣೆ. ಜಿಕ್ರ ಅಥವಾ ಸ್ಮರಣೆ ಎಂಬ ಪದ ಇಸ್ಲಾಂ ಧರ್ಮದಲ್ಲಿ ವಿಶಾಲವಾದ ಅರ್ಥವನ್ನು ಪಡೆದಿದೆ. ಅತ್ಯಂತ ಅಲ್ಪಕಾಲದ ಚಿಂತನೆಯಿಂದ ಹಿಡಿದು ನಿರಂತರ ಪರಮಾತ್ಮನ ಸ್ಮರಣೆಯಿಂದ ಭಗವಂತನ ಸಾಕ್ಷಾತ್ ದರ್ಶನದವರೆಗೂ ಅದರ ಅರ್ಥವ್ಯಾಪ್ತಿ ಇದೆ. ಅಲ್ಲಾನ ಸ್ಮರಣೆಯಿಂದ ನಿನ್ನ ಮನಸ್ಸು ತಿರುಗದಿರಲಿ ಎಂದು ಹೇಳುವ ಕುರಾನ್ ಪ್ರತಿ ಪಂಕ್ತಿಯಲ್ಲೂ ಭಗವಂತನ ನಿರಂತರ ಸ್ಮರಣೆಯನ್ನು ವಿಧಿಸುತ್ತದೆ.

ನಿಜವಾದ ಅರ್ಥದಲ್ಲಿ ಮುಸ್ಲಿಂ ಎಂದು ಪರಿಗಣಿತರಾಗಬೇಕಾದರೆ ಭಕ್ತರು ಪಾಲಿಸಬೇಕಾದ ಕೆಲವು ಕನಿಷ್ಠ ಅಗತ್ಯಗಳನ್ನು ಇಸ್ಲಾಂ ಧರ್ಮ ವಿಧಿಸುತ್ತದೆ. ಇವನ್ನು ಇಸ್ಲಾಂ ಧರ್ಮವು ಹೇಳುವ

ಭಕ್ತಿಯ ವಿವಿಧ ಪ್ರಕಾರಗಳೆಂದು ಪರಿಗಣಿಸಬಹುದು. ಅವುಗಳಲ್ಲಿ ಒಂದು ಅಲ್ಲಾನನ್ನು ಬಿಟ್ಟರೆ ಬೇರೆ ದೇವರಿಲ್ಲ. ಮಹಮ್ಮದನೆ ಅಲ್ಲಾನ ದೂತ (ಲಾ ಇಲಾಹ ಇಲ್ಲಲ್ಲಾಹ ಮಹಮ್ಮದರ ಸೂಲಲ್ಲಾಹ) ಎಂಬ ವಿದ್ಯುಕ್ತವಾದ ಘೋಷಣೆ. ಇದಲ್ಲದೆ ಹಗಲು ಮತ್ತು ರಾತ್ರಿ ನಡುವೆ ಬಿಡುವಿರುವ ನಿರ್ದಿಷ್ಟ ಕಾಲಗಳು. ಹೀಗೆ ಒಟ್ಟು ಐದು ಕಾಲಗಳಲ್ಲಿ ಮುಸ್ಲಿಮರು ನಮಾಜು ಮಾಡಲೇಬೇಕು. ಪ್ರತಿವರ್ಷ ರಂಜಾನ್ ತಿಂಗಳು ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ಉಪವಾಸ ಮಾಡಬೇಕು. ತಮ್ಮ ಆದಾಯದ ೪೦ನೇ ಒಂದು ಭಾಗವನ್ನು(೧೦ನೇ ಒಂದು ಭಾಗ ಕ್ರೈಸ್ತರು) ಬಡಬಗ್ಗರಿಗೆ ದಾನ ಮಾಡಬೇಕು. ತನ್ನ ಜೀವನದಲ್ಲಿ ಕನಿಷ್ಟಪಕ್ಷ ಒಮ್ಮೆಯಾದರೂ ಹಜ್ ಯಾತ್ರೆಯನ್ನು ಮಾಡಬೇಕು".[೧] ಈ ಎಲ್ಲ ಭಕ್ತಿಯ ಆಚರಣೆಯನ್ನು ಅವರು ಕಡ್ಡಾಯವಾಗಿ ಅರಬ್ಬಿ ಭಾಷೆಯಲ್ಲಿಯೇ ಉಚ್ಚರಿಸಬೇಕೆಂಬ ಕುರಾನ್ ಆದೇಶವು ಒಂದೇ ಒಗ್ಗಟ್ಟನ್ನು ತರಲು ಕಾರಣವಾಗಿದೆ.

ಇಸ್ಲಾಂ ಧರ್ಮದಲ್ಲಿ ಸಾವು ಆತ್ಮ ಮತ್ತು ಪುನರ್ಜನ್ಮ

ಆತ್ಮತತ್ವದ ಬಗ್ಗೆ ಇಸ್ಲಾಂ ಧರ್ಮಾನುಯಾಯಿಗಳಲ್ಲಿ ಮತ ಬೇಧವಿದೆ. ಸಂಪ್ರದಾಯವಾದಿಗಳು, ದೇವತಾ ಶಾಸ್ತ್ರಿಗಳು, ತತ್ವಶಾಸ್ತ್ರಜ್ಞರು ಮತ್ತು ಸೂಫಿಗಳು ಕುರಾನನ್ನು ಆಧರಿಸಿಯೇ ಆತ್ಮದ ಸ್ವರೂಪವನ್ನು ಬೇರೆ ಬೇರೆಯಾಗಿ ತಿಳಿಸುತ್ತಾರೆ. ಅರಬ್ಬೀ ಭಾಷೆಯಲ್ಲಿನ 'ರೂಹ್' ಮತ್ತು 'ನಫ್ಸ್' ಕುರಾನಿನಲ್ಲಿ ಬೇರೆ ಬೇರೆ ಅರ್ಥಗಳಲ್ಲಿ ಬಳಸಲಾಗಿದೆ. ರೂಹ್ ಅನ್ನುವುದು ದೇವರಿಂದ ಹೊರಡುವ ಆತ್ಮವೆಂದೂ, 'ನಫ್ಸ್' ಅನ್ನುವುದು ಮನುಷ್ಯನ ಆತ್ಮವೆಂದು ತಿಳಿಯಲಾಗಿದೆ. 'ರೂಹ್' ಅನ್ನುವುದಕ್ಕೆ ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ಅರ್ಥ ಬರುತ್ತದೆ. ಅದು ದೇವರ ಸೃಜನಾತ್ಮಕ ಉಸಿರು. ದೇವರು ಮಣ್ಣಿನಿಂದ ಮಾನವನನ್ನು ಸೃಷ್ಟಿಸಿ ತನ್ನ ಉಸಿರನ್ನು ಅವನಲ್ಲಿ ಊದುವುದರಿಂದ ಜೀವಂತಗೊಳಿಸುತ್ತಾನೆ. ಪ್ರವಾದಿ ಮಹತ್ಮದನ ಹೃದಯದೊಳಗೆ ದೇವರು ತಮ್ಮ ಆತ್ಮವನ್ನು ದೂತನಾಗಿ ಕಳಿಸುತ್ತಾನೆ. 'ರೂಹ್' ಅಂದರೆ ಪವಿತ್ರಾತ್ಮನನ್ನು ಕಳಿಸುತ್ತಾನೆ. 'ರೂಹ್' ಅಂದರೆ ದೇವರ ಆಜ್ಞೆಯೂ ಹೌದು. 'ನಫ್ಸ್' ಅಂದರೆ ಮನುಷ್ಯರ ಆತ್ಮ, ದೇವರ ಆತ್ಮ ಅಲ್ಲ. ಆದರೆ ಮನುಷ್ಯನ ಆತ್ಮವು ದೇವರ ಆತ್ಮಕ್ಕೆ ಸಂಬಂಧಪಟ್ಟಿರುತ್ತದೆ. ಏಕೆಂದರೆ ಮನುಷ್ಯನಿಗೆ ಜೀವಕೊಡುವುದು ದೇವರೆ. ಪವಿತ್ರ ಕುರಾನಿನಲ್ಲಿ 'ಜೀವನ' ಮತ್ತು ಆತ್ಮನ ಸಮೀಕರಣ ನಿಖರವಾಗಿ ಕಂಡುಬರುವುದಿಲ್ಲ. ಹಾಗೆ ಆತ್ಮವು ಭೌತಿಕವೋ ಅಭೌತಿಕವೋ ಅನ್ನುವುದು ಸಹ ಸ್ಪಷ್ಟವಾಗಿಲ್ಲ. ಆದರೆ ಪವಿತ್ರ ಕುರಾನಿನಲ್ಲಿ ಆತ್ಮನ ನೈತಿಕತೆ ಮತ್ತು ಆಧ್ಯಾತ್ಮಿಕತೆಗೆ ಹೆಚ್ಚು ಒತ್ತು ಕೊಟ್ಟಿದ್ದಾರೆ.

ಸಾವಿನ ಜೊತೆಗೆ ಆತ್ಮವು ದೇಹವನ್ನು ಬಿಡುತ್ತದೆ. ಅಖಿರತ್ ಎಂದು ಕರೆಯಲಾಗುವ ಕೊನೇ ತೀರ್ಮಾನದ ದಿವಸ(Judgement Day) ಅದು ಮತ್ತೆ ಶರೀರವನ್ನು ಸೇರುತ್ತದೆ. ನಂತರ ಸತ್ಪುರುಷರು

೧.ಧರ್ಮ, ರಹಮತ್ ತರೀಕೆರೆ, ಪು.೨೬೦

ಸ್ವರ್ಗಕ್ಕೂ ದುಷ್ಟರು ಮತ್ತು ಪಾಪಿಗಳು ನರಕಕ್ಕೂ ಹೋಗುತ್ತಾರೆ. ಆ ದೀವಸದವರೆಗೆ ಆತ್ಮಗಳು ಶಿಕ್ಷೆಯನ್ನು ಅಥವಾ ಸುಖವನ್ನು ಅನುಭವಿಸುತ್ತಾರೆನ್ನುವುದನ್ನು ಕುರಾನ್ ತಿಳಿಸುತ್ತದೆ.[೧]

ಸಾವು

ಕುರಾನ್‌ನ ಪ್ರಕಾರ ಪ್ರತಿಯೊಬ್ಬರು ಸಾವನ್ನಪ್ಪಲೇ ಬೇಕು ಯಾರು ಯಾವಾಗ ಸಾಯಬೇಕೆನ್ನುವುದು ಮೊದಲೇ ನಿಶ್ಚಿತವಾಗಿರುತ್ತದೆ. ಸಂಪ್ರದಾಯದ ಪ್ರಕಾರ ಮನುಷ್ಯರು ಸಾವನ್ನು ಬಯಸುವುದನ್ನು ನಿಷಿದ್ಧವೆಂದು ಹೇಳಿದ್ದಾರೆ. ಸಾವು ಮುಂದಿನ ಸುಸ್ಥಿತಿಗೆ ಅಥವಾ ದುಃಸ್ಥಿತಿಗೆ ಕಾರಣವಾಗುತ್ತದೆ.

ಪುನರ್ಜನ್ಮ

ಒಂದು ದೇಹವನ್ನು ತೊರೆದು ಮತ್ತೊಂದು ದೇಹದಲ್ಲಿ ಜನ್ಮವನ್ನು ಹೊಂದಿದರೆ ಅದು ಪುನರ್ಜನ್ಮವೆನಿಸುತ್ತದೆ. ಸಾಮಾನ್ಯವಾಗಿ ಆತ್ಮಗಳು ಮನುಷ್ಯರಾಗಿ, ಪ್ರಾಣಿಗಳಾಗಿ ಅಥವಾ ಕೆಲವೊಮ್ಮೆ ದೇವತೆಗಳಾಗಿ, ರಾಕ್ಷಸರಾಗಿ, ಸಸ್ಯಗಳಾಗಿ ಮತ್ತು ನಕ್ಷತ್ರಗಳಾಗಿಯೂ ಹುಟ್ಟಬಹುದು. ಪುನರ್ಜನ್ಮ ತತ್ವವು ಪ್ರಾಚೀನ ಸಂಸ್ಕೃತಿಗಳಲ್ಲಿ ಮತ್ತು ಹಿಂದೂ ಧರ್ಮ, ಬೌದ್ಧಧರ್ಮ, ಜೈನಧರ್ಮ ಮತ್ತು ಪ್ರಾಚೀನ ಗ್ರೀಕರಲ್ಲಿ ವಿಶೇಷವಾಗಿ ಕಂಡುಬರುತ್ತದೆ. ಕ್ರೈಸ್ತ, ಇಸ್ಲಾಂ, ಯಹೂದಿ ಮತ್ತು ವೀರಶೈವ ಧರ್ಮಗಳಲ್ಲಿ ಪುನರ್ಜನ್ಮದ ವಿಷಯ ಬರುವುದಿಲ್ಲ. ಕ್ರೈಸ್ತ ಇಸ್ಲಾಂ ಮತ್ತು ಯಹೂದಿ ಧರ್ಮಗಳಲ್ಲಿ ಪುನರುತ್ಥಾನದ ಬಗೆಗೆ ನಂಬಿಕೆ ಇದೆ. ಪ್ರಾಚೀನ ಭಾರತ ಮತ್ತು ಗ್ರೀಕರು ಪುನರ್ಜನ್ಮ ತತ್ವವನ್ನು ವಿಶದವಾಗಿ ವಿವರಿಸಿದ್ದರು. ಭಾರತದ ಹೆಚ್ಚಿನ ಧರ್ಮಗಳಲ್ಲಿ ಪುನರ್ಜನ್ಮದ ನಂಬಿಕೆಯನ್ನು ಕಾಣಬಹುದು.

ಇಸ್ಲಾಂ ಧರ್ಮದಲ್ಲಿ ಸ್ವರ್ಗ ಮತ್ತು ನರಕ ಕಲ್ಪನೆ

ಕುರಾನಿನಲ್ಲಿ ಪರಲೋಕ ಕಲ್ಪನೆ ಹೀಗಿದೆ, ಸ್ವರ್ಗವೆಂದರೆ ಸಜ್ಜನರ ಶಾಶ್ವತಜೀವನಕ್ಕಾಗಿ ಪರಲೋಕದಲ್ಲಿ ಸಜ್ಜೀಕರಿಸಲಾದ ಸ್ಥಳ. ಇದನ್ನು ಜನ್ನತ್ ಎಂದು ಕರೆಯಲಾಗುತ್ತದೆ. ಜನ್ನತ್ ಎಂದರೆ ಉದ್ಯಾನ ಎಂದೂ ಅರ್ಥವಿದೆ. ಸ್ವರ್ಗದ ವಿಶಾಲತೆ ಭೂಮ್ಯಾಕಾಶಗಳ ವಿಶಾಲತೆಗೆ ಸಮನಾದುದು. ಸ್ವರ್ಗದಲ್ಲಿ ಅಡೆತಡೆಗಳಿಲ್ಲ. ಎಲ್ಲೂ ಹೋಗಬಹುದು. ಆದರೆ ಸ್ವರ್ಗವಾಸಿಗಳಲ್ಲಿ ಮಾತ್ರ ಬೇರೆ ಬೇರೆ ವರ್ಗದವರಿದ್ದಾರೆ. ಕೆಲವರಿಗೆ ಇತರ ಕೆಲವರಿಗಿಂತ ಎಷ್ಟೋ ಪಾಲು ಶ್ರೇಷ್ಠತೆ ಹೆಚ್ಚಿರಲು ಸಾಧ್ಯವಿದೆ.

ಸ್ವರ್ಗಕ್ಕೆ ೧೦೦ ಸೋಪಾನಗಳಿರುತ್ತವೆ. ಸ್ವರ್ಗದಲ್ಲಿ ಯಾರಿಗೂ ಪರಸ್ಪರ ಕ್ರೋಧವಿಲ್ಲ. ಎಲ್ಲರಿಗೂ ಒಂದೇ ಮನುಷ್ಯ ಹೃದಯವಿರುತ್ತದೆ. ಸ್ವರ್ಗ, ನರಕಗಳ ಮಧ್ಯೆ ಒಂದು ದೊಡ್ಡ ಗೋಡೆ ಇದೆ. ಈ ಗೋಡೆಗಳ ಮೇಲೆ ಕೆಲವರು ಇರುತ್ತಾರೆ. ಅವರು ಸ್ವರ್ಗಕ್ಕೆ ಹೋಗುವಷ್ಟು ಪುಣ್ಯ

೧.ಧರ್ಮ, ರಹಮತ್ ತರೀಕೆರೆ, ಪು.೨೬೦

ಮಾಡಿದವರಲ್ಲ, ನರಕಕ್ಕೆ ಹೋಗುವಷ್ಟು ಪಾಪ ಮಾಡಿದವರೂ ಅಲ್ಲ. ಹಾಗಾಗಿ ಅಲ್ಲಾ ನಮ್ಮನ್ನು ಸ್ವರ್ಗಕ್ಕೆ ಕರೆದಾನು ಎಂಬ ಪ್ರತೀಕ್ಷೆಯಲ್ಲಿಯೇ ಅವರು ಇರುತ್ತಾರೆ.

ಅಲ್ಲಾನ ಸೃಷ್ಟಿಯಲ್ಲಿ ಒಬ್ಬ ವ್ಯಕ್ತಿಗೆ ಮಾತ್ರ ಲಭ್ಯವಾಗಬಹುದಾದ ಒಂದು ಮಹತ್ತರವಾದ ಸ್ಥಾನವಿದೆ. ವಸೀಲಾ ಎಂದು ಅದರ ಹೆಸರು. ಅಲ್ಲಾನ ಸೇವಕರಲ್ಲಿ ಅತಿ ಶ್ರೇಷ್ಠನಾದ ಒಬ್ಬನಿಗೆ ಮಾತ್ರ ಅದು ಲಭಿಸೀತಷ್ಟೆ. ಸ್ವರ್ಗಕ್ಕೆ ಮೊತ್ತದಲ್ಲಿ ಫಿರ್‌ದಾಸ್ ಎಂಬ ಹೆಸರೂ ಇದೆ. ಸ್ವರ್ಗವೆಂದರೆ ಮಹಾವೃಕ್ಷಗಳೂ, ಲತೆಗಳೂ ಆವರಿಸಿರುವ ಒಂದು ತಂಪಾದ ಸ್ಥಳ. ಎಲ್ಲ ರೀತಿಯ ಹಣ್ಣುಹಂಪಲಗಳೂ ದೊರೆಯುವ ಸ್ಥಳ. ಸ್ವರ್ಗದ ಕೆಳಭಾಗದಲ್ಲಿ ನಾಲ್ಕು ಮುಖ್ಯನದಿಗಳು ಹರಿಯುತ್ತವೆ.

೧. ಶುದ್ಧಜಲ ತುಂಬಿದ ನದಿ, ೨. ಹಾಲಿನ ನದಿ, ೩. ಆರೋಗ್ಯಕ್ಕೆ ಹಾನಿಕರವಲ್ಲದ ಮದ್ಯ ನದಿ, ೪. ಸಿಹಿ ಜೇನಿನ ನದಿ.

ಇವಲ್ಲದೆ ಕರ್ಪೂರರಸ ನದಿ ಮುಂತಾದ ಇತರ ಸಾಮಾನ್ಯ ನದಿಗಳೂ ಇವೆ. ಆದರೆ ಇವೆಲ್ಲಕ್ಕಿಂತ ವಿಶೇಷವೂ ಪ್ರಸಿದ್ಧವೂ ಆದ ನದಿಯೆಂದರೆ ಕೌಸರ್ ಸ್ವರ್ಗವಾಸಿಗಳ ಆನಂದಕ್ಕಾಗಿ ಸ್ವರ್ಗದಲ್ಲಿ ರತ್ನಸೌಧಗಳು ಇರುತ್ತವೆ. ಸ್ವರ್ಗವಾಸಿಗಳ ಸೇವೆ ಮಾಡಲು, ಚಿಪ್ಪಿನೊಳಗಿನ ಮುತ್ತಿನಂತೆ ಶೋಭಿಸುವ ಅನೇಕ ಬಾಲಸೇವಕರೂ ಇರುತ್ತಾರೆ. ಮೊತ್ತಮೊದಲಾಗಿ ಸ್ವರ್ಗವನ್ನು ಪ್ರವೇಶಿಸುವವರು ಮಹಮ್ಮದ್ ಪೈಗಂಬರನ ಸಮುದಾಯದವರು. ಅಲ್ಲಾನ ಮತ್ತು ಪ್ರವಾಚಕರು ಆಹ್ವಾನಗಳನ್ನು ಸ್ವಾಗತಿಸುವವರು, ನೀತಿಮಾರ್ಗದಲ್ಲಿ ಸಂಚರಿಸುವವರು, ಅಧಾರ್ಮಿಕ ಕೃತ್ಯಗಳನ್ನು ದೂರಮಾಡಲು ಯತ್ನಿಸುವರು ಇವರೇ ಮುಂತಾದವರು ಸ್ವರ್ಗವನ್ನು ಸೇರಲು ಅರ್ಹರಾಗಿರುತ್ತಾರೆ. ಪ್ರವಾಚಕರು, ಸಿದ್ಧಿಖಿಗಳು, ಶೂಹದವರು, ಸಜ್ಜನರು ಹೀಗೆ ವಿವಿಧ ಸಂಘಗಳಾಗಿ ಭಕ್ತಜನರು ಸ್ವರ್ಗಕ್ಕೆ ಕರೆತರಲ್ಪಡುವರು.

ನರಕವೆಂದರೆ ಆಳಕ್ಕೆ ಇಳಿದಿರುವ ಅಗಾಧವಾದ ಹೊಂಡ ಎನ್ನಬಹುದು. ನರಕದಲ್ಲಿ ಕೆಳ ಕೆಳಕ್ಕೆ ಹೋದಂತೆ, ವೇದನೆಗಳೂ ಸಂಕಟಗಳೂ ಹೆಚ್ಚುತ್ತಾ ಹೋಗುತ್ತವೆ. ನರಕವನ್ನು ಅಗ್ನಿಜ್ವಾಲೆಗಳು ತುಂಬಿದ ಒಂದು ಪಾತಾಳಗುಂಡಿ ಎನ್ನಬಹುದು. ದುರಾಗ್ರಹ, ದುರ್ಭಾವನೆಗಳ ಕೇಂದ್ರವೆನಿಸಿದ ಮನುಷ್ಯ ಹೃದಯವನ್ನು ಆವರಿಸಿ ಸುಡುವ ಬೆಂಕಿ ಅಲ್ಲಿದೆ.

ಅಲ್ಲಿ ಕರಿಕಪ್ಪಾದ ಹೊಗೆ ಆವರಿಸುತ್ತದೆ. ಅಲ್ಲಿ ಕುಡಿಯಲು ಸುಡುನೀರನ್ನು ಕೊಡುತ್ತಾರೆ. ಕೆಲವೊಮ್ಮೆ ಈ ಸುಡುನೀರನ್ನು ಪಾಪಿಗಳ ತಲೆಯ ಮೇಲೂ ಸುರಿಯಲಾಗುತ್ತದೆ. ನರಕವಾಸಿಗಳಿಗೆ ಕುಡಿಯಲು ಲಸಿಕೆ ಹಾಗೂ ಜಿಡ್ಡು ಎಣ್ಣೆಯ ಪಾನೀಯಗಳನ್ನು ಕೊಡಲಾಗುತ್ತದೆ. ನರಕದ ಅಡಿಯಲ್ಲಿ ಸಖೂಮ್ ಎಂಬ ಮರವಿದೆ. ಈ ಮರದ ಹಣ್ಣು ಕಹಿಯೂ ದುರ್ವಾಸನೆಯುಳ್ಳದ್ದೂ ಆಗಿದೆ. ನರಕವಾಸಿಗಳಿಗೆ ಹಸಿವಾದಾಗ ತಿನ್ನಲುಕೊಡುವ ಇನ್ನೊಂದು ಆಹಾರವೆಂದರೆ ಬಾಣಮುಳ್ಳುಗಳುಳ್ಳ ಗಿಡ.

ನರಕವಾಸಿಗಳಿಗೆ ಉಡಲು ಬೆಂಕಿಯಿಂದಲೇ ತಯಾರಿಸಿದ ವಸ್ತ್ರಗಳನ್ನು ಕೊಡುತ್ತಾರೆ. ನರಕ ಶಿಕ್ಷೆಯನ್ನು ಸಹಿಸಲಾರದೆ ಹೊರಗೆ ಓಡಲು ಯತ್ನಿಸುವವರನ್ನ, ಮತ್ತೆ ಒಳಗೆ ನುಗ್ಗಿಸಲು ದೊಡ್ಡ ಕಬ್ಬಿಣದ ಸರಳುಗಳನ್ನು ಬಳಸಲಾಗುತ್ತದೆ. ಅವರ ಕೈಕಾಲುಗಳನ್ನು ಕಟ್ಟಲು ಅಲ್ಲಿ ಸಂಕಲೆಗಳೂ ಇರುತ್ತವೆ. ನರಕಕ್ಕೆ ೭ ಬಾಗಿಲುಗಳು ಇರುತ್ತವೆ. ಸುತ್ತಲೂ ಗಟ್ಟಿಯಾದ ಗೋಡೆಯಿದೆ. ಎಲ್ಲ ಪಾಪಿಗಳನ್ನೂ ಒಳಗೆ ನುಗ್ಗಿಸಿದ ಬಳಿಕ ಗಟ್ಟಿಯಾದ ಮುಚ್ಚಳವನ್ನು ಹಾಕಿ ನರಕಕುಂಡವನ್ನು ಮುಚ್ಚಲಾಗುತ್ತದೆ.

ದೇವರ ಯಾವ ಆಜ್ಞೆಯನ್ನಾದರೂ ತಪ್ಪದೇ ಪಾಲಿಸಬಲ್ಲ. ಕ್ರೂರವಾದ ೧೯ ಮಲಕ್ಕುಗಳು ಅಲ್ಲಿ ಕಾವಲುಗಾರರಾಗಿರುತ್ತಾರೆ. ಒಟ್ಟಿನಲ್ಲಿ ನರಕವು ಅತ್ಯಂತ ಭೀಕರವಾದುದು. ಅವರವರು ಮಾಡಿದ ದುಷ್ಕರ್ಮಗಳ ತೂಕಕ್ಕೆ ಸರಿಯಾದ ಶಿಕ್ಷೆಯನ್ನು ಅಲ್ಲಿ ವಿಧಿಸಲಾಗುತ್ತದೆ. ಮೊದಲು ಅಪರಾಧಿಗಳ ನೇತಾರರನ್ನು ಅನಂತರ ಅವರ ಅನುಯಾಯಿಗಳನ್ನೂ ನರಕಕ್ಕೆ ತಳ್ಳಲಾಗುತ್ತದೆ.

ನರಕದ ಶಿಕ್ಷೆಗಳು ರಿಯಾಯಿತಿ ಇಲ್ಲದಂಥವುಗಳು ಮತ್ತು ನಿರಂತರವಾಗಿ ಮುಂದುವರಿಯುವಂಥ ವುಗಳು. ಶಿಕ್ಷೆ ನೀಡುವಾಗ ಮೈಮೇಲಿನ ಚರ್ಮ ಬೆಂಕಿಯಲ್ಲಿ ಬೆಂದುಹೋದರೆ, ಬೇರೆ ಚರ್ಮವನ್ನು ಹೊದಿಯಲಾಗುತ್ತದೆ. ನರಕದ ಶಿಕ್ಷೆಗಳಿಂದ ವ್ಯಕ್ತಿ ಸಾಯಲಾರ. ನರಕವಾಸಿಗಳಿಗೆ ಹಸಿವಾದಾಗ ತಿನ್ನಲು ಕೊಡುವ ಸಖೂಮ್ ಮರದ ಹಣ್ಣುಗಳು ಹೊಟ್ಟೆಯನ್ನೇ ಸುಡುವಂತೆ ಇರುತ್ತವೆ. ಒಟ್ಟಿನಲ್ಲಿ ಮೇಲೆ ನರಕವೆಂದರೆ ಸಾವಿರಾರು ಅಳುವ ಧ್ವನಿಗಳು ತುಂಬಿದ ಜಾಗ.

೩.೨. ಕನ್ನಡ ಸಾಹಿತ್ಯಕ್ಕೆ ಕ್ರೈಸ್ತರ ಕೊಡುಗೆ

"ಕನ್ನಡ ಸಾಹಿತ್ಯಕ್ಕೆ ಕ್ರೈಸ್ತರ ಕೊಡುಗೆ ಅಪಾರವಾದುದು. ಬೆಲೆ ಕಟ್ಟುವಂಥದ್ದು, ಆಧುನಿಕ ಗದ್ಯ ಪ್ರವರ್ತನೆಯಲ್ಲಿ ಕ್ರೈಸ್ತರು ಪ್ರಮುಖ ಪಾತ್ರ ವಹಿಸಿದ್ದಾರೆ. ಕನ್ನಡ ಸಾಹಿತ್ಯ ಕತ್ತಲೆಯಲ್ಲಿದ್ದ ಕಾಲದಲ್ಲಿ ಈ ದೇಶದವರಲ್ಲದ, ಈ ಭಾಷೆಯ ಬನಿಯನ್ನೂ ತಿಳಿಯದ ಅನೇಕಾನೇಕ ಕ್ರೈಸ್ತ ಬೋಧಕರು, ಗುರುಗಳು ಈ ಕ್ಷೇತ್ರದಲ್ಲಿ ದುಡಿದಿರುವುದಕ್ಕೆ ಸಾಕ್ಷಿಯಾಗಿ ಕನ್ನಡ ಕೃತಿಗಳು ಇಂದು ಉಪಲಬ್ಧವಿವೆ. ಮತ ಪ್ರಚಾರವನ್ನೇ ಮುಖ್ಯ ಧ್ಯೇಯವಾಗಿಸಿಕೊಂಡು ಭಾರತಕ್ಕೆ ಬಂದ ಮಿಶನರಿಗಳು ಇಲ್ಲಿ ಅದು ಸುಲಭ ಸಾಧ್ಯವಲ್ಲವೆಂದು ತಿಳಿದು, ಮನಸೆಳೆಯುವ ಕೆಲವು ಮಾರ್ಗಗಳನ್ನು ಅನುಸರಿಸಬೇಕಾಯಿತು. ಜನ ಸಾಮಾನ್ಯರಿಗೆ ಶಿಕ್ಷಣ ಕೊಟ್ಟರೆ ಅವರಿಗೆ ಕ್ರಿಸ್ತನ ವಿಚಾರ ತಿಳಿಸುವುದು ಸುಲಭವಾಗುತ್ತದೆಂದು ವಿಶೇಷವಾಗಿ ಪ್ರೊಟೆಸ್ಟೆಂಟರು ತಿಳಿದುಕೊಂಡರು... ಮತವಿಚಾರವನ್ನು ಹೇಳಲು ಈ ಅನಿವಾರ್ಯತೆಯಿಂದಾಗಿ ಮಿಶನರಿಗಳು ಕ್ರೈಸ್ತ ಸಾಹಿತ್ಯ ದೃಷ್ಟಿಗೆ ಕೈಹಾಕಬೇಕಾಯಿತು."[೧]

ಮಿಷನರಿಗಳು ಅಂದು ಕನ್ನಡ ಸಾಹಿತ್ಯದಲ್ಲಿ ಸಲ್ಲಿಸಿದ ಸೇವೆಯನ್ನು ಯಾರೂ ಮರೆಯುವಂತಿಲ್ಲ. ಇವರ ಕೃತಿಗಳು ಹೊಸಗನ್ನಡ ಗದ್ಯಶೈಲಿಯ ಆರಂಭದ ಕೃತಿಗಳಾಗಿವೆ. ಇವುಗಳನ್ನು ಮುಖ್ಯವಾಗಿ ಎರಡು

೧. ಕ.ಕ್ರೈ.ಇತಿಹಾಸ, ಬಿ.ಎಸ್.ತಲ್ವಾಡಿ, ಪು.೩೦೭

ವಿಧಗಳನ್ನಾಗಿ ನೋಡಬಹುದು. ಅನುವಾದದ ಸಾಹಿತ್ಯ ಹಾಗೂ ಮತೀಯ ಸಾಹಿತ್ಯ ಮತ್ತು ಪಾಶ್ಚಾತ್ಯ ಲೇಖಕರು ಹಾಗೂ ದೇಶೀಯ ಲೇಖಕರು.

ಪ್ರಥಮತಃ ಬೈಬಲ್ ಭಾಷಾಂತರದಲ್ಲಿ ನಾವು ಹೊಸಗನ್ನಡ ಗದ್ಯವನ್ನು ಗುರುತಿಸುತ್ತೇವೆ. ಈ ರೂಪ ಪಡೆಯುವಲ್ಲಿ ಅವಶ್ಯಕತೆ ಹಾಗೂ ಅನಿವಾರ್ಯತೆಯನ್ನು ಕಾಣುತ್ತೇವೆ. ಬಂಗಾಲದ ವಿಲಿಯಂ ಕೇರಿ ಭಾರತೀಯ ಎಲ್ಲ ಲಿಖಿತ ಭಾಷೆಯಲ್ಲಿ ಬೈಬಲ್ ಮುದ್ರಿಸುವ ವಿಚಾರವನ್ನು ಹೊಂದಿದ್ದು ಕಂಡುಬರುತ್ತದೆ. ಜನಸಾಮಾನ್ಯರಿಗೆ ಬೈಬಲ್ ಅವಶ್ಯಕತೆಯನ್ನು ಪರಿಗಣಿಸಿ ಅವರು ಈ ಕಾರ್ಯವನ್ನು ಹಳೆಗನ್ನಡದಲ್ಲಿ ಮಾಡದೆ ಹೊಸ ಶೈಲಿಯನ್ನು ಅನುಸರಿಸಲೇ ಬೇಕಾಯಿತು. ಇದು ಅಂದಿನ ಅವಶ್ಯಕತೆಯೂ ಹೌದು, ಅನಿವಾರ್ಯತೆಯೂ ಹೌದು. ಧರ್ಮ ಪ್ರಚಾರ ಉನ್ನತ ಹಾಗೂ ಶ್ರೀಮಂತ ವರ್ಗದವರಿಗೆ ಅಲ್ಲ ಎಂಬುದನ್ನು ತಿಳಿದಿದ್ದ ಪಾಶ್ಚಾತ್ಯರು, ಜನಸಾಮಾನ್ಯರ ದೃಷ್ಟಿಕೋನದಿಂದ ಅನುವಾದಕ್ಕೆ ಸರಳ ಶೈಲಿಯನ್ನು ಬೆಳಸಿಕೊಂಡಿರಬಹುದು. ಇನ್ನೊಂದು ದೃಷ್ಟಿಯಲ್ಲಿ ಅವರಿಗೆ ಸಂಸ್ಕೃತ ಜ್ಞಾನವಿರಲಿಲ್ಲ. ಹಳೆಗನ್ನಡ ಬಳಸುವಷ್ಟು ಸಮರ್ಥರಿರಲಿಲ್ಲ. ಇಷ್ಟವೂ ಇರಲಿಲ್ಲ. ಈ ದೃಷ್ಟಿಕೋನದಿಂದ ಅವರಿಗೆ ಗದ್ಯದಲ್ಲಿ ಹೊಸತನ ಅನಿವಾರ್ಯತೆಯನ್ನುಂಟು ಮಾಡಿರಲಿಕ್ಕೆ ಸಾಕು! ತಾವು ಕನ್ನಡ ಭಾಷೆಯಲ್ಲಿ ಹೊಸಗನ್ನಡ ಎಂಬುದೊಂದು ಶೈಲಿಯನ್ನು ಪ್ರಾರಂಭಿಸುತ್ತೇವೆಂಬ ಪ್ರಜ್ಞೆಯಿಂದಲೇ ಅವರು ಹೊಸಗನ್ನಡವನ್ನು ಬಳಸಿದರೆನ್ನುವಂತಿಲ್ಲ.

"ಕೆಲವು ಕ್ರೈಸ್ತ ಸಾಹಿತಿಗಳು, ಕನ್ನಡವನ್ನು ಕಲಿತು ಕನ್ನಡ ಭಾಷೆಯ ವಿಷಯಗಳನ್ನು ಕನ್ನಡದಲ್ಲಿ ಬರೆದರು. ಇನ್ನೂ ಕೆಲವರು ಕನ್ನಡ ಭಾಷೆಯ ವಿಷಯಗಳನ್ನು ಇಂಗ್ಲೀಷ್ , ಜರ್ಮನ್ ಭಾಷೆಯಲ್ಲಿ ಬರೆದರು. ಕೆಲವರು ಕನ್ನಡವನ್ನು ಕುರಿತು ಕನ್ನಡ ಇಂಗ್ಲೀಷ್ ಎರಡೂ ಭಾಷೆಗಳಲ್ಲಿ ಬರೆದರು. ಇವರಿಂದ ಕನ್ನಡ ಭಾಷೆ ಬೆಳೆಯಲು, ರಾಜ್ಯದ ಒಳಗೆ ಹೊರಗೆ ಕನ್ನಡ ಪ್ರಸಾರವಾಗಲು ಕನ್ನಡಗರಿಗೆ ಮತ್ತು ಕನ್ನಡೇತರರಿಗೆ ಕನ್ನಡ ಭಾಷಾ ಸಂಪತ್ತು ತಿಳಿಯಲು, ಕನ್ನಡದಲ್ಲಿ ಆಗಿರುವ, ಆಗಬೇಕಾದ ಕೆಲಸದ ಬಗೆಗೆ ವಿದ್ವಾಂಸರಿಗೆ ಮನದಟ್ಟಾಗಲು ಸಹಾಯವಾಗಿದೆ.

೧೯ನೇ ಶತಮಾನದಲ್ಲಿ ಕನ್ನಡಕ್ಕೆ ದುಡಿದ ಕ್ರೈಸ್ತರು ಹುಟ್ಟು ಕನ್ನಡಿಗರಲ್ಲ. ಆದರೂ ಇವರು ಕನ್ನಡಗಿರಂತೆ ದುಡಿದರು. ಹೊಸದಾದ ಕನ್ನಡ ಭಾಷೆಯನ್ನು ಕುರಿತು ವ್ಯವಹರಿಸಿದರು. ಪಾಶ್ಚಾತ್ಯ ದೇಶಗಳಲ್ಲಿ ನಡೆಯುತ್ತಿದ್ದ ಸಂಶೋಧನೆ ಸಾಹಿತ್ಯ ಕೃಷಿಯನ್ನು ಇಲ್ಲಿ ಮಾಡಿತೋರಿಸಿದರು. ಜೀವಂತವಾದ ಜನರಾಡುವ ಕನ್ನಡ ಭಾಷೆಯಲ್ಲಿ ಏನೇನು ಕೆಲಸ ಮಾಡಬಹುದು ಎಂಬ ಬಗ್ಗೆ ದಾರಿ ತೋರಿದರು. ಕನ್ನಡಗರಿಗಿಂತ ಹೆಚ್ಚಾಗಿ ಕರ್ನಾಟಕದಲ್ಲಿ ಸುತ್ತಾಡಿ ಕನ್ನಡಿಗರೊಡನೆ ಬೆರೆತು ಕನ್ನಡಿಗರ ಬದುಕನ್ನು ವೀಕ್ಷಿಸಿ ದಾಖಲು ಮಾಡಿದರು... ಕರ್ನಾಟಕದಲ್ಲಿ ಕ್ರೈಸ್ತರು ಮಾಡಿದ ಮತ ಪ್ರಚಾರ ಸ್ವಕಾರ್ಯ, ಕನ್ನಡ ಸಾಹಿತ್ಯ ಸೇವೆ ಸ್ವಾಮಿ ಕಾರ್ಯ ಒಂದರಿಂದ ಜನ ಜಾಗೃತಿ ಉಂಟಾಯಿತು. ಮತ್ತೊಂದರಿಂದ ಕನ್ನಡದಲ್ಲಿ

ಕೆಲಸ ಮಾಡಲು ಹೊಸದಾರಿ ಕಂಡಿತು. ೧೯ನೇ ಶತಮಾನದ ಆದಿಯಲ್ಲಿ ಕನ್ನಡ ಸಾಹಿತ್ಯ ಸೇವೆ ಸಲ್ಲಿಸಿದವರಲ್ಲಿ ಕ್ರೈಸ್ತರದೇ ಸಿಂಹಪಾಲು."[೧]

"ಕನ್ನಡ ಭಾಷಾ ಅಭ್ಯಾಸಿಗಳಾದ ಪಾಶ್ಚಾತ್ಯ ಸೇವಾ ನಿರತರು ಮತ ಪ್ರಚಾರಕರೇ ಇರಲಿ ಅಥವಾ ಇತರರೇ ಆಗಲಿ, ಬಾಶೆಲ್ ಮಿಶನ್‌ಗೆ ಸೇರಿರಲಿ, ಇಂಗ್ಲೇಂಡಿನಿಂದ ಬಂದವರೇ ಆಗಲಿ, ಹಾಲೆಂಡು, ಫಿನ್ಲೆಂಟು, ಸ್ವಿಟ್ಜರಲೆಂಡ್‌ಗಳಿಂದ ಬಂದವರೇ ಆಗಲಿ ನಮಗೆ ಅವರೆಲ್ಲಾ ಯುರೋಪಿಯನ್ನರೇ ಕ್ರೈಸ್ತರು ಹಾಗೂ ಆ ಹಲವು ಪ್ರಬಲ ವಿದ್ವಾಂಸರು ಆ ಕಾಲದಲ್ಲಿ ಅವರು ಜನಾಂಗ ಭೇದ, ಮತಭೇದ, ಭಾಷಾಭೇದ ಯಾವುದನ್ನೂ ಎಣಿಸದೆ ಈ ದೇಶದ, ಈ ನಾಡಿನ ಸಮಾಜದ ಮತ್ತು ಜನರ ಪ್ರಗತಿಗಾಗಿ ಅವರು ದುಡಿದವರಾದುದರಿಂದ ಇಂದು ನಾವು ಅವರನ್ನು ಸ್ಮರಿಸುತ್ತಿದ್ದೇವೆ."[೨]

"೧೯ನೇ ಶತಮಾನದಲ್ಲಿ ವಿವಿಧ ರೀತಿಯ ಸಾಹಿತ್ಯ ಚಟುವಟಿಕೆಗಳು ಅವರಿಂದ ಸಾಗಿವೆ. ಉದಾಸೀನತೆಯಿಂದ ತುಂಬಿದ ಕನ್ನಡಿಗರಿಗೆ ಅವರ ನಾಡು ನುಡಿಗಳ ಬಗ್ಗೆ ಯಥಾವತ್ತಾದ ಎಚ್ಚರಿಕೆಯನ್ನು ಕೊಟ್ಟವರು ಅವರೇ. ಒಂದು ವೇಳೆ ಅವರು ಅಂಥ ಮಹಾಕಾರ್ಯವನ್ನು ಮಾಡಿರದಿದ್ದರೆ ನಾವಿನ್ನು ಸುಪ್ತಾವಸ್ಥೆಯಲ್ಲೇ ಇರುತ್ತಿದ್ದೇವೋ ಏನೋ!"[೩]

ಹೊಸಗನ್ನಡ ಭಾಷೆಯ ಎಲ್ಲ ಪ್ರಕಾರಗಳು ಮಿಶನರಿಗಳಿಂದ ಉದಯವಾಯಿತೆಂದರೆ ತಪ್ಪಾಗಲಿಕ್ಕಿಲ್ಲ. ಅವರ ಮತೀಯ ಸಾಹಿತ್ಯದಿಂದ ಕನ್ನಡ ಭಾಷೆ ಹೊಸಗನ್ನಡ ಗದ್ಯ ಶೈಲಿಯಲ್ಲಿ ಕಸುವನ್ನು ಪಡೆದು ಕ್ಲಿಷ್ಟತೆಯನ್ನು ನಿವಾರಿಸಿಕೊಂಡಿತು. ಮತೀಯ ತೊಳಲಾಟ ಗುದ್ದಾಟದ ತೊಡಕಿನಲ್ಲಿ ಸಾಹಿತ್ಯ ಗಟ್ಟಿಗೊಂಡಿತು.

"ಕನ್ನಡದ ಗದ್ಯಶೈಲಿಗೆ ಗರಿ ಮೂಡಿದುದು ರೆಕ್ಕೆ ಬಲಿತುದೂ ಪತ್ರಕೆಗಳಿಂದಲೇ ಎಂಬ ಅಭಿಪ್ರಾಯವನ್ನು ಕಡಂಗೋಡ್ಲು ಶಂಕರ ಭಟ್ಟರು ವ್ಯಕ್ತಪಡಿಸಿರುವುದು ಇಲ್ಲಿ ಸ್ಮರಣೀಯವಾಗಿದೆ."[೪]

ಮಿಶನರಿಗಳು ತಮ್ಮ ಕ್ರೈಸ್ತಧರ್ಮ ಪ್ರಚಾರಕ್ಕಾಗಿ ಹೀಗೆ ಕನ್ನಡದ ಸೇವೆ ಮಾಡಿದರೆಂದು. ಕ್ರೈಸ್ತ ಮತದ ಅಧಿಕಾರಿಗಳು ತಮ್ಮ ಬ್ರಿಟಿಷ ಸರಕಾರದ ಅನುಕೂಲತೆಗಾಗಿ ಹೀಗೆ ಕನ್ನಡದ ಕೆಲಸ ಮಾಡಿದರೆಂದೂ, ಇಲ್ಲವಾದರೆ ಅವರಲ್ಲಿ ಏನೂ ತಥ್ಯವಿಲ್ಲವೆಂದೂ ಕೆಲವರು ಟೀಕೆ ಮಾಡುವುದುಂಟು. ಆದರೆ ಕರ್ನಾಟಕದ ಯಾವ ಉಚ್ಚ ಅಧಿಕಾರಿಗಳಲ್ಲಿ ರೆ.ರೆಸೆಲ್, ರೆ.ರೈಯಿಸ್ ಮುಂತಾದವರಿಗೆ ಇರುವ ಸಾಹಿತ್ಯ, ಸಂಸ್ಕೃತಿಗಳ ದೃಷ್ಟಿಯಿದೆ? ಕಿಟೆಲ್, ವರ್ಥ, ವಿಗಲ್, ಜಿಗ್ಲರ್ ಅವಧಿಗೇ ಇದ್ದಂಥ ಕನ್ನಡದ

---

೧. ಅವಲೋಕನ ಎಚ್ಚೆಸ್ಕೆ, ಪು.೨೫೫

೨. ಕ.ಬಾ.ಮಿಶನ್ ರೆ.ಜೆ.ಎಂ.ಜೋಗುಳ, ಪು.೩೭೮

೩. ಕ್ರೈ.ಕ.ಕಾಣಿಕೆ ವರದರಾಜ ಹುಯಿಲಗೋಳ, ಪು.೧

೪. ಅವಲೋಕನ ಎಚ್ಚೆಸ್ಕೆ, ಪು.೨೩೭

ಆಳವಾದ ಅಭ್ಯಾಸದ ದೃಷ್ಟಿ ಯಾವ ನಮ್ಮ ಮತಪ್ರಚಾರಕರಲ್ಲಿ ಇದೆ? ನಾವೇ ಮಾಡುವ ಕಾರ್ಯವನ್ನು ವಿದೇಶಿಯರು ನಮಗಾಗಿ ಮಾಡಿ ಕೊಟ್ಟಿದ್ದಾರೆ. ಮುಖ್ಯತಃ ೧೯ನೇಯ ಶತಮಾನದಲ್ಲಿ ವಿದೇಶಿಯರು ಬರೆದಿಟ್ಟ ಕೃತಿಗಳೇ ನಮಗೆ ಆಳವಾದ ಅಭ್ಯಾಸಕ್ಕೆ ಆಧಾರ ಗ್ರಂಥಗಳಾಗಿವೆ. ಅಂಥ ಕೃತಿಗಳಿಗಾಗಿ ವಿದೇಶೀಯರಿಗೆ ನಮ್ಮ ಕೃತಜ್ಞತೆಯನ್ನು ನಾವು ಸಲ್ಲಿಸಬೇಕು. ಹೀಗಿದ್ದರೂ ಕವಿ ಚರಿತೆಕಾರರಾದ ಆರ್. ನರಸಿಂಹಚಾರ್ಯ ಅವರು ೧೯ನೇ ಶತಮಾನದ ಸಾಹಿತ್ಯ ಚರಿತ್ರೆಯಲ್ಲಿ ವಿದೇಶೀಯರ ಕೃತಿಗಳ ಬಗ್ಗೆ ವಿಶೇಷವಾಗಿ ಬರೆಯದೇ ಇದ್ದುದು ಅಚ್ಚರಿಯೇ ಸರಿ! ಆದರೆ ಇ.ಪಿ.ರೈಸರವರು "ಕನ್ನಡವು ಮಿಶನರಿಗಳಿಗೆ ಕೃತಜ್ಞವಾಗಿದೆ ಎಂದು ಹೇಳಿರುವುದು ಯೋಗ್ಯವಾಗಿದೆ.

"ಕಿಟೆಲ್, ಹೂಬರ್, ಮೋಗ್ಲಿಂಗ್, ಪೊಬ್ಬ ಮೊದಲಾದ ರೆವರೆಂಡ (ಪೂಜ್ಯ) ಮಿಶನರಿಗಳು ಅನ್ಯ ದೇಶೀಯ ಬಾಸೆಲ್ ಮಿಶನ್ನದ ಕೂಟದವರಾದರೂ ಅವರ ನೆನಪು ದಕ್ಷಿಣ ಕನ್ನಡಕ್ಕೆ ರತ್ನಾಕರ ಸಿದ್ಧನೆ. ಮೊದಲಾದ ಮಹಾಕವಿಗಳ ಸ್ಮರಣೆಗಿಂತ ಸಾಹಿತ್ಯ ಸೇವಾದೃಷ್ಟಿಯಲ್ಲಿ ಕಡಿಮೆಯಾಗಿಲ್ಲ ಎಂದು ಪಂಚಕಜ್ಜಾಯ (ಪು.೧೬೭)ದಲ್ಲಿ ಎಂ.ಎಸ್ .ಕಾಮತರು ಅಭಿಪ್ರಾಯಪಟ್ಟಿರುವರು. ಪಾಶ್ಚಾತ್ಯ ಮಿನರಿಗಳ ಈ ಸಾಹಿತ್ಯ ಸೇವೆಯಲ್ಲಿ ಬೈಬಲ್ಲಿನ ಮೂಲ ಅಂಶಗಳು ಮೂಡಿಬಂದವು.

ಕನ್ನಡದಲ್ಲಿ ಕ್ರೈಸ್ತ ಸಾಹಿತ್ಯ

ಕ್ರೈಸ್ತ ಕನ್ನಡ ಸಾಹಿತ್ಯದಲ್ಲಿ ಪ್ರಮುಖವಾಗಿ ಕೆಥೋಲಿಕ ಹಾಗೂ ಪ್ರೊಟಸ್ಟೆಂಟ್ ಸಾಹಿತ್ಯವಾಗಿ ನೋಡುವುದರೊಂದಿಗೆ ಜನಪದ ಸಾಹಿತ್ಯವೂ ಕ್ರೈಸ್ತ ಸಾಹಿತ್ಯದಲ್ಲಿ ಒಡಮೂಡಿರುವುದನ್ನು ನಾವು ಗಮನಿಸಬಹುದು. ಹಾಗೂ ಕ್ರೈಸ್ತೇತರರು ರಚಿಸಿದ ಸಾಹಿತ್ಯವಾದ ಗೋವಿಂದ ಪೈಯವರ ಗೊಲ್ಗಥಾ, ಪಾಂಡೇಶ್ವರ ಗಣಪತಿರಾಯರ ಕವನ 'ಕ್ರಿಸ್ತಜನ್ಮ' (ಚೆಂಗಲವೆ ೧೯೪೦) ಕ್ರೈಸ್ತ ಕಾಲೇಜಿನ ಪ್ರಕಟಣೆ 'ಕ್ರಿಸ್ತಾಂಜಲಿ'. ವಿ.ಕಾ.ಸುಬ್ಬರಾಯಾಚಾರ್ ಅವರ ಗದ್ಯಕೃತಿ 'ಯೇಸುಕ್ರಿಸ್ತ' ಹಾಗೂ ಸ್ವಾಮಿ ರಂಗನಾಥಾ ನಂದ ಅನುವಾದ ಗದ್ಯಕೃತಿ ನಾವು ಆರಾಧಿಸುವ ಕ್ರಿಸ್ತ(ಅನು.ಕೆ.ವಿ.ನಾರಾಯಣ) ಕ್ರೈಸ್ತಧರ್ಮ ಕುರಿತ ಲೇಖನಗಳು ಸಾಕಷ್ಟು ದೊರೆಯುತ್ತವೆ. ಕ್ರೈಸ್ತ ಸಭೆಗಳು ಸ್ಥಾಪನೆಯಾದಂತೆ ಸಭೇಯವರ ಉಪಯೋಗಕ್ಕಾಗಿ ಗೀತೆ ಹಾಗೂ ಕೀರ್ತನೆಗಳ ಸಂಗ್ರಹಗಳೂ ಪ್ರಾರ್ಥನಾ ಪುಸ್ತಕಗಳು, ದೇವೋಪಾಸನೆ ಪದ್ಧತಿಗಳು, ಆರಾಧನಾ ಕ್ರಮಗಳು ರಚಿಸಲ್ಪಟ್ಟವು. ಇವು ಹೆಚ್ಚಾಗಿ ಇಂಗ್ಲೀಷ ಹಾಗೂ ಜರ್ಮನ್ ಮೂಲಗಳಿಂದ ಅನುವಾದಗೊಂಡಿವೆ.

ಕ್ರೈಸ್ತ ಮಿಶನರಿಗಳು ಕೇವಲ ಕನ್ನಡ ಕ್ರೈಸ್ತ ಸಾಹಿತ್ಯಕ್ಕಾಗಿ ಕೊಡುಗೆಯನ್ನಿತ್ತಿರದೇ, ಕನ್ನಡ ಸಾಹಿತ್ಯಕ್ಕೆ ಮಾಡಿದ ಸೇವೆಯು ಅಪಾರವಾಗಿದೆ. ಕ್ರೈಸ್ತರ ಧರ್ಮಗ್ರಂಥಗಳಲ್ಲಿ ಎರಡು ಅಂಶಗಳಿವೆ. "ಒಂದು ಕ್ರೈಸ್ತ ಧರ್ಮದ ಬಗ್ಗೆ ಹೊಗಳಿಕೆ, ಎರಡು ಹಿಂದೂ ಧರ್ಮದ ಟೀಕೆ. ತಮ್ಮ ಧರ್ಮ ಪ್ರಸಾರದ

ಹುರುಪಿಹನಲ್ಲಿ ಕ್ರೈಸ್ತರು ಹಿಂದೂ ಧರ್ಮವನ್ನು ಟೀಕಿಸಿದ್ದಾರೆ. ಈ ಪ್ರವೃತ್ತಿಯಿಂದ ಹಿಂದೂಗಳು ಎಚ್ಚೆತ್ತುಕೊಳ್ಳಲು, ತಮ್ಮ ಧರ್ಮ ಸಮರ್ಥನೆಗೆ ತೊಡಗಲು, ತಮ್ಮ ಲೋಪದೋಷಗಳನ್ನು ವಿಮರ್ಶಿಸಿಕೊಳ್ಳಲು, ಧರ್ಮದ ಬಗೆಗೆ ಮುಕ್ತವಾಗಿ ಚರ್ಚಿಸಲು ಅವಕಾಶವಾಗಿದೆ. ಕನ್ನಡ ಸಾಹಿತ್ಯದಲ್ಲಿ ವೈಚಾರಿಕತೆ ಮೂಡಲು ಕ್ರೈಸ್ತರ ಧರ್ಮಾಭಿಮಾನ ಸಾಹಿತ್ಯವೂ ಸಾಕಷ್ಟು ಕಾರಣವಾಗಿದೆ ಎನ್ನಬಹುದೆನ್ನುವ"[೧] ಡಿ.ಲಿಂಗಯ್ಯರವರ ಮಾತನ್ನು ಇಲ್ಲಿ ಸ್ಮರಿಸಬಹುದು.

ಕೆಥೋಲಿಕರು ಹಾಗೂ ಪ್ರೊಟೆಸ್ಟೆಂಟರು ಬರೆದ ಕ್ರೈಸ್ತ ಸಾಹಿತ್ಯಗಳನ್ನು ನೋಡಿದಾಗ ಪ್ರೊಟೆಸ್ಟೆಂಟರು ರಚಿಸಿದ ಕನ್ನಡ ಕ್ರೈಸ್ತ ಸಾಹಿತ್ಯ ಸಂಖ್ಯೆಯಲ್ಲಿ ಅಧಿಕವೂ ವಿಷಯವ್ಯಾಪ್ತಿಯಲ್ಲಿ ಹೆಚ್ಚು ವಿಸ್ತೃತವೂ ಆಗಿದ್ದು, ಬೈಬಲ್ ಆಧಾರಿತ, ಬೈಬಲ್ ಪೂರಕ ಹಾಗೂ ಮತೀಯ ಭಾವನೆಯನ್ನು ವಿಮರ್ಶಿಸುವ ಸಾಹಿತ್ಯವಾಗಿ ಕಂಡುಬರುವುದು. ಆಧುನಿಕ ಸಾಹಿತ್ಯವಾಗಿ ಹೊರ ಹೊಮ್ಮಿದ ಹೊಸಗನ್ನಡದ ಶೈಲಿ ಪ್ರಾರಂಭದಲ್ಲಿ ಕುಂಠಿತತೆಯಲ್ಲಿ ಕಂಡುಬಂದರೂ, ಸ್ವಮತ ವಿವರಣೆಯಲ್ಲಿ ಇತರೆ ಮತವನ್ನು ವಿಮರ್ಶಿಸಲು ತೂಗಿ ನೋಡಲು ಹವಣಿಸುತ್ತಾ, ಉತ್ತಮ ಶೈಲಿಯತ್ತ ಸಾಗುತ್ತಾ ಬಂದಿರುವ ಹೆಜ್ಜೆ ಗುರುತುಗಳು, ಕ್ರೈಸ್ತ ಬೈಬಲ್ ಸಾಹಿತ್ಯ ಒಂದರಲ್ಲಿಯೇ ನಾವು ಗುರುತಿಸಬಹುದು. ಈ ಅವಧಿಯಲ್ಲಿ ಮೊತ್ತ ಮೊದಲಿಗೆ ರಚಿತವಾಗಿರುವ ಆಧುನಿಕ ಗದ್ಯಕ್ಕೆ ಸಮೀಪವಾಗಿರುವಂಥ ಬರವಣಿಗೆ, ತರ್ಕ, ವಿವರಣೆ ನೇರ ಹಾಗೂ ಸರಳ ನಿರೂಪಣೆಯ ದೃಷ್ಟಿಯಿಂದ ಉತ್ತಮ ಗದ್ಯದ ಮಾದರಿಯೇ ಆಗಿದೆ. ೧೮೪೦ರ ದಶಕದಲ್ಲಿ ಪೂರ್ಣಗೊಂಡ ಸಂಪೂರ್ಣ ಬೈಬಲ್ ಕನ್ನಡ ಪಾಠ ಸೃಜನಾತ್ಮಕ ಕೃತಿಯಲ್ಲದಿದ್ದರೂ ಒಂದು ಮೇರು ಕೃತಿಯ ಅನುವಾದವಾಗಿದೆ.

ಕನ್ನಡ ಸಾಹಿತ್ಯದಲ್ಲಿ ಸಾಹಿತ್ಯಿಕ ಮಟ್ಟದಲ್ಲಿ ನಿಲ್ಲಬಹುದಾದ ಕೃತಿಗಳು ಬಹಳ ವಿರಳ. ಬೈಬಲ್ ಅನುವಾದದಲ್ಲಿ ಸಾಹಿತ್ಯ ಮಟ್ಟ ಗುರುತಿಸಬಹುದಾದ ಭಾವತೀವ್ರತೆ, ಕಲಾತ್ಮಕತೆ, ಸಾಹಿತ್ಯಾತ್ಮಕ ನಿರೂಪಣೆ, ಸಾಕಷ್ಟು ಪ್ರಮಾಣದಲ್ಲಿ ಕಂಡುಬರುವುದಿಲ್ಲ. ಹಾಗೂ ಭಾಷಾ ಪ್ರಭುತ್ವ, ಭಾಷಾಪ್ರಯೋಗದಲ್ಲಿ ನಿರರ್ಗಳತೆ ನಿರ್ದುಷ್ಟತೆಯ ಕೊರತೆಯು ಅನುವಾದದಲ್ಲಿ ಎದ್ದು ಕಾಣುತ್ತದೆ. ಈ ಸಾಹಿತ್ಯ ಶೈಲಿಯನ್ನೆ ಮುಂದುವರೆಸಿಕೊಂಡ ಕ್ರೈಸ್ತ ಸಾಹಿತ್ಯ ತನ್ನದೇ ದೃಷ್ಟಿಕೋನದಿಂದ ಹೊರಬರದೆ ಅದೊಂದು ಪಾದ್ರಿ ಸಾಹಿತ್ಯ ಎನ್ನುವ ಶೈಲಿಯಲ್ಲಿಯೇ ತೊಳಲಾಡುತ್ತದೆ.

ಪ್ರಾಟೆಸ್ಟೆಂಟರಿಂದ ರಚಿತವಾದ ಗೀತಗಳು ಮಾತ್ರ ಪ್ರಾಯಶಃ ಒಂದು ಅಪವಾದವಾಗುತ್ತವೆ. ಇವುಗಳಲ್ಲಿ ಹೆಚ್ಚಾಗಿ ಕಂಡುಬರುವಂತಹುಗಳು ಅನುವಾದಗಳೇ ಇವುಗಳಲ್ಲಿ ಶಬ್ದ ಜೋಡಣೆ ಭಾಷಾಬಂಧ ಶಿಥಿಲವಾಗಿದ್ದರೂ ಇವು ಕೆಲ ಸಂದರ್ಭದಲ್ಲಿ ಉತ್ಕಟ ಕಾವ್ಯಭಾವವನ್ನು ಹೊರಹೊಮ್ಮುವ

---

೧. ಅವಲೋಕನ ಎಚ್ಚೆಸ್ಕೆ, ಪು.೨೫೫

ಗೀತಗಳಾಗಿ ಕಂಡುಬರುತ್ತವೆ. ಈ ಕ್ರೈಸ್ತ ಗೀತೆಗಳಂತೆ ಇನ್ನೂ ಮುಖ್ಯವಾಗಿಸುವ ಸೃಜನಾತ್ಮಕ ಸಾಹಿತ್ಯ ಎನಿಸಲು ಅರ್ಹವಾದ ಇನ್ನು ಒಂದು ಕ್ರೈಸ್ತ ವಿಷಯಕ ಸಾಹಿತ್ಯಭಾಗವೆಂದರೆ ಕ್ರೈಸ್ತ ಜನಪದ ಸಾಹಿತ್ಯ. ಶುದ್ಧ ಜಾನಪದ ಸೃಷ್ಟಿಯಾಗಿರುವ ಈ ಸಾಹಿತ್ಯ, ಸಂಚಯ ಅನುಭವ ಗಾಢತೆ, ಮನುಷ್ಯ ಸ್ವಭಾವದ ಹತ್ತಿರದ ಪರಿಚಯ, ಸಾರ್ವತ್ರಿಕ ಹಾಗೂ ಸರ್ವಕಾಲೀಕ ಮೌಲ್ಯಗಳ ಕಲಾತ್ಮಕ ಪ್ರತಿಪಾದನೆ ಇವೇ ಮೊದಲಾದ ಅದ್ಭುತ ಸಾಹಿತ್ಯ ಗುಣಮಟ್ಟವನ್ನು ಕ್ರೈಸ್ತ ಕನ್ನಡ ಸಾಹಿತ್ಯದಲ್ಲಿ ಕಂಡುಕೊಳ್ಳುತ್ತೇವೆ.

ಪ್ರಧಾನವಾಗಿ ಕ್ರೈಸ್ತ ಮಿಶನರಿಗಳ ಸಾಹಿತಿಗಳ ಹಾಗೂ ವಿದ್ವಾಂಸರ ಕೊಡುಗೆ ಶಾಸ್ತ್ರ ಸಾಹಿತ್ಯದಿಂದ ಆರಂಭಗೊಂಡು ಸಂಕಲನ, ಸಂಪಾದನೆ, ಭಾಷಾಂತರ, ಮುದ್ರಣ, ಪ್ರಸರಣ ಮುಂತಾದವುಗಳ ಮೂಲಕ ವಿಸ್ತರಿಸಿ, ಕನ್ನಡ ಸಾಹಿತ್ಯಕ್ಕೆ ತನ್ನದೇಯಾದ ಮುದ್ರೆ ಒತ್ತಿದಂತಿದೆ. ವ್ಯಾಕರಣ, ಛಂದಶಾಸ್ತ್ರ, ಶಾಸನ, ಶಬ್ದಕೋಶ, ಪಠ್ಯಪುಸ್ತಕ, ಆಡಳಿತ ಕನ್ನಡ, ಪರಿಭಾಷೆ, ಮುಂತಾದ ಕ್ಷೇತ್ರಗಳಲ್ಲಿ ಕ್ರೈಸ್ತ ಮಿಶನರಿಗಳು, ವಿದ್ವಾಂಸರು ಹಾಕಿಕೊಟ್ಟ ಮಾದರಿಗಳು ಶ್ರೇಷ್ಠವಾಗಿವೆ. ಹೊಸಗನ್ನಡದ ಗದ್ಯ ಹಾಗೂ ಪದ್ಯ ಸಾಹಿತ್ಯಕ್ಕೆ ಬುನಾದಿಯಾಗಿದೆ. ಇವರು ತೋರಿದ ಸ್ವಧರ್ಮ ನಿಷ್ಠೆ ಸಾಹಿತ್ಯ ರಚನೆ ಹಾಗೂ ಪ್ರಕಟಣೆಯಲ್ಲಿ ತೋರಿದ ಜಾತ್ಯಾತೀತ ಮನೋಭಾವನೆ. ಕನ್ನಡ ಪರ ಪ್ರಜ್ಞೆ ಅವರ ಅತ್ಯಂತ ಅಪ್ಯಾಯಮಾನವಾದ ಕೊಡುಗೆಗಳಾಗಿವೆ.

"ಪಾಶ್ಚಾತ್ಯ ಕ್ರೈಸ್ತರಿಂದ ಮತಾಂತರ ಹೊಂದಿದ ದೇಶೀಯ ಕ್ರೈಸ್ತರಲ್ಲಿ ಕೆಲವರು ಕನ್ನಡ ಸಾಹಿತ್ಯಕ್ಕೆ ಸೇವೆ ಸಲ್ಲಿಸಿದ್ದಂತೆ ಹರ್ಮನ್ ಮೋಗ್ಲಿಂಗ್ ನಿಂದ ಮತಾಂತರ ಹೊಂದಿದ ಆನಂದರಾಯ ಕೌಂಡಿಣ್ಯ. ಭಗವಂತರಾವ್, ಮುಕುಂದರಾವ್ ಇಂಥವರಲ್ಲಿ ಕೆಲವರು ಇವರು ಮತಾಂತರದ ನಂತರ ಹರ್ಮನ್ ಕೌಂಡಿಣ್ಯ, ಜೇಕಬ್ ಪಾಳ್, ಕೌಶಿಕ್ ಎಂಬ ನಾಮಕರಣಗೊಂಡರು. ರೆವರೆಂಡ್ ಎಂದು ಹೆಸರು ಗಳಿಸಿದ ದೇಶೀಯರಲ್ಲಿ ಹರ್ಮನ್ ಕೌಂಡಿಣ್ಯ ಮೊದಲಿಗ. ಇವನು ಬಾರ್ಥ್ಯೆ ಎಂಬುವನ ಬೈಬಲ್ ವ್ಯಾಖ್ಯಾನ ಗ್ರಂಥವನ್ನು ಕನ್ನಡೀಕರಿಸಿದ್ದಾನೆ. ಕರ್ಯ ಎಂಬುವನ ಜರ್ಮನ ಕೃತಿಯನ್ನು 'ಕ್ರೈಸ್ತ ಧರ್ಮ ಬೋಧನೆ, ಪರಿಶುದ್ಧ ಚರಿತ್ರೆ' ಎಂಬ ಹೆಸರಿನಿಂದ ಅನುವಾದಿಸಿದ್ದಾನೆ. ಜೇಕಬ್ ಮತ್ತು ಪಾಲ್ ಕೌಂಡಿಣ್ಯರು ಮರಾಠಿಯ ಕೆಲವು ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ವತ್ಸ ಸುವಾರ್ತಪ್ಪ ಎಂಬುವನು ಒಂದು ನೂರು ಸುಭಾಷಿತ ಪ್ರಸಂಗಗಳನ್ನು ಆಯ್ದು ಪ್ರಟಿಸಿದ್ದಲ್ಲದೆ, ಚಿನ್ನಪ್ಪ ಲಿಂಗಾಯತ ಮತ ಕುರಿತು ಗ್ರಂಥ ಬರೆದಿದ್ದಾನೆ. ದೇವದರ ಸೋಲೋಮೊನಪ್ಪ 'ವೇದಾಂತ ವಾದ ನಿರ್ಣಯ', 'ಗಣೇಶಪಾಲ್ ಜಂಗೀರನ ಚರಿತ್ರೆ' ಬರೆದಿದ್ದಾನೆ. ಕ್ರಿಸ್ತಾನುಜವತ್ಸ, ಯುವ ಗೋಪಾಲರತ್ನ, 'ಬೂಯ ಕಡೆ ದಿನಗಳು', 'ವೇದದಲ್ಲಿ ಏನಿದೆ?' ವಿಕ್ಟೋರಿಯಾ ರಾಣಿ ಚರಿತೆ' ಮೊದಲಾದ ಗ್ರಂಥಗಳನ್ನು ರಚಿಸಿದ್ದಾರಲ್ಲದೆ, ಮೊದಲ ಬಾರಿಗೆ ಕನ್ನಡದಲ್ಲಿ ಸಂಸ್ಕೃತ ವ್ಯಾಕರಣ ರಚಿಸಿದ್ದಾನೆ. ಹೀಗೆ ೧೯ನೇಯ ಶತಮಾನದಲ್ಲಿ ಕನ್ನಡ ಸಾಹಿತ್ಯ ಸೇವೆ ಮಾಡಿದ ಪಾಶ್ಚಾತ್ಯ ಹಾಗೂ ದೇಶೀಯ ಕ್ರೈಸ್ತರ ದೊಡ್ಡಪಟ್ಟಿಯನ್ನೇ ಕಾಣಬಹುದು".[೧]

---

೧. ಅವಲೋಕನ ಎಚ್ಚೆಸ್ಕೆ, ಪು.೨೫೫

ಅಂದು ಮಿಶನರಿಗಳು ಭಾರತಕ್ಕೆ ಯಾವ ದೇಶದಿಂದಲೋ ಬಂದಿದ್ದರು. ಏಕದೇವೋಪಾಸನೆಯ ಅಡಿಯಲ್ಲಿ ಧರ್ಮಗ್ರಂಥ ಬೈಬಲ್ ಆಧಾರದೊಂದಿಗೆ ಸಾಹಿತ್ಯ ರಚನೆಗೆ ತೊಡಗಿದ್ದು ನಿಜಕ್ಕೂ ಶ್ಲಾಘನೀಯ. ೧೯ನೇ ಶತಮಾನದಲ್ಲಿ ಲಂಡನ್, ವೆಸ್ಲಿಯನ್, ಮೆಥೊಡಿಸ್ಟ್ , ಬಾಶೆಲ್ ಮಿಶನ್‌ಗಳಂತ ಹತ್ತು ಹಲವಾರು ಸಂಸ್ಥೆಗಳು ಒಟ್ಟುಗೂಡಿ ಸಾಹಿತ್ಯ ರಚನೆಯಲ್ಲಿ ಕ್ರೈಸ್ತ ಸಾಹಿತ್ಯವನ್ನು ನೀಡಲು ಶ್ರಮಿಸಿದವು. "ಮೊದಲು ಮಿಶನರಿಗಳೇ ಸಾಹಿತ್ಯ ರಚನೆಗೆ ಕೈಹಾಕಿದರು. ಅನಂತರದಲ್ಲಿ ಇದಕ್ಕಾಗಿ ಪ್ರಕಾಶನ ಸಂಸ್ಥೆಗಳು ರಚಿಸಲ್ಪಟ್ಟವು. ಇಂತಹ ಪ್ರಕಾಶನಗಳನ್ನು ಈ ಕೆಳಗಿನಂತೆ ಗುರುತಿಸಬಹುದು.

೧. ಬಾಶೆಲ್ ಮಿಶನ್ ಮಂಗಳುರು

೨. ಕ್ರಿಶ್ಚಿಯನ್ ಲಿಟರೇಚರ್ ಸೊಸೈಟಿ, ಮದ್ರಾಸ್

೩. ಟ್ರ್ಯಾಕ್ಟ್ ಆ್ಯಂಡ್ ಬುಕ್ ಸೊಸೈಟಿ, ಬೆಂಗಳೂರು

೪. ಸಿ.ಎಲ್.ಎಸ್ ಪ್ರೆಸ್, ಮದ್ರಾಸ್

೫. ಕರ್ನಾಟಕ ಕ್ರಿಶ್ಚಿಯನ್ ಕೌನ್ಸಿಲ್

೬. ಸ್ಕ್ರಿಪ್ಚರ್ ಲಿಟ್‌ರೇಚರ್ ಪ್ರೆಸ್, ಬೆಂಗಳೂರು

೭. ಇವ್ಯಾಂಜಿಲಿಕಲ್ ಲಿಟರೇಚರ್ ಸೊಸೈಟಿ, ಬೆಂಗಳೂರು

೮. ಕರ್ನಾಟಕ ಕ್ರೈಸ್ತ ಸಭಾ ಪ್ರಾಂತ್ಯಗಳ ಸಾಹಿತ್ಯ ಸಮಿತಿ

೯. ಕರ್ನಾಟಕ ಕ್ರಿಶ್ಚಿಯನ್ ಎಜ್ಯುಕೇಶನ್ ಸೊಸೈಟಿ, ಮಂಗಳೂರು

೧೦. ಬೈಬಲ್ ಸೊಸೈಟಿ, ಬೆಂಗಳೂರು

ಇವುಗಳಲ್ಲದೆ ಇಂಡಿಯಾ ಎವರಿಹೊಮ್, ಕ್ರೊಸೇಡ್ ಅಪರೇಶನ್ ಮಾಬಲೈಜೇಶನ್, ಲಿವಿಂಗ್ ಲಿಟರೇಚರ್, ಎಫ್. ಜಿ.ವಾಯ್ ಎಂ.ಎ., ಈ.ಸಿ.ಸಿ. ಹಾಗೂ ಇನ್ನಿತರ ವ್ಯಯಕ್ತಿಕಾಸಕ್ತಿಯ ಸಾಹಿತ್ಯ ಪ್ರಕಟನೆಗಳು ಉಂಟು."

ಹೀಗಿರುವಲ್ಲಿ ಕ್ರೈಸ್ತ ಧಾರ್ಮಿಕ ಕ್ಷೇತ್ರವನ್ನನುಸರಿಸಿ ಸಂಶೋಧನೆಗಳು ಹೊರಬಂದಿವೆ. ಸಂಖ್ಯೆಯಲ್ಲಿ ಕಡಿಮೆಯಾಗಿದ್ದರು ಗುಣಮಟ್ಟದಲ್ಲಿ ಶ್ರೇಷ್ಠವೆನಿಸಿಕೊಂಡಿವೆ. ಶ್ರೀ ಹಾವನೂರರ 'ಹೊಸಗನ್ನಡ ಅರುಣೋದಯ' ಎಡ್ವರ್ಡ ನೊರೊನರವರ ಕನ್ನಡ ಧಾರ್ಮಿಕ ಸಾಹಿತ್ಯಕ್ಕೆ ಕ್ರೈಸ್ತ ಮಿಶನರಿಗಳ ಕೊಡುಗೆ- ಬಿ.ಎಸ್. ತಲ್ವಾಡಿಯವರ 'ಕ್ರೈಸ್ತ ಜಾನಪದ ಸಾಹಿತ್ಯ', ಬಿ.ವಿ.ಮಹೀದಾಸರವರ 'ಕನ್ನಡ ಶಾಸ್ತ್ರ ಸಾಹಿತ್ಯಕ್ಕೆ ಕ್ರೈಸ್ತ ಮಿಶನರಿಗಳ ಕೊಡುಗೆ', ಕೆ.ಎಂ.ಮ್ಯಾಥೊರವರ 'ಕಿಟಲ್ ಒಂದು ಸಮಗ್ರ ಅಧ್ಯಯನ' ಶ್ರೀಮತಿ ಗೀತಾ ನಂದಿಹಾಳರವರ "ಕನ್ನಡ ಸಾಹಿತ್ಯಕ್ಕೆ ಬಾಶಲ್ ಮಿಶನರಿಗಳ ಕೊಡುಗೆ" ಮುಂತಾದವು. ಹಾಗೂ ಮಾಲಿನಿ ಜರ್ತರ ಅವರ ಕ್ರೈಸ್ತ ಗ್ರಂಥಸೂಚಿ. ವಿಲ್ಯಂ ಮಾಡ್ತಾ ಅವರ ಕ್ರೈಸ್ತ ಸಂಸ್ಕಾರಗಳ

ವ್ಯಾಖ್ಯಾನ. ಕ್ರೈಸ್ತ ಆಚರಣೆಗಳಿಗೆ ಸಂಬಂಧಿಸಿದ ಫಾತಿಮಾ ಮೇರಿ ಅವರ ಸಂಶೋಧನಾ ಕಾರ್ಯ ಇನ್ನು ಮುಂತಾದವು.

ಕ್ರೈಸ್ತ (ಕೆಥೋಲಿಕ್) ಧಾರ್ಮಿಕ ಸಾಹಿತ್ಯ

ಕನ್ನಡ ಧಾರ್ಮಿಕ ಸಾಹಿತ್ಯ ಕುರಿತು ಸಂಪೂರ್ಣವಾಗಿ ಪ್ರಸ್ತುತ ಅಧ್ಯಯನದಲ್ಲಿ ನೋಡುವುದು ವ್ಯಾಪ್ತಿಯಲ್ಲಿ ಬಹು ವಿಶಾಲವೆಂದಾಗುವುದರಿಂದ ಕನ್ನಡ ಧಾರ್ಮಿಕ ಸಾಹಿತ್ಯದಲ್ಲಿ ಕ್ರೈಸ್ತ ಧಾರ್ಮಿಕ ಸಾಹಿತ್ಯದ ಸ್ಥಾನ ಮಹತ್ವಗಳ ಕಡೆಗೆ ಗಮನಹರಿಸುವುದು ಸೂಕ್ತವೆಂದೆನಿಸುವುದು.

ಮುಖ್ಯವಾಗಿ ಕ್ರೈಸ್ತ ಸಾಹಿತ್ಯದಲ್ಲಿ ಎರಡು ಗುಂಪುಗಳಿಗೆ ಅನ್ವಯಿಸಿ ನೋಡಬಹುದು. ಕನ್ನಡ ಕ್ರೈಸ್ತ ಧಾರ್ಮಿಕ ಸಾಹಿತ್ಯ ಪ್ರಾರಂಭಗೊಂಡದ್ದು, ಕೆಥೋಲಿಕರಿಂದ ಹೀಗಾಗಿ, ಕೆಥೋಲಿಕ್ ಹಾಗೂ ಪ್ರಾಟೆಸ್ಟೆಂಟ್ ಎಂಬ ಎರಡು ಭಾಗಗಳಲ್ಲಿ ತಿಳಿದುಕೊಳ್ಳೋಣ.

ಕೆಥೋಲಿಕ ಧಾರ್ಮಿಕ ಸಾಹಿತ್ಯ : ಕೆಥೋಲಿಕ ಸಾಹಿತ್ಯದ ಆರಂಭದ ಕೆಲವು ಕೃತಿಗಳ ಮತ್ತು ಲೇಖಕರ ಹೆಸರುಗಳು ನಮಗೆ ಸಿಗುತ್ತವೆಯಾದರೂ, ಈ ಕೃತಿಗಳು ಉಪಲಬ್ಧವಿಲ್ಲ. ೧೭ನೇ ಶತಮಾನದ ಪೂರ್ವಾರ್ಧದಲ್ಲಿ ಕನ್ನಡಕ್ಕೆ ಸಂಬಂಧಿಸಿದ ಕೆಲವಾದರೂ ಪುಸ್ತಕಗಳು ಗೋವೆಯಲ್ಲಿ ಅಚ್ಚಾಗಿರುವ ಸಾಧ್ಯತೆಯನ್ನು ಹಾವನೂರ ಸೂಚಿಸಿದ್ದಾರೆ. ಅವದೂರದ ಸಾಂತ ಅನ್ನ. ಎಂಬ ಪ್ರಾನ್ಸಿಸ್ಕನ್ ಮಿಶನರಿ Flos Sauctorum ಎಂಬ, ಭಕ್ತಿಗೆ ಸಂಬಂಧಪಟ್ಟ ಪ್ರಬಂಧವನ್ನು 'ಕೆನರೀಜ್' ಭಾಷೆಗೆ ಅನುವಾದ ಮಾಡಿದನೆಂದೂ ರಿಬದನಿಯರ್ ಎಂಬುವನು ರಚಿಸಿದ 'ಸಂತರ ಜೀವನ ಚರಿತ್ರೆ'ಗಳನ್ನು ದಿಯೆಗೊ ರಿಬೆರೊ* 'ಕೆನರೀಜ್' ಭಾಷೆಗೆ ಅನುವಾದ ಮಾಡಿದನೆಂದೂ ಡಾಲಮನ್ ಹೇಳುತ್ತಾನೆ. ಇಲ್ಲಿ 'ಕೆನರೀಜ್' ಎಂದಿರುವುದು ಕನ್ನಡವೇ.

"ಲೆಯೊನಾರ್ಡೊ ಚಿನ್ನಾಮಿ (೧೬೦೯-೧೬೭೬) ಜೆಜ್ವಿಟ್‌ನು ಗೋವೆಯಿಂದ ಬಂದು ೧೬೫೦ರಲ್ಲಿ ಶ್ರೀರಂಗಪಟ್ಟಣವನ್ನು ತಲುಪಿದನು... ಶ್ರೀರಂಗಪಟ್ಟಣ ಮತ್ತು ಸುತ್ತಮುತ್ತಲಲ್ಲಿ ಇವನು ಹಲವರನ್ನು ಮತಾಂತರಗೊಳಿಸಿದನು."[೧] ಇವನು ಇಟಲಿ ದೇಶದವನು. ಜೆಜ್ವಿಟ್ ತರಬೇತಿಯಲ್ಲಿ ಕ್ರಮವಾಗಿ ತತ್ವಶಾಸ್ತ್ರಗಳನ್ನು ಧರ್ಮದರ್ಶನವನ್ನೂ ಓದಿದವನು. ಇವನು ಬರೆದ ಗ್ರಂಥಗಳನ್ನು ಫರೊಲಿ ಹೀಗೆ ನೀಡಿದ್ದಾನೆ.

೧. ಕ್ರೈಸ್ತ ಧರ್ಮದ ಮುಖ್ಯ ಧಾರ್ಮಿಕ ತತ್ವಗಳನ್ನು ಬೋಧಿಸುವ ದೀರ್ಘ ಪ್ರಶ್ನೋತ್ತರಾವಳಿ. ೨. ಅದರ ಸಾರರೂಪ, ೩. ಕ್ರೈಸ್ತ ಸಂತರ ಜೀವನ ಚರಿತ್ರೆ. ೪. ಕ್ರೈಸ್ತ ಧರ್ಮ ಸಮರ್ಥನೆ ೫. ಮೈಸೂರಿನಲ್ಲಿ ಪ್ರಚಲಿತವಿದ್ದ ತಪ್ಪುಕಲ್ಪನೆಗಳ ಮತ್ತು ಮೌಢ್ಯಗಳ ಖಂಡನೆ.

---

* ಕೆಥೊಲಿಕ ಪಂಗಡದ ರಿಬೆರೋನ ಕಾಲ ೧೭ನೇ ಶತಮಾನದ ಮೊದಲ ದಶಕ

೧. ಕ.ಧಾ.ಸಾ.ಕ್ರೈ.ಮಿ.ಕೊಡುಗೆ, ಎಡ್ವರ್ಡ್ ನೊರೋನ, ಪು.೭

ಕೊನೆಯ ಪುಸ್ತಕ ಮತೀಯ ವಿಚಾರವನ್ನು ಒಳಗೊಂಡದ್ದು. 'ಮೈಸೂರು ಜನರ ಜಾತಿಗಳು ಮೂಢನಂಬಿಕೆಗಳು ಇವುಗಳ ಖಂಡನೆ ಮೈಸೂರು ದೇಶದ ಹಿಂದೂಗಳ ಜಾತಿಭೇದ, ಮೂಢನಂಬಿಕೆಗಳನ್ನು ಖಂಡಿಸುವ ಪುಸ್ತಕ'' ಎಂದಿದೆ. ಇಟಲಿಯಿಂದ ಆಗಮಿಸಿದ ಚಿನ್ನಾಮಿಗೆ ಇಲ್ಲಿಯ ಜಾತಿಭೇದ ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿಯಲಾರದ್ದು ಎಂಬ ಅಭಿಪ್ರಾಯ ಬಂದಿರಲಿಕ್ಕೆ ಸಾಕು! ಅಂದಿನ ಮಿಶನರಿಗಳು ಜಾತಿ ಭೇದವನ್ನು ಖಂಡಿಸಲಿಲ್ಲ ಎಂಬ ಅಭಿಪ್ರಾಯವು ಇದೆ. ಆದರೆ ಖಂಡಿಸಿಲ್ಲ ಎಂದು ನೇರವಾಗಿ ಹೇಳಲಾಗದು.

ಈ ಮೇಲಿನ ಕೃತಿಗಳು ಉಪಲಬ್ಧವಿಲ್ಲದಿದ್ದರೂ ಕನ್ನಡ ಸಾಹಿತ್ಯದಲ್ಲಿ ಕಾಣಿಸಿಕೊಂಡ ಕೃತಿಗಳೆಂದು ಗುರುತಿಸಬಹುದು. ಇನ್ನು ಕೆಥೋಲಿಕ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಆರಂಭದ ಮೂರು ಹಸ್ತಪ್ರತಿಗಳು ಉಪಲಬ್ಧವಿವೆ.

೧. ಲಂಡನ್ ಸ್ಕೂಲ್ ಆಫ್ ಓರಿಯೆಂಟಲ್ ಆ್ಯಂಡ್ ಆಫ್ರಿಕನ್ ಸ್ಟಡೀಸ್ ನಲ್ಲಿರುವ ೧೨೯೦೩ ಕ್ರಮಾಂಕದ ಹಸ್ತಪ್ರತಿ. ಇದರ ಫೋಟೋ ಪ್ರತಿ.

೨. ಲಂಡನ್ನಿನ ಅದೇ ಸಂಸ್ಥೆಯಲ್ಲಿರುವ ೭೦೭೮ ಕ್ರಮಾಂಕದ ಹಸ್ತಪ್ರತಿ. ಇದರ ಮೈಕ್ರೊಫಿಲ್ಮ್ ಪ್ರತಿ ಮೈಸೂರು ಕನ್ನಡ ಅಧ್ಯಯನ ಸಂಸ್ಥೆಯಲ್ಲಿದೆ ಕ್ರಮಾಂಕ ಎನ್. ೧೦೦೪ ಇವೆರಡನ್ನೂ ಹಾವನೂರರು ನಿರ್ದೇಶಿಸಿದಂತೆ ಇಲ್ಲಿಯೂ ಕ್ರಮವಾಗಿ ಹಸ್ತಪ್ರತಿ ೪೦ ಮತ್ತು ಹಸ್ತಪ್ರತಿ ೩೩೭ ಎಂದು ಕರೆದಿದೆ.

೩. ಮಂಗಳೂರು ಸ್ಟೆಂಟ್ ಎಲಾಸಿಯಸ್ ಕಾಲೇಜಿನಲ್ಲಿರುವ ಒಂದು ತಾಳೆಗರಿ ಗ್ರಂಥ. ಇದು ದೇವಮಾತೆಯ ಧರ್ಮಚರಿತ್ರೆಗಳು ಎಂಬ ಗ್ರಂಥ.

ಕೆಥೋಲಿಕ ಸಾಹಿತ್ಯ

"ಕೆಥೋಲಿಕ ಸಾಹಿತ್ಯದ ಚರಿತ್ರೆಯನ್ನು ರಚಿಸುವಲ್ಲಿ ಸಹಾಯಕ್ಕೆ ಬರುವ ಆಕರಗಳನ್ನು ಎರಡು ವರ್ಗಗಳನ್ನಾಗಿ ವಿಂಗಡಿಸಬಹುದು. ೧. ಉಪಲಬ್ಧ ಕೃತಿಗಳು ಮತ್ತು ೨. ಕೃತಿಗಳನ್ನು ಕುರಿತಂತೆ ಸಿಗುವ ಉಲ್ಲೇಖಗಳು. ಮೊದಲೇ ವರ್ಗಕ್ಕೆ ಹಸ್ತಪ್ರತಿಗಳು ಮತ್ತು ಮುದ್ರಿತ ಗ್ರಂಥಗಳು ಸೇರುತ್ತವೆ. ಎರಡನೇ ವರ್ಗಕ್ಕೆ ಮಿಶನರಿಗಳನ್ನು ಮತ್ತು ಅವರ ಕೃತಿಗಳನ್ನು ಕುರಿತ ಅಧ್ಯಯನಗಳು ಜೆಜ್ವಿಟ್ ಸಂಸ್ಥೆಯ ಹಾಗೂ ಫ್ರೆಂಚ್ ಫಾರಿನ್ ಮಿಶನ್ ಸಂಸ್ಥೆಯ ಚರಿತ್ರೆಗಳು, ಬೆಂಗಳೂರಿನ ಕೆಥೋಲಿಕ ಆರ್ಚಬಿಶಪ್ಪರ ಪತ್ರಾಗಾರದಲ್ಲಿರುವ ಒಂದು ಪಟ್ಟಿ 'ಇವು ಸೇರುತ್ತವೆ'[೧] ಎಂದಿದ್ದಾರೆ.

೧೮೪೮ ರಿಂದ ಕೆಥೋಲಿಕ ಸಾಹಿತ್ಯದ ಗ್ರಂಥೋದ್ಯಾಯವನ್ನು ಸ್ಪಷ್ಟವಾಗಿ ಗುರುತಿಸುತ್ತಿದ್ದರೂ, ಇದಕ್ಕೂ ಮೊದಲು ೧೬೮೦ರಿಂದ ಲಿಯಾನಾರ್ದೊ ಸಿನ್ನಾಮಿ ಮತ್ತು ಜಜ್ವಿಟರಿಂದ ಸಾಹಿತ್ಯ ಕಾರ್ಯ

೧. ಕ.ಧಾ.ಸಾ.ಕ್ರೈ.ಮಿ.ಕೊಡುಗೆ, ಎಡ್ವರ್ಡ್ ನೊರೋನ, ಪು.೩೫

ಪ್ರಾರಂಭವಾಗಿರುವುದನ್ನು ಕಂಡುಕೊಳ್ಳಬಹುದು. ಈತನು ಕನ್ನಡ ಪುಸ್ತಕಗಳನ್ನು ರಚಿಸಿರುವ ಬಗ್ಗೆ "ಹದಿನೇಳನೇಯ ಶತಮಾನದ ಸಮಕಾಲೀನ ಗ್ರಂಥ ಚರಿತ್ರೆಕಾರರಾದ (Bibliographere) ಸೋಮರ್ ಪೊಗೆಲ್ ಮತ್ತು ಸೊತ್ ವೆಲ್ ಇವರು ಸಿನ್ನಾಮಿಯು ಕನ್ನಡದಲ್ಲಿ ಪುಸ್ತಕಗಳನ್ನು ಬರೆದಿದ್ದಾನೆಂದು ಸ್ಪಷ್ಟವಾಗಿ ಉಲ್ಲೇಖಿಸಿದ್ದಾರೆ".[೧] ಈತನ ಬರವಣಿಗೆ ಹೀಗೆ ಗುರುತಿಸಬಹುದು.

೧. ಕ್ರೈಸ್ತ ಧರ್ಮದ ಮುಖ್ಯ ಧಾರ್ಮಿಕ ತತ್ವಗಳನ್ನು ಬೋಧಿಸುವ ದೀರ್ಘ ಪ್ರಶ್ನೋತ್ತರಾವಳಿ.

೨. ಅದರ ಸಾರರೂಪ.

೩. ಕ್ರೈಸ್ತ ಸಂತರ ಜೀವನ ಚರಿತ್ರೆಗಳು

೪. ಕ್ರೈಸ್ತ ಧರ್ಮ ಸಮರ್ಥನೆ

೫. ಮೈಸೂರಿನಲ್ಲಿ ಪ್ರಚಲಿತವಿದ್ದ ತಪ್ಪುಕಲ್ಪನೆಗಳ ಮತ್ತು ಮೌಢ್ಯಗಳ ಖಂಡನೆ.

೬. ಕನ್ನಡ ವ್ಯಾಕರಣ

೭. ಕನ್ನಡ ಕೋಶ

ಹೀಗೆ ಸಿನ್ನಾಮಿಯು ರಚಿಸಿದನೆನ್ನಲಾದ ಕನ್ನಡ ಕೃತಿಗಳ ಬಗ್ಗೆ ನಿಶ್ಚಿತ ಮಾಹಿತಿ ತಿಳಿದುಬರುತ್ತದೆ. ಆದರೆ ಈ ಕೃತಿಗಳು ಲಭ್ಯವಿಲ್ಲ. ಅನಂತರದ ಕೆಥೋಲಿಕ ಸಾಹಿತ್ಯದ ಆರಂಭದ ಮೂರು ಹಸ್ತಪ್ರತಿಗಳನ್ನು ಕಾಣುತ್ತೇವೆ.

೧. ಲಂಡನಿನ ಸ್ಕೂಲ್ ಆಫ್ ಓರಿಯೆಂಟಲ್ ಎಂಡ್ ಆಫ್ರಿಕನ್ ಸ್ಟಡೀಸ್ ನಲ್ಲಿರುವ ೧೨೯೦೩ ಕ್ರಮಾಂಕದ ಹಸ್ತಪ್ರತಿ ಇದರ ಪೋಟೋಪ್ರತಿ ಮೈಸೂರು ಕನ್ನಡ ಅಧ್ಯಯನ ಸಂಸ್ಥೆಯಲ್ಲಿದೆ. ಕ್ರಮಾಂಕ, ಕೆ.ಎ.೬೦೬

೨. ಲಂಡನ್ನಿನ ಅದೇ ಸಂಸ್ಥೆಯಲ್ಲಿರುವ ೭೦೭೮ ಕ್ರಮಾಂಕದ ಹಸ್ತಪ್ರತಿ ಇದರ ಮೈಕ್ರೊಫಿಲ್ಮ್ ಪ್ರತಿ ಮೈಸೂರು ಕನ್ನಡ ಅಧ್ಯಯನ ಸಂಸ್ಥೆಯಲ್ಲಿದೆ. ಕ್ರಮಾಂಕ ಎನ್ .೧೦೦೪, ಇವೆರಡನ್ನೂ ಹಾವನೂರವರು ನಿರ್ದೇಶಿಸಿದಂತೆ ಇಲ್ಲಿಯೂ ಕ್ರಮವಾಗಿ ಹಸ್ತಪ್ರತಿ-೪೦ ಮತ್ತು ಹಸ್ತಪ್ರತಿ ೨೨೭ ಎಂದು ಕರೆದಿದೆ.

೩. ಮಂಗಳೂರು ಸ್ಟೆಂಟ್ ಅಲಾಸಿಯಸ್ ಕಾಲೇಜಿನಲ್ಲಿರುವ ಒಂದು ತಾಳೆಗರಿ ಗ್ರಂಥ. ಇದು ದೇವಮಾತೆಯ ಧರ್ಮ ಚರಿತ್ರೆಗಳು ಎಂಬ ಗ್ರಂಥ ಆರಂಭದ ಮತ್ತ ಕೊನೆಯ ಕೆಲವು ಗರಿಗಳು ನಷ್ಟವಾಗಿವೆ. ಈ ಗ್ರಂಥ ಪೂರ್ಣವಾಗಿ ಹ.ಪ್ರ.೩೩೭ರಲ್ಲಿದೆ.

---

೧. ಹೊ.ಅ.ಶ್ರೀ.ಹಾ., ಪು.೯೦

ಕೆಥೋಲಿಕ ಸಾಹಿತ್ಯದಲ್ಲಿ ಮತ್ತೊಬ್ಬ ಪ್ರಾಚೀನ ಕರ್ತೃ ದಿ ನೊಬಿಲಿ. ಈತನ ಕೃತಿಗಳೆನ್ನಲಾದ ಪುನರ್ಜನ್ಮದಾಕ್ಷೇಪ ಆತ್ಮನಿರ್ಣಯ ಇತ್ಯಾದಿಗಳು ಸುಮಾರು. ೧೬೫೬ರಕ್ಕಿಂತ ಮೊದಲೇ ಕನ್ನಡಕ್ಕೆ ಅನುವಾದಗೊಂಡಿವೆ. ಈತನ ಕೃತಿಗಳ ವಿವರ

- ನೊಬಿಲಿ
  - ಜ್ಞಾನೋಪದೇಶಮ್ (ತಮಿಳು)
    - ಮೂಲದೊಡ್ಡಜಪದ ಪುಸ್ತಕ (ಕನ್ನಡ ಮುದ್ರಿತವಲ್ಲ)
      - ದೊಡ್ಡ ಜಪದ ಪುಸ್ತಕದ ಜ್ಞಾನೋಪದೇಶದ ಸಂಕ್ಷೇಪವು (ಕನ್ನಡ ಮುದ್ರಿತ)
      - ಜ್ಞನೋಪದೇಶ- ೩ ಕನ್ನಡ-ಹ.ಪ್ರ- ೪೦
    - ಮೂಲ ಸತ್ಯವೇದ ಪರೀಕ್ಷೆ (ತೆಲುಗು)
      - ಸತ್ಯೋಪದೇಶ (ಕನ್ನಡ.ಹ.ಪ್ರ.೩೩೭)
      - ಜ್ಞಾನೋಪದೇಶ-೧ ಕನ್ನಡ ಹ.ಪ್ರ-೩೩೭
      - ಸತ್ಯವೇದ ಪರೀಕ್ಷೆ (ಕನ್ನಡ ಮುದ್ರಿತ)
    - ಹದಿಮೂರು ಪ್ರಸಂಗಗಳು (ಕನ್ನಡ ಮುದ್ರಿತ) ಜ್ಞಾನೋಪದೇಶ-೪ ಕನ್ನಡ ಹ.ಪ್ರ-೪೦
  - ಅಜ್ಞಾತ ಕೃತಿ (ತಮಿಳು ಅನುವಾದ) ಜ್ಞಾನೋಪದೇಶ-೨ (ಕನ್ನಡ ಹ.ಪ.೩೩೭)

ಕೃಪೆ : ಕನ್ನಡ ಧಾರ್ಮಿಕ ಸಾಹಿತ್ಯಕ್ಕೆ ಕ್ರೈಸ್ತ ಮಿಶನರಿಗಳ ಕೊಡುಗೆ, ಎಡ್ವರ್ಡ್‌ನೊರೋನ

ಚಾರ್ಬೊನಾ ಅಥವಾ ಶಾರ್ಬೊನೊ (೧೮೦೬-೧೮೭೩) ಎಂದು ಕರೆಯಿಸಿಕೊಳ್ಳುವ ಕೆಥೋಲಿಕ ಮಿಶನರಿಯು ೧೮೩೦ರಲ್ಲಿ ಭಾರತಕ್ಕೆ ಬಂದು ದಕ್ಷಿಣ ಭಾರತದ ಭಾಷೆಗಳನ್ನು ಅಭ್ಯಾಸ ಮಾಡಿದನು. ಕೆಥೋಲಿಕ ಸಾಹಿತ್ಯದಲ್ಲಿ ಈತನ ಕೊಡುಗೆಯು ಅಪಾರವಾಗಿದೆ. ಬೆಸ್ಕಿಯ ತಮಿಳು ಕೃತಿಯನ್ನು ಕನ್ನಡಕ್ಕೇ ತರ್ಜುಮೆಗೊಳಿಸಿದ್ದಾನೆ. ಅವುಗಳಲ್ಲಿ ಪ್ರಮುಖವಾದವುಗಳು ದೈವ ಪರೀಕ್ಷೆ (೧೮೬೨), ಸತ್ಯವೇದ ಪರೀಕ್ಷೆ (೧೮೫೨), ದಿವ್ಯ ಮಾತೃಕೆ (೧೮೬೨), ಸುಕೃತ ಮಂತ್ರಗಳು (೧೮೬೬) ಹಾಗೂ ಜಪದ ಪುಸ್ತಕವು(೧೮೬೩) ರೋಮನ್ ಕೆಥೋಲಿಕರ ಧಾರ್ಮಿಕ ವಿಧಿ ನಿಯಮಗಳ ದೊಡ್ಡ ಹೊತ್ತಿಗೆ. ವೇದಮಾರ್ಪಡಿಸುವಿಕೆಯ ಖಂಡನೆ ಮತ್ತು ಪ್ರೊಟೆಸ್ಟೆಂಟ್ ಎಂಬ ಪತಿತ ಮಾರ್ಗ (೧೮೬೭) ಇತ್ಯಾದಿ. ಈತನು ಲ್ಯಾಟನ್ -ಕನಾದಿಸ್ (೧೮೬೧) ಎಂಬ ಎರಡು ಶಬ್ದಕೋಶಗಳನ್ನು ರಚಿಸಿದ್ದಾನೆ. ಜೇ ಬ್ಯಾರಿಲ್ ಎಂಬವನ ತಮಿಳು ಕೃತಿಯಾದ 'ಪರಮಾರ್ಥ ಗುರುವಿನ ಕಥೆ'ಯನ್ನು ಕನ್ನಡಿಸಿದ್ದಾನೆ.(೧೮೬೭).

ಸಂಸ್ಕೃತದ ನೀತಿಪದ ಶ್ಲೋಕಗಳನ್ನು ಬೈಬಲ್ ವ್ಯಾಕ್ಯಗಳೊಂದಿಗೆ ಹೋಲಿಸಿ ಶ್ಲೋಕ ಸಂಗ್ರಹ(೧೮೬೮) ಎಂಬ ಉತ್ಕೃಷ್ಟ ಕೃತಿಯನ್ನು ಬೆಂಗಳೂರ ಕೆಥೋಲಿಕ ಪ್ರೆಸ್ ಪ್ರಕಟಿಸಿದೆ. ೧೮೫೦ರಲ್ಲಿ ಮೈಸೂರ ಮಿಶನಿಗೆ ಬಂದ ಫಾದರ್ ಬುತೆಲೂ ನನ್ನು ಬೆಂಗಳೂರಿನ ಸೆಮನೆರಿಯು ಮೇಲಾಧಿಕಾರಿಯನ್ನಾಗಿ ನೇಮಿಸಿತು. ಕನ್ನಡ-ಇಂಗ್ಲೀಷಗಳನ್ನು ಶ್ರದ್ಧೆಯಿಂದ ಅಭ್ಯಾಸ ಮಾಡಿ ಅಲ್ಪಾವಧಿಯಲ್ಲಿ ಅನೇಕ ಗ್ರಂಥಗಳನ್ನು ರಚಿಸಿದನು. ಧರ್ಮಬೋಧನೆ, ಪ್ರಾಟೆಸ್ಟಂಟರ ವಿರೋಧ ಸ್ವಮತ ಸಮರ್ಥನೆ, ಶಿಕ್ಷಣ ಶಾಸ್ತ್ರ ಇತ್ಯಾದಿಗಳು ಈತನ ಕೃತಿಗಳ ವಿಷಯಗಳು. ಸತ್ಯವೇದ ಚರಿತ್ರೆಗಳು, ಜ್ಞಾನೋಪದೇಶ, ಹಬ್ಬ, ಸಾಂಗ್ಯಗಳ ವ್ಯಾಖ್ಯಾನವು, ಪತೀತದ ಖಂಡನೆಯು ಅಥವಾ ವೇದ ಮಾರ್ಪಡಿಸುವಿಕೆಯು ಹಾಗೂ ತಿರುಸಭೆಯ ಲಕ್ಷಣಗಳು, ಜ್ಞಾನಬೋಧಕ ಕನ್ನಡ ಜ್ಞಾನೋಪದೇಶ ಮತ್ತು ಆಚಾರಶಿಷ್ಟರ ಚರಿತ್ರೆಯು ಈ ಮೇಲಿನ ಬಹುಕೃತಿಗಳು ಅನುವಾದಗೊಂಡವುಗಳಾಗಿವೆ.

ಕೆಥೋಲಿಕ ಸಾಹಿತ್ಯದಲ್ಲಿ ಸೃಜನಶೀಲ ಬರವಣಿಗೆಯ ಭಾಗ ಅಲ್ಪ. ತಮಿಳು-ತೆಲಗು ಕೊಂಕಣಿಯನ್ನಾಧರಿಸಿ, ಅನುವಾದಗೊಂಡವುಗಳೇ ಹೆಚ್ಚು. ಒಟ್ಟಿನಲ್ಲಿ ಅವರಿಗೆ ಧರ್ಮಪ್ರಚಾರಾರ್ಥವಾಗಿ ಕನ್ನಡ ಅವಶ್ಯಕ ಭಾಷೆಯಾಗಿ ಪರಿಣಮಿಸಿತು. ಆಯಾ ಸ್ಥಳದ ಅವಶ್ಯಕ ಭಾಷೆಯಲ್ಲಿ ಅವರ ಸಾಹಿತ್ಯ ಸಾಗಿ ಬಂದಿದೆ. ಉದಾ : ತಮಿಳಿನಲ್ಲಿ ಬೆಸ್ಕಿ, ಮರಾಠಿ ಕೊಂಕಣಿಗಳಲ್ಲಿ ಸ್ಟಿವನ್, ಮಲೆಯಾಳಮ್ ನಲ್ಲಿ ಅರ್ನೋಸ್, ಎಂಬವರನ್ನು ಪ್ರಮುಖರೆಂದು ಪರಿಗಣಿಸಬಹುದು. ಪರಭಾಷಾ ವ್ಯಾಮೋಹ ಹಾಗೂ ಚರ್ಚ ಆರಾಧನೆಯಲ್ಲಿ ಲ್ಯಾಟಿನ್ ಬಳಕೆ ಆದುದರಿಂದ ೧೯೬೨ರವರೆಗೂ ಅವರಿಗೆ ಕನ್ನಡ ಬೈಬಲ್ ಅವಶ್ಯಕತೆ ಕಂಡುಬರಲಿಲ್ಲ.

ಶ್ರೀ.ಹಾವನೂರರವರ 'ಹೊಸಗನ್ನಡ ಅರುಣೋದಯ' ಮಹಾಪ್ರಬಂಧದ ೪೪೭ನೇ ಪುಟದಲ್ಲಿ 'ಹಿಂದೂ ಧರ್ಮದ ಟೀಕೆ, ಪ್ರತಿ ಟೀಕೆ' ಎಂಬ ಉಪಶೀರ್ಷಿಕೆಯ ಅಡಿಯಲ್ಲಿ ೪೫೦ನೇ ಪುಟದಲ್ಲಿ ಮಾಧವಾನಂದ ಸ್ವಾಮಿ ಎಂಬುವರು 'ಬೈಬಲ್ ಅತ್ಯಾಚಾರ' 'ಕಟೋಪದೇಶಕರು ಯಾರು? ಎಂಬೆರಡು ಪುಸ್ತಕಗಳನ್ನು ಹೊರತಂದರು. 'ಹಿಂದೂ ಬಾಂಧವರಿಗೆ ಬೈಬಲ್ಲನಲ್ಲಿ ಇರತಕ್ಕ ಅಸಂಗತಗಳನ್ನು ಹೊರಪಡಿಸುವುದು ಸ್ವಧರ್ಮದಲ್ಲಿ ಇಂತಹ ಅಸಂಗತಗಳು ಇಲ್ಲವಾದುದರಿಂದಲೂ ಅಭಿಮಾನ ಹುಟ್ಟಿಸುವುದಕ್ಕೋಸ್ಕರ' ಇವುಗಳನ್ನು ಬರೆದುದಾಗಿ ಲೇಖಕರು ಹೇಳಿದ್ದಾರೆ ಎಂದಿದ್ದಾರೆ. ಇನ್ನು ಮುಂದುವರೆದು ಪರಧರ್ಮ ನಿಂದೆಯು ನಮ್ಮಲ್ಲಿ ಹೇಳಿಲ್ಲವಾದರೂ ಕ್ರೈಸ್ತ ಮತಗಳು ನಮ್ಮ ಮತವನ್ನು ನಿಂದಿಸುವರಾದ್ದರಿಂದ ಅನಿವಾರ್ಯವಾಗಿ ಈ ಲೇಖಕ ಕಾರ್ಯ ಮಾಡಬೇಕಾಗಿದೆ ಎಂದು ಸಮರ್ಥನೆ ನೀಡಿದ್ದಾರೆಂದು ಬರೆದಿರುವರು.

ಈ ಮೇಲಿನ ಎರಡು ಸಂಗತಿಗಳನ್ನು ಕುರಿತು ನೋಡುವುದಾದರೇ ಮೊದಲನೆಯದು, ಪರಧರ್ಮ ನಿಂದೆಯು ನಮ್ಮಲ್ಲಿ ಹೇಳಿಲ್ಲ. ಆದರೆ ಕ್ರೈಸ್ತ ಮತ ನಮ್ಮ ಮತವನ್ನು ನಿಂದಿಸುತ್ತಿದ್ದಾರೆ ಎಂಬ

ಆರೋಪವೇನೋ ಮೇಲು ನೋಟಕ್ಕೆ ಸತ್ಯವೆನಿಸಬಹುದು. ಅಂದರೆ ಕ್ರೈಸ್ತರು ಭಾರತಕ್ಕೆ ಅದರಲ್ಲಿಯೂ ಕರ್ನಾಟಕಕ್ಕೆ ಬರುವ ಮೊದಲು ಯಾವ ಒಂದು ಧರ್ಮವು ಇನ್ನೊಂದು ಧರ್ಮವನ್ನು ಹಳಿದಿಲ್ಲವೆ? ನಾವು ಪರಧರ್ಮ ಸಹಿಷ್ಣುಗಳು ಎಂದೇ ನಮ್ಮನ್ನು ಹೊಗಳಿಕೊಳ್ಳುತ್ತೇವೆ ಎಂಬುದರಲ್ಲಿ ಸತ್ಯಾಂಶವಿದೆಯೇ?

ಕರ್ನಾಟಕದಲ್ಲಿ ಪ್ರಬಲವಾದ ವೀರಶೈವ ಧರ್ಮ ತನ್ನೆಲ್ಲ ಪೂರ್ವದ ಧರ್ಮಗಳನ್ನು ಹಳಿದಿಲ್ಲವೇ ಇಲ್ಲಿ ಕೆಲವೊಂದು ಉದಾಹರಣೆ ನೋಡಬಹುದು.

೧. ಉದಾ : ವೇದ ವೇಧಿಸಲರಿಯದೇ ಕೆಟ್ಟೈವು
ಶಾಸ್ತ್ರಸಾಧಿಸಲರಿಯದೇ ಕೆಟ್ಟವು
ಪುರಾಣ ಪೂರೈಸಲರಿಯದೆ ಕೆಟ್ಟೈವು
ಹಿರಿಯರು ತಮ್ಮ ತಾವು ಅರಿಯದೆ ಕೆಟ್ಟರು
ತಮ್ಮ ಬುದ್ಧಿ ತಮ್ಮನ್ನೆ ತಿಂದಿತ್ತು
ನಿಮ್ಮನೆತ್ತ ಬಲ್ಲರೋ ಗುಹೇಶ್ವರಾ - ಅಲ್ಲಮ ಪ್ರಭು

೨. ಆದಿ ಪುರಾಣ ಅಸುರರಿಗೆ ಮಾರಿ
ವೇದ ಪುರಾಣ ಹೋತಿಂಗೆ ಮಾರಿ
ರಾಮ ಪುರಾಣ ರಕ್ಕಸಂಗೆ ಮಾರಿ
ಭಾರತ ಪುರಾಣ ಗೋತ್ರಕ್ಕೆ ಮಾರಿ
ಎಲ್ಲ ಪುರಾಣ ಕರ್ಮಕ್ಕೆ ಮೊದಲು
ನಮ್ಮ ಪುರಾಣಕ್ಕೆ ಪ್ರತಿಯಿಲ್ಲ
ಕೂಡಲ ಸಂಗಮ ದೇವಾ - ಬಸವಣ್ಣ

೩. ವೇದಶಾಸ್ತ್ರ ಪುರಾಣಂಗಳೆಲ್ಲವು
ಕೊಟ್ಟಣವ ಕುಟ್ಟಿದ ನುಚ್ಚು ತೌಡು
ಕಾಣಿಭೋ ಅವನು ಕುಟ್ಟಲೇಕೆ (ಕುಸುಕಲೇಕೆ)
ಅತ್ತಿತ್ತ ಹರಿವ ಮನವ ಶಿವನರಿದಡೆ
ಬಟ್ಟ ಬಯಲು ಚನ್ನಮಲ್ಲಿಕಾರ್ಜುನ - ಅಕ್ಕಮಹಾದೇವಿ

ಹೀಗೆ ಕೇವಲ ೧೨ನೇ ಶತಮಾನ ಒಂದರ ಅನೇಕ ಪರಧರ್ಮ ನಿಂದನೆಯ ವಿಚಾರಗಳನ್ನು ಉದಾಹರಿಸಬಹುದು.

ಇನ್ನೂ ಹಿಂದೂಧರ್ಮದಲ್ಲಿ ಆಂತರಿಕ ಧರ್ಮನಿಂದನೆಯನ್ನು ಕಂಡರೆ ನಿಜವಾಗಿಯೂ ಭಾರತದಲ್ಲಿ ಧರ್ಮ ಹುಟ್ಟಿದ್ದು ನಿಂದನೆಗೆ ಒಳಗಾಗಿ. out dated ಆಗಿದ್ದು ಪುನ ಅನೇಕ ಧರ್ಮಗಳ ಉಗಮಕ್ಕೆ

ನಾಂದಿಯಾಗಿದ್ದನ್ನು ಕಂಡರೆ ಜಗತ್ತಿನ ಇನ್ನಾವ ದೇಶದಲ್ಲಿ ಈ ಬಗೆಯ ವಿಲಕ್ಷಣತೆಯನ್ನು ಕಾಣಲಾರೆವು. ಹಿಂದೂ ಧರ್ಮ ಹುಟ್ಟಿನಿಂದಲೂ ಆಂತರಿಕವಾಗಿ ನಿಂದನೆಯನ್ನೆ ಮುಖ್ಯ ವಸ್ತುವನ್ನಾಗಿ ಬೆಳೆಸಿಕೊಂಡು ಬಂದಿರುವುದರಿಂದ ವಚನಕಾರರಂತು ನೇರವಾಗಿಯೇ ಟೀಕಿಸಿದ್ದಾರೆ. ಇಲ್ಲಿ ವಚನ ಸಾಹಿತ್ಯ ಕಾಲಕ್ಕಿಂತ ಹಿಂದಿನ ಅನೇಕ ಉದಾಹರಣೆಗಳನ್ನು ಕಾಣಬಹುದು.

೧. ಉದಾ : ವಿಷ್ಣುವನ್ನು ಅನುಸರಿಸುವವರಿಗೆ ನಿತ್ಯ ನರಕವೇ ಗತಿ

ವಿಷ್ಣು ದರ್ಶನ ಮಾತ್ರೇಣ ಶಿವದ್ರೋಹಃ ಪ್ರಜಾಯತೇ |
ಶಿವದ್ರೋಹಾನ್ನ ಸಂದೇಹೊ ನರಕಂಯಾಂತಿದಾರುಣಂ ||
ತಸ್ಮಾನ್ನು ವಿಷ್ಣು ನಾಮಾಪಿ ನವಕ್ತವ್ಯಂಕದಾಚನ |

ಅರ್ಥ : ವಿಷ್ಣುವನ್ನು ದರ್ಶಿಸುವಂಥಾದ್ದೇ ಶಿವ ದ್ರೋಹವಾಗಿದೆ. ಶಿವ ದ್ರೋಹದಿಂದ ನರಕ ಲಭಿಸುವುದು ಆದುದರಿಂದ ವಿಷ್ಣುವಿನ ನಾಮವನ್ನೂ ಕೂಡ ಎಂದಿಗೂ ಉಚ್ಚರಿಸಬಾರದು.

೨. ಉದಾ : ವಿಷ್ಣುವೇ ಶ್ರೇಷ್ಠನು : ಆತನ ಭಕ್ತರಲ್ಲದವರು ನೀಚರೆಂಬುವರು

ಯಸ್ತು ನಾರಾಯಣಂದೇವಾ ಬ್ರಹ್ಮರುದ್ರಾದಿದೈವತೈಃ |
ಸಮಮನ್ಯೈರ್ನಿರೋಕ್ಷೇಚಸ ಪಾಷಂಡೀಭವೇತ್ಸದಾ ||
ಕಿಮತ್ರಬಹುನೋಕ್ತೇನ್ ಬ್ರಾಹ್ಮಣಾಯೇವ್ಯ ವೈಷ್ಣವಾಃ
ನಸ್ಪ್ರಷ್ಟವ್ಯಾನವಕ್ತವ್ಯಾ ನದೃಷ್ಟವ್ಯಾಃಕದಾಚನಃ |

ಅರ್ಥ : ಯಾವನು ವಿಷ್ಣುವನ್ನು ಬ್ರಹ್ಮನು ಮೊದಲಾದ ದೇವತೆಗಳಿಗೆ ಸಮಾನ ಮಾಡುತ್ತಾನೋ ಅವನು ಎಂದೆಂದಿಗೂ ಭ್ರಷ್ಟನಾಗಲಿ, ವಿಷ್ಣು ಭಕ್ತರಲ್ಲದ ಬ್ರಾಹ್ಮಣರನ್ನು ಮುಟ್ಟಲೂ, ಮಾತಾಡಲೂ ನೋಡಲು ಬಾರದು.

ಹೀಗೆ ಮೂಲ ಧರ್ಮದಲ್ಲಿಯೇ ಆಂತರಿಕವಾದ ಪರಮತನಿಂದನೇ ನಡೆದು ಬಂದಿರುವ ಅನೇಕ ಉದಾಹರಣೆಗಳನ್ನು ಕೊಡಬಹುದು. ಹೀಗಿರುವಾಗ ಮಾದವಾನಂದ ಸ್ವಾಮಿಯವರ ಅಂದಿನ ಹಿಂದೂಧರ್ಮದ ಅಭಿಮಾನವನ್ನು ಹುಟ್ಟುವುದಕ್ಕಾಗಿ ಬರೆದಿರುವುದಾಗಿ ಕೊಚ್ಚಿಕೊಂಡಿದ್ದು ಕ್ರೈಸ್ತಮತ ಹಿಂದುಮತವನ್ನು ನಿಂದಿಸುವ ಬಗ್ಗೆ ಪ್ರಸ್ತಾಪಿಸಿದ್ದಾರೆ. ಮಿಶನರಿಗಳು ಧರ್ಮನಿಂದನೆಯ ಭಾರತೀಯ ಸಂಸ್ಕೃತಿಯನ್ನು ಅರಿತೆ ಧರ್ಮ ಟೀಕೆಗೆ ಕೈಹಾಕಿದುದ್ದು ಕಂಡುಬರುವುದು.

ಎರಡನೇಯದಾಗಿ - ಬೈಬಲ್ಲಿನ ಅಸಂಗತ ಕುರಿತು ಮಾಧವಾನಂದಸ್ವಾಮಿ ಬರೆದ ಬಗ್ಗೆ, ಶ್ರೀ ಹಾವನೂರವರು ಹೀಗೆ ಬರೆದಿರುವರು.(ಪು.೪೫೧) "ಬೈಬಲ್ಲಿನ ಸಂದೇಹಗಳು' ಎಂಬ ಲೇಖನ ಬರೆದು ಅದಕ್ಕೆ ಉತ್ತರ ಕೊಡಲೆಂದು ಅನೇಕ ಮಿಶನರಿಗಳಿಗೆ ಕಳುಹಿಸಿದಾಗ ಯಾವ ಮಿಶನರಿಯೂ ಮುಂದೆ ಬರಲಿಲ್ಲವಂತೆ. ಹಿಂದೂ ಶಾಸ್ತ್ರ ಗ್ರಂಥಗಳನ್ನೂ ಪುರಾಣ ಕಥೆಗಳನ್ನೂ ಮಿಶನರಿಗಳು ಟೀಕಿಸುತ್ತಿದ್ದಂತೆಯೇ

ಬೈಬಲ್ಲಿನಲ್ಲಿಯ ವಿಸಂಗತಿಗಳನ್ನು ಎತ್ತಿಕೊಂಡು ಮುಂದಿನ ಹಲವಾರು ಸಂಚಿಕೆಗಳಲ್ಲಿ ಟೀಕಿಸಿದ್ದು ಕಂಡುಬರುತ್ತದೆ. ಬೈಬಲ್ಲಿನ ಉತ್ಪತ್ತಿಕಾಂಡದ ೧-೧೮ರ ವಿಚಾರದ ಮೇಲೆ ಬಂದ ಟೀಕೆ ಇಂತಿದೆ. "ಸೂರ್ಯನ ಹುಟ್ಟುವಿಕೆಯೂ ಸೂರ್ಯಕರ್ಷಣೆಯಿಲ್ಲದೆ ಪೃಥ್ವಿಯು ನಿಂತಿತ್ತೆಂಬುದೂ ಬಹುಶಾಸ್ತ್ರ ವಿರೋಧವಾಗಿರುತ್ತದೆ..."

೧೧ ರಿಂದ ೧೩ರ ವಚನದ ವರೆಗೆ ಹುಲ್ಲು ಪಲ್ಯ ಮೊದಲಾದ ಸಸ್ಯಾದಿಗಳು ಮೂರನೆಯ ದಿನದಲ್ಲಿ ಸೃಷ್ಟಿಸಿದ್ದವೆಂಬುದೂ ಬಹು ವಿರೋಧವಾಗುತ್ತದೆ. ಯಾಕೆಂದರೆ ಸೂರ್ಯನ ಉಷ್ಣತ್ವ ಇಲ್ಲದೆ ಸಸ್ಯಗಳ ಮೊಳೆಯುವಿಕೆಯೂ ವಾಯು ಮೇಘವನ್ನು ಹೊರುವಿಕೆಯೂ ಮೇಘವು ಸ್ವವ್ಯಾಪರದಲ್ಲಿ ಪ್ರವರ್ತಿಸುವಿಕೆಯೂ ಯಾವುದೂ ಆಗಲಾರದು. ಈ ಮೇಲಿನ ಟೀಕೆ ಬೈಬಲ್ ನಲ್ಲಿ ದೇವರು ಆರು ದಿನದಲ್ಲಿ ಜಗತ್ತನ್ನು ಸೃಷ್ಟಿಸಿದ ಬಗೆಯ ಕುರಿತಾಗಿದೆ.

ಬೈಬಲ್‌ನಲ್ಲಿಯ ಸೃಷ್ಟಿ ಕೇವಲ ಭೂಮಿ ಎನಿಸಿಕೊಳ್ಳುವ ಅಂಶಕ್ಕೆ ಮಾತ್ರ ಅನ್ವಯವಾಗು ವಂತಹುದು. ಇಡೀ ಆಕಾಶ ಕಾಯಕ್ಕೆಲ್ಲ ಅಲ್ಲ ಅನ್ವಯಿಸದು. ದೇವರು ಭೂಮಿ ಉಂಟು ಮಾಡಿ, ಅಲ್ಲಿ ಇರುವ ಸಕಲ ಜೀವಿಗಳ ಮೇಲೆ ಒಡೆತನ ಮಾಡಲು ಮನುಷ್ಯನನ್ನು ನಿರ್ಮಿಸಲು ಯೋಚಿಸಿ, ಈ ಸೃಷ್ಟಿಯ ಕಾರ್ಯಕ್ಕೆ ದೇವರು ಕೈಹಾಕಿದ ಬಗ್ಗೆ ಬೈಬಲ್ ತಿಳುವಳಿಕೆ ನೀಡುತ್ತದೆ. ಹೀಗಿದ್ದಾಗ ಸೂರ್ಯನ ಹುಟ್ಟುವಿಕೆ ಸೂರ್ಯಾಕರ್ಷಣೆ ಇಲ್ಲದೆ ಪೃಥ್ವಿನಿಂತ ಬಗ್ಗೆ ಸಂಶಯ ಸಹಜ. ಆದರೆ ಬೈಬಲ್ ಮೊದಲ ವಚನ ಹೀಗಿದೆ." ಆದಿಯಲ್ಲಿ ದೇವರು ಆಕಾಶವನ್ನು (English Bible ನಲ್ಲಿ Heaven ಎಂದಿದೆ) ಭೂಮಿಯನ್ನೂ ಉಂಟು ಮಾಡಿದನು. ಭೂಮಿಯು ಕ್ರಮವಿಲ್ಲದೆಯೂ ಬರಿದಾಗಿಯೂ ಇತ್ತು. ಆದಿ ಸಾಗರದ ಮೇಲೆ ಕತ್ತಲಿತ್ತು. ದೇವರಾತ್ಮವು ಜಲಸಮೂಹಗಳ ಮೇಲೆ ಚಲಿಸುತ್ತಿತ್ತು." (ದೇವರಾತ್ಮನಿಲ್ಲದ ಸ್ಥಳವಿಲ್ಲ) ಮುಂದೆ ೩ನೇ ವಚನದಲ್ಲಿ ಹೀಗೆ ಬರೆಯಲಾಗಿದೆ. "ಆಗ ದೇವರು ಬೆಳಕಾಗಲಿ ಅನ್ನಲು ಬೆಳಕಾಯಿತು. ಇಲ್ಲಿ ಸೂರ್ಯನನ್ನು ದೇವರು ಉಂಟು ಮಾಡಿದನೆಂದು ಬರೆದಿಲ್ಲ. ಇದ್ದ ಸೂರ್ಯನ ಬೆಳಕು ಪ್ರವೇಶವಾಯಿತು. ಹೀಗಾಗಿ ದೇವರ ಮೊದಲ ದಿನದ ಸೃಷ್ಟಿ ಕಾರ್ಯದಲ್ಲಿ ಭೂಮಿಗೆ ಬೆಳಕು ಬಂತು. ಹೀಗಾದಾಗ ಇನ್ನು ಮೂರನೇ ದಿನದಲ್ಲಿ ಹುಲ್ಲು ಪಲ್ಯ ಮೊದಲಾದ ಸಸ್ಯಾದಿಗಳು ಬೆಳೆದವು ಎಂದು ಬರೆದದ್ದರಲ್ಲಿ ಸಂಶಯವಿಲ್ಲ. ಯಾಕೆಂದರೆ ಮೊದಲ ದಿನದಲ್ಲಿ ಬೆಳಕು ಬಂದು ಭೂಮಿಯ ಮೇಲೆ ಬೀಜ ವೃಕ್ಷ ಬೆಳೆಯಲು ಆಸ್ಪದವಾಗಿದ್ದು ತಪ್ಪಲ್ಲ. ಮಾಧವಾನಂದ ಸ್ವಾಮಿಗಳ ಬೈಬಲ್ ಅಸಂಗತಗಳ ವಿಷಯಕ್ಕೆ ಪ್ರತಿಯಾಗಿ ಸ್ಪಷ್ಟಣೆ ಕೇವಲ ಅಂದಿಗೆ ಅಲ್ಲ ಇಂದಿಗೂ ಕೊಡಬಹುದು.

ಇಂತಹ ಸಂದೇಹಾಸ್ಪದ ಅಂಶಗಳನ್ನು ಮುಂದೆ ಯಾಕೆ ಕೈಬಿಡಲಾಯಿತೆಂಬುದಕ್ಕೆ ಹೀಗೆ ಶ್ರೀ ಹಾವನೂರವರು ಕಾರಣಕೊಟ್ಟಿದ್ದಾರೆ. "ಆದರೆ ದೇಶೀ ಕ್ರಿಸ್ತೀಯರ ಸಂಖ್ಯೆ ಹೆಚ್ಚಿದಂತೆ ಹಾಗೂ ಪಾಶ್ಚಾತ್ಯ

ಶಿಕ್ಷಣವು ಹಬ್ಬುತ್ತ ನಡೆದಂತೆ ಈ ಬಗೆಯ ಟೀಕೆ-ಪ್ರತಿಟೀಕೆಗಳು ತಮ್ಮ ತೀವ್ರತೆಯನ್ನು ಕಳೆದುಕೊಂಡವು."[೧] ಎಂದಿದ್ದಾರೆ.

ಇಂದಿಗೂ ಕ್ರೈಸ್ತರ ಸಂಖ್ಯೆ ೨ ರಿಂದ ೩ ಪ್ರತಿಶತ ಮಾತ್ರ. ಆದರೆ ಇಲ್ಲಿ ಇಂತಹ ಟೀಕೆಗಳು ಗೌಣವಾಗಲು ಧಾರ್ಮಿಕ ವಿಶಾಲ ದೃಷ್ಟಿ ಕಾರಣವಾಗಿರಬಹುದು. ಇಂದಿಗೂ ಬೈಬಲ್‌ನಲ್ಲಿರುವ ಸೃಷ್ಟಿಕಾರ್ಯ ತಪ್ಪಾಗಿ ಅರ್ಥವಿವರಣೆಗೊಳ್ಳುತ್ತದೆ. ದೇವರ ದೃಷ್ಟಿಯಲ್ಲಿ ಒಂದು ದಿನ ಬಹುವರ್ಷಗಳ ಮೊತ್ತವೆಂದು ಬೈಬಲ್ ತಿಳಿಸುತ್ತದೆ. ಭೂಮಿಯ ಸೃಷ್ಟಿಯಷ್ಟೇ ಬೈಬಲ್‌ಗೆ ಸಂಬಂಧಿಸಿದ್ದು ಇಡೀ ಆಕಾಶ ಕಾಯವಲ್ಲ. ಮತ್ತು ಬೈಬಲ್ ಈ ಸೃಷ್ಟಿಕಾರ್ಯದ ಟೀಕೆ ಟಿಪ್ಪಣಿ ಮುಂದುವರೆದಂತೆಲ್ಲ ಹಿಂದೂ ಧರ್ಮ ದೃಷ್ಟಿಯ ಸೃಷ್ಟಿಯ ಕಾರ್ಯಗಳೂ ಬೆಳಕಿಗೆ ಬಂದವು. ದೇವರು ಒಂದು ಮೊಟ್ಟೆಯಾಗಿ ಅದರಲ್ಲಿ ಒಂದು ವರ್ಷವಿದ್ದು ಕೊನೆಗೆ ತನ್ನ ಶಕ್ತಿಯಿಂದ ಎರಡು ತುಂಡಾಗಿ ಸೀಳಿದನು. ಆ ಎರಡು ತುಂಡುಗಳಿಂದ ಆಕಾಶವನ್ನು ಭೂಮಿಯನ್ನು ಏರ್ಪಡಿಸಿದನು. ಮಧ್ಯದಲ್ಲಿ ಅಂತರಿಕ್ಷವನ್ನು ಎಂಟು ದಿಕ್ಕುಗಳನ್ನು ನೀರಿನ ಸ್ಥಳಗಳನ್ನು ಸ್ಥಾಪಿಸಿದವನು. ಸೃಷ್ಟಿಕರ್ತ ಬ್ರಹ್ಮನೆಂದು ಹೇಳಲಾಗುತ್ತದೆ. ಬ್ರಹ್ಮನು ವಿಷ್ಣುವಿನ ನಾಭಿಯಿಂದುಂಟಾದ ಕಮಲದಲ್ಲಿ ಜನಿಸಿದನೆಂದು ಕಂಡುಬಂದರೆ ಬ್ರಹ್ಮೋತ್ತರ ಕಾಂಡದಲ್ಲಿ ಶಿವನು ಬ್ರಹ್ಮನನ್ನುಂಟು ಮಾಡಿ ಆ ಬ್ರಹ್ಮನಿಗೆ ವೇದಗಳನ್ನು ಬೋಧಿಸಿದನೆಂದು ತಿಳಿದುಬರುತ್ತದೆ. ಸ್ವಸೃಷ್ಟಿಯಾಗದ ಬ್ರಹ್ಮನು ಸೃಷ್ಟಿ ನಿರ್ಮಾಣಕನೆಂದು ಹೇಳುವುದು ಎಷ್ಟು ಹಾಸ್ಯಾಸ್ಪದ. ಆತನೆ ಬೇರೆಯವರಿಂದ ಹುಟ್ಟಿರುವಾಗ ಸೃಷ್ಟಿಕರ್ತ ಎನ್ನಲಾದೀತೆ? ಎಂಬಿತ್ಯಾದಿ ಪ್ರಶ್ನೆಗಳೊಂದಿಗೆ ಕ್ರೈಸ್ತ ಮತೀಯ ಸಾಹಿತ್ಯಗಳು ಬೆಳೆದುಬರತೊಡಗಿದವು. ಇಂತಹುಗಳಲ್ಲಿ ಕಿರಣ ಮಾಲಿಕೆ ಅಂದರೆ Bazar Book ಈ ಕೃತಿಯು ಹಿಂದೂ ಧರ್ಮಶಾಸ್ತ್ರ ಗ್ರಂಥಗಳಿಂದ ಶ್ಲೋಕಗಳನ್ನು ಆಯ್ದುಕೊಂಡು ಅವುಗಳನ್ನು ವಿಶ್ಲೇಷಿಸಿ, ವಿಮರ್ಶಿಸಿ ಸ್ಪಷ್ಟತೆಯನ್ನು ತೋರಿಸುವಲ್ಲಿ ಹೆಚ್ಚಿನ ಶ್ರಮವಹಿಸಿದೆ.

ಬೈಬಲ್ ವಸ್ತು

ಈ ಕ್ರೈಸ್ತ ಧಾರ್ಮಿಕ ಗ್ರಂಥವು, ಎರಡು ಪ್ರಕಾರದ ಹಾಗೂ ಹಳೆ ಹಾಗೂ ಹೊಸ ಕಾಲದ ಸಂದರ್ಭಕ್ಕೆ ಅನುಗುಣವಾಗಿ ಆಯಾ ಸಮಯಕ್ಕೆ ಸೂಕ್ತವೆನಿಸುವ ಅಂಶಗಳನ್ನು, ಆಯಾ ಜನಾಂಗಕ್ಕೆ ಬೋಧಿಸುತ್ತಾ ಬಂದಿದೆ. ಜನಾಂಗೀಯ ಬೆಳವಣಿಗೆಯ ದೃಷ್ಟಿಕೋನವನ್ನು ದೇವರ, ನ್ಯಾಯ, ನೀತಿಗಳ ಮಾರ್ಗಕ್ಕನುಗುಣವಾಗಿ ಬಂದಿರುವ ಬೋಧನೆಯು ಈ ಗ್ರಂಥದ ವಸ್ತುವಾಗಿ ಪರಿಗಣಿತವಾಗುವುದು.

ದೇವರು ಲೋಕವನ್ನು ಸೃಷ್ಟಿಸಿದುದರಿಂದ ಹಿಡಿದು, ಆ ಸಕಲ ಸೃಷ್ಟಿಗೆ ಒಡೆಯನಾಗಿ ಮನುಷ್ಯ ನನ್ನು ಉಂಟು ಮಾಡಿ, ಆತನು ಸುಖದಿಂದ ಜೀವಿಸಲು ಸ್ತ್ರೀಯನ್ನುಂಟು ಮಾಡಿ, ಎಲ್ಲ ಜೀವರಾಶಿಗಳ

---

೧. ಹೊ.ಅ.ಶ್ರೀಹಾ, ಪು.೪೫೨

ಮೇಲೆ ಪ್ರಭುತ್ವ ಸಾಧಿಸಿ, ಬಹು ಸಂತಾನದೊಂದಿಗೆ ಬಾಳಲು ಆಶೀರ್ವದಿಸಲ್ಪಟ್ಟನು. ಆದರೆ ದೇವರು ಆಜ್ಞಾಪಿಸಿದ್ದಂತೆ ನಡೆಯದೆ ಆತನಿಗೆ ನಿರ್ಬಂಧಿಸಿದನ್ನು ಉಲ್ಲಂಘಿಸಿದಕ್ಕಾಗಿ ದೇವರಿಂದ ಶಿಕ್ಷೆಗೆ ಒಳಗಾಗಿ, ತನ್ನ ಮಹಿಮೆಯನ್ನು ಕಳೆದುಕೊಂಡು, ಪುನಃ ಅದನ್ನು ತಿರುಗಿ ಪಡೆಯಲು ಮನುಷ್ಯ ಇಂದಿಗೂ ಹವಣಿಸುತ್ತಾನೆ. ಆದರೆ ಇದು ಮನುಷ್ಯ ಪ್ರಯತ್ನದಿಂದ ನೆರವೇರದೇ ದೇವರ ಕರುಣೆ - ದಯೆಯಿಂದ ಮಾತ್ರ ಸಾಧ್ಯ ಎಂಬುದನ್ನು ಬೈಬಲ್ ಸ್ಪಷ್ಟವಾಗಿ ತಿಳಿಸುತ್ತದೆ.

ಮನುಷ್ಯ ದೇವರ ಸನ್ನಿಧಾನದಲ್ಲಿ ಇರಬೇಕಾದರೆ ದೇವರ ಮಾರ್ಗವನ್ನು ಅನುಸರಿಸಲೇಬೇಕು. ಆ ಮಾರ್ಗವೇ ಯೇಸು ಕ್ರಿಸ್ತನು, ಆತನ ಮೂಲಕ ಮಾತ್ರ ದೇವನೆಡೆಗೆ ಹೋಗಲು ಸಾಧ್ಯ. ಯಾಕೆಂದರೆ ಕ್ರಿಸ್ತನು ದೇವರ ಅವತಾರವಾಗಿರುವನು.

ದೇವರ ಕುರಿತು ಸ್ಪಷ್ಟವಾದ ಕಲ್ಪನೆ ಇದೆ. ಆತನು ಒಬ್ಬನೇ, ಹಲವು ದೇವರ ಕಲ್ಪನೆಗೆ ಅವಕಾಶವಿಲ್ಲ. ದೇವರು ಆಯಾ ಕಾಲದಲ್ಲಿ ಮನುಷ್ಯರೊಂದಿಗೆ ಇದ್ದುದನ್ನು ಮೂರು ಪ್ರಮುಖ ಘಟ್ಟವಾಗಿ, ನೇರವಾಗಿ ಮಾತನಾಡಿದು.* ನಂತರ ತಾನೇ ನರಾವತಾರ ಎತ್ತಿಬಂದು ಜನರಿಗೆ ಕ್ರಿಸ್ತನ ರೂಪದಲ್ಲಿ ತಿಳುವಳಿಕೆ ನೀಡಿದ್ದು, ಈಗಲೂ ದೇವರಾತ್ಮನಾಗಿ ತನ್ನ ಭಕ್ತರೊಂದಿಗೆ ಇದ್ದು ಮಹತ್ಕಾರ್ಯ, ಸೂಚಕಕಾರ್ಯವನ್ನು ಮಾಡುತ್ತಾ, ತ್ರೈಏಕ ದೇವರಾಗಿ ತೋರಿಬಂದಿದ್ದಾನೆಂಬುದನ್ನು ಬೈಬಲ್ ವಿಶದೀಕರಿಸುತ್ತದೆ.

ಬೈಬಲ್ಲಿನ ಮೂಲವಸ್ತುವಾದ ಈ ಮೇಲಿನ ಅಂಶಗಳನ್ನು ಪ್ರತಿಪಾದಿಸುವಲ್ಲಿ ಕ್ರೈಸ್ತಧರ್ಮ ಶ್ರಮಿಸುತ್ತದೆ. ಕ್ರಿಸ್ತ ಪೂರ್ವ ಎರಡು ಸಾವಿರ ವರ್ಷದವರೆಗೆ ಬೈಬಲ್ ತನ್ನ ಅಸ್ತಿತ್ವದೊಂದಿಗೆ ಇಂದಿಗೂ ಪ್ರಚಲಿತವಿದೆ. ಅನೇಕ ಜಾಗತಿಕ ಧರ್ಮಗ್ರಂಥಗಳು ಕೇವಲ ಕಾಲಗತಿಯಲ್ಲಿ ಬಾಳಿ ನಿಂತು, ಅದೇ ಮಾನವನ ಪ್ರಗತಿಯೊಂದಿಗೆ ಅವಸಾನವನ್ನು ಕಂಡು ಕೊಂಡಿವೆ. ಮನುಷ್ಯ - ಮನುಷ್ಯನಲ್ಲಿ ಮೇಲು ಕೀಳುಗಳನ್ನೆ ಬಂಡವಾಳವಾಗಿ ಹೊಂದಿ ಮಾನವೀಯತ್ವ ಸೂಚಿಸದೆ, ಗುರುತಿಸದೆ, ಮಾನವನ ಮಧ್ಯ ಜಾತಿಗಳನ್ನು ಸೃಷ್ಟಿಸಿವೆ. ಜಾತಿ-ಮತ-ಪಂಥಗಳಿಗೆ ಮಹತ್ವ ನೀಡುತ್ತಾ ಇಂದಿಗೂ ಮೇಲು ಕೀಳುಗಳನ್ನೆ ಪುಷ್ಠಿಕರಿಸುತ್ತಿರುವುದರಿಂದ, ಆಧುನಿಕ ಮಾನವನು ಬುದ್ಧಿ ವಿಕಾಸ ಪಡೆದಂತೆ ಮಾನವೀಯತ್ವದೆಡೆಗೆ, ನ್ಯಾಯ-ಸತ್ಯದೆಡೆಗೆ, ಸಾಗುತ್ತಿರುವುದರಿಂದ ಕೆಲವು ಧರ್ಮಗ್ರಂಥಗಳೆಂದು ಹೆಮ್ಮೆಯಿಂದ ಬೀಗುವಂತವುಗಳಿಗೆ ಇಂದು ಮಹತ್ವವಿಲ್ಲದಾಗಿದೆ.(ಉದಾ : ಮನು ಧರ್ಮಶಾಸ್ತ್ರ) ಹೀಗಾಗಿಯೇ ಅಂಬೇಡ್ಕರವರಂತ ಬುದ್ಧಿವಂತರು(ವೇದ ಶಾಸ್ತ್ರಗ್ರಂಥ)ಸುಟ್ಟು ಹಾಕಿರುವುದನ್ನು ಗಮನಿಸಬಹುದು.

ಆದರೆ ಬೈಬಲ್ ಎಂಬ ಗ್ರಂಥದ ಮುಖ್ಯವಾದ ತಿರುಳು. ಒಬ್ಬ ಮನುಷ್ಯನನ್ನು ಇನ್ನೊಬ್ಬ ಮನುಷ್ಯ ಮಾನವೀಯತ್ವದಿಂದ ದೃಷ್ಟಿಸಿ ಗೌರವಿಸಿ ಪ್ರೀತಿಸುವುದಾಗಿದೆ. ಬೈಬಲ್ ವಸ್ತುವಿನಲ್ಲಿ ಎಲ್ಲ

೧. ಮೊದಲು ನೇರವಾಗಿ ನಂತರ ಪ್ರವಾದಿಗಳ ಮೂಲಕ ತದನಂತರ ಕ್ರಿಸ್ತನಾಗಿ

ಧರ್ಮಗ್ರಂಥಗಳಂತೆ ನ್ಯಾಯ-ನೀತಿ, ಸತ್ಯ ದೇವರೆಡೆಗೆ ಸಾಗುವ ಮಾರ್ಗಗಳನ್ನು ಹೇಳಿರುವುದು ಸ್ವಾಭಾವಿಕ ಆದರೆ ಪ್ರಮುಖ ವಸ್ತು ವಿಷಯ, 'ಪ್ರೀತಿ' 'ಕ್ರಿಸ್ತನ ಮುಖ್ಯ ಸಂದೇಶಗಳು ನಿನ್ನ ಸಹೋದರ (ಎಲ್ಲ ಜನ)ನನ್ನು ಪ್ರೀತಿಸು. ಹಾಗೂ ನಿನ್ನ ವೈರಿಯನ್ನು ಪ್ರೀತಿಸು. ನಿನ್ನ ದೇವರನ್ನು ನಿನಗಿಂತಲೂ ಹೆಚ್ಚಾಗಿ ಪ್ರೀತಿಸು ಎಂದು ಕಾಣುತ್ತೇವೆ. ಇಲ್ಲಿ ಮನುಷ್ಯರನ್ನು ಪ್ರೀತಿಸಬೇಕಾದ ಕರ್ತವ್ಯವು ದೇವರನ್ನು ಪ್ರೀತಿಸಬೇಕಾದ ಕರ್ತವ್ಯವನ್ನು ಸೂಚಿಸಿದೆ. ಆರಂಭದಲ್ಲಿ ಕ್ರಿಸ್ತನ ಶಿಷ್ಯರು ಈ ಪ್ರೀತಿಯನ್ನು ಬಿತ್ತಿದರ ಫಲವಾಗಿ ವಿಲಾಯತಿ ಜನರು ಮಾರ್ಪಾಡು ಹೊಂದಲು ಮುಖ್ಯ ಕಾರಣವಾಗಿತೆನ್ನಬಹುದು. ಬೈಬಲ್ ತಿಳಿಸುವ ಪ್ರೀತಿಯನ್ನು ಹೀಗೆ ಗ್ರಹಿಸಬಹುದು-

ಯೇಸು ದೇವರನ್ನು ತಿಳಿದು ಆತನ ಚಿತ್ತವನ್ನು ನೆರವೇರಿಸಿದಂತೆ, ಯೇಸುವನ್ನು ನಂಬಿ ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವುದೇ ಮಾನವರು ದೇವರ ಕಡೆಗೆ ತೋರಿಸುವ ಪ್ರೀತಿ.

"ನಾನು ನನ್ನ ತಂದೆ(God)ಯ ಆಜ್ಞೆಗಳನ್ನು ಕೈಕೊಂಡು ನಡೆದು ಆತನ ಪ್ರೀತಿಯಲ್ಲಿ ನೆಲೆಗೊಂಡಿರುವ ಮೇರೆಗೆ, ನೀವು ನನ್ನ ಆಜ್ಞೆಗಳನ್ನು ಕೈಕೊಂಡು ನಡೆದರೆ ನನ್ನ ಪ್ರೀತಿಯಲ್ಲಿ ನೆಲೆಗೊಂಡಿರುವಿರಿ."[೧] ನನ್ನ ಆಜ್ಞೆಗಳನ್ನು ಹೊಂದಿ ಅವುಗಳನ್ನು ಕೈಕೊಂಡು ನಡೆಯುವವನೇ ನನ್ನನ್ನು ಪ್ರೀತಿಸುವವನು. ನೀವು ನನ್ನನ್ನು ಪ್ರೀತಿಸುವವರಾದರೆ ನನ್ನ ಆಜ್ಞೆಗಳನ್ನು ಕೈಕೊಂಡು ನಡೆಯುವಿರಿ. ನಾವು ದೇವರ ಆಜ್ಞೆಗಳನ್ನು ಕೈಕೊಂಡು ನಡೆದರೆ ಅದರಿಂದಲೇ ಆತನನ್ನು ಬಲ್ಲವರಾಗಿದ್ದೇವೆ. ಆತನ ವಾಕ್ಯವನ್ನು ಕೈಕೊಂಡು ನಡೆದರೆ ದೇವರ ಮೇಲಣ ಪ್ರೀತಿಯು ಪರಿಪೂರ್ಣವಾಗಿದೆ. ಪ್ರೀತಿಯಿಲ್ಲದವನು ದೇವರನ್ನು ಬಲ್ಲವನಲ್ಲ ಯಾಕೆಂದರೆ "ದೇವರು ಪ್ರೀತಿ ಸ್ವರೂಪಿಯು" ಯಾವನು ಹುಟ್ಟಿಸಿದ ತಂದೆಯನ್ನು ಪ್ರೀತಿಸುತ್ತಾನೋ ಆತನು ತಂದೆಯಿಂದ (God) ಹುಟ್ಟಿದವರೆಲ್ಲರನ್ನೂ ಪ್ರೀತಿಸುತ್ತಾನೆ. ಒಬ್ಬನು ತಾನು ದೇವರನ್ನು ಪ್ರೀತಿಸುತ್ತೇನೆಂದು ಹೇಳಿ ತನ್ನ ಸಹೋದರನನ್ನು ದ್ವೇಷಿಸಿದರೆ ಅವನು ಸುಳ್ಳುಗಾರನಾಗಿದ್ದಾನೆ. ತಾನು ಕಂಡಿರುವ ತನ್ನ ಸಹೋದರನನ್ನು ಪ್ರೀತಿಸದವನು ತಾನು ಕಾಣದಿರುವ ದೇವರನ್ನು ಪ್ರೀತಿಸಲಾರನು.

ತಾನು ಉಳಿದು ಇನ್ನೊಬ್ಬನು ಬದುಕಬೇಕೆಂಬುದು ಮನುಷ್ಯ ನೀತಿ. ತಾನು ಸತ್ತು ಇನ್ನೊಬ್ಬನು ಬದುಕಬೇಕೆಂಬುದು ಕ್ರೈಸ್ತ ನೀತಿ. ಆದುದರಿಂದ ಕ್ರಿಸ್ತನು ಹೀಗೆ ಹೇಳುತ್ತಾನೆ. "ನಾನು ನಿಮ್ಮನ್ನು ಪ್ರೀತಿಸಿದ ಮೇರೆಗೆ ನೀವು ಒಬ್ಬರನ್ನೊಬ್ಬರು ಪ್ರೀತಿಸಬೇಕೆಂತಲೇ ಇವುಗಳನ್ನು ನಿಮಗೆ ಆಜ್ಞಾಪಿಸುತ್ತೇನೆ." ಕ್ರಿಸ್ತನು ಮಾನವರ ಕಡೆಗೆ ತೋರಿಸಿದ ಪ್ರೀತಿಯನ್ನು ನಾಲ್ಕು ವಿಧದಲ್ಲಿ ಕಾಣಬಹುದು. ೧. ನರಾವತಾರವೆತ್ತಿದ್ದರಲ್ಲಿ ೨. ಉಪದೇಶದಲ್ಲಿ ೩. ಕಾರ್ಯಾರ್ಥವಾಗಿ ವಿಶೇಷ ಅದ್ಭುತಗಳಲ್ಲಿ ೪. ಪ್ರಾಣವನ್ನು ಜನರಿಗಾಗಿ ಕೊಟ್ಟಿದ್ದರಲ್ಲಿ ತೋರಿಸಿದ ಪ್ರೀತಿ.

---

೧. ಸತ್ಯವೇದ ಯೋಹಾ, ೧೫ : ೯-೧೦

೨. ಅದೇ, ಯೋಹಾ ೧೫ : ೧೨

ಹೀಗೆ ಬೈಬಲ್ ಮನುಷ್ಯನ ರಕ್ಷಣೆ ಹಾಗೂ ಪ್ರೀತಿ ಕುರಿತು ಮುಖ್ಯ ವಸ್ತುವಾಗಿ ಹೊಂದಿರುವುದ ರಿಂದ, ಇದರ ಪ್ರಭಾವ ವ್ಯಕ್ತಿಗಳ ಮೇಲೆ ಸಮಾಜದ ಮೇಲೆ ಧರ್ಮಗಳ ಮೇಲೆ ಬೀರಲು ಅನುಕೂಲ ವಾಗಿ, ಬೈಬಲ್ ಕಾಲಿರಿಸಿದ ಸ್ಥಳ, ನಾಡು, ದೇಶಗಳು ತಮ್ಮ ಪೂರ್ವದ ಜ್ಞಾನ, ನಂಬಿಕೆ, ರೂಢಿಗಳನ್ನು ಬದಲಾಯಿಸುವಂತಾಗಿದೆ. ಏಕದೇವೋಪಾಸನೆಯ ಕಲ್ಪನೆಗೆ ಜಗತ್ತಿನಲ್ಲಿ ಬೈಬಲ್ ಒಂದೇ ಕಾರಣ ಎಂದರೆ ತಪ್ಪಾಗಲಾರದು.

ಈ ಧಾರ್ಮಿಕ ಮೂಲ ಬೋಧನೆಯೇ ಅನೇಕ ಬಗೆ-ಬಗೆಯ ಸಾಹಿತ್ಯಿಕ ರೂಪದಲ್ಲಿ ಹೊರಬಂದು, ಜಗತ್ತಿನ ಸಾಹಿತ್ಯದಲ್ಲಿ ಬೆರೆತು ನಿಂತಿದೆ. ಜಗತ್ತಿನ ಧಾರ್ಮಿಕ ಸಾಹಿತ್ಯವನ್ನು ಗಣನೆಗೆ ತೆಗೆದುಕೊಂಡಾಗ ಕ್ರೈಸ್ತ ಧಾರ್ಮಿಕ ಸಾಹಿತ್ಯದಷ್ಟು ವಿಫುಲವಾದ ಸಾಹಿತ್ಯ ಮತ್ತೊಂದಿಲ್ಲ ಎಂದರೆ ಅತಿಶಯೋಕ್ತಿ ಆಗಲಾರದು.

ಕನ್ನಡ ಸಾಹಿತ್ಯ ಸಾಗರದಲ್ಲಿ ಕ್ರೈಸ್ತ ಸಾಹಿತ್ಯ ಸೇರಿ ತಿಮಿಂಗಿಲನ ಅವತಾರವನ್ನು ಸೃಷ್ಟಿಸಿತು. "ಕಳೆದ ೩೦೦ ವರ್ಷಗಳ ಕಾಲದಲ್ಲಿ ನಮ್ಮ ಆರ್ಶೇಯ ಸಾಹಿತ್ಯ ಸಂಸ್ಕೃತಿಗಳನೆಲ್ಲ ಕಾಲಗರ್ಭದಿಂದ ಅಗಿದು ಬಯಲಿಗೆ ತಂದ ಅಂದಿನ ಪಾಶ್ಚಾತ್ಯ ವಿದ್ವಾಂಸರ ತಂಡವೊಂದು, ಈ ದೇಶದಲ್ಲಿ ಆಧುನಿಕ ಋಷಿಗಳಂತೆ ಕಾಣಿಸಿಕೊಂಡರು. ವೇದೋಪನಿಷತ್ತುಗಳು ಪುರಾಣಗಳು ಶಾಸ್ತ್ರಾದಿ ಗ್ರಂಥಗಳು ಪ್ರಾಚೀನ ಸಾಹಿತ್ಯ ಸಂಸ್ಕೃತಿಗಳ ಅವಶೇಷಗಳು. ಅಸಂಖ್ಯ ಶಿಲಾಶಾಸನಗಳು ಎಂದೀ ಬಗೆಯಾಗಿ ಅವರು ಭೂಗರ್ಭದಿಂದಗಿದು ಬೆಳಕಿಗೆ ತಂದು ಅನ್ವೇಷಿಸಿ ವ್ಯಾಖ್ಯಾನಿಸಿ ಅಂತೆಯೇ ಉಳಿಸಿ ಮಾಡಿದ ಸಾಹಸಕರವಾದ ಕೆಲಸವು ಇಡೀ ಪ್ರಪಂಚದ ಚರಿತ್ರೆಯಲ್ಲಿಯೇ ನಡೆಯದೆ ಇರುವ ಅಸಾಮಾನ್ಯ ಕಾರ್ಯವಾಗಿವೆ... ಸೂಕ್ಷ್ಮವಾಗಿ ಹೇಳುವುದಾದರೆ ಪಾಶ್ಚಾತ್ಯರು ಈ ದೇಶದ ಆಧುನಿಕ ಜ್ಞಾನವಿಕಾಸಕ್ಕೆ ಕಾರಣರಾದರು. ಈ ದೇಶದ ಕಾವ್ಯೇತಿಹಾಸಗಳನ್ನೆಲ್ಲ ಬೆಳಕಿಗೆ ತಂದರು.

ಆಧುನಿಕ ಭಾರತೀಯ ಗದ್ಯ ಮತ್ತು ಪದ್ಯ ಸಾಹಿತ್ಯಗಳೆಲ್ಲದಕ್ಕೂ ಅವರೇ ಮೂಲ ಪುರುಷರಾದರು. ಬ್ರಾಹ್ಮಣರ ಗುಡಿಸಲುಗಳಿಂದ ಮತ್ತು ಮಹಮ್ಮದೀಯರ ದಾಳಿಗೆ ತುತ್ತಾದ ಮುರುಕು ಮಂಟಪಗಳ ಮೂಲೆಯಿಂದ, ಶಾಸ್ತ್ರಾಧಿ ಗ್ರಂಥ ಓಲೆಗಳನ್ನೆಲ್ಲ ಹೊರತಂದು ಪಾಮರ ಜನದ ಮುಂದಿಟ್ಟರು. ಸಮಾಜ ಸೇವೆ ಏನೆಂಬುದನ್ನು ನಿಸ್ವಾರ್ಥ ದೃಷ್ಟಿಯಿಂದ ಕೈಕೊಂಡು ತೋರಿಸಿ ಬಡ ಜನರ ಉದ್ಧಾರಕ್ಕೆ ಕಾರಣರಾದರು... ಇಂದು ಹೊರಡುತ್ತಿರುವ ನಮ್ಮ ಸಾಹಿತ್ಯವು ಪಾಶ್ಚಾತ್ಯ ಸಾಹಿತ್ಯದ ಛಾಯೆಯಾಗಿದೆ. ಎಲ್ಲರೂ ಪಾಶ್ಚಾತ್ಯ ಶೈಲಿಯಲ್ಲಿಯೇ ಕಾವ್ಯ, ಕಾದಂಬರಿ, ಕತೆ, ಕವನ, ನಾಟಕಗಳನ್ನು ಬರೆದಿದ್ದಾರೆ."[೧] ಪಾಶ್ಚಾತ್ಯ ಮಿಶನರಿಗಳ ಈ ಸಾಹಿತ್ಯ ಸೇವೆಯಲ್ಲಿ ಬೈಬಲ್ಲಿನ ಮೂಲ ಅಂಶಗಳು ಮೂಡಿಬಂದವು.

೧. ಪಾ.ವಿ.ಕ.ಸೇವೆ.ಐ.ಮಾ.ಮುತ್ತಣ್ಣ, ಮುನ್ನುಡಿಯಿಂದ

ಏಕದೇವ ವಿಷಯವನ್ನು ಹೇಳಲು ತೊಡಗಿ ಬಹುದೇವತ್ವದ ಕಲ್ಪನೆಯನ್ನು ಕೆದಕಬೇಕಾಯಿತು. ಈ ಕಾರಣದಿಂದ ಧಾರ್ಮಿಕ ಸಾಹಿತ್ಯ ವಿಮರ್ಶೆಗೆ ಒಳಗಾಗಿ ಸನಾತನ ಹಲವು ತತ್ವಗಳನ್ನು ಬುಡಮೇಲು ಮಾಡಿತು. ಹಿಂದೂ ಧರ್ಮತತ್ವಕ್ಕೆ ಧಕ್ಕೆ ಉಂಟಾಗುತ್ತದೆಂಬ ಅಂಶವನ್ನು ಆ ಸಾಹಿತ್ಯ ಕಾಣುವಂತೆ ಮಾಡಿತು. ಇದರ ಪರಿಣಾಮವಾಗಿ ಧಾರ್ಮಿಕ ಸುಧಾರಣೆಗಳು ನಮ್ಮ ದೇಶದಲ್ಲಿ ತಲೆ ಎತ್ತಿ ನಿಲ್ಲಬೇಕಾಯಿತು.

"ಹೀಗೆ ಪಾಶ್ಚಾತ್ಯ ಸಂಸ್ಕೃತಿಯ ಪ್ರವಾಹಕ್ಕೆ ಭಾರತೀಯ ಸಂಸ್ಕೃತಿಯು ಕೊಚ್ಚಿ ಹೋಗುತ್ತದೆ ಎನ್ನುವ ಸಂದರ್ಭಕ್ಕೆ ಸರಿಯಾಗಿ ಕೆಲವು ನಾಯಕರು ಮೂಡಿ ಬಂದರು."[೧]

ಪಾಶ್ಚಾತ್ಯ ಮಿಶನರಿಗಳ ಧಾರ್ಮಿಕ ದೃಷ್ಟಿಯು ಭಾರತದ ಆರ್ಶೇಯ ಗ್ರಂಥಗಳ ಮೂಲ ಜ್ಞಾನಕ್ಕೆ ಸವಾಲಾಗಿ ನಿಲ್ಲಲಾರಂಭಿಸಿದಾಗ, ಸ್ವಧರ್ಮದಲ್ಲಿ ವಿಮರ್ಶಾತ್ಮಕ ಪ್ರಶ್ನೆಗಳು ಉದ್ಭವಿಸಲು ಪ್ರಾರಂಭಿಸಿದವು. ಭಾರತೀಯ ಸಂಸ್ಕೃತಿಯ ಅವನತಿಗೆ ಕಾರಣವಾದ ಕುಂದುಕೊರತೆಗಳನ್ನು ಹುಡುಕ ತೊಡಗಿದರು. ಹಿಂದೂ ಧರ್ಮ ದಶಕತ್ವದ ಸುಧಾರಣೆಯ ಕಡೆಗೆ ದೃಷ್ಟಿಹರಿಸಬೇಕಾದ ಅನಿವಾರ್ಯ ಪ್ರಸಂಗ ಒದಗಿಬಂದಿತು. ಈ ಹಿನ್ನೆಲೆಯಲ್ಲಿ ಅನೇಕ ವ್ಯಕ್ತಿಗತ ಪಂಥಗಳು ತಲೆದೋರಿದವು. ಅವುಗಳು ಯಾವುವೆಂದರೆ

೧. ದಯಾನಂದ ಸರಸ್ವತಿಯವರ "ಆರ್ಯ ಸಮಾಜ"

೨. ರಾಜಾರಾಮ್ ಮೋಹನ್ ರಾಯರವರ "ಬ್ರಹ್ಮ ಸಮಾಜ" (೧೮೨೮)

೩. ಶ್ರೀ ಚೈತನ್ಯ ಮಹಾಪ್ರಭುಗಳಿಂದ "ಹರೇಕೃಷ್ಣ ಪಂಥ"

೪. ದಾದಾ ಲೇಖರಾಜರವರಿಂದ ಪ್ರಜಾಪಿತ ಬ್ರಹ್ಮಕುಮಾರಿ ಪಂಥ (೧೯೩೬)

೫. ಮಿರ್ಜಾ ಹುಸೇನ ಅಲಿನೂರಿ "ಬಹಾಯಿ ಪಂಥ"

೬. ಗಂಗಾಧರ ಚಟರ್ಜಿ (ರಾಮಕೃಷ್ಣ) "ರಾಮಕೃಷ್ಣ ಮಿಶನ್ " (೧೮೯೭)

೭. ಮಿರ್ಜಾಗುಲಾಮ್ ಅಹ್ಮದರಿಂದ ಮಹಮ್ಮದೀಯ ಪಂಥ

೮. ಚಿನ್ಮಯಾನಂದರಿಂದ 'ಚಿನ್ಮಯ ಮಿಶನ್ '

೯. ಮ್ಯಾಡಂ ಬ್ಲಾವಟ್ಕಿ ಮತ್ತು ಬಲ್ಕಾಟ್ 'ಥಿಯೋಸೋಫಿಕಲ್ ಸೊಸೈಟಿ' (೧೮೭೯)

ಬದಲಾಗುವ ಕಾಲಕ್ಕೆ ಹಿಂದೂ-ಧರ್ಮವನ್ನು ಸಮನ್ವಯಗೊಳಿಸಿ, ಪ್ರಸ್ತುತ ಪರಿಸ್ಥಿತಿಯಲ್ಲಿ ಉಂಟಾದ ದ್ವಂದ್ವಗಳಿಗೆ ಉತ್ತರವನ್ನು ನೀಡುವ ನಿಟ್ಟಿನಲ್ಲಿ, ಆಧುನಿಕ ಧಾರ್ಮಿಕ ಪಂಥಗಳು ಶ್ರಮಿಸಬೇಕಾದ ಅವಶ್ಯಕತೆಯು ಕಂಡುಬಂದಿತು.

ಎರಡನೇಯದಾಗಿ ಧರ್ಮಪ್ರಚಾರಕ್ಕೆ ಅನುಕೂಲವಾಗಲು ಇತರೆ ಧರ್ಮಗಳನ್ನು ದೃಷ್ಟಿಯಲ್ಲಿಟ್ಟು ಕೊಂಡು ವಿಮರ್ಶಾತ್ಮಕ ಹಾಗೂ ಟೀಕಾತ್ಮಕವಾಗಿ ಸೃಷ್ಟಿಸಿದ ಕ್ರೈಸ್ತ ಸಾಹಿತ್ಯ, ಈ ಎರಡನೇ ವರ್ಗದ

---

೧. ಧರ್ಮ, ರಹಮತ್ ತರೀಕೆರೆ, ಪು.೫೬

ಸಾಹಿತ್ಯ ಎನಿಸಿಕೊಳ್ಳುವುದು. ಇದು ಭಾರತದಲ್ಲಿ ಹಾಗೂ ಕರ್ನಾಟಕದಲ್ಲಿ ಬಹು ಪ್ರಭಾವ ಮಾಡಿದ ಸಾಹಿತ್ಯವೆನ್ನಬಹುದು. ಯಾಕೆಂದರೆ ಪ್ರತಿಯೊಬ್ಬ ಧರ್ಮೀಯನಿಗೂ ತನ್ನ ಧರ್ಮದಲ್ಲಿ ಧರ್ಮ ಜಾಗೃತಿಯನ್ನು ಬೆಳೆಸಲು, ಹೊಸ ದೃಷ್ಟಿ ಬೀರಲು, ತನ್ನನ್ನು ತಾನು ವಿಮರ್ಶಿಸಿಕೊಳ್ಳಲು ಅನುವು ಮಾಡಿಕೊಟ್ಟಿತು. ಪ್ರತಿ ಧರ್ಮೀಯರು ತನ್ನ ಧರ್ಮದ ಮೂಲವನ್ನು ಗ್ರಹಿಸುವಂತೆ ಧಾರ್ಮಿಕ ಜಾಗೃತಿಯನ್ನು ಮೂಡಿಸಿತು.

ಹೀಗಿದ್ದರೂ ಧಾರ್ಮಿಕ ಅಸ್ಪೃಶ್ಯತೆಯಿಂದಲೋ ಅಥವಾ ಇವುಗಳನ್ನು ಓದುವುದರಿಂದ ಮತಾಂತರಗೊಳ್ಳುವೆವೋ ಎಂಬ ಭಯದಿಂದಲೇ ಏನೋ, ಇಂದಿಗೂ ಬೈಬಲ್ ಆಧಾರಿತ ಯಾವ ಪುಸ್ತಕಗಳು ಕ್ರೈಸ್ತೇತರಲ್ಲಿ ಸಾಮಾನ್ಯವಾಗಿ ಓದುವ ಬಳಕೆ ಇಲ್ಲ. ಇವುಗಳ ಕಡೆಗೆ ಒಲವು ಕೂಡ ಇಲ್ಲದಂತೆ ಕಂಡುಬರುತ್ತದೆ. ಹೀಗಾಗಿ ಕ್ರೈಸ್ತೇತರರು ಕ್ರೈಸ್ತ ಧಾರ್ಮಿಕ ಸಾಹಿತ್ಯದ ಕಡೆ ಲಕ್ಷ್ಯಹರಿಸಿಲ್ಲ ಹಾಗೂ ಸಾಹಿತ್ಯಿಕವಾಗಿ ಹೇಳುವಂತ ಕೊಡುಗೆ ಮೂಡಿ ಬಂದಿಲ್ಲ.

೩.೩. ಬೈಬಲ್ ಆಧಾರಿತ ಕೃತಿಗಳ ಸ್ಥಾನ ಹಾಗೂ ಮಹತ್ವ

ಬೈಬಲ್ ಆಧಾರಿತ ಕೆಲವು ಕೃತಿಗಳು ಸಾಹಿತ್ಯದ ಮಹತ್ವವಾದ ಕೃತಿಗಳಾಗಿ ಇರುವುದರಿಂದಲೇ ಕನ್ನಡ ಸಾಹಿತ್ಯದಲ್ಲಿ ಕ್ರೈಸ್ತ ಸಾಹಿತ್ಯ ಪರಂಪರೆಯೊಂದು ತಲೆ ಎತ್ತಿ ನಿಲ್ಲಲ್ಲು ಆಸ್ಪದವಾಗಿದೆ.

ಬೈಬಲ್ ಆಧಾರಿತ ಕ್ರೈಸ್ತ ಸಾಹಿತ್ಯ ನೇರ ಧಾರ್ಮಿಕ ಭಾವನೆಯನ್ನು ಬೀರುವಂತವುಗಳಾಗಿದ್ದರೆ, ಇನ್ನು ಕೆಲವು ಇತರ ಧರ್ಮಗಳನ್ನು ವಿಮರ್ಶಿಸುವ ಟೀಕಿಸುವ ತೌಲನಿಕವಾಗಿ ದೃಷ್ಟಿಸುವ ಸಾಹಿತ್ಯವಾಗಿ ಕಂಡುಬರುವುದು.

ಕನ್ನಡ ಸಾಹಿತ್ಯದಲ್ಲಿ ಕೈಹಾಕಿದ ಮಿಶನರಿಗಳು ಕನ್ನಡ ಪ್ರಾಚೀನ ಧರ್ಮ ಗ್ರಂಥಗಳನ್ನು ಪರಿಶೋಧಿಸಿ, ಅವುಗಳನ್ನು ವಿಮರ್ಶಿಸಿ, ಅಚ್ಚಿಗೆ ಅಳವಡಿಸಿ, ಪ್ರಕಟಿಸಿ ಅವುಗಳು ನಶಿಸಿ ಹೋಗದಂತೆ ಕಾಪಾಡಿದರು. ಹೀಗಾಗಿ ಮಿಶನರಿಗೆ ಅಂದಿನ ಕನ್ನಡ ಪ್ರಮುಖ ಕೃತಿಗಳ ಮಾಹಿತಿ ಇತ್ತು.

ಪ್ರಾಚೀನ ಕಾಲದಿಂದಲೂ ಹಿಂದೂ ಧರ್ಮ ವಿಮರ್ಶಗೆ ಒಳಪಟ್ಟು, ವಿಮುಖ ದೋರಣೆಯೊಂದಿಗೆ ಪರ್ಯಾಯ ಧರ್ಮದ ಉತ್ಪತ್ತಿಗೆ ಕಾರಣವಾಗಿದ್ದನ್ನು ಮನಗಂಡ ಮಿಶನರಿಗಳು, ಮತೀಯ ಸಾಹಿತ್ಯಕ್ಕೆ ನೇರವಾಗಿ ನಿರರ್ಗಳವಾಗಿ ಇಳಿದು, ಭಾರತೀಯ ಧರ್ಮಗಳನ್ನು ಕುರಿತು ಕ್ರೈಸ್ತ ಧಾರ್ಮಿಕ ಧೋರಣೆಗಳನ್ನು ತೂಗಿ ನೋಡುವ ಸಂದರ್ಭವನ್ನು ಬಳಸತೊಡಗಿದರು. ಈ ಸಂದರ್ಭದಲ್ಲಿ ಮೂಡಿಬಂದ ಅನೇಕ ಮಹತ್ವದ ಕೃತಿಗಳು ಸಾಹಿತ್ಯದಲ್ಲಿ ಕಂಡುಬಂದವು.

ಬೈಬಲ್ ಆಧಾರಿತ ಪ್ರಮುಖ ಕೃತಿಗಳು ತನ್ನ ಧಾರ್ಮಿಕ ಧೋರಣೆಯನ್ನು ಹೊಂದಿ ತನ್ನ ಪ್ರಭಾವವನ್ನು ಉಂಟುಮಾಡಿದ್ದರಲ್ಲಿ ಎರಡು ವಿಧಗಳನ್ನು ಗುರುತಿಸಬಹುದು. ಒಂದು ಬೈಬಲ್

ಅಂಶಗಳನ್ನೊಳಗೊಂಡ ಕೃತಿಗಳು. ಎರಡನೇಯದಾಗಿ ಕ್ರೈಸ್ತಮತವನ್ನು ಸ್ಥಾಪಿಸುವ ಉದ್ದೇಶದಿಂದ ಧರ್ಮಟೀಕೆಗಳನ್ನೇ ಪ್ರಮುಖವಾಗಿ ಇಟ್ಟುಕೊಂಡು ಬೆಳೆದ ಸಾಹಿತ್ಯ ಕೃತಿಗಳು.

ಮೊದಲನೇಯದಾಗಿ, ಬೈಬಲ್ ಆಧಾರಿತ ಪ್ರಮುಖ ಕೃತಿಗಳು. ಬೈಬಲ್ ಮಾಹಿತಿಗಳೊಂದಿಗೆ ಬೆಳೆದು ಬಂದವುಗಳಾಗಿರುವುದರಿಂದ ಇಂತಹ ಕೃತಿಗಳು ಮಿಶನರಿಗಳ ಧಾರ್ಮಿಕ ನೋಟಕ್ಕೆ ಸಿಲುಕಿ, ಸಾಹಿತ್ಯಕ ಮಟ್ಟವನ್ನು ಬಳಸದೇ, ಪಾದ್ರಿ ಕನ್ನಡ ಎಂಬ ಶೈಲಿಗಳನ್ನು ತಳೆದು ಬೆಳೆದವುಗಳೇ ವಿಫುಲ. ಇವು ಸಾಹಿತ್ಯಿಕ ಮಟ್ಟವನ್ನು ಕಾಯ್ದುಕೊಳ್ಳುವಲ್ಲಿ ಅಷ್ಟೊಂದು ಸಫಲತೆಯನ್ನು ಕಾಣಲಿಲ್ಲವೆಂದರೆ ತಪ್ಪಾಗಲಾರವು.

ಕ್ರೈಸ್ತೇತರು ಇವುಗಳನ್ನು ಓದದೇ ಇರುವುದು ಒಂದು ಮುಖ್ಯ ಕಾರಣವಾಗಿರಲೂಬಹುದು. ಕ್ರೈಸ್ತ ಧಾರ್ಮಿಕ ಪುಸ್ತಕಗಳು ಮೊದ ಮೊದಲು ಉಚಿತವಾಗಿಯೇ ವಿತರಣೆಗೊಳ್ಳುತ್ತಿದ್ದವು. ಕ್ರಯವಿಲ್ಲದ ಇಂತಹ ಸಾಹಿತ್ಯ ನಮ್ಮನ್ನು ತಪ್ಪುದಾರಿಗೆ ಎಳೆಯಬಹುದೆಂಬ ಭಾವನೆಗಳೂ ಅಂದು ಜನರಲ್ಲಿ ಮೂಡದಿರಲಿಲ್ಲ. ಮುಂದೆ ಮಿಶನರಿಗಳು ಕನ್ನಡ ಧಾರ್ಮಿಕ ಸಾಹಿತ್ಯ ಓದಿದಂತೆಲ್ಲ ಅವುಗಳಿಗೆ ಆಧಾರಗೊಂಡು 'ತುಲನಾತ್ಮಕ ಸಾಹಿತ್ಯ ನಿರ್ಮಾಣಕ್ಕೆ ತೊಡಗಿ, ಇತರ ಧರ್ಮಗಳ ವಿಮರ್ಶೆ ಟೀಕೆ-ಟಿಪ್ಪಣಿ ಬರೆಯತೊಡಗಿದರು. ಇವು ಧರ್ಮ ಜಾಗೃತಿಯನ್ನುಂಟು ಮಾಡುತ್ತವೆಂಬ ಭರವಸೆ ಉಂಟಾದಂತೆಲ್ಲ ಅವುಗಳ ಪುನಃ ಮುದ್ರಣ ಕೈಕೊಂಡರು. ಇಂತಹ ಸಾಹಿತ್ಯ ವಿಶೇಷವಾಗಿ ಇತರ ಧರ್ಮಗಳ ಮೇಲೆ ಪ್ರಭಾವ ಬೀರುವಂತೆ ನೋಡಿಕೊಂಡರು.

ಮಿಶನರಿಗಳು ಬೈಬಲ್ ಆಧಾರಿತ ಏಕದೇವೋಪಾಸನೆ ಅಂಶವನ್ನು ಬಿತ್ತುವ ಸಾಹಿತ್ಯ ಬರೆದದ್ದು ಭಾರತದೇಶ ಹಾಗೂ ಕರ್ನಾಟಕದಲ್ಲಿ ಪ್ರಮುಖ ಪ್ರಭಾವ ಬೀರಿತು. ಈರಾರು ಪತ್ರಿಕೆ, ಹೃದಯ ದರ್ಪಣ, ದೇವ ವಿಚಾರ, ಜಾತಿ ವಿಚಾರ, ಪರಮಾತ್ಮ ಜ್ಞಾನ, ಮತವಿಚಾರ, ಕಿರಣ ಮಾಲಿಕೆ, ವಿಕೀರ್ಣ ಸುಭಾಷಿತ ಪ್ರಸಂಗ ಶತಕ, ಜನ್ಮಾಂತರ ಸ್ಮರಣೆ, ವಜ್ರಸೂಚಿ, ವಿಗ್ರಹಾರಾಧನೆ, ಕೃಷ್ಣಾ-ಕ್ರೈಸ್ತ, ಲಿಂಗಾಯತ ಮತ ವಿಚಾರ, ಹಿಂದೂ ಮತಾಭಿಮಾನಿ, ವೇದದಲ್ಲಿ ಏನಿದೆ? ಪರಮಗುರು, ವೇದಾಂತ ದರ್ಶನ ಇನ್ನೂ ಮುಂತಾದ ಮತೀಯ ಭಾವನೆ ಉಳ್ಳ ಪುಸ್ತಕಗಳು ಅಂದು ಹೆಚ್ಚು ಪ್ರಭಾವ ಮಾಡಿದ ಕೃತಿಗಳಾಗಿವೆ.

ಈ ಮೇಲಿನ ಕೃತಿಗಳ ಪ್ರಭಾವ ಅಂದು ಜನ ಜಾಗೃತಿ ಉಂಟು ಮಾಡಿ ಕ್ರೈಸ್ತೇತರರು ತಮ್ಮ ಧರ್ಮವನ್ನು ಅರಿಯಲು ವಿಮರ್ಶಿಸಲು ಸುಧಾರಣೆಗೊಳ್ಳಲು ಅನುವು ಮಾಡಿಕೊಟ್ಟವು. ಒಟ್ಟಿನಲ್ಲಿ ನಮಗಿಂದು ಲಭ್ಯವಿರುವ ಮತೀಯ ಕೃತಿಗಳನ್ನು ಹೀಗೆ ಕಾಣಬಹುದು. ಇವು ಅಂದಿನ ಸ್ಥಿತಿಯಲ್ಲಿ ಮಹತ್ವದ ಕೃತಿಗಳು.

೧. ಈರಾರು ಪತ್ರಿಕೆ ೧೮೪೨, ಮೋಗ್ಲಿಂಗ್

೨. ಕಿರಣ ಮಾಲಿಕೆ ಅಥವಾ ಬಜಾರ್ ಬುಕ್

೩. ಕೃಷ್ಣ-ಕ್ರಿಸ್ತ ಇವರ ಪೊಚ್ಚು ಕಡಿಮೆ. ಮೂಲ ಮರಾಠಿ, ಬಾಬಾ ಪದಮಂಜಿ

೪. ಕ್ರೈಸ್ತ ಹಿಂದೂ ಧರ್ಮ

೫. ಜನ್ಮಾಂತರ ವಿಚಾರ

೬. ದೇವ ವಿಚಾರಣೆ ೧೮೪೫, ಮೋಗ್ಲಿಂಗ್

೭. ಜಾತಿ ವಿಚಾರ ೧೮೫೪

೮. ಮತ ವಿಚಾರ ೧೮೬೪

೯. ಲಿಂಗಾಯತ ಮತ ವಿಚಾರಣೆ, ೧೮೭೪ ಕ್ರಿಶ್ಚಿಯನ್ ಚನ್ನಪ್ಪ

೧೦. ದೈವ ಪರೀಕ್ಷೆ

೧೧. ದ್ವಿಮತ ಪರೀಕ್ಷೆ

೧೨. ಕುಲಾಚಾರ ಪರೀಕ್ಷೆ

೧೩. ಸನ್ಮಾರ್ಗ ವಿಚಾರ ೧೮೬೮, ಯೋಹಾನ್ ಲೇಯರ

೧೪. ಲಿಂಗಾಯತ ಮತಕ್ಕಿಂತ ಉತ್ಕೃಷ್ಟ ಮಾರ್ಗ, ೧೮೭೪ ಕ್ರಿಶ್ಚಿಯನ್ ಚನ್ನಪ್ಪ

೧೫. ವಜ್ರಸೂಚಿ

೧೬. ವಿಗ್ರಹಾರಾಧನೆ ಕುರಿತು ಮೋಗ್ಲಿಂಗ್

೧೭. ಹಿಂದೂ ಕ್ರೈಸ್ತರ ಕುಟುಂಬ ಪ್ರಾರ್ಥನೆ

೧೮. ಹಿಂದೂ ಮತ ವಿಚಾರ.

೧೯. ಹಿಂದೂ ವಿಧವೆಯರು ೧೮೫೨

೨೦. ರಕ್ಷಣೋಪಾಯ ೧೮೬೬ ಯೋಹಾನ್ ಲೆಯರ್

೨೧. ಹಿಂದೂ ಮತ ಖಂಡನೆ

೨೨. ಹಿಂದೂ ಮತ ಪರೀಕ್ಷೆ

೨೩. ಅದ್ಭುತ ಮತ ಖಂಡನೆ

೨೪. ಮಧ್ಯವರ್ತಿ ಬೇಕೋ?

೨೫. ಇಸ್ಲಾಂ ಅಥವಾ ಮಹಮ್ಮದಿ ವೃಕ್ಷವು, ೧೮೮೯ ಕ್ರಿಸ್ತಾನುಜಾವಾಸತ್ಸ

೨೬. ವೇದಾಂತ ದರ್ಶನ

೨೭. ನಿನ್ನ ಮನೆ ಎಲ್ಲಿದೆ

೨೮. ಪರಮಾತ್ಮ ಜ್ಞಾನ, ರೇ.ಕಿಟೆಲ್

೨೯. ಜನ್ಮಾಂತರ ಸ್ಮರಣೆ, ೧೮೭೦ ಜಿ.ಗ್ರೀನ್ ವುಡ್

೩೦. ವಿಕೀರ್ಣ ಸುಭಾಷಿತ ಪ್ರಸಂಗ ಶತಕ, ೧೮೭೩

೩೧. ಪರಮಗುರು

೩೨. ಜನ್ಮಾಂತರ ಪರೀಕ್ಷೆ

೩೩. ವೇದದಲ್ಲಿ ಏನಿದೆ?

೩೪. ಮತಭೇದ ರತ್ನಾಕರ

೩೫. ಹಿಂದೂ ಧರ್ಮ ಹಾಗೂ ಇಸ್ಲಾಂ

೩೬. ಬ್ರಾಹ್ಮಣರು ಯಾರು? ಅವರ ಹಕ್ಕೇನು ೧೮೪೯.

೩೭. ಶಾಂತಪ್ಪ ನೀನು ಯಾಕೆ ಕ್ರೈಸ್ತನಾದಿ

೩೮. ನಿನ್ನ ದೇವರು ಯಾರು?

೩೯. ಹೃದಯ ದರ್ಪಣ ೧೮೪೨, ಮೋಗ್ಲಿಂಗ್

೪೦. ಕಲಿಯುಗದ ಮಹಾತ್ಮೆ

೪೧. ನಿಜವಾದ ಶಾಸ್ತ್ರವನ್ನು ಕುರಿತದ್ದು

೪೨. ಉಭಯ ಮಾರ್ಗ, ೧೮೫೪ ರೇ.ಕಿಟೆಲ್

೪೩. ನಿಸ್ತಾರ ರತ್ನಾಕರ ೧೮೬೩, ರೇ.ಎಂ.ಟಿ.ಮೇಲ್

೪೪. ವೇದ ಸಂಗ್ರಹ, ೧೮೬೫, ರೇ.ಎಂ.ಟಿ.ಮೇಲ್

೪೫. ಅದೃಷ್ಟವಾದಿಗಳು ೧೮೭೪, ರೆ. ಥಿಯೊವಾಸ್ಸ್

೪೬. ನೀತಿಸಾರ

೪೭. ಲಿಂಗಾಯತ ಹಾಗೂ ಕ್ರಿಶ್ಚಿಯನ್ ಮತಗಳ ಹೋಲಿಕೆ

೪೮. ಬೈಬಲ್ ಆಂಡ್ ಹಿಂದೂಇಜಮಂ (ಇರ)

ಕಥೆಗಳು

೧. ಪೂರ್ವನಿರ್ಧಾರ

೨. ನವನಿರ್ಧಾರ

೩. ಚಿಕ್ಕವನಾದ ಹೇನ್ರಿ ಅವನ ಬೋಯಿ ೧೮೪೯

೪. ದೊರೆಸಾನಿಯು ದಾದಿಯು ೧೮೬೦, ಶ್ರೀಮತಿ ಮೇರಿ ಮಾರ್ಥಾ

೫. ಬೂಸಿಯ ಕಡೆ ದಿನಗಳು

೬. ಹೊರಗೊಂದು ಒಳಗೊಂದು ನಾಟಕಗಾರನೂ ಗೌರಮ್ಮ

೭. ರಾಜಕುಮಾರ್ತೆಯು

೮. ಆತ್ಮಿಕ ದಿವ್ಯಯುದ್ಧ

೯. ಒಳ್ಳೆ ತಾಯಿ - ಶ್ರೀಮತಿ ಸತ್ಯನಾಥನ್ (ಮೂಲ ತಮಿಳು)

೧೦. ಕಥಾ ಸಪ್ತತಿ

೧೧. ಕಥಾ ಸಂಗ್ರಹ ಭಾಗ I ಮತ್ತು II

೧೨. ಕಥಾ ಮಾಲೆ

೧೩. ಕ್ರೈಸ್ತ ಕಥನ

೧೪. ಇಸೊಫನ ಕಥೆಗಳು

ಕಾದಂಬರಿ

೧. ಯಾತ್ರಿಕನ ಸಂಚಾರ

ಶಬ್ದಕೋಶ

೧. ವೇದಕೋಶ ಭಾಗ-I ಮತ್ತು II

೨. ಶಬ್ದಕೋಶ ರೆ.ಕಿಟೆಲ್

೩. ಇಂಗ್ಲಿಷ್ ಮತ್ತು ಕರ್ನಾಟಕ ವಿಲಿಯಂ ರೀವ್, ೧೮೨೪

೪. ಕರ್ನಾಟಕ ಮತ್ತು ಇಂಗ್ಲಿಶ್ ವಿಲಿಯರಿ ರೀವ್, ೧೮೩೨

೫. ಇಂಗ್ಲಿಷ್ ಮತ್ತು ಕರ್ನಾಟಕ ಜಾನ್ ಗ್ಯಾರೆಟ್, ೧೮೪೨, ಎ.ಮ್ಯಾನುವೆಲ್

೬. ಇಂಗ್ಲಿಷ್ ಮತ್ತು ಕೆನರೀಜ ಸ್ಕೂಲ್ ಡಿಕ್ಷನರಿ ಎಫ್.ಜಿಗ್ಲರ್, ೧೮೭೦

೭. ಎ.ಡಿಕ್ಷನರಿ ಕೆನರೀಜ ಮತ್ತು ಇಂಗ್ಲಿಷ್ ರೆ.ಡಬ್ಲೂ ರೀವ್, ೧೯೫೮

೮. ಎ.ಕನ್ನಡ ಇಂಗ್ಲಿಷ್ ಡಿಕ್ಷನರಿ ರೆ.ಎಫ್.ಕಿಟೆಲ್, ೧೮೯೪

೯. ಬ್ರೂಚರ್ಸ್ ಕನ್ನಡ ಇಂಗ್ಲಿಷ್ ಡಿಕ್ಷನರಿ ಬ್ರ್ಯೂಚರ್, ೧೮೯೯

೧೦. ಡಿಕ್ಷನರಿ ಲ್ಯಾಟೀನ್ ಕೇನರಿಜ ಶಾರ್ಬೊನಾ, ೧೮೫೫

೧೧. ಡಿಕ್ಷನರಿ ಲ್ಯಾಟೀನ್ ಕೇನರಿಜ ಶಾರ್ಬೊನಾ, ೧೮೬೧

೧೨. ಕನ್ನಡ ಇಂಗ್ಲಿಷ್ ಗ್ಯಾರೆಟ್, ೧೮೮೬

ಭಕ್ತಿಪರ ಬರಹಗಳು ಹಾಗೂ ಇತರ ಬರಹಗಳು

೧. ಸತ್ಯವೇದ ಜ್ಞಾನ ಪ್ರಬೋಧೆ ೧೮೪೮, ಡಬ್ಲೂ ಕ್ಯಾಂಬೆಲ್

೨. ದೈವಜ್ಞಾನ ಪುಸ್ತಕ

೩. ಕ್ರೈಸ್ತ ಸಭಾ ಚರಿತ್ರೆ ೧೮೭೦, ರೆ.ಕಿಟಲ್

೪. ಧರ್ಮಪುಸ್ತಕ

೫. ಕುಮಾರೋಪ ದೇಶ

೬. ಭದ್ರವಾದ ಅಭ್ಯಂಗಕ್ಕೆ ಆಯಿತ್ತವಾಗಿರುವ ಜ್ಞಾನೋಪದೇಶ

೭. ಲೋಕ ಚರಿತ್ರೆ ೧೮೫೪, ಜೋಹನ್ ಹ್ಯೂಬರ್ (ಗೆಸ್ಟಡ್ ವಾಲ್ಬ)

೮. ಹಿಸ್ಟ್ರಿ ಆಫ್ ದಿ ಲಿಟಿಲ್ ವ್ಹಿಲಿಯಂ (ಇಂ)

೯. ಕನ್ನಡ ಸಂಗೀತಗಳುಲ

೧೦. ಕ್ರೈಸ್ತ ಗೀತಗಳು ೧೮೭೪

೧೧. ಜ್ಞಾನ ಕೀರ್ತನೆಗಳು ೧೮೬೭, ಅಭಿಜಾ ಸಾಮ್ಯುಯಲ್

೧೨. ನಂಬಿ ಜೀವಿಸಿರಿ, ಕ್ರಿ.ಶ.೧೮೫೩, ರೆ.ಕೆಟೆಲ್

೧೩. ತಿರುಸಭೆಯ ಸಂಕ್ಷೇಪವಾದ ಚರಿತ್ರೆ, ೧೮೬೩, ರೇ.ಚಾಟ್ರೊಲ, ಪು.೧೪೫

೧೪. ಆರಿಸಿದ ದೇವವಾಕ್ಯದ ವಚನಗಳ ರತ್ನಮಾಲೆ

೧೫. ಸಂಸಾರ ಕ್ರಮ, ಫ್ಲಟಿಕ್

೧೬. ದೈನಂದಿನ ಆಹಾರ

೧೭. ಜಗತ್ತಿನ ಇತಿಹಾಸ ಸಾರ

೧೮. ಸತ್ಯವೇದ ಚರಿತ್ರೆ

೧೯. ಬಾಲ್ಯೋಪದೇಶ, ೧೮೫೦, ರೆ. ಬೆಂಜಾಮಿನ್ ರೈಸ್

೨೦. ಭಾರತದ ಮುಖ್ಯ ಧರ್ಮಗಳು

೨೧. ಪ್ರೊಟಸ್ಟೆಂಟರೆಂಬ ಪತಿತರ ಮಾರ್ಗ, ೧೮೬೮, ಚಾರ್ಬೊನಾ

೨೨. ಪರಿಶುದ್ಧ ಚರಿತ್ರೆ

೨೩. ಪರಿಶುದ್ಧ ಬರಹದ ಸಾರವು

೨೪. ಭಗವದ್ದರ್ಪಣ

೨೫. ಸಂಸಾರ ಕ್ರಮ ೧೮೫೩, ರೆ.ಕಿಟೆಲ್

೨೬. ದಾಂಪತ್ಯ ಸ್ಥಿತಿ, ಕ್ರಿಸ್ತಾನುಜವಾತ್ಸ (ಮೂಲ ಮರಾಠಿ)

೨೭. ಕನ್ನಡ ಬೋಧೆ

೨೮. ಕನ್ನಡ ಕಾವ್ಯ ಭಾಗ

೨೯. ಬಾಸೆಲ್ ಮಿಶನಿನ ಸಭಾಕ್ರಮ

೩೦. ದೇವವಾಕ್ಯ ದ್ವಿಪಂಚಾಶತೌ, ಪೂರ್ವನಿರ್ಧಾರ ದ್ವಿಪಂಚಾಶತಿ, ೧೮೩೫, ಬ್ರೂಹಾರ್

೩೧. ನವ ನಿರ್ಧಾರ ದ್ವಿಪಂಚಾಶತಿ, ೧೮೩೫, ಬ್ರೂಹಾರ

೩೨. ಏಸು ಕ್ರಿಸ್ತನ ಶ್ರಮೋಚರಿತ, ಮೋಗ್ಲಿಂಗ್

೩೩. ಕ್ರೈಸ್ತ ಧರ್ಮ ಬೋಧನೆ ೧೮೪೫, ಜಾನ್ ಖಿರ್ಟ್ಸ್

೩೪. ಲೋಕದ ಬೆಳಕು ೧೮೬೮, ಜಾನ್ ಹೊಚ್ಕನ್

೩೫. ಆರಿಸಿದ ದೇವವಾಕ್ಯದ ವಚನಗಳ ರತ್ನಮಾಲೆ ೧೮೬೩, ಗಸ್ತಾವ್ ಕೈಸ್

೩೬. ದೇವ ವಾಕ್ಯದ ವಚನ ಮಂಜರಿ ೧೮೬೫, ಗಸ್ತಾವ್ ಕೈಸ್

೩೭. ಸತ್ಯವೇದ ಚರಿತೆ ೧೮೬೩, ರೇ ಚಾಟ್ರೊ ೧೪೫ ಪು.

೩೮. ಏಸುವಿನ ಬಾಳಿಗೆ ಬಾ. ೧೮೪೧, ಡೇನಿಯಲ್ ಸೇಂಡರ್ಸನ್

೩೯. ಜ್ಞಾನಬೋಧಕ ೧೮೬೪, ಬೆಸ್ಸಿಕಾಸ್ವಾನ್ಸಾ

೪೦. ಜಗತ್ತಿನ ಇತಿಹಾಸ ಸಾರ, ೧೮೭೫, ರೆ.ಎನ್ .ಟಿ.ಮ್ಯಾಥ್ಯೂವ

೪೧. ಸಣ್ಣ ಕರ್ನಾಟಕ ಕಾವ್ಯಮಾಲೆ, ೧೮೬೮, ರೆ.ಕಿಟಲ್

೪೨. ನೆನಹುಗಳು ೧೮೧೭, ಜಾನ್ ಹ್ಯಾಂಡ್ಸ್ ಸಂಗಡಿಗರು

೪೩. ಯೇಸು ಕ್ರಿಸ್ತನ ಅವತಾರ ೧೮೧೭ ಜಾನ್ ಹ್ಯಾಂಡ್ಸ್ ಸಂಗಡಿಗರು

೪೪. ಪರಿಶುದ್ಧಿಯ ಮಾರ್ಗ ವಿವರಣೆ ೧೮೧೭, ಜಾನೌಹ್ಯಾಂಡ್ಸ್ ಸಂಗಡಿಗರು

೪೫. ಬಾಲಕರ ಗೀತಗಳು, ಜೇ ಮ್ಯಾಕ್

೪೬. ಕ್ರಿಸ್ತದಾಸರ ಪದಗಳು

೪೭. ಯೇಸುಕ್ರಿಸ್ತನ ಜನನ ಜಾಪದನ ೧೮೯೪

೪೮. ಕ್ರಿಸ್ತ ಸಭೆಯ ಸಂಕ್ಷೇಪ ಚರಿತ್ರೆ ೧೮೮೩

೪೯. ರೋಮನ್ ಮತವನ್ನು ತೂಗುವ ತ್ರಾಸು ೧೮೮೭, ಗಾಸ್ಟ್

೫೦. ಅನುದಿನದ ಆಹಾರ, ೧೮೫೭, ರೇ.ಕ್ಯಾಂಡೆಲ್

ಮಿಶನರಿಗಳ ಬರಹಗಳನ್ನು ಈ ಕೆಳಗಿನಂತೆ ಹೆಸರಿಸಬಹುದು

೧. ಸತ್ಯವೇದಾಧ್ಯಯನ ಕೈಪಿಡಿ

೨. ಸತ್ಯವೇದ ವ್ಯಾಖ್ಯಾನಗಳು

೩. ಮಕ್ಕಳ ಪುಸ್ತಕಗಳು

೪. ಪ್ರಾರ್ಥನಾ ಪುಸ್ತಕಗಳು

೫. ದೈವಜ್ಞಾನ ಶಾಸ್ತ್ರ

೬. ಧ್ಯಾನದ ಪುಸ್ತಕಗಳು

೭. ಜೀವನ ಚರಿತ್ರಗೆಳು

೮. ಕಥೆ-ಕಾದಂಬರಿಗಳು

೯. ನಾಟಕಗಳು

೧೦. ಕ್ರೈಸ್ತ ಬೋಧನೆ

೧೧. ತುಲನಾತ್ಮಕ ಗ್ರಂಥಗಳು

೧೨. ಸಭಾ ಚರಿತ್ರೆ

೧೩. ಶಬ್ದಕೋಶ ಬೈಬಲ್ ಆಧರಿಸಿ

ಒಟ್ಟು ಪುಸ್ತಕಗಳ ಅಂದಾಜನ್ನು ಹೀಗೆ ಗ್ರಹಿಸಬಹುದೆಂದು ರೆ.ಜೆ.ಎಂ.ಜೋಗುಳವರು ಅಭಿಪ್ರಾಯಪಡುತ್ತಾರೆ.

೧. ಸತ್ಯಾವೇದಗಳ ಪುಸ್ತಕ ೧೩೮

೨. ಕ್ರೈಸ್ತತ್ವದ ಇತಿಹಾಸ ೩೭

೩. ಜೀವನ ಚರಿತ್ರೆಗಳು ೩೯

೪. ದೈವಜ್ಞಾನ ಶಾಸ್ತ್ರ ೭೯

೫. ಇತರ ಧರ್ಮಗಳ ಕುರಿತು ೪೭

೬. ಸಭಾ ಪಾಲನಾ ದೈವಜ್ಞಾನ ಶಾಸ್ತ್ರ ೨೪೪

೭. ನಿಯತ ಕಾಲಿಕಗಳು ೦೯

ಹೊಸಗನ್ನಡ ರೂಪ ಪಡೆಯುವಲ್ಲಿ ಮಿಶನರಿಗಳ ಕೊಡುಗೆ ಅಲ್ಪವೆಂದು ಹೇಳುವುದುಂಟು. ಅದಕ್ಕಾಗಿ ಕೇವಲ ಇಬ್ಬರು ಮಿಸನರಿಗಳ ಕೊಡುಗೆಯನ್ನು ಉದಾಹರಣೆಯಾಗಿ ನೋಡಿದರೆ ಅವರ ಕನ್ನಡ ಪರ ಕರ್ತವ್ಯದ ಅರಿವು ಆಗಲು ಸಾಧ್ಯ. ಇದಲ್ಲದೆ ಮಿಶನರಿಯೇತರ ಕೊಡುಗೆಯನ್ನು ಸ್ಮರಿಸಬಹುದು.

ಮೋಗ್ಲಿಂಗನಿಂದ ಸಂಪಾದಿಸಲ್ಪಟ್ಟ, ಬರೆಯಲ್ಪಟ್ಟ ಹಾಗೂ ಮುದ್ರಿಸಲ್ಪಟ್ಟ ಕೃತಿಗಳು

ಗ್ರಂಥಮಾಲೆಗಳು

ಬಿಬ್ಲಿಯೊಥೆಕಾ ಕರ್ನಾಟಕ

೧. ದಾಸರ ಪದಗಳು, ಮಂಗಳೂರು : ೧೮೫೨, ೩೦ x ೨೨ ಸೆ.ಮೀ., ಪುಟಗಳು : ೧೫೮

೨. ಕನಕದಾಸರು ಹರಿಭಕ್ತಿಸಾರ, ಪುಟಗಳು : ೨೦

೩. ಚೆನ್ನಬಸವ ಪುರಾಣವು ಮಂಗಳೂರು : ೧೮೫೧, ೩೦ x ೨೦ ಸೆ.ಮೀ. ಪು.೫೩೯

೪. ಬಸವಪುರಾಣವು, ಮಂಗಳೂರು : ೧೮೫೦, ೩೦ x ೨೦ ಸೆ.ಮೀ., ಪು.೬೭೦

೫. ಜೈಮಿನಿ ಬಾರತ, ೧೮೪೮

೬. ತೊರವೆ ರಾಮಾಯಣ

೭. ಕುಮಾರವ್ಯಾಸ ಭಾರತ (ಭಾಗಗಳು)

ಶಾಲಾಗೃಹ ಪಠಣೋದ್ದೇಶ ದೇವವಾಕ್ಯ ವ್ಯಾಖ್ಯಾನವು

೧. ಬೋಶೆಯ ಐದು ಗ್ರಂಥಗಳ ವ್ಯಾಖ್ಯಾನವು, ಮಂಗಳೂರು : ಜರ್ಮನ್ ಮಿಷನ್ ಪ್ರೆಸ್, ೧೮೭೩, ಪು.೪೦೨

೨. ಚರಿತ್ರ ಗ್ರಂಥಗಳ ವ್ಯಾಖ್ಯಾನವು, ಮಂಗಳುರು : ಜರ್ಮನ್ ಮಿಷನ್ ಪ್ರೆಸ್, ೧೮೭೫, ಪು.೧೫೧೩, ೨೩ x ೧೬ ಸೆ.ಮೀ

೩. ಹೊಸ ಒಡಂಬಡಿಕೆ, ಮಂಗಳೂರು : ಜರ್ಮನ್ ಮಿಷನ್ ಪ್ರೆಸ್, ೧೮೬೧, ಪು.೧೧೯೨, ೨೫ x ೧೬ ಸೆ.ಮೀ

ಪುಸ್ತಕ ಕಿರುಹೊತ್ತಿಗೆಗಳು

೧. ಈರಾರು ಪತ್ರಿಕೆ, ೧೮೪೨

೨. ಹೃದಯ ದರ್ಪಣ, ೧೮೫೦

೩. ಯಾತ್ರಿಕನ ಸಂಚಾರವು ಜಾನ್ ಬುನ್ಯನ್ ರಚಿಸಿದಂತ ಇಹದಿಂದ ಪರಕ್ಕೆ ಹೋಗುವ ಯಾತ್ರಿಕನ ಸಂಚಾರವು ಕನ್ನಡಸಿದ್ದು, ಮಂಗಳೂರು, ೧೮೪೯, ಪು.೨೫೫, ೨೧ x ೧೩ ಸೆ.ಮೀ

೪. ದೇವ ವಿಚಾರಣೆ, ಮಂಗಳೂರು : ಮಿಷನ್ ಪ್ರೆಸ್ , ೧೮೪೫, ಪು.೭೨

೫. ಜಾತಿ ವಿಚಾರಣೆ, ೧೮೫೪, ಪು.೩೯

೬. ಮತ ವಿಚಾರಣೆ, ೧೮೬೪, ಪು.೫೧

೭. ಕನ್ನಡ ಗಾದೆಗಳು, ೧೮೫೨, ಮಂಗಳೂರು, ೩೦ x ೨೨ ಸೆ.ಮೀ., ಪು.೧೦೯ (೩೫೪೭ ಗಾದೆಗಳು)

೮. ಕ್ರೈಸ್ತ ಗೀತಗಳು, ೧೮೭೪

೯. ರಾಜೆಂದರ್ ನಾಮೆ : ಅಂದರೆ ಹಾಲೇರಿ ವೀರರಾಜೇಂದ್ರ್ ವಡೆಯರು ಬರೆಸಿದ ಕೊಡಗಿನ ಚರಿತೆರವು, ಮಂಗೂರು : ಜರ್ಮನ್ ಮಿಷನ್ ಪ್ರೆಸ್ , ೧೮೫೭, ಪು.೧೫೨+೬೨ (ಇಂಗ್ಲಿಷ್) ೨೬x೨೧ ಸೆ.ಮೀ.

೧೦. Horae pauline : The Truth of the Scripture History of st.paul Evinced/by william paley/Translated by H. mogling, Bangalore : B T S B S, ೧೮೫೫ (Kan) ೨೧ x ೧೪ cm.

೧೧. ಚಿಕ್ಕವನಾದ ಹೆನ್ರಿಯೂ ಅವನ ಬೋಯಿಯೂ (೧೮೪೯)

೧೨. ಬಾಸೆಲ್ ಮಿಷನಿನ ಸಭಾಕ್ರಮ

ನಿಯತ ಕಾಲಿಕಗಳು

ಮಂಗಳೂರು ಸಮಾಚಾರ

ಕನ್ನಡ ಸಮಾಚಾರ

ಕನ್ನಡ (ಸು) ವಾರ್ತಿಕ

ಕ್ರೈಸ್ತ ಸಭಾಪತ್ರವು (ಸಂಪಾದಕರಲ್ಲಿ ಒಬ್ಬನಾಗಿ)

ಮಂಗಳೂರು ಪಂಚಾಂಗ (ಸಂಪಾದಕರಲ್ಲಿ ಒಬ್ಬನಾಗಿ)

English

1. Coorg Memoirs.
2. First Report of the Basel Mission in India

German

1. Lieder Kanareischer Sanger uber setzt von H. Fr.Mogling. Proben von Purandara Dasa and Kanaka Dasa Kanareisher Text Des Eraten Dutzend Dasara Padagalu zweites Dutzend Leipzig.

*2. Das Kurgland und die eveangelische Mission in Kurg/by H. Mogling und Ch Weitbrecht Basel : Missionshaus, ೧೮೬೬, Pp.೩೩೪, ೨೦ x ೧೪ cm.

ಕಿಟೆಲರ ಗ್ರಂಥ -ಲೇಖನ ಸೂಚಿ

ಧಾರ್ಮಿಕ ಸಾಹಿತ್ಯ

೧. ಕಥಾ ಮಾಲೆ, ೧೮೬೨

೨. ಪರಮಾತ್ಮ ಜ್ಞಾನ, ೧೮೬೩

೩. ಯೇಸುಕ್ರಿಸ್ತನ ಶ್ರಮೇಚರಿತ್ರೆ, ೧೮೬೫

೪. ಕ್ರೈಸ್ತ ಸಭಾಚರಿತ್ರೆ, ೧೮೭೦

೫. Short Survey on the vedic Polytheism and Pentheism : A Lecture, ೧೮೭೨

೬. Specimens of South Indian dialects being transactions of the Parable of Sower etc., Collected by A.C.Burnell, Translated by F.Kittel, ೧೮೭೨

೮. Ueber den ursprung des Lingacaltas in India, ೧೮೭೬

ಪಠ್ಯ ಪುಸ್ತಕಗಳು

೯. ಸಣ್ಣ ಕರ್ನಾಟಕ ಕಾವ್ಯಮಾಲೆ, ೧೮೬೫

೧೦. ಇಂಗ್ಲೆಂಡ್ ದೇಶದ ಚರಿತ್ರವು, ೧೮೬೬

೧೧. ಕನ್ನಡ ಪಾಠಗಳ ಮೂರನೆಯ ಪುಸ್ತಕ, ೧೮೬೬

೧೨. ಕರ್ನಾಟಕ ಕಾವ್ಯಮಾಲೆ, ೧೮೭೪

೧೩. ಕನ್ನಡ ಪಂಚತಂತ್ರವು, ೧೮೭೬

೧೪. ಕಾವ್ಯಮಂಜರಿ, ೧೮೭೭

ಗ್ರಂಥ ಸಂಪಾದನೆಯ ಕೃತಿಗಳು

೧೫. ಶಬ್ದಮಣಿದರ್ಪಣಂ, ೧೮೭೨

೧೬. ನಾಗವರ್ಮನ ಕನ್ನಡ ಛಂದಸ್ಸು, ೧೮೭೫

---

*ಈ ಪುಸ್ತಕಗಳು ಕರ್ನಾಟಕದ ದೈವಜ್ಞಾನಶಾಸ್ತ್ರ ಕಾಲೇಜ ಬಲ್ಮಠ ಮಂಗಳೂರು ಇಲ್ಲಿನ ಗ್ರಂಥಾಲಯದಲ್ಲಿವೆ.

ಸಾಹಿತ್ಯ ಚರಿತ್ರೆಯ ಅಧ್ಯಯನ

೧೭. An essay on Canerese Literature (ನಾಗವರ್ಮನ ಕನ್ನಡ ಛಂದಸ್ಸು ಗ್ರಂಥದ ಪ್ರಸ್ತಾವನೆ), ೧೮೭೫

ಪತ್ರಿಕಾ ಸಂಪಾದನೆ

೧೮. ವಿಚಿತ್ರ ವರ್ತಮಾನ ಸಂಗ್ರಹ ಮು., ೧೮೬೨-೬೩

೧೯. ಇಂಡಿಯಾ ಮತ್ತು ಅನ್ಯದೇಶದ ವಾರ್ ತಿಕ, ೧೮೬೨-೬೩

ವ್ಯಾಕರಣ ಗ್ರಂಥಗಳು

೨೧. ಹಳೆಗನ್ನಡ ಸಂಕ್ಷೇಪ ವ್ಯಾಕರಣ ಸೂತ್ರಗಳುಲ, ೧೮೬೬

೨೧. ಹಳೆಗನ್ನಡ ವ್ಯಾಕರಣ ಸೂತ್ರಗಳು, ೧೮೮೯

೨೨. A Grammar of the Kannada Language, ೧೯೦೩

ನಿಘಂಟು

೨೩. ಕನ್ನಡ - ಇಂಗ್ಲೀಷ್ ಡಿಕ್ಶನರಿ, ೧೮೬೪

ಕಿಟೆಲರ ಸಂಶೋಧನ ಲೇಖನಗಳು

೧. About gun powder.

I.A., ೧, ೧೬೪, ೧೮೭೨

೨. Derivation of'Elephant'

I.A. ೧. ೨೨೮, ೧೮೭೨

೩. on the Dravidian Element in Sankrit dicitonaries.

I.A., ೧. ೨೩೫, ೧೮೭೨- Reproduced in his Kannad-Engilish Dictionary (೧೮೯೪), Preface pp. ೧-೪೫

೪. Mangaraja's or Kavi Manga's Abhidhana.

I.A., ೧೨, ೩೪೫, ೧೮೭೨

೫. Canerese country compared with the countries adjacent to it. (Translation)

I.A., ೨, ೨೩, ೧೮೭೩

೬. Notes concerning the numerals of the ancient Dravidians.

I.A., ೨, ೨೪, ೧೨೪, ೧೮೭೩

೭. Coorg Superstitions.

I.A., ೨, ೪೭, ೧೬೮, ೧೮೭೩

೮. Coorgs Polyandry

I.A., ೨, ೧೮೨, ೧೮೭೩

೯. Old Canarese Literature.

I.E.R., ೧, ೬೪, ೧೮೭೩ Repeated : I.A., ೪, ೧೫, ೧೮೭೫

೧೦. On the Karnataka Vaishnava Dasas.

I.AA., ೨, ೩೦೭, ೧೮೭೩

೧೧. Notes on Indian prosody and poetry.

I.E.R., ೧, ೪೪೦, ೧೮೭೪/೧೨. On Some Dravidian words.

I.A., ೩, ೨೦೫, ೧೮೭೪

೧೨. On some Dravidian words

I.A., ೨, ೨೪೪, ೩೩೨, ೧೮೭೪

೧೩. Nijaguna's notes on Indian Music.

I.A., ೩, ೨೪೪, ೩೩೨, ೧೮೭೪

೧೪. Seven Lingayata lagends.

I.A., ೪, ೨೧೧, ೧೮೭೫

೧೫. Wurm's Indische Religion.(Review)

I.E.R., ೨, ೨೬೧, ೧೮೭೫

೧೬. Washerman Virasena, a Lingayat lagend

I.A., ೫, ೧೮೩, ೧೮೭೬

೧೭. Kongu inscriptions.

I.A., ೬, ೯೯, ೧೮೭೭

೧೮. Boya

I.A., ೬, ೨೯೦, ೧೮೭೮

೧೯. Some remarks on Dr. Pope's"Notes on the South Indian or Dravidian family of Languages".

I.A., ೮, ೪೭, ೧೮೭೯

೨೦. Notes on South Indian Philology.

I.E.R., ४, ४३೨, ೧೮೮೧

೨೧. Dravidische Elements in den Sanskrit Dhatupathas. F estgruss an Rudolf von Roth zum Doktor- Judilaum, Stuttgart, ೧೮೮३, pp.೨೧ & ff.

೨೨. on some Sanskrit Verbs.

I.A., ೨೪, ೮೧, ೧೮೯೫

೨೩. Bitteru and Barika

I.A., ೨೮, ೧೬೧, ೧೮೯೯

೨೪. Belaturu inscription of the time of Rejendradeva. S.S.೯೭೯.

E.I., ೬, ೨೧೩, ೧೯೦-೦೧

Note

I.A = Indian Antiquary

I.E.R = Indian Evangelical Review

E.I. = Epigraphia Indien

ಉತ್ತಂಗಿ ಚನ್ನಪ್ಪನವರ ಕೃತಿಗಳು

೧. ಬನಾರಸಕ್ಕೆ ಬೇತ್ಲೆಹೇಮಿನ ವಿನಂತಿ (೧೯೨೧)

೨. ಹಿಂದೂ ಸಮಾಜದ ಹಿತಚಿಂತಕ (೧೯೨೧)

೩. ಸರ್ವಜ್ಞನ ವಚನಗಳು (೧೯೨೬)

೪. ವಾಮನ ತಿಲಕ ಜೀವನ ಚರಿತೆ (೧೯೨೭)

೫. ಬಸವೇಶ್ವರರೂ ಅಸ್ಪೃಶ್ಯರ ಉದ್ಧಾರವೂ (೧೯೩೩)

೬. ಸಾಧು ಸುಂದರ ಸಿಂಗರ ದೃಷ್ಟಾಂತ ದರ್ಪಣ ಭಾಗ-೧ (೧೯೩೯)

೭. ಸಾಧು ಸುಂದರ ಸಿಂಗರ್ ದೃಷ್ಟಾಂತ ದರ್ಪಣ (೧೯೫೩)

೮. ಮೋಳಿಗೆ ಮಾರಯ್ಯನ ವಚನಗಳು (೧೯೫೦)

೯. ಅನುಭವ ಮಂಟಪದ ಐತಿಹಾಸಿಕತೆ (೧೯೫೫)

೧೦. ಸಿದ್ಧರಾಮ ಸಾಹಿತ್ಯ ಸಂಗ್ರಹ (೧೯೫೫)

೧೧. ಲಿಂಗಾಯತ ಧರ್ಮ ಮತ್ತು ಕ್ರೈಸ್ತ ಧರ್ಮ ಲೇಖನ

English

1. Anubhava Mantapa
2. Synopsis for the Advanced Studies in Lingayatism
3. Contribution of Christan Missionaries to the Development of Karnataka

4. Concordance to Bhagavadgita(Vols I-IV)

5. Creation & Wonderful child of God(A poem of 100 verses)

ಕಿರಣಮಾಲಿಕೆ(Bazaar Book)

ಪ್ರಸ್ತುತ ಸಂಶೋಧನ ಸಂದರ್ಭದಲ್ಲಿ ಎರಡು ಪ್ರಮುಖ ಹೊಸಗನ್ನಡ ಮಿಶನರಿಗಳ ಕೃತಿಗಳು ಲಭ್ಯವಾಗಿವೆ. ಇವುಗಳ ಮಾಹಿತಿ ಹೀಗಿದೆ.

ಕಿರಣ ಮಾಲಿಕೆ ಅಂದರೆ, Bazaar Book ಒಂದು ಮತೀಯ ಪುಸ್ತಕ ಕೇವಲ ಒಂದು ಮತವನ್ನು ಹೊಗಳಿ ಉಳಿದ ಮತಗಳನ್ನು ತೆಗಳಬೇಕೆಂಬ ಉದ್ದೇಶ ಮಾತ್ರ ಹೊಂದಿರಬಹುದೆಂದು ಕಂಡುಬಂದರೂ ಧರ್ಮದ ಸಿದ್ಧಾಂತ ಹಾಗೂ ತತ್ವಗಳನ್ನು ಪರಿಶೋಧಿಸುವ ಸತ್ಯಾಸತ್ಯತೆಗಳನ್ನು ಅರ್ಥೈಸುವಲ್ಲಿ ಶ್ರಮಿಸುವ ಪುಸ್ತಕ ಇದಾಗಿದೆ.

ಇದು ಒಟ್ಟು ೨೯೬ ಪುಟವನ್ನೊಳಗೊಂಡಿದ್ದು, ೧೩ ಅಧ್ಯಾಯನಗಳನ್ನು ಹೊಂದಿದೆ. ಈಗ ದೊರೆತ ಪುಸ್ತಕದ ಮುಖಪುಟವಿಲ್ಲ ಯಾರು ಬರೆದದ್ದು ಹಾಗೂ ಎಲ್ಲಿ ಮುದ್ರಣಗೊಂಡ ಬಗ್ಗೆ ಮಾಹಿತಿಯಿಲ್ಲ. ಆಧರೆ, ಶ್ರೀ ಹಾವನೂರವರು ತಮ್ಮ ಹೊಸಗನ್ನಡ ಅರುಣೋದಯದಲ್ಲಿ ಇದೊಂದು ಧಾರ್ಮಿಕ ಪುಸ್ತಕ ಇದನ್ನು ಬರೆದವರು ಸ್ಯಾಮುವೇಲ ಅಬೇಜ ಎಂದು ಹೆಸರಿಸಿದ್ದಾರೆ.

ಈ ಕೃತಿಯು ಕನ್ನಡ ಹಾಗೂ ತೆಲುಗು ಪದ್ಯವನ್ನು ಸಾಹಿತ್ಯ ವಸ್ತುವಾಗಿ ಬಳಸಿ ಬರೆದ ವಿಶಿಷ್ಟ ಕೃತಿ ಎಂದರೆ ತಪ್ಪಾಗಲಾರದು. ಪದ್ಯಗಳ ಮಾಹಿತಿ ಇಲ್ಲಿದೆ.

ತೆಲಗು ಪದ್ಯಗಳು

ಅಧ್ಯಾಯ ಐದು

ಪಾಪ ಪರಿಹಾರವನ್ನು ಕುರಿತದ್ದು

೧. ಕಾಶಿ ಕಾಶಿಯನುಚು - ೧೦೫ ಪುಟ

೨. ತಿರುಮಲುಕುನು ಬೋವ - ೧೦೬

೩. ಕಾಶಿಮಧುರ ಕಾಂಚ - ೧೦೬

೪. ತಾಮುನಲುಚುಚೋಟ - ೧೦೭

೫. ಶೂದ್ರುಲನುಚುಭವಿನಿ - ೧೦೯

೬. ಇಲ್ಲುನಾಲು ವಿಡಿಚಿ - ೧೧೦

ಅಧ್ಯಾಯ ಹತ್ತು

ಕರ್ಮ ಪೂಜೆಯನ್ನು ಕುರಿತದ್ದು

೧. ಗಟ್ಟು ರಾಳ್ಲನುದೆಚ್ಚಿ... ೨೨೧ ವೇಮನ

೨. ಜಂನಿಗಿಯಾವಂ ಪರಿಕೆಯ - ೨೨೨ ವೇಮನ

ಅಧ್ಯಾಯ ಹನ್ನೊಂದು

ಅನರ್ಥವಾದ ಪೂಜೆಯನ್ನು ಕುರಿತದ್ದು

೧. ಮಂಟಿ ಲೋಹಮಂದು ೨೪೩

೨. ಪಲುಕುರಾಳ್ಳ ಬೆಚ್ಚಿ ಪರುಗು ೨೪೪

೩. ರಾತಿ ಬಸವನಿ ಗನಿ ರಂಗುಗಾ .. ವೇಮ ೩:೨೪೦-೨೪೫

ಅಧ್ಯಾಯ ಹನ್ನೆರಡು

ಜಾತಿಯನ್ನು ಕುರಿತದ್ದು

೧. ಜಾತುಲಂದು ಮಿಗುಲ... ೨೭೦

ವೇಮ ೨ : ೧೨೮

೨. ಮಾಲ ಮಾಲಗಾಡು... ೨೭೧

ವೇಮ ೨ : ೧೩೫

೩. ಕೂಡದೇಮಿಜೇಸೆ

ವೇಮ ೩:೨೧೮

ಅಧ್ಯಾಯ ಹದಿಮೂರು

ಬ್ರಾಹ್ಮಣರನ್ನು ಕುರಿತದ್ದು

೧. ಮಾದಿಗೆ ಯನವದ್ದುಮಗುಣಮೊನರಿನ... ೨೯೩

ವೇಮ ೩ : ೨೨೯

೨. ಕುಲುಮು ಹೆಚ್ಚು ತಗ್ಗು... ೨೯೩

ವೇಮ ೩ : ೨೨೫

೩. ಮುಟ್ಟಿಟು ಮುಟ್ಟನುಚನು... ೨೯೪

ವೇಮ ೩:೧೧೧ಒಟ್ಟು ೧೭ ತೆಲುಗು ಪದ್ಯಗಳಿವೆ

ಹೀಗೆ ಈ ಕೃತಿಯಲ್ಲಿ ಒಟ್ಟು ೧೭ ತೆಲುಗು ಪದ್ಯಗಳಿವೆ.

ಅಧ್ಯಾಯ ಹತ್ತು

ಸರ್ವಜ್ಞ

೧. ಒಬ್ಬನಲ್ಲದೆ ಜಗಕೆ - ೨೦೪

೨. ಗುಡಿಯ ಬೋದಿಗೆ ಕಲ್ಲು - ೨೦೮

೩. ಆದಿ ದೈವವನು - ೨೨೩

೪. ಕಾಡು ಕಲ್ಲನು ತಂದು - ೨೩೩

೫. ಅವಯವಗಳೆಲ್ಲರಿಗೆ - ೨೫೬

೬. ನಡೆವುದೊಂದೆ - ೨೫೮

೭. ಹಸಿವು ತೃಷೆ ನಿದ್ರೆಗಳು - ೨೫೮

ಒಟ್ಟು ೭ ಸರ್ವಜ್ಞನ ವಚನಗಳು ಇವೆ

THE BAZAAR BOOKನ ವಿವರಣೆ

೧. ಗುರುವನ್ನು ಕುರಿತದ್ದು

ಮೊದಲ ಅಧ್ಯಾಯ ಗುರುವನ್ನು ಕುರಿದದ್ದು ಇಲ್ಲಿ ಶಿಕ್ಷಾಗುರುವಿನ ಬಗ್ಗೆ ಪ್ರಾಸ್ತಾಪಿಸದೆ. ಮೋಕ್ಷಾ ಗುರುವಿನ ಬಗ್ಗೆ, ಆ ಗುರುವಿನ ಅವಶ್ಯಕತೆ ಬಗ್ಗೆ ಮೊದಲು ಬರವಣಿಗೆ ಪ್ರಾರಂಭವಾಗುತ್ತಿದೆ. ಶರೀರ ನಾಶವಾಗುವುದು ಖಚಿತವಿದ್ದ ಹಾಗೆ ಆತ್ಮಕ್ಕೆ ನಾಶವಿಲ್ಲ. ಈ ಆತ್ಮ ಬೇರೊಂದು ಲೋಕಕ್ಕೆ ಹೋದಾಗ ಅಲ್ಲಿ ಅದಕ್ಕೆ ಬಾಳಿ ಬದುಕಲು ಈ ಲೋಕದಲ್ಲಿರುವಾಗಲೇ ಪರಲೋಕದ ಜ್ಞಾನದ ಅವಶ್ಯಕತೆ ಇದೆ. ಇದನ್ನು ಗುರು ಮಾತ್ರ ಕೊಡಬಲ್ಲ ಗುರುವಿನ ಅವಶ್ಯಕತೆ ಇದರಲ್ಲಿ ಬರೆಯಲಾಗಿದೆ. ಇಂಥ ಒಳ್ಳೆಗುರು ಯಾರು? ಎಂದು ಒಳ್ಳೆ ಗುರುವನ್ನು ಗುರುತಿಸುವಲ್ಲಿ ವಿಷ್ಣು-ಶಿವ ಹಾಗೂ ಕ್ರಿಸ್ತನ ಕುರಿತು ಪ್ರಸ್ತಾಪ ಮಾಡಲಾಗಿದ್ದು ಪರಧರ್ಮ, ಠೀಕೆಯನ್ನು ಕಾಣಬಹುದು. ಕೊನೆಯಲ್ಲಿ ಎಲ್ಲ ದೃಷ್ಟಿಯಿಂದ ಏಸು ಕ್ರಿಸ್ತನು ಶ್ರೇಷ್ಠ ಗುರುವಾಗಲು ಯೋಗ್ಯನೆಂಬುವುದನ್ನು ಪ್ರತಿಪಾದಿಸುತ್ತದೆ.

೨. ಶಾಸ್ತ್ರವನ್ನು ಕುರಿತದ್ದು

ಶಾಸ್ತ್ರದ ಅವಶ್ಯಕತೆ ಕುರಿತು ಹೀಗೆ ಪ್ರಾರಂಭವಾಗುತ್ತದೆ. ಮನುಷ್ಯ ನಿಜವಾದ ಭಗವಂತನನ್ನು ಬಿಟ್ಟು ಪಾಪಮಾರ್ಗದಲ್ಲಿ ತಿರುಗಾಡುತ್ತಿದ್ದಾನೆ. ಅಜ್ಞಾನವೆಂಬ ಅಂಧತ್ವದಲ್ಲಿ ಸಿಕ್ಕಿಕೊಂಡು ಕಾಣದೆ ಅಲೆಯುವವರಾಗಿದ್ದಾರೆ... ಹೀಗಿರುವುದರಿಂದ ಆ ಅಂದಕಾರವನ್ನು ಬಿಡಿಸಿ, ಸತ್ಯಮಾರ್ಗ ತೋರಿಸಿ ದೇವರ ಬಳಿಗೆ ಸೇರಿಸತಕ್ಕಂಥ ನಿಜ ಶಾಸ್ತ್ರವೆಂಬ ದೀಪವೇ ಮನುಷ್ಯರಿಗೆ ಅಗತ್ಯವಾದದ್ದು "...ನಾವು ಲೋಕದಲ್ಲಿ ವಿಚಾರಿಸಿದರೆ ಅನೇಕ ಶಾಸ್ತ್ರಗಳು ಉಂಟೆಂದು ನೋಡುತ್ತೇವೆ. ಆದರೆ ಅವೆಲ್ಲ ಸತ್ಯವಾಗಿರುವವೋ ? ಸತ್ಯವನ್ನು ಪರಿಕ್ಷಿಸಿ ನೋಡದೆ, ಯಾವ ಶಾಸ್ತ್ರವಾದರೂ ಸರಿಯೇ ಎಂದು ಹೇಳುವವರು ಮೋಸ ಹೋಗುವವರಾಗಿದ್ದಾರೆ." ದೇವರು ಒಬ್ಬನಿರುವಾಗ ಆತನೆಡೆಗೆ ಸಾಗಿಸುವ ಆತನ ಬಗ್ಗೆ ತಿಳಿಸುವ ಶಾಸ್ತ್ರವೂ ಕೂಡ ಒಂದೇ ಇರಬೇಕಲ್ಲವೇ ಎಂದು ಹಿಂದೂ ಶಾಸ್ತ್ರಗಳಾದ ನಾಲ್ಕು ವೇದಗಳ ಹುಟ್ಟು ಬೆಳವಣಿಗೆ ಕುರಿತು ಟೀಕಾತ್ಮವಾಗಿ ವಿವರಿಸಲಾಗಿದೆ. ಸತ್ಯಾಸತ್ಯಾತೆಯನ್ನು ಮುಂದಿಡಲು ವೇದ ಹುಟ್ಟಿದ ಹಲವು ಕಥೆಗಳ ಮೂಲ ಶ್ಲೋಕಗಳನ್ನು ಉದಾಹರಿಸಲಾಗಿದೆ. ಕೊನೆಯಲ್ಲಿ ಇವುಗಳ ಅರ್ಥಹೀನವಾದವುಗಳೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

೩. ಪಾಪವನ್ನು ಕುರಿತದ್ದು

ಸರ್ವ ಶ್ರೇಷ್ಟನಾದ ದೇವರು ಮನುಷ್ಯರನ್ನು ಉಂಟು ಮಾಡಿ ಅವರನ್ನು ಕಾಪಾಡಿಕೊಂಡು ಬರುತ್ತಾನೆ. ಆದ ಕಾರಣ ಆತನು ಸಕಲರಿಗೂ ಅರಸನಾಗಿಯೂ ಯಜಮಾನನಾಗಿಯೂ ಇದ್ದಾನೆ. ಮನುಷ್ಯರು ನಡೆಯ ಬೇಕಾದ ಕ್ರಮವನ್ನು ಆತನೇ ನೇಮಿಸಬೇಕು. ಆತನ ಕಟ್ಟಳೆಗಳಿಗೆ ಸಮಸ್ತರೂ ವಿಧೇಯರಾಗಿರಬೇಕು. ದೇವರು ತನ್ನ ಚಿತ್ತವನ್ನು ಪ್ರಕಟಮಾಡಿದ್ದಾನೆ. ತನ್ನ ಕಟ್ಟಳೆಗಳನ್ನು ಮನುಷ್ಯನ ಹೃದಯದಲ್ಲಿ ಬರೆದಿದ್ದಾನೆ. ಆದರೆ ಲೋಕದಲ್ಲಿರುವ ಸಕಲರು ದೇವರ ಕಟ್ಟಳೆಗಳನ್ನು ಮೀರಿ ನಡೆದು ಪಾಪಿಗಳಾಗಿದ್ದಾರೆ. ಎಂದೋ ಮಾಡಿದ ಪಾಪಕ್ಕೆ ಮನವೇ ಸಾಕ್ಷಿ ಎಂದು ಪಾಪದ ಕುರಿತು ಅಭಿಪ್ರಾಯಪಡಲಾಗಿದೆ. ಪಾಪವು ಜನರನ್ನು ಶಿಕ್ಷೆಗೆ ಗುರಿ ಮಾಡುತ್ತದೆ ಎಂದು ಬರೆಯಲಾಗಿದೆ. ಹಾಗೆಯೇ ಮನುಷ್ಯನು ತನ್ನಷ್ಟಕ್ಕೆ ತಾನೇ ತನಗೆ ಮುಕ್ತಿಯನ್ನು ದೊರಕಿಸಿಕೊಳ್ಳಲಾರನು ಎಂಬುದನ್ನು ಸ್ಪಷ್ಟಪಡಿಸಲಾಗಿದೆ. ಇದೆಲ್ಲದಕ್ಕೆ ಕ್ರಿಸ್ತನು ಮುಕ್ತಿದಾಯಕನಾಗಿದ್ದಾನೆಂದು ಮುಕ್ತಾಯ ಗೊಳಿಸಲಾಗಿದೆ. ಪಾಪೋಹಂ ಪಾಪಕರ್ಮಂ ಪಾಪಾತ್ಮ ಪಾಪ ಸಂಭವ :

ಬ್ರಾಹ್ಮಣರು ಪ್ರತಿನಿತ್ಯ ಸಂಬೋಧಿಸುವ ಈ ಶ್ಲೋಕದಿಂದ ಪಾಪಿಯಾದ ಮನವನು ತನ್ನ ಪಾಪವಿಮರ್ಶಣೆಗಾಗಿ ದೇವರನ್ನು ಕೇಳುತ್ತಾನೆ ಎಂಬುದು ಇಲ್ಲಿ ಕಂಡುಬರುವುದು.

೪. ಮನುಷ್ಯನನ್ನು ಕುರಿತದ್ದು

ಮನುಷ್ಯನ ದೇಹವು ಪಂಚಭೂತಗಳಿಂದುಂಟಾದರೂ ಆತ್ಮ ಪಂಚಭೂತಗಳಿಗೆ ಸಂಬಂಧಿಸುದಲ್ಲ. ದೇಹ ನಾಶವಾಗಿ ಪಂಚಭೂತಗಳಲ್ಲಿ ಲೀನವಾಗುವುದು. ಆದರೆ ಆತ್ಮ ನಾಶವಾಗುವಂತಹುದಲ್ಲ. ಶರೀರ ಅಧಿಪತಿಯಾಗಿರುವ ಈ ಆತ್ಮವು ತಿಳುವಳಿಕೆಯುಳ್ಳದ್ದು. ಇದು ಪಾಪ-ಪುಣ್ಯಗಳೆರಡನ್ನು ಕೆಡಕುಗಳನ್ನು, ಕಣ್ಣಿಗೆ ಕಾಣದ ಮೋಕ್ಷ ನರಕಗಳನ್ನು ಕುರಿತು ಯೋಚಿಸುವುದು ದುರ್ಗತಿಗೆ ಭಯಪಟ್ಟು ಸದ್ಗತಿಯನ್ನು ಆಶಿಸುವುದು.

ಮನುಷ್ಯನ ಆತ್ಮ ದೇವರಲ್ಲ. ಕೆಲವರು ಜೀವಾತ್ಮವು ಪರಮಾತ್ಮವೂ ಒಂದೇ ಎಂದು ಸಾಧಿಸುವರು. ದೇವರು ಸ್ವಯಂಬು ಆದರೆ ನಮ್ಮ ಆತ್ಮವು ಆತನಿಂದ ಉಂಟಾದದ್ದು ಆ ಪರಮಾತ್ಮನ ಆಳವನ್ನು ಕಾಣುವುದಕ್ಕೆ ಆಗುವುದಿಲ್ಲ. ಮನುಷ್ಯನ ಆ ಪರಮಾತ್ಮನ ಆಳವನ್ನು ಕಾಣುವುದಕ್ಕೆ ಆಗುವುದಿಲ್ಲ. ಮನುಷ್ಯನ ಆತ್ಮವು ದೇವರಿಗೆ ಅಧೀನವಾದುದು.

ಸತ್ತನಂತರದ ಆತ್ಮದ ಸ್ಥಿತಿಯನ್ನು ತಿಳಿಸುತ್ತ ಮೂರು ಲೋಕಗಳ ಕುರಿತು ಸ್ಪಷ್ಟತೆ ಇದೆ. ಹಾಗೂ ಈ ಲೋಕದಲ್ಲಿರುವಾಗ ಆತ್ಮ ಸೇರ ಬಯಸುವ (ನರಕ ಸ್ವರ್ಗ) ಲೋಕಕ್ಕೆ ಸಿದ್ಧತೆಯ ಮಾಡಿಕೊಳ್ಳುವ ಬಗ್ಗೆ ಎಚ್ಚರಿಕೆ ಇದೆ ಹಾಗೂ ಸ್ವರ್ಗ ಸೇರಬಯಸುವವರು ಹುಡುಕುವ ಮಾರ್ಗ ಎಂಥದ್ದು ಅದು ಯಾರ ಮೂಲಕ ದೊರೆಯಬಹುದೆಂಬುದರ ವಿವರಣೆ ಇದೆ.

ಈ ಶರೀರವು ಎಷ್ಟರವರೆಗೆ ಸ್ವಸ್ಥವಾಗಿದೆಯೋ ಮರಣವು ಎಷ್ಟರವರೆಗೆ ದೂರವಾಗಿದೆಯೋ ಅಷ್ಟರೊಳಗೆ ಒಬ್ಬನು ತನ್ನ ಆತ್ಮಕ್ಕೆ ಮೇಲನ್ನು ಹುಡುಕಿಕೊಳ್ಳಬೇಕು. ವ್ಯಾಧಿಯುಳ್ಳವನಾಗಿ ಮರಣಹೊಂದುವ ಸಮಯ ತಾನು ಏನು ಮಾಡಿಯಾನು?

ಯಾವತಸ್ವಸ್ಥಮಿದಂದೇಹಂ ಯಾವನ್ಮೃತ್ಯುಸ್ಚದೂರತೇಃ

ತಾವದಾತ್ಮಹಿತಂಕುರ್ಯಾತ ಪ್ರಾಣಾಂತೇಕಿಂಕರಿಷ್ಯತಿ

೫. ಪಾಪ ಪರಿಹಾರವನ್ನು ಕುರಿತದ್ದು

ಪಾಪ ಪರಿಹರಿಸಿಕೊಂಡಾಗ ಮಾತ್ರ ಮುಕ್ತಿ ಎಂಬುದು ಎಲ್ಲ ಧರ್ಮೀಯರಿಗೂ ತಿಳಿದ ವಿಷಯ. ಆದರೆ ಪಾಪ ನಿವಾರಣೆಗಾಗಿ ಅನೇಕ ವಿಧಗಳುಂಟು. ಪುಣ್ಯಕ್ಷೇತ್ರದರ್ಶನ, ತೀರ್ಥ ಸ್ವೀಕಾರ ನಾಮ-ಗಂಧ-ಭಸ್ಮಗಳ ಲೇಪನ ನದಿ-ನೀರುಗಳ ಸ್ನಾನ ಹಾಗೂ ಬ್ರಾಹ್ಮಣನು ಪಾಪ ಕಳೆಯುವಲ್ಲಿ ಸಹಾಯಕನೆಂದು ನಂಬಿದವುಗಳ ಕುರಿತು ವಿಚಾರಣೆ ಇದೆ. ನಿಜವಾದ ಪಾಪ ಪರಿಹಾರ ಕ್ರಿಸ್ತನ ಮೂಲಕ ದೊರೆಯ ಬಲ್ಲದೆಂದು ಹೇಳುತ್ತ ಸಂಸ್ಕೃತ ಹಾಗೂ ತೆಲುಗು ಶ್ಲೋಕಗಳ ಉದಾಹರಣೆಗಳಿವೆ.

೧. ಕಾಶಿ ಕಾಶಿಯನುಚು ಕಡುವೇಟ್ಟತೋ ಚೋದು |
ರಂದುಗಲುಗು ದೇವುಡಿಂದು ಲೇಡೆ ||
ಯಿಂದು ನಂದುಗಂಡು ಹೃದಯಂಬು ಲೆಸ್ಸೈನ |
ವಿಶ್ವದಾಭಿರಾಮ ವಿವರವೇಮ ||

ದೇವರು ಎಲ್ಲೆಲ್ಲಿಯೂ ಇರುವವನಾದದರಿಂದ ಆತನನ್ನು ದರ್ಶಿಸುವ ಹಾಗೆ ಕಾಶಿಗೆ ಹೋಗಲವಶ್ಯವಿಲ್ಲ ಎಂಬುವುದೇ.

೨. ತಿರುಮಲಕುನು ಬೋವ ತುರುಕದಾಸರಿಗಾಡು
ಕಾಶಿಬೋವಲಂಜ ಗರಿತಗಾದು ||
ಕುಕ್ಕಸಿಂಹ ಮಗುನ ಗೋದಾವರಿಕಿ ಬೋವ|
ವಿಶ್ವದಾಭಿರಾಮ ವಿನರವೇಮ ||
ತಿರುಪತಿಗೆ ಹೋದರೆ ತಿರುಕನು ದಾಸನಾಗಲಾರನು
ಕಾಶಿಗೆ ಹೋದರೆ ಸೂಳೆ ಗರತಿಯಾಗಲಾರಳು
ನಾಯಿ ಗೋದಾವರಿಗೆ ಹೋದರೆ ಹಿಂಹವಾಗಲಾರದು
ದೇವರಿಗೆ ಪ್ರಿಯಾನಾದವನೇ ಕೇಳು
ಹೀಗೆ, ಅನೇಕ ಶ್ಲೋಕಗಳಿಂದ ವಿವರಣೆ ಉಂಟು,
ಗಂಗಾ ತೋಯೋಸಕೃತ್ಸೈನ | ಮೃದ್ಭಾರೈಶ್ಚ ನಗೋಪಮೈಃ ||
ಆನಮೃತ್ಯೋ: ಸ್ನಾತಶ್ಚೈವ ಭಾವದು ಷ್ಟೋನ ಶುದ್ಧ್ಯತಿ||

ಅಭಿಪ್ರಾಯ : ಬೆಟ್ಟದಷ್ಟು ಮಣ್ಣಿನಿಂದ ಉಜ್ಜಿಕೊಂಡು, ಗಂಗಾನದಿಯಲ್ಲ ಸಾಯುವ ಪರ್ಯಂತರ ಸ್ನಾನ ಮಾಡಿದಾಗ್ಯೂ ದುರ್ಮಾರ್ಗನು ಸನ್ಮಾರ್ಗನಾಗಲಾರನು.

೬. ದೇವರನ್ನು ಕುರಿತದ್ದು

ಈ ಅಧ್ಯಾಯದ ಮೂಲ ಉದ್ದೇಶ ನಿಜ ದೇವರು ಯಾರು? ಆತನನ್ನು ಓದುಗರೇ ನಿರ್ಧರಿಸಲಿ ಎಂಬಂತೆ ವಿಷ್ಣು-ಶಿವ-ಬ್ರಹ್ಮರ ಅಯ್ದ ಶ್ಲೋಕಗಳನ್ನು ಕೊಡಲಾಗಿದೆ. ನಂತರ ಓದುಗರಿಗೆ ನಿಜ ದೇವರ ಕುರಿತು ಆತನ ಗುಣಗಳನ್ನು ಕುರಿತು ವಿವರ ನೀಡಲಾಗಿದೆ. ನಿಜ ದೇವರ ಆಯ್ಕೆಯನ್ನು ಸಹೃದಯನಿಗೆ ಬಿಟ್ಟಿದ್ದು ಲೇಖಕನ ಮುಕ್ತ ವಿಚಾರಕ್ಕೆ ನಾಂದಿಯಾಗಿದೆ. ಶಿವನನ್ನು ಆರಾಧಿಸಿದರೆ ನರಕ ಪ್ರಾಪ್ತಿ, ವಿಷ್ಣುವನ್ನು ಆರಾಧಿಸಿದರೆ ಪಾಪದೊಳಗೆ ಬೀಳುವರು. ಬ್ರಹ್ಮನನ್ನು ಪೂಜಿಸಿದವರು ನರಕಕ್ಕೆ ಹೋಗುವರು ಎಂಬ ತಮ್ಮ ತಮ್ಮಲ್ಲಿಯ ಅವಿವೇಕದ ತಿಳುವಳಿಕೆಯನ್ನು ಸ್ಪಷ್ಟವಾಗಿ ನೀಡಲಾಗಿದೆ.

೭. ಮಂತ್ರಗಳನ್ನು ಕುರಿತದ್ದು

ಮಂತ್ರಗಳಿಂದ ಮನುಷ್ಯನಿಗೆ ಒದಗುವ ಸ್ವರ್ಗ ಪ್ರಾಪ್ತಿಯ ಬಗ್ಗೆ ಪ್ರಶ್ನೆ ಎತ್ತಿ ಸನಾತನ ಮಂತ್ರಗಳಾದ ಓಂ, ಗಾಯತ್ರಿ, ಪಂಚಾಕ್ಷರಿ, ಅಷ್ಟಾಕ್ಷರಿ ಹಾಗೂ ರಾಮ ಜಪ ಕುರಿತು ಅವುಗಳ ಹುಟ್ಟು ಪ್ರಯೋಜನಗಳ ಕುರಿತು. ನಿಜ ಚಿತ್ರಣ ನೀಡಿ ಇಂತಹ ಯಾವ ಮಂತ್ರಗಳೂ ಪಾಪವನ್ನು ಹೋಗಲಾಡಿಸಲಾರವು ಎಂದು ಸ್ಪಷ್ಟಣೆ ನೀಡಲಾಗಿದ್ದು. ಪಾಪ ನಿವಾರಕನು ಕ್ರೈಸ್ತನೊಬ್ಬನೆ ಎಂದು ವಿವರಣೆ ನೀಡಲಾಗಿದೆ.

ಯೋಧೀತೇಹನ್ಯಹನ್ಯೋತಾನ್ ತ್ರೀಣಿವರಕ್ಷಾಣ್ಯತಂದ್ರಿತಃ|
ಸಬ್ರಹ್ಮಪರಮಭ್ಯೇತಿ ವಾಯುಭೂತಃಖಮೂರ್ತಿಮಾನ್

ಮನು ೨.೮೨

ಅಭಿಪ್ರಾಯ : ಯಾವನು ಸೋಮಾರಿತನವಿಲ್ಲದವನಾಗಿ ಮೂರು ವರುಷ ಕಾಲ ದಿನಾಲೂ ಇದನ್ನು (ಗಾಯತ್ರಿ ಮಂತ್ರವನ್ನು) ಅಭ್ಯಾಸ ಮಾಡುತ್ತಾನೋ ಅವನು ಗಾಳಗೆ ಒಪ್ಪಾದವನಾಗಿ ಆಕಾಶ ಶರೀರ ಉಳ್ಳವನಾಗಿ ಪರಬ್ರಹ್ಮವನ್ನು ಹೊಂದುತ್ತಾನೆ.

೮ ಜನ್ಮಾಂತರವನ್ನು ಕುರಿತದ್ದು

ಮನುಷ್ಯನು ತಾನು ಮಾಡುವ ಪಾಪ ಕಾರ್ಯದಿಂದ ಮೋಕ್ಷವನ್ನು ಕಳೆದು ಕೊಳ್ಳುವನೆಂದು ಹೇಳುವಲ್ಲಿ, ಅದು ಎಲ್ಲ ಧರ್ಮೀಯರಲ್ಲಿ ಸೂಕ್ತ ಉಳ್ಳ ವಿಚಾರ ಎನ್ನಬಹುದು. ಆದರೆ ಹಿಂದೂ ಧರ್ಮ ಅದರಲ್ಲೂ ಮನುಧರ್ಮ ಶಾಸ್ತ್ರದಲ್ಲಿ ಮನುಷ್ಯ ಮಾಡಿದ ಪಾಪಕ್ಕೆ ಪ್ರತಿಯಾಗಿ ಏನಾಗಿ ಹುಟ್ಟುವನು ಎಂದು ಹೀಗೆ ಬರೆಯಲಾಗಿದೆ.

ಧಾನ್ಯಂಹೃತ್ವಾಭವತ್ಯಾಖುಃ ಕಾಂಸ್ಯಂಹಂಸೋಜಲಂಪ್ಲವಃ |
ಮಧುದಂಶಃಪಯಃಕಾಕೋರಪಂಶ್ವಾನಕುಲೋಘೃತಂ ||

ಮನು ೧೨-೬೨

ಅರ್ಥ : ಧಾನ್ಯಕದ್ದರೆ, ಇಲಿಯಾಗಿಯೂ; ಕಂಚು ಕದ್ದರೆ, ಹಂಸವಾಗಿಯೂ; ನೀರು ಕದ್ದರೆ ನೀರು ಕಾಗಿಯಾಗಿಯೂ; ಜೇನುಕದ್ದರೆ ಸೊಳ್ಳೆಯಾಗಿಯೂ; ಹಾಲುಕದ್ದರೆ ಕಾಗಿಯಾಗಿಯೂ; ಎಣ್ಣೆ ಮೊದಲಾದವುಗಳನ್ನು ಕದ್ದರೆ ನಾಯಾಗಿಯೂ; ತುಪ್ಪ ಕದ್ದರೆ ಕೀಟವಾಗಿಯೂ ಹುಟ್ಟುವನು.

ಹೀಗೆ ಹುಟ್ಟಿದ ವ್ಯಕ್ತಿಗೆ ತನ್ನ ಹಿಂದಿನ ಜನ್ಮದ ಪಾಪದ ಪ್ರಜ್ಞೆ ಇರುವುದೇ? ತಾನು ಪಟ್ಟ ಶಿಕ್ಷೆ ತನಗೆ ಅರಿವಿಗೆ ಬರುವುದೇ? ಹೀಗೆ ಹುಟ್ಟಿದ ಮೇಲೆ ಅದರ ಮುಂದಿನ ಜನ್ಮ ಏನಾಗುವುದು? ಎಂಬೆಲ್ಲ ಪ್ರಶ್ನೆಗೆ ಹುರುಳಿಲ್ಲ. ಈ ಕುರಿತು ಅನೇಕ ಶ್ಲೋಕಗಳ ವಿವರಣೆ ಇದೆ.

೯. ಅದೃಷ್ಟವನ್ನು ಕುರಿತದ್ದು

ಅದೃಷ್ಟನಿಜವಾದರೆ ಮನುಷ್ಯನಿಗೆ ಸ್ವಾತಂತ್ರ್ಯವು ಇಲ್ಲ. ಅದೃಷ್ಟದಿಂದ ಎಲ್ಲಾ ನಡೆಯುತ್ತದೆಂದು ಹೇಳಿದರೆ, ಮನುಷ್ಯನು ಸ್ವಾಧೀನವಿಲ್ಲದ ಒಂದು ಬೊಂಬೆಯ ಹಾಗಿದ್ದಾನೆಂದು ಹೇಳಿದ ಹಾಗಿರುವುದು.

ಅದೃಷ್ಟದಿಂದ ಆತ್ಮಲಾಭವಾದರೂ ಆಗಬಹುದು. ಅದರಿಂದಲೇ ನಷ್ಟವಾದರೂ ಆಗಬಹುದು. ನಾವು ಪ್ರಯಾಸ ಪಡಬೇಕಾದದ್ದೇನಿದೆ? ಅದೃಷ್ಟವನ್ನು ಯಾರು ತಡೆಯಬಹುದು. ಯಾರು ಬದಲಾಯಿಸಬಹುದು? ಎಂದು ಹೇಳಿಕೊಂಡು ಅವರು ನರಕವನ್ನು ತಪ್ಪಿಸಿಕೊಂಡು, ಮೋಕ್ಷದಲ್ಲಿ ಸೇರುವುದಕ್ಕೆ ಮಾರ್ಗ ಹುಡುಕಲಾರರು.

ಹಣೆ ಬರಹ ಬ್ರಹ್ಮ ಬರೆಯುತ್ತಿದ್ದರೆ, ಶಿವನು ಭೈರವ ರೂಪ ಧರಿಸಿ, ತನ್ನ ಉಗುರಿನಿಂದ ಬ್ರಹ್ಮನ ಐದು ತಲೆಗಳಲ್ಲಿ ಒಂದನ್ನು ಅಮಿಕಿ ಬಿಟ್ಟನೆಂದು ಸ್ಕಾಂದ ಪುರಾಣದಲ್ಲಿ ಬರೆದಿರುವಾಗ ಇದು ಬ್ರಹ್ಮನಿಗೆ ತಿಳಿದಿರಲಿಲ್ಲವೇ?

೧೦. ಕರ್ಮಪೂಜೆಯನ್ನು ಕುರಿತದ್ದು

ಕರ್ಮಪೂಜೆ ಕುರಿತದ್ದು ಎಂಬ ಈ ಅಧ್ಯಾಯದಲ್ಲಿ ಮೂರ್ತಿ ಪೂಜೆ ಕುರಿತು ಬರೆಯಲಾಗಿದೆ.

ಸರ್ವ ಸದ್ಗುಣಗಳುಳ್ಳ ಭಗವಂತನು ಒಬ್ಬನಿರಲಾಗಿ ನೀವು ಆತನನ್ನು ಬಿಟ್ಟು, ಕಣ್ಣಿಗೆ ತೋರುವ ವಸ್ತುವನ್ನು ದೈವವೆಂದು ಪೂಜಿಸುವುದು ನ್ಯಾಯವೊ?

ಕಲ್ಲಿಗೆ ಬ್ರಾಹ್ಮಣನು ಜೀವ ಬರಿಸುವನೋ? ತಾನು ಪ್ರತಿಷ್ಠೆ ಪಡಿಸಿದ ಮೇಲೆ ಆ ಕಲ್ಲು ದೇವರಾಯಿತು ಎಂದು ಹೇಳುವ ಬ್ರಾಹ್ಮಣನು ದೇವರೊ? ಕಲ್ಲಿಗೆ ಪ್ರಾಣ ಕೊಡುವ ಬ್ರಾಹ್ಮಣನ ಘನವಾದ ಕೆಲಸವಾಗಿದೆ. ಅದೇ ಹೊಟ್ಟೆಪಾಡಿಗಾಗಿ ಬೀದಿ ಬೀದಿ ಅಲೆಯ ಬ್ರಾಹ್ಮಣ ಹೊಟ್ಟೆಹೊರೆಯುವ ಅವಶ್ಯಕತೆಯಾದರು ಏನು.

ಸ್ನೇಹಿತರೇ ವಿಗ್ರಹಕ್ಕೂ ಅದರ ಮುಂದೆ ಹಾಸಿದ ಕಲ್ಲಿಗೂ ಮುಂದು ನಿಂತಿರುವ ಕಲ್ಲಿನ ಕಂಬಗಳಿಗೂ ಭೇದ ಉಂಟೊ?

ಗುಡಿಯ ಬೋದಿಗೆ ಕಲ್ಲು; ನಡುರಂಗ ತಾ ಕಲ್ಲು
ಕಡೆ ಮೂಲೆ ಶರಣು ತಾಕಲ್ಲು; ವರವನು
ಕೊಡುವಾತ ಬೇರೆ; ಸರ್ವಜ್ಞ ಎಂದು ವಿವರಣೆ ನೀಡಲಾಗಿದೆ.
ಜಂನಿಗಿಯಾವರಿ ಪರಿಕೆಯ
ಪೂಂನಂ ಪರಿಯಣನುನೊಯ್ಯು ಕಳೈನನಂತಿಂ

ತೆಂನದುಗಡಮನೆ ದೈವದ

ಸಂನಿಧಿಯಂ ನೋಡೆ ಮನೆಯ ಕುನ್ನಿ ವಿಶೇಷಂ

ಅರ್ಥ : ಆಗ ಈದ ಹಸುವನ್ನು ಹರಕೆಯ ಚಿನ್ನವನ್ನು ಹರಿವಾಣವನ್ನು, ತೆಗೆದುಕೊಂಡು ಹೋಗುವ ಕಳ್ಳನನ್ನು ಆ ವಿಗ್ರಹವು ಏನು ಮಾಡಲಾರದು ಅದಕ್ಕಿಂತ ಮನೆಯಲ್ಲಿರುವ ನಾಯಿಯೇ ಹೆಚ್ಚಾದದು.

ಆದಿ ದೈವವನು ತಾ ಭೇದಿಸಲರಿಯದಲೇ

ಹಾದಿಯೂ ಕಲ್ಲಿಗೆಡೆ ಮಾಡಿ ನಮಿಸುವ

ಮಾದಿಗರ ನೋಡು ! ಸರ್ವಜ್ಞ

೧೧. ಅನರ್ಥವಾದ ಪೂಜೆಯನ್ನು ಕುರಿತದ್ದು

ವಿಗ್ರಹ ಪೂಜೆ ಅನರ್ಥವಾದುದು ಅದು ಬುದ್ಧಿಯನ್ನು ಕುರುಡು ಮಾಡುವುದು

ಕಾಡುಕಲ್ಲನು ತಂದು ಕಡಿದು ಲಿಂಗವ ಮಾಡಿ

ನಾಡೆಲ್ಲ ಅದಕ್ಕೆ ಅಡ್ಡಡ್ಡ ಬೀಳುವ

ಮೂಡರನ್ನೇನೆಂಬೈ ಸರ್ವಜ್ಞ

ಕಲ್ಲಿನಿಂದ ಮಾಡಿದ ಜೀವವಿಲ್ಲದ ಎತ್ತನ್ನು ಕಂಡರೆ ಕೈಯೆತ್ತಿ ಮುಗಿಯುವರು. ಕಾಲಿನಿಂದ ನಡೆಯುವ ಜೀವವುಳ್ಳ ಎತ್ತನ್ನು ಕಂಡರೆ ಅದನ್ನು ಬಂಡಿಗೆ ಹಾಕಿ, ಚುಚ್ಚಿ, ಹೊಡೆದು, ಬಾಲ ಸುಲಿದು ಓಡಿಸುವರು. ಜೀವ ಉಳ್ಳದ್ದನ್ನು ಹೊಡೆದು ಜೀವವಿಲ್ಲದ್ದನ್ನು ಪೂಜಿಸುವಂಥ ಬುದ್ಧಿ ಎಂತಾ ಕುರುಡು ಬುದ್ಧಿಯೆಂದು ಯೋಚಿಸಬೇಕು.

ರಾತಿ ಬಸವನಿ ಗನಿ ರಂಗುಗಾ ಪ್ರೊಕ್ಕುಚು

ಗುನಕ ಬಸವನಿ ಗನಿ ಗ್ರುದ್ದು ಚುಂಡ್ರು

ಬಸವ ಭಕ್ತುಲೆಲ್ಲ ಪಾಪುಲು ತಲಪೋಯ

ವಿಶ್ವದಾಭಿರಾಮ ವಿನರ ವೇಮ

ವೇಮ ೩:೨೪೦

ಹೀಗೆ ಬುದ್ಧಿಯನ್ನು, ಮೂರ್ತಿ ಪೂಜೆ ಕುರುಡು ಮಾಡುವುದು.

ಒಬ್ಬ ಅರಸ ಮೂರ್ತಿಕೆತ್ತುವ ಶಿಲ್ಪಿಗೆ ಕೇಳಿದನಂತೆ, ನನ್ನನ್ನು ನೋಡು ನನ್ನ ಶರೀರದೊಳಗೆ ವಾಸಮಾಡುವ ನನ್ನ ಆತ್ಮದ ಹಾಗೆ ಒಂದು ರೂಪವನ್ನು ಕೆತ್ತಿ ತೋರಿಸು ಎಷ್ಟು ಸಹಸ್ರ ವರಗಳನ್ನು ಕೊಡಲು ಸಿದ್ದನಿದ್ದೇನೆ. ಅದಕ್ಕೆ ಶಿಲ್ಪಿ ಆತ್ಮಕ್ಕೆ ರೂಪವಿಲ್ಲ ನಾನು ಹೇಗೆ ರೂಪ ಮಾಡಲಿ ಅಂದನಂತೆ. ಆಗ ಅರಸ ನಿನ್ನ ಕಣ್ಣಿಗೆ ಎಂದಾದರೂ ತೋರದೆ ಇರುವ ದೇವರನ್ನು ನೀನು ರೂಪಿಸಲು ಎಷ್ಟು ಧೈರ್ಯವುಳ್ಳವನು ಈ ಕಪಟ ನಾಟಕವನ್ನು ಇನ್ನು ಮುಂದುವರೆಸಬೇಡವೆಂದು ಎಚ್ಚರಿಸಿದನಂತೆ.

೧೨. ಜಾತಿಯನ್ನು ಕುರಿತದ್ದು

ಅನೇಕ ಶ್ಲೋಕಗಳಿಂದ, ಜಾತಿ ಒಂದೇ ಆದು ಮನುಷ್ಯ ಜಾತಿ. ಇದರಲ್ಲಿ ಕೆಟ್ಟ ಹಾಗೂ ಒಳ್ಳೆಯ ಎಂಬ ಎರಡು ಜಾತಿ ಭೇದ ಇರಲು ಸಾಧ್ಯವೆಂಬುದನ್ನು ಇಲ್ಲಿ ವಿವರಿಸಲಾಗಿದೆ.

ಅವಯವಗಳೆಲ್ಲರಿಗೆ ಸಮನಾಗಿ ಇರುತಿರಲು
ಭವಿಭಕ್ತಶ್ವಪಚ ಶೂದ್ರರು ಯೆಂತೆಂಬ
ಕವನಯತ್ತಣದು? ಸರ್ವಜ್ಞ

ನಡೆವುದೊಂದೇ ಭೂಮಿ ಕುಡಿದೊಂದೇ ನೀರು
ಸುಡುವಗ್ನಿಯೊಂದೇ ಇರುತಿರೆ, ಕುಲಗೋತ್ರ
ನಡವೆಯತ್ತಣದು? ಸರ್ವಜ್ಞ

ಬ್ರಹ್ಮನ ನಾಲ್ಕು ಸ್ಥಾನಗಳಲ್ಲಿ ನಾಲ್ಕು ಜಾತಿಗಳು ಹುಟ್ಟಿದವು
ಬ್ರಾಹ್ಮಣೋಸ್ಯ ಮುಖಮಾಸಿಗತ್
ಬಾಹೂ ರಾಜನ್ಯಃಕೃತಃ
ಊರುತದಸ್ಯಯದ್ವೈಶ್ಯಃ
ಪದ್ಭ್ಯಾಂ ಶೂದ್ರೋ ಜಾಯಿತ

ಬ್ರಹ್ಮನ ಮುಖದಿಂದ ಬ್ರಾಹ್ಮಣನೂ, ಭುಜದಿಂದ ಕ್ಷತ್ರಿಯನೂ, ತೊಡೆಯಿಂದ ವೈಶ್ಯನೂ, ಪಾದಗಳಿಂದ ಶೂದ್ರನೂ ಹುಟ್ಟಿದನು ಎಂಬುವುದೇ.

ಒಟ್ಟೆ ತಂದೆಯಿಂದ ಹುಟ್ಟಿ ನಾಲ್ಕು ಮಕ್ಕಳಲ್ಲಿ ಜಾತಿ ಭೇದ ಇರುವುದನ್ನು ಎಲ್ಲಿಯಾದರೂ ನೋಡಿರುವಿರಾ? ಎಂದು ಪ್ರಶ್ನಿಸಿ ಒಬ್ಬ ತಂದೆಯಿಂದ ಹುಟ್ಟಿದವರು ಅವರೆಲ್ಲರು ಒಂದೇ ಜಾತಿಯವರೆಂದು ವಿವರಿಸಲಾಗಿದೆ. ಒಂದೇ ಮರದಲ್ಲಿ ಹುಟ್ಟಿದ ಹಣ್ಣುಗಳಲ್ಲಿ ಜಾತಿ ಬೇದ ಉಂಟೇ? ದೇವರು ಜಾತಿಯನ್ನು ಕುಲಗಳನ್ನು ನಿರ್ಮಿಸಿದ್ದೇ ಆಗಿದ್ದರೆ ಎಲ್ಲಾ ದೇಶಗಳಲ್ಲಿ ಒಂದೇ ವಿಧವಾಗಿ ಇರಬೇಕಲ್ಲವೆ? ಜಾತಿ ಭೇದವು ದೊಡ್ಡ ವಂಚನೆ ಹಾಗೂ ಮಹಾಪಾತಕವಾಗಿದೆಂದು ವಿವರಿಸಲಾಗಿದೆ.

೧೩. ಬ್ರಾಹ್ಮಣರನ್ನು ಕುರಿತದ್ದು

ಬ್ರಾಹ್ಮಣರೆಲ್ಲರೂ ಹುಟ್ಟಿದಾಗ ಶೂದ್ರರಾಗಿ ಹುಟ್ಟುತ್ತಾರೆಂದೂ, ಕರ್ಮದಿಂದ ದ್ವಿಜರಾಗುತ್ತರೆಂದೂ, ವೇದವನ್ನು ಓದುವುದರಿಂದ ವಿಪ್ರರಾಗುತ್ತಾರೆಂದು, ಬ್ರಹ್ಮಜ್ಞಾನದಿಂದ ಬ್ರಾಹ್ಮಣರಾಗುತ್ತಾರೆಂದೂ ಶಾಸ್ತ್ರಗಳು ಹೇಳುತ್ತವೆ. ಹೀಗಾಗಿ ಹುಟ್ಟಿನಿಂದ ಯಾರು ಬ್ರಾಹ್ಮಣರಾಗರು.

ವಜ್ರಸೂಚಿ ಎಂಬ ಗ್ರಂಥದಲ್ಲಿ ಹೀಗೆ ಉಂಟು. ಋಷ್ಯಶೃಂಗನು ಹುಲ್ಲೆಯಲ್ಲಿಯೂ ಜಾಂಬುಕನು ನದಿಯಲ್ಲಿಯೂ ಗೌತವನು ಮೊಲದಲ್ಲಿಯೂ ವಾಲ್ಮೀಕನು ಬೇಡರಲ್ಲಿಯೂ ಅಗಸ್ತ್ಯನು ಕುಂಭದಲ್ಲಿಯೂ

ವ್ಯಾಸನು ಬೆಸ್ತರವಳಲ್ಲಿಯೂ ವಶಿಷ್ಠನು ಊರ್ವಸಿ ಎಂಬ ಸೂಳೆಯಲ್ಲಿಯೂ ನಾರದನು ಅಗಸದವಳಲ್ಲಿಯೂ ಕೌಂಡಿನ್ಯನು ವಿಧವೆಯಲ್ಲಿಯೂ ಸಾಂಖ್ಯನು ಹೊಲೆಯರವಳಲ್ಲಿಯೂ ಗಾರ್ಗ್ಯನು ಕತ್ತೆಯಲ್ಲಿಯೂ ಶೌನಕನು ನಾಯಿಯಲ್ಲಿಯೂ ಹುಟ್ಟಿದರೆಂದು ಹೇಳಿದೆ. ಇವರೆಲ್ಲರು ವೇದ ಪಠಣದಿಂದ ಶ್ರೇಷ್ಠತ್ವ ಪಡೆದು ಮಹಾ ಋಷಿಗಳಾದರೆಂದು ಶಾಸ್ತ್ರವೇ ಹೇಳುತ್ತದೆ. ಹಾಗಿದ್ದಲ್ಲಿ ಹುಟ್ಟಿನಿಂದ ಬ್ರಾಹ್ಮಣ ಎಲ್ಲಿ?

ಜಾತಿ ಹೀನನ ಮನೆಯ ಜೋತಿ ತಾ ಹೀನವೇ?
ಜಾತಿ ವಿಚಾರತಿಯೆನ ಬೇಡ; ದೇವನೊಲಿ
ದಾತನೇ ಜಾತ; ಸರ್ವಜ್ಞ
ಜಾಂಡಾಲಾ ಗರ್ಭಸಂಭೂತೊ, ವಿಶ್ವಾಮಿತ್ರ ಮಹಾಮುನಿ
ತಪಸಾ ಬ್ರಾಹ್ಮಣೋಜಾತ ಸ್ತಸ್ಮಜ್ಜಾತಿರಕಾರಣಂ
ತಾಂಬೂಲೀಗರ್ಭಸಂಭೂತೋ ನಾರದೋಹಿ ಮಹಾಮುನಿಃ
ತಪಸಾ ಬ್ರಾಹ್ಮಣೋಜಾತ ಸ್ತಸ್ಮಾಜಾತಿರಕರಣಂ
ನಚತೇ ಬ್ರಾಹ್ಮಣೇ ಪುತ್ರ ಸ್ತಚಲೋಕಸ್ಯ ಬ್ರಾಹ್ಮಣಾಃ
ಶೀಲಶೌಚಮಯೋಬ್ರಂಹ್ಮ ತಸ್ಮಾಜ್ಜಾತಿರಕಾರಣಂ
ಶೀಲಂ ಪ್ರಧಾನಂ ನಕುಲಂ ಪ್ರಧಾನಂ
ಕುಲೇನ ಕಿಂ ಶೀಲ ವಿವರ್ಜಿತೇನ

ಅಂದರೆ ಚಂಡಾಳ ಹೆಂಗಸಿನಲ್ಲಿ ಹುಟ್ಟಿದ ವಿಶ್ವಾಮಿತ್ರನೂ, ವೀಳ್ಯದ ಹಂಬಿನಲ್ಲಿ ಹುಟ್ಟಿದ ನಾರದನೂ, ತಪಸ್ಸಿನ ಮಹಿಮೆಯಿಂದ ಬ್ರಾಹ್ಮಣರಾದರು. ಹೀಗೆ ಬ್ರಾಹ್ಮಣಗಿತ್ತಿಯರ ಮಕ್ಕಳಲ್ಲದವರು ಬ್ರಾಹ್ಮಣರಾದದರಿಂದ ಜಾತಿಯ ಶ್ರೇಷ್ಠತ್ವಕ್ಕೆ ಕಾರಣವಾಗಲಾರದು. ಸದ್ಗುಣ ಸತ್ಕ್ರಿಯೆಗಳುಳ್ಳವನೇ ಬ್ರಾಹ್ಮಣನು. ನಡತೆ ಮುಖ್ಯವೇ ಹೊರತು ಕುಲವು ಮುಖ್ಯವಲ್ಲ. ಒಳ್ಳೆ ನಡೆತೆಯಿಲ್ಲದ ಕುಲವು ಶ್ರೇಷ್ಟವಾಗಲಾರದು.

ಬ್ರಾಹ್ಮಣತ್ವ ಕುರಿತು ಹೀಗೆ ಬರೆಯಲಾಗಿದೆ.

ಸದ್ಯಃ ಪತತಿ ಮಾಂಸೇನ ಲಾಕ್ಷಯಾಲವಣೇನಚ
ತ್ರ್ಯಹೇಣ ಶೂದ್ರೋಭವತಿ ಬ್ರಾಹ್ಮಣ ಕ್ಷೀರವಿಕ್ರಯಾತ್ ಮನು ೧೦,೬೨

ಅರ್ಥ : ಬ್ರಾಹ್ಮಣನು ಮಾಂಸವನ್ನು, ಅರಗನ್ನು, ಉಪ್ಪನ್ನು ಮಾರಿದ ಮಾತ್ರದಲ್ಲಿ ಭ್ರಷ್ಟನಾಗುತ್ತಾನೆ. ಹಾಲನ್ನು ಮಾರಿದರೆ ಮೂರು ದಿನದೊಳಗೆ ಶೂದ್ರನಾಗುತ್ತಾನೆ.

ಶೂದ್ರೋಪಿಶೀಲ ಸಂಪನ್ನೋಗುಣವಾನ್ ಬ್ರಾಹ್ಮಣೋಭವೇತ್||
ಬ್ರಾಹ್ಮಣೋಪಿ ಕ್ರಿಯಾಹೀನಃ ಶೂದ್ರಾತ್ಪತ್ಯ ಪರೋಭವೇತ್|| ಭಾರತ

ಅರ್ಥ : ಶೂದ್ರನಾದರೂ ಒಳ್ಳೆ ನಡತೆ, ಒಳ್ಳೆಗುಣವುಳ್ಳವನಾದರೆ, ಬ್ರಾಹ್ಮಣನಾಗುವನು. ಬ್ರಾಹ್ಮಣನಾದರೂ ಒಳ್ಳೆ ಕ್ರಿಯೆಗಳಿಲ್ಲದವನಾದರೆ ಶೂದ್ರನಿಗಿಂತ ಕೀಳಾಗುವನು

ಹೀಗೆ ಬ್ರಾಹ್ಮಣತ್ವದ ಮೂಲವನ್ನು ಸಂಪೂರ್ಣ ವರೆಗೆ ಹಚ್ಚಿ ಕೊನೆಯಲ್ಲಿ ಎಲ್ಲರೂ ಒಂದೇ. ಹುಟ್ಟಿನಿಂದ ಯಾವನೂ ಬ್ರಾಹ್ಮಣನಾಗಲಾರ ಎಂಬುದನ್ನು ಸ್ಪಷ್ಟಪಡಿಸಲಾಗಿದೆ.

ಲೋಕಚರಿತ್ರವು

ಈ ಕೃತಿ ೧೮೫೫ರಲ್ಲಿ ಮಂಗಳೂರಿನಲ್ಲಿ ಛಾಪಿಸಿದ್ದು ಒಟ್ಟು ೩೫೫ ಪುಟಗಳು.

ಅಧ್ಯಾಯ - ಪೂರ್ವಕಾಲವು

ಕ್ರಿಸ್ತನು ಬರುವ ಮುಂಚೆ ಆದದ್ದು, ಪೂರ್ವಕಾಲವು ಆ ಕಾಲದ ಜನಾಂಗಗಳು

೧. ಮೊದಲು ಇದ್ದ ಮನುಷ್ಯರ ವಂಶವು ೧-೪೪ ಪುಟ

I ಅ. ಮೊದಲನೆ ಮನುಷ್ಯರು, ಆ. ಕಾಯಿನನವರೂ ಸೇತನವರೂ ಇ. ಜಲಪ್ರಳಯ ಮತ್ತು ನೋಪಾ(ಹಾ)ನನಮಕ್ಕಳು ಈ. ಮ್ಲೇಚ್ಛರ ಮತದ ಉತ್ಪತ್ತಿ, II. ಆದಿಯಲ್ಲಿದ ಮ್ಲೇಚ್ಛ ಸಂಸ್ಥಾನಗಳು ೧. ಪೂರ್ಣವಾದ ಯಾಜಕ ಸಂಸ್ಥಾನಗಳು ೧. ಚಂದ್ ಜನಾಂಗವು ೨. ಇಂದರು III ಮೊರೊವೆ ಎಂಬ ಯಾಜಕ ಸಂಸ್ಥಾನವು IV. ಮಿಶ್ರವಾದ ಯಾಜಕ ಸಂಸ್ಥಾನಗಳು ಅ.ಐಗುಪ್ತರು ಅ. ಖಲ್ಡಾಯರು ಇಲ್ಲವೇ ಪೊಳೇಬಬಿಲೋನ್ಯರು ಇ. ಪೊಳೇ ಅಸ್ಸೂರ್ಯರು

ಆ ಇಸ್ರಾಯೇಲ ಜನರು ಐಗುಪ್ತದಿಂದ ಪೊರಟದ್ದು.

ಇ. ಪೊಳೇ ಮೇದ್ಯರು ಉ. ಪೊಳೇ ಪಾರ್ಶಿಯರು ಊ. ಪೊಂಯಿನೀಕ್ಯರು

ಅಧ್ಯಯನ II ದೇವರು ಆರಿಸಿಕೊಂಡ ಜನಾಂಗವು

೧. ಇಸ್ರಾಯೇಲನ ಕುಟುಂಬವು ಮೂಲತ್ವಗಳ ಕಾಲವೂ

ಅ. ಅರಣ್ಯದಲ್ಲಿ ಸಂಚರಿಸಿದ್ದು, ಅವರು ಅರ್ಪಿಸಿದ ಬಲಿಗಳು, ಅಪರಾಧ ಬಲಿ, ಕೆಲವು ಕಾಲಗಳಗೊಸ್ಕರ ಆಗುವಂತ ಬಲಿಗಳು, ಹಬ್ಬಗಳು. ೧. ಸಬ್ಬತ್ ದಿವಸಗಳು, ೨. ಅಮವಾಸೆಗಳು ಹಾಗೂ ಮೊಶೆ ೨೮, ೧೧-೧೪ ವ ೩ನೇದು ವಿಮೋಚನೆಯ ಹಬ್ಬ. ೪ನೇ ಹಬ್ಬ ಪಸ್ಕದ ಪಬ್ಬವು. ೫. ಪಂಚಾಶತ್ತಿನ ಪೊಬ್ಬ. ೬. ಪನೇಶಾಲೆಯ ಪೊಬ್ಬ ೭. ಸಬ್ಬತ ವರುಷ ಅಥವಾ ಬಿಡುಗಡೆಯ ವರುಷ

ಇ. ಕಾನ್ ನದೇಶವನ್ನು ತಕ್ಕೊಂಡದ್ದು. ಇಸ್ರಾಯೇಲ ಜನರ ನ್ಯಾಯಾಧಿಪತಿಗಳು

೩. ಇಸ್ರಾಯೇಲ ದೇವಾದಿಪತ್ಯದ ಅರಸ್ತನ ಅ. ಸೌಲನು ಆ. ದಾವೀದನ ರಾಜ್ಯ. ಇ. ಫಲೋಮೋನಸ ರಾಜ್ಯ

೪. ಇಸ್ರಾಯೇಲರ ಅಳಿವೂ - ಅ. ರಾಜ್ಯ ವಿಭಾಗ ಆ. ಪ್ರವಾದಿಗಳು, ಇ. ಎಫ್ರಾಯಿ ಮೊರಾಜ್ಯದ ಅಳಿವು ಇ. ಯೂದರಾಜ್ಯದ ಅಳಿವು ಉ. ಇಸ್ರಾಯೇಲ್ಯರು ದೇಶಾಂತರದಲ್ಲಿ ಫಾರ್ಶಿಯರು ದೊಡ್ಡರಾಜ್ಯದ ಉತ್ಪತ್ತಿ.

೫. ಪಾರ್ಶಿಯರ ಅರಸರು ಆಳಿದಾಗ ಇಸ್ರಾಯೇಲರು ಪುನಸ್ಥಾಪಿಸಲ್ಪಟ್ಟಿದ್ದು.

III. ಗ್ರೇಕ ಜನರು

೧. ಗ್ರೇಕ ದೇಶದ ಪೂರ್ವಕಾಲವು ಅ. ಗ್ರೇಕ ದೇಶದ ಮೂಲನಿವಾಸಿಗಳು ಅ. ಶೂರರ ಕಾಲವು ಆ. ಏಳುಮಂದಿರಾಜರು ಥೆಬೇನಪಟ್ಟಕ್ಕೆ ವಿರೋಧವಾಗಿ ಕ್ರಿ.ಪೂ.೧೨೩೦ನೆಯಲ್ಲಿ ಹೊರಟಿದ್ದು, (೧೯೦ಪುಟ) ಇ. ದೋರ್ಯರ ಪ್ರಯಾಣವೂ ಗ್ರೇಕರ ಬಿಸ್ತಿಗಳು ಪೊಲ್ಲೇನರ ಮತವು ಉ. ಸ್ಪರ್ತ ಊ. ಅಥೇನ್

೨. ಗ್ರೇಕ ದೇಶದ ಮಧ್ಯಕಾಲವು

೩. ಗ್ರೇಕ ದೇಶದ ಕಡೇ ಕಾಲವು ಮೆಕೆದೊನ್ಯದ ಅರಸನಾದ ಪಿಲಿಪ್ಪನು ಅಲೆಕ್ಷಂದ್ರನು ಸ್ಥಾಪಿಸಿದ ದೊಡ್ಡರಾಜ್ಯ ಕುರಿತು

ಅಧ್ಯಾಯ IV ರೋಮಾಯರ ಚರಿತ್ರವು

೧. ರೋಮನ ಪೂರ್ವಕಾಲವು

೧. ರೋಮನ ಪಟ್ಟವು ಪೊಟ್ಟಿದ್ದು...

೨. ರೋಮದ ಪೂರ್ವಕಾಲವು

ರೋಮದ ಮಧ್ಯಕಾಲ

ರೋಮ ಕೆಟ್ಟು ಹೋದದ್ದು


ಲೋಕ ಚರಿತ್ರವು ಭಾಗ ೨


ಕ್ರಿಸ್ತನ ತರುವಾಯ ಆದದ್ದು

I ಪೂರ್ವದ ಕಾಲವು

೧. ಪಶ್ಚಿಮ ದಿಕ್ಕಿನ ದೇಶಗಳೂ ಕ್ರೈಸ್ತರ ಮತವೂ ಅವುಗಳಲ್ಲಿ ಪ್ರಬಲವಾದದ್ದೂ

ಅ. ಕ್ರೈಸ್ತರ ಮತವು ಪುಟ್ಟಿದ್ದೂ ಪ್ರಬಲವಾಗಲಿಕ್ಕೆ ಅಂಕುರವಾದದ್ದು





ಲೋಕಚರಿತ್ರವು.
ಯೆರಡನೇ ಭಾಗ.
Rev. T. J. Puneet
Presbyter
ಮಂಗಳೂರಲ್ಲಿ ಛಾಪಿಸಿದ್ದು.
೧೮೫೪.

೨. ಕೂನ್ಸಾಂತೀನನು ಬರುವತನಕಾ ಜಾಗುಸ್ತನ ಸ್ಥಳಕ್ಕೆ ಬಂದವರು.

೮. ತಿಬೇರಿಯನಿಂದ ದೊಮಿತ್ಯಾನನ ನತಕಾ (ಕ್ರೈಸ್ತ ಮತದ ಅಭಿವೃದ್ಧಿ)

೧. ಪೂರ್ವದಿಕ್ಕಿನ ರೋಮಿಕ ರಾಜ್ಯವು

೨. ಪೂರ್ವದಿಕ್ಕಿನ ದೇಶಗಳೂ ಮಾಪೂಮ್ಮದನ ಮತವು ಅವುಗಳಲ್ಲಿ ಪ್ರಬಲವಾದದ್ದು

೩. ಕ್ರೈಸ್ತ ಮಾರ್ಗವು ವಿಗ್ರರಾಧನೆಯ ಮಾರ್ಗವನ್ನು ಜಯಿಸಿದ್ದು

೪. ಧೃಚರೂ ಜನಾಂಗಗಳ ತಿರುಗಾಟವೂ

೫. ಪಶ್ಚಿಮ ರೋಮಿಕ ರಾಜ್ಯದ ನಾಶನವೂ ಗೆರ್ಮಾನಿಕ ರಾಜ್ಯಗಳು ಅವುಗಳ ಕ್ರಮಗಳೂ

೬. ನೆರ್ವನಿಂದ ಕೊನ್ಸ್ತಂತೀನನ ತನಕಾ

ಖಲೀಫರ ಅಧಿಕಾರವು

II ಮಧ್ಯಕಾಲವು

೧. ಫ್ರಂಕ ರಾಜ್ಯವು

೨. ದೈಚ ರಾಜ್ಯವು ಧೃಚರು ವಿಲಾಯತಿಯಲ್ಲಿ ಶ್ರೇಷ್ಠ ಜನಾಂಗವಾದದ್ದೂ

೩. ಲೌಕಿಕ ರಾಜ್ಯಗಳು ಪಾಪನ ಅಧಿಕಾರಕ್ಕೆ ಒಳಗಾದದ್ದು

೧. ಮಪೂರಾಜರ ಸಂಸ್ಥಾನವೂ ಪಾಪದ ಸಂಸ್ಥಾನವೂ

೨, ಕ್ರೂಜೆಯುದ್ಧಗಳು

೩. ವೆಲ್ಫರೂ ಫಿಬೆಲ್ಲೀನರೂ ಇವರ ಜಗಳಗಳು

೪. ಕೈಗಡಗಳ ರಾಜ್ಯವು ಪಾಪದ ಸಂಸ್ಥಾನವೂ ಕೆಟ್ಟು ಹೋದದರ ಆರಂಭ

೧. ಶ್ರೀಮಂತರು ಸ್ವಾಧೀನರಾಜ್ಯಗಳನ್ನು ಸ್ಥಾಪಿಸಿದ್ದು

೨. ಸಭೆಯ ಅತಿ ನೀಚಸ್ಥಿತಿಯು

೫. ವಿಲಾಯತಿಯಲ್ಲಿಯೂ ಆಸ್ಯದಲ್ಲಿಯೂ ಹುಟ್ಟಿದ ಬೇರೆ ರಾಜ್ಯಗಳಲ್ಲಿ ೧೫ನೇ ವರುಷ ಶತದ ಅಂತ್ಯದ ಪರ್ಯಂತರ ನಡೆದ ಸಂಗತಿಗಳ ವಿವರ

೧. ಇತಾಲ್ಯವು ೨. ಪರೆನಾಯಿಕ ಅರ್ಧದ್ವೀಪವು ೩. ಫ್ರಾಶಿನ ದೇಶವು ೪. ಇಂಗ್ಲಂದವು ೫. ಸ್ಕಂದಿನಾವಿಕ ರಾಜ್ಯಗಳು ೬. ಪೋಲಂದವು ರುಸ್ಸಿಯವೂ ಎಂಬ ಸ್ಲಾವಿಕ ರಾಜ್ಯಗಳು ೭.

ಪೂಂಗದಿ ದೇಶವು ೮. ಗ್ರೇಕ ಮಹಾರಾಜ್ಯವು ೯. ಖಲೀಫರ ರಾಜ್ಯದ ಕಡೆಕಾಲವೂ ಮೊಂಗೋಲರಾಜ್ಯವು

೬. ಹೊಸ ಕಾಲವು ಬರುತ್ತದೆಯೆಂಬುದರ ಗುರ್ತಾಗಿ ಹೊಸದಾಗಿ ರೌಣಬಂದ ದೇಶಗಳೂ ತಳಿಯಬಂದ ವಿದ್ಯಗಳೂ.

೩.೪. ಕ್ರೈಸ್ತ ಸಾಹಿತ್ಯದ ಕೃತಿಗಳ ಮಹತ್ವ, ಸ್ಥಾನ, ಪ್ರಮಾಣ

ಕನ್ನಡ ಸಾಹಿತ್ಯ ವಿವೇಚನೆಯಲ್ಲಿ ಬಳಕೆಯಲ್ಲಿರುವ "ಜೈನ ಸಾಹಿತ್ಯ, 'ವೀರಶೈವ ಸಾಹಿತ್ಯ' 'ದಾಸ ಸಾಹಿತ್ಯ', 'ಬೌದ್ಧಸಾಹಿತ್ಯ' ಈ ಪದಗಳ ಸಹಸ್ಥಾನಿಯಾಗಿ "ಕ್ರೈಸ್ತ ಸಾಹಿತ್ಯ" ಪದ ಕಾಣಿಸಿಕೊಳ್ಳುತ್ತದೆ. ಈ ಪದಗಳಲ್ಲಿ ಮೊದಲಿನ ಮೂರು ಪದಗಳಂತೂ ಕೃತಿ, ಕಾಲಗಳ ಸ್ಪಷ್ಟ ಸ್ವರೂಪ, ಸೀಮೆಗಳನ್ನೂ ವಿಷಯ ವಿನ್ಯಾಸಗಳ ದೃಷ್ಟಿಯಿಂದ ನಿರ್ವಿವಾದ ವಾದ ಮೌಲ್ಯವನ್ನೂ ಸೂಚಿಸುತ್ತವೆ."[೧]

ಕನ್ನಡದಲ್ಲಿ ಕ್ರೈಸ್ತ ಎನಿಸಿಕೊಂಡ ಸಾಹಿತ್ಯವನ್ನು ಕ್ರೈಸ್ತ ಸಾಹಿತ್ಯ ಎಂಬ ಗಂಭೀರವಾದ ಹಾಗೂ ಶಾಸ್ತ್ರೀಯ ಪರಿಕಲ್ಪನೆಯ ಮೂಲಕ ನಿರ್ದೇಶಿಸುವುದು ಉಚಿತವೇ ಸಮಂಜಸವೇ ಎಂದುಕೊಂಡಾಗ, ಇತರ ಭಾರತೀಯ ಧರ್ಮಗಳಂತೆ ಮತೀಯ ಸಾಹಿತ್ಯವಾಗಿ ಅನೇಕ ವಿಧದಲ್ಲಿ ಹರವುಗೊಂಡು, ಹೊಸಗನ್ನಡ ಸಾಹಿತ್ಯದಲ್ಲಿ ತನ್ನನ್ನು ವಿಶೇಷವಾಗಿ ಪದ್ಯ-ಗದ್ಯ-ಕಥೆ-ಕಾರಂಬರಿ-ವಿಮರ್ಶೆ-ಟೀಕೆಗಳೊಂದಿಗೆ ವಿವಿಧ ಶೈಲಿಗಳಿಂದ ಗುರುತಿಸಿಕೊಂಡಿರುವುದು ಕಂಡುಬರುವುದು.

"ಕ್ರೈಸ್ತ ಸಾಹಿತ್ಯವು ವೈವಿಧ್ಯಪೂರ್ಣವಾದುದು' ಹೊಸಗನ್ನಡ ಪದ್ಯದ ಶೈಲಿಯನ್ನು, ಪದ್ಯಕ್ಕೆ ಒದಗಬೇಕಾದ ವಸ್ತುವನ್ನು ವಿಶೇಷವಾಗಿ ನೀಡುತ್ತ ಹೊಸ ಅಲೆಯನ್ನೇ ಪದ್ಯಭಾಗದಲ್ಲಿ ನಿರ್ಮಿಸಿದ್ದರೂ ಅದು ಗದ್ಯದಲ್ಲಿಯೇ ಹೆಚ್ಚಾಗಿ ವ್ಯಕ್ತವಾಗಿದೆ. 'ನೇರವಾದ ಗದ್ಯ ರಚನೆಯ ಜೊತೆಗೆ ಪ್ರಶ್ನೋತ್ತರದ ಪ್ರಕಾರವನ್ನು ಮಿಶನರಿಗಳು ಬಳಕೆಯಲ್ಲಿ ತಂದರು. ಕನ್ನಡಕ್ಕೆ ಹೊಸತಾದ ಈ ರೂಪವನ್ನು ಅಂದಿನ ಶಿಕ್ಷಣ ಕ್ಷೇತ್ರದಲ್ಲಿ ವಿಶೇಷವಾಗಿ ಅನುಕರಿಸಲಾಯಿತು. ಅದರಂತೆ ಚರಿತ್ರೆ ಮತ್ತು ಕಥನ ಕ್ರಮಗಳನ್ನು ಸಹ ಮಿಶನರಿಗಳು ತಕ್ಕಮಟ್ಟಿಗೆ ರೂಢಿಸಿದರು.

ಎರಡು ನೂರಕ್ಕೂ ಮಿಕ್ಕಿದ ಕ್ರೈಸ್ತ ಗ್ರಂಥ ಸಮುದಾಯವನ್ನು (ಗದ್ಯ) ಅಭ್ಯಾಸದ ಅನುಕೂಲತೆಗಾಗಿ ಹೀಗೆ ವರ್ಗೀಕರಿಸಬಹುದು.

೧. ಬೈಬಲ್ ಅನುವಾದ : ಅದರ ಸಂಗ್ರಹ, ವ್ಯಾಖ್ಯೆಗಳು

೨. ತಾತ್ವಿಕ ಹಾಗೂ ಭಕ್ತಿಪರ ಪ್ರಬಂಧಗಳು; ಉಪದೇಶಗಳು

---

೧. ಕನ್ನಡ ಸಂದೇಶ ಬಿ.ಎಸ್.ತಲ್ವಾಡಿ, ಪು.೧೫

೩. ಹಿಂದೂ ಧರ್ಮದ ಟೀಕೆ, ಪ್ರತಿ ಟೀಕೆ

೪. ಸಾಂಘಿಕ ಚರ್ಚ ಇತಿಹಾಸ ಮತ್ತು ಮಿಶನರಿ ಸಂಸ್ಥೆಗಳು

೫. ಕಥನ

೬. ಪ್ರಪಂಚಿಕ ವಿಷಯಗಳು"[೧]

ಮತ್ತು ಪತ್ರಿಕೆ, ಪಠ್ಯ ಹಾಗೂ ಸಂಗೀತಗಳ ದೃಷ್ಟಿಯಿಂದ ನೋಡಿದಾಗಲೂ ಕ್ರೈಸ್ತಧರ್ಮ, ಕನ್ನಡ ಸಾರಸ್ವತ ಲೋಕಕ್ಕೆ ವಿಶೇಷವಾದ ಕೊಡುಗೆಯನ್ನಿತ್ತಿದೆ.

ಕನ್ನಡ ಸಾಹಿತ್ಯದಲ್ಲಿ ಅದರಲ್ಲೂ ಹೊಸಗನ್ನಡ ಸಾಹತ್ಯ ಅನುಲಕ್ಷಿಸಿ, ವಿಪುಲವಾದ ರಾಶಿಯೇ ಕಂಡುಬರುವುದು. ಮಿಶನರಿಗಳಿಂದ ಹಿಡಿದು ರೆ.ಉತ್ತಂಗಿ ಚನ್ನಪ್ಪರಂತಹ ವಿದ್ವಾಂಸರವರೆಗೆ ಬಹಳ ಉಪಯುಕ್ತ ಕ್ರೈಸ್ತ ಸಾಹಿತ್ಯ ದೊರೆಯುತ್ತದೆ. ಮಿಶನರಿಗಳ ಕೃತಿಗಳಲ್ಲಿ ಕ್ರೈಸ್ತ ಧರ್ಮ ಕುರಿತು ಬಹು ಆಳವಾದ ಜ್ಞಾನದೊಂದಿಗೆ ಸಾಹಿತ್ಯ ಮೂಡಿನಿಂತಿದೆ. ಬೈಬಲ್ ಆಧಾರಿತ ವ್ಯಾಖ್ಯಾನ, ಶಬ್ದಕೋಶ (೧ ಮತ್ತು ೨ ಭಾಗ) ಬೋಧನೆಗೆ ಸಂಬಂಧಿಸಿದಂತೆ ಧರ್ಮಬೋಧಕರನ್ನು ತರಬೇತಿಗೊಳಿಸಲು ಪ್ರಾರಂಭಿಸಿದ ದೈವಜ್ಞಾನ ಶಾಸ್ತ್ರಗಳ ಪುಸ್ತಕಗಳು ಅಧಿಕ ಪ್ರಮಾಣದಲ್ಲಿ ಕಂಡುಬರುವವು. ಇವು ಕ್ರೈಸ್ತಧರ್ಮದ ಭಕ್ತರಲ್ಲಿ ಹೆಚ್ಚು ಮಹತ್ವಪಡೆದ ಕೃತಿಗಳಾಗಿವೆ. ಕಾರಣ ಅಂದಿನ ಮಿಶನರಿಗಳ ದೈವಜ್ಞಾನ ಶಾಸ್ತ್ರದಲ್ಲಿ ಪದವಿಧರರು ಸ್ನಾತಕ ಪದವಿಧರರು ಆಗಿರುವುದರಿಂದ ಅವರಿಂದ ಉಂಟಾದ ಎಲ್ಲ ಕೃತಿಗಳು ಆಳವಾದ ಜ್ಞಾನದ ಪಿಪಾಸೆಗಳಾಗಿವೆ.

ಕ್ರೈಸ್ತೇತರರ ಸಾಹಿತ್ಯ ಅಥವಾ ಇತರ ಧರ್ಮಗಳ ಟೀಕೆ-ಟಿಪ್ಪಣಿ ಹಾಗೂ ವಿಮರ್ಶೆ ತೌಲನೀಕರಣದ ದೃಷ್ಟಿಯಲ್ಲಿ ಮೂಡಿ ಬಂದ ಸಾಹಿತ್ಯವೂ ಅಧಿಕವಾಗಿದ್ದು, ಅಂದಿನ ಕಾಲದಲ್ಲಿ ಬಿರುಗಾಳಿಯನ್ನೇ ಎಬ್ಬಿಸಿದ ಕೃತಿಗಳಾಗಿವೆ. ಇವು ಭಾರತೀಯ ಧರ್ಮದೃಷ್ಟಿಯಲ್ಲಿ ಹೊಸತನವನ್ನು ತುಂಬಲು ಸಹಾಯಿಸಿದವಲ್ಲದೆ, ಧರ್ಮ ಜಾಗೃತಿಯನ್ನು ತಂದುಕೊಟ್ಟವು. ಹೀಗಿರುವಾಗ ಮಿಶನರಿಗಳು ಧರ್ಮಜಾಗೃತಾ ಕೃತಿಗಳು ವಿಶೇಷ ಸ್ಥಾನವನ್ನು ಪಡೆದವುಗಳಾಗಿದ್ದವು ಎನ್ನುವಲ್ಲಿ ಸಂಶಯವಿಲ್ಲ. ವಾದ-ಪ್ರತಿವಾದಗಳಿಂದ ಹೊಸ ಹೊಸ ಧಾರ್ಮಿಕ ಮಿಷನ್‌ಗಳು (mission) ಅಂದರೆ ಸಂಘಗಳು ಹುಟ್ಟಲು ಅನುವು ಮಾಡಿಕೊಟ್ಟವು. "ಹಿಂದೂ ಸಂಸ್ಕೃತಿಯ ಪುನರುದ್ಧಾರ, ರಾಷ್ಟ್ರೀಯ ಮನೋಭಾವದ ಬೆಳವಣಿಗೆ ಪಶ್ಚಿಮ ದೇಶಗಳಲ್ಲಿ ಧರ್ಮದ ಪ್ರತಿಷ್ಠೆಯ ಖ್ಯಾತಿ ಇವು ಕ್ರೈಸ್ತ ಮುಖಂಡರು ಹಿಂದೂ ಸಂಸ್ಕೃತಿಯಲ್ಲಿ ಆಸಕ್ತಿಯನ್ನು ಹೊಂದುವುದಕ್ಕೆ ಅದನ್ನು ಕ್ರೈಸ್ತ ಧರ್ಮೋಪದೇಶದಲ್ಲಿ ಅಳವಡಿಸಿಕೊಳ್ಳುವುದಕ್ಕೂ ದಾರಿಮಾಡಿಕೊಟ್ಟವು."[೨]

೧. ಹೊ.ಅ.ಶ್ರೀ.ಹಾ., ಪು.೪೩೧-೪೩೨

೨. ಪ್ರಾಚ್ಯ ಮತ್ತು ಪಾಶ್ಚಾತ್ಯ ಸಂಸ್ಕೃತಿ ಕೆ.ವಿ.ಪುಟ್ಟಪ್ಪ, ಪು.೪೮

ಇಂದಿನ ಕ್ರೈಸ್ತ ಸಾಹಿತ್ಯ ಕೂಡ ಕೆಥೋಲಿಕ ಹಾಗೂ ಪ್ರಾಟೆಸ್ಟೆಂಟ್ ಎಂಬ ಎರಡೂ ಪಂಗಡಗಳಲ್ಲಿ ಸಾಕಷ್ಟು ಬರುತ್ತಿದೆ. ಅನೇಕ ಲೇಖಕರುಗಳಿದ್ದರೂ, ಕ್ರೈಸ್ತೇತರರಲ್ಲಿ ಹೆಸರು ಮಾಡಿದವರು ಕೇವಲ ಒಬ್ಬಿಬ್ಬರು. ಉದಾ : ಉತ್ತಂಗಿ ಚನ್ನಪ್ಪ, ನಾ.ಡಿಸೋಜ ಬಿಟ್ಟರೆ ಇಲ್ಲಿಯವರೆಗೂ ಅಂಥ ಸಾಹಿತಿಗಳು ಕ್ರೈಸ್ತರಲ್ಲಿ ಕಂಡುಬಂದಿಲ್ಲ.

ಒಂದು ಕಾಲಕ್ಕೆ ರೆ.ಎಸ್.ಐ.ಮಾರಾ, ರೆ.ಎಮ್.ಆನಂದಮೂರ್ತಿ, ರೆ.ಎಸ್.ರತ್ನಂ, ಶ್ರೀ.ಸಿ.ಎಸ್. ಕರ್ಬಿ, ಶ್ರೀ ಟಿ.ಎಸ್.ಸಾವನಗೌಡರ ಪ್ರಸಿದ್ಧರಾಗಿದ್ದರು. ಆದರೂ ಅವರ ಸಾಹಿತ್ಯ ತಕ್ಕಷ್ಟು ಉನ್ನತ ಮಟ್ಟಕ್ಕೇರಿ ಪ್ರಭಾವಶಾಲಿಯಾಗದೇ ಹೋದುದು ಒಂದು ಶೋಚನೀಯ.

ರೆ.ಪೂರ್ತಾಡೊ, ರೆ.ಜೆ.ಎಂ.ಜೋಗುಳ, ರೆ.ವರ್ತ, ರೇ.ಎಸ್.ಮಾಳೆಕಾರ, ಡಾ.ಬಿ.ಎಸ್.ತಲ್ವಾಡಿ, ಡಾ.ಎಡ್ವರ್ಡ್ ನೊರೋನ, ವಿಲಿಯಂ ಕಾರ್ಕಡ ಮುಂತಾದವರು ಇತ್ತೀಚಿನ ದಿನಗಳಲ್ಲಿ ಉಳಿದುಕೊಂಡು ಬಂದ ಸಾಹಿತಿಗಳ ಸಾಲಿನಲ್ಲಿದ್ದಾರೆ.

ಕ್ರೈಸ್ತಧರ್ಮದ ಹಲವು ಮತಪಂಥಗಳಿಗೆ ಸಂಬಂಧಿಸಿದ ಕೃತಿ ಸಮುದಾಯವೇನೋ ಗಣನೀಯ ಪ್ರಮಾಣದಲ್ಲಿ ಕನ್ನಡದಲ್ಲಿ ಸೃಷ್ಟಿಯಾಗಿದೆ. ಕೆಥೋಲಿಕ್ ಮತಕ್ಕೆ ಸಂಬಂಧಿಸಿದ ಸುಮಾರು ನೂರು ಐವತ್ತು ಕೃತಿಗಳು (೧೯೩೦ ವರೆಗೆ) ದಾಖಲಾಗಿವೆ. ಪ್ರಾಟೆಸ್ಟಂಟ್ ಪಂಥಕ್ಕೆ ಸೇರಿದ ಕೃತಿಗಳು ಕೆಥೋಲಿಕರ ಕೃತಿಗಿಂತ ಕಾಲಕ್ರಮದಲ್ಲಿ ತಡವಾಗಿ ಬಂದರೂ, ಸಂಖ್ಯೆಯಲ್ಲಿ ಅಧಿಕವೂ ವಿಷಯವ್ಯಾಪ್ತಿಯಲ್ಲಿ ಹೆಚ್ಚು ವಿಸ್ತೃತವೂ ಆಗಿರುವಂಥದ್ದು. ಇವೆರಡು ಮತಸ್ಥರ ರಚನೆಗಳಲ್ಲದೆ ಜನಪದ ಸಾಹಿತ್ಯ ಗಣನೀಯ ಪ್ರಮಾಣದಲ್ಲಿದೆ ಎಂಬುದನ್ನು ಬಿ.ಎಸ್.ತಲ್ವಾಡಿಯವರು ತೋರಿಸಿಕೊಟ್ಟಿದ್ದಾರೆ. ಇದಲ್ಲದೆ ಕ್ರೈಸ್ತೇತರರು ರಚಿಸಿದ ಕ್ರೈಸ್ತ ಸಂಬಂಧಿ ಸಾಹಿತ್ಯ ಕನ್ನಡದಲ್ಲಿ ಕಾಣಿಸಿಕೊಳ್ಳುವುದುಂಟು. ಗೋವಿಂದ ಪೈ ಅವರ ಗೊಲ್ಗೊಥಾ ಪಾಂಡೇಶ್ವರ ಗಣಪತಿರಾಯರ ಕವನ, ಕ್ರಿಸ್ತಜನ್ಮ(ಬೆಂಗಲವೆ ೧೯೪೦) ಕ್ರೈಸ್ತ ಕಾಲೇಜ ಪ್ರಕಟಣೆ 'ಕ್ರಿಸ್ತಾಂಜಲಿ' ವಿ.ಕಾ.ಸುಬ್ಬರಾಯಾಚಾರ್ ಅವರ ಗದ್ಯ. ಕೃತಿ ಯೇಸುಕ್ರಿಸ್ತ ಹಾಗೂ ನಾವು ಆರಾಧಿಸುವ ಕ್ರಿಸ್ತ (ಪರಿವರ್ತನಾ ಶೀಲ ಸಮಾಜಕ್ಕೆ ಶಾಶ್ವತ ಮೌಲ್ಯಗಳು ಸ್ವಾಮಿ ರಂಗನಾಥಾನಂದ) ಇತ್ಯಾದಿ.

ಆರಂಭದ ಲೇಖಕರಲ್ಲಿ ಜೇಸುಯಿಟ್ ಪುರೋಹಿತ ಚಿನ್ನಾಮಿಯು ಎಂದು ಊಹಿಸಲಾದ ಕೆಲವು ಕೃತಿಗಳಲ್ಲಿ ಸಾಕಷ್ಟು ಭಾಷಾ ಪ್ರೌಢಿಮೆ ಕಂಡುಬರುತ್ತದೆ. ಈ ಅವಧಿಯಲ್ಲಿ ಮೊತ್ತ ಮೊದಲಿಗೆ ರಚಿತವಾಗಿರುವ ಆಧುನಿಕ ಗದ್ಯಕ್ಕೆ ಸಮೀಪವಾಗಿರುವಂಥ ಬರವಣಿಗೆ ತರ್ಕ ವಿವರಣೆ ನೇರ ಹಾಗೂ ಸರಳ ನಿರೂಪಣೆಯ ದೃಷ್ಟಿಯಿಂದ ಉತ್ತಮ ಗದ್ಯದ ಮಾದರಿಯೇ ಆಗಿದೆ.

೧೮೪೦ರ ದಶಕದಲ್ಲಿ ಪೂರ್ಣಗೊಂಡ ಸಂಪೂರ್ಣ ಬೈಬಲ್ ನ ಕನ್ನಡ ಪಾಠ ಸೃಜನಾತ್ಮಕ ಕೃತಿಯಲ್ಲದಿದ್ದರೂ ಒಂದು ಮೇರು ಕೃತಿಯ ಅನುವಾದವಾಗಿದೆ. ಇಲ್ಲೆಲ್ಲ ಸೃಜನಾತ್ಮಕ ಸಾಹಿತ್ಯದ

ಪ್ರಥಮ ವೈಶಿಷ್ಟ್ಯವಾಗಿರುವ ಭಾವತೀವ್ರತೆ, ಕಲಾತ್ಮಕತೆ ಸಾಹಿತ್ಯಾತ್ಮಕ ನಿರೂಪಣೆ ಸಾಕಷ್ಟು ಪ್ರಮಾಣದಲ್ಲಿ ಕಂಡುಬರುವುದಿಲ್ಲ. ವಿಷಯ ನಿರೂಪಣೆ ಇದೆ ಓದುಗನಿಗೆ ಅದು ಬೌದ್ಧಿಕವಾಗಿ ತಲುಪುತ್ತದೆ. ಆದರೆ ಭಾವಗಳನ್ನು ಎಚ್ಚರಿಸಿ, ಹೃದಯವನ್ನು ತಟ್ಟಿ ವಿವೇಚಿಸುವ ವೇದನೆಗಳು ಈ ಕೃತಿಯಲ್ಲಿ ಇಲ್ಲವೇ ಇಲ್ಲವೆನ್ನುವಷ್ಟು ವಿರಳ.

ಪ್ರಾಟೆಸ್ಟೆಂಟರಿಂದ ರಚಿತವಾದ ಗೀತೆಗಳು ಮಾತ್ರ ಪ್ರಾಯಶಃ ಒಂದು ಅಪವಾದವಾಗುತ್ತವೆ. ಇವುಗಳಲ್ಲಿ ಹೆಚ್ಚಿನವು ಅನುವಾದಗಳಾಗಿದ್ದರೂ ಮತ್ತು ಅಲ್ಲಲ್ಲಿ ಪ್ರಾದೇಶಿಕತೆ ಅಪ್ರಬುದ್ಧ ಪ್ರಯೋಗಗಳಿಂದ ಭಾಷಾ ಬಂದ ಶಿಥಿಲವಾಗಿದ್ದರೂ ಅನೇಕ ಸಂದರ್ಭಗಳಲ್ಲಿ ಉತ್ಕಟ ಕಾವ್ಯಾನುಭವ ಈ ಗೀತೆಗಳಿಂದ ಚಿಮ್ಮಿ ಹೊರಹೊಮ್ಮುವುದನ್ನು ಗೀತಗಳನ್ನು ಓದುವಾಗಲೂ ಹಾಡುವಾಗಲೂ ಗಮನಿಸಬಹುದು. ಕ್ರೈಸ್ತ ಗೀತೆಗಳಂತೆ ಇನ್ನೂ ಮುಖ್ಯವಾಗಿರುವ ಸೃಜನಾತ್ಮಕ ಸಾಹಿತ್ಯ ಎನಿಸಲು ಅರ್ಹವಾದ ಇನ್ನೂ ಒಂದು ಕ್ರೈಸ್ತ ವಿಷಯಕ ಸಾಹಿತ್ಯ ಭಾಗವೆಂದರೆ, ಕ್ರೈಸ್ತ ಜನಪದ ಸಾಹಿತ್ಯ. ಶುದ್ಧ ಜಾನಪದ ಸೃಷ್ಟಿಯಾಗಿರುವ ಈ ಸಾಹಿತ್ಯ ಸಂಚಯ ಅನುಭವದ ಗಾಢತೆ, ಮನುಷ್ಯ ಸ್ವಭಾವದ ಹತ್ತಿರದ ಪರಿಚಯ ಸಾರ್ವತ್ರಿಕ ಹಾಗೂ ಸಾರ್ವಕಾಲಿಕ ಮೌಲ್ಯಗಳ ಕಲಾತ್ಮಕ ಪ್ರತಿಪಾದನೆ ಇವೇ ಮೊದಲಾದ ಅದ್ಭುತ ಸಾಹಿತ್ಯಾತ್ಮಕ ಗುಣಗಳನ್ನು ಪಡೆದಿವೆ.

ಕನ್ನಡದಲ್ಲಿ ಕ್ರೈಸ್ತ ಪ್ರಮೇಯಗಳು, ಕ್ರೈಸ್ತ ಮತಸ್ಥರ ಚರಿತ್ರೆ, ಸಾಂಸ್ಕೃತಿಕವಾಗಿ ಕ್ರೈಸ್ತ-ಕನ್ನಡ ಸಮ್ಮಿಳನದ ವಿಧಿವಿಧಾನಗಳು ಮತ್ತು ಸಾಧ್ಯತೆಗಳು, ಪ್ರಾದೇಶಿಕ ಧರ್ಮದರ್ಶನದ ಸ್ವರೂಪ. ಬೈಬಲ್ ಅನುವಾದಕ್ಕೆ ಸಂಬಂಧಿಸಿದಂತೆ ತರ್ಕ ಸಮ್ಮತ ಹಾಗೂ ಶಾಸ್ತ್ರೀಯ ಮಾರ್ಗದರ್ಶಿ ಸೂತ್ರಗಳು ಇಂಥ ವಿಷಯಗಳತ್ತ ಕ್ರೈಸ್ತ ಸಂಶೋಧಕರು ಗಮನ ಹರಿಸುವುದು ಸೂಕ್ತ.

ಕನ್ನಡ ಕ್ರೈಸ್ತ ಲೇಖಕರಲ್ಲಿ ಉದ್ದೇಶ ಪರಿಶುದ್ಧಿ ಹಾಗೂ ಪಾವಿತ್ರ್ಯ, ಧರ್ಮಾನುರಕ್ತಿ ಹಾಗೂ ಭಕ್ತಿಯ ಹೆಚ್ಚಳ ಭಾಷಾಭ್ಯಾಸ ಹಾಗೂ ಪ್ರೌಢ ಸಾಹಿತ್ಯಾಭಿರುಚಿ, ಇವು ಸಾಕಷ್ಟು ಪ್ರಮಾಣದಲ್ಲಿ ಬೆಳೆದಾಗ ಮಾತ್ರ ಕ್ರೈಸ್ತ ಸಾಹಿತ್ಯಿಕ ಕೃತಿಗಳ ಮಹತ್ವ ಪ್ರಮಾಣ ಹೆಚ್ಚಲು ಸಾಧ್ಯ.

ಕ್ರೈಸ್ತ ಸಾಹಿತ್ಯದ ಇಂದಿನ ಬೆಳವಣಿಗೆಗೆ ಆಸ್ಪದ ಒದಗಿ ಬರುವಲ್ಲಿಯ ನ್ಯೂನ್ಯತೆಗಳನ್ನು ಹೀಗೆ ಗ್ರಹಿಸಬಹುದು.

೧. ಸ್ವತಂತ್ರ ಕೃತಿಗಳನ್ನು ರಚಿಸುವಷ್ಟು ಸಾಮರ್ಥ್ಯ ಇದ್ದಾಗ್ಯೂ ಕೇವಲ ಅನುವಾದ ಸಾಹಿತ್ಯಕ್ಕೆ ಹೆಚ್ಚಿನ ಮಹತ್ವ ನೀಡಿದ್ದು.

೨. ಸ್ಥಳೀಯ ಲೇಖಕರಿಗೆ ಪ್ರೋತ್ಸಾಹ ನೀಡದೆ ಹಾಗೂ ಸ್ಥಳೀಯರಿಗೆ ಸೂಕ್ತ ತರಬೇತಿ ನೀಡದೆ ಪದೇ ಪದೇ ಪ್ರಕಟಿಸಿದ್ದ ಪುಸ್ತಕಗಳನ್ನೇ ಮುದ್ರಿಸುವಲ್ಲಿ ಕಾಲಹರಣ ಮಾಡಿದ್ದು.

೩. ಬರೆಯುವ ಲೇಖಕರಿಗೆ ಕನ್ನಡ ಸಾಹಿತ್ಯದ ಸಂಪೂರ್ಣ ಜ್ಞಾನ ಹಾಗೂ ಶೈಲಿಯ ಅನುಭವ ಇರದಿರುವುದು.

೪. ಕನ್ನಡ ಸಾಹಿತ್ಯ ಪ್ರಭಾವದಲ್ಲಿ ನಡೆಯದೆ, ತಮ್ಮದೆಯಾದ ಶೈಲಿ ಸೃಷ್ಟಿಸಿ ಪಾದ್ರಿ ಕನ್ನಡ ಎಂಬ ಹೊಸತನದೊಂದಿಗೆ ಶ್ರಮಿಸಿದ್ದು.

೫. ಸಾಹಿತ್ಯ ರಚನೆಯ ದೃಷ್ಟಿ ಸೀಮಿತಗೊಂಡು ಕ್ರೈಸ್ತೇತರರಿಗೆ ಅಪ್ರಯೋಜಕವಾಗಿದ್ದು.

೬. ಕ್ರೈಸ್ತ ಬರವಣಿಗೆಗಳನ್ನು ಕ್ರಯವಿಲ್ಲದೆ ಪುಕ್ಕಟೆಯಾಗಿ ಹಂಚುತ್ತಾ ಬಂದಿರುವುದರಿಂದ ಕೊಂಡು ಓದುವವರ ಸಂಖ್ಯೆ ವಿರಳ.

೭. ಲೇಖಕರಿಗೆ ಸಂಘ-ಸಂಸ್ಥೆಗಳಾಗಲಿ, ಚರ್ಚಗಳಾಗಲಿ ಪ್ರೋತ್ಸಾಹಿಸದೆ ಪ್ರಕಟಣೆಗೆ ಸಹಕರಿಸದೆ ಇದ್ದದ್ದು.

೮. ಮಿಶನ್‌ಗಳು ಒಂದು ಗೂಡಿ ಸಾಹಿತ್ಯ ನಿರ್ಮಾಣಕ್ಕೆ ತೊಡಗದೆ ವೈಯಕ್ತಿಕತೆಯನ್ನು ಬಂಬಿಸಿದ್ದು.

೯. ಅವಿದ್ಯಾವಂತರು, ಹಿಂದುಳಿದವರು ಹೆಚ್ಚಾಗಿ ಮತಾಂತರಗೊಳ್ಳುವುದರಿಂದ ಆಸಕ್ತಿಯಿಂದ ಬೈಬಲ್ ಹೊರತುಪಡಿಸಿ ಇತರೆ ಸಾಹಿತ್ಯ ಓದುವ ಹವ್ಯಾಸ ಇಲ್ಲದಿರುವುದು.

೧೦. ಮಿಶನರಿಗಳಿಂದ ನಿರ್ಮಾಣವಾದ ಸ್ವತಂತ್ರ ಹಾಗೂ ಅನುವಾದಿತ ಸಾಹಿತ್ಯ ಗ್ರಂಥಸ್ಥವಾಗದೆ ವಾಚಕರನ್ನು ಆಕರ್ಷಿಸುವಲ್ಲಿ ವಿಫುಲಗೊಂಡದ್ದು.

೧೧. ಈಚೀನ ಸೃಜನಾತ್ಮಕ ಕ್ರೈಸ್ತ ಸಾಹಿತ್ಯ ಅಲ್ಪ ಪ್ರಮಾಣಕ್ಕೂ, ಗುಣಮಟ್ಟದ ಅಭಾವಕ್ಕೂ ಕ್ರೈಸ್ತರೇ ಕಾರಣ.

೧೨. ಕ್ರೈಸ್ತ ಮತದ ಆಂತರ್ಯದ ತತ್ವಗಳ ಪವಿತ್ರ ಗ್ರಂಥಗಳ ಬಗೆಗೆ ಆಳವಾದ ತಿಳುವಳಿಕೆಯ ಅಭಾವ.

೧೩. ಭಾಷಾ ಶುದ್ಧಿ ಪ್ರಯೋಗ. ನಿರ್ದುಷ್ಟತೆಯ ಹಾಗೂ ಗಂಭೀರ ಶಿಷ್ಟಸಾಹಿತ್ಯ ರಚನೆಗೆ ತಪಸ್ಸಿನಂಥ ವ್ರತವನ್ನು ಕೈಗೊಂಡ ಕ್ರೈಸ್ತ ಸಾಹಿತಿಗಳ ಅಭಾವ.

೧೪. ಕನ್ನಡದಲ್ಲಿ ಬರವಣಿಗೆ ಮಾಡುತ್ತಿರುವ ಕ್ರೈಸ್ತ ಲೇಖಕರು ಕನ್ನಡ ಭಾಷೆ-ಸಂಸ್ಕೃತಿಗಳ ಅಭಿಜಾತ ಹಾಗೂ ಸಮಕಾಲೀನ ಪ್ರವಾಹದಲ್ಲಿ ಆಳವಾಗಿ ಮನಃಪೂರ್ವಕವಾಗಿ ವಿಮಗ್ನರಾಗದೆ ಇರುವುದು.

೧೫. ಕ್ರೈಸ್ತ ಒಳಪಂಗಡಗಳ ಒಕ್ಕಟ್ಟು ಸಾಹಿತ್ಯ ಕ್ಷೇತ್ರದಲ್ಲಿ ಇರದೆ ಇರುವುದು ಒಂದು ಮುಖ್ಯಕಾರಣವೆನ್ನಬಹುದು.

ಅಧ್ಯಾಯ ನಾಲ್ಕು

ಹೊಸಗನ್ನಡ ಗದ್ಯಶೈಲಿಯಲ್ಲಿ ಬೈಬಲಿನ ಪಾತ್ರ

೪.೧. ಹೊಸಗನ್ನಡ ಗದ್ಯ ಶೈಲಿಗೆ ಬೈಬಲ್ ಪಾತ್ರ

೪.೨. ಹೊಸಗನ್ನಡ ಗದ್ಯ ಶೈಲಿಯ ಆರಂಭ ಹಾಗೂ ಆರಂಭದ ಕೃತಿಗಳ ವಿಶ್ಲೇಷಣೆ ಮತ್ತು ಲೇಖಕರು

೪.೩. ಹೊಸಗನ್ನಡದಲ್ಲಿ ಕಥೆ, ಕಾದಂಬರಿ

೪.೪. ಹೊಸಗನ್ನಡ ಪದ್ಯ ಸಾಹಿತ್ಯಕ್ಕೆ ಕ್ರೈಸ್ತರ ಕೊಡುಗೆ

೪.೫. ಬೈಬಲ್ ಅನುವಾದಗಳು ಹಾಗೂ ಹೊಸಗನ್ನಡ ಸಾಹಿತ್ಯ

೪.೬. ಶಬ್ದಕೋಶಗಳು

೪.೭. ಬೈಬಲ್ ಅನುವಾದಗಳು ಕನ್ನಡದಲ್ಲಿ ಹೊಸಗನ್ನಡ ಸಾಹಿತ್ಯ ಜನ್ಮ ತಾಳುವುದಕ್ಕಿಂತ ಮೊದಲೇ ಇದ್ದುವೆ?

೪.೮. ಪೂರ್ವದ ಕೃತಿಗಳಲ್ಲಿ ಕಂಡುಬರುವ ಗದ್ಯಕ್ಕೂ ಬೈಬಲ್ಲಿನ ಗದ್ಯಕ್ಕೂ ಇರುವ ಸಂಬಂಧ ಮತ್ತು ಪ್ರಭಾವ

೪.೯. ಕನ್ನಡ ಬೈಬಲ್‌ನಲ್ಲಿ ಕಂಡುಬರುವ ಗದ್ಯದ ಸ್ವರೂಪ

೪

ಹೊಸಗನ್ನಡ ಗದ್ಯಶೈಲಿಯಲ್ಲಿ ಬೈಬಲಿನ ಪಾತ್ರ

೪.೧. ಹೊಸಗನ್ನಡ ಗದ್ಯಶೈಲಿಯಲ್ಲಿ ಬೈಬಲಿನ ಪಾತ್ರ

ಒಂದು ಸಾವಿರ ವರ್ಷಗಳ ಪ್ರಾಚೀನತೆಯನ್ನು ಹೊಂದಿ, ವೈವಿಧ್ಯ-ವೈಶಾಲ್ಯಗಳನ್ನು ಮೈಗೂಡಿಸಿಕೊಂಡ ಕನ್ನಡ ಗದ್ಯಸಾಹಿತ್ಯದ ಹರಿವು, ಹರವುಗಳು ಬೆರಗನ್ನುಂಟು ಮಾಡುವಂತಿವೆ.[೧] ಹೀಗಿದ್ದರೂ ಹೊಸಗನ್ನಡ ಗದ್ಯ ಶೈಲಿಯನ್ನು ಪಡೆದದ್ದು ಕೇವಲ ಒಂದು ಶತಮಾನಗಳ ಹಿಂದಷ್ಟೇ. "ಪ್ರಾಚೀನತೆಯ ದೃಷ್ಟಿಯಿಂದ ಗಮನಿಸಿದಾಗ ಪದ್ಯದಷ್ಟೇ ಹಳಿಮೆ ಗದ್ಯಕ್ಕೂ ಇರುವುದು ಗೋಚರಿಸುವುದಾದರೂ ಗುಣ ಗಾತ್ರದಲ್ಲಿ ಅದು ಗದ್ಯದಂತೆ ಗಣನೀಯವಾಗಿರಲಿಲ್ಲ."[೨] ಪ್ರಾಚೀನ ಗದ್ಯ ಕೃತಿಗಳಾದ ವಡ್ಡಾರಾಧನೆ. ಚಾವುಂಡರಾಯ ಪುರಾಣಗಳು ಅಂದಿನ ಸಾಹಿತ್ಯದ ಸಾಂಪ್ರದಾಯಿಕ ಶೈಲಿಯಿಂದ ಭಿನ್ನವಾಗಿದ್ದರೂ, ಅಲ್ಲಿ ಕಂಡುಬಂದ ಗದ್ಯಗಳನ್ನು ಗಮನಿಸಿ ಗದ್ಯದ ಅಸ್ತಿತ್ವವನ್ನು ನಾವು ಸಾಧಿಸಬಹುದು. ಆದರೆ ಅಂಥ ಗದ್ಯ ಸಾಹಿತ್ಯವು ಜನತೆಯ ಬದುಕಿನಲ್ಲಿ ಹಾಸುಹೊಕ್ಕಾಗಿ ಬಳಕೆಯಾಗಿರಲಿಲ್ಲ ಎಂಬುದನ್ನು ಗಮನಿಸಬೇಕು."[೩]

ಚಂಪೂವಿನಲ್ಲಿಯ ಗದ್ಯಪದ್ಯದ ಛಾಯೆಯೊಂದಿಗೆ ಹದಿನೆಂಟನೇ ಶತಮಾನದವರೆಗೆ ಸಾಗಿಬರದಿದ್ದರೂ ಅದು ಹೊಸಗನ್ನಡ ಗದ್ಯಕ್ಕೆ ಪ್ರಚೋಧಕವಾಗಿದೆ ಎಂದು ನೇರವಾಗಿ ಹೇಳಲು ಬರುವಂತಿಲ್ಲ. ೧೭ನೇ ಶತಮಾನದ ಕೊನೆಯಲ್ಲಿ ಮೈಸೂರು ಅರಸರ ಆಡಳಿತದಲ್ಲಿ ಗದ್ಯದ ವ್ಯಾಪಕ ಬೆಳವಣಿಗೆಗೆ ನಾಂದಿಯಾಯಿತು. ಮೈಸೂರು ಅರಸರಲ್ಲಿ ಒಬ್ಬರಾದ ಚಿಕ್ಕದೇವರಾಯರ ಕಾಲದಲ್ಲಿ ತಿರುಮಲಾರ್ಯನಿಂದ ರಚಿತವಾದ 'ಚಿಕ್ಕದೇವರಾಜ ವಂಶಾವಳಿ' ಆ ದೆಸೆಯಲ್ಲಿ ಮೊದಲ ಹೆಜ್ಜೆಯಾಗಿದೆ. ಇದು ಮೈಸೂರು ಮಹಾರಾಜರುಗಳ ಚರಿತ್ರಾರೂಪವಾದ ಗದ್ಯಗ್ರಂಥದಲ್ಲಿ ಹಳೆಗನ್ನಡದ ಶೈಲಿ ಕಂಡುಬರುತ್ತದೆ.

ತದನಂತರ ೧೮ನೇ ಶತಮಾನದಲ್ಲಿ ಗದ್ಯವನ್ನು ಪುರಾಣ ಮತ್ತು ಶಾಸ್ತ್ರಗ್ರಂಥಗಳ ಟೀಕಾನು ವಾದಕ್ಕಾಗಿಯೇ ಮುಖ್ಯವಾಗಿ ಬಳಸಲಾಯಿತು." ಕನ್ನಡ ಸಾಹಿತ್ಯದ ೧೮ನೇ ಶತಮಾನದ ನಂತರ ನಾವು

೧.ಅವಲೋಕನ ಎಚ್ಚೆಸ್ಕೆ, ಪು.೨೩೪

೨. ಅದೇ, ಪು.೨೩೪

೩. ಅದೇ, ಪು.೨೩೪

ಹೊಸಗನ್ನಡ ಕಾಲದ ಉದಯ ಕಿರಣವನ್ನು ಕಾಣುತ್ತೇವೆ. "ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲವನ್ನು ಹೊಸಗನ್ನಡ ಗದ್ಯದ ಸಾಹಿತ್ಯದ ಅರುಣೋದಯ ಕಾಲವೆಂದು ಕರೆಯಬಹುದು. ಇವರ ಕಾಲಕ್ಕಾಗಲೇ ಪಾಶ್ಚಾತ್ಯ ವಿದ್ಯಾ ಸಂಸ್ಕೃತಿಗಳ ಸಂಪರ್ಕ ಭಾರತೀಯರಿಗೆ ವಿಶೇಷವಾಗಿತ್ತು"[೧]ಎಂದು ಅನಂತರಂಗಾಚಾರ್ಯರು ಅಭಿಪ್ರಾಯಪಟ್ಟಿದ್ದಾರೆ. ಇದನ್ನು ಗಮನಿಸಿದರೆ ಇವರ ಮಾತು ಸತ್ಯವೆನಿಸುವುದು. ಇದಕ್ಕೆ ಆಧಾರವೂ ಕಂಡುಬರುವುದು. ಹೀಗಿದ್ದರೂ ತದ್ವಿರುದ್ಧವಾದ ಅಭಿಪ್ರಾಯಗಳು ಉಂಟು. ಸಾಂದರ್ಭೋಚಿತವಾಗಿ ಇಲ್ಲಿ ಸ್ಪಷ್ಟೀಕರಣ ಹುಡುಕಬಹುದು.

"ಮುಮ್ಮಡಿ ಕೃಷ್ಣರಾಜನ ಆಸ್ಥಾನದ ಕವಿಯಾಗಿದ್ದ ಕೆಂಪುನಾರಾಯಣನ ಮುದ್ರಾಮಂಜೂಷ (೧೮೨೩)ವು ಗಮನಾರ್ಹ ಗದ್ಯ ಗ್ರಂಥವಾಗಿದೆ. ಚಾಣುಕ್ಯ ಚಂದ್ರಗುಪ್ತರಿಗೆ ಸಂಬಂಧಿಸಿದ ಐತಿಹಾಸಿಕ ಕಥೆಯನ್ನು ಮನಾಕರ್ಷಕವಾದ ರಮ್ಯಕಾದಂಬರಿಯಂತೆ ರಚಿಸಿ ಹೊಸಗನ್ನಡ ಸಾಹಿತ್ಯದ ವಸಂತದ ತಂಗಾಳಿ ಬೀಸುವಂತೆ ಮಾಡಿದ್ದಾನೆ."[೨]

"ಈ ಮುದ್ರಾಮಂಜೂಷವು ಕನ್ನಡದ ಪ್ರಾಚೀನ ಮತ್ತು ನವೀನ ಗದ್ಯಶೈಲಿಯ ಸೇತುವೆಯಂತಿದೆ. ಅಲ್ಲದೆ ಸ್ಪಷ್ಟವಾಗಿ ಕಾದಂಬರಿ ಎಂದು ಕರೆಯಲಾಗದಿದ್ದರೂ ಪಾಶ್ಚಾತ್ಯದ ಸಂಪರ್ಕವಾಗುವುದಕ್ಕೆ ಮೊದಲೇ ರಚಿತವಾದ ಐತಿಹಾಸಿಕ ಕಾದಂಬರಿಯಂತಿದೆ ಎಂದು ಅನಂತರಂಗಾಚಾರ್ಯರು ಹೇಳಿರುವರು".[೩] ಮುಂದಿನ ಎಲ್ಲ ಸಂಶೋಧಕರು ಇದನ್ನೇ ಮುಂದುವರಿಸಿದ್ದು ಕಂಡುಬರುವುದು. ಉದಾ - ಶ್ರೀ ಹಾವನೂರವರ ಹೊಸಗನ್ನಡ ಅರುಣೋದಯ(ಪುಟ-xxxii) ಹಾಗೂ 'ಕನ್ನಡದಲ್ಲಿ ಕ್ರೈಸ್ತ ಸಾಹಿತ್ಯ', ಹನಿಗತೆ ಕಂಪ್ಯೂಟರ ಇತ್ಯಾದಿ (ಪು.೮೭).

ಕೆಂಪುನಾರಾಯಣನ ಮುದ್ರಾಮಂಜೂಷ ರಚನೆಗೊಂಡಿದ್ದು ೧೮೨೩ರಲ್ಲಿ. ಇದು ಸಂಸ್ಕೃತದ ವಿಶಾಖದತ್ತನ ಮುದ್ರಾರಾಕ್ಷಸ, ಮಹದೇವನ ಮುದ್ರಾರಾಕ್ಷಸ. ರವಿನರ್ತನನ ಮುದ್ರಾರಾಕ್ಷಸ, ಕ್ಷಮೇಂದ್ರನ ಬೃಹತ್ಕಥೆ ಮುಂತಾದ ಕೆಲವು ಗ್ರಂಥಗಳಿಂದ ಸಹಾಯ ಪಡೆದು ಕಥೆ ಹೇಳುವ ತನ್ನ ಜಾಣ್ಮೆಯನ್ನು ತೋರಿದ್ದಾನೆ. ಭಾಷಾ ಶೈಲಿ ಏಕರೂಪವಾಗಿಲ್ಲ. ಗದ್ಯ ಪ್ರೌಢವಾಗಿದ್ದರೂ ಲಲಿತವಾಗಿದೆ. ಸಂಸ್ಕೃತದ ಭೂಯಿಷ್ಟದೊಂದಿಗೆ. ಕನ್ನಡದ ಗದ್ಯ ಸಾಹಿತ್ಯದ ಬೆಳವಣಿಗೆಯಲ್ಲಿ ಈ ಕೃತಿ ಒಂದು ವಿಶಿಷ್ಟ ಘಟ್ಟವನ್ನು ನಿರೂಪಿಸುತ್ತದೆ. ಈ ಕೃತಿಯ ಪೂರ್ವದಲ್ಲಿಯೇ ಅಂದರೆ ೧೭ನೇ ಶತಮಾನದಲ್ಲಿಯೇ ಕನ್ನಡ ಸಾಹಿತ್ಯಕ್ಕೆ ಪಾಶ್ಚಾತ್ಯದ ಸಂಪರ್ಕವಾಗಿರುವುದು ಕಂಡುಬರುತ್ತದೆ.

ಹೊಸಗನ್ನಡದ ಮೊದಲ ಕೃತಿ ಎಂದೇ ಪರಿಗಣಿಸಲ್ಪಟ್ಟ ರೆ. ವಿಲಿಯಂ ಕೇರಿಯ ಬೈಬಲ್ ಭಾಷಾಂತರದ ಮೊದಲ ಭಾಗ ೧೮೦೯ರಲ್ಲಿ ರೂಪುಗೊಂಡಿತು. ಹಾಗೂ ಬಳ್ಳಾರಿಯ ರೆ.ಜಾನ್

೧. ಸಾಹಿತ್ಯ ಭಾರತಿ ಅನಂತರಂಗಾಚಾರ್ಯ, ಪು.೩೭೦

೨. ಅವಲೋಕನ, ಎಚ್ಚೆಸ್ಕೆ, ಪು.೨೩೪

೩. ಸಾಹಿತ್ಯ ಭಾರತಿ ಅನಂತರಂಗಾಚಾರ್ಯ

ಹ್ಯಾಂಡ್ಸರವರ ಹೊಸ ಒಡಂಬಡಿಕೆ (ಬೈಬಲ್ ಭಾಗ) ೧೮೧೨ರಲ್ಲಿ ಪ್ರಕಟಗೊಂಡಿತು. ಮುದ್ರಾಮಂಜೂಷ ರೂಪುತಳೆಯುವುದಕ್ಕೂ ಪೂರ್ವದಲ್ಲಿ ಬೈಬಲ್ ಅರ್ಧಭಾಗವಾದ ಹೊಸ ಒಡಂಬಡಿಕೆಯು ಪೂರ್ತಿಯಾಗಿ ಮುದ್ರಣಗೊಂಡಿತ್ತು. ಹೀಗಿರುವಾಗ ಪಾಶ್ಚಾತ್ಯದ ಸಂಪರ್ಕವಾಗಿರುವುದಕ್ಕೆ ಮೊದಲೇ ರಚಿತವಾದುದು ಎಂದು ಹೇಳುವಲ್ಲಿ ಹುರುಳಿಲ್ಲವೆಂದೆನಿಸುತ್ತದೆ. (ಇಲ್ಲಿ ಕ್ಯಾಥೊಲಿಕ ಸಾಹಿತ್ಯದ ಉದಾಹರಣೆ ನೀಡಿಲ್ಲ. ಇವರ ಕಾಲ ಇನ್ನೂ ೧೫೦ ವರ್ಷ ಹಿಂದಕ್ಕೆ ಹೋಗಬೇಕಾಗುವುದು.) ಮುಮ್ಮಡಿ ಕೃಷ್ಣರಾಜ ಒಡೆಯರು ೧೮೧೧ರಲ್ಲಿ ದಿವಾನ ಪೂರ್ಣಯ್ಯನವರು ನಿವೃತ್ತಿಯಾದ ನಂತರ ರಾಜ್ಯಭಾರವಹಿಸಿಕೊಂಡಿದ್ದಾರೆ. ನಂತರವೇ ಅವರ ಸಾಹಿತ್ಯಕೃಷಿ ಸಾಗಿಬಂದಿರುವುದು.

"ಕನ್ನಡ ಕಾದಂಬರಿ ಪ್ರಪಂಚಕ್ಕೆ ಇಂಗ್ಲೀಷ್ ಭಾಷೆ ಸಾಹಿತ್ಯಗಳ ಸಂಪರ್ಕವೇ ಪ್ರಮುಖ ಪ್ರೇರಣೆ ಎಂಬುದು ಸರಿಯೇ. ಆ ಸಂಪರ್ಕವು ಒಂದು ವೇಳೆ ಬಾರದೆ ಹೋಗಿದ್ದರೆ ಹೊಸ ಕಾದಂಬರಿಗಳೇ ನಮ್ಮಲ್ಲಿ ಉದಯಿಸುತ್ತಿರಲಿಲ್ಲವೆಂದು ಹೇಳಬೇಕಿದ್ದಿತೆ? ಹಾಗಿಲ್ಲವೆನ್ನುವುದಕ್ಕೆ ಪಾಶ್ಚಾತ್ಯ ಸಂಪರ್ಕವೆಳ್ಳಷ್ಟೂ ಇದ್ದಿರದ ಮೇಲಣ ಮೂರು ಕೃತಿಗಳು* ಸಾಕ್ಷಿಯಾಗಿವೆ."[೧] ಎಂದು ಶ್ರೀ ಹಾವನೂರವರು ಅಭಿಪ್ರಾಯ ಪಟ್ಟಿದ್ದಾರೆ.

ಆದರೆ ಈ ಮೂರು ಕೃತಿಗಳಿಗಿಂತ ಪೂರ್ವದಲ್ಲಿ ಪಾಶ್ಚಾತ್ಯದ ಸಂಪರ್ಕ ಸಾಹಿತ್ಯದ ಮೂಲಕ ಎಳ್ಳಷ್ಟೂ ಇಲ್ಲವೆಂದಲ್ಲ ಸಾಕಷ್ಟು ಆಗಿದೆ. (ಕೆಲವು ಕೃತಿಗಳು ಅಲಭ್ಯ, ಆದರೆ ಅವು ಕನ್ನಡ ಸಾಹಿತ್ಯದ ಮೇಲೆ ಏನೂ ಪ್ರಭಾವ ಮಾಡಿರಲಿಲ್ಲ ಎನ್ನುವಂತಿಲ್ಲ.) ಯಾದವ ಕವಿ ಮುಮ್ಮಡಿ ಕೃಷ್ಣರಾಜ ಒಡೆಯರ ಆಸ್ಥಾನದ ಕವಿ. ಮುಮ್ಮಡಿ ಕೃಷ್ಣರಾಜರು ೧೮೧೨ರ ಹೊತ್ತಿಗೆ ರಾಜ್ಯಭಾರವಹಿಸಿಕೊಂಡು ಅರಸರಾದವರು ಅವರೇ ಸ್ವತಃ ಇಂಗ್ಲೀಷ್ ಕುರಿತು ಮಹಾರಾಜಾ ಕಾಲೇಜಿಗೆ ಬೀಜರೂಪವಾದ 'ರಾಜಾಸ್ ಇಂಗ್ಲೀಷ್ ಸ್ಕೂಲ್' ಸ್ಥಾಪಿಸಿರುವರು.

ಹೊಸಗನ್ನಡ ಅರುಣೋದಯದಲ್ಲಿ ಶ್ರೀ ಹಾವನೂರವರು ಕಾದಂಬರಿ ಕುರಿತು. "ಅದರೇನು ಕವಿ, ನಾಟಕಕಾರರಷ್ಟು ಶ್ರೇಷ್ಠರೆನ್ನುವ ಇಂಗ್ಲೀಷ್ ಕಾದಂಬರಿಕಾರರು ೧೮ ಹಾಗೂ ೧೯ನೇ ಶತಮಾನದಲ್ಲಿ ಇರಲಿಲ್ಲವೆಂದಿರುವರು".[೨] "೧೭ನೇ ಶತಮಾನದ ಮೊದಲಲ್ಲಿ ಸ್ಪೇನಿನ ಸರ್ವಾಟಿಸ್ ಬರೆದ 'ದಾನ್ ಕ್ವಿವೊತ್' ಕೃತಿಯನ್ನು ವಿಶ್ವದ ಮೊಟ್ಟ ಮೊದಲ ಕಾದಂಬರಿ ಎಂದು ಹೇಳಬಹುದು. ೧೭೧೯ರಲ್ಲಿ ಡೇನಿಯಲ್ ಡಿಪೂ ಬರೆದ ರಾಬಿನ್ ಸನ್ ಕ್ರೂಸೋ ಇಂಗ್ಲೀಷಿನ ಮೊದಲ ಕಾದಂಬರಿ ಎಂದು ಅನೇಕರು ಅಭಿಪ್ರಾಯ ಪಡುತ್ತಾರೆ."[೩] ಎರಡನೆ ಕಾದಂಬರಿ ಜಾನ್ ಬುನಿಯನ್‌ನ ಪಿಲಿಗ್ರಿಮ್ಸ್ ಪ್ರೊಗ್ರೆಸ್

---

೧. ಹೊ.ಅ.ಶ್ರೀಹಾ., ಪು.೩೭೦

೨. ಅದೇ, ಪು.೫೫೫

೩. ಜ್ಞಾನಗಂಗೋತ್ರಿ ಕಲೆ ಸಾಹಿತ್ಯ, ಪು.೧೭೩

* ೧. ಕಲಾವತಿ ಪರಿಣಯ, ೨. ಸೌಗಂಧಿಕಾ ಪರಿಣಯ, ೩. ಮುದ್ರಾಮಂಜೂಷ

(ಯಾತ್ರಿಕನ ಸಂಚಾರ ಅನು.) ಸ್ಯಾಮುವೆಲ್ ರಿಚರ್ಡ್‌ಸನ್ (೧೬೮೯-೧೭೬೧) ಪಾಮೆಲ್, ಕ್ಲಾರಿಸ್, ಚಾರ್ಲ್ಸ್ ಡಿಕನ್ಸ್, ಟಾಲ್‌ಸ್ಟಾಯ್ ಮುಂತಾದ ಜಗತ್ಪ್ರಸಿದ್ಧ ಕಾದಂಬರಿಕಾರರು ಆಂಗ್ಲ ಭಾಷೆಯಲ್ಲಿ ೧೮ ಹಾಗೂ ೧೯ನೇ ಶತಮಾನದಲ್ಲಿ ಬಾಳಿ ಹೋಗಿದ್ದಾರೆ.

'ಯಾಂತ್ರಿಕನ ಸಂಚಾರ' (Pilgrim Progress) ಕನ್ನಡದಲ್ಲಿ ಪ್ರಪ್ರಥಮವಾಗಿ (೧೮೪೨) ತರ್ಜುಮೆಯಾದ ಕಾದಂಬರಿಯಾಗಿ ಕಂಡುಬರುವುದು.

ಪಾಶ್ಚಾತ್ಯರ ಸಂಪರ್ಕ ಹಾಗೂ ಮಿಶನರಿಗಳ ಆಗಮನದ ನಂತರವೇ ನಾವು ಹೊಸಗನ್ನಡ ಗದ್ಯ-ಪದ್ಯಗಳನ್ನು ಗುರುತಿಸಬಹುದೆ ವಿನಃ ಬೇರೆ ಯಾವ ಮೊದಲಿನ ಕೃತಿಯನ್ನೂ ಹೊಸಗನ್ನಡದ ಕೃತಿ ಎನ್ನಲು ಬರುವುದಿಲ್ಲ. ಒಂದು ವೇಳೆ ನಾವು ಗುರುತಿಸಿ ಕರೆದರೂ ಅಂದು ಆ ಕೃತಿಗಳಿಗೆ ಯಾರು ಹೊಸಗನ್ನಡ ಕೃತಿಗಳೆಂದು ಗುರುತಿಸಿಲ್ಲ. ಹಾಗೂ ಪರಿಗಣಿಸಿಲ್ಲ, ಕಾರಣ ಹೊಸಗನ್ನಡ ಶಬ್ದದ ಪರಿವೇ ಅಂದು ಇರಲಿಲ್ಲ. "ಈ ಕ್ರೈಸ್ತ ಮತೋಪದೇಶಕರು ಹೊಸಗನ್ನಡವನ್ನು ಗ್ರಂಥ ಭಾಷೆಯಾಗಿ ಗೌರವಿಸಿದ ಮಹನೀಯರೆಂದರೆ ತಪ್ಪೇನಿಸದು."[೧]

"ಕನ್ನಡ ಗದ್ಯ ಸಾಹಿತ್ಯದ ಮೂಲ ಪುರುಷರೂ ಪಾಶ್ಚಾತ್ಯರೆಂದೇ ಹೇಳಬಹುದಾಗಿದೆ. ಕಾರಣ, ವಡ್ಡಾರಾಧನೆ ಮತ್ತು ವಚನಗದ್ಯ ಎಂದೋ ಪ್ರಚಾರದಲ್ಲಿದ್ದು, ತಣ್ಣಗಾಗಿದ್ದು, ಮುದ್ದಣ ಮತ್ತು ಅವನ ಸಮಕಾಲೀನ ಗದ್ಯ ಸಾಹಿತ್ಯಕ್ಕಿಂತ ಮುಂಚೆ ಜಾನ್ ಹ್ಯಾಂಡ್ಸ್, ಜಾನ್ ರೀಡ್ ಮುಂತಾದವರು ಬೈಬಲನ್ನು ಸುಮಾರು ೨೦೦೦ ರಿಂದ ೩೦೦೦ ಡೆಮ್ಮಿ ಪುಟದಷ್ಟು ಬರೆದು ಗದ್ಯಸಾಹಿತ್ಯವನ್ನು ವಿಫುಲವಾಗಿ ಬಳಿಸಿದ್ದಾರೆ ಎಂದರೆ ತಪ್ಪಾಗಲಾರದು... ಅಂತೆಯೇ ಹೊಸಗನ್ನಡ ಕಾವ್ಯಕ್ಕೆ ಪ್ರವರ್ತಕರು ಅವರೇ ಆಗಿರುತ್ತಾರೆ."[೨]

ಪಾಶ್ಚಾತ್ಯ ಮಿಶನರಿಗಳು ಭಾರತಕ್ಕೆ ಬಂದು ಮೊದಲು ಮಾಡಿದ ಕಾರ್ಯವೇ ಬೈಬಲ್ ಭಾಷಾಂತರ ಎಂಬುವಲ್ಲಿ ಸಂಶಯವಿಲ್ಲ. ಮೇಲಿನ ಅಂಶಗಳನ್ನು ಗಮನಿಸಿದಾಗ ಹೊಸಗನ್ನಡ ಗದ್ಯವು ಬೈಬಲ್ ಭಾಷಾಂತರಕ್ಕೆ ಪೂರ್ವದಲ್ಲಿ ಇರಲಿಲ್ಲವೆಂಬುದು ಸ್ಪಷ್ಟ. ಹೀಗಿರುವಾಗ ಹೊಸಗನ್ನಡ ಗದ್ಯವು ಬೈಬಲ್ ಭಾಷಾಂತರದ ಮೂಲಕ ಹೊಸ ಹಾದಿಯನ್ನು ಕಂಡುಕೊಂಡಿತು ಎನ್ನುವಲ್ಲಿ ಸಂಶಯವಿಲ್ಲ.

ಇನ್ನೂ ವಿಶೇಷವಾಗಿ ಹೇಳಬೇಕೆಂದರೆ ಕ್ರಿ.ಶ.೧೬೮೦ ೧೭೭೯ರಲ್ಲಿ ಕನ್ನಡ ಪುಸ್ತಕ (ಹೊಸಗನ್ನಡ ಶೈಲಿಯಲ್ಲಿ) ಹಾಗೂ ಹಸ್ತಪ್ರತಿಗಳನ್ನು ಬರೆದರೆನ್ನಲಾದ ಜೆಸುಯಿಟ್ ಪಾದ್ರಿಗಳು, ಅವರಲ್ಲಿ ಪ್ರಮುಖರಾದ ರಾಬರ್ಟ್-ದ-ನೋಬಲಿ(೧೫೭೭-೧೬೫೬) ಲಿಯೊನಾರ್ಡೊ ಚಿನ್ನಾಮಿ (೧೬೪೯) ಡಿ.ರೆಬೆರೊ (ಕ್ರೈಸ್ತ

೧. ಕ.ಸಾ. ಮತ್ತು ಧರ್ಮ, ಹೊ.ಗ.ಮನಹೋರ, ಪು.೭೯
೨. ಅದೇ, ಪು.೭೯

ಸಂತರ ಚರಿತ್ರೆ), ಫ್ರಿಝಿರೆಲ್ (ಕನ್ನಡ ನಾಮಕ ವ್ಯಾಕರಣ) ಹಾಗೂ ಸವೇರಿ (೧೭೩೯) ಮುಂತಾದ ಕೆಥೋಲಿಕ ಪಾದ್ರಿಗಳ ಕನ್ನಡ ಸೇವೆ, ಹೊಸಗನ್ನಡ ಗದ್ಯ ಶೈಲಿಯ ಉಗಮಕ್ಕೆ ಪ್ರಾರಂಭದ ಕೃತಿಗಳಂತೆ ಕಂಡುಬರುತ್ತಿವೆ.

"ಮೈಸೂರಲ್ಲಿ ಕನ್ನಡ ರೂಢಿಯಾದ ಮೇಲೆ ಗ್ರಂಥ ರಚನೆಗೆ ಚಿನ್ನಾಮಿ ತೊಡಗಿದನು. ಇವನು ಕನ್ನಡದ ಮೊದಲ ಕ್ರೈಸ್ತ ಲೇಖಕನೂ ಅಹುದು. ಕ್ರಿ.ಶ.೧೬೪೮ರಲ್ಲಿ ಮೈಸೂರಿಗೆ ಬಂದು ಮಿಶನ್ ಕೇಂದ್ರವನ್ನು ತೆರೆದ ಮೇಲೆ ಮತ ಪ್ರಸಾರವನ್ನು ಮುಖ್ಯವಾಗಿ ಗಮನದಲ್ಲಿರಿಸಿಕೊಂಡು ಪುಸ್ತಕಗಳನ್ನು ಬರೆದನು".[೧] ಈತನು ಬರೆದುದಾಗಿರುವ ಕೆಲವು ಗ್ರಂಥಗಳನ್ನು ಗುರುತಿಸಬಹುದು.

"ಸೂಮರ್ ವೂಗೆಲ್ ಎಂಬವನ ಜೆಸುಯಿಟ್ ಗ್ರಂಥಸೂಚಿಯಲ್ಲಿ ಉಕ್ತವಾದ ಮೇರೆಗೆ ಅವುಗಳ ವಿಷಯ ಶೀರ್ಷಿಕೆ ಇಂತಿದೆ.

- ಕ್ರೈಸ್ತ ಧರ್ಮದ ರಹಸ್ಯ ತತ್ವಗಳ ವಿವರಣೆ
- ಕ್ರೈಸ್ತ ಧರ್ಮದ ಸಮರ್ಥನೆ
- ಕ್ರೈಸ್ತ ಸಂತರ ಚರಿತ್ರೆಗಳು
- ಮೈಸೂರು ಜನರ ಜಾತಿ-ಪದ್ಧತಿ, ಮೂಢನಂಬಿಕೆ ಇವುಗಳ ಖಂಡನೆ
- ಕನ್ನಡ ಶಬ್ಧಕೋಶ ಹಾಗೂ ಕನ್ನಡ ವ್ಯಾಕರಣ.

ಚಿನಾಮಿಯ ಮೇಲ್ಕಂಡ ಕೃತಿಗಳ ರಚನೆಯ ಕುರಿತು ನಿಶ್ಚಿತವಾದ ಪುರಾವೆ ಇದ್ದರೂ ಅವು ಲಭ್ಯವಿರುವುದರ ಸುಳಿವು ಇದುವರೆಗಂತೂ ದೊರೆತಿಲ್ಲ. ಗೋವೆಯ ಕೆಥೋಲಿಕ ಮುದ್ರಣಾಲಯದಲ್ಲಿ ಕೊಂಕಣಿ ಪುಸ್ತಕಗಳನ್ನು ರೋಮನ್ ಲಿಪಿಯಲ್ಲಿ ಮುದ್ರಿಸಿದಂತೆ ಇವುಗಳಲ್ಲಿ ಕೆಲವನ್ನಾದರೂ ಮುದ್ರಿಸಿರಬಹುದೆ? ಈ ಕೃತಿ ಸಮುದಾಯದಲ್ಲಿ ಕ್ರೈಸ್ತ ಧರ್ಮದ ರಹಸ್ಯ ತತ್ವಗಳ ಕುರಿತಾದ ಪುಸ್ತಕವು ಹೆಚ್ಚು ಪ್ರಸಿದ್ಧಿಯನ್ನು ಹೊಂದಿತ್ತೆಂದೂ ತಿಳಿದುಬರುತ್ತದೆ."[೨]

ಕ್ರೈಸ್ತರ ಇಂತಹ ಕೃತಿಗಳು ಅಂದು ಪ್ರಸಿದ್ಧಿಯನ್ನು ಪಡೆದವುಗಳಾಗಿದ್ದರೆ, ಅಂದಿನ ಮೈಸೂರ ಅರಸರ ಕಾಲದಲ್ಲಿ ಅವರ ಗಣನೆಗೆ ಬಾರದೆ ಇರುತ್ತಿರಲಿಲ್ಲ. ಅಂದಿನ ಕವಿ ವಿದ್ವಾಂಸರು ಅವುಗಳನ್ನು ಕಂಡು ಓದಿರಲೂಬಹುದು. ಇವು ಧಾರ್ಮಿಕ ಕೃತಿಗಳಾಗಿದ್ದರು ಅಂದಿನ ಜನಸಾಮಾನ್ಯರನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ರಚಿಸಿದ ಕೃತಿಗಳಾಗಿದ್ದರಿಂದ ಹೆಚ್ಚು ಜನಪ್ರೀಯತೆಗೆ ಕಾರಣವಾಗಿರಲೂಬಹುದು. ಹೀಗೆ

೧. ಕ.ಕ್ರೈ.ಸಾ.ಹ.ಕಂ.ಇತ್ಯಾದಿ, ಶ್ರೀಹಾ, ಪು.೨೪

೨. ಅದೇ, ಪು.೨೪

ಜನ ಮೆಚ್ಚಿಗೆ ಪಡೆದ ಧಾರ್ಮಿಕ ಕೃತಿಗಳ ಪ್ರಭಾವ ಅಂದಿನ ವಾಚಕರಿಗೆ ಹೊಸತನವನ್ನು ಹಾಗೂ ಹೊಸ ಶೈಲಿಯನ್ನು ನೀಡಿದಂತಿದೆ. ಇವುಗಳ ಪ್ರಭಾವವೇ ನಾವು ಈಗ ಗುರುತಿಸಿರುವ ಹೊಸಗನ್ನಡ ಕೃತಿಗಳ ಮೇಲೆ ಆಗಿರುವ ಸಾಧ್ಯತೆ ಹೆಚ್ಚು.

ಈ ಎಲ್ಲ ದೃಷ್ಟಿಯಿಂದ ನಾವು ಕನ್ನಡಸಾಹಿತ್ಯ ಚರಿತ್ರೆ ಮೂಲಕ ಹಾಗೂ ಸಂಶೋಧನಾ ವಿದ್ವಾಂಸರ ಮೂಲಕ ಹೊಸಗನ್ನಡ ಕೃತಿಗಳೆಂದು ಗುರುತಿಸಿದ್ದೆವೆ. ಇವೆಲ್ಲವುಗಳು ಪಾಶ್ಚಾತ್ಯ ಸಂಪರ್ಕ ಆದಮೇಲೆಯೇ ವಿಭಿನ್ನ ರೂಪದ ಹೊಸಗನ್ನಡ ಸಾಹಿತ್ಯ ಕೃತಿಗಳೆಂದು ಕರೆಯಿಸಿಕೊಳ್ಳುತ್ತವೆ.

ಹೊಸಗನ್ನಡ ಗದ್ಯವು ಬೈಬಲ್ ಮೂಲಕ ಹೊಸ ಹಾದಿಯನ್ನೇನಾದರೂ ಕಂಡುಕೊಂಡಿತೆ? ಎಂಬ ಪ್ರಶ್ನೆಗೆ ಹೌದು ಎಂಬ ನೇರ ಉತ್ತರವನ್ನು ಆಧಾರಗಳೊಂದಿಗೆ ಕೊಡಬಹುದು.

೪.೨. ಹೊಸಗನ್ನಡ ಗದ್ಯ ಶೈಲಿಯ ಆರಂಭ ಮತ್ತು ಆರಂಭದ ಕೃತಿಗಳ ವಿಶ್ಲೇಷಣೆ ಮತ್ತು ಲೇಖಕರು

"ಹಳೆಯ ಸಾಹಿತ್ಯದ ಲಕ್ಷಣಗಳೊಡನೆ ಬೆರೆತು ಹೊಸ ಸಾಹಿತ್ಯ ಮೆಲ್ಲನೆ ತಲೆದೋರುತ್ತದೆ. ಅದು ಇಂಥ ಸಮಯಕ್ಕೇ ತಾನೇ ತಾನಾಗಿ ಮೊದಲಾಯಿತೆಂದು ಹೇಳಲು ಬಾರದು. ಸ್ಥೂಲವಾಗಿ ೧೯ನೆಯ ಶತಮಾನದ ಮೂರನೆಯ ದಶಕದಲ್ಲಿ ನಸುಕಾಗಿ ಮಧ್ಯದಪ್ಪರ ಹೊತ್ತಿಗೆ ಬೆಳಕಾಗಿ ಹೊಸಗನ್ನಡ ಸಾಹಿತ್ಯವು ಉದಯವಾಯಿತೆಂದು ಹೇಳಬಹುದು".[೧] "ಈ ಹೊಸ ಯಗದಲ್ಲಿ ಬೆಳಕು ಕಂಡವರು ಮತ್ತು ಬೆಳಕು ತೋರಿಸಿದವರು ಕ್ರಿಶ್ಚಿನ್ ಮಿಶನರಿಗಳೇ ಎಂದು ಧಾರಾಳವಾಗಿ ಹೇಳಬಹುದು".[೨]

"ಇಂಗ್ಲೀಷ್ ಸಾಹಿತ್ಯದ ಮೂಲಕ ಕನ್ನಡಕ್ಕೆ ವಿಶ್ವಭಾರತೀಯ ಪರಿಚಯವಾಯಿತು. ಕನ್ನಡ ಸಾಹಿತ್ಯದ ಮೇಲೆ ಇಂಗ್ಲೀಷ್ ಸಾಹಿತ್ಯದ ಪ್ರಭಾವವೆಂದರೆ ಪಾಶ್ಚಾತ್ಯ ಸಾಹಿತ್ಯದ ಪ್ರಭಾವವೆಂದೇ ಅರ್ಥ. ಗ್ರೀಕ್, ಲ್ಯಾಟಿನ್, ಫ್ರೆಂಚ್, ಜರ್ಮನ್, ಇಟಾಲಿಯನ್, ರಷ್ಯಾನ್ ಮುಂತಾದ ಸಾಹಿತ್ಯಗಳೆಲ್ಲ ಇಂಗ್ಲೀಷಿನ ಮೂಲಕ ಆಧುನಿಕ ಕನ್ನಡ ಸಾಹಿತ್ಯವನ್ನು ಪ್ರಭಾವಿಸಿವೆ. ಪೂರ್ವ-ಪಶ್ಚಿಮಗಳ ಸಂಗಮವೇ ಕನ್ನಡದ ಹೊಸ ಸಾಹಿತ್ಯಕ್ಕೆ ಹೇತುವೂ ಆಯಿತು".[೩]

ಕನ್ನಡ ಸಾಹಿತ್ಯ ಚರಿತ್ರೆಕಾರರು ಹೊಸಗನ್ನಡದ ಆರಂಭದ ಶೈಲಿ ಹಾಗೂ ಕೃತಿಗಳನ್ನು ಮೈಸೂರು ಅರಸರ ಕಾಲದಿಂದ ಗುರುತಿಸುತ್ತಾರೆ. ಇವುಗಳಲ್ಲಿ ಮುಖ್ಯವಾದವುಗಳು "ಚಿಕ್ಕದೇವರಾಜ ವಂಶಾವಳಿ", "ರಾಜಾವಳಿ ಕಥೆ", "ಕಲಾವತಿ ಪರಿಚಯ", "ಸೌಗಂಧಿಕಾ ಪರಿಣಯ", "ಮುದ್ರಾಮಂಜೂಷ" ಮುಂತಾದವುಗಳು.

---

೧. ಕ.ಸಾ.ಚ., ರಂ.ಶ್ರೀ.ಮುಗಳಿ, ಪು.೨೦೧

೨. ಕನ್ನಡ ವಿಷಯ ವಿಶ್ವಕೋಶ, ಪು.೨೫೧

೩. ಅದೇ, ಪು.೨೫೦

ಚಿಕ್ಕದೇವರಾಯ ಒಡೆಯರ (೧೬೭೩-೧೭೦೬) ಕಾಲದಲ್ಲಿ ಆಸ್ಥಾನದ ಕವಿಯಾಗಿದ್ದ ತಿರುಮಲಾರ್ಯ (೧೬೪೫-೧೭೦೬)ನು ರಚಿಸಿರಬಹುದೆನ್ನಲಾದ ಚಿಕ್ಕದೇವರಾಜವಿಜಯ, ಚಿಕ್ಕದೇವರಾಜಬಿನ್ನಪ, ಚಿಕ್ಕದೇವರಾಜ ವಂಶಾವಳಿಗಳೆಂಬ ಕೃತಿಗಳು ಹೊಸಗನ್ನಡದ ಆರಂಭದ ಕೃತಿಗಳ ಸಾಲಿನಲ್ಲಿ ಕಾಣಸಿಗುತ್ತವೆ. ಚಿಕ್ಕದೇವರಾಜ ವಂಶಾವಳಿಯ ಗದ್ಯಶೈಲಿ ಈ ಕೃತಿಯ ಜೀವಾಳ. ಇದರ ಗದ್ಯ ಸಂಸ್ಕೃತ ಹಾಗೂ ಕನ್ನಡಗಳೆರಡರ ಸತ್ವವನ್ನು ಹೀರಿ ಬೆಳೆದು ಪರಿಪುಷ್ಟವಾದ ವೈಯಕ್ತಿಕತೆಯಿಂದ ಕೂಡಿದೆ... ಹಳೆಗನ್ನಡದ ಬೆಳವಣಿಗೆಯ ಗದ್ಯಕೃತಿಗಳಲ್ಲಿ ಇದೂ ಒಂದು ಎಂಬ ದೃಷ್ಟಿಯಿಂದ ಈ ಗ್ರಂಥಕ್ಕೆ ಮಹತ್ವ ದೊರೆತಿದೆ. ಗದ್ಯದ ಬೆಳವಣಿಗೆಯಲ್ಲಿ ಇದನ್ನು ಮೊದಲ ಹೆಜ್ಜೆ ಎಂದು ಗುರುತಿಸಲಾಗಿದೆ.

ಮುಮ್ಮಡಿ ಕೃಷ್ಣರಾಜ ಒಡೆಯ (೧೭೯೪-೧೮೬೮)ರ ಆಸ್ಥಾನದ ಕವಿ ಯಾದವನಿಂದ ರಚಿತಗೊಂಡ ಕಲಾವತಿ ಪರಿಣಯ(೧೮೧೫) ಗದ್ಯಕೃತಿ. ಇದು ೧೨ ಆಶ್ವಾಸಗಳಿಂದ ಕೂಡಿದ್ದು ೩೧೩ ಪುಟದಷ್ಟಿದೆ. ಅಲ್ಲಲ್ಲಿ ಹಳೆಗನ್ನಡ ಮಿಶ್ರಿತವಾಗಿದೆ. ಇದು ವೃತ್ತಗಂಧಿ ಶೈಲಿಯಲ್ಲಿದೆ. "ಗದ್ಯದಲ್ಲಿದ್ದರೂ ಕಾವ್ಯದ ಬಹುಭಾಗವನ್ನು ಐದು-ಐದು ಮಾತ್ರೆಯ ಗಣಗಳಾಗಿ ವಿಭಾಗಿಸಬಹುದು. ೧೧ನೇ ಆಶ್ವಾಸದಲ್ಲಿ ೧ ವೃತ್ತ ಹಾಗೂ ೫ ಕಂದ ಪದ್ಯಗಳೂ ಕವಿಯ ವಿಶಿಷ್ಟತೆಯನ್ನು ಎತ್ತಿತೋರಿಸುತ್ತದೆ".[೧]

ಮುಮ್ಮಡಿ ಕೃಷ್ಣರಾಜ ಒಡೆಯರಿಂದ ರಚಿತವಾದ ಸೌಗಂಧಿಕಾ ಪರಿಣಯ (೧೮೨೧) ಕೂಡ ಗದ್ಯ ಕೃತಿಯಾಗಿದ್ದು, ಭಾಮಿನಿ ಷಟ್ಪದಿಯಲ್ಲಿ ಬರೆದಿದ್ದಾರೆ. ಇದು ಹಳೆಗನ್ನಡದಿಂದ ಹೊಸಗನ್ನಡಕ್ಕೆ ತೀರಾ ಸಮೀಪವಾಗಿದೆ. ಇವರ ಇನ್ನೊಂದು ಗದ್ಯಕೃತಿ "ಕೃಷ್ಣರಾಜ ವಾಣಿವಿಲಾಸ" ಮಹಾಭಾರತದ ಕನ್ನಡ ಟೀಕು. ಇದು ರಚನೆಯಾದ ಕಾಲ ೧೮೨೦ ಕನ್ನಡದ ಗದ್ಯ ರೂಪದಲ್ಲಿ ಮಹಾಭಾರತ ಪ್ರಕಟವಾದದ್ದು ಇದೇ ಮೊದಲು ಎಂಬುದು ಗಮನಾರ್ಹ ಸಂಗತಿ."[೨]

ಇನ್ನೊಂದು ಕನ್ನಡ ಗದ್ಯ ಸಾಹಿತ್ಯದ ಪ್ರಮುಖ ಕೃತಿ ಕೆಂಪುನಾರಾಯಣನಿಂದ ರಚಿತಗೊಂಡ "ಮುದ್ರಾಮಂಜೂಷ" ಇದು ಸಂಸ್ಕೃತ ವಿಶಾಖದತ್ತನ ಕೃತಿಯನ್ನು ಆಧರಿಸಿಕೊಂಡು ರಚಿತವಾಗಿದೆ. ಇದು "ಐತಿಹಾಸಿಕ ವಸ್ತುಗಳನ್ನೊಳಗೊಂಡ ಕೃತಿ. ಈ ಕೃತಿಯನ್ನು ಕಾದಂಬರಿ ಎಂದು ಎಚ್.ಎಂ.ಶಂಕರ ನಾರಾಯಣರು ಕರೆದಿದ್ದಾರೆಂದು, ಡಾ.ಹರಿಕೃಷ್ಣ ಭರಣ್ಯರವರು ಅಭಿಪ್ರಾಯ ಪಟ್ಟಿದ್ದಾರೆ".[೩] ಇದರಲ್ಲಿ ಗದ್ಯ ಪ್ರೌಢವಾಗಿದ್ದರೂ ಲಲಿತವಾಗಿದೆ. ಸಂಸ್ಕೃತ ಭೂಯಿಷ್ಟವಾಗಿದ್ದರೂ ಸರಳವಾಗಿದೆ. ಗದ್ಯ ಗ್ರಂಥಗಳ ಸಾಲಿನಲ್ಲಿ ಈ ಕೃತಿಗೆ ಒಂದು ಮಹತ್ವದ ಸ್ಥಾನ ದೊರಕಿದೆ. ಕೆಂಪುನಾರಾಯಣನು "ಹೊಸಗನ್ನಡ ಸ್ವರೂಪದ ಸಣ್ಣ ವಾಕ್ಯಗಳನ್ನು ಉಪಯೋಗಿಸಿಕೊಂಡಿದ್ದಾನೆ. ಆತನ ಸಂಸ್ಕೃತ ಪದಪ್ರಯೋಗವು

---

೧. ಕನ್ನಡ ವಿಷಯ ವಿಶ್ವಕೋಶ, ಪು.೨೧೭

೨. ಜ್ಞಾನಗಂಗೋತ್ರಿ ಕಲೆ ಸಾಹಿತ್ಯ, ಪು.೯೬೩

೩. ಹೊ.ಎ. ಮತ್ತು ವಿಕಾಸ ಹರಿಕೃಷ್ಣ ಭರಣ್ಯ, ಪು.೪೫

ಭಾರವಾಗದ ಕನ್ನಡದೊಡನೆ ಹಗುರವಾಗಿ ಹೊಂದಿಕೊಂಡಿದೆ. "ಕೆಂಪುನಾರಾಯಣನ ಶೈಲಿಯು ಪಂಡಿತರ ಗದ್ಯ ಶೈಲಿಯಲ್ಲಿರದೆ ಕಥನಕ್ಕೆ ಸೂಕ್ತವಾದ ಸರಳ ಹಾಗೂ ನೇರವಾದ ಮಾರ್ಗವನ್ನು ಅನುಸರಿಸಿ ಹೊಸಗನ್ನಡದ ಹೊಸ್ತಿಲಲ್ಲಿ ಕಾಲಿಟ್ಟಿದೆ. ಆದರೆ ಶೈಲಿಯು ಏಕರೂಪವಾಗಿಲ್ಲ. ವಿಷಮಿಕೆಯನ್ನು ಒಳಗೊಂಡಿದೆ. ಒಮ್ಮೆ ಪ್ರೌಢವಾದರೆ ಒಮ್ಮೆ ಸರಳವಾಗಿದೆ".[೧] ಉದಾಹರಣೆಯಾಗಿ ಪರ್ವತರಾಜನು ವಿಷಯಕನ್ಯೆಯನ್ನು ಕಂಡ ಸಂದರ್ಭವನ್ನು ಆತ ವಿವರಿಸಿದ ಬಗೆಯನ್ನು ಪರಿಶೀಲಿಸಬಹುದು. ರಾಜನ ಕಂಚುಕೆಗೆ ವಿಷಕನ್ಯೆ ಕಂಡ ರೀತಿ ಇದು-

"ಸಕಲ ವಸ್ತುಗಳ ಲಾವಣ್ಯಾಂಶಗಳನ್ನು ತೆಗೆದು ಬ್ರಹ್ಮನಿಂದ ನಿರ್ಮಿತಳಾದ ತಿಲೋತ್ತಮೆಯೋ ಎಂಬಂತೆ ಅತಿ ಮನೋಹನಾಂಗಿಯಾಗಿ ಮಂದ ಮಾರುತದಿಂ ಚಲಿಸುವ ಕನ್ನೈದಿಲೆಯ ದಳಗಳಂತಿರುವ ನಿಜ ನೇತ್ರಕಾಂತಿಯಿಂ ರಚಿಕಜನ ಚಿತ್ತಮಂ ಮೋಹಗೊಳಿಸುತ್ತಾ ಚಂದ್ರಗಾವಿಯ ವಸ್ತ್ರದಿಂ ಮುಸುಕಿಟ್ಟು ಕುಚಭಾರದಿಂ ಬಳುಕುವ ಒಡನಡುವಿನಲ್ಲಿ ವಾಮಹಸ್ತವನಿಕ್ಕಿ ಬೆಡಗಂ ಚೀರುತ್ತಿರುವ ಕನ್ಯಾರತ್ನ.[೨]

ಈ ಮೇಲಿನ ಗದ್ಯ ರೂಪದ ಕೃತಿಗಳು ಹೊಸಗನ್ನಡ ಗದ್ಯ ಶೈಲಿಯಿಂದ ವಿಭಿನ್ನವಾದವುಗಳು. ಇವು ಪೂರ್ವದ ಕೃತಿಗಳನ್ನು ಆಧರಿಸಿ ಗದ್ಯರೂಪಕ್ಕೆ ರೂಪಾಂತರಗೊಂಡ ಶೈಲಿಯನ್ನು ವಿಭಿನ್ನವಾದವುಗಳು. ಇವು ಪೂರ್ವದ ಕೃತಿಗಳನ್ನು ಆಧರಿಸಿ ಗದ್ಯರೂಪಕ್ಕೆ ರೂಪಾಂತರಗೊಂಡ ಶೈಲಿಯನ್ನು ಪ್ರತಿನಿಧಿಸುತ್ತದೆ. ಈಗಿನ ಹೊಸಗನ್ನಡ ಶೈಲಿಯನ್ನು ಇವು ತೋರ್ಪಡಿಸದೆ. ಅಮ್ -ಮುಮ್, ಹಳೆಗನ್ನಡ ರೂಪದಿಂದ ಕೂಡಿದೆ. ಇವುಗಳಲ್ಲಿ ಕೇವಲ ಗದ್ಯದ ಛಾಯೆಯನ್ನು ಮಾತ್ರ ಕಾಣಬಹುದು. ಹೀಗಾಗಿ ಇವುಗಳು ಹೊಸಗನ್ನಡದ ಆರಂಭದ ಕೃತಿಗಳೆಂದು ನೇರವಾಗಿ ಹೇಳಲು ಬರುವಂತಿಲ್ಲ.

ಈ ಮೇಲಿನ ಎಲ್ಲ ಕೃತಿಗಳಿಗಿಂತ ಪೂರ್ವದಲ್ಲಿ ಕೆಥೋಲಿಕರ ಸಾಹಿತ್ಯದಲ್ಲಿ ನಾವು ಸಂಪೂರ್ಣ ಹೊಸಗನ್ನಡ ಗದ್ಯದ ಛಾಯೆಯನ್ನು ಕಾಣುತ್ತೇವೆ. "ಕನ್ನಡ ನಾಡಿಗೆ ಬಂದು ನೆಲೆಸಿದ ಶಾಸ್ತ್ರೀಯನೆಂದರೆ ಲಿಯೊನಾರ್ದೊ ಚಿನಾಮಿ ಅಥವಾ ಚಿನಾಮೋ ಇವನು ಕನ್ನಡದ ಮೊದಲ ಕ್ರಿಸ್ತೀ ಲೇಖಕನೂ ಅಹುದು ಕ್ರಿ.ಶ.೧೬೪೯ರಲ್ಲಿ ಮೈಸೂರಿಗೆ ಬಂದು ಮಿಶನ್ ಕೇಂದ್ರವನ್ನು ತೆರೆದ ಮೇಲೆ ಮತ ಪ್ರಸಾರವನ್ನು ಮುಖ್ಯವಾಗಿ ಗಮನದಲ್ಲಿರಿಸಿಕೊಂಡು ಪುಸ್ತಕಗಳನ್ನು ಬರೆದನು. "ಅವನೇ ಹೊಸಗನ್ನಡದ ಪ್ರಪ್ರಥಮ ಗ್ರಂಥಕರ್ತ ಎನ್ನಲಾಗಿದೆ".[೩]

ಇವುಗಳು ಅಲಭ್ಯವಿದ್ದರೂ ಆಗಿನ ಕಾಲದಲ್ಲಿ ಪ್ರಭಾವ ಮಾಡಿದ ಕೃತಿಗಳಾಗಿದ್ದವೆಂದು ಆಧಾರ ದೊಂದಿಗೆ ನಂಬಬಹುದು. ಯಾಕೆಂದರೆ ಇವರಿಗಿಂತ ಮುಂದಿನವರು ಇವುಗಳನ್ನು ಸ್ಮರಿಸಿರುವುದನ್ನು ಕಾಣುತ್ತೇವೆ.

೧. ಹೊ.ಅ.ಶ್ರೀ.ಹಾ., ಪು.೫೫೯ ೫೬೦

೨. ಕ.ಕ್ರೈ.ಸಾ.ಹ.ಕಂ.ಇತ್ಯಾದಿ, ಶ್ರೀ.ಹಾ.ಪು.೨೪

೩. ಕನ್ನಡ ವಿಷಯ ವಿಶ್ವಕೋಶ, ಪು.೨೫೧

ಯಾವುದೇ ಸಾಹಿತ್ಯ ಕೃತಿಗಳು ಅರಸರ ಮನ್ನಣೆಗೆ ಅವರ ಅವಗಾಹನೆಗೆ ಹಾತೊರೆಯುತ್ತಿದ್ದವೆಂಬುದು ಸತ್ಯ. ಅರಸರ ಕಾಲದಲ್ಲಿ ರಚಿತವಾದಾಗ ಅವುಗಳ ಮಾಹಿತಿ ಹಾಗೂ ಪ್ರತಿಗಳು ಆಸ್ಥಾನದಲ್ಲಿ ಲಭ್ಯವಿರುತ್ತಿದ್ದವು. ಹಾಗೆಯೇ ಚಿನಾಮಿಯ ಕೃತಿಗಳು ಇದ್ದಿರಲು ಸಾಕು. ಒಂದು ವೇಳೆ ಆತನೊಬ್ಬನೆ ಅವುಗಳನ್ನು ಹೊಂದಿದ್ದರೆ. ಅಥವಾ ಅವು ಪ್ರಚಾರದಲ್ಲಿರದಿದ್ದರೆ ಮುಂದಿನ ಲೇಖಕರಾರೂ ಅವುಗಳನ್ನು ಉಲ್ಲೇಖಿಸುತ್ತಿರಲಿಲ್ಲ. ಆದರೆ ಉಲ್ಲೇಖಗೊಂಡಿರುವುದರಿಂದ ಇವು ಕನ್ನಡ ಸಾಹಿತ್ಯದ ಭಾಗಗಳಾಗಿ ಪರಿಗಣನೆಗೆ ತೊಡಗಿರಬಹುದು. ಇವುಗಳ ಪ್ರಭಾವ ಕನ್ನಡ ಸಾಹಿತ್ಯದಲ್ಲಿ ಆಗಲೇ ಇಲ್ಲವೆಂದು ಹೇಳಲು ಬರುವುದಿಲ್ಲ.

ಈ ಪ್ರಭಾವದ ಶೈಲಿಯೂ, ಮುಮ್ಮಡಿ ಕೃಷ್ಣರಾಜರ ಕಾಲದಲ್ಲಿ ಅಂದಿನ ಕನ್ನಡ ಪಂಡಿತರಿಗೆ ಹೊಸತನವನ್ನು ಹೊಸದೃಷ್ಟಿಯನ್ನು ನೀಡಲು ಅನುವುಗೊಂಡಿರುವಲ್ಲಿ ಸಾಧ್ಯತೆಗಳೇ ಹೆಚ್ಚು.

೪.೩. ಪೂರ್ವದಲ್ಲಿ ಮಿಶನರಿಗಳಿಂದ ರಚಿತವಾದ ಗದ್ಯ ಕೃತಿಗಳು

ಮುಖ್ಯವಾಗಿ ಮಿಶನರಿಗಳ ಕನ್ನಡಸಾಹಿತ್ಯ ಕ್ಷೇತ್ರದಲ್ಲಿ, ಕ್ರೈಸ್ತ ಧಾರ್ಮಿಕ ಸಾಹಿತ್ಯ ಹಾಗೂ ಮತೀಯ(ಅನ್ಯಮತ) ಸಾಹಿತ್ಯ ಅಥವಾ ವಿಮರ್ಶಾತ್ಮಕ ಸಾಹಿತ್ಯ ಎಂಬೀ ಎರಡು ಬಗೆಯನ್ನು ಕಾಣಬಹುದು. ಇವುಗಳಲ್ಲಿ ಕೆಲವೊಂದನ್ನು ಈ ಕೆಳಗಿನಂತೆ ನೋಡಬಹುದು.

೧. ಈರಾರು ಪತ್ರಿಕೆ(Twelve Letters)

"ಕ್ರಿಸ್ತನ ಮೂಲಕ ಬೆಳಕು ಲೋಕಕ್ಕೆ ಬಂದಿದ್ದರೂ ಮನುಷ್ಯರು ತಮ್ಮ ಕ್ರಿಯೆಗಳು ಕೆಟ್ಟವಾದದ್ದರಿಂದ, ಬೆಳಕಿಗಿಂತ ಕತ್ತಲೆಯನ್ನು ಹೆಚ್ಚಾಗಿ ಪ್ರೀತಿ ಮಾಡುತ್ತಾರೆ. ಆದರೆ ಸತ್ಯವನ್ನು ಮಾಡುವವನು ತನ್ನ ಕ್ರಿಯೆಗಳು ಪ್ರಕಟವಾಗುವ ಹಾಗೆ ಬೆಳಕಿಗೆ ಬರುತ್ತಾನೆ".[೧] ಬೈಬಲ್‌ನ ಯೋಹಾನನೆಂಬ ಶಿಷ್ಯನಿಂದ ಬರೆದ ಈ ಮೇಲಿನ ವಾಕ್ಯಗಳನ್ನು ಆಧರಿಸಿ ಈ ಈರಾರು ಪತ್ರಿಕೆ ಎಂಬ ಪುಸ್ತಕವು ಬರೆಯಲಾಗಿದೆ.

ಕ್ರಿ.ಶ.೧೮೪೨ರಲ್ಲಿಯೇ ರೆ.ಮೋಗ್ಲಿಂಗ್‌ನಿಂದ ರಚಿತವಾದ ಈ ಕಿರುಪುಸ್ತಕ ೬೨ ಪುಟಗಳನ್ನು ಹೊಂದಿದೆ. ಹೊಸಗನ್ನಡದ ಪ್ರಪ್ರಥಮ ಓಲೆ ಶೈಲಿಯನ್ನು ಹೊಂದಿದ ಕನ್ನಡ ಸ್ವತಂತ್ರ ಕೃತಿ. ಧರ್ಮ ಪ್ರಚಾರವನ್ನೆ ಮುಖ್ಯ ಉದ್ದೇಶವಾಗಿ ಇಟ್ಟುಕೊಂಡಿದ್ದರು, ಅದನ್ನು ಸಮರ್ಥಿಸಲು ಬಳಸಿಕೊಂಡ ಶೈಲಿಯು ನೂತನವಾದುದು. ದೇವಪುರದಲ್ಲಿಯ ಆನಂದರಾಯನು, ಕೃಷ್ಣಾಪುರಗಲ್ಲಿರುವ ರಾಮಚಂದ್ರಯ್ಯ ನವರಿಗೆ ಪತ್ರವನ್ನು ಬರೆಯುವುದರೊಂದಿಗೆ ಮೊದಲನೆ ಪತ್ರ ಪ್ರಾರಂಭಗೊಂಡು ಆನಂದಯ್ಯನವರಿಗೆ

೧.ಈರಾರು ಪತ್ರಿಕೆ, ಕರ್ನಾಟಕ ಮಿಶನ್ ಪ್ರೆಸ್, ಮಂಗಳೂರು ೧೯೨೦, ಹತ್ತೊಂಬತ್ತನೆಯ ಆವೃತ್ತಿ

ರಾಮಚಂದ್ರಯ್ಯನು ಬರೆಯುವ ಹನ್ನೆರಡನೇ ಪತ್ರದೊಂದಿಗೆ ಸಾಹಿತ್ಯ ಮುಕ್ತಾಯವಾಗುವುದು. ಇತನ್ಮಧ್ಯೆ ಹಿಂದೂಸ್ಥಾನದಲ್ಲಿ ಧಾರ್ಮಿಕ ಮೂಡನಂಬಿಕೆ, ಅಂಧಶ್ರದ್ಧೆ ಹಾಗೂ ಏಕದೇವಾರಾಧನೆ ಮಾಡದೆ ಇರುವ ಕುರಿತ ವಿಷಯಗಳು ಈ ಪತ್ರಗಳ ಮುಖ್ಯ ವಿಷಯ. ಅಂದು ಬರೆದ ಈ ಕಿರು ಹೊತ್ತಿಗೆ ಇಂದಿಗೂ ಲಭ್ಯವಿದ್ದು ಓದುಗನಿಗೆ ತನ್ನ ಪ್ರಭಾವವನ್ನು ಬೀರುವಂತದ್ದಾಗಿದೆ.

೨. ಯೇಸು ಕ್ರಿಸ್ತನ ಚರಿತ್ರೆ(Calechim of the Life of Jesus Clevist)

ಯೇಸು ಕ್ರಿಸ್ತನ ಜೀವನ ಚರಿತ್ರೆಯನ್ನು ಈ ಕಿರು ಹೊತ್ತಿಗೆ ಒಳಗೊಂಡಿದ್ದು, ಆತನ ಹುಟ್ಟು, ಬೆಳವಣಿಗೆ, ಉಪದೇಶ, ಸಾರ್ಥಕತೆಯನ್ನು ಪ್ರಶ್ನೋತರ ರೂಪವಾಗಿ ಒಳಗೊಂಡಿದೆ. ಇದು ಚಿಕ್ಕವರಿಗೆ ವಿಶೇಷವಾಗಿ ಉಪಯುಕ್ತವಾಗಲು ರಚಿತಗೊಂಡಿದೆ. ಈಗ ದೊರೆತ ಪುಸ್ತಕ ನಾಲ್ಕನೇ ಆವೃತ್ತಿಯೊಂದಿಗೆ ದಾಖಲೆಯನ್ನು ಹೊಂದಿದೆ. ೧೮೭೪ರಲ್ಲಿ ನಾಲ್ಕನೇ ಆವೃತ್ತಿ ಹೊಂದಿದ್ದು, ೧೯೩೫ರವರೆಗೆ ಒಟ್ಟು ಹನ್ನೊಂದು ಬಾರಿ ಪ್ರಕಟಗೊಂಡಿದೆ. ಮೈಸೂರಿನ ವೆಸ್ಲಿಯನ್ ಪ್ರೆಸ್‌ನಲ್ಲಿ ಮುದ್ರಣಗೊಂಡಿದ್ದು, ಲೇಖಿಕನ ಕುರಿತು ಮಾಹಿತಿ ದೊರೆಯದು. ಅಂದಿನ ಪುಸ್ತಕದ ಕ್ರಯ ೯ ಪೈಸೆ ಮಾತ್ರ.

೩. ಜನ್ಮಾಂತರ ಪರೀಕ್ಷೆ(The Hindu Doctrine of Transmigration Examined)

ಅಂದಿನ ಮಿಶನರಿಗಳು ಹಿಂದೂ ಧರ್ಮವನ್ನು ತಮ್ಮ ಧರ್ಮಪ್ರಚಾರಕ್ಕೆ ಹೇಗೆ ಬಳಸುತ್ತಿದ್ದರೆಂಬುದನ್ನು ತಿಳಿಸುವ ಈ ಪುಸ್ತಕ ಒಟ್ಟು ೫೯ ಪುಟಗಳನ್ನೊಳಗೊಂಡಿದೆ. ಒಟ್ಟು ಎಂಟು ಚಿಕ್ಕ ಅಧ್ಯಾಯಗಳನ್ನು ಹೊಂದಿದ್ದು, ಅವು ಹೀಗಿವೆ ೧. ಜನ್ಮಾಂತರದ ಬೋಧನೆಯ ಉತ್ಪತ್ತಿ, ೨. ಶಾಸ್ತ್ರಗಳಲ್ಲಿ ಹೇಳಿರುವ ಜನ್ಮಾಂತರದ ಕ್ರಮಗಳು, ೩. ಜನ್ಮಾಂತರದ ಬೋಧನೆಯಲ್ಲಿ ಅಡಗಿರುವ ತಾತ್ಪರ್ಯವನ್ನು ಬೈಲಿಗೆ ತಂದದ್ದು, ೪. ಜನ್ಮಾಂತರದ ಖಂಡನೆ, ೫. ಕರ್ಮ-ಜನ್ಮ ಮರಣಗಳನ್ನು ಕುರಿತು ದೇವರ ವಾಕ್ಯ (ಬೈಬಲ್) ಹೇಳುವಂತದ್ದು, ೬. ಕೆಟ್ಟವರ ಸುಖಕ್ಕೂ ಭಕ್ತರ ಕಷ್ಟಕ್ಕೂ ಕಾರಣವನ್ನು ತೋರಿಸಿದ್ದು, ೭. ಎಲ್ಲಾ ಮನುಷ್ಯರಿಗೂ ಸಮವಾಗಿ ಸುಖವಾಗುವ ಉಪಾಯವನ್ನು ತೋರಿದ್ದು, ೮. ದೇವರು ಮನುಷ್ಯರನ್ನು ನಡೆಸುವ ರೀತಿಯಲ್ಲಿ ಅನ್ಯಾಯವಿಲ್ಲವೆಂಬುದಕ್ಕೆ ಒಂದು ಕಥೆ. ಹೀಗೆ ಕಥೆಯ ಮೂಲಕ ಮುಕ್ತಾಯವನ್ನು ಕಾಣುತ್ತದೆ. ಈ ಕೃತಿ ಕೆನರೀಜ್ ಮಿಶನ್ ಪ್ರೆಸ್ ಮತ್ತು ಬುಕ್ ಡಿಪೊ, ಮಂಗಳೂರಿನಲ್ಲಿ ೧೯೨೬ರಲ್ಲಿ ಪ್ರಕಟಗೊಂಡಿದ್ದ ನಾಲ್ಕನೇ ಮುದ್ರಣವಾಗಿದೆ. ಈ ಪುಸ್ತಕದ ಹಿಂದೆ ಒಟ್ಟು ೨೨ ಪುಸ್ತಕಗಳು ದೊರೆಯುವ ಬಗ್ಗೆ ಮಾಹಿತಿ ಇದೆ. ನಿನ್ನ ಮನೆ ಎಲ್ಲಿ? (Where is your Home?) ಈ ಕೃತಿ ಕೆನರಿಜ್ ಮಿಶನ್ ಪ್ರೆಸ್ ಮತ್ತು ಬುಕ್ ಡಿಪೊ ಮಂಗಳೂರಿನಲ್ಲಿ ಮುದ್ರಣಗೊಂಡು ೧೯೨೬ರಲ್ಲಿ ನಾಲ್ಕನೇ ಆವೃತ್ತಿಯಾಗಿದೆ. ಒಟ್ಟು ೨೦ ಪುಟಗಳ ಕಿರು ಪುಸ್ತಕ. ಮನುಷ್ಯ ಇಹಲೋಕದ ವ್ಯಾಮೋಹಕ್ಕೆ ಸಿಲುಕದೆ ಪರಲೋಕಕ್ಕೆ ಬಾಧ್ಯಸ್ತವಾಗುವುದಕ್ಕೆ ಹವಣಿಸಿಬೇಕೆಂಬ ಬೋಧನೆಗೆ ಒತ್ತು ಕೊಟ್ಟಂತಿದೆ.

ಯಾವತ್ಸ್ವಸ್ಥಮಿದಂ ದೇಹಂ
ಯಾವನ್ಮೃತ್ಯುಶ್ಚದೂರತಃ|
ಪ್ರಾಣಾಂತೇ ಕಿಂ ಕರಿಷ್ಯತಿ||

ಅಂದರೆ ಎಲ್ಲಿ ಪರ್ಯಂತರ ದೇಹ ಕ್ಷೇಮವಾಗಿರುತ್ತದೋ ಎಷ್ಟು ಪರ್ಯಂತರ ಮೃತ್ಯು ದೂರವಾಗಿ ಉಂಟೋ ಅಷ್ಟರೊಳಗೆ ಆತ್ಮಹಿತವನ್ನು ಮಾಡಬೇಕು ಪ್ರಾಣಾಂತವಾದ ಮೇಲೆ ಏನು ಮಾಡ್ಯಾನು?

೪. ಪರಮ ಗುರುವು(The Supreme Guru)

ಈ ಕೃತಿ ಮೊದಲು ಬಾಶೆಲ್ ಮಿಶನ್ ಬುಕ್ ಮತ್ತು ಟ್ರ್ಯಾಕ ಡಿಪೊ ಮಂಗಳೂರಿನಲ್ಲಿ ಹಾಗೂ ಬೆಂಗಳೂರಿನಲ್ಲಿಯು ಪ್ರಕಟಗೊಂಡಿದೆ. ಈಗ ದೊರೆತ ಕೃತಿ ೧೯೦೩ರಲ್ಲಿ ಪ್ರಕಟವಾದದ್ದು. ಒಟ್ಟು ೪೮ ಪುಟಗಳನ್ನೊಳಗೊಂಡಿದೆ. ಭಗವದ್ಗೀತೆ ಹಾಗೂ ಸುಭಾಷಿತದ ಶ್ಲೋಕಗಳನ್ನು ಆಧರಿಸಿ ಕೃಷ್ಣನಿಗಿಂತ ಕ್ರಿಸ್ತನ ಶ್ರೇಷ್ಠತೆಯನ್ನು ಎತ್ತಿ ತೋರಿಸುವ ಪ್ರಯತ್ನ ಇಲ್ಲಿದೆ. ಹಾಗೂ ಯಜ್ಞ ಎಂಬಾತನು ಕ್ರಿಸ್ತನೇ ಎಂಬುದನ್ನು ಸ್ಪಷ್ಟಪಡಿಸುವಲ್ಲಿ ಶ್ರಮಿಸುವುದು. ಕೊನೆಯ ಪುಟದಲ್ಲಿ ಯೇಸುವಿನ ನಾಮಾಧಿನಾಮದ ಉಲ್ಲೇಖದ ಪದ್ಯವಿದೆ. ಉದಾ.

ಬೇರೊಂದು ಹೆಸರಿಂದ
ಸಂರಕ್ಷೆ ಇಲ್ಲವು
ಬೇರೊಂದು ಬೀಜದಿಂದ
ಸಂಜೀವನಾಗದು
ಈ ಬೀಜ ಕ್ರಿಸ್ತ ಮಾತ್ರದಲ್ಲೆ
ಅನಂತ ಶಕ್ತಿಯು
ಈ ಹೆಸರೊಂದರಲ್ಲೆ
ಅನಂತ ಮುಕ್ತಿಯು

೫. ಮಧ್ಯವರ್ತಿಯು ಬೇಕೋ(Who is your Mediator?)

ಮಂಗಳೂರಿನ ಬಾಶೆಲ್ ಮಿಶನ್ ಪ್ರೆಸ್‌ನಲ್ಲಿ ೧೮೭೫ರಲ್ಲಿ ಒಟ್ಟು ೮೦ ಪುಟಗಳು ಮುದ್ರಣಗೊಂಡಿವೆ. ಮನುಷ್ಯ ನೇರವಾಗಿ ದೇವರನ್ನು ಗ್ರಹಿಸಲು ಸಾಧ್ಯವಿಲ್ಲ. ಆತನಿಗೆ ಒಬ್ಬ ಮಧ್ಯವರ್ತಿಯ ಅವಶ್ಯಕ ಇರುವುದರಿಂದ ಆ ಮಧ್ಯವರ್ತಿ ಯಾರು? ಅವನ ಅವಶ್ಯಕತೆ ಇದೆಯೇ? ಎಂಬ ಅಂಶಗಳಿಂದ ಪ್ರಾರಂಭಗೊಳ್ಳುವ ಈ ಪುಸ್ತಕ, ಮಧ್ಯವರ್ತಿಯ ಕುರಿತು ವಿವರಣೆ ನೀಡುವುದು. ಮಧ್ಯಮವರ್ತಿ ಯಾರು ಅವನು ಮಾನವರಿಗಾಗಿ ಮಾಡಿದ ಕಾರ್ಯವೇನು ಎಂಬುದನ್ನು ತಿಳಿಸುತ್ತ ಆ ಮಧ್ಯವರ್ತಿ ಕ್ರಿಸ್ತನೇ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಇಲ್ಲಿ ಕ್ರಿಸ್ತನು ಲೋಕಕ್ಕೆ ಬಂದು ಮಾನವರಿಗಾಗಿ ಪ್ರಯೋಜನ ಪೂರ್ವಕ ಜೀವಿತ ಕುರಿತು ತಿಳಿಸುವನು.

೬. ವಿಕೀರ್ಣ ಸುಭಾಷಿತ ಪ್ರಸಂಗ ಶತಕ

ಈ ಕೃತಿಯು ಮಿಶನರಿಗಳ ಪ್ರಭಾವಕ್ಕೆ ಒಳಗಾದ ದೇಶೀಯ ಧರ್ಮಗುರು ಕ್ರಿಸ್ತಾನುಜವಾತ್ಸಾ ಎಂಬವನಿಂದ ರಚಿತಗೊಂಡಿದೆ. ಇಲ್ಲಿ ನೂರು ಶ್ಲೋಕಗಳಿದ್ದು, ಮೊದಲನೇ ಶ್ಲೋಕ ಹೀಗಿದೆ.

ವಂದೇ ವಾಗ್ದೇವ ಸರ್ವಜ್ಞ ಸರ್ವೇಶ್ವರ ದಯಾನಿದೇ
ಸರ್ವದಾ ತ್ವಾಂ ಪ್ರಪನ್ನೋಸ್ಮಿ ಕೃಪಯಾ ಪರಿಪಾಲಯ

ಅರ್ಥ : ಹೋ. ವಾಕ್ಯ ಸ್ವರೂಪಿಯಾದ ದೇವರೇ ಸರ್ವಜ್ಞನೇ ಸರ್ವಯಜಮಾನನೇ ದಯಾ ಸಮುದ್ರನೇ ವಂದೇ ವಂದಿಸುತ್ತೇನೆ; ಸರ್ವದಾ ನಿನ್ನನ್ನು ಆಶ್ರಯಿಸಿದ್ದೇನೆ ಕೃಪೆಯಾ, ಕರುಣೆಯಿಂದ ಪರಿಪಾಲಿಸು. ಈ ಶ್ಲೋಕದಿಂದ ಪ್ರಾರಂಭಗೊಂಡು ಭಗವದ್ಗೀತೆಯ ಕೊನೆಯ ಶ್ಲೋಕದೊಂದಿಗೆ ಮುಕ್ತಾಯವಾಗುತ್ತದೆ

ಸರ್ವಧರ್ಮನ ಪರಿತ್ಯಾಜ|
ಮಾಮೇಕರ ಶರಣಂ ವ್ರಜ||
ಅಹಂ ತ್ವಾ ಸರ್ವಪಾಪೇಭ್ಯೋ
ಮೋಕ್ಷಯಿಷ್ಯಾಮಿ ಮು ತುಚಃ||೧೦೦||

ಈ ಕೃತಿ ಒಟ್ಟು ೧೦೦ ಪುಟಗಳನ್ನೊಳಗೊಂಡಿದ್ದು, ಪ್ರತಿಯೊಂದು ಶ್ಲೋಕವು ವಿಶಿಷ್ಟವಾದ ವಿಭಿನ್ನವಾದ ಅರ್ಥವಿವರಣೆ ತಾತ್ಪರ್ಯವನ್ನು ಒಳಗೊಂಡಿದ್ದು, ಒಂದು ಮತೀಯ ಪುಸ್ತಕವಾಗಿದೆ. ಅಂದಿನ ದಿನಗಳಲ್ಲಿ ಕ್ರಾಂತಿಕಾರ ವಿಚಾರ ಪ್ರಚುರಪಡಿಸುವಲ್ಲಿ ಪ್ರಮುಖ ಕೃತಿ ಎನಿಸಿದೆ.

೭. ವೇದಾಂತ ದರ್ಶನ(A Rational refutation of The Vedanta Philosophy)

ಬಾಶೆಲ್ ಮಿಶನ್ ಬುಕ್ ಹಾಗೂ ಟ್ರ್ಯಾಕ್ಟ್ ಡಿಪೊ, ಮಂಗಳೂರು ಹಾಗೂ ಬೆಂಗಳೂರಿನಲ್ಲಿ ಪ್ರಕಟಗೊಂಡಿದೆ. ಒಟ್ಟು ೧೩೨ ಪುಟವುಳ್ಳ ಈ ಕೃತಿ ೧೮೯೯ರಲ್ಲಿ ಮುದ್ರಿತವಾಗಿದೆ. ಕಾಶಿಯ ಪ್ರಸಿದ್ಧ ಪಂಡಿತರಾದ ಸನ್ಮಾನ್ಯ ನೀಲಕಂಠಶಾಸ್ತ್ರಿಯವರು ಬಹಳ ವರ್ಷಗಳ ಕೆಳಗೆ ಷಡ್ದರ್ಶನದರ್ಪಣವೆಂಬ ಪುಸ್ತಕವನ್ನು ಹಿಂದಿ ಭಾಷೆಯಲ್ಲಿ ರಚಿಸಿದರು. ಈ ಪುಸ್ತಕವನ್ನು ತಿಳಿದು ಒಬ್ಬರು ಯೂರೋಪಿಯ ಪಂಡಿತರು ಅದನ್ನು ಇಂಗ್ಲಿಷಿನಲ್ಲಿ ಟೀಕಿಸಿದರು. ಅದರ ಇಂಗ್ಲಿಷ್ ಹೆಸರು A Ra&ional Refutation of Hindu Philosophical Systems ಇದರಲ್ಲಿ ಗ್ರಂಥಕರ್ತರು ಸಾಂಖ್ಯದರ್ಶನ ವಿಮರ್ಶೆಯನ್ನು ಮೊದಲನೆ ಭಾಗದಲ್ಲಿಯೂ, ನ್ಯಾಯದರ್ಶನ ವಿಮರ್ಶೆಯನ್ನು ಎರಡನೇ ಭಾಗದಲ್ಲಿಯೂ, ವೇದಾಂತ ವಿಚಾರವನ್ನು ಮೂಲ ಹಿಂದಿಭಾಷೆಯಿಂದ ಕನ್ನಡಿಸಿ ಇಂಗ್ಲಿಷ್ ಟೀಕೆಯಿಂದ ಪುಷ್ಟೀಕರಿಸಿ ಅದಕ್ಕೆ 'ವೇದಾಂತ ದರ್ಶನ' ಎಂದು ಹೆಸರಿಟ್ಟು ಪ್ರಟಿಸಲಾಗಿದೆ. ಇದರಲ್ಲಿ ಒಟ್ಟು ಹನ್ನೆರಡು ಅಧ್ಯಾಯಗಳಿವೆ.

ಏಳನೇ ಅಧ್ಯಾಯದಲ್ಲಿ ಜಗತ್ತು ಮಿಥ್ಯೆ ಎಂಬುವ ಸಿದ್ಧಾಂತದ ಪರೀಕ್ಷೆ ಎಂಬ ಶೀರ್ಷಿಕೆಯ ಅಡಿಯಲ್ಲಿಯ ಒಂದು ಶ್ಲೋಕ ಇದೆ. ಅದು ಶಿವಗೀತೆಯಲ್ಲಿ ಹೇಳಿದ್ದು.

೮. ಪರಮಾತ್ಮಜ್ಞಾನ(Knowledge of the Supreme Spirit)

ಈ ಕೃತಿಯ ಒಟ್ಟು ೬೨ ಪುಟಗಳಷ್ಟಿದ್ದು, ಒಟ್ಟು ನಾಲ್ಕು ಅಧ್ಯಾಯಗಳಿವೆ. ಕೃತಿಯ ಮೇಲೆ ಇಂಗ್ಲೀಷಿನಲ್ಲಿ A Dialogue on the Hindu Doctrine of God's being. The Author of sin etc, by The Rev.F.K ಎಂದು ೧೮೬೩ರಲ್ಲಿ ಬರೆಯಲಾಗಿದೆ. ಸದ್ಯ ದೊರೆತ ಆವೃತ್ತಿಯು ೧೮೯೦ರಲ್ಲಿ ಪ್ರಕಟಗೊಂಡಿದ್ದು, ಮಂಗಳೂರು ಬಾಶೆಲ್‌ಮಿಶನ್ ಪ್ರೆಸ್‌ನಲ್ಲಿ ಮುದ್ರಿತಗೊಂಡಿದೆ.

ಮೊದಲನೆಯ ಅಧ್ಯಾಯದಲ್ಲಿ ಹಿಂದೂ ಧಾರ್ಮಿಕ ಗ್ರಂಥದಲ್ಲಿ ಬರುವ ಪ್ರಕೃತಿ ಅಂದರೆ ಮಾಯೆಯ ಕುರಿತು ಹೇಳುತ್ತಾರೆ. ಮನುಷ್ಯನ ಎಲ್ಲ ಗುಣಗಳು ಪ್ರಕೃತಿಯಿಂದ ಬರುತ್ತವೆ ಎಂದು ಹೇಳುವುದು ನೈತಿಕತೆಯ ಪಲಾಯನವಾಗಿವೆ ಎಂದು ತೋರಿಸಿಕೊಡುತ್ತಾರೆ. ಸತ್ವ. ರಜಸ್, ತಾಮಸ ಗುಣಗಳ ಕುರಿತು ವಿದ್ವಾಂಸರ ಅಭಿಪ್ರಾಯಗಳು ಪ್ರಕೃತಿಯ ಪರಿಕಲ್ಪನೆಯು ಹೇಗೆ ಮೂಡಿಬಂದಿದೆ ಎಂದು ಉದಾಹರಣೆ ಸಹಿತವಾಗಿ ಚರ್ಚಿಸಿದ್ದಾರೆ.

ಎರಡನೆಯ ಅಧ್ಯಾಯದಲ್ಲಿ ಹಿಂದೂ ಧಾರ್ಮಿಕ ಗ್ರಂಥದಲ್ಲಿ ದೇವರಿಗೂ ಪ್ರಕೃತಿಗೂ ಇರುವ ಸಂಬಂಧದ ಚರ್ಚೆ ಇದೆ. ಮನುಷ್ಯರ ಹಾಗೂ ದೇವರ ಗುಣಗಳು ಪ್ರಕೃತಿಯಿಂದ ಹುಟ್ಟುವುದುದರಿಂದ ಎಲ್ಲವೂ ಮಿಥ್ಯವಾಗಿವೆ ಎಂಬ ಬೋಧನೆಯಿದೆ. ದೇವರು ದುರ್ಗುಣವನ್ನು ಹೊಂದಿದ್ದು, ದುಷ್ಕರ್ಮಗಳಿಗೂ ನೆಲೆಯಾಗಿದ್ದಾನೆ ಎಂಬುದನ್ನು ಆಧಾರ ಸಹಿತ ವಿವೇಚಿಸಲಾಗಿದೆ. ಎಲ್ಲಿ ಹುಡುಕಿದರು ದೋಷ ರಹಿತ ದೇವರು ಕಾಣದಿರುವುದನ್ನು ವಿಶೇಷವಾಗಿ ಪ್ರಸ್ತಾಪಿಸಲಾಗಿದೆ.

ಮೂರನೆ ಅಧ್ಯಾಯ ಹಿಂದೂ ಧರ್ಮದ ಪ್ರಮುಖ ದೇವರುಗಳ ಅಸ್ತಿತ್ವ, ಹುಟ್ಟಿನ ರಹಸ್ಯ ವಿವಿಧ ಗ್ರಂಥಗಳನ್ನು ಆಧರಿಸಿದ ವಿಭಿನ್ನ ಹೇಳಿಕೆ ತದ್ವಿರುದ್ಧ ವಿವರಣೆ ಶ್ಲೋಕ ಸಹಿತ ವಿವರಣೆ ಇಲ್ಲಿದೆ.

ನಾಲ್ಕನೇ ಅಧ್ಯಾಯದಲ್ಲಿ ಹಿಂದೂ ಧರ್ಮದ ಅಸ್ತಿತ್ವದ ದೇವರ ಕಲ್ಪನೆಗೆ ಬದಲಾಗಿ ಕ್ರೈಸ್ತ ಧರ್ಮದ ದೇವ ಕಲ್ಪನೆಯ ಸ್ಥಿರತೆಯನ್ನು ಬರೆಯಲಾಗಿದ್ದು, ಕ್ರೈಸ್ತ ಧರ್ಮತತ್ವವನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಮತ್ತು ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು, ಶಿವ ಇವರುಗಳ ಕುರಿತಾದ ನೀಚ ಅಶ್ಲೀಲ ಕೃತ್ಯಗಳನ್ನು ಮೂಲಗ್ರಂಥಗಳ ಹೆಸರಿನೊಂದಿಗೆ ಅಧ್ಯಾಯ ಶ್ಲೋಕಗಳ ಆಧಾರದೊಂದಿಗೆ ವಿವರಿಸಲಾಗಿದೆ.

೯. ಮತ ವಿಚಾರಣೆ

ಈ ಕೃತಿಯು ಸ್ವತಂತ್ರ ಕೃತಿಯಾಗಿದ್ದು, ಒಟ್ಟು ೫೧ ಪುಟಗಳನ್ನು ಒಳಗೊಂಡಿದೆ. ಮೋಗ್ಲಿಂಗ್‌ನಿಂದ ರಚಿತವಾದ ಈ ಕೃತಿ ೧೮೬೪ರಲ್ಲಿ ಪ್ರಕಟಗೊಂಡಿದೆ. ಇಲ್ಲಿ ಒಂದೇ ಮೂಲದಿಂದ ಹುಟ್ಟಿದವು ಎನ್ನಲಾದ ಕ್ರೈಸ್ತ ಮುಸಲ್ಮಾನರ ಧಾರ್ಮಿಕ ಅಂಶದ ತಳಹದಿಯು ಒಂದೇ ಎಂಬ ಭಾವವನ್ನು ಪ್ರಕಟಿಸುತ್ತದೆ. ಕೋರ್ಟ್ ಅಧಿಕಾರಸ್ಥನಾದ ನರಸಿಂಹಭಟ್ಟ, ಅವನ ಮಗನಾದ ರಾಮಭಟ್ಟ, ನೆರೆ ಮನೆಯ ವರ್ತಕನಾದ ಅಬ್ದುಲ್‌ರ ಮಧ್ಯ ನಡೆದ ಸಂಭಾಷಣೆ ಈ ಕೃತಿಯಲ್ಲಿದೆ. ಹಾಗೂ ಮೋಗ್ಲಿಂಗ್ ಮಾತುಗಳನ್ನು ಹೀಗೆ ನೋಡಬಹುದು. ವರ್ಣವು ಏನು? ವ್ಯಕ್ತಿಗೆ ಕಪ್ಪು ವ್ಯಕ್ತಿಗೆ ಬೇರೆ ಬೇರೆ ಜಾತಿ ಉಂಟೊ? ಬೇರೆ ಬೇರೆ ದೇಶಸ್ಥರಿಗೆ ವರ್ಣವು ಬೇರೆ ಬೇರೆ ಹೌದು! ಅದು ಗಾಳಿಯಿಂದಲೂ ಬಿಸಿಲಿನಿಂದಲೂ ಬೇರೆ ಬೇರೆಯಾಗುತ್ತದೆ.[೧]

೧೦. ದ್ವಿಮತ ಪರೀಕ್ಷೆ

ಮಿಶನರಿಗಳ ಸಾಹಿತ್ಯಕಾರ್ಯ ಸ್ವಮತ ಹಾಗೂ ಅನ್ಯಮತ ದೃಷ್ಟಿಯದಾಗಿತ್ತು. ಅನ್ಯಮತವೆಂದಾಕ್ಷಣ ಎಲ್ಲ ದೃಷ್ಟಿಯೂ ಹಳಿಯುವದೆಯಾಗಿತ್ತೆಂಬುದು ಸತ್ಯವಲ್ಲ. ಅನ್ಯಮತವನ್ನು ಕ್ರೈಸ್ತಮತ ಹೋಲಿಕೆಗೂ ಬಳಸುತ್ತಿದ್ದರು. ಇಂತಹ ಒಂದು ಉದಾಹರಣೆ ಈ ಗ್ರಂಥವಾಗಿದೆ. ಕ್ರಿ.ಶ.೧೮೬೬ರಲ್ಲಿ ಜಿ.ವುರ್ಥ ರಚಿಸಿದ ಈ ಕೃತಿಯಲ್ಲಿ ವೀರಶೈವ ಧರ್ಮ ಹಾಗೂ ಕ್ರೈಸ್ತಧರ್ಮಗಳ ಆಚಾರ ಸಂಪ್ರದಾಯಗಳ ತೌಲನಿಕ ವಿವೇಚನೆಯನ್ನು ಕಾಣಬಹುದು. ಇದರೊಂದಿಗೆ ಕ್ರೈಸ್ತಮತದ ಕೊಡುಗೆ ಇತರ ಧರ್ಮಗಳ ಮೇಲೆ ಎಂಬ ದೃಷ್ಟಿಕೋನವನ್ನು ಈ ಕೃತಿ ತಾಳಿದೆ.

ಈ ಬಗೆಯ ತೌಲನಿಕ ಅಧ್ಯಯನಗಳ ಫಲವಾಗಿ, ಮುಂದೆ ಚನ್ನಪ್ಪ ಉತ್ತಂಗಿಯವರು ತಾವು ಲಿಂಗಾಯತ ಧರ್ಮದಿಂದ ಮತಾಂತರ ಹೊಂದಿ, ಕ್ರೈಸ್ತ ಗುರುಗಳಾದಾಗ ವೀರಶೈವ ಧರ್ಮದ ಕುರಿತು ಲೇಖನವನ್ನು, ಕೃತಿಗಳನ್ನು ರಚಿಸಲು ಅನುವುಗೊಂಡತಾಗಿತ್ತೆಂದರೆ ತಪ್ಪಾಗಲಿಕ್ಕಿಲ್ಲ.

೧೧. ಕೃಷ್ಣ-ಕ್ರಿಸ್ತ ಇವರ ಪೊಚ್ಚು ಕಡಿಮೆ(Krishna And Christ)

ತೌಲನಿಕ ಅಧ್ಯಯನ ಕುರಿತಾದ ಮಿಶನರಿಗಳ ಪುಸ್ತಕದಲ್ಲಿ ಇದೊಂದು ನಿದರ್ಶನದಂತಿದೆ. ೧೮೬೭ರಲ್ಲಿ ಬಾಶೆಲ್ ಮಿಶನ್ ಪ್ರೆಸ್, ಮಂಗಳೂರಿನಲ್ಲಿ ಮುದ್ರಣಗೊಂಡಿದೆ. ಒಟ್ಟು ೯ ಪ್ರಕರಣಗಳನ್ನು ಒಳಗೊಂಡು ೮೨ ಪುಟವನ್ನು ಹೊಂದಿದೆ. ಒಂದೇ ಪುಟದಲ್ಲಿ ಎಡಬಲಗಳಲ್ಲಿ ಕೃಷ್ಣ ಹಾಗೂ ಕ್ರಿಸ್ತನ ಕುರಿತಾಗಿ ಅವತಾರ, ಜನ್ಮವೃತ್ತಾಂತ, ಬಾಲ್ಯ, ಬೆಳವಣಿಗೆ ಕ್ರಿಯೆಗಳು ಬೋಧನೆ, ಮರಣ ಹಾಗೂ

೧. ಉದ್ಧೃತ ರಾ.ಯ.ಧಾರವಾಡಕರ, ಹರ್ಮನ್ ಮೋಗ್ಲಿಂಗ್ ಜೆ.ಎಂ.ಜೋಗುಳಿ(ಸಂ) ಕರ್ನಾಟಕದಲ್ಲಿ ಬಾಶೆಲ್ ಮಿಶನ್, ಪು.೨೨೪

ಮರಣಾನಂತರ ಎಂಬ ವಿಷಯವನ್ನು ಒಂದರೆದುರು ಒಂದನ್ನು ವಿವರಿಸುತ್ತಾ ಹೋಗಲಾಗಿದೆ. ಈಗ ದೊರೆತ ಈ ಕೃತಿ ಎರಡನೇ ಮುದ್ರಣ ಹೊಂದಿರುವಂತಹದು.

೧೨. ಕಲಿಯುಗದ ಮಹಾತ್ಮೆ(Grealness of the Present Age)

ಕ್ರಿ.ಶ.೧೮೯೯ರಲ್ಲಿ ಮಂಗಳೂರಿನ ಬಾಶೆಲ್ ಮಿಶನ್ ಟ್ರ್ಯಾಕ್ಟ್ ಮತ್ತು ಡಿಪೊದಲ್ಲಿ ಮುದ್ರಣಗೊಂಡಿದೆ. ಒಟ್ಟು ೫೭ ಪುಟಗಳ ಕೃತಿಯಲ್ಲಿ ಕಲಿಯುಗ ಅಂದರೇನು? ಕಲಿಯುಗ ಯಾವಾಗ ಬಂದಿತು? ಹೇಗೆ ಬಂದಿತೆಂಬ ವಿವರಣೆ ಇದೆ. ತ್ರೈತಾಯುಗ ೧೬ಲಕ್ಷ, ದ್ವಾಪರಯುಗ ೮ ಲಕ್ಷ, ಕಲಿಯುಗ ೪ ಲಕ್ಷ ವರ್ಷಗಳುಂಟು ಎಂದು ಯುಗಗಳ ಕುರಿತು ಬರೆಯಲಾಗಿದೆ. ಪುಟ ೫೭ರಲ್ಲಿ ಹೀಗೆ ಓದುತ್ತೇವೆ. ಹಿಂದೂ ಮತವು ಜಾತಿ ಭೇದವನ್ನು ಕುರಿತು ಬೋಧಿಸುವುದರಿಂದ ಮನುಷ್ಯರಲ್ಲಿ ಮತ್ಸರ ಅಹಂಕಾರಗಳೆಂಬ ಕಲಿಯನ್ನು ಮತ್ತಷ್ಟು ಬೆಳೆಸುವುದಕ್ಕೆ ಹಿಂದೂ ಮತದವರು ಪ್ರಯತ್ನಿಸುತ್ತಾರೆ. ಆದರೆ ಕ್ರೈಸ್ತ ಮತ ನರಕುಲದವರೆಲ್ಲ ಒಂದೇ ಎನ್ನುವುದು; ಪಾಪಕ್ಕೆ ಮನುಷ್ಯನೇ ಕಾರಣ, ದೇವರಲ್ಲ. ಇಂತಹ ತಾಳೆನೋಟ ವನ್ನು ಈ ಕೃತಿ ದೃಷ್ಟಿಸುತ್ತದೆ.

ಮಿಶನರಿಗಳ ಹೊಸಗನ್ನಡದ ಈ ಕೃತಿಗಳು ಅಂದು ಧಾರ್ಮಿಕ ಪ್ರಭಾವವನ್ನಷ್ಟೆ ಮಾಡದೆ ಅದ ರೊಂದಿಗೆ ಕನ್ನಡ ಸಾಹಿತ್ಯದ ಕ್ಷೇತ್ರದಲ್ಲಿ ಸಂಭಾಷಣೆ, ಪ್ರಶ್ನೋತ್ತರ ಪದ್ಧತಿ, ವಿಮರ್ಶೆ, ಟೀಕೆ ಮುಂತಾದ ರೀತಿಯಲ್ಲಿ ಕಾಣಿಸಿಕೊಂಡು ಹೊಸಗನ್ನಡ ಗದ್ಯಶೈಲಿಗೆ ವಿಶಿಷ್ಟ ಕೊಡುಗೆಯನ್ನು ನೀಡಿರುವುದನ್ನು ನಾವು ಮರೆಯುವಂತಿಲ್ಲ. ಕಿಟಲ್‌ನಂತಹ ವ್ಯಕ್ತಿಗಳಿರುವರೆಗೆ ಅನೇಕ ಮಿಶನರಿಗಳು ಕನ್ನಡವನ್ನು ಸ್ವತಂತ್ರ ಭಾಷೆಯಾಗಿ ಬಳಸಿ ಬರೆದಿರುವ ಕೃತಿಗಳು, ಇಂದು ಹೊಸಗನ್ನಡ ಹುಟ್ಟಿ ನಡೆದುಬಂದ ಚರಿತ್ರೆಯನ್ನು ಹೊಗಳುತ್ತವೆ. ಕನ್ನಡಸಾಹಿತ್ಯ ಚರಿತ್ರೆಯಲ್ಲಿ ಮಿಶನರಿಗಳ ಕಾರ್ಯ ಗೌಣವಾಗಿದ್ದರೂ ಅದು ಸತ್ಯವಲ್ಲವೆಂಬ ಅಂಶ ನಿಧಾನಗತಿಯಿಂದಲಾದರು ಈಗ ಬೆಳಕಿಗೆ ಬರುತ್ತಿರುವುದು ಸೂಕ್ತವಾದದ್ದೆ.

೪.೪. ಹೊಸಗನ್ನಡದಲ್ಲಿ ಕಥೆ, ಕಾದಂಬರಿ

''ಕನ್ನಡದಲ್ಲಿ ಸಣ್ಣಕಥೆಗೆ ವಿಶಿಷ್ಟರೂಪ ಕೊಟ್ಟವರು ಚಾರಿತ್ರಿಕವಾಗಿ ಮೊಟ್ಟ ಮೊದಲು ಕಥೆ ಗಳನ್ನು ಬರೆದವರು ಯಾರು ಎಂಬ ಜಿಜ್ಞಾಸೆ ಇದೆ. ಕೆರೂರ ವಾಸುದೇವಾಚಾರ್ಯರು, ಎಂ.ಎನ್ ಕಾಮತರು, ಪಂಜೆಮಂಗೇಶರಾಯರು ಇವರೆಲ್ಲ ಆರಂಭದಲ್ಲಿ ಸಣ್ಣಕಥೆಗಳನ್ನು ಬರೆದವರೆಂದು ಹೇಳಲಾಗಿದೆ. ಆದರೆ ಇವರಾರೂ ಅಂದೊಂದು ಸಾಹಿತ್ಯ ಜಾತಿಯೆಂಬ ಪ್ರಜ್ಞೆಯನ್ನು ಮೂಡಿಸಿರಲಿಲ್ಲ. ಆ ಪ್ರಜ್ಞೆಯನ್ನು ಮೂಡಿಸಿ ಅದನ್ನೇ ಮಾಧ್ಯಮವಾಗಿ ಬಳಸಿದವರಲ್ಲಿ ಶ್ರೀನಿವಾಸರು ಮೊದಲಿಗರು. ಇವರು ಸಣ್ಣಕಥೆಯ

ಜನಕ ಎಂಬ ಹೆಸರಿಗೆ ಪಾತ್ರರಾದವರು"[೧] ಎಂದು ಅಭಿಪ್ರಾಯಪಡಲಾಗಿದೆ. ಆದರೆ ಕನ್ನಡ ಸಾಹಿತ್ಯದ ಹೊಸಗನ್ನಡದ ಅರುಣೋದಯದಲ್ಲಿ, ಅನುವಾದ ಹಾಗೂ ಸ್ವತಂತ್ರ ಕಥೆಗಳನ್ನು ಮೊದಲು ಬರೆದವರು ಮಿಶನರಿಗಳು ಹಾಗೂ ಮಿಶನರಿಗಳಲ್ಲದ ಪಾಶ್ಚಾತ್ಯ ವಿದ್ವಾಂಸರು.

"ನವೋದಯ ಪೂರ್ವ ಅಥವಾ ನವೋದಯದ ಪ್ರಥಮ ಘಟ್ಟದಲ್ಲಿಯೇ ಸಣ್ಣಕಥೆ ಮತ್ತು ಕಾದಂಬರಿ ಕನ್ನಡದಲ್ಲಿ ಮೊಳಕೆ ಇಟ್ಟವು. ಸಣ್ಣ ಕಥೆ ಭಾರತಕ್ಕಾಗಲಿ, ಕನ್ನಡ ನಾಡಿಗಾಗಲಿ, ಹೊಸದಲ್ಲ ಎಂಬ ಮಾತು ನಿಜ. ಪಂಚತಂತ್ರದ ಕಥೆಗಳು, ಉಪನಿಷತ್ತಿನ ಕಥೆಗಳು, ಜಾತಕದ ಕಥೆಗಳು ಈ ನಾಡಿನವರಿಗೆ ಸುಪರಿಚಿತ. ಆದರೆ ಸಾಹಿತ್ಯದ ಒಂದು ವಿಶಿಷ್ಟರೂಪವಾಗಿ ಸಣ್ಣಕಥೆ ಅರಳಿದ್ದು ಪಾಶ್ಚಾತ್ಯರಲ್ಲಿ."[೨]

"ಮಿಶನರಿಗಳಿಂದ ೧೯ನೇ ಶತಮಾನದ ಉತ್ತರಾರ್ಧದಲ್ಲಿ ಪ್ರಕಟವಾದ ನೀತಿಯ 'ಕಥೆಗಳು' ಇಸೂಫನ ನೀತಿಯ ಕಥೆಗಳು... ಮತ್ತು ಇಂಗ್ಲೀಷಿನಿಂದ ಪರಿವರ್ತಿತವಾದ ಪಿಲಿಗ್ರಿಮ್ಸ ಪ್ರೊಗ್ರೇಸ್ ಮೊದಲಾದವು ಹೊಸಗನ್ನಡದ ಸಣ್ಣಕತೆಗಳ ಬೆಳವಣಿಗೆಗೂ ಗದ್ಯ ಶೈಲಿಯ ಮುನ್ನಡೆಗೂ ಮಾರ್ಗದರ್ಶಕವಾಗಿವೆ."[೩] "ಸಣ್ಣಕಥೆಗಳು ಜನಸಾಮಾನ್ಯರು ರಚಿಸುವಂತೆ ೧೯ನೇ ಶತಮಾನದಲ್ಲಿಯೇ ಮಿಶನರಿಗಳು ಪ್ರಯತ್ನಿಸಿದ್ದಾರೆ."[೪] ಇವರು ೧೮೪೦ರಲ್ಲಿ 'ನೀತಿ ಪಾಠಗಳು' ಎಂಬ ಗ್ರಂಥವನ್ನು ಪ್ರಸಿದ್ಧಿಸಿರುವರು.

ಕ್ರೈಸ್ತ ಮಿಶನರಿಗಳು ಬೈಬಲ್ ಭಾಷಾಂತರಿಸುವುದರೊಂದಿಗೆ ಬೈಬಲ್ ಕಥೆಗಳನ್ನು ಕಥಾರೂಪದಲ್ಲಿ ನಿರೂಪಿಸತೊಡಗಿದರು. ಡ್ಯಾನಿಯೇಲ್ ಸಾಂಡರ್ಸ್‌ನ್ (೧೮೪೦-೧೮೭೦) ವಿದೇಶಿಯರಿಗೆ ಕನ್ನಡ ಭಾಷೆಯ ಪರಿಚಯವನ್ನು ಹಂತ-ಹಂತವಾಗಿ ಮಾಡಿಕೊಡುವ ಉದ್ದೇಶದಿಂದ ನಾಲ್ಕು ಕಥಾ ಸಂಗ್ರಹಗಳನ್ನು ಮಾಡಿಕೊಂಡಿದ್ದನು. ಕ್ರೈಸ್ತ ತತ್ವಗಳನ್ನು ಕಥೆಗಳ ಮೂಲಕ ಬೋಧಿಸುವ ಉದ್ದೇಶವು ಸ್ಪಷ್ಟವೇ ಇದೆ. ಹೇಳಬೇಕಾದ ವಿಚಾರ ಸ್ಪಷ್ಟತೆಗೂ ಅದು ಚೆಲುವಾಗಿ ತೋರುವುದಕ್ಕೂ ಕಥೆಯಂತಹ ಸಾಧನ ಇನ್ನೊಂದಿಲ್ಲ. ಬೈಬಲ್ ಅನೇಕ ಕಥೆಗಳಿಂದ ಕೂಡಿದ್ದು ಇಡೀ ಗ್ರಂಥವನ್ನೇ ಕಥಾಮಾಲೆಯಾಗಿ ಬರೆಯುವುದು ಸಾಧ್ಯ ಎಂದು ಶ್ರೀನಿವಾಸ ಹಾವನೂರರು ಅಭಿಪ್ರಾಯ ಪಟ್ಟಿದ್ದಾರೆ.*

ಕ್ರೈಸ್ತ ವಿಚಾರಗಳನ್ನೊಳಗೊಂಡು ಎಳೆಯರಿಗಾಗಿ ಬರೆದ ಕೆಲವು ಕಥೆಗಳು ಅದಾಗಲೇ ಪ್ರಚಲಿತವಿದ್ದವು. History of Little william ಅಂತಹ ಕಥನಗಳಲ್ಲಿ ಒಂದು. ಕನ್ನಡದಲ್ಲಿ ಇದುವೇ

---

೧. ಕನ್ನಡ ವಿಷಯ ವಿಶ್ವಕೋಶ, ಪು.೨೫೧

೨. ಹೊ.ಗ.ಸಾ.ಚರಿತ್ರೆ ಎಲ್.ಎಸ್.ಶೇಷಗಿರಿರಾವ್, ಪು.೨೫

೩. ಸಾಹಿತ್ಯ ಭಾರತಿ, ಅನಂತರಂಗಾಚಾರ್ಯ, ಪು.೩೭೨-೩೭೩

೪. ಕ್ರೈ.ಕ.ಕಾಣೆ, ವ.ಹುಯಿಲಗೋಳ, ಪು.೨೭

* ಹೊ.ಅ.ಶ್ರೀ.ಹಾ.ಪು.೪೫೨

ಮೊತ್ತ ಮೊದಲು ಅನುವಾದಗೊಂಡ ಕ್ರೈಸ್ತ ಕಥನ(೧೮೩೮). ಮೇರಿ ಶರ್ವುಡ್ ಎಂಬವಳು (೧೭೭೫-೧೮೫೧) ತನ್ನ ಗಂಡನೊಂದಿಗೆ (ಆತ ಒಬ್ಬ ಸೈನ್ಯಾಧಿಕಾರಿ) ಭಾರತಕ್ಕೆ ಬಂದು ಈ ದೇಶದ ಹಿನ್ನೆಲೆಯುಳ್ಳ ಸುಮಾರು ನೂರು ಕಥೆಗಳನ್ನು ರಚಿಸಿದಳು... ಭಾರತದ ಇತರ ಭಾಷೆಗಳಲ್ಲಿಯೂ ಅನುವಾದಗೊಂಡವು. Little Henry and his beaver ಮತ್ತು The Aya and the lady ಎಂಬುದು ಕನ್ನಡದಲ್ಲಿ ಬಂದಿವೆ. ಹಾಗೂ ಬೈಬಲ್ ಕಥಾ ಸೂಕ್ತಗಳಾದ "ದೇವವಾಕ್ಯ ದ್ವಿಪಂಚಾಶತೌ" ಪೂರ್ವನಿರ್ಧಾರ ದ್ವಿಪಂಚಾಶತಿ" ಮತ್ತು "ನವನಿರ್ಧಾರ ದ್ವಿಪಂಚಾಶತಿ"ಗಳನ್ನು ಬ್ಯೂಹಾರ್ ಎಂಬವನು ರಚಿಸಿದುದು ಕಂಡುಬರುವುದು. ೧೮೪೯ ರಲ್ಲಿಯೇ ಮೋಗ್ಲಿಂಗ್ ನಿಂದ ಚಿಕ್ಕವನಾದ ಹೆನ್ರಿಯೂ ಅವನ ಬೋಯಿಯೂ ಎಂಬ ಕಥೆಯನ್ನು ನಾವು ಕಾಣುತ್ತೇವೆ. ಈ ಮಿಶನರಿಗಳ ಸಾಹಿತ್ಯ ಕೃಷಿಯ ಪ್ರಭಾವದಿಂದಲೇ ಎಂ.ಎಸ್.ಪುಟ್ಟಣ್ಣ ಹಾಗೂ ಶ್ರೀನಿವಾಸರು ತಮ್ಮ ಸಾಹಿತ್ಯ(ಕಥೆ) ಪ್ರೇರಣೆ ಪಡೆಯುವಂತಾಯಿತೆಂದರೆ ತಪ್ಪಾಗಲಾರರು. ಕ್ರೈಸ್ತ ಸಾಹಿತ್ಯದಲ್ಲಿ ಬೈಬಲ್ ಕಥೆಗಳು ಪ್ರಮುಖ ಸ್ಥಾನವನ್ನು ಜಗತ್ತಿನಾದ್ಯಂತ ಪಡೆದುಕೊಂಡಿವೆ. ಅವುಗಳನ್ನು ಮಿಶನರಿಗಳಿಲ್ಲದವರು ಹಾಗೂ ಮಿಶನರಿಗಳು ಕನ್ನಡದಲ್ಲಿ ರಚಿಸಿದ್ದಾರೆ. ಹಾಗೂ ಬೈಬಲ್ ಪ್ರಚಾರಕ್ಕೆ ಕಥೆಗಳು ಮುಖ್ಯಮಾಧ್ಯಮಗಳೆಂದು ಪಾಶ್ಚಾತ್ಯರು ಬಲವಾಗಿ ನಂಬಿದ್ದರು, ಈ ಮಾಧ್ಯಮವನ್ನು ಅವರು ಕನ್ನಡದಲ್ಲಿ ಮಾತ್ರವಲ್ಲ, ಭಾರತೀಯ ಪ್ರಮುಖ ಭಾಷೆಗಳಲ್ಲಿ ತಂದಿರುವುದನ್ನು ನಾವು ತಿಳಿಯುವುದಾದರೆ, ಹೊಸಗನ್ನಡ ಶೈಲಿಯ ಕಥೆಯ ಮೂಲವು ಪಾಶ್ಚಾತ್ಯರ ಬರವಣಿಗೆಯಿಂದ ಕನ್ನಡದಲ್ಲಿ ಮೊಟ್ಟ ಮೊದಲು ಕಾಣಿಸಿಕೊಂಡಿತೆಂದರೆ ತಪ್ಪಾಗಲಿಕ್ಕಿಲ್ಲ.

"ಇತ್ತ ಮಿಶನರಿ ಜನರು ಬರೆದ ಕತೆಗಳಲ್ಲಿ ನೇರ ಹಾಗೂ ಸರಳವಾದ ಕಥನ ಕ್ರಮವಿದ್ದು, ಶೈಲಿಯು ಗ್ರಂಥಸ್ಥ ಹಾಗೂ ಬಳಕೆಯ ನುಡಿಗಳಿಂದ ಕೂಡಿದೆ" ಎಂದು ಶ್ರೀನಿವಾಸ ಹಾವನೂರವರು ಸೃಷ್ಟಿಪಡಿಸಿದ್ದಾರೆ.*

ಕನ್ನಡದಲ್ಲಿ ಸಣ್ಣಕಥೆ ಒಂದು ವಿಶಿಷ್ಟರೂಪವಾಗಿ ಜನ್ಮ ತಳೆದುದು ಸುಮಾರು ಐವತ್ತು ವರ್ಷಗಳ ಹಿಂದೆ ಎಂದು ಕನ್ನಡ ವಿಷಯ ವಿಶ್ವಕೋಶದಲ್ಲಿ (ಪುಟ.೨೦೩) ನಮೂದಿತವಾಗಿದೆ. ಆದರೆ, ೧೮೪೦ ರಿಂದಲೇ ಕನ್ನಡ ಸಾಹಿತ್ಯದಲ್ಲಿ ಕಥಾ ಸ್ವರೂಪ ಮಿಶನರಿಗಳಿಂದ ಕಂಡುಬರುತ್ತಿರುವುದರಿಂದ ಈ ಮೇಲಿನ ಹೇಳಿಕೆಯನ್ನು ನೇರವಾಗಿ ಒಪ್ಪುವಂತಿಲ್ಲ.

ಬೈಬಲ್ ಭಾಷಾಂತರದೊಂದಿಗೆ ಮಿಶನರಿಗಳು ಬೈಬಲ್ ಕಥಾ ಸೂಕ್ತಗಳನ್ನು ಪ್ರಾರಂಭದಿಂದಲೇ ಹೊರ ತಂದಿದ್ದಾರೆ. ಪಾಶ್ಚಾತ್ಯರಿಗೆ ಹಾಗೂ ಮಿಶನರಿಗಳಿಗೆ ಕಥಾರೂಪದ ಶೈಲಿಯು ಕರಗತವಾದಂತೆ ಕಂಡುಬರುತ್ತದೆ.

---

* ಹೊ.ಅ.ಶ್ರೀ.ಹಾ.ಪು.೫೫೮

ಮೊಟ್ಟ ಮೊದಲು ಕನ್ನಡದಲ್ಲಿ ಅದರಲ್ಲಿಯೂ ಹೊಸಗನ್ನಡದಲ್ಲಿ ಕಥೆಯನ್ನು ಬರೆದವರು ಯಾರು ಎಂಬ ಜಿಜ್ಞಾಸೆ ಇದ್ದರೂ ಈ ಪ್ರಕಾರವು ಮಿಶನರಿಗಳಿಂದಲೇ ಪ್ರಾರಂಭವಾದುದರಲ್ಲಿ ಸಂಶಯ ವಿಲ್ಲ ಎನ್ನಬಹುದು.

ಹೊಸಗನ್ನಡ ಪ್ರಥಮ ಕಾದಂಬರಿ

ಈ ಸಾಹಿತ್ಯ ಪ್ರಕಾರ, ಆರ್ಥಿಕ ವ್ಯವಸ್ಥೆಯಲ್ಲಿ ತೀವ್ರ ಬದಲಾವಣೆಗೊಳ್ಳುತ್ತಿದ್ದ ಯೂರೋಪಿನಲ್ಲಿ ೧೮ನೇ ಶತಮಾನದಲ್ಲಿ ಹುಟ್ಟಿತೆಂಬುದು ಗಮನಾರ್ಹ.

ಇಂದಿನ ಸಾಹಿತ್ಯ ಪ್ರಕಾರಗಳಲ್ಲಿ ಕಾದಂಬರಿ ಅತ್ಯಂತ ಪ್ರಭಾವಶಾಲಿಯೂ ಜನಪ್ರೀಯವೂ ಆಗಿದೆ. ಹೊಸಗನ್ನಡದಲ್ಲಿ ಸಣ್ಣಕಥೆ, ಪ್ರಬಂಧ, ಭಾವಗೀತೆ, ಜೀವನಚರಿತ್ರೆ ಮೊದಲಾದ ಪ್ರಕಾರಗಳು ಹುಟ್ಟಿದಂತೆ ನಾವೆಲ್ ಎಂಬ ಪ್ರಕಾರ ಕಾದಂಬರಿ ಎಂಬ ಹೆಸರಿನಿಂದ ಪ್ರಚುರವಾಯಿತು. ಆದರೆ ಇಂಗ್ಲೀಷಿನ ಯಾವ ಕಾದಂಬರಿ ಕನ್ನಡ ಸಾಹಿತ್ಯದಲ್ಲಿ ಅದರಲ್ಲೂ ಹೊಸಗನ್ನಡದ ಮೇಲೆ ನೇರ ಪ್ರಭಾವ ಬೀರಿತೆಂದು ತಿಳಿದಿಲ್ಲ. ಹೊಸಗನ್ನಡದಲ್ಲಿ ಕಾದಂಬರಿ ಮೂಡಿ ಬರಲು ಭಾಷಾಂತರಗೊಂಡ ಕಾದಂಬರಿಗಳೇ ಕಾರಣ. ಎಲ್ಲಕ್ಕೂ ಮೊದಲು ಸು.೧೮೪೨ರಲ್ಲಿಯೇ ಜಾನ್ ಬುನಿಯನ್ ನ ಪಿಲಗ್ರಿಮ್ಸ ಪ್ರೊಗ್ರೇಸ್ ಯಾತ್ರಿಕನ ಸಂಚಾರ ಎಂಬ ಕನ್ನಡ ನಾಮಹೊತ್ತು ಕಂಡುಬಂದಿದೆ. ಇದೇ ಕನ್ನಡದಲ್ಲಿ ಭಾಷಾಂತರಗೊಂಡ ಪ್ರಥಮ ಕಾದಂಬರಿ. ಆದರೆ ಬ.ವೆಂಕಟಾಚಾರ್ಯ ಬಂಗಾಳಿಯ ಬಂಕಿಮ ಚಂದ್ರರ ಕಾದಂಬರಿ ದುರ್ಗೇಶ ನಂದಿನಿಯನ್ನು ಕನ್ನಡಕ್ಕೆ ೧೮೭೫ರಲ್ಲಿ ಭ್ರಾಂತಿ ವಿಲಾಸ ಎಂಬ ಹೆಸರಿನಿಂದ ಭಾಷಾಂತರಿಸಿದರು. ಇದೇ ಕನ್ನಡದಲ್ಲಿ ಕಾದಂಬರಿಗಳ ಆರಂಭಕ್ಕೆ ನಾಂದಿ ಎಂದು ಹೇಳಬಹುದು.''[೧] ಎಂದಿರುವುದು ಅಷ್ಟು ಸೂಕ್ತವಲ್ಲ. ಯಾಕೆಂದರೆ ಹೊಸಗನ್ನಡದಲ್ಲಿ ಪಾಶ್ಚಾತ್ಯದ ಪ್ರಭೇದದಿಂದ ನಾವು ಕಾದಂಬರಿ ಎನ್ನುವ ಹೊಸ ರೂಪ ಪಡೆದಿದ್ದೇವೆ. ಅದರಲ್ಲಿ ಮುಖ್ಯವಾಗಿ ಎರಡು ಕಾದಂಬರಿಗಳು ಪ್ರಮುಖವಾದವುಗಳು. ಒಂದು Pilligrm Progress (ಯಾಂತ್ರಿಕನ ಸಂಚಾರ) ಇನ್ನೊಂದು ರೊಬಿನ್ ಸನ್ ಕ್ರೂಸೊ. ಆದರೆ, ಬಿ.ವೆಂಕಟಾಚಾರ್ಯರ ಅನುವಾದ ನಂತರದ್ದು. ಈ ಎರಡು ಕಾದಂಬರಿಗಳು ಮೊದಲು ಕನ್ನಡದಲ್ಲಿ ಬಂದಾಗ ಈಗ ಕಾದಂಬರಿ ಎಂದು ಕರೆಯಲ್ಪಡುವ ಯಾವ ಕೃತಿಗಳು ಜನ್ಮ ತಾಳಿದ್ದಿಲ್ಲ ಎನ್ನುವುದು ಸ್ಪಷ್ಟ. ಹೀಗಿದ್ದರೂ ಬಂಗಾಳದಿಂದ ಬಂದ ಭಾಷಾಂತರ ಕಾದಂಬರಿ ಪ್ರಥಮ ಅನ್ನುವುದು ಎಷ್ಟು ಸೂಕ್ತ?

'ಯಾಂತ್ರಿಕನ ಸಂಚಾರ' ಕಾದಂಬರಿ ಕುರಿತು. ಕನ್ನಡದಲ್ಲಿ ಕ್ರೈಸ್ತ ಸಾಹಿತ್ಯ ಹನಿಗತೆ. ಕಂಪ್ಯೂಟರ್ ಇತ್ಯಾದಿ ಪುಸ್ತಕದಲ್ಲಿ (ಪು.೯೦) ಹೀಗೆ ಬರೆದಿದ್ದಾರೆ. ''ಜಾನ್ ಬುನಿಯನ್ 'ಯಾಂತ್ರಿಕ ಸಂಚಾರ' ೧೮೪೭ರಲ್ಲಿ ತಲೆದೋರಿತೆನೋ ನಿಜ ಎಷ್ಟೆಂದರೂ ಅದು ಕ್ರೈಸ್ತ ಧಾರ್ಮಿಕ ಕೃತಿ, ಕಾದಂಬರಿ ಎಂಬ ಇಂದಿನ ಅರ್ಥ ಅದಕ್ಕೆ ಹೊಂದುವುದಿಲ್ಲ ಎಂದಿರುವರು. ಎಷ್ಟೆಂದರು ಕ್ರೈಸ್ತ ಧಾರ್ಮಿಕ ಕೃತಿ ಎನ್ನುವಲ್ಲಿ

ಇವರ ದೃಷ್ಟಿ ಕೋನವಾದರು ಏನು? ಕ್ರೈಸ್ತ ಕೃತಿ ಎಂದ ಮಾತ್ರಕ್ಕೆ ಅದನ್ನು ಹಗುರವಾಗಿ ಪರಿಗಣಿಸುವ ವೈದಿಕ ಮನೋದೃಷ್ಟಿಯೇ? ಅಥವಾ ಸಾಕಷ್ಟು ಮಿಶನರಿಗಳು ಸೇವೆಸಲ್ಲಿಸಿರುವುದನ್ನು ಆರ್ ನರಸಿಂಹಾಚಾರ್ಯರು ತಮ್ಮ ಕವಿಚರಿತ್ರೆಯಲ್ಲಿ ಏನನ್ನು ಬರೆಯದೆ, ಇರುವ ಸ್ವಭಾವವನ್ನು ತೋರಿಸುವುದೊ?

ಹಾವನೂರರ ಅಭಿಪ್ರಾಯ ಹೀಗಿದ್ದರೆ, ಜಾನ್ ಬುನ್ಯನನ ಕಾದಂಬರಿಗೆ, ಕಾದಂಬರಿ ಸ್ಥಾನ ವಿಲ್ಲವೆ? ಇಲ್ಲಿ ಚರ್ಚಿಸಬಹುದು.

"ರೆ, ವೀಗಲ್ ಅವರು ಭಾಷಾಂತರಿಸಿದ ಈ ಯಾಂತ್ರಿಕ ಸಂಚಾರದ ಬಗ್ಗೆ, ಡಾ.ರಂ.ಶ್ರೀ. ಮುಗಳಿಯವರು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಬರೆಯುತ್ತ "ಸುದೀರ್ಘ ಕಥೆ ಅಥವಾ ಕಾದಂಬರಿಯಾಗಿ ಕನ್ನಡದಲ್ಲಿ ಇದೇ ಮೊದಲನೆಯದಾಗಿ ಪರಿಣಮಿಸಿದೆ"[೧]ಎಂದು ಅಭಿಪ್ರಾಯ ಪಟ್ಟಿರುವರು. ಅಂದರೆ ಕಾದಂಬರಿ ೧೮೪೭ ರಿಂದಲೇ ಕನ್ನಡದಲ್ಲಿ ಆರಂಭವಾಯಿತೆಂದು ಒಂದು ದೃಷ್ಟಿಯಿಂದ ಹೇಳಬಹುದು. ಬಿ.ಶಂಕರಭಟ್ಟ ಮತ್ತು ಬಿ.ಎಂ.ಶರ್ಮಾ ಅವರು "ಯಾಂತ್ರಿಕನ ಸಂಚಾರವೆಂಬ ಹೆಸರಿನಿಂದ ಕನ್ನಡ ಗದ್ಯರೂಪಕ್ಕಿಳಿದ ಈ ಕೃತಿಗೆ ಹೊಸಗನ್ನಡ ಗದ್ಯ ಸಾಹಿತ್ಯದಲ್ಲಿ ವಿಶಿಷ್ಟವಾದ ಸ್ಥಾನವಿದೆ"[೨] ಎಂದು ನುಡಿದಿರುವರು.

"ಮುದ್ರಾಮಂಜೂಷವನ್ನು*[೧] ಬಿಟ್ಟರೆ ಸುದೀರ್ಘ ಕಥೆ ಅಥವಾ ಕಾದಂಬರಿಯಾಗಿ ಕನ್ನಡದಲ್ಲಿ ಇದೆ ಮೊದಲನೇಯದು."[೩] ಕೆಂಪುನಾರಾಯಣನಿಗೆ ಬೈಬಲ್ ಅನುವಾದ ತಲುಪಿರಲಿಕ್ಕೆ ಸಾಕು. ಇಂಗ್ಲೀಷ್ ಸಾಹಿತ್ಯದಲ್ಲಿ ಪ್ರಮುಖ ಕಾದಂಬರಿ ಎನಿಸಿದ ಯಾತ್ರಿಕನ ಸಂಚಾರ ಕ್ರೈಸ್ತ ಧಾರ್ಮಿಕ ಕೃತಿಯಾದ ಮಾತ್ರಕ್ಕೆ ಅದು ಸಾಹಿತ್ಯದ ಯಾವ ಪ್ರಕಾರಕ್ಕೂ ಹೊಂದುವುದಿಲ್ಲದೆ? ಹೊಂದುವುದಾದರೆ ಹಾವನೂರವರ ದೃಷ್ಟಿಯಲ್ಲಿ ಅದು ಕಥೆಯೇ? ಕಾದಂಬರಿಯೇ ತಿಳಿಯದು. ಯಮುನಾ ಪರ್ಯಾಟನ ಎಂಬ ಮರಾಠಿ ಕಾದಂಬರಿಯ ಕನ್ನಡಾನುವಾದವೇ ಕನ್ನಡದ ಪ್ರಥಮ ಅನುವಾದಿತ ಕಾದಂಬರಿಯೆಂದು ಹೇಳುವ ಉದ್ದೇಶವಿರುವುದರಿಂದಲೇ ಏನೋ ತಿಳಿಯದು.

ಕನ್ನಡ ಕಾದಂಬರೀ ಪ್ರಪಂಚಕ್ಕೆ ಇಂಗ್ಲೀಶ್ ಭಾಷೆ ಸಾಹಿತ್ಯಗಳ ಸಂಪರ್ಕವೇ. ಪ್ರಮುಖ ಪ್ರೇರಣೆಯೆಂಬುದು ಸರಿಯೇ. ಆ ಸಂಪರ್ಕವು ಒಂದು ವೇಳೆ ಬಾರದೆ ಹೋಗಿದ್ದರೆ ಹೊಸ ಕಾದಂಬರಿಗಳು

೧.ಕ.ಸಾ.ಚರಿತ್ರೆ, ರಂ.ಶ್ರೀ.ಮುಗಳಿ, ಪು.೧೯೩

೨. ನಮ್ಮ ಸಾಹಿತ್ಯ, ಬಿ.ಶಂಕರಭಟ್ಟ, ಪು.೧೯

೩. ಕನ್ನಡ ವಿಷಯ ವಿಶ್ವಕೋಶ, ಪು.೧೮೧

*[೧]ಮುದ್ರಾಮಂಜೂಷದ ಕರ್ತೃ ಕೆಂಪು ನಾರಾಯಣನಿಗಿಂತ ಮೊದಲೆ ಕೆಥೊಲಿಕ್ ಸಾಹಿತ್ಯ ಕನ್ನಡದಲ್ಲಿದೆ. ಬಳ್ಳಾರಿ ಬಾನ್‌ಹ್ಯಾಂಡ್ಸ್ ೧೮೧೨ರಲ್ಲಿ ಬೈಬಲ್ ಹೊ.ಬ.ನ್ನು ಕನ್ನಡಕ್ಕೆ ಭಾಷಾಂತರಿಸಿದ್ದ

ನಮ್ಮಲ್ಲಿ ಉದಯಿಸುತ್ತಿರಲಿಲ್ಲವೆಂದು ಹೇಳಬೇಕಿದ್ದಿತೆ? ಹಾಗಿಲ್ಲವೆನ್ನುವುದಕ್ಕೆ ಪಾಶ್ಚಾತ್ಯ ಸಂಪರ್ಕವೆಳ್ಳಷ್ಟೂ ಇದ್ದರದ ಮೇಲಣ ಮೂರು ಕೃತಿಗಳು ಸಾಕ್ಷಿಯಾಗಿವೆ." ಹಾಗೂ "ಇಂಗ್ಲೀಷ್ ಭಾಷೆಯ ಸಂಪರ್ಕದ ಗಂಧವೂ ಇಲ್ಲದಿದ್ದ ಕಾಲದಲ್ಲಿ ಸ್ವತಂತ್ರವಾಗಿ ರಚಿತವಾದ ಸತ್ವಪೂರ್ಣ ಕಥಾನಕಗಳಿವು"*[೧] ಎಂದು ಶ್ರೀನಿವಾಸ ಹಾವನೂರರು ಅಭಿಪ್ರಾಯಪಟ್ಟಿರುವರು. ಈ ಹೇಳಿಕೆ ಒಪ್ಪಲು ಸಮ್ಮತವಾದುದಲ್ಲ.

"ನಾಟಕದಂತೆಯೇ ಈ ಕಾಲದಲ್ಲಿ ಹೊಸದಾಗಿ ರೂಪುಗೊಂಡ ಸಾಹಿತ್ಯ ಪ್ರಕಾರ ಕಾದಂಬರಿ. ೧೯ನೇ ಶತಮಾನದವರೆಗೆ ಈ ರೀತಿಯ ಸಾಹಿತ್ಯ ಕನ್ನಡದಲ್ಲಿರಲಿಲ್ಲ. ಚಿಕ್ಕದೇವರಾಜು ಬಿನ್ನಪ. ಮುದ್ರಾಮಂಜೂಷ ಮೊದಲಾದವು ಆ ಸಾಹಿತ್ಯ ಸೃಷ್ಟಿಗೆ ಅಡಿಗಲ್ಲಾಗಬಹುದಾದ ಗದ್ಯ ರೀತಿಯನ್ನು ಬಳಸಿಕೊಂಡು ಬಂದಿದ್ದರೂ ಆಂಗ್ಲೇಯರ 'ನಾವೆಲ್' ಮಾದರಿಯ ಕಾದಂಬರಿಗಳು ಕನ್ನಡದಲ್ಲಿ ಉತ್ಪನ್ನವಾದುದು ಆಂಗ್ಲ ಸಂಸ್ಕೃತಿಯ ಸಂಸ್ಪರ್ಶವುಂಟಾದ ಮೇಲೆಯೇ."[೧] ನಂತರ ಜನ ಜೀವನದ ಆಶೋತ್ತರಗಳನ್ನು ಯಥಾವತ್ತಾಗಿ ಪ್ರತಿಬಿಂಬಸುವ ಸಾಧನ ಕಾದಂಬರಿ ಎಂಬುದನ್ನು ಅರಿತು ಭಾರತೀಯರು ಆ ಕಾಲದಲ್ಲಿ ಕೈಯಿಕ್ಕಿದರು.

ಹೊಸಗನ್ನಡ ಗದ್ಯವು ೧೮೧೨ರಿಂದಲೇ, ಮೀಶನರಿಗಳಿಂದ ಕನ್ನಡದಲ್ಲಿ ಬೈಬಲ್ ಭಾಷಾಂತರದ ಮೂಲಕ ಕಾಲಿಟ್ಟಿತು. ಇದಕ್ಕೂ ಪೂರ್ವದಲ್ಲಿ ಕೆಥೋಲಿಕರಿಂದ ಜೆಸುಯಿಟ್ಟಿ ಪಾದ್ರಿಗಳಿಂದ ಕೃತಿಗಳು ರಚನೆಗೊಂಡಿರುವುದು ದಾಖಲೆಯೊಂದಿಗೆ ಕಂಡು ಬರುತ್ತಿದೆ. ಹಾಗೂ ಮಿಶನರಿಗಳಿಂದ ಮತೀಯ ಸಾಹಿತ್ಯ ಲೇಖನ-ಪತ್ರ-ಕಥೆ-ವಿಮರ್ಶೆ ರೂಪದಲ್ಲಿ ಪ್ರಾರಂಭವಾಗಿತ್ತು. ಹೀಗಿರುವಾಗ ಇಂಗ್ಲೀಷ ಭಾಷೆಯ ಸಂಪರ್ಕದ ಗಂಧವೂ ಇಲ್ಲದಿದ್ದ ಕಾಲದಲ್ಲಿ ಎಂದು ಹಾವನೂರವರು ಹೇಳಿರುವುದು ಎಷ್ಟು ಸೂಕ್ತ?

ಪಾಶ್ಚಾತ್ಯ ಸಂಸರ್ಗವಾಗುವುದಕ್ಕೆ ಮೊದಲೇ ಕನ್ನಡದಲ್ಲಿ ಕಾದಂಬರಿಗಳು ಸ್ವತಂತ್ರವಾಗಿ ಇರಲಿಲ್ಲ. ಎಂಬುದು ಸ್ಪಷ್ಟ 'ಕಲಾವತಿ ಪರಿಣಯ' 'ಸೌಗಂಧಿಕಾ ಪರಿಣಯ' ಮುದ್ರಾಮಜೂಷಗಳು. ಹೊಸಗನ್ನಡ ಗದ್ಯ ಶೈಲಿಯಿಂದ ವಿಭಿನ್ನವಾದವುಗಳು ಇವು ಪೂರ್ವದ (ಹಳೆಗನ್ನಡ-ಸಂಸ್ಕೃತ) ಕೃತಿಗಳನ್ನು ಆಧರಿಸಿ ಗದ್ಯರೂಪಕ್ಕೆ ರೂಪಾಂತರಗೊಂಡ ಶೈಲಿಯನ್ನು ಪ್ರತಿನಿಧಿಸುತ್ತವೆ. ಈಗಿನ ಹೊಸಗನ್ನಡ ಅದರಲ್ಲೂ ಮುಖ್ಯವಾಗಿ ಕಾದಂಬರಿ ವಸ್ತುಗಳನ್ನು ಹೊಂದದೆ ಹಳೆಗನ್ನಡದ ಗದ್ಯದ ಛಾಯೆಯಲ್ಲಿಯೇ ಬರೆಯಲ್ಪಟ್ಟಿವೆ. ಹೀಗಾಗಿ ಇಂದಿನ ಕಾದಂಬರಿ ಸಾಹಿತ್ಯಕ್ಕೆ ಪಾಶ್ಚಾತ್ಯರ ಸಂಪರ್ಕವೇ ಮುಖ್ಯ ಕಾರಣ ಎಂಬುದನ್ನು ಒಪ್ಪಿಕೊಳ್ಳುವ ಅನಿವಾರ್ಯತೆ ಕಂಡುಬರುವುದು.

---

*[೧]ಕ.ಕ್ಯೆ.ಹ.ಕಂ.ಇತ್ಯಾದಿ ಪು.೯೦

೧. ಸಾಹಿತ್ಯ ಭಾರತಿ, ಅನಂತರಂಗಾಚಾರ್ಯ, ಪು.೩೮೦

೪.೫. ಹೊಸಗನ್ನಡ ಪದ್ಯ ಸಾಹಿತ್ಯಕ್ಕೆ ಕ್ರೈಸ್ತರ ಕೊಡುಗೆ

ವ್ಯಾಪಾರಕ್ಕಾಗಿ ಭಾರತಕ್ಕೆ ಬಂದ ಆಂಗ್ಲರು ಈ ದೇಶದ ರಾಜಕೀಯದಲ್ಲಿ ಧುಮುಕಿ ಇಡೀ ಭಾರತವನ್ನು ತಮ್ಮ ವಶಮಾಡಿಕೊಳ್ಳುವಲ್ಲಿ ಸಫಲತೆಯನ್ನು ಸಾಧಿಸಿದರು. ಹಾಗೆಯೇ ಧಾರ್ಮಿಕ ಕ್ಷೇತ್ರಕ್ಕೂ ಕೈಹಾಕಿದವರೆಂದು ತಿಳಿದು ಬಂದರೂ, ಆಡಳಿತಗಾರರು ಮಿಶನರಿಗಳಿಗೆ ಧರ್ಮಪ್ರಚಾರಗೊಳಿಸುವಲ್ಲಿ ಸಹಕರಿಸದೇ ಇದ್ದದ್ದು ಅನೇಕ ಸಂದರ್ಭಗಳಿಂದ ಗ್ರಹಿಸಬಹುದಾಗಿದೆ.

ಮಿಶನರಿಗಳು ಧರ್ಮಪ್ರಚಾರಕ್ಕಾಗಿಯೇ ಕನ್ನಡ ಕಲಿತರೆನ್ನುವ ಮಾತು ಎಲ್ಲೆಡೆಯಲ್ಲಿ ಕೇಳಿ ಬರುತ್ತಿರುವುದು ಸಹಜ, ಕೇವಲ ಕನ್ನಡ ಕಲಿತರು ಎನ್ನುವ ಬದಲು ಅವರು ಭಾರತೀಯ ಭಾಷೆಗಳನ್ನು ಅಧ್ಯಯನಿಸಲು ಪ್ರಾದೇಶಿಕ ಭಾಷೆಯನ್ನು ಕಲಿತರೆನ್ನುವಲ್ಲಿ ಹೆಚ್ಚು ಸಮಂಜಸತೆ ಕಂಡುಬರುವುದು. ಅವರಿಗೆ ಕೇವಲ ಧರ್ಮ ಪ್ರಚಾರಕ್ಕಾಗಿ ಭಾಷೆ ಕಲಿಯುವ ಇಚ್ಛೆ ಇದ್ದರೆ ಪೂರ್ವ ಕೃತಿಗಳ ಸಂಶೋಧನೆ ವಿಮರ್ಶೆ ಹಾಗೂ ವ್ಯಾಕರಣ ಶಬ್ದಕೋಶಗಳ ರಚನೆ ಇನ್ನು ಮುಂತಾದ ಸಾಹಿತ್ಯಕಾರ್ಯಗಳ ಅವಶ್ಯಕತೆ ಕಂಡು ಬರುತ್ತಿರಲಿಲ್ಲ.

ಅನೇಕ ಮಿಶನರಿಗಳಲ್ಲಿ ಇದ್ದ ಭಾಷಾ ಜ್ಞಾನ-ಪ್ರೌಢಿಮೆ ತೂಗಿ ನೋಡಿದರೆ ಮಾತೃ ಭಾಷೆ ಕನ್ನಡವಾಗಿದ್ದವರಿಗೆ ಶಬ್ದ ಸಂಪತ್ತು ಎಷ್ಟಿತ್ತೋ ಅದಕ್ಕೂ ಅಧಿಕವಾದ ಶಬ್ದ ಸಂಪತ್ತು ಭಾಷಾಜ್ಞಾನ ಬಹು ಭಾಷಾಪ್ರಜ್ಞೆ ಅವರಲ್ಲಿದ್ದದ್ದು ತಿಳಿದುಬರುವುದು.

ಬೈಬಲ್ ಸಾಹಿತ್ಯ, ಸಾಹಿತ್ಯದ ಎಲ್ಲ ಪ್ರಕಾರಗಳನ್ನು ಅಳವಡಿಸಿಕೊಂಡು ಬಂದಿರುವಂತಹುದು. ಹೀಗಾಗಿ ಇದೊಂದು ಜಾಗತಿಕ ಮಹಾಕೃತಿ ಎಂದು ಕಂಡುಬರುತ್ತದೆ. ಕನ್ನಡದಲ್ಲಿ ಬೈಬಲ್ ರೂಪ ಪಡೆಯಬೇಕಾದರೆ ತುಂಬಾ ಶ್ರಮಿಸಬೇಕಾಗಿದ್ದಿತು. ಕಾರಣ ಬ್ರಿಟೀಷರು ಮೊದಲು ಕನ್ನಡ ಕಲಿತು ಬೈಬಲ್‌ನ್ನು ಕನ್ನಡಕ್ಕೆ ತರ್ಜುಮೆಗೊಳಿಸಬೇಕಾಗಿದ್ದುದು ಮಹತ್ವವಾಗಿ ತೋರದಿರಬಹುದು. ಆದರೆ ಮಿಶನರಿಗಳು ಬೈಬಲ್‌ನ್ನು ಹೊಸಗನ್ನಡ ರೂಪದಲ್ಲಿ ಹೊರತರ ಬಯಸಿದುದು ಸಾಹಸದ ಮಾತೇ ಸರಿ. ಇದು ಅವರ ಅನಿವಾರ್ಯತೆಯು ಹೌದೆಂದರೆ ತಪ್ಪಾಗಲಾರದು. ಆದರೆ ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯದಲ್ಲಿ ಹೊಸಗನ್ನಡ ರೂಪದ ಯಾವ ಕುರುಹು ಸ್ಪಷ್ಟವಾಗಿ ಕಾಣಸಿಗುತ್ತಿರಲಿಲ್ಲ. ಹೊಸಗನ್ನಡದ ಯಾವ ಸಾಹಿತ್ಯ ಪ್ರಕಾರಗಳೂ ಇನ್ನೂ ತಲೆ ಎತ್ತಿರಲಿಲ್ಲ. ಚಂಪೂ ಮಿಶ್ರಿತ ಗದ್ಯಗಳು ಹಾಗೂ ಕಾವ್ಯಾತ್ಮಕವಾದ ಹಳೆಗನ್ನಡ ಗದ್ಯಗಳು ಮಾತ್ರ ಇದ್ದವು. ಇಂತಹ ಸ್ಥಿತಿಯಲ್ಲಿ ಹೊಸಗನ್ನಡ ಎಂಬ ಕನ್ನಡದ ರೂಪ ಶೃಂಗಾರಗೊಂಡದ್ದು, ಪಾಶ್ಚಾತ್ಯ ಪೂಜಾರಿಗಳು ಭಾರತೀಯ ವಿದ್ಯಾದೇವತೆಯನ್ನು ಪಾಶ್ಚಾತ್ಯರ ಆಭರಣಗಳಿಂದ ಶೃಂಗರಿಸಿದರೆನೋ ಎಂಬಂತೆ ರೆ.ವಿಲಿಯಂ ಕೇರಿ ೧೮೦೯ರಲ್ಲಿ ಹೊಸಗನ್ನಡ ಗದ್ಯ ಶೈಲಿಯಲ್ಲಿ ಬೈಬಲ್ ಭಾಗವನ್ನು ಹೊರತರುವ ಪ್ರಯತ್ನ ಮಾಡಿದನು.

ತದನಂತರದಲ್ಲಿ ಬಳ್ಳಾರಿಯ ಜಾನ್ ಹ್ಯಾಂಡ್ಸ್ ಅವರು ಹೊಸಗನ್ನಡ ಗದ್ಯಶೈಲಿಯ ಪ್ರಪ್ರಥಮವಾಗಿ ಹೊಸಕಾಣ್ಕೆ ಎಂಬಂತೆ ೧೮೧೨ರಲ್ಲಿ ಹೊರತಂದರು ಎಂಬುದನ್ನು ಈ ಹಿಂದೆ ನೋಡಿದ್ದೇವೆ.

ಕ್ರೈಸ್ತ ಧಾರ್ಮಿಕ ವಿಧಿಗಳು ನಡೆಯುವಲ್ಲಿ ಸಂಗೀತ ಪ್ರಮುಖ ಪಾತ್ರವಹಿಸುವುದು ರೂಢಿ. ಹೀಗಾಗಿ ಭಾರತದಲ್ಲಿ ತಮ್ಮ ಧಾರ್ಮಿಕ ಕಾರ್ಯ ಪ್ರಾರಂಭಿಸಿದಂದಿನಿಂದ ಅವರು ತಮ್ಮ ಭಾಷೆಯ ಸಂಗೀತವನ್ನು, ಭಾರತೀಯ ಭಾಷೆಯಲ್ಲಿ ಅಳವಡಿಸುವ ಪ್ರಯತ್ನ ಕಂಡುಬರುವುದು. ಚರ್ಚ ಹಾಗೂ ಮನೆಗಳಲ್ಲಿ ಯಾವುದೇ ಧಾರ್ಮಿಕ ವಿಧಿ-ವಿಧಾನಗಳು ಜರುಗಬೇಕಾದರೆ ಮೊದಲು ಸಂಗೀತ ಸಾಗಲೇಬೇಕು. ಯಾರು ಎಷ್ಟು ಚಂದ-ಸುಂದರ ಹಾಡುವವರೆಂಬ ಅಂಶ ಇಲ್ಲಿ ಮುಖ್ಯವಲ್ಲ. ಎಲ್ಲರೂ ಒಟ್ಟಿಗೆ ದೇವರ ಗುಣಗಾನ ಮಾಡುವುದು ಪ್ರಾಮುಖ್ಯ. ಇಲ್ಲಿ ಸಾಮೂಹಿಕ ಗೀತೆ ತನ್ನ ಹೆಚ್ಚಿನ ಪಾತ್ರವಹಿಸುವುದು ಕಂಡುಬರುವುದು.

ಹೀಗೆ ಅವಶ್ಯಕತೆಯನ್ನನುಸರಿಸಿ ಹುಟ್ಟುವ ಗೀತಗಳು ಆಯಾ ಸಾಂದರ್ಭಿಕ ರಮ್ಯತೆ-ಗೇಯತೆಯನ್ನು ಪಡೆಯುವುದು ಕಂಡುಬರುವುದು. ಹಾಗೆ ಸ್ವತಂತ್ರವೋ ಇಲ್ಲಾ ಅನುವಾದವೋ ಅಥವಾ ಅನುಕರಣೆಯೋ ಒಟ್ಟಿನಲ್ಲಿ ಕನ್ನಡದಲ್ಲಿ ಹೊಸಗನ್ನಡ ಗೀತೆಗಳಾಗಿ ಮೂಡಿ ಬಂದವು. ಹೀಗೆ ಹೊರಹೊಮ್ಮಿದ ಗೀತೆಗಳನ್ನು ಕ್ರೈಸ್ತ ಗೀತೆಗಳೆಂದು ಕರೆಯಲಾಗುತ್ತದೆ. ಇದು “ಒಂದು ಪರಂಪರೆಯಾಗಿಯೇ ಬೆಳೆಯಿತು. ನವೋದಯ ಕಾಲದಲ್ಲಿ ಕನ್ನಡ ಸಾಹಿತ್ಯಕ್ಕೆ ವಿಶಿಷ್ಟ ಕೊಡುಗೆಯಾಯಿತು”.[೧] ಕನ್ನಡ ಭಾಷೆಗೆ ಹಾಗೂ ಸಾಹಿತ್ಯಕ್ಕೆ ಹೊಸದಾದ ಆಯಾಮವನ್ನು ನೀಡಿದ ಕ್ರೈಸ್ತ ಗೀತೆ ತನ್ನದೇ ಆದ ವಿಶಿಷ್ಟತೆಯಿಂದ ಕೂಡಿದೆ.

ಜರ್ಮನ್ ಹಾಗೂ ಇಂಗ್ಲೆಂಡ್ ಮಾದರಿಯ ಇಂಗ್ಲೀಷ್ ಹಾಗೂ ಜರ್ಮನ್ ಭಾಷಾ ಗೀತೆಗಳು ಕೇವಲ ಅನುವಾದವನ್ನು ಸೃಷ್ಟಿಸದೇ ಗಾನದ, ಲಯ-ನಾದ-ತಾಳ ಹಾಗೂ ರಮ್ಯತೆಯನ್ನು ಕನ್ನಡದ ಗೀತ ಪ್ರಕಾರಗಳಲ್ಲಿ ಸಂಗಮಿಸಿತು. ಇದರ ತತ್ಫಲವೇ ಕನ್ನಡ ಕಾವ್ಯಲೋಕದಲ್ಲಿ ಹೊಸತನದ ಅಲೆಗಳು ಉದ್ಭವಿಸಲು ಪ್ರಾರಂಭಿಸಿದವು. ಈ ಕಾರ್ಯವನ್ನು ಬಹುನಿಷ್ಠೆಯಿಂದ ಮೊದಲು ಪ್ರಾರಂಭಿಸಿದವರು ಮಿಶನರಿಗಳೇ ಕನ್ನಡಸಾಹಿತ್ಯ ಚರಿತ್ರೆಯಲ್ಲಿ ಗುರುತಿಸುವ ಬಿ.ಎಂ.ಶ್ರೀ ಮುಂತಾದವರ ಗೀತ ಪ್ರಕಾರಗಳಿಗಿಂತ ಪೂರ್ವದಲ್ಲಿ ಎಷ್ಟೋಂದು ನೂತನ ಗೀತ ಪ್ರಕಾರಗಳು ಮಿಶನರಿಗಳ ಕೊಡುಗೆ ಎಂಬುದನ್ನು ಮರೆಯುವಂತಿಲ್ಲ.

ಅಳುವ ಮಕ್ಕಳಿಗೆ ಜೋಗುಳದ ಹಾಡಿನ ಪ್ರಯೋಜನವೇನೆಂಬುದನ್ನು ವಿವರಿಸಬೇಕಾಗಿಲ್ಲ. ಹೇಗೆ ಮಗುವಿಗೆ ಶಬ್ದಾರ್ಥಗಳಿಗಿಂತ ನಾದ-ಲಯ ಮುಖ್ಯವೋ ಹಾಗೆ ಮಿಶನರಿಗಳು ಮೊದಲು ಇದೇ ಮಾದರಿಯಲ್ಲಿ ಗೀತೆಗಳನ್ನು ನೀಡಿರಲಿಕ್ಕೂ ಸಾಕು!

---

೧. ಕ.ಕ್ರೈ.ಗೀ.ಅಧ್ಯಯನ, ಪಿ.ಎಸ್.ಗೌಡರ್, ಪು.೧೩

ಜರ್ಮನ್ ಹಾಗೂ ಇಂಗ್ಲೀಷ್ ಗೀತೆಗಳನ್ನು ಕನ್ನಡಿಸುವ ಕಾರ್ಯ ಅಷ್ಟು ಸುಲಭವೇನಲ್ಲ. ಆ ಭಾಷೆಯ ಹಾಡುಗಳಲ್ಲಿ ಏಕಮಾತ್ರಾತ್ಮಕವಾದ ಅನೇಕಾಕ್ಷರ ಸಂಯೋಗಜನ್ಯ ಶಬ್ದಗಳೇ ಹೆಚ್ಚು. ಸಾಮಾನ್ಯವಾಗಿ ಅವುಗಳನ್ನು ಕನ್ನಡಿಸಿದರೆ ಒಂದು ಮಾತ್ರೆಯ ಸ್ಥಾನದಲ್ಲಿ ಅನೇಕ ಮಾತ್ರೆಗಳು ಬರುವುದರಿಂದ, ಮೂಲದಲ್ಲಿರುವ ಸ್ವರಗಳು ಸಾಲದೇ ಹೋಗುವುವು. ಸ್ವರಸಂಕೋಚದ ದೆಸೆಯಿಂದ ಕೆಲವು ಕ್ಲಿಷ್ಟ ಶಬ್ದಗಳನ್ನು ಕನ್ನಡಿಸುವಲ್ಲಿ ಹಳೆಗನ್ನಡ ಮಾರು ಹೊಗಬೇಕಾದ ಪ್ರಸಂಗದ ಅನಿವಾರ್ಯತೆ ಕಂಡುಬಂದಾಗಲೆಲ್ಲ, ಮಿಶನರಿಗಳು ಹೊಸಗನ್ನಡದೆಡೆಗೆ ಒಲವು ತೋರಿದುದು ಶ್ಲಾಘನೀಯವಾದುದು. ಅವರ ಅಂದಿನ ಪ್ರಯತ್ನ ಇಂದು ನಮ್ಮೆಲ್ಲರ ಭಾಗ್ಯವೆಂದರೆ ತಪ್ಪಾಗಲಾರದು.

ಬೈಬಲ್ ಸಾಹಿತ್ಯಕ್ಕೆ ಪೂರಕ ಸಾಹಿತ್ಯವೆನೋ ಎಂಬಂತೆ ಬೈಬಲ್ ಆರಾಧನೆಗೆ ಸಂಗೀತ ಅಳವಡಿಸಿಕೊಳ್ಳುವುದು ಅದರ ಧಾರ್ಮಿಕ ಸಂಸ್ಕೃತಿಯಾಗಿದ್ದಿತು. ದೇವಾಲಯದಲ್ಲಿ ಬೈಬಲ್ ಪಠಣಕ್ಕೆ ಹಾಗೂ ಬೋಧನೆಗೆ ಎಷ್ಟೋ ಮಹತ್ವವಿದೆಯೋ ಅದರಷ್ಟೇ ಸಂಗೀತಕ್ಕೂ ಮಹತ್ವವಿದೆ. ಈ ಕಾರಣದಿಂದ ಸಂಗೀತಕ್ಕಾಗಿ ಅವರು ಕನ್ನಡ ಪದ್ಯ ರಚನೆಗೆ ಮುಂದಾದರು. ಇದಕ್ಕಾಗಿ ತಮ್ಮ ಧಾರ್ಮಿಕ ಮೂಲ ಪದ್ಯಗಳನ್ನು ಭಾಷಾಂತರಿಸುವ ಪ್ರಯತ್ನಮಾಡಿ ಸು-೧೩೧೦ ಪದ್ಯಗಳನ್ನು ಇಂಗ್ಲೀಷ ಶೈಲಿಯ ಲಯ-ತಾಳ (Rhymos-Rhythms) ಪಾಶ್ಚಾತ್ಯ ಧಾಟಿಯೊಂದಿಗೆ ಹೊಸ ಗೀತಗಳನ್ನು ಹೊರ ತಂದರು. ಇವರಲ್ಲಿ ಮೊದಲಿಗರೆಂದರೆ ರೇ.ವೀಗಲ್ (ವ್ಯಗಲ್) ಹಾಗೂ ಮೋಗ್ಲಿಂಗ್ ನಂತರದಲ್ಲಿ ಸು. ಐವತ್ತೆರಡು ಜನ ಕನ್ನಡ ಸಂಗೀತದ ಕಾರ್ಯವನ್ನು ಎಸಗಿದ್ದುದು ಕಂಡುಬರುವುದು.

ಧರ್ಮಬೋಧನೆ ಹಾಗೂ ಚರ್ಚಗಳಲ್ಲಿ ಬಳಸಲು ಜರ್ಮನ್ ಭಾಷೆಯ ಪದ್ಯಗಳನ್ನು ಅದೇ ಧಾಟಿಯೊಂದಿಗೆ ಅನುವಾದಿಸುವ ಕಾರ್ಯನಡೆಯಿತು. ಇದನ್ನು ವೈಗಲ್ ಹಾಗೂ ಮೋಗ್ಲಿಂಗ್‌ರು ಮೊದಲು ಕೈಕೊಂಡರು. "ಇವರಲ್ಲಿ ಯಾರು ಮೊದಲಿಗರೆಂಬುದನ್ನು ಖಚಿತವಾಗಿ ಹೇಳುವಂತಿಲ್ಲ"[೧] ಎಂದು ಶ್ರೀ ಹಾವನೂರವರು ಅಭಿಪ್ರಾಯ ಪಟ್ಟಿದ್ದಾರೆ.

ಪದ್ಯರಚನೆ ವೈಗಲ್ ನಿಂದಲೆ ಮೊದಲು ಪ್ರಾರಂಭವಾಯಿತೆಂದು ಹೇಳಬಹುದು. ಯಾಕೆಂದರೆ ವೈಗಲ್ ೧೮೩೫-೩೮ರ ಅವಧಿಯಲ್ಲಿ ತಿಬಿಂಜನ್ ವಿಶ್ವವಿದ್ಯಾಲಯದಲ್ಲಿ ಅಭ್ಯಾಸ ಮಾಡಿದಾಗ ಅಲ್ಲಿ ಅರಬ್ಬಿ ಹಾಗೂ ಸಂಸ್ಕೃತಗಳು ಇದ್ದವೆಂಬುದು ತಿಳಿದುಬರುವುದು. (ವೈಗಲ್‌ನು) ಭಗವದ್ಗೀತೆಯ ಅನುವಾಸದಲ್ಲಿ ಜಾನ್ ಗ್ಯಾರಟ್ಟನಿಗೆ ಸಹಾಯ ಸಲ್ಲಿಸಿದವನು ಈತನೆ. ಸಂಸ್ಕೃತ ಹಾಗೂ ಕನ್ನಡದಲ್ಲಿ ವ್ಯಗಲ್‌ನು ಮೊದಲಿನಿಂದ ಪರಿಣಿತಿ ಪಡೆದವನಾಗಿದ್ದನೆಂದು ಆತನು ಅನುವಾದಿಸಿದ ಯಾತ್ರಿಕನ ಸಂಚಾರದ ಕೃತಿಯಲ್ಲಿಯ ಪದ್ಯಗಳ ಮೂಲಕ ತಿಳಿದು ಬರುವುದು. ಇಲ್ಲಿನ ಅನೇಕ ಪದ್ಯಗಳು ಕೇವಲ ಪಾಶ್ಚಾತ್ಯರ ಧಾಟಿಯಲ್ಲಿರದೆ ಆರ್ಯವರ್ತದ ಶೈಲಿಯಲ್ಲಿವೆ.

---

೧. ಹೊ.ಅ.ಶ್ರೀ.ಹಾ., ಪು.೩೮೬

ಪಾಪದ ಹೊರೆಯಿಂದೀ ಪರಿಯಂತರ
ತಾಪವ ಗೊಂಡೆನು ಹೋಯಿತದು
ಆಪತ್ತಿಲ್ಲಿದ ಸುಖವೆನಗಾಯಿತು
ಈ ಪರಿಶುದ್ಧ ಸ್ಥಳವೇನೋ.

ವೈಗಲ್‌ನ ಅನುವಾದವನ್ನು ಆತನ ಆ ಸಾಂದರ್ಭೋಚಿತವಾದ ವಿದ್ವತ್ತನ್ನು ಮೋಗ್ಲಿಂಗನು ಮುಕ್ತಕಂಠದಿಂದ ಶ್ಲಾಘಿಸಿದ್ದಾನೆ. "He had a peculias gift in tramslating. He did not like to translate quite literally-But he entered. So Thorougly into The Spirit and tasti of the original before him and had so correct on instinct in Seizing the appropriate Materials from the Stores of the Sacred. languages for reconstructing the building as it were. on new grownd that if he did not produce phologrophs (which too offen look lifeless througts of course correct) he gave speaking likenesses..."[೧]

ಈ ಮೇಲಿನ ಅಂಶಗಳನ್ನು ಗಮನಿಸಿ ಮೋಗ್ಲಿಂಗನಿಂಗಿತ ವೈಗಲ್ ಸಂಸ್ಕೃತ-ಕನ್ನಡದಲ್ಲಿ ಪಾಂಡಿತ್ಯ ಪಡೆದವನು ಮಾತ್ರವಲ್ಲ ಈತನೇ ಮೊದಲಿಗನೆಂದರೆ ತಪ್ಪಾಗಲಾರದು.

"ಕವಿತೆಯು ದೇಶೀಯರ ನೆಚ್ಚಿನ ಸಾಹಿತ್ಯ ಪ್ರಕಾರವಾಗಿದ್ದು, ಅದರ ಮೂಲಕ ನಾವು ಸ್ವಮತ ತತ್ವಗಳನ್ನು ಹರಡಬಹುದಲ್ಲವೆ"[೨] ಎಂದು ಕ್ರಿ.ಶ.೧೮೫೮ರಲ್ಲಿಯೇ ರೈಸರವರು ಅಭಿಪ್ರಾಯಪಟ್ಟಿರುವುದನ್ನು ಗಮನಿಸಿದರೆ. ಮತಪ್ರಚಾರಕ್ಕೆ ಕವಿತೆಯನ್ನು ಬಳಸಲು ಇಚ್ಛಿಸಿರುವುದರಿಂದಲೇ ನಾವು ಪಾಶ್ಚಾತ್ಯರಿಂದ ಹೊಸಗನ್ನಡ ಪದ್ಯದ ಶೈಲಿಯನ್ನು ಪಡೆಯುವಂತಾಗಿದೆ.

ಕನ್ನಡಸಾಹಿತ್ಯ ಲೋಕದ ಪದ್ಯಭಾಗವು ತಾವು ಬಳಸುವ ಹೊಸಪದ್ಯದ ಶೈಲಿಯಿಂದ, ಶ್ರೀಮಂತವಾಗುತ್ತದೆಂಬ ಪ್ರಜ್ಞೆಯನ್ನು ಅಂದಿನ ಮಿಶನರಿಗಳು ಹೊಂದಿದ್ದರೆಂಬುದು ಕಂಡುಬರುವುದು. "ಕರ್ನಾಟಕ ದೇಶದಲ್ಲಿಯ ಕ್ರೈಸ್ತರು ಉಪಯೋಗಿಸುವ ಕೆಲವು ದೇವತಾ ಸ್ತೋತ್ರಗಳನ್ನು ಈ ಸಂಗ್ರಹದಲ್ಲಿ ಹಾಕದಿದ್ದರೆ. ಈ ಕಾವ್ಯ ಸಂಗ್ರಹವು ಪರಿಪೂರ್ಣವಾಗುವುದಿಲ್ಲವೆಂದು ತೋರುತ್ತದೆ. ಕನ್ನಡದಲ್ಲಿ ಇದು ಹೊಸ ರೀತಿಯ ಕಾವ್ಯ. ಈ ದೇವತಾ ಸ್ತೋತ್ರಗಳು ಇಂಗ್ಲೀಷ್, ಜರ್ಮನ್ ಮುಂತಾದ ಭಾಷೆಗಳಲ್ಲಿಯ ಛಂದಸ್ಸಿನಂತೆಯೇ ಇವೆ. ಆದ್ದರಿಂದ ಕನ್ನಡ ಪಂಡಿತರಿಗೆ ಕನ್ನಡ ಭಾಷೆ ಹಾಗೆ ವಿಶಾಲವಾಗಿ ಬೆಳೆಯಬಲ್ಲದೆಂಬುದನ್ನು ನೋಡುವ ಕುತೂಹಲವನ್ನು ನಿಜವಾಗಿಯೂ ಕೆರಳಿಸುವಂತಿದೆ[೩]

೧. ಕ.ಭಾ.ಮಿಶನ್, ರೆ.ಜೆ.ಎಂ.ಜೋಗುಳ, ಪು.೧೯೭

೨. ಹೊ.ಅ.ಶ್ರೀ.ಹಾ., ಪು.೧೦೪

೩. Canarese poetical Anthology Rev.G.worth Preface, Pp.9

ಎಂದು ರೆ.ಜಿ.ವರ್ಥರವರು ಹೇಳುವುದನ್ನು ನಾವು ಒಪ್ಪಿಕೊಳ್ಳಬಹುದೇನೋ ಎಂದೆನಿಸುವುದು. ಕಾರಣ ಹೊಸ ರೀತಿಯ ಕಾರ್ಯದ ಆರಂಭ ಮಿಶನರಿಗಳಿಂದಲೇ ಎಂಬುದನ್ನು ನಾವು ಮರೆಯುವಂತಿಲ್ಲ.

ರಂ.ಶ್ರೀ.ಮುಗಳಿಯವರಿಂದ ಹಿಡಿದು ಎಲ್ಲ ಕವಿಚರಿತೆಕಾರರು ಹೊಸಗನ್ನಡ ಕವನಗಳ ಪ್ರವರ್ತಕರ್ತ ಬಿ.ಎಂ.ಶ್ರೀಕಂಠಯ್ಯನವರನ್ನೇ ಗುರುತಿಸುವರು. ಹೊಸಗನ್ನಡ ಪದ್ಯರೂಪ ಪಡೆಯುವಲ್ಲಿ. ಬಿ.ಎಂ.ಶ್ರೀಗಳೇ ಪ್ರಮುಖರೇ? ಎನ್ನುವುದನ್ನು ನೋಡುವುದಾದರೆ, ಶ್ರೀಯವರ ಜನನ. ೧೮೮೪ ಜನವರಿ ೩ರಂದು, ಇವರು ಹುಟ್ಟುವುದಕ್ಕೆ ಪೂರ್ವದಲ್ಲಿ (ಸು.೪೦ ವರ್ಷ ಮೊದಲೇ)ಯೇ ಹೊಸಗನ್ನಡ ಕಾವ್ಯ. ಅನೇಕ ಪದ್ಯಗಳ ರೂಪದಲ್ಲಿ ಮಿಶನರಿಗಳಾದ ರೆ.ವೈಗಲ್ ಹಾಗೂ ಮೋಗ್ಲಿಂಗ್ ರವರಿಂದ ಸಾಕಷ್ಟು ಪ್ರಮಾಣದಲ್ಲಿ ಬೆಳೆದು ನಿಂತಿರುವುದು ಕಂಡುಬರುವುದು. ೧೮೪೭ರಲ್ಲಿ ಅನುವಾದಗೊಂಡು ಯಾತ್ರಿಕನ ಸಂಚಾರದಲ್ಲಿ ನಾವು. ಒಟ್ಟು ಹದಿನೇಳು ಪದ್ಯಗಳನ್ನು ಕಾಣುತ್ತೇವೆ. ಅವುಗಳಲ್ಲಿ ಒಂದು ಪದ್ಯ ಮೂರು ಸಾಲು ಹಾಗೂ ನಾಲ್ಕು ಸಾಲಿನ ಏಳು ಪದ್ಯ ಮತ್ತು ಆರು ಸಾಲಿನ ಒಂಬತ್ತು ಪದ್ಯಗಳಿವೆ.

ಬಿ.ಎಂ.ಶ್ರೀಯವರ ಜನನದ ಪೂರ್ವದಲ್ಲಿ ಕ್ರೈಸ್ತ ಮಿಶನರಿಗಳಿಂದ ಧಾರ್ಮಿಕ ದೃಷ್ಟಿಕೋನದಿಂದ ರಚಿಸಿದ ಗೀತೆಗಳು ಕನಿಷ್ಟ ಪಕ್ಷ ೫೦೦೦ ಸಾಲುಗಳಾಗಿ ಕಂಡುಬರುವವು.

ಉದಾಹರಣೆಗೆ

೧. ಮೂರು ಸಾಲು : ಪಾಪದ ಹೊರೆಯು ಹೋಯಿತಲ್ಲ;
ಪಾಪದ ಹೊರೆಯು ಹೋಯಿತಲ್ಲ
ಶಿಲುಬೆ ಬುಡದಲ್ಲಿ

೨. ನಾಲ್ಕು ಸಾಲು : ಯಾರಿಗೂ ತಿಳಿಯದ ಮರ್ಮವ ಕುರುಬಕು
ಸಾರುವರೆಲ್ಲರಿಗುಚಿದಲಿ
ತೋರದೆ ಅಡಗಿದ ಮರ್ಮನ ತಿಳಿವರೆ
ಸೇರಲು ಬೇಕೇ ಕುರುಬರು

೩. ಆರು ಸಾಲು : ಕನಸಿನಂತೇ ರಮ್ಯ ಕಥೆಯನು
ನೆನಸಿ ಪೇಳಿದೆನೀಗ ನಿರ್ಮಲ
ಮನದ ಭಕ್ತಿಯ ಫಲವ ಪಾಪದ ಕಠಿಣ ಯಾತನೆಯ||
ಜನರು ಹಣ್ಣನು ತಿಂದು ಸಿಪ್ಪೆಯ
ಗಣಿಸದಿಡುವಂತಿದರ ತತ್ವವ
ನನುಕರಿಸಿ ಮತ್ತುಳಿದುದೆಲ್ಲವ ಬಿಡುವರುತ್ತಮರು*

ಮಿಶನರಿಗಳು "ಸಾಧಿಸಿದ ಹೊಸತನವೇನಂದರೆ ವೈವಿಧ್ಯಪೂರ್ಣ ಛಂದೋಲಯಗಳ ಪ್ರಯೋಗ.

* ೧೮೪೭ರಲ್ಲಿ ರಚಿಸಿದ ಕಾದಂಬರಿ ಯಂತ್ರಿಕ ಸಂಚಾರದಲ್ಲಿನ ಪದ್ಯಗಳಿವು

ಇಂಥ ಹೊಸ ಪ್ರಯೋಗಗಳು ಮಿಶನರಿಗಳಲ್ಲಿ ಕಾಣಬಹುದಾಗಿದೆ. ಇದಕ್ಕೆ ಉದಾಹರಣೆಯಾಗಿ ೧೮೭೪ರಲ್ಲಿ ವೈಗಲ್ ಮತ್ತು ಮೊಗ್ಲಿಂಗ್ ಇವರು ಕೂಡಿ ಬರೆದ ಹಾಡುಗಳನ್ನು ನೋಡಬಹುದು.

ಕಳ್ಳೆರ ಕೈಯಲಿ ಬಿಟ್ಟೆಯೊ ಹಣವನು
ಕೊಳ್ಳೆಯ ಕೊಟ್ಟೆಯೊ ಪರದೇಶಿ
ಒಳ್ಳೆಯ ನಂಬಿಗೆಯಿದ್ದರೆ ಸಾವಿರ
ಕಳ್ಳರ ನಾದರು ಗೆಲಬಹುದು

"ಇದು ಶರಷಟ್ಪದಿಯೇ ಆಗಿದ್ದರೂ ಚೌಪದಿ ರೀತಿಯಲ್ಲಿ ಚರಣಗಳನ್ನು ವಿನ್ಯಾಸಗೊಳಿಸಿ, ಹೊಸ ಪ್ರಯೋಗದ ಭಾವನೆ ಹುಟ್ಟಿಸಿರುವರು ಹೊಸ ಭಾಷೆಯ ಬಳಕೆಯಿಂದ ಇದು ನೂತನ ಪ್ರಯೋಗವೇ ಎನಿಸಿದೆ."[೧] ಜೆ.ಹೆಚ್ ವೈಗಲ್ (೧೮೪೭) ಅನುವಾದಿಸಿದ ಯಾಂತ್ರಿಕನ ಸಂಚಾರವು ಪುಟ.೧೨೭ರಲ್ಲಿ ಕಂಡುಬರುವುದು. (೧೭ನೇ ಅಧ್ಯಾಯ)

ಕಂಡೆನಾನಾಪರೂಪ ನೋಟವ
ಕಂಡೆ ನಾನುಪಯೋಗ ಕಾರ್ಯವ
ಕಂಡೆನತಿ ಸಂತೋಷ ಭಯಗಳನುಂಟು ಮಾಡುತಿರೇ
ಕಂಡೆನೆನ್ನನು ನಿಲಿಸುನರ ಮುಂ
ಗೊಂಡೆ ಕೆಲಸದಿ ನಿತ್ಯನೆನವುತ
ಮಂಡೆಯನು ಬಾಗಿಸುವೆನವುಗಳ ತೋರಿದ್ಯೆ ಪ್ರಿಯನೆ||

ಎಂಬ ಪದ್ಯ (೫ ಅಧ್ಯಾಯದಲ್ಲಿ ಪು.೩೪)ವಿದೆ ಇದು ಭಾಮಿನಿ, ಷಟ್ಪದಿಯಾಗಿದ್ದರೂ ಹೊಸಗನ್ನಡವನ್ನು ಅಳವಡಿಸಿಕೊಂಡು ಹೊಸರಚನೆಯಂತೆ ಕಾಣಿಸುತ್ತದೆ."[೨]

೧೮೭೪ರ ಸುಮಾರಿಗೆ ಮೊಗ್ಲಿಂಗ್‌ನಿಂದ ಕನ್ನಡ ಕ್ರೈಸ್ತಗೀತೆಗಳ ಸಂಖ್ಯೆ ೧೦೬ ಎಂದು ದಾಖಲೆದೊರೆಯುವುದು. ಇವುಗಳನ್ನು ಬಾಶೆಲ್ ಮಿಶನ್ ಅಥವಾ ಚರ್ಚ್ ಆಫ್ ಸೌತ್ ಇಂಡಿಯಾ(C.S.I) ಚರ್ಚ್‌ಗಳಲ್ಲಿ ಈಗಲೂ ಹಾಡುವುದನ್ನು ಕಾಣಬಹುದು. ಈ ಗೀತೆಗಳು ಅಂದಿನಿಂದ ಇಂದಿನವರೆಗೂ ಧಾರ್ಮಿಕ ಆರಾಧನೆಗಲ್ಲಿ ಬಳಕೆಯಲ್ಲಿರುವುದನ್ನು ಗಮನಿಸಿದರೆ, ಬಹುಕಾಲ ಬಳಕೆಯಲ್ಲಿರುವ ಸಂಗೀತಗಳೆಂದರೆ ರೆ-ಮೋಗ್ಲಿಂಗ್ ರಚಿತ ಕ್ರೈಸ್ತಗೀತೆಗಳು ಈತನು ಬರೆದ ಕ್ರೈಸ್ತಗೀತೆಗಳು ಕನಿಷ್ಟ ೨೦ ಸಾಲುಗಳಿಂದ ಗರಿಷ್ಠ ೬೭ ಸಾಲುಗಳ ಒಂದೊಂದು ಪದ್ಯಗಳಿವೆ. ಇವುಗಳಲ್ಲಿ ಒಟ್ಟು ಸರಾಸರಿ. ಒಂದು ಪದ್ಯಕ್ಕೆ ಕನಿಷ್ಟ ೨೦ ಸಾಲುಗಳನ್ನು ಹಿಡಿದು ಒಟ್ಟು ೧೦೬ ಪದ್ಯಗಳಿಗೆ ಲೆಕ್ಕಹಾಕಿದರೆ ಕೇವಲ ಒಬ್ಬ ಮಿಶನರಿಯಿಂದ ೩೦೦೦ ಸಾಲುಗಳ ವಿಪುಲ ಆಧುನಿಕ ಪದ್ಯಗಳು ದೊರೆಯುವವು. ಈ ಕನ್ನಡ ಸಂಗೀತ

೧. ಕ.ಕ್ರೈ.ಗೀ.ಅಧ್ಯಯನ, ಪಿ.ಎಸ್.ಗೌಡರ, ಪು.೬೦
೨. ಅದೇ, ಪು.೬೦

ಪದ್ಯಗಳಲ್ಲಿ ವೈಗಲ್ ಕೂಡ. ೨೨ ಪದ್ಯಗಳನ್ನು ರಚಿಸಿರುವನು. ಹೀಗೆ, ಕ್ರೈಸ್ತ (ಪ್ರೊಟೆಸ್ಟೆಂಟ್) ಚರ್ಚಿನಲ್ಲಿ ಬಳಸುವ ಗೀತ ಪುಸ್ತಕದಲ್ಲಿ ಸು.೪೫ ಜನ ಕವಿತೆ ರಚಿಸಿದವರಾಗಿದ್ದಾರೆ.* ಇವರ ಒಟ್ಟು ಪದ್ಯಗಳ ಅಂದಾಜು ೧೩೬೯ ಪದ್ಯ ಕೆಲವನ್ನು ಬಿಟ್ಟು.

ದೇವರ ಆರಾಧನೆಗಾಗಿ ಅಂದಿನ ಮಿಶನರಿಗಳಿಂದ ಭಾಷಾಂತರ ಹಾಗೂ ನೇರ ದೃಷ್ಟಿಯ ಪದ್ಯಗಳ ರಚನೆ ಕನಿಷ್ಟ ಪಕ್ಷ ೨೦,೦೦೦ ಸಾಲುಗಳಷ್ಟು ದೊರೆಯುತ್ತದೆ. ಅವು ಕ್ರೈಸ್ತಗೀತಗಳು ಮತ್ತು ಕನ್ನಡ ಸಂಗೀತ ಬಾಲಕರ ಗೀತ ಇತರ ಸಾಹಿತ್ಯ ಗೀತಗಳು. ಬಿ.ಎಂ.ಶ್ರೀ.ಯವರು ಜನಿಸುವ ಪೂರ್ವದ ಹೊಸಗನ್ನಡ ಭಾಷಾಂತರ ಪದ್ಯಗಳೆಂದು ಕಂಡುಬರುತ್ತವೆ.

ಇನ್ನು ಕಿಟಲ್‌ರ ೧೮೬೨ರಲ್ಲಿ ರಚಿತವಾದ ಕಥಾಮಾಲೆ ಒಟ್ಟು. ೪೫೩ ಪದ್ಯಗಳನ್ನು ಹೊಂದಿದ್ದು ಇವುಗಳಲ್ಲಿ ೨೦೬ ಭಾಮಿನಿಷಟ್ಪದಿ, ೭೩ ವಾರ್ಧಿಕಷಟ್ಪದಿ ಹಾಗೂ ೧೭೪ ಪೂರ್ವಿರಾಗದ ಹಾಡುಗಳಿವೆ.

ಮಿಶನರಿಗಳ ಇಷ್ಟೊಂದು ಗೀತಸಾಹಿತ್ಯ ಕನ್ನಡಸಾಹಿತ್ಯ ಪದ್ಯ ವಿಭಾಗಕ್ಕೆ ಅದರಲ್ಲಿಯೂ ಹೊಸಗನ್ನಡ ಪಠ್ಯರಚನೆಗೆ, ವಿಶೇಷವಾದ ನೂತನ ಮಾರ್ಗವನ್ನು ತೆರೆದುಕೊಟ್ಟಿದೆ ಎನ್ನುವಲ್ಲಿ ಸಂಶಯವಿಲ್ಲ. ಹೊಸಗನ್ನಡ ಪದ್ಯ ಸಾಹಿತ್ಯದ ಪ್ರಾರಂಭಿಕರು ಹಾಗೂ ಪ್ರವರ್ತಕರು ಮಿಶನರಿಗಳೆ ಎನ್ನುವಲ್ಲಿ ಎರಡು ಮಾತಿಲ್ಲ.

ಇತ್ತೀಚಿನ ದಿನಗಳಲ್ಲಿ ಹೊಸಗನ್ನಡ ಕವಿತೆಯ ಆರಂಭಕಾರ ಯಾರು? ಎಂಬ ಕುರಿತು ವಿದ್ವಾಂಸರಲ್ಲಿಯ ಭಿನ್ನಾಭಿಪ್ರಾಯಗಳನ್ನು ವೃತ್ತ ಪತ್ರಿಕೆಯಲ್ಲಿ ನಾವು ಓದಿದ್ದೇವೆ. ಶಿಶುನಾಳ ಶರೀಫರೇ ಹೊಸಗನ್ನಡದ ಆರಂಭಿಕ ಕವಿ ಎಂಬ ಲಕ್ಷ್ಮೀನಾರಾಯಣ ಭಟ್ಟರ ಅಭಿಪ್ರಾಯ ಗಮನಿಸಬಹುದು. “ಕಿಟೆಲ್ ಸಮಕಾಲೀನರಾಗಿದ್ದ ಶಿಶುನಾಳ ಶರೀಫ ಸಾಹೇಬರು ೧೮೬೨ಕ್ಕಿಂತ ಮುಂಚೆಯೇ ತಮ್ಮ ಎಷ್ಟೋ ಕವಿತೆಗಳನ್ನು ಬರೆದಿದ್ದಾರೆಂದು ಹೇಳಲು ಅವಕಾಶವಿದೆ. ಶರೀಫರು ಹುಟ್ಟಿದ್ದು ೧೮೧೮ರಲ್ಲಿ ಅವರು ಬಾಳಿದ್ದು ೭೦ ವರ್ಷ, ತೀರಿಕೊಂಡದ್ದು ೧೮೮೯ರಲ್ಲಿ. ಹಾವನೂರರು ಹೇಳುವ ಕಿಟಲ್ ರ ಪದ್ಯಗಳ ಕಾಲ ೧೮೬೨ ಆ ಹೊತ್ತಿಗೆ ಶರೀಫರಿಗೆ ೪೪ ವರ್ಷವಯಸ್ಸು ನೂರಾರು ಕವಿತೆಗಳನ್ನು ಬರೆದಿರುವ ಶರೀಫರು ತಮ್ಮ ೪೪ನೇ ವಯಸ್ಸಿನ ಹೊತ್ತಿಗೆ ಅವುಗಳಲ್ಲಿ ಅನೇಕ ಕವಿತೆಗಳನ್ನಾದರೂ ರಚಿಸಿರಬೇಕು. ಶರೀಫರು ಬಾಲ್ಯದಲ್ಲಿಯೇ ಗೋವಿಂದಭಟ್ಟ ಎಂಬ ಬ್ರಾಹ್ಮಣಗುರುವಿನ ಜೊತೆ ಸೇರಿ ಕ್ರಾಂತಿಕಾರಕ ಎನ್ನಬಹುದಾದ ಜೀವನಕ್ಕೆ ಹೊರಳಿದ್ದವರು. ನಡುವಯಸ್ಸಿನ ಹೊತ್ತಿಗೆ ಅನೇಕ ಕಷ್ಟನಷ್ಟಗಳನ್ನು ಅನುಭವಿಸಿದ್ದವರು. ಅವುಗಳಲ್ಲಿ ಎಷ್ಟೋ ಸಂಗತಿಗಳಿಗೆ ಕವಿತೆಯಲ್ಲಿಯೇ ಸೂಚನೆ ಸಿಗುತ್ತವೆ. ಏನಾದರೊಂದು ಸಂಗತಿ ಘಟಿಸಿದಾಗ ಆ ಕೂಡಲೇ ಅದನ್ನು ಪದ್ಯವಾಗಿಸಿದ ಆಶುರಚನೆಯ ರೀತಿ ಅವರ

ಕವಿತೆಯಲ್ಲಿ ಕಾಣುತ್ತದೆ. ಅದೇನಾದರು ಇರಲಿ ನೂರಾರು ಕವಿತೆಗಳನ್ನು ಸಮರ್ಥವಾಗಿ ಬರೆದ ಕವಿ ತನ್ನ ೨೫-೩೦ನೇಯ ವಯಸ್ಸಿಗೆ ಎಷ್ಟೋ ಕವಿತೆಗಳನ್ನು ಬರೆದಿರಲೇ ಬೇಕು.

ಇನ್ನು ಹೊಸಗನ್ನಡ ಕಾವ್ಯಕ್ಕೆ ಕಿಟಲ್ ಪದ್ಯಗಳು ಸೇರುವುದಾದರೆ ಶರೀಫರವೂ ಸೇರಲೇ ಬೇಕಾಗುತ್ತದೆ. ಪ್ರೊ.ಜಿ.ಎಸ್.ನಾಯಕರು ಕನ್ನಡಸಾಹಿತ್ಯ ಪರಿಷತ್ತಿಗಾಗಿ ಸಂಪಾದಿಸಿಕೊಟ್ಟು 'ಹೊಸಗನ್ನಡ ಕವಿತೆ ಎಂಬ ಕಾವ್ಯಸಂಕಲನದಲ್ಲಿ ಶರೀಫ್‌ರನ್ನೇ ಹೊಸಗನ್ನಡದ ಮೊದಲ ಕವಿಯಾಗಿ ಸ್ವೀಕರಿಸಿದ್ದಾರೆ. ಶರೀಫರ ಕೋಳಿ, ಗಿರಣಿ ಎಂಬ ಎರಡು ಕವನಗಳನ್ನು ಸಂಕಲನದಲ್ಲಿ ಸೇರಿಸಿಕೊಂಡಿದ್ದಾರೆ.

ಕಿಟೆಲ್‌ರು ಹೊಸಗನ್ನಡ ಕಾಲದ ಕವಿತೆಗಳಂತೆ ಲೌಕಿಕ ಸಂಗತಿಗಳನ್ನು ಕುರಿತು ಬರೆದಿದ್ದಾರೆ ಎಂದು ಹೇಳಿ ಕಬ್ಬಿಣ, ಕಾಫಿಬೀಜ, ಹತ್ತಿ, ಲಂಡನ್ ಇತ್ಯಾದಿ ಕುರಿತು ಅವರು ಬರೆದ ಪದ್ಯಗಳನ್ನು ಹಾವನೂರರು ಪ್ರಸ್ತಾಪಿಸಿರುತ್ತಾರೆ. ಶರೀಫರ ಕವಿತೆಗಳಲ್ಲಿ ಕೂಡ ಸೂಜಿ, ಗಿರಣಿ, ಸ್ಟೂಲ, ಸಿಗರೇಟು (ಸೇದಿದೆಯಾ ಬತ್ತಿ ಸೇದಿದೆಯಾ) ಮೊದಲಾದ ಹೊಸ ಕಾಲದ ವಿಷಯ ಕುರಿತ ಕವಿತೆಗಳಿವೆ. ಆದರೆ ಶರೀಫರು ಶುದ್ಧ ಕವಿಯಾದದ್ದರಿಂದ ಅವುಗಳನ್ನು ರೂಪಕವಾಗಿ ಹೊರಳಿಸಿಕೊಂಡು ಆ ಮೂಲಕ ಅನ್ಯಾರ್ಥಕ್ಕೆ ಅವುಗಳನ್ನು ಹೊರಳಿಸುವ ಕೌಶಲ್ಯವನ್ನು ತೋರುತ್ತಾರೆ ಇದು ಕಿಟಲ್‌ರಲ್ಲಿಲ್ಲ. ಈ ವಿಷಯದಲ್ಲಿ ಶರೀಫರ ಕಿಟೆಲ್‌ರ ನಡುವೆ ಅಪಾರ ಅಂತರವಿದೆ.

ಹಾವನೂರರು ಹೇಳುವ ಕಿಟಲ್‌ರ ಕವಿತೆಗಳನ್ನು ಪದ್ಯ ರೂಪಗಳೆಂದು ಹೇಳಬಹುದೇ ಹೊರತು ಕವಿತೆಗಳೆಂದು ಹೇಳುವಂತಿಲ್ಲ. ಅವು ಲಯಬದ್ಧವಾದ ಮತ್ತು ಪರಿಚಯ ಅಥವಾ ಮಾಹಿತಿ ಮಾತ್ರ ಎಂದು ಹೇಳಬಹುದಷ್ಟೇ..."[೧]

ಶ್ರೀ ಲಕ್ಷ್ಮೀನಾರಾಯಣ ಭಟ್ಟರ ಮೇಲಿನ ಅಭಿಪ್ರಾಯಕ್ಕೆ ಶ್ರೀ. ಹಾವನೂರರು ಹೀಗೆ ಪ್ರತಿಕ್ರಿಯಿಸಿದ್ದು "ಕಾಲಮಾನದಿಂದ ಶರೀಫರು ಮೊದಲಿನವರು. ಹೌದು. ಆದರೆ ಅವರ ಜನಪದೀಯ ದಾಟಿಯಲ್ಲಿಯೇ ಪದ್ಯ ರಚಿಸಿದ ಅದೇ ಕಾಲದ ಸುಪ್ರಸಿದ್ಧ ಕಡಕೋಳ ಮಡಿವಾಳಪ್ಪ, ನವಲಗುಂದ ನಾಗಲಿಂಗಪ್ಪ ಮುಂತಾದ ಅನೇಕರನ್ನು ಆರಂಭಕಾರರು ಎನ್ನಬೇಕಾದೀತು. ಈಚೆಗೆ ಒಬ್ಬ ವಿ.ಕ.ವಾಚಕರು* ಪ್ರೊ.ಭಟ್ಟರ ನಿಲುಮೆಗೆ ಪ್ರತಿಯಾಗಿ ಜಲಾಲಸಾಹೇಬ ಎಂಬವರ ಹೆಸರು ಹೇಳಿದ್ದಾರೆ.

ಈ ಸಂದರ್ಭದಲ್ಲಿ ಅವಶ್ಯವಾಗಿ ಗಮನಿಸಬೇಕಾದ ಮಾತೆಂದರೆ ಹೊಸ ಕಾಲದಲ್ಲಿ ಎಂದರೆ ೧೯ನೇ ಶತಮಾನದಲ್ಲಿ ರಚಿತವಾದ ಮಾತ್ರಕ್ಕೆ ಆ ಕವನಗಳೆಲ್ಲ "ಹೊಸಗನ್ನಡ ಕವಿತೆ" ಎನಿಸಿಕೊಳ್ಳುವುದಿಲ್ಲ. ಅದಕ್ಕೆ ಸಾಹಿತ್ಯ ವಿಮರ್ಶಕರು ಕೆಲವು ಲಕ್ಷಣಗಳನ್ನು ಹೇಳಿದ್ದಾರೆ. ಅವುಗಳಲ್ಲಿ ಮಹತ್ವದ್ದೆಂದರೆ : ಈ ಕವಿತೆ ಸಾಮಾನ್ಯವಾಗಿ ಪಾಶ್ಚಾತ್ಯ ಪ್ರಭಾವದಿಂದ ಪ್ರೇರಿತವಾದದ್ದು. ಮತ್ತು ಹಿಂದಿನ ಪೌರಾಣಿಕ,

---

* ವಿಜಯಕರ್ನಾಟಕ

ಧಾರ್ಮಿಕ, ಆಧ್ಯಾತ್ಮಿಕ ವಿಷಯಗಳಿರದೇ ಲೌಕಿಕ-ಅಧುನಿಕ ವಿಚಾರಗಳನ್ನು ಕುರಿತದ್ದು ಇರುತ್ತದೆ. ಹಾಗೂ ನವೋದಯ ಕಾಲದ ಕವಿತಾ ರಚನೆಗೆ ನಾಂದೀಸ್ವರೂಪವಾಗಿ ಮುಂದುವರಿದಿದೆ ಇತ್ಯಾದಿ.

ಶಿಶುನಾಳ ಶರೀಫರು ಸೂಜಿ, ಗಿರಣಿ ಮುಂತಾದ ಆಧುನಿಕ ಹೆಸರುಗಳನ್ನು ಮಾತ್ರ ತಂದಿದ್ದಾರೆ. ಆದರೆ ಅವುಗಳನ್ನೇ ಕುರಿತು ಬರೆಯಲಿಲ್ಲ. ಸಂತೆಯಲ್ಲಿ ಮುದುಕಿ ಬಿದ್ದಿರುವುದು ಅವರಿಗೆ ನಿಮಿತ್ತ ಮಾತ್ರ. ಈ ಕೂಡಲೆ ಸಂಸಾರವೆಂಬ ಜಂಜಾಟದಲ್ಲಿ ಸಿಕ್ಕ ಮನುಷ್ಯನ ತೊಳಲಾಟವೆಂಬ ಅನುಭಾವಕ್ಕೆ ತಿರುಗಿಬಿಟ್ಟಿದ್ದಾರೆ. ನನಗೆ ಬೇಕಾದ ಗಂಡನನ್ನು ಮಾಡಿಕೊಂಡೆ ಎಂಬುದಾಗಿ ಗಂಡಸಾದ ಈಗಿನ ಕವಿ ಹೇಳಿದರೆ ಜನ ನಕ್ಕುಬಿಟ್ಟಾರು! ಶರೀಫರ ಅನುಭವದ ಅರ್ಥದಲ್ಲಿ ಈ ಗಂಡ ಅವರ ಗುರುಗಳು.

ಈ ಬಗೆಯ ಅನುಭಾವ ಕವಿಗಳ ದೊಡ್ಡ ಪರಂಪರೆ ೧೮-೧೯ನೆಯ ಶತಮಾನಗಳಲ್ಲಿ ಆಗಿ ಹೋಯಿತು. ಅವರಲ್ಲಿ ಶರೀಫರು ಒಬ್ಬರು. ಅಗ್ರಗಣ್ಯರೂ ಹೌದು. ಅರ್ಥಾತ್ ಅವರು ಕವಿತ್ವ ಅಧುನಿಕ ಯುಗಕ್ಕೆ ಸಂಬಂಧಿಸಿದ್ದಾಗಿಲ್ಲ ಮತ್ತು ಆ ಪರಂಪರೆ ಎದ್ದು ಕಾಣುವಂತೆ ನವೋದಯ ಕಾಲದಲ್ಲಿ ಮುಂದುವರೆಯಲೂ ಇಲ್ಲ.

ಅಂತೂ ಆಧುನಿಕ ಜೀವನದ ಶಬ್ದಗಳಿದ್ದ ಮಾತ್ರಕ್ಕೆ ಹೊಸಗನ್ನಡ ಕವಿತೆ ಎನಿಸಿಕೊಳ್ಳಲಾರದು. ಶರೀಫರಿಗಿಂತ ಎಷ್ಟೋ ಹಿಂದೆ ಪುರಂದರದಾಸರು ಚಪ್ಪಲಿ(ಪಾಪೋಸು) ಹೆಂಗಸಿನ ತಾಳಿ, ಲೊಟಪಟ ಸಂಸಾರ, ಹೆಂಡತಿ ಪ್ರಾಣ ಹಿಂಡುತಿ' ಎಂದೆಲ್ಲ ಲೌಕಿಕವೆನಿಸುವ ಶಬ್ದಾದಿ ಬಳಸಿದ್ದಾರೆ. ಆದರೆ ಧಾರ್ಮಿಕತೆಯತ್ತಲೇ ಅವರ ದೃಷ್ಟಿ. ಶರೀಫರ ಅನುಭವದ ಪದಗಳಿಗೆ ಸಮನಾಗಿ ಕನಕದಾಸರ ಮುಂಡಿಗೆಗಳಿವೆಯಲ್ಲ! ಅಂದಾಗ ಹೊಸಗನ್ನಡ ಕಾವ್ಯವನ್ನು ೧೯ನೇ ಶತಮಾನದಷ್ಟು ಹಿಂದೆ ಒಯ್ಯಬೇಕಾದೀತು.

'ಹೊಸಗನ್ನಡ ಕವಿತೆ' ಸಂಗ್ರಹದ ಸಂಪಾದಕರು ಶರೀಫರಿಗೆ ಆದ್ಯತೆ ಕೊಟ್ಟಿರಬಹುದು. ಆದರೆ ನಮ್ಮಲ್ಲಿಯ ಯಾವ ಸಾಹಿತ್ಯ ಚರಿತ್ರೆಕಾರರೂ ಹಾಗೆ ಹೇಳಿಲ್ಲ. ಶರೀಫರು ಶ್ರೇಷ್ಠ ಅನುಭಾವದ ಕವಿ ಎಂಬುದಷ್ಟನ್ನೇ ಕಾಣಿಸಿದ್ದಾರೆ. ಬದಲಿಗೆ ಈ ಹೊಸ ಕವಿತೆಯ ಎಸ್.ಜಿ.ನರಸಿಂಹಾಚಾರ್. ಹಟ್ಟಿಯಂಗಡಿ ನಾರಾಯಣರಾವ್, ಪಂಜೆ ಮಂಗೇಶರಾವ್ ಮೊದಲಾದವರ ಆಂಗ್ಲ ಕವಿತಾನುವಾದದಿಂದ ಆರಂಭವಾಗಿ ಕ್ರಮೇಣ ಸ್ವತಂತ್ರ ರಚನೆಗೆ ನವೋದಯ ಕಾಲದ ಭಾವಗೀತೆಗೆ ಹಾದಿ ಮಾಡಿಕೊಟ್ಟಿತೆಂಬುದು ನೆಲೆಗೊಂಡ ವಿಷಯವಾಗಿದೆ. ಇವರಲ್ಲಿ ೧೮೬೦ರಿಂದ ಬರೆಯಲಾರಂಭಿಸಿದವರು ಇದೇ ಬಗೆಯ ರಚನೆಯನ್ನು ಕಿಟಲ್ ಮೂವತ್ತು ವರುಷಗಳಷ್ಟು ಹಿಂದೆ ಮಾಡಿದ್ದರಿಂದ ಹೊಸಗನ್ನಡ ಕವಿತೆಯ ಆರಂಭಕಾರ ಕಿಟೆಲ್ ಎಂದು ಕರೆಯುವಲ್ಲಿಯೂ ಗೊಂದಲಗಳನ್ನು ನಾವು ಕಾಣುತ್ತಿರುವುದಾದರು ಏಕೆ? ಪೂರಕ ಮಾಹಿತಿ ದೊರೆಯದಿರುವುದೋ? ಮತೀಯ ಭಾವನೆಗೆ ಎಡೆ ಕೊಡುವರಿಂದಲೋ? ಒಂದು

ದೃಷ್ಟಿಯಿಂದ ನೋಡಿದರೆ ಅವುಗಳು ಕವಿತೆಗಳೇ ಅಲ್ಲ ಎನ್ನುವಲ್ಲಿ ಎಷ್ಟೊಂದು ನಿಷ್ಠುರತೆ. ಸತ್ಯತೆಯನ್ನು ಒಪ್ಪದೇ ಗೌರವವನ್ನು ಮೀರಿ ವರ್ತಿಸುವಿಕೆ ಕಂಡುಬರುತ್ತದೆ.

ಪತ್ರಿಕೆಗಳ ಬರಹಗಳಿಂದ ಉಂಟಾದ ಗೊಂದಲ. ಅನಾವಶ್ಯಕ ಅಪ್ರಯೋಜಕವೆನೋ ಎಂಬಂತೆ ಅನಿಸುತ್ತದೆ ಕಾರಣ. ಕಿಟೆಲ್‌ರವರ ಹಳೆಕವನಗಳನ್ನು ಹೆಕ್ಕಿ ತೆಗೆದ ಶ್ರೀ. ಹಾವನೂರವರು ಸಹಜವಾಗಿಯೇ ಅವುಗಳನ್ನು ಜನರಿಗೆ ಪರಿಚಯಿಸಲು ಪ್ರಕಟಿಸಿದರು. ಆದರೆ ವಿವಾದಕ್ಕೆ ಕಾರಣವಾಗುವುದೆಂದು ಯಾರೂ ನೆನಸಿರಲಿಲ್ಲ. ಇಲ್ಲಿ ಆಶ್ಚರ್ಯವೇನೆಂದರೆ, ಕಿಟೆಲ್‌ರ ಈ ಹೊಸ ಕವನಗಳು ಶಾಲಾ ಮಕ್ಕಳ ಅದರಲ್ಲೂ ೩ ನೇ ತರಗತಿಗಳ ಮಕ್ಕಳಿಗೆ ಪಠ್ಯವಸ್ತುಗಳಿಗಾಗಿ ರಚಿಸಿದ

ರವಿಯೆವೇ ಗೃಹ ರಾಜನು
ಜಗಕೆ ಹರುಷವ ಕೊಡುವ
ಸೂರ್ಯನಗಲಲಿರುತಲಿ
ತಾಪ ಶಮನಕೆ ಖಗವು
ಮೃಗನದ ವೃಕ್ಷವೆಲ್ಲವೂ
ನಿದ್ರೆಗೈಯುವುದು" - ಕಿಟೆಲ್

ಪದ್ಯಗಳನ್ನು ಪರಿಗಣಿಸಿ ಮಹಾನ್ ವಿದ್ವಾಂಸನೆನಿಸಿಕೊಂಡ ಕಿಟಲ್ ರವರ ವಿದ್ವತ್ತನ್ನು ಒರೆಗೆ ಹಚ್ಚಲು ಹೊರಟ ಸಾಹಿತಿಗಳನ್ನು ಏನೆಂದು ಕರೆಬಹುದೆಂಬುದು ತಿಳಿಯದು.* ಅವರು ಬರೆದಷ್ಟು ಹೊಸಗನ್ನಡದಲ್ಲಿ ಅವರ ಯಾವ ಸಮಕಾಲೀನರು ಕವಿತೆಗಳನ್ನು ಬರೆದಿಲ್ಲ. ಅವರ ವಿದ್ವತ್ತಿಗೆ 'ಕಥಾಮಾಲೆ' ಒಂದೇ ಉದಾಹರಣೆಗೆ ಸಾಕು!

ಪಾಪಸಾಗರ ದಾಟಿಸಗ್ಗಕೆ
ಪೋಪ್ ಹಡಗವನೇಸುವೊಡೆಯನು
ಕಾಪು ಕಾಯ್ವುದು ಕಾಯದಿದ್ದರೆ, ಕೆಳಿರಾಳುಗಳೇ
ದೀಪವಿಲ್ಲದ ಗಾಢದಿರುಳಲಿ
ಶಾಪದಲೆಗಳು ಹೊಡೆದು ಒಡೆಯಲು
ತಾಪದಿಂ ನೀವಲೆಗಳೊಳ್ಮುಳುಗಿ ಹೋಗುವಿರಿ

* ೧೮೬೦ರ ವೇಳೆಗೆ ಕನ್ನಡ ಕಾವ್ಯ ಜಗತ್ತು ನಿಂತ ನೀರಾಗಿತ್ತು. ಹಳೆಗನ್ನಡದ ಸಾಂಪ್ರದಾಯಿಕ ರಚನೆಗಳಿಂದ, ಅದೇ ಸವಕಲಾದ ಕವಿ ಸಮಯಗಳಿಂದ ಭಾಷೆ ತನ್ನ ಚಲನಶೀಲತೆಯನ್ನು ಕಳೆದುಕೊಂಡು ನಿಸ್ತೇಜವಾಗಿತ್ತು. ಕವಿಗಳಲ್ಲಿ ಸೃಜನಶೀಲತೆಯ ಸತ್ವ ತೀರಿ ಹೋಯಿತೇನೋ ಎಂಬಂತಾಗಿತ್ತು. ನುಡಿಗಟ್ಟುಗಳ ಬಳಕೆ ಇರದೇ ಕೇವಲ ಪಾಂಡಿತ್ಯಕ್ಕೆ ಬೆಲೆ ಕೊಟ್ಟ ಫಲ ಕಾವ್ಯ ನಿರ್ಮಾಣ ಕ್ಲಿಷೆಯಾಗಿತ್ತು. ಅಂಥ ಜೀವನ್ಯತಾವಸ್ಥೆಗೆ ಸತ್ವಪೂರ್ಣ ಸೃಜನೆಗಳಿಂದ ಹೊಸ ಲವಲವಿಕೆ ತಂದುಕೊಟ್ಟ ಮಹಾನೀಯರು ರೆವರೆಂಡ್ ಎಫ್.ಕಿಟಲ್ ಅವರು (ಸಂಯುಕ್ತ ಕರ್ನಾಟಕ ೩.೦೮.೨೦೦೩ ಸಾಹಿತ್ಯ ಶರಧಿ ವಿಭಾಗ, ಪ್ರೊ.ದೊಡ್ಡರಂಗೇಗೌಡ).

ಕಿಟಲ್ ಅವರು ಹೊಸಗನ್ನಡ ಕವಿತೆಯ ಆರಂಭಕಾರರು ಎಂದು ಕೂಲಂಕುಷವಾಗಿ ಗ್ರಹಿಸಲು ಹೋದರೆ, ಇವರಿಗಿಂತ ಮೊದಲಿದ್ದ ರೆ. ಮೋಗ್ಲಿಂಗ್ (ಕ್ರೈಸ್ತ ಗೀತೆ, ಒಟ್ಟು ೧೧೬) ಮತ್ತು ರೆ. ವೈಗಲ್ (ಯಾತ್ರಿಕ ಸಂಚಾರದ ಪದ್ಯ, ಕ್ರೈಸ್ತಗೀತೆ, ಒಟ್ಟು-೨೫)ರವರೆ ಹೊಸಗನ್ನಡ ಪದ್ಯಗಳ ಪ್ರಾರಂಭಕಾರರೇನೋ ಎಂದೆನಿಸುವುದು.

ಈ ಎಲ್ಲ ದೃಷ್ಟಿಗಳಿಂದ ಕನ್ನಡ ಸಾಹಿತ್ಯದ ಹೊಸಗನ್ನಡ ಕಾವ್ಯದ ಉದಯವು ಮಿಶನರಿಗಳಿಂದಲೇ ಉದ್ಭವಿಸಿತೆನ್ನುವಲ್ಲಿ ಸಂಶಯವಿಲ್ಲ. ಕನ್ನಡ ಸಾಹಿತ್ಯಕ್ಕೆ ಹೊಸತನ ಅವಶ್ಯವಿತ್ತು. ಇಲ್ಲವೋ ಆದರೆ ಮಿಶನರಿಗಳಿಗೆ ಇದು ಅಗತ್ಯತೆಯನ್ನು ತಂದುಕೊಟ್ಟಿದೆ. ಇನ್ನೊಂದು ಮಾತಿನಲ್ಲಿ ಹೇಳುವುದಾದರೆ ಅನಿವಾರ್ಯತೆಯೂ ಹೌದು.

ಯಾವುದೇ ಧರ್ಮ ತನ್ನ ತತ್ವ-ಸಿದ್ಧಾಂತಗಳ ಆಧಾರದ ಮೇಲೆ ನಿಲ್ಲಬೇಕಾದರೆ ಅಂದಿನ ಜನ ಸಾಮಾನ್ಯ ಭಾಷೆಯಿಂದಲೇ ಅದು ಪ್ರಕಟಗೊಳ್ಳಬೇಕು. ಅಂದಾಗ ಜನ-ಮನವನ್ನು ಗೆದ್ದು ಆ ಧರ್ಮ ಬಾಳುತ್ತದೆ. ಬಾಳಲು ಅನುವು ಮಾಡಿಕೊಡುತ್ತದೆ. ಇದೇ ದೃಷ್ಟಿಯಿಂದಲೇನೋ, ಬುದ್ಧನು ಸಂಸ್ಕೃತ ಹಾಗೂ ಇತರ ಪ್ರೌಢ ಭಾಷೆಯಲ್ಲಿ ಧರ್ಮವನ್ನು ಬೋಧಿಸದೆ ಸಾಮಾನ್ಯ ಪಾಲಿಭಾಷೆಯಲ್ಲಿ ಬೋಧಿಸಿದ. ಕ್ರಿಸ್ತನು ಗ್ರೀಕ್, ಭಾಷೆಯನ್ನು ಬೋಧನೆಗಾಗಿ ಬಳಸದೆ, ಅರೆಮಿಕ್ ಎನ್ನುವ ಸಾಮಾನ್ಯ ಭಾಷೆಯನ್ನು ಬೋಧನೆಗೆ ಅಳವಡಿಸಿಕೊಂಡ. ವಚನಕಾರರು ಹಿಂದೂ ಧರ್ಮದಲ್ಲಿ ಧರ್ಮ ಜಾಗೃತಿ ತರಲು ಸಂಸ್ಕೃತ ಅಥವಾ ಹಳೆಗನ್ನಡವನ್ನು ಉಪಯೋಗಿಸದೆ ಸರಳ ಹಾಗೂ ಜನರಾಡುವ ಕನ್ನಡವನ್ನೇ ಒಪ್ಪಿಕೊಂಡರು.

ಭಾರತಕ್ಕೆ ಬಂದ ಮಿಶನರಿಗಳು ಪ್ರಾದೇಶಿಕ ಭಾಷೆ ಎಡೆಗೆ ಒಲವು ತೋರಿದುದು ಸಹಜವೇ. ಈ ಕಾರಣದಿಂದ ಕರ್ನಾಟಕದಲ್ಲಿ ಕನ್ನಡಸಾಹಿತ್ಯ ಹೊಸದೊಂದು ಮಜಲನ್ನು ಹೊಂದಬೇಕಾಗಿ, ಹೊಸಗನ್ನಡ ಸಾಹಿತ್ಯೋದಯಕ್ಕೆ ಅಣಿಯಾಯಿತು.

ಮಿಶನರಿಗಳ ಸಾಹಿತ್ಯಾಸಕ್ತಿ ಕೇವಲ ಧರ್ಮಪ್ರಚಾರಕ್ಕಾಗಿ ಎಂದು ಎಲ್ಲ ಲೇಖಕರು ಬರೆಯುವುದು ಸಾಮಾನ್ಯ ಹಾಗೂ ಸಹಜ. ಭಾರತದಲ್ಲಿ ಧರ್ಮ ಪ್ರಚಾರ ಹೊಸದೇನಲ್ಲ ಕೇವಲ ಪಾಶ್ಚಾತ್ಯ ಧರ್ಮಗಳು ಧರ್ಮಪ್ರಚಾರ ಮಾಡುತ್ತದೆಂದು ಗ್ರಹಿಸುವುದು ತಪ್ಪಾದೀತು. ಹಿಂದೂ ಸ್ಥಾನದಲ್ಲಿಯ ಹಿಂದೂ ಧರ್ಮ ಈಗ ಅನೇಕ ಶಾಖೆಗಳಾಗಿ ಒಡೆದು ಹಿಂದೂ ಎಂದರೆ ಯಾವುದು ಎಂಬ ಗೊಂದಲದಲ್ಲಿ ಬಂದು ನಿಂತಿದೆ. ಅನೇಕ ಶಾಖೆಗಳಾದ ಹಿಂದೂಧರ್ಮ ತತ್ವ-ಸಿದ್ಧಾಂತ ಮಾರ್ಗಗಳನ್ನು ಬದಲಿಸಿಕೊಂಡು ಜನರಿಗೆ ಹೊಸದೃಷ್ಟಿ ಬೀರಲು ಸಾಹಿತ್ಯ ಮಾರ್ಗವನ್ನು ಅನುಸರಿಸಿ ವಿಪುಲವಾದ ಸಾಹಿತ್ಯ ಬೆಳೆದುನಿಂತಿತು. ಇದನ್ನೇ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಜೈನ ಸಾಹಿತ್ಯ, ವೀರಶೈವ ಸಾಹಿತ್ಯ, ಬ್ರಾಹ್ಮಣ ಸಾಹಿತ್ಯವೆಂದು ಜಾತಿಗಳ

ಆಧಾರದಲ್ಲಿ ಪರಿಗಣಿಸಿರುವುದನ್ನು ಕಾಣಬಹುದು. ಈ ಸಾಹಿತ್ಯಗಳು ಆಯಾ ಧರ್ಮ ಪ್ರಸಾರಾರ್ಥವಾಗಿಯೇ ಹುಟ್ಟಿ ಬೆಳೆದು ಸಾಹಿತ್ಯವೆಂದು ಕರೆಯಿಸಿಕೊಂಡಿವೆ. ಕನ್ನಡ ಸಾಹಿತ್ಯದಲ್ಲಿ ಧಾರ್ಮಿಕ ಅಂಶಗಳನ್ನು ಬಿಟ್ಟರೆ ಅಂದಿನ ಕವಿಗಳು ಬರೆದುದಾದರು ಏನನ್ನು? ಎನ್ನಬೇಕಾದೀತು.

ಕ್ರೈಸ್ತ ಮಿಶನರಿಗಳು ಧರ್ಮ ಕೌರ್ಯದ ಜೊತೆಗೆ ಜನರ ಸರ್ವತೋಮುಖ ಅಭಿವೃದ್ಧಿಗೆ ನಿಂತಿದ್ದಾರೆನ್ನುವಲ್ಲಿ ಎರಡು ಮಾತಿಲ್ಲ. ದೀನ-ದಲಿತರನ್ನು ಉದ್ಧರಿಸಲು ಧರ್ಮಬೋಧನೆ ನೀಡಿ ಅಧರ್ಮದಿಂದ ಮೇಲೆತ್ತಲು ಶ್ರಮಿಸುವುದರೊಂದಿಗೆ ಆರೋಗ್ಯ-ಶಿಕ್ಷಣ-ಸಂಸ್ಕೃತಿಗಳ ಗೋಜಿಗೆ ಹೋಗುವ ಅವಶ್ಯಕತೆ ಇರುತ್ತಿರಲಿಲ್ಲ. ಪರದೇಶದಿಂದ ಬಂದು ನಮ್ಮ ದೇಶದ ಅಭಿವೃದ್ಧಿಗೆ ಶ್ರಮಿಸಿದವರು ಕೇವಲ ಮಿಶನರಿಗಳಾಗಿರದೆ, ಬೇರೆ ಆಡಳಿತ ಚುಕ್ಕಾಣಿ ಹಿಡಿದವರೇ ಹೆಚ್ಚು.

ಹೊಸಗನ್ನಡದ ಪದ್ಯದ ಪರಿಚಯವೇ ಇರದ ಸಂದರ್ಭದಲ್ಲಿ “ಪಾಶ್ಚಿಮಾತ್ಯ ಭಾಷಾ ಸಂಸ್ಕೃತಿಗಳ ಸಂಪರ್ಕದಿಂದ ಹಳೆಯ ಅಂಧಶ್ರದ್ಧೆಗಳು ಮಾತ್ರ ಕೃತಿ ವಸ್ತುವಾಗಿದ್ದ ಅಂದಿನ ಪದ್ಧತಿಗೆ ಪೂರ್ಣವಿರಾಮ ಹಾಕಿ ಸಾಮಾನ್ಯ ಮಾನವನ ನಿತ್ಯ ಜೀವನದ ಆಗು ಹೋಗುಗಳೊಂದಿಗೆ ಸ್ಪಂದಿಸುವಂತಹ ಜನ ಸಾಮಾನ್ಯರ ಹೃದಯಕ್ಕೇ ಹೆಚ್ಚು ವೇದ್ಯವಾದ ಮತ್ತು ಸಹಜವಾದ ವಿಷಯಗಳು ಕೃತಿಗೆ ವಸ್ತುಗಳಾದವು.”[೧]

ಪದ್ಯಂ ವದ್ಯಂ ಗದ್ಯಂ ಹೃದ್ಯಂ ಎನ್ನುವ ನಂದಳಿಕೆಯ ಲಕ್ಷ್ಮೀನಾರಾಯಣ(ಮುದ್ದಣ್ಣ)ನು ಹಳೆಗನ್ನಡ ಹಾಗೂ ಹೊಸಗನ್ನಡದ ಸೇತುವೆಯಂತಿರುವ ಕವಿ ಎಂದು ಕರೆಯಿಸಿಕೊಳ್ಳುತ್ತಾನೆ. ಗದ್ಯ ಹಾಗೂ ಪದ್ಯಗಳು ಹೊಸತನವನ್ನು ಪಡೆದಿದ್ದು ಮುದ್ದಣ್ಣ ಜನ್ಮ ತಾಳುವುದಕ್ಕೆ ೪೫ ವರ್ಷಗಳ ಹಿಂದೆಯೇ. ಮಿಶನರಿಗಳಿಂದ ವಿಫುಲವಾಗಿ ಕಾವ್ಯ ರಚನೆಗೊಂಡಿತ್ತೆಂಬುದನ್ನು ಮರೆಯುವಂತಿಲ್ಲ.

ಕನ್ನಡ ಸಾಹಿತ್ಯದಲ್ಲಿ ಹೊಸಗನ್ನಡ ಕಾವ್ಯದ ಉಗಮಕ್ಕೆ ಕ್ರೈಸ್ತಮಿಶನರಿಗಳೇ ನೇರ ಕಾರಣ ಎನ್ನುವಲ್ಲಿ ಸಂಶಯವಿಲ್ಲವೆಂದು ತೋರಿಬರುತ್ತದೆ. ಇದನ್ನು ಈ ಪೂರ್ವದಲ್ಲಿ ಪರಿಗಣಿಸಿ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಸ್ಪಷ್ಟಪಡಿಸಬಹುದಿತ್ತು. ಜೈನ ಸಾಹಿತ್ಯ-ವೀರಶೈವ ಸಾಹಿತ್ಯ-ಬ್ರಾಹ್ಮಣ ಸಾಹಿತ್ಯದ ಜೊತೆಗೆ ಅಂದು ರಂ.ಶ್ರೀ.ಮುಗಳಿಯವರು ಕ್ರೈಸ್ತ ಸಾಹಿತ್ಯವನ್ನು ಗುರುತಿಸದೇ ಹೋಗಿದ್ದಾರೆ. ಕನ್ನಡದಲ್ಲಿ ಮೊದಲು ಕನ್ನಡ ಸಾಹಿತ್ಯ ಚರಿತ್ರೆಯನ್ನು ರಚಿಸಿದವರು ಪಾಶ್ಚಾತ್ಯದ ಇ.ಪಿ.ರೈಸರವರು ಹೀಗಿದ್ದರೂ ಪಾಶ್ಚಾತ್ಯರ ಕನ್ನಡ ಸೇವೆ ಸಾಹಿತ್ಯ ಚರಿತ್ರೆಯಲ್ಲಿ ಪರಿಗಣಿಸದೇ ಇದ್ದದ್ದು ತುಂಬಾ ವಿಷಾದಕರ ಎನ್ನುವಲ್ಲಿ ಸಂಶಯವಿಲ್ಲ.

“ಹೊಸಗನ್ನಡ ಪದ್ಯ ರಚನೆಯಲ್ಲಿ ಪ್ರಪ್ರಥಮವಾಗಿ ಕಂಡುಬರುವ ಕವಯತ್ರಿ ಶ್ರೀಮತಿ ಐನ್ ಸ್ಟೇ ಅವರು. ಕ್ರಿ.ಶ.೧೮೬೫ರಲ್ಲಿ ಕ್ರೈಸ್ತಮತ ಬೋಧಕಿಯಾಗಿ ಸಾಹಿತ್ಯ ಕಾರ್ಯ ಮಾಡಿದ್ದು ತಿಳಿದು

---

೧. ಕ.ಸಾ. ಮತ್ತು ಧರ್ಮ ಹೋ.ಗ.ಮನೋಹರ, ಪು.೬೮

ಬರುವುದು''.[೧] ೧೮೬೯ರಲ್ಲಿ ಇವರು ಪ್ರಕಟಿಸಿದ ಕವನ ಸಂಕಲನದಲ್ಲಿಯ ಕೆಲವು ಪದ್ಯದ ಸಾಲುಗಳು ಹೀಗಿವೆ

(ರಾಗ ಪಂತುವರಾಳಿ-ಅಟತಾಳ)
ಪಾಡಿರಿ ಕರ್ತನ, ಹಾಡಿರಿ ಕ್ರಿಸ್ತನ
ಪಾಡಿರಿ ಪರಿಶುದ್ಧಾತ್ಮನ
ಪಾಡಿರಿ ಮೃತ್ಯುಲೋಕಕೆ ಬಂದ ಮ
ಹಾತ್ಮನ ನರಜನ್ಮರಕ್ಷಕನು |
(ರಾಗ ಭೈರವಿ - ರೂಪಕ ತಾಳ)
ಬಾರೈ ಬಾರೈ ದಿವ್ಯ ಆತ್ಮ ಪಾಪಿಯನ್ನ ಮನಸಿನಲ್ಲಿ
ತಾರೈ ತಾರೈ ಜೀವಕಾಂತಿಯ ಓ ಸತ್ಯದಾತ್ಮ
ನಿತ್ಯ ಸ್ತೋತ್ರ ನಿನ್ನನಾಮಕೆ

ಇದರಂತೆ ೧೮೪೫ ರಿಂದ ೧೯೦೦ರವರೆಗೆ ಮಿಶನರಿಗಳ ಧಾರ್ಮಿಕ ಕಾವ್ಯಗಳ ಸಾಕಷ್ಟು ಪ್ರಕಾರಗಳು ವಿವಿಧ ಛಂದಸ್ಸುಗಳೊಂದಿಗೆ ಕಂಡುಬರುತ್ತವೆ. ''ಆಶಯವೇ ವಸ್ತು, ಆಕೃತಿಯೇ ಶಿಲ್ಪ, ಕ್ರೈಸ್ತಗೀತೆಗಳನ್ನು ಈ ಎರಡು ದೃಷ್ಟಿಯಿಂದ ನೋಡಬಹುದೆಂದು''[೧] ಎಸ್.ಪಿ.ಗೌಡರು ತಮ್ಮ ಕನ್ನಡ ಕ್ರೈಸ್ತಗೀತಗಳ ಅಧ್ಯಯನದಲ್ಲಿ ಹೇಳಿದ್ದಾರೆ.

೪.೬. ಶಬ್ದಕೋಶ

ಕ್ರಿ.ಶ.೯೯೦ರಲ್ಲಿ ರಚಿತವಾದ ರನ್ನಕಂದದಿಂದ ಕನ್ನಡ ಸಾಹಿತ್ಯದಲ್ಲಿ ನಿಘಂಟುಗಳ ಪರಂಪರೆ ಕಂಡುಬರುತ್ತದೆ. ಪ್ರಾಚೀನ ಕಾಲದ ನಿಘಂಟುಗಳು ಕಾವ್ಯಾಭ್ಯಾಸ ಮತ್ತು ಕಾವ್ಯರಚನೆಗೆ ಪೂರಕವಾಗಿರುವ ಹಾಗೇ ರಚನೆಗೊಂಡವುಗಳಾಗಿವೆ.

ಹದಿನೆಂಟನೆ ಶತಮಾನದ ಅಂತ್ಯದವರೆಗೆ ರಚಿತವಾದ ಒಟ್ಟು ವ್ಯಾಕರಣಗ್ರಂಥಗಳು ಮೂರು. ೧. ರನ್ನನ ರನ್ನಕಂದ ೨. ನಾವರ್ಮನ ಅಭಿದಾನ ವಸ್ತುಕೋಶ ೩. ಬೊಮ್ಮರಸನ ಚತುರಾಸ್ಯ ನಿಘಂಟು

ಆದರೆ ಹದಿನೆಂಟನೆ ಶತಮಾನದವರೆಗೆ ಒಟ್ಟು ರಚಿತವಾದ ನಿಘಂಟುಗಳು ೨೧. ಇವುಗಳಲ್ಲಿ ಆಯಾ ಕೃತಿಯ ಪದ್ಯಗಳ ಪದಗಳಿಗೆ ಅರ್ಥಕೊಡುವ ಉದ್ದೇಶಗಳನ್ನು ಮಾತ್ರ ಹೊಂದಿವೆ. ಈ ಇಪ್ಪತ್ತೊಂದು ನಿಘಂಟುಗಳ ಪಟ್ಟಿ ಈ ಕೆಳಗಿನಂತಿದೆ

---
೧. ಕ.ಕ್ರೈ.ಗೀ.ಅಧ್ಯಯನ, ಎಸ್.ಪಿ.ಗೌಡರ, ಪು.೨೪

೧. ರನ್ನಕಂದ ಕಾಲ	-	೯೯೦	ಕರ್ತೃ - ರನ್ನ
೨. ಅಭಿದಾನ ವಸ್ತುಕೋಶ	,,	೧೦೪೨	,, ನಾಗವರ್ಮ II
೩. ಶಬ್ದಮಣಿ ದರ್ಪಣ	,,	೧೨೬೦	,, ಕೇಶಿರಾಜ
೪. ಅಭಿನಾವಭಿದಾನ	,,	೧೩೯೮	,, ಮಂಗರಾಜ
೫. ಕರ್ನಾಟಕ ನಿಘಂಟು	,,	೧೪೦೦	,, ತಿಳಿದಿಲ್ಲ
೬. ಕರ್ನಾಟಕ ಶಬ್ದಸಾರ	,,	೧೪೦೦	,,
೭. ಚತುರಾಸ್ಯನಿಘಂಟು	,,	೧೪೫೦	,, ಬೊಮ್ಮರಸ
೮. ಕಬ್ಬಿಗರ ಕೈಪಿಡಿ	,,	೧೫೩೦	,, ಲಿಂಗಮಂತ್ರಿ
೯. ಕರ್ಣಾಟಕದ ಶಬ್ದಮಂಜರಿ	,,	೧೫೬೦	,, ವಿರಕ್ತತೋಂಟದಾರ್ಯ
೧೦. ಕರ್ಣಾಟಕ ಸಂಜೀವನ	,,	೧೬೦೦	,, ಶೃಂಗಾರಕವಿ
೧೧. ಭಾರತ ನಿಘಂಟು	,,	೧೬೦೦	,, ತಿಳಿದಿಲ್ಲ
೧೨. ಕವಿಕಂಠಹಾರ	,,	೧೬೪೦	,, ಸೂರ್ಯಕವಿ

ಹದಿಮೂರರಿಂದ ಇಪ್ಪತ್ತೊಂದರವರೆಗೆ ದೊರೆಯಬಹುದಾದ ನಿಘಂಟುಗಳ ವಿವರದಲ್ಲಿ ಕೃತಿ ಹೆಸರು ಹಾಗೂ ಕೃತಿಕಾರನ ಕುರಿತು ಸ್ಪಷ್ಟಣೆ ದೊರೆಯದೆ ಇರುವುದು ಕಂಡುಬರುವುದು. ಮೊದಲಿನ ಮೂರು ಅಂದರೆ ರನ್ನಕಂದ ಚತುರಾಸ್ಯ ನಿಘಂಟು ಹಾಗೂ ಕಬ್ಬಿಗರ ಕೈಪಿಡಿಗಳು ಮಾತ್ರ ಕ್ಲಿಷ್ಟ ಪದಗಳಿಗೆ ಅರ್ಥ ಹೇಳುವ ಪ್ರಯತ್ನ ಹೊಂದಿವೆ. ಉಳಿದವುಗಳಲ್ಲಿ ಪದಗಳ ಅಕಾರಾಧಿ ಜೋಡಣೆ ವ್ಯಾಕರಣಾಂಶ ನಿರೂಪಣೆ ಭಾಷಾ(ಇತರೆ) ಘಟಕಗಳನ್ನು ಸಮಗ್ರವಾಗಿ ದಾಖಲಿಸುವುದು ಇವುಗಳಲ್ಲಿ ಕಂಡುಬರುವುದಿಲ್ಲ. ಕೇವಲ ಒಂದು ನಿಗದಿತ ಕಾವ್ಯ ಅಥವಾ ಕೃತಿಯನ್ನು ಮಾತ್ರ ಅಭ್ಯಾಸಿಸಲು ಸಹಾಯವಾಗುವ ಅಂಶ ಗಳನ್ನು ಒಳಗೊಂಡಿವೆ.

ಹತ್ತೊಂಭತ್ತನೆ ಶತಮಾನದಲ್ಲಿ ಮಿಶನರಿಗಳ ಹೊಸ ದೃಷ್ಟಿಯಿಂದ ನಿಘಂಟುವಿನ ಎರಡನೆ ಹಂತ ಪ್ರಾರಂಭಗೊಂಡಿತು.... ಈ ಅವಧಿಯಲ್ಲಿ ವಿದೇಶಿ ಮಿಶನರಿಗಳು ವ್ಯಾಪಕವೂ ವೈಜ್ಞಾನಿಕವೂ ಆದ ರೀತಿಯಲ್ಲಿ ನಿಘಂಟುಗಳನ್ನು ರಚಿಸಿದರು. ಯಾವುದೇ ಪದದ ಅರ್ಥವನ್ನು ನೆನಪಿಟ್ಟುಕೊಳ್ಳದೆ, ಬೇಕಾದಾಗ ಅದನ್ನು ನೋಡಿ ತಿಳಿಯಬಹುದಾದ ಸೌಲಭ್ಯ, ಪದಗಳ ನಿಷ್ಪತ್ತಿಯನ್ನು ಸೂಚಿಸಿ ಅರ್ಥವನ್ನು ಸ್ಪಷ್ಟಪಡಿಸುವ ಪ್ರವೃತ್ತಿ, ಒಂದು ಪದ ಅಥವಾ ಪ್ರತ್ಯಯವನ್ನು ಇತರ ಭಾಷೆಗಳ ಸಮಾನ ಘಟಕದೊಡನೆ ಹೋಲಿಸುವುದು ಮುಂತಾದ ಗುಣಗಳು ನಿಘಂಟಿನ ಸ್ವರೂಪವನ್ನೇ ಬದಲಾಯಿಸಿ, ಹೊಸ

ಗುರಿಯತ್ತ ಸಾಗುವಂತೆ ಮಾಡಿದವು. ಆರಂಭಿಕ ನಿಘಂಟುಗಳಲ್ಲಿ ಪರಾಮರ್ಶನ ಸೌಲಭ್ಯವೇ ಮುಖ್ಯ ಉದ್ದೇಶವಾದರೂ ಅನಂತರದ ಕೃತಿಗಳಲ್ಲಿ ಭಾಷಾಶಾಸ್ತ್ರೀಯ ಅಧ್ಯಯನವು ಗಮನ ಸೆಳೆಯುವ ಅಂಶವಾಗಿದೆ.

"ಹದಿನೆಂಟನೆ ಶತಮಾನದವರೆಗೆ ೨೧ ನಿಘಂಟುಗಳು ರಚಿತವಾದವುಗಳೆಂದು ಕಂಡು ಬಂದರೇ, ಕ್ರಿ.ಶ.೧೮೬೦ ರಿಂದ ೧೯೨೦ರ ಅವಧಿಯಲ್ಲಿ ರಚನೆಯಾದ ನಿಘಂಟುಗಳ ಸಂಖ್ಯೆ ಐವತ್ತು."[1] ಇದರಲ್ಲಿ ಮಿಶನರಿಗಳು ರಚಿಸಿದರೆನ್ನಲಾದ ನಿಘಂಟುಗಳು ಒಟ್ಟು ಹನ್ನೊಂದು. ಬೈಬಲ್ ಆಧಾರಿತ ನಿಘಂಟುಗಳನ್ನು ಬಿಟ್ಟು.

೧. ಇಂಗ್ಲೀಷ್ ಮತ್ತು ಕರ್ನಾಟಕ ವಿಲಿಯಂ ರೀವ್ ೧೮೨೪ ಮದ್ರಾಸ್ ಮುದ್ರಣ

೨. ಕರ್ಣಾಟಕ ಮತ್ತು ಇಂಗ್ಲೀಷ್ ವಿಲಿಯಂ ರೀವ್ ೧೮೩೭ ಮದ್ರಾಸ್ ಮುದ್ರಣ

೩. ಎ ಮ್ಯಾನುವೇಲ್ ಇಂಗ್ಲೀಷ್ ಮತ್ತ ಕರ್ನಾಟಕ ಜಾನ್ ಗ್ಯಾರೇನ್ ಇತರರು ೧೮೪೨ ಬೆಂಗಳೂರು ಮುದ್ರಣ

೪. ಇಂಗ್ಲೀಷ್ ಮತ್ತು ಕೆನರಿಜ ಸ್ಕೂಲ್ ಡಿಕ್ಷನರಿ ಎಫ್ .ಜಿಗ್ಲದ್ ಇತರರು ೧೮೭೬ ಮಂಗಳೂರು

೫. ಎಡಿಕ್ಷನರಿ ಕೆನರೀಜ ಮತ್ತು ಇಂಗ್ಲೀಷ್ ರೇ ಡಬ್ಲೂ ರೀವ್ ಇದು ಡ್ಯಾನಿಎಲ್ ಸ್ಯಾಂಡರಸನ್ ನಿಂದ ಪರಿಷ್ಕೃತ ಮತ್ತು ವಿಸ್ತೃತ ಆವೃತ್ತಿ ಬೆಂಗಳೂರ ವೆಸ್ಲಿಯನ್ ಪ್ರೆಸ್ ಮುದ್ರಣ, ೧೮೫೮.

೬. ಎ. ಡಿಕ್ಷನರಿ ಕೆನರೀಜ ಮತ್ತು ಇಂಗ್ಲೀಷ್ , ರೆ.ಡಬ್ಲೂ ರೀವ್ ೧೮೫೮, ಬೆಂಗಳೂರು

೭. ಎ. ಕನ್ನಡ-ಇಂಗ್ಲೀಷ್ ಡಿಕ್ಷನರಿ ರೆ.ಎಫ್ .ಕಿಟೆಲ್ ೧೮೯೪, ಬೆಂಗಳುರು ಬಾಸೆಲ್ ಮಿಶನ್ ಪ್ರೆಸ್

೮. ಬ್ಯೂಚರ್ಸ್ ಕನ್ನಡ-ಇಂಗ್ಲೀಷ್ ಡಿಕ್ಷನರಿ, ಬ್ಯೂಚರ್ ೧೮೯೯

೯. ಡಿಕ್ಷನರಿ ಲ್ಯಾಟೀನ-ಕೆನರೀಜ ಶಾಬೆಚನಾ ೧೮೬೧

೧೦. ,, ೧೮೫೫

೧೧. ಕನ್ನಡ-ಇಂಗ್ಲೀಷ್ ಗ್ಯಾರೆಚ್ ೧೮೮೬

ಈ ಮೇಲಿನ ನಿಘಂಟುಗಳನ್ನು ಪರಿಶೀಲಿಸಿದರೆ

ಮುಖ್ಯವಾಗಿ ಕನ್ನಡ-ಇಂಗ್ಲೀಷ್, ಇಂಗ್ಲೀಷ್ -ಕನ್ನಡ, ಕನ್ನಡ-ಲ್ಯಾಟಿನ್ ಹಾಗೂ ಲ್ಯಾಟಿನ್ - ಕನ್ನಡ ಎಂಬ ನಾಲ್ಕು ಬಗೆಯಲ್ಲಿ ಮಿಶನರಿಗಳ ನಿಂಘಂಟುಗಳನ್ನು ಗುರುತಿಸಬಹುದು.

---

೧. ಹೊ.ಸಾ.ಉ ಮತ್ತು ವಿಕಾಸ ಹರಿಕೃಷ್ಣ ಭರಣ್ಯ, ೧೯೯೦, ಪು.೧೫೨

ಆಧುನಿಕ ಅರ್ಥದಲ್ಲಿ ಕನ್ನಡ ಭಾಷಾ ನಿಘಂಟು ರಚಿತವಾದದ್ದು ೧೮೩೨ರಲ್ಲಿ. ಕ್ರೈಸ್ತ ಧರ್ಮಗುರು ರೆವರೆಂಡ್ ರೀವ್ ಇದನ್ನು ಸಿದ್ಧಗೊಳಿಸಿದರು. ಇದರಲ್ಲಿ ಆಕಾರಾದಿ ಕ್ರಮದಲ್ಲಿ ಕನ್ನಡ ಸಂಸ್ಕೃತ ಪದಗಳನ್ನು ವಿಂಗಡಿಸಿ ಅವಕ್ಕೆ ಇಂಗ್ಲೀಷ್ ಅರ್ಥವನ್ನು ಕೊಟ್ಟಿದೆ. ಉದಾ

ನಾನಿದ್ದ ದೇಶ - The country in which I was

ನೀನು ಬಂದ ಹಾದಿ - The road which you come

ಅವನಾಡಿದಾಟ - The game which he played

ನೀನು ಕಂಡವನು - The person who you saw (Reev-೧೮೨೪ XL)

ಡ್ಯಾನಿಯೇಲ್ ಸ್ಯಾಂಡರ್ ಸನ್ ಕ್ರಿ.ಶ.೧೮೫೮ರಲ್ಲಿ ರೀವ್ ರವರ ನಿಘಂಟಿನ ಲೋಪದೋಷಗಳನ್ನು ಸ್ವಲ್ಪಮಟ್ಟಿಗೆ ನಿವಾರಿಸಿ ಪರಿಷ್ಕೃತ ಆವೃತ್ತಿಯನ್ನು ಹೊರತಂದನು. ಮುಂದೆ ೧೮೯೩ರಲ್ಲಿ ಕನ್ನಡ ಸಾಹಿತ್ಯದಲ್ಲಿ, ಒಬ್ಬ ಪಾಶ್ಚಾತ್ಯ ವಿದ್ವಾಂಸ ಹಾಗೂ ಕ್ರೈಸ್ತ ಧರ್ಮಗುರು ರೆವರೆಂಡ್ (ಪೂಜ್ಯ) ಎಫ್ ಕಿಟಲ್ ರವರ ಸುಪ್ರಸಿದ್ಧ ಕನ್ನಡ ಇಂಗ್ಲೀಷ್ ಬೃಹತ್ತಾದ ನಿಘಂಟನ್ನು ಪ್ರಕಟಿಸಿದುದು ಕನ್ನಡ ಸಾರಸ್ವತಲೋಕಕ್ಕೆ ಹೆಮ್ಮೆಯ ಕೃತಿ. ಇದನ್ನು ೧೯೬೮-೭೧ರ ಅವಧಿಯಲ್ಲಿ ಮದ್ರಾಸ್ ವಿಶ್ವವಿದ್ಯಾಲಯ ಪರಿಷ್ಕರಿಸಿ ನಾಲ್ಕು ಸಂಪುಟಗಳಲ್ಲಿ ಪ್ರಕಟಿಸಿತು.

ರೆ.ಕಿಟಲ್‌ರವರ ಈ ಸಾಧನೆಗೆ ತಿಬಿಂಜನ್ ವಿಶ್ವವಿದ್ಯಾಲಯ ಡಾಕ್ಟರೇಟ್ ಪದವಿ ನೀಡಿ ಸನ್ಮಾನಿಸಿತು. ಕನ್ನಡ ಸಾಹಿತ್ಯಕ್ಕೆ ಸಂದ ಪ್ರಪ್ರಥಮ ಡಾಕ್ಟರೇಟ್ ಎಂಬುದನ್ನು ನಾವು ಮೋಗ್ಲಿಂಗ್‌ರವರನ್ನು ನೆನೆಯಬಹುದು.

ಕನ್ನಡ ನಿಘಂಟುವಿನ ಕಾರ್ಯದಲ್ಲಿ ಪ್ರಮುಖರಾದ ಮಿಶನರಿಗಳೆಂದರೆ ರೆ.ರೀವ್, ರೆ.ಗ್ಯಾರೆಟ್, ಸ್ಯಾಂಡರ್ ಸನ್ ಹಾಗೂ ರೆ.ಎಫ್.ಹೇಕಲ್‌ರು. ಪ್ರಾಚೀನಕಾಲದಿಂದ ನಿರ್ಮಾಣಗೊಂಡ ನಿಘಂಟುಗಳಿಗೆ ಸಂಸ್ಕೃತ ಶಬ್ದಗಳ ದೃಷ್ಟಿಕೋನವಿತ್ತು. ಕನ್ನಡಕ್ಕೆ ಹೊರಲಾರದಷ್ಟು ತಂದ ಸಂಸ್ಕೃತ ಶಬ್ದಗಳಿಗೆ ಕನ್ನಡದಲ್ಲಿ ಸರಿದೂಗುವ ಶಬ್ದಗಳನ್ನು ಅರಸುವುದು ಅವರ ಮುಖ್ಯ ಕಾರ್ಯವಾಗಿತ್ತು.

ಭಾರತ ದೇಶಕ್ಕೆ ಬಂದ ಮಿಶನರಿಗಳು ಧರ್ಮಪ್ರಸಾರ ಕಾರ್ಯ ನಿರ್ವಹಿಸುವಲ್ಲಿ, ಸ್ಥಳೀಯ ಭಾಷೆ ಕಲಿಯುವ ಅಗತ್ಯತೆ, ಅನಿವಾರ್ಯತೆ ಇತ್ತು. ಅವರು ಕೇವಲ ಬೋಧನೆಯಿಂದ ಧರ್ಮಪ್ರಚಾರ ಸಾಧ್ಯವೆಂದು ತಿಳಿಯದೆ ಹೇಳಿದುದನ್ನು ಬರೆಯುವ, ಬರೆದುದನ್ನು ಪ್ರಕಟಿಸುವ ಅವಶ್ಯಕತೆ ಅವರಲ್ಲಿತ್ತು. ಹೀಗಿರುವಾಗ ಅವರಿಗೆ ಮೊದಲು ಅವಶ್ಯವೆನಿಸಿದ್ದು, ಇಂಗ್ಲೀಷ್ ಕನ್ನಡ ಶಬ್ದಕೋಶಗಳು. "ವಿದೇಶೀಯ ಭಾಷಾ ಅಭ್ಯಾಸಕ್ಕೆ ವ್ಯಾಕರಣ ಮತ್ತು ಶಬ್ದಕೋಶಗಳು ಒಂದಕ್ಕೊಂದು ಪೂರಕ ಸಾಧನೆಗಳಷ್ಟೇ

ಆದಕಾರಣ ಇಂಗ್ಲೀಷ್ -ಕನ್ನಡ ಶಬ್ದಕೋಶಗಳ ರಚನೆಯ ಪ್ರಯತ್ನಗಳು ಕಂಡುಬರುತ್ತವೆ".[೧] ಇದರಿಂದಾಗಿ ಮೊಟ್ಟ ಮೊದಲು ಕನ್ನಡ ಭಾಷೆಯನ್ನು ಪರದೇಶಗಳ ಭಾಷೆಗಳೊಂದಿಗೆ ತೂಗಿ ನೋಡುವ, ತಾಳೆ ಮಾಡುವ ಸಂದರ್ಭ ಒದಗಿಬಂದಿತು. ಇಂಗ್ಲೀಷ್ ಜನರಿಗೆ ಕನ್ನಡ ಶಬ್ದ ಅರ್ಥವಾಗುವ ಹಾಗೆ ಹಾಗೂ ಕನ್ನಡಿಗರಿಗೆ ಇಂಗ್ಲೀಷ್ ಪದ ಸ್ವರೂಪ ಗ್ರಹಿಸುವ ಹಾಗೆ ಬರೆಯುವ ಶೈಲಿ ಅಂದು ಅಷ್ಟು ಸುಲಭದ ಮಾತಲ್ಲ. "ಇಲ್ಲಿಯ ಜನತೆಯ ಬದುಕು ಮತ್ತು ನಾಗರಿಕತೆಗಳು ಯುರೋಪದೇಶದವರಿಗಿಂತ ಭಿನ್ನ, ಭಾಷಾ ನಾಗರಿಕತೆಗಳು ಯುರೋಪದೇಶದವರಿಗಿಂತ ಭಿನ್ನ, ಭಾಷಾ ವಿಧಾನವೂ ಅಷ್ಟೇ ಅಪರಿಚಿತ. ಅಲ್ಲಿಯ ಹೊಸ ಶೋಧಗಳು ವಿಚಾರಗಳು ಇಲ್ಲಿಯ ಜನಕ್ಕೆ ಎಳ್ಳಷ್ಟೂ ತಿಳಿಯದ ಪರಿಸ್ಥಿತಿ, ಇದು ಸಾಲದೆಂಬಂತೆ ಸಂಸ್ಕೃತ-ಹಿಂದೂಸ್ಥಾನಿ-ಮರಾಠಿ ಮತ್ತು ದ್ರಾವಿಡ ಭಾಷೆಗಳ ಪ್ರಭಾವವನ್ನೂ ಪ್ರಾದೇಶಿಕ ಭೇದವನ್ನು ಒಳಗೊಂಡಿರುವ ಕನ್ನಡ ಶಬ್ದಗಳ ಸ್ವೀಕರಣ."[೧] ಇದು ಅಂದಿನ ಮಿಶನರಿಗಳ ಮುಂದೆ ಕಂಡುಬಂದ ಸಾಹಸದ ಕಾರ್ಯಗತಿ. ಅಂದಿನ ಮಿಶನರಿಗಳು ಧರ್ಮಪ್ರಸಾರಾರ್ಥ ಕೇವಲ ಉಪದೇಶವನ್ನು ಕೈಕೊಳ್ಳಬಹುದಿತ್ತು. ಆದರೆ ಅವರ ಉದ್ದೇಶವನ್ನು ಒಬ್ಬ ಮಿಶನರಿ ಹೀಗೆ ಸ್ಪಷ್ಟಪಡಿಸಿದ್ದಾನೆ.

"ಇದುವರೆಗೆ ನೀವು ಉಪದೇಶ ಮಾಡಿದ ವಿಷಯವನ್ನು ಎಲ್ಲಿಯಾದರೂ ಬರೆದದ್ದುಂಟೆ ಎಂದು ಮಿಶನರಿಗಳಾದ ನಮ್ಮನ್ನು ಜನ ಕೇಳುತ್ತಾರೆ. ಪ್ರವಚನ ಮಾಡಿಯಾದ ಮೇಲೆ ಆ ಮಾತುಗಳನ್ನು ಕೊಡದೆ ಹೋದರೆ ಏನು ಪ್ರಯೋಜನ? ಅಂಥ ಪುಸ್ತಕ ಅವನ ಕೈಯಲ್ಲಿದ್ದರೆ, ಅದನ್ನು ಇತರರನೇಕರು ಓದುವರು. ಅಲ್ಲಿಂದ ಅದು ಗ್ರಾಮಾಂತರವನ್ನೂ ಸೇರುವುದು. ಅಷ್ಟು ದೂರದಲ್ಲಿ ಮಿಶನರಿಗಳ ವಾಣಿಯು ಕೇಳಬರುವುದು ಸಾಧ್ಯವಿಲ್ಲವಾದರೂ ಪುಸ್ತಕವು ಆ ಕೆಲಸವನ್ನು ಮಾಡುತ್ತಲೇ ಇರುವುದು. ದೊಡ್ಡವರಿಗೂ ಎಳೆಯರಿಗೂ ಉಪಯೋಗ ಬೀಳಬಹುದಾದ ಇಂಥ ಪುಸ್ತಕಗಳ ಪ್ರಕಟಣೆಗೆ ಮುದ್ರಣಾಲಯವು ಅತ್ಯಗತ್ಯ."[೨]

ಅಂದು ಮಿಶನರಿಗಳು ಶಬ್ದಕೋಶಗಳಿಗೆ ಕೈಹಾಕಿದಾಗ ಅವರೆದುರು ನಮ್ಮ ಹಳೆ ಶಬ್ದಕೋಶಗಳು ಅವರಿಗೆ ಲಭ್ಯವಿದ್ದವು.* ಈಗ ನಾವು ನಿಘಂಟುಗಳಲ್ಲಿ ನೋಡುವ ಹಾಗೆ ಶಬ್ದಾರ್ಥ, ಶಬ್ದದ ಉತ್ಪತ್ತಿ, ಪ್ರಯೋಗ ಸಹಿತ ರಚನೆಗಳು ಮಿಶನರಿಗಳ ಕಾಲದಲ್ಲಿ ಕನ್ನಡ ಸಾಹಿತ್ಯದಲ್ಲಿ ಕಾಣಸಿಗುತ್ತಿರಲಿಲ್ಲ. ಈ ಆಧುನಿಕ ನಿಘಂಟು ಶಬ್ದಸ್ವರೂಪ ಶಬ್ದೋತ್ಪತ್ತಿ ಶಬ್ದಾರ್ಥವಿವರಣೆ, ನಾಣ್ನುಡಿ, ಗಾದೆಮಾತು ಇತರ ಭಾಷೆಗಳೊಂದಿಗಿನ ಹೋಲಿಕೆ ಹೀಗೆ ಶಬ್ದಕೋಶದ ಮೂಲಕ ಕನ್ನಡ ಸಾಹಿತ್ಯಕ್ಕೆ ವಿಫುಲ ಸಂಪತ್ತಾಗಿ ಪರಿಣಮಿಸಬೇಕೆಂಬ ಮಿಶನರಿಗಳ ಹಂಬಲ ಕನ್ನಡ ಸಾಹಿತ್ಯಕ್ಕೆನೇ ತೀರಾ ಹೊಸತಾದ ಪರಿ.


---

೧. ಹೊ.ಅ.ಶ್ರೀ.ಹಾ., ಪು.೩೫೨

೨. ಅದೇ, ಪು.೩೫೨


* ಕ್ರಿ.ಶ.೧೮೧೭ರಿಂದ ರೀವನು ನಿಘಂಟಿನ ಕಾರ್ಯವನ್ನು ಪ್ರಾರಂಭಿಸುವಾಗ ಅಮರಕೋಶ, ಚತುರಾಸ್ಯ, ಕಬ್ಬಿಗರ ಕೈಪಿಡಿ, ಶಬ್ದಮಣಿದರ್ಪಣ ಮತ್ತು ಶಬ್ದಮಂಜರಿಗಳನ್ನು ಬಳಸಿದುದಾಗಿಯು ನಿಘಂಟಿನ ಮುನ್ನುಡಿಯಲ್ಲಿ ಹೇಳಿದ್ದಾನೆ.

ವನ್ನರ್ಪಿಸುವುದಕ್ಕೆ ಹತ್ತಿ ಹೋಗುವುದಕ್ಕಾಗಿ ಮೆಟ್ಟಲುಗಳಿಲ್ಲದ ಬೇರೊಂದು ದಾರಿಯು ಇದ್ದಿತು. ಯಜ್ಞವೇದಿಯ ಪಶ್ಚಿಮಭಾಗದಲ್ಲಿ ಯಾಜಕರು ಸ್ನಾನಮಾಡುವುದಕ್ಕಾಗಿ




ಯಜ್ಞವೇದಿ.

ಒಂದು ಕಂಚಿನ ತೊಟ್ಟಿಯಿದ್ದಿತು. ಪವಿತ್ರಸ್ಥಾನದಲ್ಲಿ ತೆರೆಯ ಮುಂಭಾಗದಲ್ಲಿ ಧೂಪಪೀಠವು ನಿಂತಿದ್ದಿತು. ದಕ್ಷಿಣ



ಧೂಪಪೀಠ.

ಗೋಡೆಗೆ ಸಮೀಪದಲ್ಲಿ ಏಳು ಕವಲುಗಳುಳ್ಳ ಚಿನ್ನದ ದೀಪಸ್ತಂಭವು ನಿಂತಿದ್ದಿತು. ಪೂರ್ವದ ಗೋಡೆಯ ಬಳಿಯಲ್ಲಿ ದೇವಸಮುಖದ ರೊಟ್ಟಿಗಳ ಮೇಜವಿದ್ದಿತು. ಅತಿ ಪವಿತ್ರಸ್ಥಾನದೊಳಗೆ ಪಾಪನಿವಾರಣೆಯ ದಿನದಲ್ಲಿ ಮಹಾ



1

ಏಳು ಕವಲುಗಳುಳ್ಳ ದೀಪಸ್ತಂಭ.

ಯಾಜಕನು ತೆಗೆದುಕೊಂಡು ಬರುವ ಧೂಪಾರತಿಯನ್ನು ಇಡುವ ಒಂದು ಕಲ್ಲು ಹೊರತು ಬೇರೇನು ಇರಲಿಲ್ಲ. ರೋಮ್ ರಾಜ್ಯದ ಸೇನಾಪತಿಯಾದ ತೀತನು ಯೆರೂಸಲೇಮ್ ಪಟ್ಟಣವನ್ನು ನಾಶನಮಾಡಿದಾಗ ಪವಿತ್ರಸ್ಥಾನದಲ್ಲಿದ್ದ ದೀಪಸ್ತಂಭವನ್ನೂ ಸಮುಖದ ರೊಟ್ಟಿಗಳ ಮೇಜನ್ನೂ ರೋಮಾಪುರಕ್ಕೆ ತೆಗೆದುಕೊಂಡು ಹೋದನು. ಅವನು ಅಲ್ಲಿ ಕಟ್ಟಿಸಿದ ಒಂದು ಮಂಟಪದಲ್ಲಿ ಈ ಸಾಮಾನುಗಳ ಆಕಾರಗಳನ್ನು ಶಿಲ್ಪಗಳು ಕೆತ್ತಿಟ್ಟಿರುತ್ತಾರೆ.

ಆ ರೀತಿಯಲ್ಲಿ ಚಿನ್ನದಿಂದಲೂ ಕಂಚಿನಿಂದಲೂ ಶ್ವೇತಶಿಲೆಗಳಿಂದಲೂ ಹಲವು ವಿಧ ವಿಚಿತ್ರವಾದ ಕೆಲಸಗಳಿಂದಲೂ ಅಲಂಕರಿಸಲ್ಪಟ್ಟ ಈ ದೊಡ್ಡ ದೇವಾಲಯವು ಆ ಕಾಲದಲ್ಲಿ ಲೋಕಪ್ರಸಿದ್ಧವಾದ ಕಟ್ಟಡಗಳಲ್ಲಿ ಒಂದಾಗಿದ್ದಿತು. ಬೆಟ್ಟದ ಮೇಲೆ ಕಟ್ಟಲ್ಪಟ್ಟು ಕೋಟೆಗಳಿಂದಲೂ ಮೆಟ್ಲುಮೆಟ್ಟಾಗಿ ಒಂದುಕ್ಕಿಂತಲೂ ಇನ್ನೊಂದು ಎತ್ತರವಾಗಿ ಏರಿರುವ ಅಂಗಳಗಳಿಂದಲೂ ಸುತ್ತಲ್ಪಟ್ಟು ಶ್ವೇತಶಿಲೆಯಿಂದಲೂ ಚಿನ್ನದಿಂದಲೂ ಮುಚ್ಚಲ್ಪಟ್ಟು ಇದ್ದ ಈ ದೇವಾಲಯವು ಮಂಜು ಮುಸುಕಿದ ಒಂದು ದೊಡ್ಡ ಬೆಟ್ಟವೋ ಎಂಬಂತಿದೆಯೆಂದು ಯೆಹೂದ್ಯರಾದ ವೇದಶಾಸ್ತ್ರಿಗಳು ಹೇಳುತ್ತಿದ್ದರು.

11. ದೇವಾಲಯದಲ್ಲಿ ನಡೆಯುತ್ತಿದ್ದ ಪ್ರತಿ ದಿನದ ಆರಾಧನೆ. ದೇವಾಲಯದಲ್ಲಿ ನಡೆಯುತ್ತಿದ್ದ ಅನುದಿನದ ಆರಾಧನೆಯು ಯಾವುದೆಂದರೆ—ಯಾಜಕರು ಮುಂಜಾನೆ ಎದ್ದು ಸ್ನಾನಮಾಡಿ ತಮ್ಮ ಸೇವೆಗೆ ಸಂಬಂಧಪಟ್ಟ ಉಡುಪುಗಳನ್ನು ಧರಿಸಿಕೊಂಡು ಒಂದೊಂದಾಚಾರಕ್ಕೂ ಯಜಮಾನರನ್ನು ನೇಮಿಸುವುದಕ್ಕಾಗಿ ಚೀಟುಹಾಕುವರು. ಈ ರೀತಿಯಲ್ಲಿ ಯಜ್ಞವೇದಿಯಿಂದ ಬೂದಿಯನ್ನು ತೆಗೆಯುವುದು, ಸೌದೆ ಹಾಕುವುದು, ಕುರಿ ಮರಿಗಳನ್ನು ಕತ್ತರಿಸುವುದು, ಧೂಪ ಪೀಠವನ್ನು ಶುಚಿಮಾಡುವುದು, ದೀಪಸ್ತಂಭಗಳನ್ನು ಬೆಳಗುವುದು ಇವೇ ಮೊದಲಾದ ಹಲವು ಕೆಲಸಗಳನ್ನು ಮಾಡುವುದಕ್ಕಾಗಿ ಕೆಲವರನ್ನು ನೇಮಿಸುವರು. ಸೂರ್ಯೋದಯ ಕಾಲದಲ್ಲಿ ದೇವಾಲಯದ ಬಾಗಿಲುಗಳನ್ನು ತೆರೆದು ಕುರಿ ಮರಿಗಳನ್ನು ಕತ್ತರಿಸಿ ಧೂಪ ಪೀಠವನ್ನು ಸಿದ್ಧಮಾಡುವರು. ತರುವಾಯ ಧೂಪ ತೋರಿಸಿ ಕಡಿದಿದ್ದ ಕುರಿಮರಿಗಳನ್ನು ಬಲಿಯಾಗರ್ಪಿಸಿ ಆರಾಧನೆ ನಡಿಸುವರು. ತರುವಾಯ ಜನಗಳೆಲ್ಲರೂ ಬಲಿಯ ಹೊಗೆಯನ್ನು ನೋಡಿ ಬೋರಲು ಬಿದ್ದು ಪ್ರಾರ್ಥನೆ ಮಾಡುವಲ್ಲಿ ನಿಯಾಮಕವಾದ ಯಾಜಕನು ಧೂಪಾರತಿಯನ್ನು ತೆಗೆದು ದೇವಾಲಯಕ್ಕೆ ಮುಂದಿದ್ದ ಮಂಟಪದ ಮೂಲಕವಾಗಿ ಪವಿತ್ರಸ್ಥಾನದೊಳಗೆ ಪ್ರವೇಶಿಸುವನು (ಲೂಕ 1^{9}). ಅವನು ಧೂಪವನ್ನು ತೋರಿಸಿದ ಮೇಲೆ ತಿರಿಗಿ ಮಂಟಪದ ಬಾಗಿಲಲ್ಲಿ ನಿಂತು ಜನಗಳನ್ನು ಆಶೀರ್ವದಿಸುವನು. ಇದಾದ ಮೇಲೆ ಯಾಜಕರು ಬಲಿಯನ್ನು ಯಜ್ಞವೇದಿಯ ಮೇಲೆ ದಹಿಸಿ ಪಾನ ಬಲಿಯನ್ನು ಹೊಯ್ಯುವರು. ಇದನ್ನು ನೋಡಿ ಲೇವಿಯ ಗೋತ್ರಕ್ಕೆ ಸೇರಿದ ಅನೇಕ ಸ್ತುತಿಪಾಠಕರು ಆ ದಿನಕ್ಕೆ ನಿಯಾಮಕವಾದ ಕೀರ್ತನೆಯನ್ನು ಹಾಡುವರು. ಇವರು ಹಾಡುತ್ತಿರುವಾಗ ಇಬ್ಬರು ಯಾಜಕರು ಎರಡು ಕಹಳೆಗಳನ್ನು ಊದಿ ಶಬ್ದಮಾಡುವಾಗ ಜನಗಳು ತಿರಿಗಿ ಬೋರಲು ಬಿದ್ದು ಆರಾಧಿಸುವರು.

ವೇದಕೋಶ ಚಿತ್ರಗಳೊಂದಿಗೆ.

ಮಿಶನರಿಗಳು ಬರೆದ ಬೈಬಲ್ ಶಬ್ದಕೋಶಗಳಲ್ಲಿ ಸಮಯೋಚಿತ ಸೂಕ್ತ ಚಿತ್ರಣಗಳನ್ನು ಪ್ರದರ್ಶಿಸಿದ್ದಾರೆ. ಹೀಗೆ ಶಬ್ದಕೋಶದಲ್ಲಿ ಚಿತ್ರಗಳ ಮೂಲಕ ನಕ್ಷೆಗಳ ಮೂಲಕ ಪ್ರಕಟಿಸುವ ಅವರ ಹೊಸಸೃಷ್ಟಿ ಹೊಸ ದೃಷ್ಟಿ ನಿಜಕ್ಕೂ ಶ್ಲಾಘನೀಯ.

ಈ ಮೇಲಿನ ಅಂಶಗಳನ್ನು ಗಮನಿಸಿದರೆ, ಮಿಶನರಿಗಳು ಬೈಬಲ್ ಭಾಷಾಂತರಿಸಲು ತಮಗೆ ಅನುಕೂಲವಾಗಲೆಂದು ರಚಿಸಲು ಹೊರಟಿದ್ದು ಅವರ ಮೊದಲ ಪ್ರಯತ್ನ. ಆದರೆ ಕನ್ನಡ ಸಾರಸ್ವತ ಲೋಕಕ್ಕೆ ಉಪಯುಕ್ತವಾಗಲೆಂದು ರಚಿಸಿದ್ದು ಅವರ ನಂತರದ ಪ್ರಯತ್ನ. ಈ ಮೂಲಕವಾಗಿ ಕನ್ನಡ ಭಾಷೆ ಹೊರದೇಶಕ್ಕೂ ಪರಿಚಯಗೊಂಡು ತನ್ಮೂಲಕ ಇಂಗ್ಲೀಷಿಗೆ ಸಂಪರ್ಕಗೊಂಡು, ಅದರ ಪ್ರೇರಣೆಯಿಂದ ತನ್ನ ಶಬ್ದಗಳಲ್ಲಿಯೇ ಹೊಸ ಹೊಸ ಉತ್ಪತ್ತಿಗೆ ನಾಂದಿಯಾಯಿತು. ನಂದಲಾರದ ದೀಪವಾಗಿ ಬೆಳಗಲು ಉದ್ಯುಕ್ತವಾಯಿತು.

ನಿಘಂಟುಗಳಲ್ಲಿಯ ಅಂಶಗಳನ್ನು ತಿಳಿದುಕೊಂಡಾಗ ಮಾತ್ರ, ಮಿಶನರಿಗಳ ದೃಷ್ಟಿಯಿಂದ ಕನ್ನಡ ಸಾಹಿತ್ಯ ಹೇಗೆ ಹೊಸ ಹೊಳಲನ್ನು ಕಂಡುಕೊಂಡಿತೆಂದು ಖಚಿತವಾಗಿ ಗ್ರಹಿಸಿಬಹುದು. ತಮ್ಮ ಮಾತೃಭಾಷಾ ದೃಷ್ಟಿಕೋನದಲ್ಲಿ ಕನ್ನಡವನ್ನು ಅರಿಯ ಹೊರಟಿದ್ದು ಮತ್ತೊಂದು ತಿರುವು ಪಡೆಯಲು ಕಾರಣವಾದಂತಿದೆ. ಆಧುನಿಕ ಕನ್ನಡ ನಿಘಂಟಿನ ಜನರು ಮಿಶನರಿಗಳೆಂದರೆ ತಪ್ಪಾಗಲಿಕ್ಕಿಲ್ಲ. ಈ ಕಾರ್ಯದಲ್ಲಿ ಮುಖ್ಯವಾಗಿ ರೆ.ರೀವ್, ಗ್ಯಾರೆಟ್, ಸ್ಯಾಂಡರಸನ್ ಹಾಗೂ ರೆ.ಎಫ್.ಕಿಟಲ್‌ರು ಕೆಲಸ ಮಾಡಿದ್ದಾರೆ.

'ಕನ್ನಡ ವಿಷಯ ವಿಶ್ವಕೋಶದ ಬೃಹತ್ ಗ್ರಂಥದಲ್ಲಿ ಕನ್ನಡ ನಿಘಂಟು ಕುರಿತು, ಬರೆದ ಲೇಖನದಲ್ಲಿ, ಪಾಶ್ಚಾತ್ಯರ ಕೊಡುಗೆ ಕುರಿತು ಎಳ್ಳಷ್ಟು ಮಾಹಿತಿ ಲಭ್ಯವಿಲ್ಲ. ಆಧುನಿಕ ಕನ್ನಡ ನಿಘಂಟುವಿನ ಜನಕನೆಂದೇ ಪ್ರಸಿದ್ಧಿಯಾಗಿರುವ ರೆ.ಫರ್ಡಿನಾಂಡ್ ಕಿಟಲ್‌ರ ಹೆಸರನ್ನು ಕೂಡ ಸ್ಮರಿಸದೇ ಇರುವುದು ತುಂಬಾ ವಿಷಾದನೀಯ ಸಂಗತಿ. ಹೀಗೆ ಪಾಶ್ಚಾತ್ಯ ಮಿಶನರಿಗಳ ಕನ್ನಡ ಸೇವೆ ಅವಜ್ಞೆಗೆ ಒಳಗಾದ ಸಂದರ್ಭಗಳೇ ಕನ್ನಡ ಸಾಹಿತ್ಯದಲ್ಲಿ ಹೆಚ್ಚು.

೪.೭. ಬೈಬಲ್ ಅನುವಾದಗಳು ಕನ್ನಡದಲ್ಲಿ ಹೊಸಗನ್ನಡ ಸಾಹಿತ್ಯ ಜನ್ಮ ತಾಳುವುದಕ್ಕಿಂತ ಮೊದಲೇ ಇದ್ದುವೆ?

ಒಂದನೇ ಶತಮಾನದಿಂದ ಭಾರತಕ್ಕೆ ಕ್ರೈಸ್ತ ಧರ್ಮದ ಪ್ರಭಾವ ಕಂಡುಬಂದರೂ ಕ್ರೈಸ್ತರ ಧರ್ಮಗ್ರಂಥವಾದ ಬೈಬಲ್ ಪರಿಚಯ ಒಮ್ಮೆಲೆ ಕಂಡುಬರುವುದಿಲ್ಲ.

ಒಂದು ಧರ್ಮಗ್ರಂಥದ ಅವಶ್ಯಕತೆ ಕಂಡುಬರುವುದಾದರೆ ಆ ಧರ್ಮದ ತಿರುಳಾದರು ಆ ಜನಾಂಗಕ್ಕೆ ಇರಬೇಕಾಗುತ್ತದೆ. ಈ ಅವಶ್ಯಕತೆ ಮಿಶನರಿಗಳಲ್ಲಿ ನಾವು ಕಾಣುವುದಾದರೆ ಕ್ರೈಸ್ತಧರ್ಮದ ಅಂಶಗಳು ತತ್ವದ ಸಾರಗಳು, ಕರ್ನಾಟಕದಲ್ಲಿ ಇದ್ದಿರಬಹುದೆಂಬ ಊಹೆಗೆ ಚಾಲನೆ ದೊರೆತು ಕೆಲವು ಆಧಾರಗಳನ್ನು ಕಾಣಬಹುದು.

"There is a tradition that the Aposfle St Bartholomew preached. at Kalyan. In Mc Grindle's'Indica' we find a quotation from st Jerome AD 410 He says Dametrius Bishop of Alexadria. sent pantaenus in about A.D.189 to India and found chrisitions of Kalyan and the Gospel according to st mathew in Hebrew with Them."[೧]

ದಕ್ಷಿಣ ಕನ್ನಡದ ಕ್ರೈಸ್ತರ ಕುರಿತು ಬರೆಯುವಾಗ ಉದಾಹರಿಸಿದ ಸಂದರ್ಭ ಇದು. "ಮಲಬಾರಿಕೆ ಸಂತಥೊಮಸ್ ನು ಕ್ರಿ.ಶ.೫೨ರಲ್ಲೇ ಬಂದು, ಮತಪ್ರಚಾರ ಮಾಡಿದನೆಂಬ ಸಿರಿಯನ್ ಸಂಪ್ರದಾಯದ ಜೊತೆ ನಾವು ಶಾಮೀಲಾದರೆ, ಕ್ರೈಸ್ತಮತ ಕರ್ನಾಟಕಕ್ಕೆ ಕಾಲಿಟ್ಟ ಕಥೆಯನ್ನು ಒಂದನೇ ಶತಮಾನಕ್ಕೆ ಎಳೆದೊಯ್ಯಬಹುದು."[೨]

೧೬ನೇ ಶತಮಾನದಿಂದ ಭಾರತದ ಮೇಲೆ ಪ್ರಭಾವ, ಆಳಿಕೆಯನ್ನು ನಡೆಸುತ್ತಿದ್ದ ಬ್ರಿಟೀಷರು ತಮ್ಮ ಧರ್ಮವನ್ನು ನೇರವಾಗಿ ಜನರ ಮೇಲೆ ಹೇರಲು ಪ್ರಯತ್ನಿಸಿದ್ದು ಕಂಡುಬರುವುದಿಲ್ಲ. ಹಾಗೂ ಧರ್ಮಪ್ರಸಾರಕ್ಕೆಂದು ಮೊದ-ಮೊದಲು ಆಗಮಿಸಿದ ಮಿಶನರಿಗಳನ್ನು ಆಡಳಿತವರ್ಗದವರು ಸ್ವಾಗತಿಸದೇ ವಿರೋಧಿಸಿದ್ದು ಕಂಡುಬರುವುದು. "ಕ್ರೈಸ್ತ ಮತ ಪ್ರಚಾರಕರು ನಡೆಸುತ್ತಿದ್ದ ಆರೋಗ್ಯ, ವ್ಯವಸಾಯ, ಕೈಗಾರಿಕೆ, ವಿದ್ಯಾಪ್ರಚಾರ ಕಾರ್ಯಕ್ಕೆಲ್ಲ ಪ್ರೋತ್ಸಾಹವಿತ್ತರೂ, ಕ್ರೈಸ್ತಮತ ಪ್ರಚಾರದ ಬಗ್ಗೆ ಅವರು "A Strict Policy of religious neulralitiy ಯನ್ನು ಅನುಸರಿಸಿದನ್ನು ಗಮನಿಸಬೇಕಿದೆ.... ....ಅಂದಿನ ಕ್ರೈಸ್ತ ವಿದ್ವಾಂಸರು ಈ ದೇಶದ ಸಮಾಜ ಸಂಸ್ಕರಣಾ ಕಾರ್ಯದಲ್ಲಿ ನಿರತರಾಗಿದ್ವಾಗ, ಅವರಾರೂ ತಮ್ಮ ಕ್ರೈಸ್ತಮತ ಪ್ರಚಾರದ ಬಗ್ಗೆ ಆಸಕ್ತಿವಹಿಸಬಾರದೆಂದೂ, ಹಾಗೆ ಮತ ಪ್ರಚಾರ ಮತಪರಿವರ್ತನಾ ಕಾರ್ಯದಲ್ಲಿ ನಿರತರಾಗಿರುವವರನ್ನು ವಾಪಸ್ಸು ಯೂರೋಪಿಗೆ ಕಳುಹಿಸಲಾಗುವುದೆಂದೂ ಆಂಗ್ಲ ಸರಕಾರವು ಕಠಿಣ ನಿಯಮವನ್ನೇ ವಿಧಿಸಿತು."[೩]

---

೧. A.L.P.D.Souza History of the Catholic Community of South Canara, 1983, P.19 & 20

೨. ಕ.ಕ್ರೈ.ಇ.ತಲ್ವಾಡಿ, ಪು.೩೮

೩. ಭಾ.ಸಾ.ಸಂ.ಪಾ.ಮಿ.ಕ್.ಸೇವೆ., ಐ.ಮಾ.ಮುತ್ತಣ್ಣ, ಪು.೪೮೮-೪೮೯

ಈ ಕಾರಣದಿಂದ ''ಲಂಡನ್ ಮಿಷನ್‌ಗೆ ಸೇರಿದ್ದ ವಿಲಿಯಂ ಕೇರಿ, ಮಾರ್ಷಮನ್ (Marshman) ಬ್ರುಂಡಸನ್ (Brunndson) ಮೊದಲಾದವರು ಡೇನರ ಅಥವಾ ಅಮೇರಿಕನ್ನರ ಹಡಗುಗಳಲ್ಲಿ ಕಲ್ಕತ್ತೆಯನ್ನು ಬಿಟ್ಟು ಶ್ರೀರಾಮ್‌ಪುರಕ್ಕೆ ಹೋಗಿ ತಮ್ಮ ವಿದ್ಯೆ, ಸಾಹಿತ್ಯ, ಸಂಸ್ಕೃತಿ ಇತ್ಯಾದಿಗಳ ಪ್ರಚಾರ್ಯಕಾರ್ಯವನ್ನು ಒಡಗೂಡಿ, ಸಾಗಿಸಿದರು.''[೧] ಇದರೊಂದಿಗೆ ಧರ್ಮಪ್ರಚಾರವೂ ಸಾಗಿಯೇ ಇತ್ತು. ಮುದ್ರಣ ಕಾರ್ಯಕ್ಕೆ ಮುಂಚಿತವಾಗಿ ಧರ್ಮಪ್ರಚಾರ ನಡೆದಿದ್ದರೂ, ಬ್ರಿಟೀಷರು ಭಾರತಕ್ಕೆ ಬರುವ ಮೊದಲೇ ಕ್ರೈಸ್ತ ಧರ್ಮದ ಅಸ್ತಿತ್ವ ಕಂಡುಬರುತ್ತಿತ್ತು. ಈಗ ತಾವು ಈ ಜನರಿಗೆ ಏನನ್ನು ಬೋಧಿಸಿದೆವೆಂಬುದು ದಾಖಲಿಸಲೇಬೇಕೆಂಬುದನ್ನು ನಿಶ್ಚಯಿಸಿದಾಗ ಅವರು ಮುದ್ರಿಸುವ ಪ್ರಯತ್ನಕ್ಕೆ ಕೈಹಾಕಿದರು. ಆಗ ಬೈಬಲ್ ಮುದ್ರಣದ ಅವಶ್ಯಕತೆ ಆಯಾ ಭಾಷೆಯಲ್ಲಿ ಕಂಡುಬಂದಿತು.

ಬೈಬಲ್ ಮೂಲ ಭಾಷೆಗಳಾದ ಗ್ರೀಕ್, -ಹಿಬ್ರೂಗಳಿಂದ ನೇರವಾಗಿ ಕನ್ನಡಕ್ಕೆ ತರ್ಜುಮೆಗೊಳಿಸಲು ಆದ್ಯ ಮಿಶನರಿಗಳು ಕಾರ್ಯೋನ್ಮುಖರಾದುದು ಕಂಡುಬರುವುದು. ''ಕಿಂಗ್ ಜೇಮ್ಸನ ಹೆಸರಿನಲ್ಲಿದ್ದ ಈ ಆವೃತ್ತಿ(KJU)ಯೇ ಕನ್ನಡಾನುವಾದಗಳಿಗೆ ಮೂಲಾಧಾರವಾಗಿದ್ದಿತು. ಮಂಗಳೂರಿನಲ್ಲಿದ್ದ ಜರ್ಮನ್ ಮಿಶನರಿಗಳೂ ಇದನ್ನೇ ಅನುಸರಿಸಿದಂತೆ ತೋರುತ್ತದೆಂದು ಶ್ರೀ ಹಾವನೂರರು ಅಭಿಪ್ರಾಯ ಪಟ್ಟಿದ್ದಾರೆ''.[೨] ಆದರೆ ಮಿಶನರಿಗಳಿಗೆ ಗ್ರೀಕ್-ಹಿಬ್ರೂಗಳ ಪರಿಚಯವಿತ್ತು. ಅವರು ದೈವಜ್ಞಾನ ಶಾಸ್ತ್ರದಲ್ಲಿ ಪದವಿಧರರು. ಡಾಕ್ಟರೇಟ್ ಪಡೆದವರಾಗಿದ್ದರು. ಹೀಗಾಗಿ ಇಂಗ್ಲೀಷ್ ಭಾಷೆಯ ಬೈಬಲ್ ಮೂಲಕ ಕನ್ನಡ ಬೈಬಲ್ ಭಾಷಾಂತರಕ್ಕೆ ಮುಂದಾಗದೇ ಗ್ರೀಕ್, ಹಿಬ್ರೂ ಬೈಬಲ್‌ಗಳಿಂದ ನೇರವಾಗಿ ಕನ್ನಡದಲ್ಲಿ ಭಾಷಾಂತರಿಸಿರುವರು. ಇದು ಆಯಾ, ಬೈಬಲ್ ಮುಖಪುಟದಲ್ಲಿಯೇ ಮುದ್ರಿತವಾಗಿದೆ. ಈ ಹಿನ್ನೆಲೆಯಲ್ಲಿ ಕನ್ನಡ ಬೈಬಲ್ ಇಂಗ್ಲೀಷ್ ಬೈಬಲ್‌ಗಿಂತ ಉತ್ತಮ ಅರ್ಥಗಳೊಂದಿಗೆ ಕೆಲವು ಕಡೆ ಕಾಣಸಿಗುತ್ತದೆ.

''ಒಂಭತ್ತು ದಶಲಕ್ಷದಷ್ಟು ಶಬ್ದಗಳಿರುವ ಬೈಬಲ್ ಅನುವಾದದ ವಿವಿಧ ಹಂತಗಳಲ್ಲಿ ನಾವು ಕನ್ನಡ ಗದ್ಯದ ವಿಕಾಸವನ್ನು ಕಾಣಬಹುದು. ಹೊಸಗನ್ನಡದ ಗದ್ಯವು ನೆಲೆಗೊಂಡಿರಚ ಆ ಕಾಲದಲ್ಲಿ ಪ್ರತಿ ಶಬ್ದವನ್ನೂ ಒರೆಗೆ ಹಚ್ಚಿ ಪ್ರಾದೇಶಿಕ ಭೇದಗಳನ್ನು ಸಮನ್ವಯಗೊಳಿಸುತ್ತ ಈ ಬೃಹದ್ಗ್ರಂಥದ ಭಾಷಾಂತರವನ್ನು ಮುಗಿಸಿದುದು ಕನ್ನಡ ಸಾಹಿತ್ಯೇತಿಹಾಸದಲ್ಲಿ ಒಂದು ಅಪೂರ್ವ ಘಟನೆಯಾಗಿದೆ.[೩]

ಕನ್ನಡದ ಪ್ರಥಮ ಮುದ್ರಣ ಬೈಬಲ್ (ಹೂ.ಬ) ಪ್ರತಿ, ಕರ್ನಾಟಕದಲ್ಲಿ ಆಗದೆ ಬಂಗಾಳದಲ್ಲಿ ನಡೆದಿರುವುದನ್ನು ಗಮನಿಸಿದಾಗ್ಯ ಬೈಬಲ್ ಕನ್ನಡದಲ್ಲಿ ಅನುವಾದಗೊಳ್ಳಲು ಪೂರ್ವದ ಯಾವ

---

೧. ಭಾ.ಸಾ.ಸಂ.ಪಾ.ಮಿ.ಕ್.ಸೇವೆ., ಐ.ಮಾ.ಮುತ್ತಣ್ಣ, ಪು.೪೮೯

೨. ಹೊ.ಅ.ಶ್ರೀ.ಹಾ.ಪು.೪೨೨

೩. ಅದೇ, ಪು.೪೨೪-೪೨೫

ಮಿಶನರಿಯ ಸಾಹಿತ್ಯ ಪ್ರಭಾವವು ಆದಂತೆ ಕಂಡುಬರುವುದಿಲ್ಲ. ಬಳ್ಳಾರಿಯಲ್ಲಿ ಜಾನ್ ಹ್ಯಾಂಡ್ಸನಿಂದ ಬಂದ ಬೈಬಲ್ ಎರಡನೇ ಭಾಗದ ಮೊದಲ ಪುಸ್ತಕ (Gospel) ಕೂಡ ಸ್ವತಂತ್ರಕೃತಿ ಹಾಗೂ ಕನ್ನಡವನ್ನು ಕಲಿತ ಒಬ್ಬ ಪರದೇಶಿ ಮಿಶನರಿಯಿಂದ ರೂಪುಗೊಂಡ ಹೊಸಗನ್ನಡದ ಕೃತಿ ಇದಾಗಿದೆ. ಇವುಗಳ ಶೈಲಿಯ ದೃಷ್ಟಿಯಿಂದ ಹೇಳುವುದಾದರೆ ಹೊಸಗನ್ನಡದ ನವಜಾತ ಶಿಶುವಿನ ತೊದಲು ಧ್ವನಿಯೆಂದು ಕಂಡುಬರುತ್ತದೆ. ವಿನಃ ಈ ಮಿಶನರಿಗಳಿಗಿಂತ ಕರ್ನಾಟಕದಲ್ಲಿದ್ದು ಧರ್ಮಪ್ರಚಾರ ಕೈಗೊಂಡ ಕೆಥೊಲಿಕ್ ಪಾದ್ರಿಗಳು, ಜೆಸ್ಸುವಿಟರು ರಚಿಸಿದ ಧಾರ್ಮಿಕ ಸಾಹಿತ್ಯದ ಪ್ರಭಾವದ ಭಾಷಾ ಹಿನ್ನಲೆಯನ್ನು ಹೊಂದಿದೆ ಎನ್ನುವಲ್ಲಿ ಆಧಾರಗಳು ಸಿಕ್ಕುವುದಿಲ್ಲ.

ಈ ಕೆಥೋಲಿಕ ಸಾಹಿತ್ಯ ೧೭ನೇ ಶತಮಾನದಲ್ಲಿ ಕಂಡುಬಂದಿದ್ದರೂ ಅದು ತನ್ನ ಪ್ರಭಾವವನ್ನು ಮುಂದಿನ ಬೈಬಲ್ ಅನುವಾದದವರೆಗೂ ಹಾಗೆಯೇ ಬದುಕುಳಿದಿತ್ತೆಂದು ಹೇಳಲು ಆಧಾರಗಳಿಲ್ಲ. ಕಾರಣ ೧೬೭೬ ರಿಂದ ೧೮೨೦ರವರೆಗೆ ಮಿಶನರಿ (ಕೆಥೋಲಿಕ)ಗಳ ಕಾರ್ಯ ನಡೆದು ಬಂದಿದೆ ಎಂದು "ಹದಿನೈದನೆಯ ಶತಮಾನದ ಸಮಕಾಲೀನ ಗ್ರಂಥ ಚರಿತ್ರೆಕಾರರಾದ (Bibliagrophers) ಸೊಮರ್ ಫೂಗೆಲ್ ಮತ್ತು ಸೂತ್‌ವೆಲ್ ಇವರು ಚನ್ನಾಮಿಯು ಕನ್ನಡದಲ್ಲಿ ಪುಸ್ತಕಗಳನ್ನು ಬರೆದಿದ್ದಾನೆಂದು ಸ್ಪಷ್ಟವಾಗಿ ಉಲ್ಲೇಖಿಸಿದ್ದಾರೆ."[೧] ಆದರೂ ಬೈಬಲ್ ಅನುವಾದಕರು ಎಲ್ಲಿಯೂ ಪೂರ್ವದ ಕನ್ನಡದ ಧಾರ್ಮಿಕ ಸಾಹಿತ್ಯದ ಕುರುಹುಗಳ ಕುರಿತು ದಾಖಲಿಸಿಲ್ಲ.

ಲಿಯೊನಾರ್ಡೊ ಚನ್ನಾಮಿ ಹಾಗೂ ಸವರ್ರಿಗಳಂತ ಕೆಥೋಲಿಕ ಧರ್ಮಬೋಧಕರಿಂದ ಹೊಸಗನ್ನಡ ಸಾಹಿತ್ಯ ಉದಯವಾಯಿತೆಂದು ಕಂಡುಬರುತ್ತಿದ್ದರೂ ಬೈಬಲ್ ಅನುವಾದಕ್ಕೆ ಅವು ಮೊದಲಾಗಲಿಲ್ಲವೆಂದೇ ಹೇಳಬೇಕು. ಯಾಕೆಂದರೆ ಹೊಸಗನ್ನಡ ಕಾರ್ಯ ಪ್ರಾರಂಭ(ಅನುವಾದ)ವಾದ ಕಾಲದ ಕೃತಿಕಾರರಾದ ಯಾರಬ್ಬರೂ ಹಿಂದಿನವರ ಸಾಹಿತ್ಯ ಕಾರ್ಯಗಳ ಕುರಿತು ಸ್ಮರಿಸಿಲ್ಲ.

ಬೈಬಲ್ ಅನುವಾದಕಾರರು ಅನುವಾದ ಸಮಯದಲ್ಲಿ ಹಿಂದಿನ ಕನ್ನಡ ಕೃಷಿಯನ್ನು ಪಡೆಯದೆ ಸ್ವತಂತ್ರವಾಗಿ ಅನುವಾದವನ್ನು ಮಾಡಿರುವಲ್ಲಿ ಸಂಶಯವಿಲ್ಲ. ಹೀಗಾಗಿ ಬೈಬಲ್ ಅನುವಾದಗಳು ಕನ್ನಡದಲ್ಲಿ ಹೊಸಗನ್ನಡ ಜನ್ಮ ತಾಳುವುದಕ್ಕಿಂತ ಮೊದಲೇ ಇದ್ದವೇ ಎಂಬ ಪ್ರಶ್ನೆಯನ್ನು ಹಾಕಿಕೊಂಡಾಗ ಇಲ್ಲವೆಂದೇ ಹೇಳಬೇಕು. ಕಾರಣ ನಾವು ಪರಿಗಣಿಸುವ ಬೈಬಲ್ ಅನುವಾದ ಸಾಹಿತ್ಯದ ಪೂರ್ವದಲ್ಲಿ ಕ್ರೈಸ್ತ ಧಾರ್ಮಿಕ ಹಾಗೂ ಕ್ರೈಸ್ತತ್ವವನ್ನು ಪ್ರಭಾವಿಕರಿಸುವ ಕೃತಿಗಳಿದ್ದ ಬಗ್ಗೆ ಉಲ್ಲೇಖ ದೊರೆಯುವುದು. ಆದರೆ ಬೈಬಲ್ ಭಾಷಾಂತರ ಕಂಡುಬಂದಿಲ್ಲ.

ಇನ್ನೊಂದು ಮುಖ್ಯಕಾರಣ "ಕೆಥೋಲಿಕರಿಗೆ ಪ್ರಾರಂಭದಲ್ಲಿ (ಅಂದರೆ ೧೯೮೨ರವರೆಗೆ) ಬೈಬಲ್ (ಕನ್ನಡ) ದೊರೆಯುತ್ತಿರಲಿಲ್ಲವೆಂದರೆ ಆಶ್ಚರ್ಯವಾಗಬಹುದು. ಬೈಬಲ್ ನಿಮಗೆ ಏಕೆ ಬೇಕು. ನಾವೇ

೧. ಹೊ.ಅ.ಶ್ರೀ.ಹಾ., ಪು.೯೦

ಓದಿ ಅದರ ಅರ್ಥಹೇಳುತ್ತೇವಲ್ಲ ಎಂದು ಪಾದ್ರಿಗಳು ಹೇಳುತ್ತಿದ್ದರು. ಈ ಕಾರಣದಿಂದಾಗಿ ಎಡ್ವರ್ಡ್ ನೂರೊನ ಹೇಳುವ ಹಾಗೆ ಬೈಬಲ್ ಗೆ ಸಂಬಂಧಿಸಿದಂತೆ ಕೆಥೋಲಿಕ ಸಾಹಿತ್ಯದ ಆರಂಭದ ಕಾಲದಲ್ಲಿ ಹೆಚ್ಚಿನದೇನೂ ಕಾಣವುದಿಲ್ಲ. ಆ ಕಾಲಕ್ಕಾಗಲೇ ಪ್ರಾಟೆಸ್ಟಂಟರಿಗೆ ಬೈಬಲ್ ದೊರಕಿದ್ದರೂ ಕೆಥೋಲಿಕರ ಪಾಲಿಗೆ ಅದು ನಿಷಿದ್ಧವಾಗಿತ್ತು".[೧]

ಕನ್ನಡದಲ್ಲಿ ಬೈಬಲ್ ಅನುವಾದದ ಕಾಲಕ್ಕಿಂತ ಪೂರ್ವದ ಯಾವ ಹೊಸಗನ್ನಡ ಕೃತಿಗಳು ಬೈಬಲ್ ಅನುವಾದದ ಮೇಲೆ ಪ್ರಭಾವ ಬೀರಿವೆ ಎಂದು ಹೇಳುವಂತಿಲ್ಲ.

ಬೈಬಲ್ ಭಾಷಾಂತರದ ಮೂಲಕ ಹೊಸಗನ್ನಡದ ಕಾಲವನ್ನು ಗುರುತಿಸಬಹುದಾದ್ದರಿಂದ, ಬೈಬಲ್ ಅನುವಾದಗಳು ಹೊಸಗನ್ನಡ ಜನ್ಮತಾಳುವುದಕ್ಕಿಂತ ಮೊದಲೇ ಇದ್ದುವು ಎಂದು ಒಪ್ಪಿಕೊಳ್ಳಲು ಆಧಾರ ಕಂಡುಬರುವುದಿಲ್ಲ. ಬೈಬಲ್ ಮೂಲಕವೇ ಹೊಸಗನ್ನಡ ಗದ್ಯ ಪ್ರಾರಂಭವಾಗಿದೆ ಎನ್ನುವುದರಲ್ಲಿ ಸಂಶಯವಿಲ್ಲ.

ಕೆಥೋಲಿಕ ಸಾಹಿತ್ಯದ ಚಿನ್ನಾಮಿಯ ಕೃತಿಗಳು ಪ್ರೊಟೆಸ್ಟೆಂಟ್ ಮಿಶನರಿಗಳ ಕಾಲಕ್ಕೆ ಕಾಣಸಿಗದೆ ಇರುವುದನ್ನು ಗಮನಿಸಿದರೆ, ಚನ್ನಾಮಿಯ ಆ ಕೃತಿಗಳು ನಶಿಸಿ ಹೋಗಿರಲಿಕ್ಕೇ ಸಾಕು! ಅಥವಾ ಅಂಥ ಕೃತಿಗಳನ್ನು ಯಾರಾದರೂ ಉದ್ದೇಶ ಪೂರ್ವಕ ನಾಶಗೊಳಿಸಿರಲೂ ಬಹುದು.

೪.೮. ಪೂರ್ವದ ಕೃತಿಗಳಲ್ಲಿ ಕಂಡುಬರುವ ಗದ್ಯಕ್ಕೂ ಬೈಬಲ್‌ನ ಗದ್ಯಕ್ಕೂ ಇರುವ ಸಂಬಂಧ ಮತ್ತು ಪ್ರಭಾವ

ಈ ಅಧ್ಯಯನದ ಉದ್ದೇಶ ಹೊಸಗನ್ನಡ ಮಾತ್ರ. ಆದುದರಿಂದ ಬೈಬಲ್ ಪೂರ್ವದ ಹೊಸಗನ್ನಡ ಕೃತಿಗಳನ್ನು ಇಲ್ಲಿ ವಿಮರ್ಶಿಸಬೇಕಾಗಿರುವುದು ಅವಶ್ಯಕ.

ರೆ.ವಿಲಿಯಂ ಕೇರಿ, ಬಂಗಾಳದಲ್ಲಿದ್ದುಕೊಂಡು ಭಾರತದ ಎಲ್ಲ ಭಾಷೆಗಳಲ್ಲಿ ಬೈಬಲ್ ಅನುವಾದವನ್ನು ಮಾಡಬೇಕೆಂಬ ಮಹದಾಶೆಯಿಂದ, ಕನ್ನಡ ಬೈಬಲ್‌ನ್ನು ೧೮೦೯ರಲ್ಲಿ ಸಿದ್ಧಗೊಳಿಸಿದ್ದ. ಆದರೆ ಅದು ಸಕಾಲದಲ್ಲಿ ಪ್ರಕಟಗೊಳ್ಳದೆ ೧೮೧೨ರಲ್ಲಿ ಪ್ರಕಟವಾಯಿತು. ನಂತರ ಬಳ್ಳಾರಿಯ ರೆ.ಜಾನ್ ಹ್ಯಾಂಡ್ಸರವರು ಬೈಬಲ್ ಎರಡನೇ ಭಾಗದ ಮೊದಲ ಪುಸ್ತಕಗಳನ್ನು ಹಂತ ಹಂತವಾಗಿ ಹೊರತಂದರು. ಈ ಬೈಬಲ್ ಹೊಸಗನ್ನಡದಲ್ಲಿ ತರ್ಜುಮೆಗೊಳ್ಳುವುದಕ್ಕೆ ಪೂರ್ವದಲ್ಲಿ ಇದ್ದ ಹೊಸಗನ್ನಡ ಗದ್ಯಕೃತಿಗಳ ಬಗ್ಗೆ ಈ ಹಿಂದೆ ವಿವೇಚಿಸಲಾಗಿದೆ. ಪ್ರಥಮ ಹೊಸಗನ್ನಡದ ಗದ್ಯಕೃತಿಯೆಂದೇ ಬೈಬಲ್‌ನ್ನು ಕರೆಯಲಾಗಿದೆ.

---

೧. ಸ್ವಾ.ಕ.ಸಾ.ಸಂಸ್ಕೃತಿ, ಎಲ್.ಎಸ್.ಶೇಷಗಿರಿರಾವ್, ಪು.೯೨೯

ಅಂದು ಮಿಶನರಿಗಳು ಹಿಂದಿನ ಎಲ್ಲ ಕನ್ನಡ ಧಾರ್ಮಿಕ ಕೃತಿಗಳ ಬಗ್ಗೆ ಅಭ್ಯಾಸಿಸಿದ್ದರು. ಅವರು ಸಂಸ್ಕೃತ ಭೂಯಿಷ್ಟವಾದ ಹಾಗೂ ಹಳೆಗನ್ನಡ ಶೈಲಿಯನ್ನು ಅನುಸರಿಸದೇ ಸರಳ ಹಾಗೂ ಜನಸಾಮಾನ್ಯರ ಭಾಷೆಯನ್ನು ಆಯ್ದುಕೊಂಡರು ಹಾಗೂ ಅದನ್ನು ಬಳಕೆಗೆ ತಂದರು. ಅಂದು ಅವರು ಆಯ್ದುಕೊಂಡದ್ದು ಹೊಸಗನ್ನಡ ಗದ್ಯವಾಗಿ ಪರಿಣಮಿಸಿತು. ಬೈಬಲ್‌ನ ಶೈಲಿಯು ಹೊಸಗನ್ನಡ ಶೈಲಿಯನ್ನು ಅಳವಡಿಸಿ ರಚಿತವಾದ ಮೊದಲ ಕೃತಿಯಾದುದರಿಂದ, ಇದರ ಹಿಂದನ ಕೃತಿಗಳು ಯಾವುವು ಎಂಬ ಪ್ರಶ್ನೆ ಉದ್ಭವವಾದರೂ ಬೈಬಲ್ ಹಾಗೆ ಸಂಪೂರ್ಣ ಹೊಸಗನ್ನಡದ ರೂಪತಳೆದು ಹೊರಬಂದ ಕೃತಿಗಳು ಯಾವುವೂ ಇಲ್ಲವೆಂದು ಹೇಳಬಹುದು.

ಪೂರ್ವದಲ್ಲಿ ಹೊಸಗನ್ನಡ ಕೃತಿಗಳು ಬೈಬಲ್ ಹೊಸಗನ್ನಡದಲ್ಲಿ ರೂಪ ತಳೆಯುವುದಕ್ಕೆ ಮೊದಲೇ ಇದ್ದಿದ್ದರೆ, ಅವು ಬೈಬಲ್ ಭಾಷಾಂತರಕ್ಕೆ ಮಾದರಿಗಳಾಗುತ್ತಿದ್ದವು. ಅಂಥ ಉಲ್ಲೇಖಗಳು ಎಲ್ಲಿಯೂ ಕಂಡುಬರುವುದಿಲ್ಲ. ಒಂದು ವೇಳೆ ಹೊಸಗನ್ನಡ ಎಂದು ಗುರುತಿಸುವ ಪ್ರಯತ್ನ ನಡೆದಿದ್ದರೂ, ಕೆಲವೊಂದು ಕೃತಿಗಳು ಹೊಸಗನ್ನಡಕ್ಕೆ ಪೂರಕ ಅಥವಾ ಪ್ರೇರಕವೆಂದು ಕರೆದರು, ಆ ಕೃತಿಗಳು ಜನ್ಮ ತಾಳುವಾಗ ಹೊಸಗನ್ನಡ ಎಂಬ ಪ್ರಜ್ಞೆ ಇರದ ಕಾಲವೆಂದು ನಿಸ್ಸಂಶಯವಾಗಿ ಹೇಳಬಹುದು.

ಪೂರ್ವದ ಕೃತಿಗಳಲ್ಲಿ ಪದ್ಯದ ಛಾಯೆ, ಗದ್ಯ, ಪದ್ಯ, ಮಿಶ್ರಿತ ಚಂಪೂ ಪ್ರಮುಖವಾಗಿದ್ದು, "ಪಾಶ್ಚಾತ್ಯ ಭಾಷಾ ಸಂಸ್ಕೃತಿಗಳ ಸಂಪರ್ಕದಿಂದ ಹಳೆಯ ಅಂಧಶ್ರದ್ಧೆಗಳು ನಶಿಸಿ, ಮಹಾಪುರಾಣಗಳು, ದೇವಾಸುರ ಯುದ್ಧಗಳು, ರಾಜವಂಶಗಳು ಮಾತ್ರ ಕೃತಿ ವಸ್ತುವಾಗಿದ್ದ ಹಿಂದಿನ ಪದ್ಧತಿಗೆ ಪೂರ್ಣವಿರಾಮ ಹಾಕಿ, ಸಾಮಾನ್ಯ ಮಾನವನ ನಿತ್ಯ ಜೀವನದ ಆಗುಹೋಗುಗಳೊಂದಿಗೆ ಸ್ಪಂದಿಸುವಂತಹ, ಜನ ಸಾಮಾನ್ಯನ ಹೃದಯಕ್ಕೆ ಹೆಚ್ಚು ವೇದ್ಯವಾದ ಮತ್ತು ಸಹಜವಾದ ವಿಷಯಗಳು ಕೃತಿಗೆ ವಸ್ತುಗಳಾದವು."[೧]

೧೮ನೇ ಶತಮಾನದ ಆರಂಭದಲ್ಲಿ ಕೆಥೋಲಿಕ್ ಜೆಸ್ಸುವಿಟರಿಂದ ಕನ್ನಡ ಸಾಹಿತ್ಯ ಸಾಗಿಬಂದಿತು ಎಂಬ ಉಲ್ಲೇಖಗಳು ಕಂಡುಬರುತ್ತವೆ. ಕೆಲವು ಹಸ್ತಪ್ರತಿಗಳು ಇಂಗ್ಲೆಂಡ್ ಮ್ಯೂಜಿಯಮ್ ನಲ್ಲಿ ಕಂಡುಬಂದಾಗಿನಿಂದ ಅಧುನಿಕ ಗದ್ಯಶೈಲಿಯನ್ನು ಅಂದಿನಿಂದ ಗುರುತಿಸಬಹುದು. ಆದರೆ ಕೆಥೋಲಿಕರ ಅಂದಿನ ಯಾವ ಕೃತಿಗಳೂ ನಮಗೆ ಉಪಲಬ್ದವಿಲ್ಲ. ಇವುಗಳು ಜನಮನದಲ್ಲಿ ಬೆರೆತಿದ್ದರೆ, ಆ ಸಾಹಿತ್ಯ ಹಾಗೆಯೇ ಉಳಿದು ಬಂದಿದ್ದರೆ ಪ್ರೊಟೆಸ್ಟಂಟ್ ಮಿಶನರಿಗಳು ಕರ್ನಾಟಕಕ್ಕೆ ಬಂದಾಗ ದೊರೆಯಬಹುದಾಗಿತ್ತು. ಆದರೆ ಅಂಥ ಯಾವ ಕೃತಿಗಳ ಬಗ್ಗೆ ಮಿಶನರಿಗಳು ಸುಳಿವು ನೀಡಿಲ್ಲ. ಮತ್ತು ಅವರು ಪ್ರಾರಂಭದಲ್ಲಿ ಬರೆದ ಹೊಸಗನ್ನಡ ಶೈಲಿಯು ಅದೇ ಆಗ ಅಂಬೆಗಾಲಿಡುವ ಶಿಶುವಿನಂತೆ ತೋರಿಬರುವುದನ್ನು

೧. ಕ.ಸಾ. ಮತ್ತು ಧರ್ಮ, ಹೊ.ಗ.ಮನಹೋರ, ಪು.೬೮-೬೯

ಗ್ರಹಿಸಿದರೆ, ಯಾವ ಪೂರ್ವ ಕೃತಿಗಳ ಪ್ರಭಾವ ಬೈಬಲ್ ಭಾಷಾಂತರದ ಮೇಲೆ ಆಗಲಿಲ್ಲವೆಂದೇ ಹೇಳಬೇಕು. ಉದಾಹರಣೆಯಾಗಿ ರೆ.ವಿಲಿಯಂ ಕೇರಿಯ ಪ್ರಥಮ ಬೈಬಲ್ ಹೊಸ ಒಡಂಬಡಿಕೆಯ ಮೊದಲ ಪುಸ್ತಕ. ರೆ.ಜಾನ್ ಹ್ಯಾಂಡ್ಸರವರ ಬೈಬಲ್ (ಹೊ.ಗ) ೧೮೧೨ರಲ್ಲಿ ಪ್ರಕಟಗೊಂಡಾಗ ಈ ಕೃತಿಗೂ ಪೂರ್ವದ ಯಾವ ಕನ್ನಡಗದ್ಯವೂ ಪ್ರಭಾವ ಮಾಡಿಲ್ಲವೆಂದು ಹೇಳಬಹುದು.

೪.೯. ಕನ್ನಡ ಬೈಬಲ್‌ನಲ್ಲಿ ಕಂಡುಬರುವ ಗದ್ಯದ ಸ್ವರೂಪ

ಕನ್ನಡ ಬೈಬಲ್ ಎಂದಾಗ ಎರಡು ಬಗೆಯ ಸ್ವರೂಪದ ವಿಭಿನ್ನ ಶೈಲಿಯ ಗ್ರಂಥಗಳು ಕಂಡುಬರುತ್ತವೆ. ಕ್ರೈಸ್ತಧರ್ಮದಲ್ಲಿ ಮುಖ್ಯವಾಗಿ ಕಾಣಸಿಗುವ ಕೆಥೋಲಿಕ್ ಹಾಗೂ ಪ್ರೊಟೆಸ್ಟೆಂಟ್ ಎಂಬ ಎರಡು ಪಂಥಗಳಲ್ಲಿ ವಿಭಿನ್ನ ಮಾದರಿಯ ಬೈಬಲ್ ರೂಪಪಡೆದು ನಿಂತಿವೆ. ಇವಕ್ಕೆ ಕಾರಣ ಅವರವರು ಒಪ್ಪಿಕೊಂಡ ಪದ್ಧತಿ, ಸಂಪ್ರದಾಯ ಹಾಗೂ ಶೈಲಿ.

ಕನ್ನಡದಲ್ಲಿ ಪ್ರಥಮವಾಗಿ ಹೊಸಗನ್ನಡದಲ್ಲಿ ರೂಪು ಪಡೆದ ಪ್ರೊಟಸ್ಟಂಟರ್ ಬೈಬಲ್, ಕೆಥೋಲಿಕರ ಕನ್ನಡ ಬೈಬಲ್‌ಗೆ ಮೂಲಕಾರಣವಾಗಿದ್ದರೂ, ಕೆಥೋಲಿಕರು ತಮ್ಮ ಕನ್ನಡ ಬೈಬಲ್ ಸಿದ್ಧಪಡಿಸುವಾಗ ತಮ್ಮ ಸಂಪ್ರದಾಯದಲ್ಲಿ ಹೊರತರಲು ಪ್ರಯತ್ನಿಸಿದ್ದರ ಪರಿಣಾಮ, ಎಲ್ಲಾ ದೃಷ್ಟಿಯಿಂದಲೂ ಬದಲಾವಣೆ ಪಡೆಯಲು ಕಾರಣವಾಯಿತು. ಒಂದು ಅಂಶವನ್ನು ಉದಾಹರಣೆಯಾಗಿ ಹೀಗೆ ನೋಡಬಹುದು. ದೇವರನ್ನು ಏಕವಚನದಲ್ಲಿ ಅವನು ಇವನು ಅನ್ನುವುದು ಸಹಜ. ಕೃಷ್ಣ-ರಾಮ ಕ್ರಿಸ್ತ. ಆದರೆ ಕೆಥೋಲಿಕರು, ಕ್ರಿಸ್ತರು ಸರ್ವೇಶ್ವರರು ಎಂದು ಬಹುವಚನ ಸಂಬೋಧನೆಯ ಮಡಿವಂತಿಕೆ ಯನ್ನು ಬಳಸಿರುವರು. ಮತ್ತು ಇವರ ಗದ್ಯದ ಸ್ವರೂಪದ ಶೈಲಿಗೆ ನೇರವಾಗಿ ಗ್ರೀಕ್ -ಹಿಬ್ರೂ ಅಥವಾ ಲ್ಯಾಟೀನ್ ಭಾಷೆಯಿಂದ ಬರದೇ ಭಾರತೀಯ ಭಾಷೆಗಳಾದ ತಮಿಳು ಹಾಗೂ ಕೊಂಕಣಿ ಮೂಲದಿಂದ ಬಂದುದಾಗಿದೆ. ಇದಕ್ಕೆ ಕಾರಣ, ಕೆಥೋಲಿಕ ಸಾಹಿತ್ಯ ಮೂಡಲು ಕನ್ನಡದಲ್ಲಿ ಅವಶ್ಯವೆನಿಸಿದೆ ತಮಿಳಿನ ಪ್ರಭಾವ ಮುಖ್ಯವಾಗಿದೆ.

ಕನ್ನಡದ ಕೆಥೋಲಿಕ ಬೈಬಲ್ ಮೊದಲು ಕಾಣಿಸಿಕೊಂಡಿದ್ದು ತೀರ ಇತ್ತೀಚಿನ (೧೯೬೦ರ ನಂತರ) ದಿನಗಳಲ್ಲಿ. ಈ ಮೊದಲು ಕೆಥೋಲಿಕ ಚರ್ಚಗಳಲ್ಲಿ ಪ್ರೊಟಸ್ಟೆಂಟರ್ ಸಂಪೂರ್ಣ ಬೈಬಲ್ ಬಳಸಲಾಗು ತ್ತಿತ್ತು. ಅವರದೇ ಆದ ಬೈಬಲ್ ರೂಪಗೊಳ್ಳದಿರಲು ಏನು ಕಾರಣವೆಂದರೆ, ಬೈಬಲ್ ಬಳಕೆ ಕೇವಲ ಪಾದ್ರಿಗಳಿಂದ, ಅದನ್ನು ಓದುವುದು, ಅದರ ವಿವರಣೆ ಕೊಡುವುದು, ಗುರುಗಳ ಜವಾಬ್ದಾರಿ ಎಂದು ಅವರ ಜನಾಂಗ ತಿಳಿದಿತ್ತು. ಆದರೆ, ಪ್ರೊಟಸ್ಟಂಟರ್ ದೇವಾಲಯದಲ್ಲಿ ಚಿಕ್ಕ ಮಕ್ಕಳ ಕೈಯಲ್ಲಿ ಬಳಕೆಯಾಗುತ್ತಿತ್ತು. ಕೆಥೋಲಿಕರಿಗೆ ಬೈಬಲ್ ಅವಶ್ಯಕತೆ ಕಂಡುಬಂದುದು ೧೯೬೦ರ ನಂತರ ಎಂದು ಹೇಳಬಹುದು.

ಕೆಥೋಲಿಕರಿಗೆ ಪ್ರಾರಂಭದಲ್ಲಿ ಬೈಬಲ್ ದೊರೆಯುತ್ತಿರಲಿಲ್ಲವೆಂದರೆ ಆಶ್ಚರ್ಯವಾಗಬಹುದು. ಬೈಬಲ್ ನಿಮಗೆ ಏಕೆ ಬೇಕು? ನಾವೇ ಓದಿ ಅದರ ಅರ್ಥ ಹೇಳುತ್ತೇವಲ್ಲ ಎಂದು ಪಾದ್ರಿಗಳು ಹೇಳುತ್ತಿದ್ದರು. ಈ ಕಾರಣದಿಂದಾಗಿ ಎಡ್ವರ್ಡ ನೂರೋನ ಹೇಳುವ ಹಾಗೆ "ಬೈಬಲಿಗೆ ಸಂಬಂಧಿಸಿದಂತೆ ಕೆಥೋಲಿಕ ಸಾಹಿತ್ಯದ ಆರಂಭದ ಕಾಲದಲ್ಲಿ ಹೆಚ್ಚಿನದೇನೂ ಕಾಣುವುದಿಲ್ಲ. ಆ ಕಾಲಕ್ಕೆ ಆಗಲೇ ಪ್ರಾಟೆಸ್ಟೆಂಟರಿಗೆ ಬೈಬಲ್ ದೊರಕಿದ್ದರೂ ಕೆಥೋಲಿಕರ ಪಾಲಿಗೆ ಅದು ನಿಷಿದ್ಧವಾಗಿತ್ತು."[೧] ಆದರೆ ಬೈಬಲ್ ಪೂರಕ ಸಾಹಿತ್ಯಗಳಾದ ಜಪದ ಹಾಗೂ ಆರಾಧನೆಗೆ ಸಂಬಂಧಿಸಿದ ಪುಸ್ತಕಗಳು ಮಾತ್ರ ಇದ್ದವು. ಅವು ಕೇವಲ ಪಾದ್ರಿಗಳ ಬಳಕೆಗೆ ಅವುಗಳಲ್ಲಿ ಹೆಚ್ಚಾದವು ಲ್ಯಾಟಿನ್ ಮೂಲದವು.

೧೯೬೪ರಲ್ಲಿ ಕೆಥೋಲಿಕ ಪಾದ್ರಿಗಳು ಪ್ರೊಟೆಸ್ಟಂಟ್ ಪಾದ್ರಿಗಳೊಂದಿಗೆ ಸೇರಿ ಬೈಬಲ್ ಸೊಸೈಟಿ ಆಫ್ ಇಂಡಿಯಾ ಬೆಂಗಳೂರು ಶಾಖೆ ಮುಖಾಂತರ ಸ್ವತಂತ್ರ ಕೃತಿ ತರಲು ಪ್ರಯತ್ನಿಸಿದರು. ಇದರ ಫಲ ಬೈಬಲ್ ಹೊಸ ಒಡಂಬಡಿಕೆ ಭಾಗ ಮಾತ್ರ ಹೊರಬಂದಿತು.

೧೯೬೮ರಲ್ಲಿ ಸಂಪೂರ್ಣ ಬೈಬಲ್ ಅವಶ್ಯಕತೆ ಕಂಡುಬಂದಿತು. ಎರಡೂ ಪಂಗಡಗಳ ಪಾದ್ರಿ ಹಾಗೂ ಪಂಡಿತರುಗಳ ಸಮಿತಿಯೊಂದಿಗೆ ಎರಡು-ಮೂರು ವರುಷಗಳ ಕಾಲ ಇಂಗ್ಲೀಷಿನ ಗುಡ್ ನ್ಯೂಜ ಬೈಬಲ್ ಮಾದರಿಯನ್ನು ಮುಂದಿಟ್ಟುಕೊಂಡು, ಹೊಸಶೈಲಿಯಲ್ಲಿ ಪೂರ್ವದ ಪದ್ಯಭಾಗಗಳಿಗೆ ಅನುಗುಣವಾಗಿ, ಪದ್ಯ ಹಾಗೂ ಗದ್ಯವನ್ನು ರೂಪಿಸಲಾಯಿತು.

ಪ್ರೊಟೆಸ್ಟೆಂಟ್ ವತಿಯಿಂದ ರೆ.ಆನಂದ ಕುಮಾರ, ರೇ.ಜೆ.ಎಂ.ಜೋಗುಳ್ ಹಾಗೂ ಪಂಡಿತ ಶ್ರೀ.ಡಿ.ಟಿ.ಪುನೀತ ಸದಸ್ಯರಾಗಿ ಕೆಥೋಲಿಕ ಬೈಬಲ್ ಭಾಷಾಂತರದಲ್ಲಿ ಸೇವೆಸಲ್ಲಿಸಿದರು. ಕೆಥೋಲಿಕರ ಪರವಾಗಿ ಫಾ.ಅಂತಪ್ಪ, ಫಾ.ಮರಿಯಾ ಜೊಶೆಫ್, ಫಾ.ಸ್ಟ್ಯಾನ್ಲಿ ಬ್ಯಾಪ್ಟಸ್ಟ್, ಫಾ.ಜಾಜ್ ಡಿಸೋಜ ಹಾಗೂ ಬಿಶಪ್ಪ್ ಮೈಕಲಪ್ಪರ ನೇತೃತ್ವದಲ್ಲಿ, ಬೆಂಗಳೂರು ಅಗ್ಸಲರಿ ಬೈಬಲ್ ಸೊಸೈಟಿ ಮೂಲಕ ೧೯೭೨ರಲ್ಲಿ ಪ್ರಥಮ ಮುದ್ರಣಗೊಂಡಿತು.

ಈ ಆವೃತ್ತಿ ಕೇವಲ ಕೆಥೋಲಿಕರ ಬಳಕೆಯಾಗಿರುವುದರಿಂದ ಈಗಾಗಲೇ ಎರಡೂ ಪಂಗಡಗಳಿಗೆ ಸೇರಿದ್ದ ಬೈಬಲ್ಲಿನ ಒಳಪುಸ್ತಕಗಳು ಒಟ್ಟು ೬೬. ಆದರೆ ಕೆಥೋಲಿಕರು ಇನ್ನು ೧೨ ಪುಸ್ತಕಗಳನ್ನು ಹೆಚ್ಚುವರಿಯಾಗಿ ಅನುಗ್ರಂಥ(ಅಪಕೃಪ)ಗಳೆಂದು ಸೇರಿಸಿದರು. ಈ ೧೨ ಪುಸ್ತಕಗಳು ಹಳೆ ಒಡಂಬಡಿಕೆ ಭಾಗದ ನಂತರ ಸೇರ್ಪಡೆಯಾಗಿವೆ. ಹೀಗೆ ಸೇರ್ಪಡೆಯಾಗುವ ಕಾರಣವೆಂದರೆ, ಕೆಥೋಲಿಕರ ಮೂಲ ಬೈಬಲ್ 'ವುಲ್ಗೆಟ್' ಆವೃತ್ತಿಯಲ್ಲಿ ಈ ೧೨ ಪುಸ್ತಕಗಳ ಬಳಕೆಯಿದೆ. ಅದನ್ನೆ ಕನ್ನಡದಲ್ಲಿ ಅನುಸರಿಸಿರುವುದರಿಂದ ಕೆಥೋಲಿಕರ ಬೈಬಲ್ ನಲ್ಲಿ ಒಟ್ಟು ೭೮ ಪುಸ್ತಕಗಳು ಒಳಗೊಂಡಿವೆ. ಆದರೆ ಪ್ರೊಟಸ್ಟಂಟರ ಬೈಬಲ್ ಕೇವಲ ೬೬ ಪುಸ್ತಕಗಳನ್ನು ಒಳಗೊಂಡಿದೆ.

---

೧. ಸ್ವಾ.ಕ.ಸಾ.ಸಂಸ್ಕೃತಿ, ಎಲ್.ಎಸ್.ಶೇಷಗಿರಿರಾವ್, ಪು.೯೫

ಬೈಬಲ್ ಒಂದು ಜಾಗತಿಕ ಕೃತಿ ಇದರ ಗದ್ಯವನ್ನು ಕುರಿತು ಅಭ್ಯಸಿಸುವುದಾದರೆ, ಅದರ ಆಳ-ಅಗಲಗಳನ್ನು ಅರಿಯವುದು ಕಷ್ಟಸಾಧ್ಯ. ಕಾರಣ ಬೈಬಲ್ ರೂಪುಪಡೆಯುವಲ್ಲಿ ಸರಿ ಸುಮಾರು ೧೫೦೦ ವರ್ಷಗಳು ಸಂದಿವೆ. ಹಾಗೂ ಹಿಬ್ರೂ, ಗ್ರೀಕ್, ಅರೆಮಿಕ್ ಭಾಷೆಗಳ ಬರಹವು ಇದರ ಮೂಲ ವಸ್ತುಗಳಾಗಿ ಪರಿಣಮಿಸಿವೆ. ಜಗತ್ತಿನ ಯಾವುದೇ ಕೃತಿಯನ್ನು ಕೈಗೆತ್ತಿಕೊಂಡರೆ ಅದರ ಕರ್ತೃ-ಕಾಲ-ಭಾಷೆ ನಿಖರವಾಗಿ ಇರುವಲ್ಲಿ ಸಂಶಯ ಇರುವುದಿಲ್ಲ. ಹಾಗೂ ಜಾಗತಿಕ ಹಾಗೂ ಮಹಾನ್ ಗ್ರಂಥಗಳಿಗೆ ನಿರ್ದಿಷ್ಟ ಕಾಲ ಹಾಗೂ ಕರ್ತೃಬಗೆ ಸ್ಪಷ್ಟತೆ ಕಂಡುಬರುವುದು.* ಆದರೆ ಈ ಮಾತು ಅಥವಾ ಹೇಳಿಕೆ ಬೈಬಲ್‌ಗೆ ಅನ್ವಯಿಸುವುದಿಲ್ಲ.

ಬೈಬಲ್ ಗದ್ಯ ತನ್ನದೇಯಾದ ಸ್ವರೂಪ ಶೈಲಿಯನ್ನು ಹೊಂದಿದೆ. ಕ್ರೈಸ್ತರ ಅಥವಾ ಪಾದ್ರಿಗಳ ಗದ್ಯ ಎನ್ನಬಹುದಾದ ಪ್ರತ್ಯೇಕತೆಯನ್ನು ಸೂಚಿಸುತ್ತದೆ. ಕ್ರೈಸ್ತರಲ್ಲದವರಿಗೆ ಓದುವ ಸಂದರ್ಭದಲ್ಲಿ ಇದೊಂದು ವಿಶಿಷ್ಟ ಹಾಗೂ ಕ್ಲಿಷ್ಟಕರವಾದ ಬರವಣಿಗೆ ಎಂದು ಅನಿಸುವುದುಂಟು. ಆದರೆ ಅದನ್ನು ಓದುತ್ತ ಹೋದಂತೆಲ್ಲ, ಅದರದೇ ಪ್ರಭಾವಕ್ಕೆ ಒಳಗಾಗಿ ಹೋದೆವೆನೋ ಎಂದೆನಿಸುವುದು. ಮತಾಂತರಗೊಂಡ ಕ್ರೈಸ್ತರನ್ನು ಕೇಳಿದರೆ ಮೊದಮೊದಲು ಹಾಗೆ ಅನಿಸಿತ್ತು. ಎಂಬ ಉತ್ತರ ಸಿಗುವುದು ಸಹಜ. ಆದರೆ ಇಷ್ಟನ್ನು ಸ್ಪಷ್ಟವಾಗಿ ಹೇಳಬಹುದು; ಕ್ರೈಸ್ತೇತರ ಧಾರ್ಮಿಕ ಕೃತಿಗಳಂತೆ ಇರುವ ಗದ್ಯದ ಶೈಲಿಯ ಕೊರತೆ ಇಲ್ಲಿ ಕಂಡುಬರುವುದು.

ಇಲ್ಲಿನ ಗದ್ಯ ಪ್ರಾಚೀನ ಮೂಲ ಭಾಷೆಗಳಾದ ಹಿಬ್ರೂ, ಗ್ರೀಕ್ ಹಾಗೂ ಲ್ಯಾಟಿನ್ ಭಾಷೆಗಳ ಸ್ವರೂಪವನ್ನು ಮೈಗೂಡಿಸಿಕೊಂಡು, ಅಲ್ಲಿನ ವಾಕ್ಯ ಸ್ವರೂಪ, ವ್ಯಾಕರಣಾಂಶವನ್ನು ಗರ್ಭದಲ್ಲಿರಿಸಿಕೊಂಡು, ಸಾಗುವ ಶೈಲಿ, ಕರ್ತೃ, ಕರ್ಮ, ಕ್ರಿಯಾಪದಗಳ ಸ್ಥಾನಗಳ ವೈಶಿಷ್ಟ್ಯ ಅವು ನೀಡುವ ಕಾಲಗಳ ಅರ್ಥ ವಿಶೇಷವಾಗಿವೆ.

"ಸ್ವರಗಳೇ ಇಲ್ಲದ ಭಾಷಾ ಸ್ವರೂಪದಿಂದ ಆಧುನಿಕ ಭಾಷಾ ಬರವಣಿಗೆಯ ಎಲ್ಲ ಅಂಶಗಳನ್ನು ಅನುಸರಿಸುತ್ತಾ ಅನುಭವಿಸುತ್ತಾ ಬಂದಿರುವ ಬೈಬಲ್ ಸಾಹಿತ್ಯ, ಎಲ್ಲ ದೃಷ್ಟಿಯಿಂದಲೂ ವಿಫುಲವಾದ ಗದ್ಯದ ಅಂಶಗಳನ್ನು ಹೊಂದಿದೆ".[೧] ಕನ್ನಡದಲ್ಲಿ ಅನುವಾದ ಮಾಡುವಾಗ ಸೂಕ್ತ ಶಬ್ದಗಳು ಸಿಗದೆ ಮಿಶನರಿಗಳು ಕಷ್ಟಗಳನ್ನು ಎದುರಿಸಿದ ಪ್ರಸಂಗಗಳು ಇವೆ. ಕಸ್ ಮ್ಯಜರನ ಒಂದು ಪತ್ರದಲ್ಲಿ ಹೀಗೆ ನೋಡುತ್ತೇವೆ. "Do you think that a proper person could be employed." "ಯಾರನ್ನಾದರೂ ಅಂಥವರನ್ನು ನೋಡಿರಿ ನಾನು ಅವನ ಸಂಬಳ ಕೊಡುವೆ."[೨]

೧. ಜ್ಞಾನಗಂಗೋತ್ರಿ, ಪು.೪೬೪

೨. ಅದೇ, ಪು.೪೬೪

*ಭಗವದ್ಗೀತೆ ಕರ್ತೃಯಾರು? ಎಂದಾಗ ಕೃಷ್ಣನು ಅರ್ಜುನನಿಗೆ ಬೋಧಿಸಿದ. ಆದರೆ ಅದನ್ನು ಬರೆದವರಾರು? ಕನಿಷ್ಟಪಕ್ಷ ವ್ಯಾಸನೇ ಇರಬಹುದೆಂದು ಊಹಿಸಬಹುದು ಆದರೂ ಭಗದ್ಗೀತಾಕಾರನ ಶೈಲಿಯೇ ಬೇರೆ ವ್ಯಾಸನ ಶೈಲಿಯೇ ಬೇರೆ ಎಂಬುದು ಸತ್ಯ

"ಅನುವಾದ ಕಾರ್ಯದಲ್ಲಿ ಸಮರ್ಪಕವಾದ ಶಬ್ದಗಳು ಸಿಕ್ಕದೇ ಇದ್ದಾಗ ಮಿಶನರಿಗಳು ಕನ್ನಡ ಭಾಷೆಯನ್ನು ಜರೆದುದೂ ಇದೆ. ಹಳೆಗನ್ನಡವು ಅವರಿಗೆ ಬೇಡವಾಗಿತ್ತು. ಹೊಸಗನ್ನಡವು ಅವರ ಕಾಲಕ್ಕೆ ಪುಷ್ಟಿಯನ್ನು ಹೊಂದಿರಲಿಲ್ಲ. ಸಂಸ್ಕೃತ ಸಹಾಯವನ್ನು ನಿರಾಕರಿಸಿದುದೂ ಅದಕ್ಕೇ ಕಾರಣವಾಯ್ತು. ಪರಿಣಾಮ ಮಾತ್ರ ಒಳ್ಳೆಯದೇ ಆಯಿತೆನ್ನಬಹುದು. ಆ ನಿಮಿತ್ತದಿಂದ ಅನೇಕ ಹೊಸಶಬ್ದಗಳ ಸೃಷ್ಟಿಯಾಯಿತು. ಅನೇಕ ಶಬ್ದಗಳ ಪ್ರಚಲಿತ ಅರ್ಥವು ಹೊಸರೂಪ ತಾಳಿತು. (ಉದಾ : ಒಡಂಬಡಿಕೆ ಪ್ರಸಂಗ ಮುಂ)[೧]

ಈ ಹಿಂದಿನ ಅಧ್ಯಾಯದಲ್ಲಿ ಬೈಬಲ್ ಭಾಷಾ ಸ್ವರೂಪ ಮತ್ತು ಪ್ರಸರಣದಲ್ಲಿ ಗದ್ಯದ ಕುರಿತು ನೋಡಿರುವುದರಿಂದ ಇಲ್ಲಿ ಹೆಚ್ಚು ಬರೆಯುವ ಪ್ರಮೇಯವಿಲ್ಲ.

೧. ಹೊ.ಅ.ಶ್ರೀ.ಹಾ., ಪು.೫೯೮

ಅಧ್ಯಾಯ ಐದು

ಬೈಬಲ್ ಅನುವಾದದ ಸ್ವರೂಪ ಮತ್ತು ವೈಶಿಷ್ಟ್ಯ

೫

ಬೈಬಲ್ ಅನುವಾದದ ಸ್ವರೂಪ ಮತ್ತು ವೈಶಿಷ್ಟ್ಯ

೫.೧. ಕನ್ನಡ ಸಾಹಿತ್ಯದಲ್ಲಿ ಅನುವಾದ ಪರಂಪರೆ ೧೯ನೇ ಶತಮಾನದಲ್ಲಿ ಆರಂಭದ ಅನುವಾದಗಳು

ಕನ್ನಡ ಸಾರಸ್ವತ ಲೋಕದಲ್ಲಿ ಬ್ರಿಟಿಷರ ಆಗಮನದ ನಂತರ ಹಲವಾರು ಸಾಹಿತ್ಯ ಪ್ರಕಾರಗಳು ತಲೆ ಎತ್ತಿದವು. ಸಂಸ್ಕೃತ ಭಾಷೆಯ ಪರಿಕಲ್ಪನೆ, ರೂಪಕ, ಅಲಂಕಾರ ಮುಂತಾದ ಶಬ್ದ ಸಂಪತ್ತನ್ನು ಎರವಲು ಪಡೆಯುತ್ತ ಶ್ರೀಮಂತಗೊಂಡ ಕನ್ನಡ. ಇಂಗ್ಲೀಷ್ ಸಾಹಿತ್ಯದ ದೃಷ್ಟಿಕೋನಕ್ಕೆ ಒಳಗಾಗಿ, ಆ ಸಾಹಿತ್ಯದ ಪ್ರಕಾರಗಳು ಪ್ರವೇಶಿಸಿದಾಗ ಹೊಸ ಅಲೆಗಳೇ ಮೂಡಿ ನವೋದಯದ ಮೊರೆತ ಕೇಳಿ ಬರತೊಡಗಿತು.

ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದ ಕನ್ನಡದ ಆದಿಕವಿಗಳು, ಸಂಸ್ಕೃತದಿಂದ ಪ್ರೇರಣೆ ಹೊಂದಿದ್ದರೂ ಇದ್ದಕ್ಕಿದ್ದಂತೆ ಅನುವಾದವನ್ನು ಅನುಸರಿಸಿರಲಿಲ್ಲ. ಆದರೆ ಮಿಶನರಿಗಳು, ತಮ್ಮ ಧರ್ಮಪ್ರಸಾರಕ್ಕೆ ಭಾರತವನ್ನು ಪ್ರವೇಶಿಸಿದಾಗ ಆಯಾ ಪ್ರದೇಶದ ಜನರಿಗೆ ಅವರವರ ಭಾಷೆಯಲ್ಲಿಯೇ ಧರ್ಮಬೋಧೆ ಒದಗಿಸಲು, ಬೈಬಲ್ ಅನುವಾದಿಸುವ ಅನಿವಾರ್ಯತೆ ಕಂಡುಬಂದಿತು. ಇದರ ತತ್ಫಲವೇ ಅನುವಾದ ಕಲೆ ಕನ್ನಡದಲ್ಲಿ ಬಲಗೊಳ್ಳಲು ಸಹಾಯವಾಯಿತು.

ಬೈಬಲ್ ಅನುವಾದ ಪರಂಪರೆ

ಕ್ರಿಸ್ತನ ಕಾಲದಲ್ಲಿ, ಬಹುಸಂಖ್ಯೆಯ ಯಹೂದಿಗಳು ಇಲ್ಲವೆ ಅರೆಮಿಕ ಭಾಷೆ ಮಾತನಾಡುವವರು ಅಥವಾ ಗ್ರೀಕ್ ಭಾಷೆ ಮಾತನಾಡುವವರಾಗಿದ್ದರು. ಕೆಲವರು ಮಾತ್ರ ಹಿಬ್ರೂ ಭಾಷೆಯನ್ನು ಬಲ್ಲವರಾಗಿದ್ದರು. ಆದುದರಿಂದ ಬೈಬಲ್ ತರ್ಜುಮೆಯು ಅರೆಮಿಕ್(Syriac) ಮತ್ತು ಗ್ರಿಕ್ ಭಾಷೆಯಲ್ಲಿ ಅವಶ್ಯವಿತ್ತು. ಹೆಚ್ಚಾಗಿ ಬೈಬಲ್‌ನ್ನು ಚರ್ಚಗಳಲ್ಲಿ ಓದುವ ಪರಿಪಾಠ ನಡೆದುಬಂತು. ಯಾವಾಗ ಕ್ರೈಸ್ತತ್ವ ಪಸರಿಸುತ್ತ ಬಂದಿತೋ ಆ ಜನರಲ್ಲಿ ಗ್ರೀಕ್ ಅರ್ಥವಾಗದಿದ್ದಾಗ ಅವರ ಭಾಷೆಯಲ್ಲಿ

೧. Good News Bile, B.S.of India, Pp.44

ಬೈಬಲ್‌ನ್ನು ಭಾಷಾಂತರಿಸುವುದು ಇನ್ನೂ ಅವಶ್ಯವಾ.ಇತು. ಪೌರ್ವಾತ್ಯ ರಾಷ್ಟ್ರಗಳಲ್ಲಿ ಲ್ಯಾಟಿನ್ ಭಾಷೆ, ಪಾಶ್ಚಾತ್ಯ ರಾಷ್ಟ್ರಗಳಲ್ಲಿ Syriac ಭಾಷೆಯಲ್ಲಿ ತದನಂತರದಲ್ಲಿ ಮತಾಂತರಗೊಂಡ ರಾಷ್ಟ್ರಗಳಲ್ಲಿ ಅವಶ್ಯಕವಿದ್ದ ಭಾಷೆಗಳಲ್ಲಿ ಭಾಷಾಂತರ ಹೊಂದುತ್ತಾ ಬೈಬಲ್ ಚರಿತ್ರೆಯು ಕ್ರೈಸ್ತತ್ವದ ಚರಿತ್ರೆಯಾಗಿ ರೂಪುಗೊಂಡಿತು".[೧]

ಬೈಬಲ್ ಜಾಗತಿಕ ಪೂಜ್ಯಕೃತಿ. ಇದನ್ನು ಅನುಸರಿಸುವವರ ಸಂಖ್ಯೆ ಅಧಿಕ. ಹೀಗಿರುವುದರಿಂದ ಜಗತ್ತಿನ ಎಲ್ಲ ಪುಸ್ತಕಗಳಿಗಿಂತ ಈ ಕೃತಿಗೆ ಅತಿ ಬೇಡಿಕೆ ಇರುವುದು ಕಂಡುಬರುತ್ತದೆ. ಯೇಸು ಕ್ರಿಸ್ತನ ವಾಕ್ಯ. "Go then to all peoples every where and make them my disciples; baptize them in the name of the father, the son and the Holy spirit"[೨] ನಂತೆ ಕ್ರಿಸ್ತನ ಸಂದೇಶವನ್ನು ಜಗತ್ತಿನಾದ್ಯಂತ ಸಾರುತ್ತಿರುವುದರಿಂದ ಕ್ರೈಸ್ತರ ಸಂಖ್ಯೆ ಎಲ್ಲ ದೇಶಗಳಲ್ಲಿಯೂ ಕಂಡಬರುವುದು. ಹೀಗಾಗಿ ಅವರವರ ದೇಶ ಭಾಷೆಯಲ್ಲಿ ಬೈಬಲ್ ಒದಗಿಸುವ ಅವಶ್ಯಕತೆ ಕಂಡುಬರುತ್ತದೆ. ಈ ಕಾರಣದಿಂದ ಜಗತ್ತಿನ ಎಲ್ಲ ಭಾಷೆಯಲ್ಲಿ ಬೈಬಲ್ ಭಾಷಾಂತರಗೊಂಡಿದೆ. ಇದು ಕಾಲಿರಿಸಿದ ರಾಷ್ಟ್ರದಲ್ಲಿ ತನ್ನದೇ ಆದ ತರ್ಜಮೆಯ ಶೈಲಿ ಹಾಗೂ ಪರಂಪರೆಯನ್ನು ರೂಢಿಸಿದೆ. "ಭಾರತ ದೇಶದಲ್ಲಿ ಈಗಾಗಲೇ ೪೧ ಭಾಷೆಗಳಲ್ಲಿ ಬೈಬಲ್ ಭಾಷಾಂತರಗೊಂಡಿದೆ. ಲಿಖಿತವಲ್ಲದ ಭಾಷೆಗಳಲ್ಲಿಯೂ ತರ್ಜುಮೆ ನಡೆದಿದೆ ಹಾಗೂ ನಡೆಯುತ್ತಲಿದೆ."[೩]

'ಬೈಬಲ್ '(BIBLE)ನ್ನು ಕನ್ನಡದಲ್ಲಿ 'ಸತ್ಯವೇದ' ಎಂದು ಭಾಷಾಂತರಿಸಲಾಗಿದೆ. ಸತ್ಯವೇದ ಎಂಬ ಬೈಬಲ್ ಭಾಷಾಂತರ ಸೂಕ್ತವೇ? ಭಾರತದಲ್ಲಿ ಇದ್ದ ವೇದಗಳಿಗೆ ಸಂವಾದಿಯಾಗಿ ಈ ಪದ ಉಪಯೋಗಿಸಲ್ಪಟ್ಟಿತೇ? ಹಾಗಿದ್ದಲ್ಲಿ ಉಳಿದ ವೇದ ಸುಳ್ಳೇ? ಎಂಬಿತ್ಯಾದಿ ಪ್ರಶ್ನೆಗಳು ಹುಟ್ಟುವುದು ಸಹಜ. ಮಿಶನರಿಗಳು ಯಾವ ದೃಷ್ಟಿಯಿಂದ ಈ ತರ್ಜುಮೆ ಬಳಸಿದರೆಂದು ಸ್ಪಷ್ಟ ತಿಳಿಯದಿದ್ದರೂ ಹೀಗೆ ಗ್ರಹಿಸಬಹುದು- "ಸತ್ಯ ಅಂದರೇನು? ಯಾವುದು ಸತ್ಯವೋ ಅದು ಬದಲಾಗುವುದಿಲ್ಲ; ಯಾವುದು ಬದಲಾಗುವುದಿಲ್ಲವೋ? ಅದು ಸತ್ಯವಾಗಿರುತ್ತದೆ. ಯಾವುದು ಬದಲಾಗದೆ ನಿತ್ಯವಾಗಿರುತ್ತದೋ ಅದೇ ಸತ್ಯವಾಗಿರುತ್ತದೆ."[೪] ಬೈಬಲ್‌ನಲ್ಲಿ ಅಂದಿನ ಕಾಲದಲ್ಲಿ ನಡೆದ ಘಟನೆಗಳು ಅವು ಧಾರ್ಮಿಕ, ರಾಜಕೀಯ, ಕೌಟುಂಬಿಕ ಹಾಗೂ ಸಾಮಾಜಿಕವಾಗಿದ್ದರು ಇದ್ದ ಸ್ಥಿತಿಯಲ್ಲಿಯೇ ಬರೆಯಲಾಗಿದೆ. ಇದು ಧಾರ್ಮಿಕ ಗ್ರಂಥ ಎಂಬ ಮಡಿವಂತಿಕೆಯ ಕೌಶಲ್ಯ ಇದರಲ್ಲಿ ಕಂಡುಬರುವುದಿಲ್ಲ. ಉದಾ : "Come let us make our father drink wine, and we will lie with him, that we may preserve the lineage of our father."[೫]

೧. New Cathalic Encyclopedia, Vol-II, Pp-414

೨. Good News Bile, B.S. of India, Pp.44

೩. The History of the printed Bible, Pp.15

೪. ಗ್ರಂಥದಲೆಲ್ಲಾ ಶ್ರೇಷ್ಠವಾದ ಗ್ರಂಥ ರೆ.ಎಸ್.ಮುಳೇಕಾರ, ಪು.೨೦

೫. K.J.V.Bible, Gen, Pp.20-32

ಇಲ್ಲಿ ತಂದೆಯೊಂದಿಗೆ ಮಕ್ಕಳ ಲೈಂಗಿಕ ಸಂಪರ್ಕ, ಮುಂದಿನ ಪೀಳಿಗೆ ಉತ್ಪತ್ತಿ, ಇವೆಲ್ಲ ಸಹಜ ಹಾಗೂ ಅನಿವಾರ್ಯತೆಯನ್ನು ಸೂಚಿಸುವ ಸತ್ಯ ಘಟನೆಗಳು. ಇಂತಹ ಪಾರದರ್ಶಕತೆಯ ಹಿನ್ನಲೆಯಲ್ಲಿ ಸತ್ಯದ ಸ್ಪಷ್ಟತೆ ಕಂಗೊಳಿಸುವುದರಿಂದ ಸತ್ಯವೇದ ಎಂಬ ತರ್ಜುಮೆ ಸೂಕ್ತವೆನೋ! (ಇನ್ನು ಹಲವು ಉದಾಹರಣೆ ಕೊಡಬಹುದು)

ಕನ್ನಡದಲ್ಲಿ ಬೈಬಲ್ ಅನುವಾದವನ್ನು ಗ್ರಹಿಸುವ ಮುನ್ನ ಅನ್ಯಭಾಷೆಯಿಂದ ಅನುವಾದಗೊಂಡ ಬಗೆ, ವಿಧಾನ, ಬಳಸಿದ ರೀತಿ ಇತ್ಯಾದಿಗಳನ್ನು ಗಮನಿಸುವುದು ಅವಶ್ಯಕ. ಈಗಿರುವ ಬೈಬಲ್ ತನ್ನ ಭಾಷಾಂತರತೆಯನ್ನು ಪಡೆಯುವ ಚರಿತ್ರೆ ಬಹು ವಿಶಾಲವಾದುದು. ಬೈಬನಲ್ಲಿ ಇರುವ ಎರಡು ಪ್ರಕಾರಗಳಲ್ಲಿ ಪ್ರಥಮ ಭಾಗವಾದ 'ಹಳೆ ಒಡಂಬಡಿಕೆ' (OLD TESTMENT) ಮೂರು ಮುಖ್ಯ ಭಾಗಗಳಿಂದ ಗುರುತಿಸಲ್ಪಡುತ್ತಿತ್ತು.

೧. ಕಾಯ್ದೆ/ನಿಯಮ (Law)

೨. ಪ್ರವಾದಿಗಳು (Prophet)

೩. ಬರಹಗಳು (Writings)

ಹೀಗೆ ಒಟ್ಟು ೩೯ ಪುಸ್ತಕಗಳು

ಎರಡನೆ ಭಾಗವಾಗಿ ಹೊಸ ಒಡಂಬಡಿಗೆ (NEW TESTMENT)

೧. ಸುವಾರ್ತೆ (GOSPEL)

೨. ಚರಿತ್ರೆ (HISTORY OF CHRISTIANITY)

೩. ಪತ್ರಗಳು (LETTERS)

ಒಟ್ಟು ೨೭ ಪುಸ್ತಕಗಳ ಸಂಗ್ರಹ

ಭಾಷಾಂತರಕಾರರು ಹೆಚ್ಚಾಗಿ ಮೊದಲು ಹೊಸ ಒಡಂಬಡಿಕೆ ಎಂಬ ಎರಡನೆ ಭಾಗವನ್ನೇ ಭಾಷಾಂತರಕ್ಕಾಗಿ ಆಯ್ದುಕೊಳ್ಳುವರು. ಇದು ಬೈಬಲ್ ಭಾಷಾಂತರ ಪರಂಪರೆಯಲ್ಲಿ ನಡೆದು ಬಂದ ದಾರಿ. ಕನ್ನಡ ಬೈಬಲ್ ಅನುವಾದ ತಿಳಿಯುವ ಮೊದಲು ಮೂಲ ಭಾಷೆಯಿಂದ ಭಾಷಾಂತರ ಪರಂಪರೆ ನಡೆದು ಬಂದ ದಾರಿಯ ಸಿಂಹಾವಲೋಕನ ಮಾಡುವುದು ಸೂಕ್ತ.

"ಮೂಲದಲ್ಲಿ ಹಳೆ ಒಡಂಬಡಿಕೆ ಕೆಲವು ಭಾಗ (ಎಜ್ರ ೪:೬-೧೮, ೭:೧೨, ಯೋಬ ೧೦:೧೧, ದಾನಿಯೇಲ ೨: ೪-೭ ಮತ್ತು ೨೮ನೇ ವಚನ)ಗಳನ್ನು ಅರೆಮಿಕ್[1] (Aramaic) ಭಾಷೆಯಲ್ಲಿ ಬರೆದರೆ ಉಳಿದೆಲ್ಲ ಬರವಣಿಗೆ ಸಂಪೂರ್ಣ ಹಿಬ್ರೂ(HEBREW) ಭಾಷೆಯಲ್ಲಿದೆ."[2] "ಯೇಸುಕ್ರಿಸ್ತನು ಜನಿಸುವ

೧. ಕ್ರಿಸ್ತನು ಈ ಭಾಷೆಯಲ್ಲಿಯೇ ಬೋಧಿಸಿದ್ದು

೨. Insight on the Scriptures, Pp.308

೩೦೦ ವರ್ಷ ಪೂರ್ವದಲ್ಲಿ ಗ್ರೀಕ್ ಭಾಷೆಯು ಬಹುರಾಷ್ಟ್ರಗಳಲ್ಲಿ ಬಳಸುವ ಭಾಷೆಯಾಗಿದ್ದಿತು.'' ಈ ಕಾರಣದಿಂದ ಗ್ರೀಕ್‌ನಲ್ಲಿ ಬೈಬಲ್ ಭಾಷಾಂತರಗೊಳ್ಳುವ ಅವಶ್ಯಕತೆ ತೋರಿಬಂದಿತು.

''ಸೆಪೆರ್ ತೊರಾನೆಬಯುಂ ಉಕೆತುಂಬಂ'' ಎಂಬುದು ಯಹೂದಿ ಪ್ರಮಾಣ ಗ್ರಂಥ. ನಿಯಮಶಾಸ್ತ್ರ, ಪ್ರವಾದಿಗಳು ಮತ್ತು ಬರಹಗಳು ಎಂಬುದೇ ಇದರ ಅರ್ಥ.''[೨] ಇದುವೇ ಇಬ್ರೀಯ(ಹಿಬ್ರೂ) ಬೈಬಲ್. ಇದು ಪ್ರಪ್ರಥಮವಾಗಿ ಗ್ರೀಕ್ ಭಾಷೆಗೆ ಭಾಷಾಂತರಗೊಂಡಿತು. ಗ್ರೀಕ್‌ನಲ್ಲಿ ಇದನ್ನು ಸೆಪ್ಟುವಾಗಿಂತ್ (SEPTUAGINT)[೧] ಎಂದು ಕರೆಯುವರು.

ಪಿಲ್‌ಡೆಲ್ಫಿಯಾದ ಟಾಲೆಮಿ (PTOLEMY ಕಾಲ ೨೮೫-೨೪೬-BC) ಅಲೆಕ್ಸಾಂಡ್ರಿಯಾದ ಗ್ರಂಥಾಲಯಕ್ಕೆ ಇಬ್ರಿಯ ಬೈಬಲ್ ಬೇಕೆಂಬ ಹಂಬಲದಿಂದ ಅದನ್ನು ಗ್ರೀಕ್‌ನಲ್ಲಿ ಅನುವಾದಿಸಲು ೭೦ ಜನ ಹಿರಿಯ ಪಂಡಿತರನ್ನು ನೇಮಿಸಿದನು.''[೩] ನಂತರ ಒಟ್ಟು ೭೨ ಜನ ಇಜಿಪ್ತಕ್ಕೆ ಬಂದು ೭೨ ದಿನಗಳಲ್ಲಿ ಹಳೆ ಒಡಂಬಡಿಕೆಯನ್ನು ಗ್ರೀಕ್ ಭಾಷೆಗೆ ಭಾಷಾಂತರಿಸಿದರು. ''ಆ ಸಮಯದಲ್ಲಿ ತಮ್ಮೊಡನೆ ತಂದ ಹಳೇ ಇತರರ ಬರಹಗಳನ್ನೂ ಅಳವಡಿಸಿಕೊಂಡರು. ಇದರಿಂದ ಇಬ್ರೀಯ ಹಳೆ ಒಡಂಬಡಿಕೆಗೂ ಸೆಪ್ಟುವಾಂಗಿತ್ ಭಾಷಾಂತರಕ್ಕೂ ವ್ಯತ್ಯಾಸ ಉಂಟಾಯಿತು.

ಗ್ರೀಕ್‌ನಲ್ಲಿ ೭೦(ಎಪ್ಪತ್ತು) ಎಂದು ಕರೆಯುವ ಸಂಖ್ಯೆಗೆ ಸೆಪ್ಟುವಾಗಿಂತ ಎಂದು ಹಾಗೂ 'LXX' ಎಂದು ಗುರುತಿಸುವವರು. ಹೀಗಾಗಿ ಈ ಆವೃತ್ತಿಯು ಸೆಪ್ಟುವಾಗಿಂತ ಎಂದು ಕರೆಯಿಸಿಕೊಳ್ಳಲಾರಂಭಿಸಿತು. 'ಎಪ್ಪತ್ತು ಜನ ಹಿರಿಯರ ವ್ಯಾಖ್ಯಾನ' ಎಂಬುದು ಇದರ ಮುಖಲೇಖ. ''ಮೊದಲ ಪಂಚಗ್ರಂಥ(ಮೊದಲ ಐದು)ಗಳಿಗೆ ಮಾತ್ರ ಸೆಪ್ಟುವಾಗಿಂತ ಎಂದು ಹೆಸರಿತ್ತು.''[೪] ಆದರೆ ಈಗ ಸಂಪೂರ್ಣ ಹಳೆ ಒಡಂಬಡಿಕೆಗೆ ಈ ಹೆಸರು ಬಂದಿದೆ. ಇದನ್ನು ಅಲೆಕ್ಸಾಂಡ್ರಿಯಾ ಭಾಷಾಂತರವೆಂತಲೂ ಕರೆಯುವುದುಂಟು ಕಾರಣ ಭಾಷಾಂತರ ಕಾರ್ಯ ಆ ಸ್ಥಳದಲ್ಲಿಯೇ ನಡೆದಿದೆ. ಈ ಆವೃತ್ತಿಯನ್ನೇ ಆಧಾರ ಮಾಡಿಕೊಂಡು ನಾನಾ ಭಾಷೆಗಳಲ್ಲಿ ತರ್ಜುಮೆಕಾರ್ಯ ಸಾಗಿಬಂದಿದೆ.

''ದೇವಾಲಯ ಹಾಗೂ ಜನರು ಬೆಳೆದಂತೆ ಬೈಬಲ್ ಭಾಷಾಂತರರ ವಿಸ್ತಾರಗೊಳ್ಳಬೇಕಾಯಿತು. ಪೂರ್ವಮೆಡಿಟರೇನಿಯನ್ ಪ್ರಮುಖ ಭಾಷೆಯಾದ ಸಿರಿಯಕ್ (Syriac)ನಲ್ಲಿ ೨ನೇ ಶತಮಾನದಲ್ಲಿ ಭಾಷಾಂತರವಾಯಿತು. ೩ನೇ ಶತಮಾನದಲ್ಲಿ ಇಜಿಪ್ತಿಯನ್ ಭಾಷೆ ಕೊಪ್ಟಿಕ್ (coptic)ನಲ್ಲಿಯೂ ಹಾಗೂ ೪ನೇ ಶತಮಾನದಲ್ಲಿ ಧನುಬಿ ಪ್ರದೇಶದ ಬಾರ್ಬೇರಿಯನ್ (Tribe) ಗುಂಪಿಗೆ ಸೇರಿದ ಭಾಷೆಯಾದ ಗೊಥಿಕ್ (Gothic)ನಲ್ಲಿ ಭಾಷಾಂತರಗೊಂಡಿತು.[೫]

---

೧. ಸೆಪ್ಟುವೆಂಜಿಂಟ್ ಎಂದು ಬರೆಯಬಾರದು ಕಾರಣ ಟಿ(T) ಉಚ್ಚಾರ ತಿ(T) ಎಂದು ಇದೆ

೨. ಹ.ಬ.ಪ್ರವೇಶದಾಯಿನಿ, ಪಿ.ಎಸ್.ಥೊಬರ್ನ್, ಪು.೧೨

೩. T.E.R.& Ethics Mircea Eliade, Vol-2

೪. ಸತ್ಯಶಾಸನ, ಪು.೧೨

೫. ಹ.ಬ.ಪ್ರವೇಶದಾಯಿನಿ, ಪಿ.ಎಸ್.ಥೊಬರ್ನ್, ಪು.೧೨

ಲ್ಯಾಟೀನ್ ಬೈಬಲ್ (Vulgate)

"ಕ್ರಿ.ಶ.೪ನೇ ಶತಮಾನದ ಕೊನೆಯ ಭಾಗದಲ್ಲಿ ಪೋಪ ದಮಸ್ಕ ಎಂಬವನಿಂದ ನಿಯೋಜಿತವಾದ ಜರೋಮ(Jerome) ಎಂಬವನು ಬೈಬಲ್‌ನ್ನು ಗ್ರೀಕ್ ಭಾಷೆಯಿಂದ ಲ್ಯಾಟೀನ್ ಭಾಷೆಗೆ ಭಾಷಾಂತರಿಸಿದನು."[೧] ಇದನ್ನು ವಲ್ಗಟ್ ಭಾಷಾಂತರ ಎನ್ನುವರು. ವಲ್ಗೇಟ್ ಎಂದರೆ ಎಲ್ಲರಿಗೂ ಸಾಮಾನ್ಯವಾದದ್ದು. "ಇದು ಇಂಗ್ಲೆಂಡಿಗೆ ಬಂದ ಪ್ರಥಮ ಬೈಬಲ್ ಕ್ರಿ.ಶ.೨ನೇ ಶತಮಾನದಲ್ಲಿ ಯುರೋಪ್ ಖಂಡದ ಅಧಿಪತಿಗಳು ಗ್ರೀಕ್ ಭಾಷೆಗೆ ಬದಲಾಗಿ ಲ್ಯಾಟೀನ್ ಭಾಷೆ ಮಾತನಾಡಬೇಕೆಂದು ಅಪ್ಪಣೆ ಮಾಡಿದರು. ಲ್ಯಾಟೀನ್ ಭಾಷೆ ಮಾತನಾಡುವವರು ದೇವರ ವಾಕ್ಯ ತಿಳಿದುಕೊಳ್ಳುವಂತೆ ಆಫ್ರಿಕಾ ಖಂಡದ ಉತ್ತರ ಭಾಗಗಳಲ್ಲಿ ಸೆಪ್ಟುವಾಗಿಂತ ಭಾಷಾಂತರದ ಹಳೆ ಒಡಂಬಡಿಕೆಯು(ಗ್ರೀಕ್) ಲ್ಯಾಟೀನ್ ಭಾಷೆಗೆ ತರ್ಜುಮೆಗೊಂಡಿತು."[೨]

ಈ ಕಾರ್ಯಕ್ಕೆ ಹೆಸರಾಂತ ಪಂಡಿತನಾದ ಜರೋಮನು ಸು.೨೫ ವರ್ಷ ಕಾಲ ಶ್ರಮಿಸಿ ಅನೇಕ ವಿಭಿನ್ನ ಮಾತೃಕೆಗಳನ್ನು ಅಭ್ಯಶಿಸಬೇಕಾಯಿತು. "ಬೇತ್ಲಹೇಮಿಗೆ ಹೋಗಿ ಕ್ರಿಸ್ತನು ಜನಿಸಿದ ಸ್ಥಳದ ಸಮೀಪದಲ್ಲಿಯೇ ಇದ್ದುಕೊಂಡು ಇಬ್ರೀಯ ಶಾಸ್ತ್ರಗಳನ್ನು ಲ್ಯಾಟೀನ್‌ಗೆ ಭಾಷಾಂತರಿಸಿದನೆಂದು ಪ್ರತೀತಿ"[೩] ಭಾಷಾಂತರಕ್ಕಾಗಿ ಹಿಬ್ರೂ ಹಾಗೂ ಗ್ರೀಕ್ ಎರಡನ್ನೂ ಬಳಸಿರುವನು.

ಬಹಳ ಸರಳರೂಪದ ಕೃತಿಯನ್ನು ನಿರೀಕ್ಷಿಸಿದ ಪೋಪನ ಇಚ್ಛೆಯಂತೆ ಪ್ರತಿನಿತ್ಯ ಜನರು ಬಳಸುವ ಭಾಷೆಯನ್ನೇ ಇಲ್ಲಿ ಬಳಸಲಾಗಿದೆ. ಈ ಆವೃತ್ತಿಯು ಮುಂದಿನ ಭಾಷಾಂತರಕಾರರಿಗೆ ಬಹುಸಹಾಯವಾಯಿತು. ಇದು ರೋಮನ ಕೆಥೋಲಿಕ ಪಂಗಡದವರ ಅಧಿಕೃತ ಆವೃತ್ತಿ ಎಂದು ಹೆಸರು ಪಡೆಯಿತು.

ಆಂಗ್ಲೊ ಸೆಕ್ಸನ್ ಬೈಬಲ್ (ANGLO SAXON BIBLE)

ಕ್ರಿ.ಶ. ೫ನೇ ಶತಮಾನದವರೆಗೂ ಇಂಗ್ಲೆಂಡ್ ಕ್ರೈಸ್ತ ದೇಶವಾಗಿರಲಿಲ್ಲ. ಟ್ಯುಟೋನಿಕ ಜನಗಳು ಇಂಗ್ಲೆಂಡಿಗೆ ದಂಡೆತ್ತಿ ಬಂದು ದೇಶವನ್ನು ಅತಿಕ್ರಮಿಸಿ ತಮ್ಮ ಭಾಷೆಯನ್ನು ಹಬ್ಬಿಸಿದರು. ಅಲ್ಲಿಯವರೆಗೂ ಬೈಬಲ್ ಲ್ಯಾಟಿನ್ ಭಾಷೆಯುಲ್ಲಿಯೇ ಇತ್ತು. ಇಂಗ್ಲೆಂಡಿನ ಭಾಷೆ ಆಂಗ್ಲೊ ಸೆಕ್ಸನ್ ಇದ್ದುದರಿಂದ ಸಾಧಾರಣ ಜನರು ಅದನ್ನು ಓದಲು ಆಗದೆ ಹೋಯಿತು. ಆದರೂ ಜನರು ಬೈಬಲ್ ಓದಲು ಹವಣಿಸುತ್ತಿದ್ದರಿಂದ, ಕೇಯದ್ಮೋನ್ (Caed mon) ಎಂಬ ವ್ಯಕ್ತಿ ಕನಸಿನಲ್ಲಿ ಪ್ರೇರಣೆ ಹೊಂದಿ ಎದ್ದು ದೇವರ ವಾಕ್ಯವನ್ನು ವಿವರಿಸಲು ಪ್ರಾರಂಭಿಸಿದನಂತೆ. ಅವನು ಯೇಸುಕ್ರಿಸ್ತನ ಶಿಲುಬೆಯ ವಿವರಣೆಯನ್ನು

---

೧. T.E.R.& Ethics Mircea Eliade, Vol-2

೨. ಸತ್ಯಶಾಸನ, ಪು.೧೩

೩. ಅದೇ, ಪು.೧೩

ಜಾನಪದ ಶೈಲಿಯಲ್ಲಿ ಪದ್ಯರೂಪವಾಗಿ ಬರೆದನು. ಅದರ ಸಾರಾಂಶ ಹೀಗಿದೆ. "ಆತನು ಶಿಲುಬೆಯ ಮರಹತ್ತಿದನು. ತನ್ನ ರಕ್ತ ಚಲ್ಲಿದನು. ಕ್ರೂಜೆಯಲ್ಲಿದ್ದವನು ಮಹಾದೇವರು. ಎಲ್ಲರು, ಎಲ್ಲಾ ಸಮಯದಲ್ಲೂ ಆತನಿಗೆ ಸ್ತೋತ್ರವನ್ನು ಕಾರ್ಯದಿಂದ ಕೊಡತಕ್ಕದು: ಆತನು ವೈಭವವನುಭವಿಸಲು ದಾಸತ್ವದಿಂದ ನಮ್ಮನ್ನು ಕರೆದನು. ಆಂಗ್ಲೊಸಾಕ್ಸನ್ ಬರವಣಿಗೆಯಲ್ಲಿ ಇದು ಮೊದಲನೇಯ ಪ್ರಯತ್ನವೆಂದು ಕಾಣುತ್ತದೆ."[೧] ಈ ಗೀತೆ ಬಹುಜನಪ್ರಿಯತೆಯನ್ನು ಪಡೆಯಿತು. ಕ್ರಿ.ಶ.೬೮೦ರಲ್ಲಿ ಈತನು ತೀರಿಹೋದನು.*

೮ನೇ ಶತಮಾನದಲ್ಲಿ ಇಂಗ್ಲೆಂಡಿನ ಮಹಾ ದೇಶಭಕ್ತನಾದ ವಸರೆಬಲ್ ಬೀಡ್ (Venerable Bede) ಎಂಬವನು ಹೊಸ ಒಡಂಬಡಿಕೆಯ ನಾಲ್ಕು ಸುವಾರ್ತೆಯನ್ನು ಆಂಗ್ಲೊಸೆಕ್ಸ್‌ನ್ ಭಾಷೆಯಲ್ಲಿ ಬರೆದನು. "ಆದರೆ ಕ್ರಿ.ಶ.೭೩೫ರಲ್ಲಿ ಬೈಬಲ್ ಪೂರ್ಣಗೊಳಿಸದೆ ಕಾಲವಾದನು. ನಂತರದಲ್ಲಿ ಅದು ಲ್ಯಾಟೀನಾ ಭಾಷೆಯಿಂದ ಆಂಗ್ಲೊ ಸೆಕ್ಸನ್ ಭಾಷೆಗೆ ಭಾಷಾಂತರಗೊಂಡಿತು. ಇದೇ ಕಾರ್ಯದಲ್ಲಿ ಸಹಾಯಿಸಿದವರು ಕಿಂಗ್ ಅಲ್ಫ್ರಡ್ ದಿ ಗ್ರೇಟ್ (ಕ್ರಿ.ಶ.೮೭೧) ಹಾಗೂ ಇಬ್ಬರು ಮಂಕ್ಸ(Monks)ಗಳು.

ಇಂಗ್ಲೀಷ್ ಹಸ್ತಪ್ರತಿ ಬೈಬಲ್

ಇಂಗ್ಲೆಂಡಿನಲ್ಲಿ ಮಾತನಾಡುತ್ತಿದ್ದ ಆಂಗ್ಲೋ ಸೆಕ್ಸನ್ ಭಾಷೆಗೆ ಬದಲಾಗಿ ೧೪ನೇ ಶತಮಾನದಲ್ಲಿ ಇಂಗ್ಲೀಷ್ ತನ್ನ ಅಸ್ತಿತ್ವ ಪಡೆಯಲಾರಂಭಿಸಿತು. ಈ ಸಮಯದಲ್ಲಿ "ಬೈಬಲ್ ಯಾವುದೇ ಸಾಮಾನ್ಯ ಭಾಷೆಗೆ ಭಾಷಾಂತರವಾಗಬಾರದೆಂದು ಚರ್ಚಿನ ಆಡಳಿತ ವರ್ಗ ನಿರ್ಬಧಿಸಿದ್ದ ಕಾನೂನು ಜಾರಿಯಲ್ಲಿತ್ತು."[೨] "ಜಾನ್ ವೈಕ್ಲಿಫ್ (John wyecliffe) ಎಂಬ ಧರ್ಮ ಬೋಧಕರು ಸಾಮಾನ್ಯ ಜನರ ಭಾಷೆಯಲ್ಲಿ ಬೈಬಲ್ ನೀಡಲು ನಿರ್ಧರಿಸಿದನು. ಆದರೆ ಬಹಿರಂಗವಾಗಿ ಈ ಕಾರ್ಯ ಮಾಡುವಂತಿರಲಿಲ್ಲ. ರೋಮನ್ ಕೆಥೋಲಿಕರಿಂದ ಹಿಂಸೆ ನಡೆಯುತ್ತಿದ್ದ ಕಾಲವಾದನು".[೩]

ಆ ಕಾಲದಲ್ಲಿ ಹಿಬ್ರೂ ಹಾಗೂ ಗ್ರೀಕ್ ಭಾಷೆಗಳ ರೂಢಿಯು ಕುಂಠಿತವಾಗಿತ್ತು. ಲ್ಯಾಟೀನ್ ಬೈಬಲ್ ಸಾಧಾರಣ ಜನರಿಗೆ ಗ್ರಹಿಸಲು ಕಷ್ಟಕರವಾದ್ದರಿಂದ ವೈಕ್ಲಿಫ್‌ನನ್ನು ಲ್ಯಾಟೀನ್ ವುಲ್ಗೇಟ್ ನಿಂದ ಇಂಗ್ಲೀಷಿಗೆ ಭಾಷಾಂತರಿಸಲು ಪ್ರಾರಂಭಿಸಿ ೨೨ ವರ್ಷಗಳಲ್ಲಿ ಅದನ್ನು ಪೂರೈಸಿದನು. ಕ್ರಿ.ಶ.೧೩೮೨ರಲ್ಲಿ ಹಸ್ತಪ್ರತಿ ಅಸ್ತಿತ್ವದಲ್ಲಿ ಬಂದಿತು. ಇದು ಬೋಡ್ಲಿಯನ್ (Bodleion) ಗ್ರಂಥಾಲಯ ಆಕ್ಸಫರ್ಡ್‌ನಲ್ಲಿ ಇದೆ. ಈ ಆವೃತ್ತಿಗೆ ಕಾರ್ಡಿನಲ್ ಹ್ಯೂಗೋ ಎಂಬವನು ಮೊಟ್ಟಮೊದಲು

---

೧. ಸತ್ಯಶಾಸನ, ಪು.೧೪

೨. ಅದೇ, ಪು.೧೭

೩. E. of Britanica- Robert Mcmenry, 1992, Pp.531

* ಈತನ ಜ್ಞಾಪಕಾರ್ತವಾಗಿ ವ್ಹಿಟೆ ಎಂಬಲ್ಲಿ ಶಿಲುಬೆಯನ್ನು ೧೮೯೮ರಲ್ಲಿ ನಿಲ್ಲಿಸಲಾಗಿದೆ.

ಅಧ್ಯಾಯಗಳನ್ನು ಗುರುತಿಸಿದನು. ಇಂತಹ ಒಂದು ಪ್ರತಿ ಬರೆಯಲು ಹತ್ತು ತಿಂಗಳ ಕಾಲ ಲಭಿಸುತ್ತಿತ್ತು. ವೆಚ್ಚ ೬೦೦ ರೂ. ತಗಲುತಿತ್ತು. "ಈ ಕಾರ್ಯವನ್ನು ಗೌಪ್ಯವಾಗಿ ಪೂರೈಸಿದ ಜಾನ್ ವೈಕ್ಲಿಫ್ ಸತ್ತ ೪೦ ವರ್ಷಗಳ ತರುವಾಯ, ರೋಮನ್ ಕೆಥೋಲಿಕರು ಅವನ ಸಮಾಧಿಯನ್ನು ಅಗೆದು ಹೆಣದ ಎಲುಬುಗಳನ್ನು ಬೆಂಕಿಯಲ್ಲಿಟ್ಟು ಬೂದಿ ಮಾಡಿ 'ಸ್ವಿಪ್ಟ್' ಎಂಬ ನದಿಯಲ್ಲಿ ಬೀಸಾಡಿಬಿಟ್ಟರು."[೧] ಹೀಗೆ ಮಾಡಿದ್ದು ಸಾಮಾನ್ಯ ಭಾಷೆ(ಅಂದು)ಯಾದ ಇಂಗ್ಲಿಷಿಗೆ ಬೈಬಲ್‌ನ್ನು ಭಾಷಾಂತರಿಸಿದನೆಂಬ ಒಂದು ಕಾರಣಕ್ಕಾಗಿ.

ಸು.೧೨ನೇ ಶತಮಾನದಲ್ಲಿ ಚೀನಾದೇಶದಲ್ಲಿ ಅಚ್ಚು ಹಾಕುವ ಯಂತ್ರವನ್ನು ಸಿದ್ದಗೊಳಿಸಲಾಯಿತು. ೧೪೫೦ರ ಸುಮಾರಿಗೆ ಯುರೋಪಿನಲ್ಲಿ ಮುದ್ರಣ ಪ್ರಾರಂಭವಾಯಿತು. ಮೇನ್ಜ(Mainz) ಪಟ್ಟಣದ ಜಾನ್ ಗುಟಂಬರ್ಗ (John Gutenburg) ಎಂಬುವನು ೧೪೫೦ರಲ್ಲಿ ಪ್ರಥಮ ಮುದ್ರಣ ಯಂತ್ರವನ್ನು ಪ್ರಾರಂಭಿಸಿ ಲ್ಯಾಟಿನ್ ಬೈಬಲ್‌ನ್ನು ತನ್ನ ಪ್ರಥಮ ಮುದ್ರಣ ಗ್ರಂಥವನ್ನಾಗಿ ಮಾಡಿಕೊಂಡನು. ನಂತರದ ೫೦ ವರ್ಷಗಳಲ್ಲಿ ಯುರೋಪಿನ ಬಹುರಾಷ್ಟ್ರಗಳಲ್ಲಿ ಮುದ್ರಣ ಕಾರ್ಯ ಭರದಿಂದ ಸಾಗಿತ್ತು. ಇಂಗ್ಲೆಂಡಿನಲ್ಲಿ ಕಾಕ್ಸಟನ್ (caxton)ನು ಬೈಬಲ್ ಕಥೆಗಳನ್ನು ಪ್ರಥಮವಾಗಿ ಇಂಗ್ಲೀಷನಲ್ಲಿ ಮುದ್ರಿಸಿದನು.

ಮೊದಲ ಮುದ್ರಣಗೊಂಡ ಇಂಗ್ಲೀಷ್ ಬೈಬಲ್

ಹೇನ್ರಿ VIII ನ ಕಾಲಕ್ಕಿಂತ ಮೊದಲೇ ಫ್ರಾನ್ಸ್, ಇಟಲಿ, ಬೋಹಿಮಿಯಾ ಮತ್ತು ಹಾಲಂಡ್ ಗಳು ತಮ್ಮ ಸ್ವಂತ ಭಾಷೆಯಲ್ಲಿ ಬೈಬಲ್ ಪಡೆದಿದ್ದವು."[೨] ಮಾರ್ಟಿನ ಲೂಥರನು ತನ್ನ ಪ್ರಥಮ ಕಾರ್ಯಕ್ಕೆ ತೊಡಗುವ ಮುನ್ನ ಜರ್ಮನಿಯು ೧೪೬೬ರಲ್ಲಿ ಬೈಬಲ್ ನ್ನು ೧೬ಸಾರೆ ಮುದ್ರಣಗೊಳಿಸಿತ್ತು.

"ಕ್ರಿ.ಶ.೧೫೨೫ಕ್ಕಿಂತ ಪೂರ್ವದಲ್ಲಿ ಇಂಗ್ಲೀಷ್ ಬೈಬಲ್‌ನ ಯಾವ ಭಾಗದ ಬರವಣಿಗೆ ಆಗಿರಲಿಲ್ಲ. ಹಾಗೂ ೧೫೩೫ರ ಒಳಗಾಗಿ ಕಾರ್ಯಪೂರ್ತಿಗೊಂಡಿಲ್ಲ. ಮತ್ತು ೧೫೩೮ರವರೆಗೂ ಯಾರೂ ಈ ಕಾರ್ಯ ಮಾಡಿರಲಿಲ್ಲ"[೩] ಇರಾಸ್ಮಸ್ (Erasmus) ಎಂಬುವವನು ೧೫೧೬ರಲ್ಲಿ ಗ್ರೀಕ್ ಹೊಸ ಒಡಂಬಡಿಕೆಯನ್ನು ಮುದ್ರಿಸಿದನು. ೧೪೮೮ರ ಆದಿಯಲ್ಲಿ ಹಿಬ್ರೂ ಹಳೆ ಒಡಂಬಡಿಕೆ ಮುದ್ರಣಗೊಂಡಿತು.

ವ್ಹಿಲಿಯಮ್ ಟೆನ್‌ಡೆಲ್ (೧೫೨೫) ಎಂಬವನು ಪ್ರೊಟೆಸ್ಟಂಟ್ ಚರ್ಚುಗಳನ್ನು ಸ್ಥಾಪಿಸಿದ ಮಹಾ ಭಕ್ತರಲ್ಲೊಬ್ಬನು. ಈತನು ಇರಾಸ್ಮಸ್ ಭಾಷಾಂತರ ಮಾಡಿದ ಗ್ರೀಕ್ ಹೊಸ ಒಡಂಬಡಿಕೆಯಿಂದ ಇಂಗ್ಲೀಷಿನಲ್ಲಿ ತರ್ಜುಮೆ ಮಾಡಿ ಇನ್ನೊಂದು ಹೊಸ ಒಡಂಬಡಿಕೆಯನ್ನು ಅಚ್ಚು ಹಾಕಿದನು. ಈತನು ಮಾರ್ಟಿನ್ ಲೂಥರನ ಸಮಕಾಲೀನನು. ರೋಮನ್ ಕೆಥೊಲಿಕ್ ಗುರುಗಳ ದೆಸೆಯಿಂದ ಅವನಿಗೆ

---

೧. ಸತ್ಯಶಾಸನ, ಪು.೧೬

೨. E. of Britanica- Robert Mcmenry, 1992, Pp.531

೩. Abid Pp.531

ಇಂಗ್ಲೆಂಡಿನಲ್ಲಿ ಅಚ್ಚು ಹಾಕಲು ಕಷ್ಟವಿತ್ತು. "ದೇವಾಲಯಗಳಿಂದ ಪ್ರೋತ್ಸಾಹ ಇರಲಿಲ್ಲ. ಒಬ್ಬ ವ್ಯಾಪಾರಿಯ ಸಹಾಯ ಪಡೆದು, ಆತ ಜರ್ಮನಿಗೆ ಹೋಗಬೇಕಾಯಿತು. ಅಲ್ಲಿಯೂ ಗೌಪ್ಯವಾಗಿ ಕೆಲಸ ನಿರ್ವಹಿಸುತ್ತ ಸ್ಥಳ ಬದಲಾಯಿಸುತ್ತಿದ್ದನು.[೧] "ಕ್ರಿ.ಶ.೧೫೨೫ರಲ್ಲಿ ಹೊಸ ಒಡಂಬಡಿಕೆಯನ್ನು ಸಿದ್ಧಗೊಳಿಸಿದನು. "ಈತನ ಸಹುದ್ಯೋಗಿ ಪೀಟರ್ ಕ್ವಿಂಟಲ್ (peter Quentel) ಮುದ್ರಣಕ್ಕೆ ತೊಡಗಿದಾಗ ಜೊಹಾನ್ ಕೊಚ್ಚಲಾಸ್ (Johan Cochlaks) ಎಂಬ ಸುಧಾರಣಾ ವಿರೋಧಿಯಿಂದ ಹತ್ತು ಹಾಳೆಗೇ ಮುದ್ರಣ ಕಾರ್ಯ ನಿಲ್ಲಿಸಬೇಕಾಯಿತು."[೨] ಆದರೂ ಛಲ ಬಿಡದೆ "೧೫೩೦ರಲ್ಲಿ ಹಳೆ ಒಡಂಬಡಿಕೆಯು ಮಾರ ಬರ್ಗ(Mar barg) ಎಂಬಲ್ಲಿ ಹನ್ಸಲುಫ್ಟ(Hons Luft)ನಿಂದ ಮುದ್ರಣಗೊಂಡಿತು. ಮುನ್ನುಡಿ, ವ್ಯಾಖ್ಯಾನ ಹಾಗೂ ಅಡಿಟಿಪ್ಪಣಿ ಹೊಂದಿದ ಈ ಆವೃತ್ತಿ ಬ್ರಿಟೀಷ್ ಮ್ಯುಜಿಯಂನ GRENVILLE ಗ್ರಂಥಾಲಯದಲ್ಲಿದೆ."[೩]

ಈ ಆವೃತ್ತಿಯ ೧೫,೦೦೦ ಪ್ರತಿಗಳನ್ನು ಛಾಪಿಸಿ ನಾನಾ ರೀತಿಯಲ್ಲಿ ಇಂಗ್ಲೇಂಡಿಗೆ ರವಾನಿಸಿದನು. ಅವುಗಳು ಪ್ರಜೆಗಳಿಗೆ ಸಿಕ್ಕದ ಹಾಗೆ ಮಾಡಿ ರೋಮನ್ ಕೆಥೋಲಿಕರು ಜನರನ್ನು ಬೆದರಿಸಿದರು. ಆ ಮೇಲೆ ಸಾವಿರಾರು ಪ್ರತಿಗಳನ್ನು ಪತ್ತೆ ಮಾಡಿ ಸಂತ ಪೌಲನನ್ನು ಶಿಲುಬೆಗೆ ಹಾಕಿದ ಸ್ಥಳದಲ್ಲಿ ಸುಟ್ಟು ಬಿಟ್ಟರು. ೬ ಅಕ್ಟೊ ೧೫೩೦ರಲ್ಲಿ ವಿಲ್ಲಿಲಿಯಂ ಟೆನಡೆಲ್ ನನ್ನು ನೇಣುಗಂಬದ ಮೇಲೆ ಶರೀರ ಇಟ್ಟು ಸುಟ್ಟು ಬಿಟ್ಟರು. "ಆತನು ಪ್ರಾಣ ಬಿಡುವಾಗ ದೇವಾ! ಇಂಗ್ಲಿಂಡಿನ ರಾಜನ ಜ್ಞಾನ ನೇತ್ರಗಳನ್ನು ತೆರೆಯಬೇಕೆಂದು ಪ್ರಾರ್ಥನೆ ಮಾಡಿ ಸತ್ತನಂತೆ"[೪] (O LORD OPEN THE EYES OF THE ENGLISH KING)

'ಟೆನಡಲ್‌ನಿಗೆ ಯಾವ ಅರಸನು ಮರಣ ಆಜ್ಞೆ ವಿಧಿಸಿದ್ದನೋ ಹಾಗೂ ಯಾವ ಧರ್ಮಾಧ್ಯಕ್ಷ (Bishop or pope) ವಿರೋಧಿಸಿದ್ದನೋ ಅವರೆ ಟೆನ್‌ಡಲ್‌ನ ಕಾರ್ಯ ಮುಂದುವರೆಸಲು ಆಜ್ಞೆ ಇತ್ತರು. "ನಂತರ ೮ನೇ ಹೇನ್ರಿ ಅರಸನ ಮಂತ್ರಿಯಾದ ಥೊಮಸ್ ಕ್ರೊಮ್ ವೆಲ್ (ThomesF Cromwell) ಎಂಬುವನು ಪ್ರೇರಣೆಯಿಂದ ಇಂಗ್ಲೀಷ್ ಭಾಷೆಯಲ್ಲಿ ಬೈಬಲ್ ಮುದ್ರಿಸಲು ಅಪ್ಪಣೆ ದೊರೆಯಿತು. ಜಾನ್ ರೋಜರ್ಸ್ (john Rogers) ಇದನ್ನು ಮುದ್ರಿಸಿದನು."[೫] "ಮ್ಯಾಥ್ಯೂ ಈ ಆವೃತ್ತಿಗೆ ಹಣಸಹಾಯ ಒದಗಿಸಿದ್ದರಿಂಧ ಇದನ್ನು ಮ್ಯಾಥ್ಯೂ ಬೈಬಲ್ (Malhew Bible) ಎಂದು ಕರೆಯ ತೊಡಗಿದರು."[೬]

---

೧. The History of Printed Bible-B.S.I., Pp.10

೨. E. of Britanica- Robert Mcmenry, 1992, Pp.531

೩. Abid Pp.531

೪. Abid Pp.531

೫. The History of Printed Bible-B.S.I., Pp.10

೬. E. of Britanica- Robert Mcmenry, 1992, Pp.531

ನಂತರದಲ್ಲಿ ಇಂಗ್ಲೆಂಡಿನ ರೋಮನ್ ಕೆಥೊಲಿಕ್ ರಾಣಿ ಮೇರಿ (Queen Mary) ಬೈಬಲ್‌ನ್ನು ಬೆಂಕಿಯಲ್ಲಿ ಹಾಕಿ ಸುಡಿಸಿದಳು. ಹೀಗಿದ್ದರೂ ೧೫೩೫ರಲ್ಲಿ ಮೈಲ್ಸ ಕವರ್ಡೆಲ್ (Miles Coverdale) ಹೊಸ ಒಡಂಬಡಿಕೆಯ ಮೊದಲ ಪುಸ್ತಕವನ್ನು ಅಚ್ಚು ಹಾಕಿದನು. ಇದನ್ನು ಕಂಡ ಅರಸನು (ಟೆನಡಲ್ ಸಾಯುವಾಗ ಮಾಡಿದ ಪ್ರಾರ್ಥನೆಗೆ ಉತ್ತರ ಎಂಬಂತೆ) "IN THE NAME OF GOD LET IT GO FORTH AMONG OUR PEOPLE"[೧] ಎಂದು ಪ್ರೋತ್ಸಾಹಿಸಿದನು. ತದನಂತರದ ಬೈಬಲ್ ಆವೃತ್ತಿ ಗಾತ್ರದಲ್ಲಿ ದೊಡ್ಡದಾದುದರಿಂದ "THE GREAT BIBIE' ಎಂದು ಕರೆದರು.

ಕ್ರಿ.ಶ.೧೫೬೦ರಲ್ಲಿ ಜನಿವಾ ಬೈಬಲ್ (Geneva Bible) ಮುದ್ರಣಗೊಂಡಿತು. ೧೫೫೧ರಲ್ಲಿ ಸರ್ ರೋಬರ್ಟ್ ಸ್ಟಿಫನ್ ಹೊಸ ಒಡಂಬಡಿಕೆಯ ಅಧ್ಯಾಯಗಳಲ್ಲಿ ವಚನಗಳನ್ನು ವಿಂಗಡಿಸಿದನು. ಈ ಕಾರ್ಯ ಕಾರ್ಡಿನಲ್ ಹ್ಯೂಗೊ ಪ್ರಥಮವಾಗಿ ಬೈಬಲ್‌ನಲ್ಲಿ ಅಧ್ಯಯಗಳನ್ನು ಗುರುತಿಸಿದ ೩೦೦ ವರ್ಷಗಳ ನಂತರ ಇದರಿಂದ ಜಿನಿವ ಬೈಬಲ್ ಆವೃತ್ತಿಯು ಅಧ್ಯಾಯ, ವಚನಗಳನ್ನೊಳಗೊಂಡ ಪ್ರಥಮ ಬೈಬಲ್ ಎನ್ನಬಹುದು.

ಕಿಂಗ್ ಜೇಮ್ಸ್‌ಸ್ ಆವೃತ್ತಿ (KING JAMES VERSION)

ವ್ಯಕ್ತಿಗತವಾದ ದೃಷ್ಟಿಕೋನಗಳು ಬೈಬಲ್ ಆವೃತ್ತಿಗಳ ಮೇಲೆ ಪ್ರಭಾವ ಬೀರುತ್ತಾ ಬಂದದ್ದರಿಂದ ಬೇರೆ ಬೇರೆ ರೀತಿಯ ಅಭಿಪ್ರಾಯಗಳು ಜನರಿಂದ ಕೇಳಬರತೊಡಗಿದವು. ಈ ಕಾಲದಿಂದ ಮೊದಲನೇ ಜೇಮ್ಸ್ ಅರಸನು ಬೈಬಲ್ಲ್‌ನ ಸಂಪೂರ್ಣ ಹೊಸ ಆವೃತ್ತಿಯನ್ನು ಹೊರತರಲು ನಿರ್ಧರಿಸಿ ೪೭ ಜನ ಪಂಡಿತರನ್ನು ಈ ಕಾರ್ಯಕ್ಕೆ ನೇಮಿಸಿದನು. ಮೂರು ವರ್ಷಗಳ ಕಾಲ ತರ್ಜುಮೆ ಕಾರ್ಯ, ವೆಸ್ಟ ಮಿನಿಸ್ಟರ್ (west minster) ಕೆಂಬ್ರಿಜ(cambridge) ಆಕ್ಸಫರ್ಡ (oxford) ಎಂಬ ಸ್ಥಳದಲ್ಲಿ ಹಿಬ್ರೂ, ಗ್ರೀಕ್ ಇತ್ಯಾದಿ ಭಾಷೆಗಳನ್ನು ಬಳಸಿ ನಡೆಯಿತು. ೧೬೧೧ರಲ್ಲಿ ಈ ಆವೃತ್ತಿ ಪ್ರಕಟವಾಯಿತು. ಇದಕ್ಕೆ ಕಿಂಗ್ ಜೇಮ್ಸ್ ಆವೃತ್ತಿ ಎಂದು ಕರೆಯಲಾಯಿತು. ಇಂಗ್ಲೀಷ್ ಭಾಷೆಯ ಆವೃತ್ತಿಗಳಲ್ಲಿ ಮಾಸ್ಟರ್ ಪೀಸ್ ಆಗಿ ಇಂದಿಗೂ ಕಂಗೊಳಿಸುತ್ತಿದೆ. ಇದನ್ನು Authorised Bible ಎಂದೂ ಕರೆಯುವರು. "೧೮೮೫ರಲ್ಲಿ ಪುನಃ ಪರಿಷ್ಕರಣಕ್ಕೆ ಒಳಗಾಗಿ ವಿಶೇಷ ಪ್ರಭಾವ ಬೀರುತ್ತಿದೆ."[೨]


ಅಮೇರಿಕನ್ ಸ್ಟ್ಯಾಂಡರ್ಡ ಆವೃತ್ತಿ (Americon Standard version)

ಇತ್ತೀಚಿನ ದಿನಗಳಲ್ಲಿ ಶೋಧನೆಯಿಂದ ಬೈಬಲ್ ಹಸ್ತಪ್ರತಿಗಳೂ ದೊರೆತಂತೆ ಅವುಗಳ ಮರು ಪರಿಶೀಲನೆಯಿಂದ ಕಿಂಗ್ ಜೇಮ್ಸ್ ಆವೃತ್ತಿಗೆ ಬಳಸಲಾಗದ ಮಾತೃಕೆಗಳನ್ನು ಬಳಸಿದಾಗ ಪುನಃ ಹೊಸದೊಂದು ಆವೃತ್ತಿಯ ಅವಶ್ಯಕತೆ ಇದುದ್ದರಿಂದ ೧೯೦೧ರಲ್ಲಿ ಅಮೇರಿಕನ್ ಆವೃತ್ತಿ ಪ್ರಕಟಗೊಂಡಿತು. ಇದನ್ನು American Standard version ಎಂದು ಕರೆದರು.

---

೧. The Printed Bible, Pp.11

೨. Abid Pp.11



ಪ್ರಥಮ ಮುದ್ರಣದ ಇಂಗ್ಲೀಷ ಬೈಬಲ್

ರಿವಾಯ್ಡ್ಡ್ ಸ್ಟ್ಯಾಂಡರ್ಡ್ ವರ್ಶನ್ (R.S.V)

ಅಮೇರಿಕನ್ ಸ್ಟ್ಯಾಂಡರ್ಡ್ ವರ್ಶನ್ ೧೯೩೭ರಲ್ಲಿ ಅಂತರಾಷ್ಟ್ರೀಯ ಧಾರ್ಮಿಕ ಹಾಗೂ ಶೈಕ್ಷಣಿಕ ಸಮಿತಿಯಿಂದ ಪುನಃ ದೃಷ್ಟಿಸಲ್ಪಟ್ಟಾಗ ಹೊಸ ಆವೃತ್ತಿಯು ಸೂಚಿತವಾಯಿತು. ಸಂಪೂರ್ಣ ಬೈಬಲ್ ಪರಿಶೀಲನ ಕಾರ್ಯಕ್ಕೆ ೩೨ ಜನ ಪಂಡಿತರು ನೇಮಕಗೊಂಡರು."[೧] ಕಿಂಗ್ ಜೇಮ್ಸ ಆವೃತ್ತಿಯಂತೆ ಶ್ರೇಷ್ಠ ಗುಣಮಟ್ಟವನ್ನು ಪಡೆಯಬೇಕೆಂಬ ಉದ್ದೇಶದಿಂದ ಕಾರ್ಯ ಸಾಗಿತು. ೧೯೪೬ರಲ್ಲಿ ಹೊಸ ಒಡಂಬಡಿಕೆ ಪ್ರಕಟವಾಯಿತು. ೧೯೫೨ರಲ್ಲಿ ಸಂಪೂರ್ಣ ಬೈಬಲ್ ಪ್ರಕಟವಾಯಿತು. ಇದು Revised Standard version (RSV) ಎಂಬ ಹೆಸರಿನಿಂದ ಹೊರ ಬಂದಿತು.

ಇಂದು ನಮಗೆ ಅನೇಕ ಆವೃತ್ತಿಗಳು ಇಂಗ್ಲೀಷಿನಲ್ಲಿ ಲಭ್ಯ ಇವೆ. ಶಬ್ದಗಳನ್ನು ಅನುಸರಿಸಿ ಮೂಲದಿಂದ ಇವೆಲ್ಲ ಭಾಷಾಂತರಗೊಂಡಿದ್ದರೂ ಈ ಆವೃತ್ತಿಗಳು ಇನ್ನೂ ಸಾಮಾನ್ಯ ಜನರ ಮನ ಮುಟ್ಟುವಲ್ಲಿ ಅಸಮರ್ಥಗೊಂಡಿವೆ ಎಂಬ ಅಂಶ ಹಾಗೆಯೇ ಉಳಿದಿದೆ. ೧೯೭೫ರಲ್ಲಿ ಜನ ಸಾಮಾನ್ಯರಿಗೆ ಹೆಚ್ಚು ಅರ್ಥವಾಗುವಂತೆ ರೇಖಾ ಚಿತ್ರಗಳೊಂದಿಗೆ 'Good News Bible' ಎಂಬ ಇಂಗ್ಲೀಷ್ ಆವೃತ್ತಿ ಹೊರ ಬಂದಿತು. ರೋಮನ್ ಕೆಥೋಲಿಕರು ಕನ್ನಡ ಬೇಬಲ್ ಭಾಷಾಂತರಿಸುವಾಗ (೧೯೯೨-೯೬) ಈ ಇಂಗ್ಲೀಷ್ ಆವೃತ್ತಿಯನ್ನೇ ಮೂಲ ಉದ್ದೇಶವಾಗಿ ಬಳಸಿಕೊಂಡಿರುವರು.

ಮೂಲ ಭಾಷೆಗಳಾದ ಹಿಬ್ರೂ ಹಾಗೂ ಅರೆಮೀಯಾದಿಂದ, ಗ್ರೀಕ್ ಹಾಗೂ ಇಂಗ್ಲೀಷವರೆಗೆ ಬೈಬಲ್ ನಡೆದು ಬಂದ ಬಗ್ಗೆ ತಿಳಿದುದಾಗಿದೆ. ಕನ್ನಡ ಸಾಹಿತ್ಯದಲ್ಲಿ ಬೈಬಲ್ ಅನುವಾದಗಳ ಕುರಿತು ತಿಳಿದುಕೊಳ್ಳುವ.

ಕನ್ನಡ ಬೈಬಲ್ ಆವೃತ್ತಿಗಳು

ಬೈಬಲ್ ಆವೃತ್ತಿಗಳು ೧೮೦೯ನೇ ಇಸ್ವಿಯಿಂದ ಇಂದಿನವರೆಗೂ ದೊರೆಯುತ್ತವೆ. ಆವೃತ್ತಿಗಳು ಎಂದಾಗ ಸಾಮಾನ್ಯವಾಗಿ ಎಲ್ಲ ಪ್ರಥಮ ಮುದ್ರಣಕ್ಕೂ ಬೈಬಲ್ ಎಂದು ಕರೆಯುವುದು ವಾಡಿಕೆ. ಉದಾಹರಣೆಗೆ ರಂ.ಶ್ರೀ.ಮುಗಳಿಯವರ ಕನ್ನಡ ಸಾಹಿತ್ಯ ಚರಿತ್ರೆ ಪು.೨೧೯(೨೦೦೨) ಡಾ. ಶ್ರೀನಿವಾಸ ಹಾವನೂರವರ ಹೊಸಗನ್ನಡ ಅರುಣೋದಯ ಪು.೩೫(೨೦೦೦), ಆದರೆ ಬೈಬಲ್ ಅನುವಾದ ಪರಂಪರೆಯನ್ನು ಗಮನಿಸಿದಾಗ ಕಂಡುಬರುವ ಅಂಶವೇನೆಂದರೆ, ಪೂರ್ತಿಯಾಗಿ ಬೈಬಲ್ ಅನುವಾದವನ್ನು ಪ್ರಾರಂಭದಿಂದ ಕೊನೆಯವರೆಗೆ ಕೈಗೊಂಡ ಬಗ್ಗೆ ಅಥವಾ ಏಕ ವ್ಯಕ್ತಿಯ ಸಾಧನೆಯ ಬಗ್ಗೆ ಎಲ್ಲಿಯೂ ಉಲ್ಲೇಖವಿಲ್ಲ. ಕ್ರಿಸ್ತನ ತರುವಾಯದ ಹೊಸ ಒಡಂಬಡಿಕೆ ಎಂಬ ಬೈಬಲ್ಲಿನ ಎರಡನೇ ಭಾಗವನ್ನೇ ಭಾಷಾಂತರಕ್ಕೆ ಪ್ರಥಮತ ಕೈಗೆತ್ತಿಕೊಳ್ಳುವುದು ಕ್ರಮ. ಹೀಗಾಗಿ ಆವೃತ್ತಿಗಳು ಒಂದು ಪುಸ್ತಕ ಇಲ್ಲವೇ

---

೧. E. of Britanica- Robert Mcmenry, 1992, Pp.535

ನಾಲ್ಕು (Gospal) ಸುವಾರ್ತೆ ಅಥವಾ ಬೈಬಲ್ ನವನಿರ್ಧಾರದ ಭಾಗ ಹಾಗೂ ಸಂಪೂರ್ಣ ಬೈಬಲ್ ಕೂಡ ಆಗಿರಬಹುದು.

"ಬೈಬಲ್ ಅನುವಾದಗಳನ್ನು ಪರಿಷ್ಕರಣ (Revision)ಗಳೆಂದು ನಿರ್ದೇಶಿಸುವುದು ರೂಢಿ. ಆದರೆ ರಿವಿಜನ್ ಎಂಬ ಪದ ಮೊದಲೇ ಇದ್ದ ಅನುವಾದವನ್ನು ತಿದ್ದುವುದು ಎಂಬ ಅರ್ಥದಲ್ಲಿ ಮಾತ್ರವಲ್ಲ, ಹೊಸದಾಗಿ ಅನುವಾದ ಮಾಡುವುದು ಎಂಬ ಅರ್ಥದಲ್ಲಿ ಮತ್ತು ಪರಿಷ್ಕರಣಕ್ಕೆ ಒಳಗಾಗುವ ಪಾಠವನ್ನು ಗುರುತುಸಿಗದಷ್ಟು ಪ್ರಮಾಣದಲ್ಲಿ ಬದಲಾಯಿಸುವುದು ಎಂಬ ಅರ್ಥದಲ್ಲಿ ಸಹ ಬಳಕೆಯಾಗಿದೆ."[೧] ಕೆಲವು ಆವೃತ್ತಿಗಳಲ್ಲಿ ನೂತನ ಪರಿಷ್ಕರಣ ಎಂದು ಬಳಸಲಾಗಿದೆ(೧೯೦೬). "ಕನ್ನಡ ಬೈಬಲ್ ಅನುವಾದದ ವೃತ್ತಾಂತಗಳಲ್ಲಿ revision ಗೂ ಹೊಸದಾಗಿ ಮಾಡಿದ ಅನುವಾದಕ್ಕೂ ಸ್ಪಷ್ಟ ವ್ಯತ್ಯಾಸವನ್ನು ಮಾಡಲಿಲ್ಲವೆಂದೂ ಕಂಡುಬರುತ್ತದೆ. ಅದಲ್ಲದೆ ಹಲವು ಆವೃತ್ತಿಗಳು ಪರಿಷ್ಕರಣಗಳು ಎಂದು ಜಿ.ಎಸ್ .ಎಂ.ಹೂಪರವರು ಬರೆದ ಪುಸ್ತಕ* ಮತ್ತು ಕನ್ನಡ ಸತ್ಯವೇದದ ಚರಿತ್ರೆಯಲ್ಲಿ ನಿರ್ದೇಶಿತವಾಗಿದ್ದರೂ ಅವುಗಳ ಮುಖ ಪುಟಗಳ ಮೇಲೆ ಅನುವಾದಗಳು, ಹೊಸ ಅನುವಾದಗಳೆಂದೇ ಬರೆದಿದೆ. ಉದಾ: ೧೮೫೦ರಲ್ಲಿ ಬಳ್ಳಾರಿಯಲ್ಲಿ ಪ್ರಕಟವಾದ ಹೊಸ ಒಡಂಬಡಿಕೆ "Translated from the original Greek into Canarese by. a Committee of missionaries belonging to the German, Landon and weslyon societies appointed by the madras Auxiliary" ಎಂದಿದೆ.

೧೯೫೦ರಲ್ಲಿ ಮೈಸೂರಿನಲ್ಲಿ ಅಚ್ಚಾದ ಹೊಸ ಒಡಂಬಡಿಕೆ ಬೆಂಗಳೂರಿನಲ್ಲಿರುವ ಸಹಾಯಕ ಸತ್ಯವೇದ ಸಂಘದವರು, ನೇಮಿಸಿದ ಸಮಿತಿಯವರು, ಗ್ರೀಕ್ ಮೂಲ ಭಾಷೆಯಿಂದ ಕನ್ನಡಕ್ಕೆ ನೂತನವಾಗಿ ಭಾಷಾಂತರಿಸಿದ್ದು, ೧೮೯೦-೧೯೨೬ ಎಂದಿದೆ.

ಕನ್ನಡ ಬೈಬಲ್ ಅನುವಾದಿಗಳಲ್ಲಿ Version(ಆವೃತ್ತಿ) Revision(ಪರಿಷ್ಕರಣ) ಹಾಗೂ Edition(ಮುದ್ರಾವರ್ತಿ) ಎಂದು ಕಾಣಸಿಗುತ್ತದೆ. ಹೀಗಾಗಿ ಇದು ಹೊಸ ಆವೃತ್ತಿಯೋ ಅಥವಾ ಹೊಸ ಅನುವಾದವೋ ಎಂದು ಕಂಡುಕೊಳ್ಳಬೇಕಾದರೆ ಪಾಠವನ್ನು ಪರಿಶೀಲಿಸಿಯೇ ತಿಳಿಯಬೇಕಾಗುವುದು.

ಬೈಬಲ್ ಜಗತ್ತಿನ ಎಲ್ಲ ಲಿಖಿತ ಭಾಷೆಯಲ್ಲಿ ಅಚ್ಚಾದ ಕೃತಿ. ಆಯಾ ಭಾಷೆಗೆ ತರ್ಜುಮೆಗೊಳ್ಳುವಾಗ ಅದು Version ಅಂದರೆ ಭಾಷಾಂತರ ಎಂದು ಬಳಕೆಗೊಂಡಿದೆ ಅಥವಾ ಆವೃತ್ತಿ ಎನ್ನಬಹುದು. ಯಾವದೇ ಭಾಷೆಯಲ್ಲಿ ಒಂದು ಸಲ ಸಂಪೂರ್ಣ ಭಾಷಾಂತರಗೊಂಡ ನಂತರ ಮತ್ತೋರ್ವ ವ್ಯಕ್ತಿ ಅಥವಾ ಸಂಸ್ಥೆ ಪುನಃ ತಿದ್ದಿ, ಸರಳೀಕರಿಸಲು ತೊಡಗಿದರೆ ಆ ಮುಂದಿನ ಆವೃತ್ತಿಗಳು ಪರಿಷ್ಕರಣ ಎಂದು ಕರೆಯಿಸಿಕೊಳ್ಳುವಂತೆ ಕಂಡುಬರುತ್ತವೆ. ಪರಿಷ್ಕರಿಸು ಎಂದರೆ ಪುಟಕ್ಕೆ ಹಾಕು ಎಂದು ಸಹ ಗ್ರಹಿಸಬಹುದು.

---

೧. ಕ.ಬೈ.ಅನುವಾದ ಎಡ್ವರ್ಡ್ ನೋರೋನ, ಪು.೨೮ ಮತ್ತು ೨೯

* Bible translation in India Pakistan & Ceylon

ಬೈಬಲ್‌ನ್ನು ಪೂರ್ತಿಯಾಗಿ ಅನುವಾದಿಸಿ ಪ್ರಕಟಿಸುವ ಪರಿಪಾಠ ಕಂಡುಬರುವುದಿಲ್ಲ. ಮೊದಲು ಎರಡನೇ ಭಾಗವಾದ ಹೊಸ ಒಡಂಬಡಿಕೆ (ನವ ನಿರ್ಧಾರ)ಯನ್ನು ಭಾಷಾಂತರಿಸುವುದು ನಂತರಹಳೆ ಒಡಂಬಡಿಕೆ (ಪೂರ್ವ ನಿರ್ಧಾರ) ಸಿದ್ಧಗೊಳಿಸಿ ಸಂಪೂರ್ಣ ಬೈಬಲ್ ಹೊರತರುವುದು ಕ್ರಮ. ಹೊಸ ಒಡಂಬಡಿಕೆ ಓದುಗರಿಗೆ ಸರಳವಾಗಿ ಗ್ರಹಿಸಲು ಸಾಧ್ಯವಾಗುತ್ತದೆಂಬ ದೃಷ್ಟಿಯಿಂದ ಮತ್ತು ಭಾಷಾಂತರಕಾರರಿಗೂ ಅನುಕೂಲ ಹೆಚ್ಚಿರುವುದರಿಂದ ಈ ಕ್ರಮ ಅನುಸರಿಸುತ್ತಿರಬಹುದು.

ಪ್ರಥಮ ಕನ್ನಡ ಬೈಬಲ್

ಭಾರತೀಯ ಭಾಷೆಗಳಲ್ಲಿ ಬೈಬಲನ್ನು ಭಾಷಾಂತರಿಸಿದ ಬೈಬಲ್ ಪಿತಾಮಹನೆಂದರೆ ವಿಲಿಯಂ ಕೇರಿ ಎನ್ನಬಹುದು. ೧೭೯೩ರಲ್ಲಿ ಕಲ್ಕತ್ತೆಗೆ ಬಂದ ಕೇರಿ ೧೭೯೯ರ ವರೆಗೆ ಮಿಶನರಿ ಕಾರ್ಯದಲ್ಲಿ ಉದ್ಯುಕ್ತನಾಗಿರಲಿಲ್ಲ ನಂತರದಲ್ಲಿ "ಭಾರತಕ್ಕೆ ಬಂದ ಮಾರ್ಶಮನ್ (Marshman) ಮತ್ತು ವಾರ್ಡ(ward) ರವರನ್ನು ಕೂಡಿಕೊಂಡು ಭಾಷಾಂತರ ಕಾರ್ಯಕ್ಕೆ ಕೈ ಹಾಕಿದನು."[೧]

"೧೭೦೬ರಲ್ಲಿಯೇ ಟ್ರೆಂಕ್ಯೂಬಾರ್ (Tranguebar)ಗೆ ಬಂದಿದ್ದ ಬಾರ್ತೊಲೋಮಿವ ಜಿಗನ್ ಬಾಗ್ (Bartholomew Ziegenbalg)ನು ತಮಿಳನ್ನು ಕಲಿತು ೧೭೧೪ರಲ್ಲಿ ತಮಿಳು ಹೊಸ ಒಡಂಬಡಿಕೆಯನ್ನು ನಂತರ ೧೭೧೯ರ ಒಳಗಾಗಿ ಹಳೆ ಒಡಂಬಡಿಕೆಯ ರೂಥ ಪುಸ್ತಕದವರಗೆ ಅಂದರೆ ಹಳೆ ಒಡಂಬಡಿಕೆಯ ಅನೇ ಪುಸ್ತಕದವರೆಗೆ ಭಾಷಾಂತರ ಪೂರ್ತಿಗೊಳಿಸಿದನು. ಅದೇ ವರ್ಷವೇ ಕ್ರಿಸ್ತನಲ್ಲಿ ನಿದ್ರೆ ಹೋದನು."[೨] ಆದುದರಿಂದ ತರ್ಜುಮೆ ಕಾರ್ಯ ಆತನಿಂದ ಪೂರ್ತಿಗೊಳ್ಳಲಿಲ್ಲ. ಭಾರತೀಯ ಭಾಷೆಗಳಲ್ಲಿ ತಮಿಳಿನಲ್ಲಿಯೇ ಮೊದಲು ಬೈಬಲ್ ಭಾಷಾಂತರಗೊಂಡಿದೆ.

ವಿಲಿಯಂ ಕೇರಿಯಿಂದ ೧೮೨೯ರಲ್ಲಿ ಕನ್ನಡ ಭಾಷೆಯಲ್ಲಿ ಬೈಬಲ್ ಅನುವಾದಗೊಂಡಿತು. ಇದನ್ನು ರಂ.ಶ್ರೀ.ಮುಗಳಿ ಹಾಗೂ ಹಾವನೂರವರು ಬೈಬಲ್ ಅನುವಾದ ಎಂದಿದ್ದಾರೆ. ಎಡ್ವರ್ಡ್ ನೊರೊನರವರು 'ಕನ್ನಡದಲ್ಲಿ ಬೈಬಲ್ ಅನುವಾದಗಳು', ಪುಟ.೨೭ರಲ್ಲಿ ೧೭೯೩ರಲ್ಲಿ ಶ್ರೀರಾಮಪುರಕ್ಕೆ ಬಂದು ವಿಲಿಯಂ ಕೇರಿ ಬೈಬಲ್‌ನ ಹೊಸ ಒಡಂಬಡಿಕೆಯ ಕನ್ನಡ ಅನುವಾದದಲ್ಲಿ ಮೊತ್ತ ಮೊದಲನೆಯದನ್ನು ಮಾಡಿದನು ಎಂದಿದ್ದಾರೆ. ಕನ್ನಡ ಸತ್ಯವೇದ ಚರುತೆ(ಪುಟ.೨)ಯಲ್ಲಿ ೧೮೨೯ರಲ್ಲಿ ಹೊಸ ಒಡಂಬಡಿಕೆಯ ಕನ್ನಡ ಭಾಷಾಂತರ ಮುಗಿದಿತ್ತು ಎಂದಿದೆ. ಮತ್ತು Bible translation in India. Pakistan and ceylon ಎಂಬ ಪುಸ್ತಕದ (೯೫ನೇ ಪುಟ)ಲ್ಲಿ ಸೆರಾಂಪುರ ಮಿಶನರಿಗಳು ಹೊಸ ಒಡಂಬಡಿಕೆಯ ಕನ್ನಡ ಅನುವಾದವನ್ನು ೧೮೨೯ರಲ್ಲಿ ಮುಗಿಸಿದ್ದರು ಎಂದಿದೆ.

---

೧. Story of Kannada Bible, P.1

೨. B.T.I.I.P & Ceylon, S.S.M.Hooper, Pp.71

ಈ ಮೇಲಿನ ಗ್ರಂಥಗಳ ಆಧಾರದ ಮೇಲೆ ನೊರೊನರವರ ಕೇವಲ ಮೊದಲನೆಯ ಪುಸ್ತಕ ಎಂದು ಒಪ್ಪಲು ಆಗದು. ಭಾರತೀಯ ಎಲ್ಲ ಭಾಷೆಗಳಲ್ಲಿ ಬೈಬಲ್ ನೀಡಬೇಕೆಂಬ ಹಂಬಲ ಕೇರಿಯದಾಗಿತ್ತಂತೆ. ಆತನು ಕನ್ನಡ ಅನುವಾದದಲ್ಲಿ "೧೮೧೨ರಲ್ಲಿ ಪ್ರೆಸ್ಸಿಗೆ (ಶ್ರೀರಾಮಂಪುರ ಪ್ರೆಸ್) ಬೆಂಕಿ ತಗುಲಿ ಎಲ್ಲ ಹಸ್ತಪ್ರತಿಗಳು ನಾಶವಾದವು."[೧] ತದನಂತರದಲ್ಲಿ ಕೇರಿ ತನ್ನ ಕಾರ್ಯ ಮುಂದುವರೆಸಿ ೧೮೨೩ರಲ್ಲಿ ಹೊಸ ಒಡಂಬಡಿಕೆಯ ಕನ್ನಡ ಭಾಷಾಂತರ ಆವೃತ್ತಿ ಪ್ರಕಟಗೊಂಡಿತು. ಆದರೆ ಕೇರಿಯ ಆವೃತ್ತಿ ಅಷ್ಟೊಂದು ಜನಮನವನ್ನು ಗೆಲ್ಲದೆ ಹೋಯಿತು. ಆತ ಬಳಸಿದ ಕನ್ನಡ ಭಾಷೆ ಹಾಗೂ ಅಚ್ಚಿನ ಮೊಳೆಗಳು ತೆಲುಗು ಲಿಪಿ ಹೋಲಿಕೆ ಇರುವುದು ಕಾರಣವಾಗಿರಬಹುದು.*

ಅಲ್ಲದೇ ಬಳ್ಳಾರಿಯಲ್ಲಿ ೧೮೨೦ರಲ್ಲಿ ಹೊರಬಂದ ಕನ್ನಡ ಬೈಬಲ್ ಆವೃತ್ತಿಯ ಪ್ರಭಾವ ಕೂಡ ಕಾರಣವಾಗಿರಬಹುದು. ಒಟ್ಟಿನಲ್ಲಿ ಕನ್ನಡ ಭಾಷೆಗೆ ಬೈಬಲ್ ಅನುವಾದಿಸಿದ ಮೊಟ್ಟ ಮೊದಲ ವ್ಯಕ್ತಿ ವಿಲಿಯಂ ಕೇರಿ.

ಕನ್ನಡ ಪ್ರಥಮ ಮುದ್ರಣ ಬೈಬಲ್

ಸೆರಮ್‌ಪುರ (SERAMPORE) ಮಿಶನರಿಗಳಂತೆ ಕಲ್ಕತ್ತ ಬೈಬಲ್ ಸೊಸೈಟಿಯವರು ಸಹ ಕನ್ನಡದ ಬೆಳವಣಿಗೆಯ ಬಗ್ಗೆ ಕಾಳಜಿ ತೋರಿಸಿದರು. ಹೆನ್ರಿ ಮಾರ್ಟಿನ್ (Henry Martyn) ೧೮೧೧ರಲ್ಲಿ ಕಲ್ಕತ್ ಬೈಬಲ್ ಸೊಸೈಟಿಯವರಿಗೆ ತಿಳಿಸಿದ ಪ್ರಕಾರ, "ಗೋವಾದಲ್ಲಿ ಪೋರ್ತಗೀಜ ಪ್ರಾಂತ್ಯದಲ್ಲಿ ವಾಸಿಸುತ್ತಿರುವ ಸುಮಾರು ೨೦,೦೦೦ ಸ್ಥಳೀಯ ಕ್ರಿಶ್ಚಿಯನ್ನರು ಕನ್ನಡ ಮಾತನಾಡುವವರಾಗಿದ್ದಾರೆ"[೨] ಹೀಗಾಗಿ ಕಲ್ಕತ್ತ ಸೊಸೈಟಿಯು ಗೋವಾದ ಕೆಥೋಲಿಕ ಆರ್ಚ್ ಬಿಶಪ್ಪರವರಿಂದ ಕನ್ನಡದಲ್ಲಿ ಹೊಸ ಒಡಂಬಡಿಕೆಯನ್ನು ಸಿದ್ಧಗೊಳಿಸಲು ಅನುಮತಿ ಕೇಳಿತು. ಇದಕ್ಕೆ ಆರ್ಚ ಬಿಶಪ್ಪರು ಉತ್ತರಿಸಿ "ಕನ್ನಡ ಮಾತನಾಡುವ ಕ್ರಿಶ್ಚಿಯನ್ನರು ಕನ್ನಡ ಓದಲು ಬರುತ್ತಿದ್ದರೂ ಪೋರ್ಚುಗೀಜ ಓದುವುದರಲ್ಲಿ ಆಸಕ್ತಿ ಉಳ್ಳವರಾಗಿರುವರು"[೩] ಎಂದು ತಿಳಿಸಿದರು. ಗೋವಾದಲ್ಲಿಯ ಕ್ರಿಶ್ಚಿಯನ್ನರಿಗೆ ಕನ್ನಡದಲ್ಲಿ ಬೈಬಲ್ ಒದಗಿಸಲು ಸೊಸೈಟಿ ನಿರ್ಧರಿಸಿದಂತೆ ಕಂಡುಬಂತು. ಇಂತಹ ಸಂದರ್ಭದಲ್ಲಿ ಲಂಡನ್ ಮಿಶನ್ ಸೊಸೈಟಿಯ ರೆ.ಜಾನ್ ಹ್ಯಾಂಡ್ಸ್ ನು ೧೮೧೦ರಲ್ಲಿ ಬಳ್ಳಾರಿಗೆ ಬಂದನು. ಪ್ರಾರಂಭದ ದಿನಗಳಲ್ಲಿಯೇ ಕನ್ನಡ ವ್ಯಾಕರಣ ಹಾಗೂ ಶಬ್ದಕೋಶವನ್ನು ಸಿದ್ಧಗೊಳಿಸಿ ನಂತರ ಹೊಸ ಒಡಂಬಡಿಕೆಯ ಪ್ರಾರಂಭದ ನಾಲ್ಕು ಪುಸ್ತಕಗಳಲ್ಲಿ ಮೂರನೇ ಪುಸ್ತಕವಾದ 'ಲೂಕ'(Luke) ಸುವಾರ್ತೆಯ ಸಾರವನ್ನು ಕನ್ನಡಿಕರಿಸಿ ೧೮೧೨ರಲ್ಲಿ ಪ್ರಕಟಿಸಿದನು. "೧೮೧೭ರಲ್ಲಿ ಕಲ್ಕತ್ತಾ ಆಗ್ಸಲರಿ


---

೧. B.T.I.I.P & Ceylon, S.S.M.Hooper, Pp.96

೨. ಅದೇ, ಪು.೯೬

೩. ಅದೇ, ಪು.೯೬

* ಕೇರಿ ಬೈಬಲ್ ಚಿತ್ರ


NEW TESTAMENT

OF

OUR LORD AND SAVIOUR

JESUS CHRIST;

TRANSLATED

FROM THE ORIGINAL GREEK

INTO

THE KURNATA LANGUAGE.

BY THE SERAMPORE MISSIONARIES.

Serampore:

PRINTED AT THE MISSION PRESS,

1823.

ವಿಲಿಯಂ ಕೇರಿ ಪ್ರಥಮ ಕನ್ನಡ ಬೈಬಲ್.

(Auxiliar- ಸಹಾಯಕ)ಯವರಿಗೆ ಬಳ್ಳಾರಿಯ ಜಾನ್ ಹ್ಯಾಂಡ್ಸನಿಂದ ಹೊಸ ಒಡಂಬಡಿಕೆಯ ಕನ್ನಡ ಆವೃತ್ತಿ ಮುದ್ರಣಕ್ಕೆ ಸಿದ್ಧವಾಗಿದೆ ಎಂದು ತಿಳಿದುಬಂತು. ಸಹಾಯ ಧನವೆಂದು ಒಂದು ಸಾವಿರ ರೂ.ಗಳನ್ನು ಒದಗಿಸಿತು.''[೧] ಇದರಿಂದ ಹೊಸ ಒಡಂಬಡಿಕೆಯಲ್ಲಿ ಮತ್ತಾಯ ಪುಸ್ತಕದಿಂದ ಅಪೋಸ್ತಲ್ ಕೃತ್ಯದವರೆಗೆ ಒಟ್ಟು ಐದು ಪುಸ್ತಕಗಳ ಸಂಗ್ರಹ ೧೮೨೦ರಲ್ಲಿ ಮದ್ರಾಸಿನಲ್ಲಿ ಮುದ್ರಣಗೊಂಡಿತು. ಎರಡು ವರ್ಷಗಳ ನಂತರ ಎಫೇಸ್ ಹಾಗೂ ಪಿಲಿಪ್ಪಿಯನ್ಸ ಎಂಬ ಪುಸ್ತಕಗಳು ಮುದ್ರಣಗೊಂಡವು. ಜಾನ್ ಹ್ಯಾಂಡ್ಸನು ೧೮೨೫ರಲ್ಲಿ ಸಂಪೂರ್ಣ ಹೊಸ ಒಡಂಬಡಿಕೆಯನ್ನು ಪುನರ್ ಪರಿಶೀಲಿಸಿ ೧೮೩೦ರಲ್ಲಿ ಬಳ್ಳಾರಿ ಮಿಶನ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಿದನು. ಇದರಿಂದ ರೆ.ಜಾನ್ ಹ್ಯಾಂಡ್ಸನಿಂದ ಸಂಪೂರ್ಣ ಹೊಸ ಒಡಂಬಡಿಕೆ ಆವೃತ್ತಿ ಹೊರಬಂದಂತಾಯಿತು ಹೀಗೆ ಕನ್ನಡದಲ್ಲಿ ಪ್ರಥಮ ಮುದ್ರಣವನ್ನು ಪಡೆದಂತಾಯಿತು.

"ವ್ಹಿಲಿಯಂ ರೀವ್ (william Reeve)ನು ೧೮೧೬ರಲ್ಲಿ ಜಾನ್ ಹ್ಯಾಂಡ್ಸನಿಗೆ ಭಾಷಾಂತರದಲ್ಲಿ ಸಹಾಯ ಸಲ್ಲಿಸಲು ಭಾರತಕ್ಕೆ ಆಗಮಿಸಿದನು".[೨] "ಅನಾರೋಗ್ಯದ ನಿಮಿತ್ತ ಹ್ಯಾಂಡ್ಸ್ ಸ್ವದೇಶಕ್ಕೆ ಮರಳ ಬೇಕಾಗಿತ್ತು. ತೆರಳುವ ಮುನ್ನ ರೀವ್ ನೊಂದಿಗೆ ಕೂಡಿ ಹಳೆ ಒಡಂಬಡಿಕೆಯನ್ನು ಸಿದ್ಧಗೊಳಿಸಿದನು. ಕೆಲವು ಭಾಗಗಳು ೧೮೨೭ರಲ್ಲಿ ಪ್ರಕಟಗೊಂಡವು. ೧೮೩೧ರಲ್ಲಿ ಸಂಪೂರ್ಣ ಹಳೆ ಒಡಂಬಡಿಕೆ ಮುದ್ರಣವಾಯಿತು. ಈ ಕಾರ್ಯದಲ್ಲಿ "ಅದಿಕಾಂಡ(Genesis)ದಿಂದ ಎಸ್ತೇರ (Eother)ವರೆಗೆ ರೀವ್ ಅನುವಾದಿಸಿದರೆ ಉಳಿದ ಭಾಗವನ್ನು ಹ್ಯಾಂಡ್ಸ ಪೂರ್ತಿಗೊಳಿಸಿದನು.''[೩] ಹ್ಯಾಂಡ್ಸನು ಸ್ವದೇಶಕ್ಕೆ ಮರಳಿದಾಗ ಆತನ ಅನುಪಮ ಸ್ಥಿತಿಯಲ್ಲಿ ವಿಲಿಯಂ ರೀವ್ ಹ್ಯಾಂಡ್ಸ ಕಾರ್ಯ ಮುಂದುವರೆಸಿದನು.

"೧೮೩೧ರಲ್ಲಿ ಹ್ಯಾಂಡ್ಸ್ ಸ್ವದೇಶದಿಂದ ಮರಳಿ ಬರುವಾಗ ಕನ್ನಡ ಅಚ್ಚಿನ ಮೊಳೆಗಳನ್ನು ಜೊತೆಯಲ್ಲಿ ತಂದನು.''[೪] ಮದ್ರಾಸ ಧನ ಸಹಾಯ ಕಮಿಟಿಯ ನೇತೃತ್ವದಲ್ಲಿ ಸುವಾರ್ತೆ(Gospels) ಮತ್ತು ಅಪೊಸ್ತಲ ಕೃತ್ಯಗಳ (Acts) ಪರಿಷ್ಕೃತ ಆವೃತ್ತಿ ಎಂದು ಹ್ಯಾಂಡ್ಸ ಹಾಗೂ ರೀವ್‌ರು ೧೮೩೭ರಲ್ಲಿ ಹೊರ ತಂದರು.

"ಈ ಕಾರ್ಯದಲ್ಲಿ ಮದರಾಸು ಸಹಾಯಕ ಬೈಬಲ್ ಸೊಸೈಟಿಯವರು ನೇಮಿಸಿದ ಭಾಷಾಂತರ ಸಮಿತಿಯ ಸದಸ್ಯರಾಗಿದ್ದ ಜೆ.ಟೇಯ್ಲರ್, ಎ.ಡಿ.ಕ್ಯಾಂಪಬೆಲ್, ಆರ್.ಸಿ.ಗೊಸಲಿಂಗ್ ಸಹಾಯ ಮಾಡಿದರು. ಅನಂತರ ೧೮೩೭ ಮತ್ತು ಮುಂದಿನ ವರ್ಷಗಳಲ್ಲಿ ಮದರಾಸು ಬೈಬಲ್ ಸೊಸೈಟಿಯವರು ನೇಮಿಸಿದ ಸಮಿತಿಯವರ ಮೇಲ್ವಿಚಾರಣೆಯಲ್ಲಿ ಬೈಬಲ್ಲಿನ ಬೇರೆ ಬೇರೆ ಭಾಗಗಳು ಬಳ್ಳಾರಿಯಲ್ಲಿ

---

೧. B.T.I.I.P & Ceylon, S.S.M.Hooper, Pp.96

೨. ಅದೇ, ಪು.೯೭

೩. ಕ.ಬೈ.ಅನುವಾದ, ಎಡ್ವರ್ಡ್ ನೋರೋನ, ಪು.೩೦

೪. B.T.I.I.P & Ceylon, S.S.M.Hooper, Pp.99

೫. ಕ.ಬೈ.ಅನುವಾದ, ಎಡ್ವರ್ಡ್ ನೋರೋನ, ಪು.೩೦

ಪ್ರಕಟವಾದವು.''[೫]

ಪರಿಷ್ಕರಣ ಅವಶ್ಯಕತೆಯನ್ನು ಕಂಡುಕೊಂಡ ಮದ್ರಾಸ್ ಸಂಸ್ಥೆ ಪರಿಷ್ಕರಣದಲ್ಲಿ ಒದಗಬಹುದಾದ ಆಚರಣೆಗಳನ್ನು ತಪ್ಪಿಸುವುದಕ್ಕೋಸ್ಕರ ಒಂದು ಸಮಿತಿ ರಚಿಸಲು ನಿರ್ಧರಿಸಿ, ೧೮೪೮ರಲ್ಲಿ ಬಾಶೆಲ್ ಮಿಶನ್ನಿನ ರೆ.ಜಿ.ಎಚ್ .ವೀಗಲ್ (weigle)ನನ್ನು ಒಂದು ವರ್ಷದ ಅವಧಿಗೆ ಹೊಸ ಒಡಂಬಡಿಕೆ ಪರಿಷ್ಕರಿಸುವ ಕಾರ್ಯಕ್ಕೆ ನೇಮಿಸಿತು. ನಂತರದಲ್ಲಿ ಇವರ ಸೇವೆಯನ್ನು ಹಳೆ ಒಡಂಬಡಿಕೆ ಕಾರ್ಯಕ್ಕೆ ಮುಂದುವರೆಸಲಾಯಿತು.

ಈ ಸಮಯದಲ್ಲಿ ''ಮಂಗಳೂರು ಬಾಶೆಲ್ ಮಿಶನನ್ನಿನ ಮೋಗ್ಲಲಿಂಗ್ ಮತ್ತು ವೀಗಲ್ ಹೊಸ ಒಡಂಬಡಿಕೆಯ ಒಂದು ಅನುವಾದವನ್ನು ಪ್ರಕಟಿಸಿದ್ದರು. ೧೮೩೭-೪೮ರಲ್ಲಿ ಮಂಗಳೂರಿನಲ್ಲಿ ಅಚ್ಚಾದ ಹೊಸ ಒಡಂಬಡಿಕೆಯ ಒಂದು ಭಾಗ ಉಪಲಬ್ಧವಿದೆ.* ಮೊಗ್‌ಲಿಂಗ್ ಹಾಗೂ ವೀಗಲ್ ಮಾಡಿದ ಅನುವಾದದ ಉಲ್ಲೇಖ ಕನ್ನಡ ಬೈಬಲ್ ವೃತ್ತಾಂತಗಳಲ್ಲಿ ಪುನಃ ಸಿಗುವುದಿಲ್ಲ''[೧] ಈ ಕಾರಣಕ್ಕಾಗಿ ಆಗಿನ ದಿನಗಳಲ್ಲಿ ಉತ್ತಮ ಭಾಷಾಂತರಕಾರನೆಂದು ರೆ.ವೀಗಲ್‌ನನ್ನು ನೇಮಿಸಿದಂತೆ ಕಂಡುಬರುವುದು. ಈತನ ನೇಮಕದ ತತ್ಫಲವಾಗಿ ೧೮೫೦ರಲ್ಲಿ ಹೊಸ ಒಡಂಬಡಿಕೆ ಬೆಳಕಿಗೆ ಬಂದಿತು. ಇದು ಪ್ರಾಯೋಗಿಕವಾಗಿ ಕೆಲವು ಪುಸ್ತಕಗಳ ಭಾಷಾಂತರವಾಗಿತ್ತು. ಮುಂದೆ ೧೮೫೪ರಲ್ಲಿ ಪರಿಷ್ಕೃತ ಆವೃತ್ತಿ ಎಂದು ಪರಿಗಣಿಸಲಾಯಿತು. ಈ ಪರಿಷ್ಕರಣ ಆವೃತ್ತಿ ಹೊರಬರಲು ಮದ್ರಾಸ್ ಆಕ್ಜಲರಿ ಸೊಸೈಟಿ ಭಾರತದಲ್ಲಿ ಮೂರು ಮಿಶನ್ ಸಂಸ್ಥೆಗಳನ್ನು ಒಟ್ಟುಗೂಡಿ ಸದಸ್ಯರನ್ನು ನೇಮಿಸಿ ಸಮಿತಿ ರಚಿಸಿತ್ತು. ಕಾರಣ ''ಎರಡನೆ ತಲೆಮಾರಿನ ಮಿಶನರಿಗಳು ಕನ್ನಡವನ್ನು ಹೆಚ್ಚು ಚೆನ್ನಾಗಿ ಕಲಿತವರಾದ್ದರಿಂದ ಅವರಿಗೆ ಈ ಪ್ರಥಮ ಅನುವಾದಗಳು ಅಸಮರ್ಪಕವಾಗಿ ಕಂಡವು. ಕನ್ನಡದ ಪ್ರಾದೇಶಿಕ ಭೇದದಿಂದಾಗಿ ಅದರಲ್ಲಿಯ ಎಷ್ಟೋ ಭಾಗಗಳು ಅನ್ಯ ಜನರಿಗೆ ಅರ್ಥವಾಗದೆ ಹೋದವು. ಆ ಕಾರಣ ಪ್ರಾಂತ್ಯ ಭೇದಗಳಿಗೆ ಅನುಗುಣವಾಗಿ ಎರಡು ಬೇರೆ ಬೇರೆ ಭಾಷಾಂತರಗಳಿರಬೇಕೆಂಬ ಸೂಚನೆಯು ಮೂಡಿಬಂದಿತು.''[೨] ಆದರೆ ಎರಡು ಬಗೆಯ ಅನುವಾದವನ್ನು ಕೈಬಿಟ್ಟು, ಮುಂದಿನ ಅನುವಾದ ಕಾರ್ಯದಲ್ಲಿ ಪ್ರಾಂತೀಯ ಬೇಧಗಳ ಕಡೆಗೆ ಗಮನ ಹರಿಸಲಾಯಿತು.

೧೮೫೪ರಲ್ಲಿ ಪ್ರಧಾನ ಪರಿಷ್ಕಾರಕರಾಗಿದ್ದ ರೇ. ವೀಗಲ್ ಸ್ವರ್ಗಸ್ಥನಾದನು. ಈತನು ಭಾಷಾಂತರಿಸಿದ್ದ ಹಳೆ ಒಡಂಬಡಿಕೆಯ ಒಂದು ಗಣನೀಯ ಭಾಗದ ಅನುವಾದವನ್ನು ಕಾಲಿನ್ ಕ್ಯಾಂಡಬೆಲ್, ಬೆಂಜಮಿನ್

---

೧. ಕ.ಬೈ.ಅನುವಾದ, ಎಡ್ವರ್ಡ್ ನೋರೋನ, ಪು.೩೦

೨. ಹೊ.ಅ.ಶ್ರೀ.ಹಾ., ಪು.೪೨೦

* ಮತ್ತಾಯನು ಬರೆದ ಸುವಾರ್ತೆ ಮಂಗಳೂರು ಮಿಶನ್‌ಪ್ರೆಸ್(೧೮೪೭-೪೮)

ರೈಸ್ ಮತ್ತಿತರರು ಇದ್ದ ಸಮಿತಿ ಪರಿಷ್ಕರಿಸಿ ೧೮೬೦ರಲ್ಲಿ ಹಳೆ ಒಡಂಬಡಿಕೆಯನ್ನು ಮುದ್ರಿಸಿತು. ಇದನ್ನು ತಾತ್ಪೂರ್ತಿಕ ಆವೃತ್ತಿ ಎಂದು ಗುರುತಿಸಲಾಯಿತು.

೧೮೬೫ರಲ್ಲಿ ಸಮಗ್ರ ಬೈಬಲ್ ಅಚ್ಚಾಯಿತು. ಇದರಲ್ಲಿ ಹಲವು ಪುಸ್ತಕಗಳು ಹೊಸದಾಗಿ ಅನುವಾದಗೊಂಡಿದ್ದವು. ಎಡ್ವರ್ಡ್ ನೋರೊನರವರು ತಮ್ಮ ಪುಸ್ತಕ (ಕನ್ನಡದಲ್ಲಿ ಬೈಬಲ್ ಅನುವಾದ ಪು.೩೦)ದ ಅಡಿ ಟಿಪ್ಪಣಿಯಲ್ಲಿ ಅಭಿಪ್ರಾಯವನ್ನು ಹೀಗೆ ವ್ಯಕ್ತಪಡಿಸಿದ್ದಾರೆ. "ನವನಿರ್ಧಾರ(ಹೊ.ಒ)ದಲ್ಲಿ ಮೊದಲಿನ ಆವೃತ್ತಿಯ ಸುಧಾರಣೆಯು ಸಾಧ್ಯವಾಯಿತಾದರೂ ಪೂರ್ವ ನಿರ್ಧಾರ(ಹ.ಒ)ದ ಅನುವಾದವನ್ನು ಮಾತ್ರ ವೀಗಲ್ ಪ್ರತ್ಯೇಕವಾಗಿ ಕೈಗೊಂಡನು" ಎಂದು ಇದೆ. ಆವೃತ್ತಿಯನ್ನು ಕುರಿತು ಹಾವನೂರರು (ಪು.೪೨೧) ಹೇಳಿರುವುದಕ್ಕೆ ಸ್ಪಷ್ಟ ಕಾರಣ ತಿಳಿಯುವುದಿಲ್ಲ"[೧] ಎಂದಿದ್ದಾರೆ. ಕಾರಣ ಹೀಗೆ ಗ್ರಹಿಸಬಹುದು. ವೀಗಲ್ ಸಿದ್ಧಗೊಳಿಸಿದ ಮೇಲೆ ಅದನ್ನು ಸಹೊದ್ಯೋಗಿಗಳ ಸಂಗಡ ಚರ್ಚಿಸಿ ಕೊನೆಯಲ್ಲಿ ಅದನ್ನು ಕಮೀಟಿಯ ಸಮ್ಮುಖದಲ್ಲಿ ತಂದು ಒಪ್ಪಿಗೆ ಪಡೆಯುವುದು ಕ್ರಮ. ಈ ಕಾರ್ಯ ನಡೆಯುವ ಪೂರ್ವದಲ್ಲಿಯೇ ವೀಗಲ್ ತೀರಿ ಹೋಗಿದ್ದರಿಂದ ಆತ ಒಬ್ಬನೇ ಪ್ರತ್ಯೇಕವಾಗಿ ಕಾರ್ಯ ಕೈಗೆತ್ತಿಕೊಂಡಂತೆ ಕಂಡುಬರುತ್ತದೆ. ಮುಂದೆ ಆತನ ಭಾಷಾಂತರ ಕಮೀಟಿಯಿಂದ ಪರಿಶೀಲನೆಗೆ ಒಳಗಾಗಲಿಲ್ಲ ಎಂದು ಹೇಳಲು ಬರುವುದಿಲ್ಲ. ಒಂದು ಅಂಶವನ್ನು ಗಮನದಲ್ಲಿರಿಸಬಹುದು. ಒಬ್ಬ ವ್ಯಕ್ತಿಯ ಅಭಿಪ್ರಾಯದಂತೆ, ವಿದ್ವತ್ತಿನಂತೆ ಭಾಷಾಂತರ ಕಾರ್ಯ ನಡೆದಿಲ್ಲ. ಆದರೆ ಆಗಿನ ಭಾಷಾಂತರಕಾರರಲ್ಲಿ ವೀಗಲ್‌ನೇ ಹೆಚ್ಚು ಕನ್ನಡ ಜ್ಞಾನ ಪಡೆದವನೆಂದು ಕಂಡುಬರುತ್ತದೆ. ಈ ಕಾರಣದಿಂದ ವೀಗಲ್‌ನಿಗೆ ಸಂಪೂರ್ಣ ಹೊಣೆ ನೀಡಲಾಗಿತ್ತು.

೧೮೫೦ರಲ್ಲಿ ವೀಗಲ್ ತೀರಿದ ನಂತರ, ಮೊದಲ ಎಂಟು ಅಧ್ಯಾಯ(ಲೂಕ)ವು, ಸಿ.ಮೆರಿಕ್ (C.maericke) ಬಾಶೆಲ್ ಮಿಶನ್ ಮಿಶನರಿಯಿಂದ ಪೂರ್ಣಗೊಂಡವು. ಸುವಾರ್ತೆ ೧೮೫೨ರಲ್ಲಿ ಪ್ರಕಟವಾಯಿತು. ೧೮೯೬ರಲ್ಲಿ ಪರಿಷ್ಕೃತ ಆವೃತ್ತಿ ಹೊರಬಂದಿತು. ೧೯೦೭ರಲ್ಲಿ ಭಾರತೀಯ ಗುರುವಾಗಿದ್ದ ಜೇ.ಕನಕ(J.kanaka) ಎಂಬವರು ಜೊನಾ(Jonah) ಪುಸ್ತಕವನ್ನು ಭಾಷಾಂತರಿಸಿದರು. ಇದು ಕನ್ನಡ ಹಾಗೂ ತಮಿಳಿನಲ್ಲಿ ಏಕಕಾಲಕ್ಕೆ ಪ್ರಕಟವಾಯಿತು.

"ಹೊಸಗನ್ನಡದ ಗದ್ಯವು ನೆಲೆಗೊಂಡಿರದ ಆ ಕಾಲದಲ್ಲಿ ಪ್ರತಿ ಶಬ್ದವನ್ನು ಒರೆಗೆ ಹಚ್ಚಿ, ಪ್ರಾದೇಶಿಕ ಭೇದಗಳನ್ನು ಸಮನ್ವಯಗೊಳಿಸಿಸುತ್ತ, ಈ ಬೃಹದ್ಗ್ರಂಥದ ಭಾಷಾಂತರವನ್ನು ಮುಗಿಸಿದುದು ಕನ್ನಡ ಸಾಹಿತ್ಯೇತಿಹಾಸದಲ್ಲಿ ಒಂದು ಅಪೂರ್ವ ಘಟನೆಯಾಗಿದೆ."[೨]

---

೧. ಕ.ಬೈ.ಅನು., ಪು.೩೮

೨. ಹೊ.ಅ.ಶ್ರೀ.ಹಾ.ಪು.೪೨೧

೧೮೬೫ ನಂತರ, ೧೮೭೭ರಲ್ಲಿ ಬೆಂಗಳೂರಲ್ಲಿ ಅಚ್ಚಾದ ಆವೃತ್ತಿ, ೧೮೯೪-೧೯೦೧ ವೆಸ್ಲಿಯನ್ ಮಿಶನ್ನಿನ ಹೊಸ ಒಡಂಬಡಿಕೆಯ ಆವೃತ್ತಿ, ಇವು ಯಾವುವು ಪರಿಣಾಮ ಬೀರಲಿಲ್ಲ. ೧೮೬೫ರ ಆವೃತ್ತಿಯಲ್ಲಿ ದೇವರು ಅಥವಾ ಲಾರ್ಡ (LORD) ಎಂಬಲ್ಲಿ 'ಜಹೋವ'(Jehavah) ಎಂದು ಮೊಟ್ಟ ಮೊದಲು ಬಳಸಲಾಗಿದೆ. ಈ ಆವೃತ್ತಿಯಿಂದ ದೇವರ ಹೆಸರು 'ಜಹೋವ' ಎಂದು ಎಲ್ಲ ಕನ್ನಡ ಕ್ರೈಸ್ತರಿಗೆ ತಿಳಿಸಿದಂತಾಯಿತು. ಈ ಆವೃತ್ತಿ ನಂತರ ದೇವರಿಗೆ ಮಹೋವ ಎಂದು ಬಳಸಿದುದರ ಬದಲಾಗಿ (೧೯ನೇ ಆವೃತ್ತಿ) ಕರ್ತನು ಎಂದು ಬಳಸಲಾಯಿತು. ಇದರಿಂದ ಅನೇಕರಿಗೆ ಅಸಮಾಧನವಾಗಿ ಇದನ್ನು ಕೈಬಿಡಲು ಬೈಬಲ್ ಸೊಸೈಟಿಗೆ ಅನೇಕ ಓಲೆಗಳು ಬಂದವು.* ಇತ್ತೀಚಿನ ದಿನಗಳಲ್ಲಿ (ಈಗ ಹೊರಬರುವ ಆವೃತ್ತಿ ೨೦೦೧-೨೦೦೨) ಮತ್ತೆ ಯಹೋವ(ಜಹೋವ) ಎಂದೇ ಮುದ್ರಿಸಲು ನಿರ್ಧರಿಸಲಾಗಿದೆ.

೧೮೬೫ ಆವೃತ್ತಿಯು "ಮುಂದಿನ ಮೂವತ್ತು ವರ್ಷಗಳವರೆಗೆ ಇದು ಏಕಪ್ರಕಾರವಾಗಿ ಬಳಕೆಯಲ್ಲಿದ್ದಿತು. ಆದರೆ ಹೆಚ್ಚು ಹೆಚ್ಚು ಜನರು, ವಿಶೇಷತಃ ದೇಶಿಯ ಮಿಶನರಿಗಳು ಇದನ್ನು ಬಳಸುತ್ತಿದ್ದಂತೆ ಅದರಲ್ಲಿ ನ್ಯೂನತೆಯನ್ನು ಕಂಡರು. ಇಷ್ಟರಲ್ಲಿ ಕನ್ನಡ ಅಭ್ಯಾಸವು ವ್ಯಾಪಕವಾಗುತ್ತ ನಡೆದಿದ್ದಿತು. ಹೊಸಗನ್ನಡ ನುಡಿಗಟ್ಟು ನೆಲೆಗೊಂಡಿದ್ದಿತು. ಅತ್ತ ಇಂಗ್ಲೆಂಡಿನಲ್ಲಿ ಬೈಬಲ್ ವ್ಯಾಖ್ಯಾನದ ಕುರಿತು ಹೊಸಗಾಳೀ ಬೀಸಿದುದು ಇದೇ ಕಾಲದಲ್ಲಿ, ಆ ಕಾರಣ ಕೆಲವು ಮಿಶನರಿ ಜನರು ವಿಶೇಷತಃ ವೆಸ್ಲಿಯನ್ನರು ಅಪೋಸ್ತಲ ಕೃತ್ಯ ಮೊದಲಾದ ಭಾಗಗಳನ್ನು ಪ್ರತ್ಯೇಕವಾಗಿ ಅನುವಾದಿಸಿ, ಟೀಕೆ ಟಿಪ್ಪಣಿಗಳೊಡನೆ ಪ್ರಕಟಿಸುವುದಕ್ಕೆ ಮುಂದಾದರು."[೧]

ಸುಮಾರು ೧೮೯೦ರಲ್ಲಿ ಸತ್ಯವೇದವನ್ನು ಪುನರ್ ಪರಿಷ್ಕರಿಸುವುದು ಉತ್ತಮವೆಂಬ ಆಲೋಚನೆ ಉಂಟಾಯಿತು. ಇದೇನೂ ಆಶ್ಚರ್ಯವಲ್ಲ. ಒಂದೇ ಪುಸ್ತಕದ ಬೇರೆ ಬೇರೆ ಮುದ್ರಣಗಳನ್ನು ಹೋಲಿಸಿ ಓದುವಾಗ, ಭಾಷಾಂತರ ಮಾಡಿದವನು ಅಚ್ಚ ಕನ್ನಡಿಗನಾದರೂ ಕಾಲಾನಂತರದಲ್ಲಿ ಬಳಸಲ್ಪಟ್ಟಿರುವ ಶಬ್ದಗಳ ಪ್ರಯೋಗವೂ ಅರ್ಥವೂ ಬದಲಾವಣೆ ಹೊಂದುವುದು ರೂಢಿಯಾಗಿದೆ. ಒಂದು ಕಾಲದಲ್ಲಿ ಪ್ರಿಯವಾಗಿದ್ದ ಕೃತಿಯ ಶೈಲಿಯು ಕೆಲವು ಕಾಲದ ನಂತರ ಹೊಸ ರೀತಿಯಲ್ಲಿ ಮಾರ್ಪಾಟಾಗುವುದು ಸ್ವಾಭಾವಿಕ. ಇದು ಮಾತ್ರವಲ್ಲದೆ "೧೯ನೇ ಶತಮಾನದ ಉತ್ತರಾರ್ಧದಲ್ಲಿ ಯೂರೋಪ್ ಖಂಡದಲ್ಲಿ ಪರಿಶುದ್ಧ ಗ್ರಂಥಗಳ-ಪರಿಶ್ರಮವು ಹಿಂದೆ ಇಲ್ಲದ ರೀತಿಯಲ್ಲಿ ಮುಂದುವರೆದಿತ್ತು. ಇದು ನಮ್ಮ ದೇಶದವರಿಗೆ ಉತ್ತೇಜನ ಕೊಟ್ಟಿತು".[೨]

---

೧. ಹೊ.ಅ.ಶ್ರೀ.ಹಾ.ಪು.೪೨೧

೨. Sourvenir, 1966, Pp.55 & 56

* ಡಾ.ಅನಂದಕುಮಾರ್‌ರವರು ಈ ಕುರಿತು ಸ್ಪಷ್ಟತೆಯನ್ನು ಬೈಬಲ್ ಪ್ರತಿಯೊಂದಿಗೆ ಒಂದು ಕಾಗದದ ರೂಪದಲ್ಲಿ ನೀಡಿದ್ದರು.

೧೮೬೩ರಲ್ಲಿ ನೂತನ ಸಮಿತಿ ರಚನೆಯ ಅವಶ್ಯಕತೆ ಕಂಡುಬಂತು. ಕರ್ನಾಟಕ ಕನ್ನಡ ವೈವಿಧ್ಯಮಯವಾಗಿರುವುದರಿಂದ ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ಎಂಬ ಪ್ರಮುಖ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಬೈಬಲ್ ಪರಿಷ್ಕರಿಸಲು ಸಮಿತಿ ನಿರ್ಧರಿಸಿದ್ದರಿಂದ ವೆಸ್ಲಿಯನ್, ಲಂಡನ್ ಮಿಶನ್ ಹಾಗೂ ಬಾಶೆಲ್ ಮಿಶನ್‌ಗಳಿಂದ ಸದಸ್ಯರನ್ನು ನೇಮಿಸಿತು. "ಈ ಸಮಿತಿಯು ಹೊಸ ಭಾಷಾಂತರಕ್ಕೆ ಸಂಬಂಧಿಸಿದಂತೆ ಮತ್ತು ಭಾಷಾಂತರಕಾರನ ಸಮಸ್ಯೆಗಳಿಗೆ ಬೆಳಕು ಚೆಲ್ಲುವಂತೆ, ಮೂರು ತತ್ವಗಳನ್ನು ಒಪ್ಪಿಕೊಂಡು ಸಂಪೂರ್ಣ ಹೊಸ ಭಾಷಾಂತರವನ್ನು ತರಲು ನಿಶ್ಚಯಿಸಿತು.

೧. ಶಬ್ದ ಸಂಪತ್ತಿ ಮತ್ತು ಭಾಷಾರೀತಿ (Vocabulary and Idiom)ಗಳು ನಾಡಿನ ಉತ್ತರ ಹಾಗೂ ದಕ್ಷಿಣ ವಾಸಿಗಳಿಗೆ ಅರ್ಥವಾಗುವಂತಿರಬೇಕು.

೨. ಬಳಸುವ ಭಾಷೆ ಸಾಮಾನ್ಯ ವ್ಯಕ್ತಿಯಿಂದ ವಿದ್ವಾಂಸನಿಗೂ ತಿಳಿಯುವಂತಿರಬೇಕು.

೩. ಉನ್ನತ ಭಾಷಾ ಮಟ್ಟವನ್ನು ಕಾಯ್ದುಕೊಂಡು ಗುಲಾಮಿ(Slavish)ಮಟ್ಟದ ಶಬ್ದಗಳನ್ನು ಕೈಬಿಡಬೇಕು."[೧]

ಮುಂದೆ ವೆಸ್ಲಿಯನ್ ಮಿಶನ್ನಿನ ಪ್ರಧಾನ ಪರಿಷ್ಕಾರಕನಾದ ಹೆನ್ರಿ ಹೆಗ್ (Henry Haigh)ನ ಅಧ್ಯಕ್ಷತೆಯಲ್ಲಿ ೧೯೦೧ರಲ್ಲಿ ಹೊಸ ಒಡಂಬಡಿಕೆಯ ತಾತ್ಪೂರ್ತಿಕ (Tentative) ಆವೃತ್ತಿ ಹೊರ ಬಂದಿತು. "೧೯೦೩ರಲ್ಲಿ ಹೆನ್ರಿಹೆಗ್ ನಿವೃತ್ತಿ ಹೊಂದಿ ನಂತರ ಆತನ ಸ್ಥಾನವನ್ನು ಲಂಡನ್ ಮಿಶನ್ ಸೊಸೈಟಿಯ ಇ.ಪಿ.ರೈಸ್ ರವರು ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡರು. ಈತನು ಇಪಿಗ್ರಾಫಿಯಾ ಕರ್ನಾಟಕದ ಕರ್ತೃ ಬಿ.ರೈಸ್‌ರವರ ಪುತ್ರ"[೨] ವೀಗಲ್ ಜೊತೆ ಸೇವಕರಾಗಿ ಇ.ಪಿ.ರೈಸ ಕೆಲಸ ನಿರ್ವಹಿಸಿದ್ದರಿಂದ ಮುಂದಿನ ಕಾರ್ಯ ಅವರಿಗೆ ಸುಲಭದಾಯಕವಾಯಿತು.

ಇ.ಪಿ.ರೈಸ ಕಾರ್ಯಪ್ರವೃತ್ತಿರಾಗಿ ೧೯೦೭ರಲ್ಲಿ ನಿರ್ಣೀತ (Definative) ಆವೃತ್ತಿ ಹೊರ ತಂದರು ೧೯೩೪ರಲ್ಲಿ ಕಮೀಟಿ ಸದಸ್ಯರ ಸತತ ಕಾರ್ಯದ ಫಲವಾಗಿ ಬೈಬಲ್ ಸಂಪೂರ್ಣ ಆವೃತ್ತಿಯು ಪ್ರಕಟವಾಯಿತು. ಈ ಆವೃತ್ತಿಯು ಇಂದಿನವರೆಗೂ ಪ್ರಚಾರದಲ್ಲಿದೆ.

"೧೯೮೪ರ ಹೊಸ ಒಡಂಬಡಿಕೆ ಕನ್ನಡ ಬೈಬಲ್ ಅನುವಾದಗಳಲ್ಲಿ ವಿಶಿಷ್ಟವಾಗಿದೆ. ಏಕೆಂದರೆ ಇದನ್ನು ಪ್ರಾಟೆಸ್ಟಂಟರೂ, ಕೆಥೋಲಿಕರು ಜೊತೆಯಾಗಿ ತಯಾರಿಸಿದರು."[೩]

---

೧. T.B.T.I.I.P & Ceylon, J.S.M.Hooper, Pp.99

೨. ಅದೇ, ಪು.೯೯

೩. ಕ.ಬೈ.ಅನುವಾದ. ಎಡ್ವರ್ಡ್ ನೋರೋನ, ಪು.೩೧

"ಪ್ರಥಮ ಬಾರಿಗೆ ಕರ್ನಾಟಕದಲ್ಲಿ ರೋಮನ್ ಕೆಥೋಲಿಕರು ಪ್ರೊಟೆಸ್ಟಂಟರೂ ಒಟ್ಟಿಗೆ ಸೇರಿ ಸಿದ್ಧಗೊಳಿಸಿದರೂ ಕನ್ನಡ ಭಾಷಾಂತರ ಒಂದು ಐತಿಹಾಸಿಕ ಘಟನೆ ಹಾಗೂ ಸಾಧನೆ ಎನ್ನಬಹುದು. ರೋಮನ್ ಕೆಥೋಲಿಕ ಕ್ರೈಸ್ತರಿಗೆ ಇದೇ ಮೊಟ್ಟ ಮೊದಲನೆಯ ಅಧಿಕೃತವಾದ ಪೂರ್ಣಹೊಸ ಒಡಂಬಡಿಕೆಯ ಭಾಷಾಂತರವಾಗಿದೆ. ಪ್ರೊಟ್‌ಸ್ಟಂಟ್ ಕ್ರೈಸ್ತರಿಗೆ ನೂರೈವತ್ತು ವರ್ಷಗಳಿಂದಲೂ ಅಧಿಕೃತ ಭಾಷಾಂತರ ಇದೆ."[೧] ಕೆಥೋಲಿಕರು ಬೈಬಲ್ ಭಾಷಾಂತರ ಬಗ್ಗೆ ಆಸ್ಥೆವಹಿಸಲಿಲ್ಲವೆಂದು ಜಿ.ಎಸ್.ಎಂ.ಹೂಪರ್ ಹೀಗೆ ಬರೆಯುತ್ತಾರೆ "Amng early Roman catholic missionaries there were a number of man of notable scholorship and linguistic gifts, but the attitude of the Bible did not encourage any advance into the field."[೨]

ಕೆಥೋಲಿಕರು ಯಾವ ಪ್ರದೇಶದಲ್ಲಿದ್ದರೂ ಆ ಸ್ಥಳೀಯ ಭಾಷೆಯಲ್ಲಿ ಬೈಬಲ್ ಬಳಸದೆ, ಲ್ಯಾಟಿನ್ ಭಾಷೆಯನ್ನು ಬಳಸಿ ನಂತರ ಸ್ಥಳೀಯ ಭಾಷೆಯಲ್ಲಿ ವಿವರಿಸುತ್ತಿದ್ದರು. ಹೀಗಾಗಿ ಅವರಿಗೆ ಕನ್ನಡ ಭಾಷೆಯ ಬೈಬಲ್ ಅವಶ್ಯತೆ ಕಂಡುಬರಲಿಲ್ಲ.*

೧೯೮೨ರ ಕೆಥೋಲಿಕ ಆವೃತ್ತಿಯ ಮೈಸೂರಿನ ಧರ್ಮಾಧ್ಯಕ್ಷ ಹಾಗೂ ಕರ್ನಾಟಕ ಬೈಬಲ್ ಭಾಷಾಂತರ ಸಮಿತಿ (ಕೆಥೋಲಿಕರಿಗೆ ಸಂಬಂಧಿಸಿ)ಯ ಅಧ್ಯಕ್ಷರಾದ ಎಂ.ಫರ್ನಾಂಡಿಸರವರ ನೇತೃತ್ವದಲ್ಲಿ ಬೆಂಗಳೂರ ಆಕ್ಸಜರಿ.(Bible Society of India Bangalore) ಯವರಿಂದ ಮುದ್ರಣಗೊಂಡಿದೆ. ಮೊದಲಿದ್ದ ಪ್ರೊಟೆಟ್ಟಂಟರ ಹೊಸ ಒಡಂಬಡಿಕೆಗಿಂತ ಈ ಆವೃತ್ತಿಯ ವಿಭಿನ್ನತೆಗಳನ್ನು ಈ ಅಂಶಗಳಿಂದ ಗುರುತಿಸಬಹುದು.

೧. ಸರಳ ಭಾಷಾಂತರ ಎಂದು ಹೆಸರು ಸೂಚಿಸಿದಂತೆ ಸರಳವಾಗಿ ಅರ್ಥೈಸಲು ಅನುಕೂಲವಾಗುವ ಶೈಲಿಯನ್ನು ಅಳವಡಿಸಿಕೊಂಡಿದೆ.

೨. ಇದರಲ್ಲಿ ಬರುವ ಪದ್ಯಭಾಗಗಳನ್ನು ಪದ್ಯರೂಪದಲ್ಲಿಯೇ ಅನುವಾದಿಸಲಾಗಿದೆ. ಇವನ್ನು ಶಾಸ್ತ್ರೀಯವಾದ ಅಥವಾ ಛಂದೋಬದ್ಧವಾದ ಕಾವ್ಯವೆಂದು ಕರೆಯಲಾಗದು.

೩. ಓದುಗರು ಬೈಬಲ್ಲಿನ ಚಾರಿತ್ರಿಕ, ಭೌಗೋಳಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಯನ್ನು ಸುಲಭವಾಗಿ ಅರ್ಥಮಾಡಿ ಕೊಳ್ಳುವಂತೆ ಕೆಲವು ನಕ್ಷೆಗಳನ್ನೂ, ರೇಖಾಚಿತ್ರಗಳನ್ನು ಕೊಡಲಾಗಿದೆ.

೪. ಕೊನೆಯಲ್ಲಿ ಕ್ಲಿಷ್ಟ ಪದಗಳ ಅರ್ಥವಿವರಣೆ ಕಾಣಬಹುದು.

---

೧. ಕ.ಬೈ.ಅನುವಾದ. ಎಡ್ವರ್ಡ್ ನೋರೋನ, ಪು.೩೧

೨..B.T.I.I.P & Ceylon, J.S.M.Hooper, Pp.12

*ಈಗಲೂ ಕೆಥೊಲಿಕ ಚರ್ಚ್‌ನಲ್ಲಿ ಕನ್ನಡ ಬಳಸಲಾರದ ಬಗ್ಗೆ ಕೂಗು ಕೇಳಿಬರುತ್ತದೆ.

ಹೊಸ ಒಡಂಬಡಿಕೆಯ ಆವೃತ್ತಿಯನ್ನು ಪಡೆದ ಕೆಥೋಲಿಕ ಜನಾಂಗಕ್ಕೆ ಹಳೆ ಒಡಂಬಡಿಕೆಯ ಕನ್ನಡ ಆವೃತ್ತಿಯ ಅವಶ್ಯಕತೆ ಕಂಡುಬಂತು. ಕರ್ನಾಟಕ ರೀಜನಲ್ ಕೆಥೋಲಿಕ ಬಿಶಪ್ಪ ಕಾನ್ ಫ್ರಾನ್ಸ, ಯುನಾಯಿಟೆಡ್ ಬೈಬಲ್ ಸೊಸೈಟಿಗೆ ಮನವಿ ಸಲ್ಲಿಸಿ, ಪ್ರೊಟೆಸ್ಟಂಟ್ ಹಾಗೂ ಕೆಥೊಲಿಕ್ ಈ ಎರಡು ಸಂಪ್ರದಾಯ ಸೇರಿ ಹಳೆ ಒಡಂಬಡಿಕೆ ಸಿದ್ಧಪಡಿಸಲು ಕೇಳಿಕೊಂಡಿತು.

ಅಂದಿನ ಕೆಥೋಲಿಕ ಧರ್ಮಾಧ್ಯಕ್ಷರಾದ ರೆ.ಡಾ.ಫ್ರಾನ್ಸಸ್ ಮೈಕಲಪ್ಪನವರ ಅಧ್ಯಕ್ಷತೆಯಲ್ಲಿ ೭ ಜನ ಸದಸ್ಯರ ಕಮೀಟಿ ರಚನೆಯಾಯಿತು. ಇದನ್ನು Kannada Inter confessional Bible Translation committee ಎಂದು ಹೆಸರಿಸಿದರು.

ಪ್ರೊಟೆಸ್ಟಂಟ್ ವತಿಯಿಂದ ರೆ.ಜೆ.ಎಂ.ಜೋಗುಳ, ರೆ.ಆನಂದಮೂರ್ತಿ, ಶ್ರೀ.ಡಿ.ಟಿ.ಪುನೀತ ಹಾಗೂ ಡಾ. ಆನಂದಕುಮಾರ, ಡಾ. ಲೀಲಾವತಿದಾಸರವರು, ಸೇವೆಸಲ್ಲಿಸಿರುವರು. ಕೆಥೋಲಿಕ ವತಿಯಿಂದ ಫಾದರ ಅಂತಪ್ಪ, ಫಾ. ಮರಿಯಾ ಜೊಶಫ್ ಫಾದರ.ಸ್ಟ್ಯಾನ್ಲಿ ಬ್ಯಾಪ್ಟಸ್ಟ್ ಹಾಗೂ ಫಾದರ ಜಾರ್ಜಡಿಸೋಜ

ಮೊದಲ ೧೯೮೨ರ ಹೊಸ ಒಡಂಬಡಿಕೆಯನ್ನು ಪರಿಶೀಲಿಸಿ ನಂತರ ಹಳೆ ಒಡಂಬಡಿಕೆಯ ಪುಸ್ತಕಗಳನ್ನು ಭಾಷಾಂತರಿಸಲಾಯಿತು. ೧೯೯೨-೯೩ರಲ್ಲಿ ಪ್ರಥಮ ಮುದ್ರಣವಾಗಿ, ಕೆಥೋಲಿಕರ ಸಮಗ್ರ ಬೈಬಲ್ ಹೊರ ಬಂದಿತು. ಮೊಟ್ಟಮೊದಲು ಹೊರ ಬಂದ ಸಮಗ್ರ ಬೈಬಲ್ ಪ್ರೊಟ್‌ಸ್ಟಂಟರತೆ ೬೬ ಪುಸ್ತಕಗಳನ್ನು ಹೊಂದಿದೆ. ಕನ್ನಡ ಬೈಬಲ್ ಇತಿಹಾಸದಲ್ಲಿಯೇ ಇನ್ನೊಂದು ದಾಖಲೆ ಎನ್ನಬಹುದು.

ನಂತರ ಅಧ್ಯಕ್ಷರ ಬೇಡಿಕೆಯಂತೆ ಕೆಥೋಲಿಕ ಜನಾಂಗಕ್ಕೆನೇ ಬೇರೆ ಆವೃತ್ತಿಬೇಕೆಂದು. ಬೈಬಲ್ ಸೊಸೈಟಿಯವರಿಗೆ ಬೈಬಲ್ ಆರ್ಡರ್ ಕೊಡಲಾಯಿತು. ಆ ಆವೃತ್ತಿ ಉತ್ತಮ ರೀತಿಯಲ್ಲಿ ಸುಂದರ ಬಾಯಿಡಿಂಗ್ ನೊಂದಿಗೆ ೪೮೯ ಪುಟಗಳನ್ನು ಹೊಂದಿದೆ. ಆದರೆ ಅನುಗ್ರಂಥ (Apocryphe)ಗಳೆಂದು ಒಟ್ಟು ೧೨ ಇತರೆ ಪುಸ್ತಕಗಳನ್ನು ಸೇರಿಸಲಾಯಿತು. ಹೀಗಾಗಿ ಒಟ್ಟು ೭೮ ಪುಸ್ತಕಗಳ ಬೈಬಲ್ ಕೆಥೋಲಿಕರದಾಗಿತು.

ಇತ್ತೀಚಿನ ದಿನಗಳಲ್ಲಿ ಕನ್ನಡ ಬೈಬಲ್ ವಿವಿಧ ಬಗೆಯ ಸಾಹಿತ್ಯರೂಪ ಹೊಂದಿದ ಆವೃತ್ತಿಗಳಿಂದ ಕಂಡುಬರುವುದು. ಪಾಶ್ಚಾತ್ಯರ ಧನಸಹಾಯದ ಸೌಕರ್ಯ ಒಂದೆಡೆಗಾದರೆ, ಇಂಗ್ಲೀಷ್ ಸಾಹಿತ್ಯದಲ್ಲಿ ಸರಳೀಕರಣದೊಂದಿಗೆ ಹೊರ ಬರುತ್ತಿದ್ದ ಆವೃತ್ತಿಗಳ ನಕಲು ಇನ್ನೊಂದೆಡೆ. ಹೀಗಾಗಿ ಇಂದು ಅನೇಕ ಆವೃತ್ತಿಗಳು ಕಾಣಸಿಗುತ್ತವೆ.

---

೧. ಹೊಸ ಒಡಂಬಡಿಕೆ(WBTC India) ಮುದ್ರಣ ಮುನ್ನುಡಿಯಿಂದ

ಇಂಗ್ಲೀಷ್ ಕಿಂಗ್ ಜೇಮ್ಸ್ ಆವೃತ್ತಿಯನ್ನು ಅನುಸರಿಸಿ ರೆ. ಅನಂತ ಭಸ್ಮೆನೇತೃತ್ವದಲ್ಲಿ ಹೊರಬಂದ ಸಮಗ್ರ 'ಬೈಬಲ್'

ವರ್ಡ್ ಬೈಬಲ್ ಟ್ರಾನ್ಸ್ ಲೇಶನ್ ಸೆಂಟರ್ (WBTC India)ರವರಿಂದ ಹೊಸ ಒಡಂಬಡಿಕೆಯ ಆವೃತ್ತಿಯು. ೧೯೯೨ರಲ್ಲಿ ಹೊರ ಬಂದಿದೆ. "ಸಮರ್ಪಕವಾಗಿ ಮೂಲ ವಿಷಯವನ್ನು ತಿಳಿಸುವಂಥದ್ದೇ ಸಮರ್ಪಕ ಅನುವಾದ ಎಂಬ ಮೂಲಭೂತ ತತ್ವವೇ ಈ ಅನುವಾದಕ್ಕೆ ಮಾರ್ಗದರ್ಶನ ನೀಡಿದೆ."[೧] ಪೀಠಿಕೆ ಭಾಗದಲ್ಲಿ ಬೈಬಲ್ ಇತಿಹಾಸ, ಇಸ್ರೇಲ ಜನಾಂಗ ಸಂಸ್ಕೃತಿ, ಧರ್ಮಶಾಸ್ತ್ರ, ಯಹೂದಿ ಮತ್ತು ಇಸ್ರೇಲ್ ವಿಭಜನೆ, ಧಾರ್ಮಿಕ ಪಂಗಡಗಳ ಕುರಿತು ವಿವರಣೆ ನೀಡಿ ಹೊಸ ಒಡಂಬಡಿಕೆಯ ಪುಸ್ತಕಗಳ ಕುರಿತು ಸಂಕ್ಷಿಪ್ತ ವರದಿ ನೀಡಲಾಗಿದೆ.

ಇಂಗ್ಲೀಷಿನ ಪ್ರಮುಖವಾದ ಆವೃತ್ತಿ NIV (New Internalional Version)ಯನ್ನು ಮೂಲವಾಗಿಟ್ಟುಕೊಂಡು ಸಹೋದರ ಚೆಲ್ಲಾದೊರೆಯವರ ನೇತೃತ್ವದಲ್ಲಿ ಮತ್ತೊಂದು ನೂತನ ಆವೃತ್ತಿ ಹೊರಬಂದಿದೆ.

ಭಾರತೀಯ ಭಾಷೆಯಲ್ಲಿ ಬೈಬಲ್ ಆವೃತ್ತಿ ಮುದ್ರಣ ವರ್ಷ

೧೮೦೧ ಬೆಂಗಾಲಿ (Bengali) New Testmeut ೧೮೦೨-O.T

೧೮೧೧ ಒರಿಯಾ (Ooriya) ,, ,, ೧೮೧೯ O.T

೧೮೧೧ ಮರಾಠಿ (Marathi) ,, ೧೮೨೦. O.T

೧೮೦೯-೧೧ ಹಿಂದಿ (Hindi) ,, ೧೮೧೩-೧೮ O.T

೧೮೧೫-೧೯ ಆಸಾಮಿ (Assamese) ,,

೧೮೧೫-೨೨ ಕನೋಜಿ (Kanouji)

೧೮೨೦ ಕೊಸಲಿ (Khosali)

೧೮೦೮ ಸಂಸ್ಕೃತ (sanskrit) ,, ೧೮೧೧-೧೮ O.T

೧೮೧೯ ಕೊಂಕಣ (Konkan) ೧೮೨೧ O.T

೧೮೧೫ ಪಂಜಾಬಿ (Panjabi) ೧೮೨೨. O.T

೧೮೧೫ ಜಯಪುರಿ (Jeypoori)

೧೮೧೯ ಮುಲ್ತಾನಿ (Mooltani)

೧೮೨೦ ಕಾಶ್ಮೀರಿ (Kashmeeri) O.T

೧೮೨೦ ಗುಜರಾತಿ (Goojarati)

೧೮೨೦ ಡೋಗ್ರಿ (Dogri) N.T

೧೮೧೯ ಪುಶ್ತು (Pushtoo) N.T & O.T

೧೮೧೫ ಬಲೂದಳಿ (Baloochi) N.T Gospels

೧೮೧೮ ತೆಲಗು (Telugoo) N.T. Pent.೧೮೨೦

೧೮೨೨ ಕೆನರಿಚ್ (Kanarese) N.T

೧೮೨೨ ಮಾಲ್ಡಿವಿಯನ್ (Maldivian) ೪ Gospels

೧೮೨೨ ಓಡಿಪುರಿ (Oodeypoori) N.T

೧೮೨೧ ಬುಗಿಲ (Bhugeli)

೧೮೨೧ ಮಾರ್ ವಾರಿ (Marwari) N.T

೧೮೨೨ ಹರೋತಿ (Haraoti) N.T

೧೮೨೩ ಬಿಕನೇರಿ (Bikanari) N.T

೧೮೨೩ ಓಜಿನಿ (Oojeni) N.T

೧೮೨೪ ಭಿತ್ತಿ (Bhatti)

೧೮೩೨ ಘುರವಾಲಿ (Gurhwali)

೧೮೨೫ ಸಿಂಧಿ (Sindhi)

ಸೆರಾಂಪುರ ಪ್ರೆಸ್ ಮುದ್ರಣ

೧೮೦೫ Chinese

೧೮೧೧ Malayalam

೧೮೧೩ Tamil

೧೮೧೪-೨೩ Malay

೧೮೧೫ Burmese

೧೮೧೫-೨೦ Batta

೧೮೨೩ siuhalese

೧೮೨೯ Lavanese

೧೮೩೯ Urdu

೧೮೪೧ persian

೫.೨. ಭಾಷೆ ಸ್ವರೂಪ ಮತ್ತು ಪ್ರಸರಣ

ಯಾವುದೇ ಧರ್ಮಗ್ರಂಥವನ್ನು ಕೈಗೆತ್ತಿಕೊಂಡಾಗ ಒಂದೇ ಭಾಷೆಯಲ್ಲಿ ಅದನ್ನು ಬರೆದಿರುವುದು ಕಂಡುಬರುತ್ತದೆ. ಆದರೆ ಈ ಮಾತು ಬೈಬಲ್ಲಿಗೆ ಅನ್ವಯಿಸುವುದಿಲ್ಲ ಕಾರಣ ಈ ಸಮಗ್ರ ಬೈಬಲ್ ರೂಪಪಡೆಯುವಲ್ಲಿ ೧,೬೦೦ ವರ್ಷಗಳ ಅಂತರದ ಅವಧಿ ಕ್ರಮಿಸಿದ್ದರಿಂದ ಪ್ರಾರಂಭದ ಪುಸ್ತಕಗಳು ರೂಪ ಪಡೆದಾಗ ಇದ್ದ ಭಾಷೆ, ಆ ಸ್ವರೂಪ ಕಾಲಾಂತರದಲ್ಲಿ ಬದಲಾವಣೆ ಹೊಂದುತ್ತಾ ನಂತರ ಸ್ಥಿರತೆಯನ್ನು ಪಡೆದಂತಿದೆ. ಹಳೆ ಒಡಂಬಡಿಕೆಯ ಹೆಚ್ಚಾದ ಭಾಗ ಹಿಬ್ರೂ ಭಾಷೆಯಲ್ಲಿ ಬರೆದುದಾಗಿದೆ. ಕೆಲವೊಂದು ಭಾಗಗಳು ಮಾತ್ರ ಅರೆಮೀಯ ಭಾಷೆಯಲ್ಲಿ ಬರೆದುದಾಗಿದೆ. ಹೊಸ ಒಡಂಬಡಿಕೆ ಎಂಬ ದ್ವಿತೀಯ ಭಾಗವು ಗ್ರೀಕ ಭಾಷೆಯಲ್ಲಿ ಸಂಪೂರ್ಣ ಬರೆಯಲಾಗಿದೆ.

ಹಳೆ ಒಡಂಬಡಿಕೆ ಮೂಲ ಭಾಷೆ ಹಿಬ್ರೂವಾದರೆ ಹೊಸ ಒಡಂಬಡಿಕೆಯ ಮೂಲ ಭಾಷೆ ಗ್ರೀಕ್ ಆಗಿದೆ. ಹೀಗೆ ಎರಡು ಭಾಗಗಳು ಜಗತ್ತಿನ ಪುರಾತನ ಭಾಷೆಯನ್ನು ಬರೆದವುಗಳಾಗಿವೆ. ಬೈಬಲ್ ಭಾಷೆ ಕುರಿತು ಅಭ್ಯಸಿಸುವುದಾದರೆ ಹಿಬ್ರೂ, ಗ್ರೀಕ್ ಕುರಿತು ತಿಳಿದುಕೊಳ್ಳಬೇಕಾಗುವುದು.

ಹಿಬ್ರೂ ಮತ್ತು ಅರೆಮೀಯ ಭಾಷೆಗಳು ಸೆಮೆಟಿಕ್ ಭಾಷೆಗಳ ಗುಂಪಿಗೆ ಸೇರಿದವುಗಳು. ಈ ಎರಡೂ ಭಾಷೆಗೆ ನಿಕಟ ಸಂಬಂಧ ಇರುವುದರಿಂದ ಹಳೆ ಒಡಂಬಡಿಕೆಯಲ್ಲಿ ವ್ಯತ್ಯಾಸ ಬರಲಾರದೆಂಬ ಉದ್ದೇಶದಿಂದ, ಈ ಎರಡೂ ಭಾಷೆಯನ್ನು ಬಳಸಿರಲಿಕ್ಕೆ ಸಾಕು! ಸಿಮೆಟಿಕ್ ಭಾಷೆ ಶೈಲಿ ಆಯಾ ಪದಗಳ ಮೂಲ ವ್ಯಂಜನಾಕ್ಷರಗಳುಳ್ಳ ಧಾತುಗಳ ಮೇಲೆ ಕಟ್ಟಿದವುಗಳಾಗಿವೆ. ಈ ಭಾಷೆಯ ಮೂಲಾಕ್ಷರಗಳೆಲ್ಲವೂ ವ್ಯಂಜನಾಕ್ಷರಗಳೇ ಇದರಲ್ಲಿ ಸ್ವರಾಕ್ಷರಗಳು ಇರುವುದಿಲ್ಲ ಹೀಗಾಗಿ ಬರಹವೆಲ್ಲಾ ಮೂಲಾಕ್ಷರದಿಂದ ಕೂಡಿರುತ್ತದೆ. ಕೆಲವು ಸಂದರ್ಭದಲ್ಲಿ ಸ್ವರ, ಸ್ವರ ಸೂಚನೆಗಾಗಿ ನಂತರದ ದಿನಗಳಲ್ಲಿ ಸಂಕೇತಗಳನ್ನು ಬಳಸುವ ಪರಿಪಾಠ ಪ್ರಾರಂಭವಾಯಿತು. ಬ್ರಿಟೀಷರು ಭಾರತಕ್ಕೆ ಬಂದು ಇಲ್ಲಿನ ಭಾಷೆಗಳನ್ನು ಅರ್ಥೈಸಲು ಕೆಲವು ಸ್ವರ ಚಿಹ್ನೆಗಳನ್ನು ಬಳಸುತ್ತಿದ್ದರು. ಹಿಬ್ರೂ ಭಾಷೆ ತನ್ನ ಪ್ರಭುತ್ವದಲ್ಲಿರುವವರೆಗೆ ಸ್ವರ ಚಿಹ್ನೆಯ ಅವಶ್ಯಕತೆ ಕಂಡುಬರದೆ ಹೋಯಿತು.

ಕಾಲಾನಂತರದಲ್ಲಿ ಈ ಭಾಷೆಯ ಬಳಕೆ ನಿಂತು ಹೋದ ಮೇಲೆ ಕ್ರಿ.ಪೂ. ೬ನೇ ಶತಮಾನದಲ್ಲಿ ಹಿಬ್ರೂಗಳು ಬೆಬಿಲೋನಿಗೆ ಸೆರೆಹೋದ ನಂತರ, ಅಂದರೆ ದೇಶ ಭ್ರಷ್ಟರಾದ ಮೇಲೆ ತಮ್ಮ ಭಾಷೆಯನ್ನು ಪವಿತ್ರ ಭಾಷೆಯಾಗಿ ಉಳಿಸಿಕೊಳ್ಳುವ ಉದ್ದೇಶದಿಂದ, ಪಶ್ಚಿಮ ದೇಶಗಳ ಆಗಿನ ಆಡು ಭಾಷೆಯಿಂದ ಅರೆಮೀಯ ಭಾಷೆಯನ್ನು ಬಳಸಲು ಆರಂಭಿಸಿದಂತೆ ಕಂಡುಬರುತ್ತದೆ. ಇವು ಸೆಮೆಟಿಕ ಭಾಷಾ ವರ್ಗಕ್ಕೆ ಸೇರಿದುದರಿಂದ ಇವುಗಳಿಗೂ ಇಂಡೋ-ಯೂರೋಪಿಯನ್ ಭಾಷಾ ಪಂಗಡಕ್ಕೆ ಸೇರಿದ ಗ್ರೀಕ್ , ಲ್ಯಾಟಿನ್ ಅಥವಾ ಇಂಗ್ಲೀಷ್ ಭಾಷೆಗಳಿಗೂ ಯಾವುದೇ ಸಾಮ್ಯವಿಲ್ಲ. "ಈ ಸೆಮೆಟಿಕ್ ಭಾಷೆಯ ಪ್ರಭೇದಗಳನ್ನು ಈ ಕೆಳಗಿನಂತೆ ಗುರುತಿಸಬಹುದು.

ಅ. ಪೌರಾತ್ಯ ಪಂಗಡ : ಇದರಲ್ಲಿ ಅಸಿರೋ ಬೆಬಲೋನಿಯನ್ ಅಥವಾ ಈಗ ಸಾಮಾನ್ಯವಾಗಿ ಅಕೇಡಿಯನ್ ಎಂದು ಕರೆಯಿಸಿ ಕೊಳ್ಳುವ ಭಾಷೆ.

ಬ. ನೈಋತ್ಯ ಪಂಗಡ : (South west) : ಇದರಲ್ಲಿ ಅರೆಬಿಕ್, ಈಥಿಯೋಪಿಕ್ ಭಾಷೆಗಳು.

ಕ. ವಾಯುವ್ಯ ಪಂಗಡ (North west) : ಇದರಲ್ಲಿ ಉಗಾಂಟಿಕ್, ಕೆನಾನೈಟಿ

ಫೊನಿಸಿಯನ್, ಮೋಬೈಟ್, ಹಿಬ್ರೂ, ಅರೆಮಿಕ್ ಮತ್ತು ಸಿರಿಯಾಕ್ ಭಾಷೆಗಳು ಬರುತ್ತವೆ."[೧]

ಹಳೆ ಒಡಂಬಡಿಕೆಯ ಒಂದು ಸಾವಿರ ವರ್ಷಕ್ಕೂ ಮೇಲ್ಪಟ್ಟು ವಿವಿಧ ಜನಾಂಗೀಯ ಹಿನ್ನೆಲೆ ಉಳ್ಳವರಿಂದ ದಾಖಲಿಸಿ, ಸಂಕಲಿಸಲ್ಪಟ್ಟಿದ್ದರಿಂದ ಹಿಬ್ರೂ ಭಾಷೆಯ ಹುಟ್ಟು ಮತ್ತು ಬೆಳವಣಿಗೆಯಲ್ಲಿ ಏಕರೂಪತೆ ಇರದೇ ಇರುವುದು ಕಂಡುಬರುತ್ತದೆ.

ಬೈಬಲ್‌ನಲ್ಲಿ ಬರುವ ಜಾಕೋಬ(ಯಾಕೋಬ) ಒಬ್ಬ ಅಲೆಮಾರಿ ಅರ್ಮೇನಿಯನ್ (ಧರ್ಮೋ ೨೬:೫) ಆಗಿದ್ದ, ಮತ್ತು ಜರುಸಲೇಮಿನ ವಂಶಸ್ಥರು ವಿದೇಶಿಯರಾಗಿದ್ದರೆಂದು (ಯೆಹೆಜ್ಕೇಲ ೧೬:೩-೪೫) ಸ್ವತಃ ಬೈಬಲ್ ಒಪ್ಪಿಕೊಂಡಿದೆ. ಹಾಗಾಗಿ ಎಷ್ಟೋ ಪ್ರಸಿದ್ಧ ವಂಶಸ್ಥರು, ಹೆಂಡಿರು, ತಾಯಂದಿರು ಪರಕೀಯರಾಗಿದ್ದರೆಂದು ಸಂಪ್ರದಾಯವೇ ತೋರಿಸಿದೆ. (ಆದಿಕಾಂಡ ೨೪:೧೦) ಇದರಿಂದ ಮಾತೃಸಂಬಂಧವಾದ ಪ್ರಭಾವ ಭಾಷಾಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸಿದ್ದರಿಂದ, ಹಿಬ್ರೂ ಭಾಷೆ ಶುದ್ಧತೆಯನ್ನು ಕಾಪಾಡುವಲ್ಲಿ ವಿಫಲವಾಯಿತೆಂದರೆ ತಪ್ಪಾಗಲಿಕ್ಕಿಲ್ಲ.

ಹಳೆ ಒಡಂಬಡಿಕೆಯಲ್ಲಿ ಶೇಖರಿಸಿದ್ದ ದಾಖಲೆಗಳು ಶತಮಾನಗಳೂದ್ದಕ್ಕೂ ಮೊದಲು ಜ್ಯೂಡಿಯನ್ ನಂತರ ಯಹೂದಿ ಸಂಪಾದಕರಿಂದ ಅಂಗೀಕರಿಸಲ್ಪಟ್ಟವು. ಇದರ ಜೊತೆಯಲ್ಲಿ ಹಸ್ತಪ್ರತಿಗಳು ಒಂದು ಚೌಕಟ್ಟಿಗೆ (canonic form) ಒಳಪಟ್ಟು ಪ್ರತಿಮರುಪ್ರತಿ ತೆಗೆದುದರಿಂದ, ನಿಧಾನವಾಗಿ ಅವುಗಳ ಒಂದು ನಿರ್ದಿಷ್ಟ ರೂಪ ತಾಳುತ್ತಾ, ಒಂದು ಏಕರೂಪತೆ ಪಡೆಯುವಲ್ಲಿ ಮೆಸೂರೆಟಕ್* (Masoretic Text) ಪಾಠವಾಗಿ ಪರಿಣಮಿಸಿದೆ. ಈಗಿನ ಏಕರೂಪತೆ, ಈ ಭಾಷೆ ಮೂಲವಾಗಿ ಮಾತನಾಡುವಾಗ ಬರೆಯುವಾಗ ಆ ರೂಪದಲ್ಲಿರಲಿಲ್ಲ.

"ಮೂಲ ಹಳೆ ಒಡಂಬಡಿಕೆಯಲ್ಲಿದ್ದ ಲಿಪಿಯು ಈಗಿನ ಹಿಬ್ರೂ ಬೈಬಲ್‌ನಲ್ಲಿರುವ ಲಿಪಿಗಿಂತ ಭಿನ್ನವಾಗಿತ್ತು. ಹಿಬ್ರೂಗಳು ಸೆರೆವಾಸಕ್ಕೆ ಹೋಗುವ ಮೊದಲು (ಕ್ರಿ.ಪೂ.೫೮೭ಮುಂಚೆ) ಉಪಯೋಗಿಸುತ್ತಿದ್ದ ಲಿಪಿಯು ಫೊಯಿನಿಕ್ಸರ ಲಿಪಿಯಂತಿದ್ದಿತು."[೨] ಹೀಗಾಗಿ ಇಬ್ರೀಯ ಭಾಷೆಗೆ ನೆಲೆ ಇಲ್ಲದಾಯಿತು.

---

೧. Ency. of America, Pp.615

೨. ಹ.ಒ.ಪ್ರವೇಶದಾಯನಿ, ಪು.೨೪

* ಮೆಸೂರ ಅಂದರೆ ಸಂಕೇತ ಹಿಬ್ರೂ ಮೂಲಾಕ್ಷರಗಳಿಗೆ ಸಂಖೇತ ಹಾಗೂ ಸ್ವರಗಳನ್ನು ಬಳಸಿ ಬರೆದುದರಿಂದ ಮೆಸೂರೆಟಿಕ್ ಟೆಕ್ಸ್‌ಟ್ ಎಂದು ಕರೆಯಲಾಯಿತು.

ನಂತರದಲ್ಲಿ ಹಿಂದೆಬಿದ್ದು, ಆರಾಧನಾ ಪುಸ್ತಕದಲ್ಲಿ ಮತ್ತು ಧರ್ಮಗ್ರಂಥಗಳಲ್ಲಿ ಮಾತ್ರ ಉಳಿದುಕೊಂಡಿತು. ಅರೆಮೀಯ ಭಾಷೆ ರೂಢಿಯಲ್ಲಿ ಬಂದಂತೆ ಅದರ ಲಿಪಿಯೂ ರೂಢಿಯಲ್ಲಿ ಬಂದಿತು. ಅರೆಮಿಯಾ(Aromic) ಚೌಕುಲಿಪಿ (Square Script) ಹಿಬ್ರೂ ಲಿಪಿಯಾಗಿ ಪರಿಣಮಿಸಿತು. ಹೀಗೆ ಬಳಕೆಗೆ ಬಂದ ಚೌಕುಲಿಪಿ ತನ್ನ ರೂಪದಲ್ಲಿ ನೂತನತೆಯನ್ನು ಅಳವಡಿಸಿಕೊಂಡಿತು. ಇದು ಸಿರಿಯಕ್ ಲಿಪಿ ಎಂದು ಹೆಸರು ಪಡೆಯಿತು. ಕ್ರಿ.ಶ.೧೪೭೭ರಲ್ಲಿ ಮೊದಲಬಾರಿ ಮುದ್ರಣಗೊಂಡ ಹಳೆ ಒಡಂಬಡಿಕೆಯಲ್ಲಿ ಈ ಚೌಕು ಅಕ್ಷರಗಳೇ ಬಳಕೆಯಾಗಿವೆ.

ಮೊದಲು ಮೂಲ ಮಾತೃಕೆಗಳ ಎರಡು ವಿಧದಲ್ಲಿದ್ದವು. ಸಭಾಮಂದಿರ (charch)ಗಳಲ್ಲಿ ಬಳಸುವುದಕ್ಕಾಗಿ ಬರದ ಸುರಳ(Scrols)ಗಳಲ್ಲಿ ಯಾವ ಚಿಹ್ನೆ ಸಂಖೇತಗಳು ಇರಲಿಲ್ಲ. ಧರ್ಮಗ್ರಂಥಗಳಾಗಿ ನಕಲಿಸಿದ ಬರಹಗಳಲ್ಲಿ ಸ್ವರ ಚಿಹ್ನೆ ಸಂಖೇತಗಳು ಇರುತ್ತಿದ್ದವು.

ಹಿಬ್ರೂ ಭಾಷೆಯ ಅತಿ ಪ್ರಮುಖ ಅಂಶ ಅದರ ಕ್ರಿಯಾಪದ. ಇದರಿಂದಲೇ ವಾಕ್ಯದ ಇತರ ಅಂಗಗಳಾದ ನಾಮಪದ, ಗುಣವಾಚಕ ಮತ್ತು ಕೆಲವು ವಿಭಕ್ತಿ ಪ್ರತ್ಯಯಗಳು ಕೂಡ ರಚಿತವಾಗಿವೆ. ತೀರ ಕ್ವಚಿತ್ತಾಗಿ ನಾಮಪದಗಳಿಂದ ಕ್ರಿಯಾಪದಗಳ ಉತ್ಪತ್ತಿಯಾಗಿದೆ. ಇದು ಬೈಬಲ್ಲಿನ ಲಿಪಿಕಾರರ ಮನೋಭಾವವನೆಗೆ ಹಿಡಿದ ಕನ್ನಡಿಯಾಗಿದೆ. ಅವರಿಗೆ ಸ್ಥಿತಿಗಿಂತ ಕ್ರಿಯೆ ಮುಖ್ಯವಾಗಿತ್ತು. ಹಿಬ್ರೂಗಳ ಸೈದಾಂತಿಕವಾದ ಯೋಚನೆಯಲ್ಲಿ ಕೊರತೆ ಇತ್ತೆಂಬುದು ಸ್ಪಷ್ಟವಾದರೂ, ಧರ್ಮ ಮತ್ತು ಸಿದ್ಧಾಂತಗಳ ಮಧ್ಯ ಸೂಕ್ಷ್ಮವಾದ ಅಲ್ಲಗಳೆಯಲಾಗದ ಸಂಬಂಧವಿದೆ ಎಂಬುದನ್ನು ಸುಸ್ಪಷ್ಟವಾಗಿ ತೋರಿಸಿದಂತಿದೆ. ಅವರು ಕೇವಲ ಅಸ್ತಿತ್ವದಲ್ಲಿರುವ (ಜಡದೇವರು) ದೇವರುಗಳಿಗಿಂತ ಕ್ರಿಯಾ ಶೀಲನಾದ, ಸೃಷ್ಟಿಕರ್ತನಾದ, ನ್ಯಾಯ ನಿರ್ಣಾಯಕನಾದ, ಶಿಕ್ಷಕ-ರಕ್ಷಕನಾದ ದೇವರಲ್ಲಿ ನಂಬಿಕೆ ಇಟ್ಟವರಾಗಿದ್ದರು. ಕೇವಲ ವೇದಾಂತ ಗೋಚರವಾದ ದೇವರ ಉಪಾಸನೆ ಮಾಡದೆ, ಬ್ರಹ್ಮಾಂಡ ಸೃಷ್ಟಿಕರ್ತನೂ, ಮನುಕುಲದ ಇತಿಹಾಸವನ್ನು ರೂಪಿಸುವವನಾದ ಸೃಷ್ಟಿಮೂಲವನ್ನು ಉಪಾಸಿಸುತ್ತಿದ್ದರು. ಈ ಪರಮಾತ್ಮ ಇತಿಹಾಸದ ವಿವಿಧ ವ್ಯಕ್ತಿಗಳ ಮೂಲಕ ಹಾಗೂ ಘಟನೆಗಳ ಮೂಲಕ ತನ್ನ ಇರುವನ್ನು ಪ್ರಕಟಿಸುತ್ತಾನೆ. ಮತ್ತು ಇಂತಹ ವ್ಯಕ್ತಿಗಳಿಗೆ ಘಟನಾವಳಿಗಳಿಗೆ ಸ್ಪಂಧಿಸಿದಾಗ ಮಾತ್ರ, ಮನುಷ್ಯನ ಜೀವನಕ್ಕೆ ಒಂದು ಅರ್ಥವಿದೆ ಎಂದು ಅವರು ನಂಬಿದ್ದರು. ಹೀಗಾಗಿ ಹಿಬ್ರೂ ಭಾಷೆಯಲ್ಲಿ ಕ್ರಿಯಾಪದಗಳೇ ನಾಮಪದಕ್ಕಿಂತ ಪ್ರಮುಖ ಸ್ಥಾನ ಪಡೆಯಿತು.

ಹಿಬ್ರೂ ಕ್ರಿಯಾಪದಕ್ಕೆ ಎರಡು ಮುಖ್ಯ ಕಾಲಗಳಿವೆ. ಪರಿಪೂರ್ಣಕಾಲ ಮತ್ತು ಅಪರಿಪೂರ್ಣಕಾಲ. ಆದರೆ ಇವು ಸಂಪೂರ್ಣವಾಗಿ, ಭೂತ, ವರ್ತಮಾನ, ಭವಿಷ್ಯತ್ ಕಾಲಗಳ ಸಮಾನಾರ್ಥಕಗಳಲ್ಲ. ಸಂಪೂರ್ಣ ಅರ್ಥದಲ್ಲಿ ಪೂರ್ಣಗೊಂಡು, ಕ್ರಿಯೆ ಅಥವಾ ಘಟನೆಗಳಿಗೆ ಅನ್ವಯಿಸಬಹುದು, ಇಲ್ಲವೆ ಪೂರ್ಣಗೊಂಡಿಲ್ಲದ ಘಟನೆ ಕ್ರಿಯೆಗಳಿಗೂ ಅನ್ವಯಿಸಬಹುದು. ಸಕರ್ಮಕ ಕ್ರಿಯಾಪದಗಳು

ಪರಿಪೂರ್ಣಕಾಲದಲ್ಲಿ ವರ್ತಮಾನ ಕಾಲವನ್ನು ಸೂಚಿಸುತ್ತವೆ. ಉದಾ (೧ ಅರಸು ೧೭:೧) "ಯಾರೆದುರು ನಿಂತಿದ್ದೇನೋ ಆ ದೇವರು" ಅಥವಾ "ನಾನು ಭಗವಂತನಿಗೆ ಕಾಯುತ್ತೇನೆ..." "ಮತ್ತು ಅವನ ವಾಣಿಯನ್ನು ನಾನು ನಂಬುತ್ತೇನೆ." (ಕೀರ್ತ ೧೩:೫) ಕ್ರಿಯಾಪದಗಳು (Active verb) ಪರಿಪೂರ್ಣ ಕಾಲದಲ್ಲಿ ಸಾಮಾನ್ಯವಾಗಿ ಭೂತಕಾಲಕ್ಕೆ ಅನ್ವಯಿಸುತ್ತವೆ. ಉದಾ : (ಆದಿಕಾಂಡ ೪:೧೦) "ದೇವರು ಸೃಷ್ಟಿಸಿದ", "ನೀನು ಏನು ಮಾಡಿದ್ದೀಯೋ" ಹೀಗಿದ್ದರೂ ಅವು ವರ್ತಮಾನ ಕಾಲವನ್ನೂ ಸೂಚಿಸಬಹುದು. ಉದಾ : (ಧರ್ಮೋ ೨೬:೩) ಈ ದಿನ ಭಗವಂತನನ್ನು ನಂಬುತ್ತೇನೆ. ಇದು ಅರ್ಥದಲ್ಲಿ ಭವಿಷ್ಯತ್ ಸೂಚಿಯಂತೆ ಕಂಡರೂ ಇದು ಕಾಲಪರಿಮಿತಿಯ ಚೌಕಟ್ಟನ್ನು ಮೀರಿ ಆಗಲೆ ನಡೆದುಹೋದ ಘಟನೆಯೊಂದನ್ನು ಹೇಳುತ್ತದೆಯೇನೋ ಎನ್ನಿಸುತ್ತದೆ. "ನಮಗೆ ಒಂದು ಮಗು ಜನಸಿದೆ" ನಮಗೆ ಒಬ್ಬ ಮಗ ಹುಟ್ಟಿದ್ದಾನೆ.(ಯೋಶಾಯ ೯:೬) ಹಿಬ್ರೂಗಳ ಕಲ್ಪನೆಯಲ್ಲಿ ಇತಿಹಾಸ ಒಂದು ನಾಟಕದಂತೆ. ಇದನ್ನು ಏಕರೂಪವಾಗಿ ಗ್ರಹಿಸಿಕೊಳ್ಳಬೇಕು. ಹೀಗಾಗಿ, ಭವಿಷ್ಯತ್ತನ್ನು ಸೂಚಿಸುವ ಒಂದು ವಚನ, ವಾಕ್ಯವನ್ನು ಪರಿಪೂರ್ಣ ಕಾಲದಲ್ಲಿ ಸೂಚಿಸುತ್ತಾರೆ. "ನಿನ್ನ ಬೀಜಕ್ಕಾಗಿ ಈ ಭೂಮಿಯನ್ನು ನಾನು ಕೊಟ್ಟಿದ್ದೇನೆ. ಪರಿಪೂರ್ಣ ಕ್ರಿಯಾಪದಗಳು ಭವಿಷ್ಯತ್ತನ್ನು ಸೂಚಿಸಲು ಯೋಗ್ಯವಾಗಿವೆ. ಹಾಗಿದ್ದರೂ ಇವನ್ನು ಪುನರುಕ್ತಿ, ಕಾಲಪರಿಮಿತಿ, ಅಥವಾ ಅಭಿವೃದ್ಧಿಯನ್ನು ವರ್ತಮಾನ ಇಲ್ಲವೆ ಭೂತಕಾಲದಲ್ಲಿ ಸೂಚಿಸಲು ಉಪಯೋಗಿಸುತ್ತಾರೆ. ಉದಾ : ಅವನದೇ ಕಾನೂನಿನಲ್ಲಿ ಆತ ಹಗಲು ಮತ್ತು ರಾತ್ರಿಗಳನ್ನು ಯೋಚಿಸುತ್ತಾನೆ." (ಕೀರ್ತ ೧:೨) ತಡೆಯಿಲ್ಲದಂತೆ ಹಾಗೆ ಕೆಲಸ ಮಾಡಿದ (ಯೋಬ ೧:೫)

ಹೀಗೆ ಪರಿಪೂರ್ಣ, ಅಪರಿಪೂರ್ಣ ಕಾಲಗಳೆರಡನ್ನೂ ಭೂತ, ವರ್ತಮಾನ, ಭವಿಷ್ಯತ್ ಕಾಲಗಳೆಲ್ಲವುಗಳಿಲ್ಲಿ, ಆಯಾ ಸಂದರ್ಭಕ್ಕನುಗುಣವಾಗಿ ಅನುವಾದಿಸಬಹುದು.

ಹಿಬ್ರೂ ಭಾಷೆಯ ಕಾವ್ಯಕ್ಲುಪ್ತತೆಯನ್ನು ನೋಡಿದರೆ, ಈ ಭಾಷೆಯಲ್ಲಿ ಎಷ್ಟೋ ಅಂಶಗಳು ಸೇರಿ, ಇದನ್ನೊಂದು ಕ್ಲುಪ್ತ ಭಾಷೆಯನ್ನಾಗಿ ರೂಪಿಸಿವೆ. ವಿಶೇಷವಾಗಿ ಇಂತಹ ಭಾಷೆ ಪುರಾಣಕಾವ್ಯ ಹಾಗೂ ಭಾವಗೀತೆಯ ಶೈಲಿಗೆ ಶ್ಲಾಘನೀಯವಾಗಿ ಹೊಂದುತ್ತದೆ. ಭಾಷಾ ಡಾಂಬೀಕತೆ ಇಲ್ಲದೆಯೇ ಭಾಷಾ ಶಕ್ತಿಯನ್ನು ಸುಲಲಿತತೆಯನ್ನು ನೀಡುತ್ತದೆ. ಭಾಷೆಯಲ್ಲಿ ಧ್ವನಿಯನ್ನು, ಲಯವನ್ನು ತುಂಬಿ ಗಾಢವಾಗಿ ತಟ್ಟುವ ಭಾವೋದ್ರೇಕತೆಯನ್ನು ನೀಡುತ್ತದೆ. ನಾಮ ಪದಕ್ಕೂ ಗುಣವಾಚಕಕ್ಕೂ ಮಧ್ಯಸ್ಪಷ್ಟವಾದ ವ್ಯತ್ಯಾಸವಿಲ್ಲ. ಎಷ್ಟೋ ಗುಣವಾಚಕಗಳು ನಾಮಪದಗಳೇ, ಇವು ಬೇರೆ ನಾಮ ಪದಕ್ಕೆ ಜೊತೆ ಉಪಯೋಗಿಸಲ್ಪಡುತ್ತವೆ. ನಾಮಪದ, ಒಂದು ಮತ್ತೊಂದು ನಾಮಪದದ ಜೊತೆ ರಚನಾತ್ಮಕ ಸ್ಥಿತಿ ಎಂದು ಕರೆಯಲ್ಪಡುವ ರೀತಿಯಲ್ಲಿ ಸಂಬಂಧ ಕಲ್ಪಿಸಿಕೊಳ್ಳುತ್ತದೆ. ಉದಾಹರಣೆಗೆ ಪವಿತ್ರಾತ್ಮ (Holey Sprit) ಎಂಬ ಉಕ್ತಿ ಶಬ್ದಾರ್ಥದಲ್ಲಿ ಪವಿತ್ರಾತ್ಮ ಹೆಸರು ಎಂದಾಗುತ್ತದೆ. ಇದರ ಜೊತೆ ಗುಣವಾಚಕದ ಉಪಯೋಗ ತೀರ ವಿರಳ. ಕಾವ್ಯೈಶ್ವರ್ಯ ಎಂದು ಕರೆಯಿಸಿಕೊಳ್ಳುವ ಕೀರ್ತನೆ (Psalm)ಯಲ್ಲಿ ಒಂದೇ

ಒಂದು ಗುಣವಾಚಕ ಕೂಡ ಕಾಣಸಿಗುವುದಿಲ್ಲ. ಚಿಕ್ಕ ಶಬ್ದ 'ಎಲಿ' ಎಂದರೆ ನನ್ನ ದೇವರೆ (pialm ೨೨:೧) ಶಾಬ್ದಿಕವಾಗಿ ನನ್ನದ್ದಾದ ದೇವ ಎಂದಾಗುತ್ತದೆ. ಕ್ರಿಯಾಪದಕ್ಕೆ ಪ್ರಥಮ ಕರ್ಮಪದಗಳಾಗಿ ಜೋಡಣೆಯಾಗಬಹುದು. "ನನ್ನ ಮೇಲೆ ಕೃಪೆ ಮಾಡು (Have merey upon me) (ಕೀರ್ತ ೫೧:೧) ಶಾಬ್ದಿಕವಾಗಿ ಕೃಪೆದೋರು (Grace me) ಈ ಭಾಷಾ ಅಂಶಗಳನ್ನು ಗಮನಿಸಿದಾಗ ಹಿಬ್ರೂ ಭಾಷಾವೈಶಿಷ್ಟ್ಯ ವಿಶೇಷವಾದುದೆಂದು ತೋರಿಬರುತ್ತದೆ. ಈ ಭಾಷೆಯ ಸೌಂದರ್ಯವನ್ನು ಅನುವಾದಿತ ಭಾಷೆಯಲ್ಲಿ ಹಿಡಿದಿಡುವಲ್ಲಿ ಅನುವಾದಕ ಬಹು ಪ್ರಯಾಸ ಪಡಬೇಕಾಗುತ್ತದೆ. ಈ ಕಾರಣದಿಂದ ಮೂಲಭಾಷೆಯಿಂದ ಅನುವಾದಗೊಂಡ ಯಾವ ಭಾಷೆಯ ಅನುವಾದವು ಇಲ್ಲಿಯವರೆಗೆ ಪರಿಪೂರ್ಣ ಅನುವಾದಕ್ಕೆ ತೃಪ್ತಿಗೊಂಡಿಲ್ಲ. ಕನ್ನಡ ಬೈಬಲ್ ನಲ್ಲಿ ಈ ಹಿಬ್ರೂ, ಗ್ರೀಕ್ ಭಾಷೆಯ ಎಲ್ಲ ಅಂಶಗಳು ಸೇರಿಕೊಂಡಿರುವುದರಿಂದ ಇದೊಂದು ಉತ್ತಮ ಮಟ್ಟದ ಭಾಷಾ ಶೈಲಿ ಅಥವಾ ಸಾಹಿತ್ಯಿಕ ಗುಣಮಟ್ಟವನ್ನು ಅಭಿವ್ಯಕ್ತಿಸುವ ಗ್ರಂಥವೆಂದು ಗುರುತಿಸಬಹುದು.

೫.೩. ಅನುವಾದದಲ್ಲಿ ಧಾರ್ಮಿಕ ಕೃತಿಗಳ ಸ್ಥಾನ

ಅನುವಾದ ಕಾರ್ಯ ನಡೆಯುವಾಗ, ಶಬ್ದಗಳ ಅರ್ಥಕ್ಕನುಗುಣವಾಗಿ ಅಥವಾ ಭಾವಕ್ಕನುಗುಣವಾಗಿ ಅನುವಾದ ಸೀಮಿತವಾಗಿರುತ್ತದೆ. ಅದರಲ್ಲಿಯೂ ಧಾರ್ಮಿಕ ಗ್ರಂಥಗಳ ಅನುವಾದ ಎರಡನ್ನೂ ಅನುಸರಿಸಿ ಸಾಗಬೇಕಾಗುತ್ತದೆ. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಬೈಬಲ್ ಅನುವಾದವನ್ನು ಗ್ರಹಿಸುವುದಾದರೆ ತನ್ನದೇ ಆದ ವಿಶಿಷ್ಟ ಪರಂಪರೆಯನ್ನು ಅನುಸರಿಸಿ ನಡೆದಂತೆ ತೋರುತ್ತದೆ. ಬೈಬಲ್, ಖುರ್‌ಆನ್, ಭಗವದ್ಗೀತೆ ಇತ್ಯಾದಿ ಧರ್ಮಗ್ರಂಥಗಳ ಅನುವಾದವು ಇತರ ಮಹಾಭಾರತ, ರಾಮಾಯಣ, ಪಂಚತಂತ್ರದಂತೆ ಭಾಷಾಂತರಿಸಲು ಸಾಧ್ಯವಾಗುವುದಿಲ್ಲ. ಕಥಾರೂಪದ ಸಾಹಿತ್ಯಕ್ಕೂ ಆಜ್ಞಾರೂಪದ ಸಾಹಿತ್ಯಕ್ಕೂ ಬಹಳ ವ್ಯತ್ಯಾಸ ಉಂಟು. ಪವಿತ್ರ ಧಾರ್ಮಿಕ ಕೃತಿಗಳು ವಿಶಿಷ್ಟತೆಯನ್ನು ನಿಶ್ಚಿತತೆಯನ್ನು ಸಮಗ್ರತೆಯನ್ನು ಹೊಂದಿರುತ್ತವೆ. ಭಾಷಾಂತರವು ಈ ನಿಯಮಗಳನ್ನು ಪಾಲಿಸದಿದ್ದಲ್ಲಿ, ಭಾಷಾಂತರ ಪ್ರಯೋಜನ ಸಿದ್ಧಿಸಲಾರದು.

ಈ ಕಾರಣಗಳಿಗಾಗಿಯೇ ಇರಬಹುದು ಬೈಬಲ್ ನ್ನು ಸಾಮಾನ್ಯ ಭಾಷೆಗಳಿಗೆ ಭಾಷಾಂತರಿಸಕೂಡ ದೆಂದು ಚರ್ಚಿನ (Rome) ಆಡಳಿತ ವರ್ಗ ಕಾಯ್ದೆಯನ್ನು ಜಾರಿಗೆ ತಂದಿತ್ತು. ಹಿಬ್ರೂ ಗ್ರೀಕ್ ನಂತರ ಲ್ಯಾಟಿನ್ ಭಾಷೆಯಲ್ಲಿದ್ದ ಬೈಬಲ್ ಇತರ ಭಾಷೆಗೆ ಭಾಷಾಂತರಗೊಳಿಸುವುದು ಕಠಿಣ ಸಾಧ್ಯವಾಯಿತು.

ಆ ದಿನಗಳಲ್ಲಿ ಕೆಥೊಲಿಕ್ ಗುರುಗಳ ಕಾಯ್ದೆ ಕಟ್ಟುನಿಟ್ಟಾದುದರಿಂದ ಅವರ ಕಾಯ್ದೆ ಮೀರಿ ಇಂಗ್ಲೀಷ್ ಭಾಷೆಗೆ ಬೈಬಲ್ ಭಾಷಾಂತರಿಸಿದ್ದ. ವಿಲಿಯಂ ಟೆನ್ನಡೆಲ್‌ನನ್ನು ಹಿಡಿದುಕೊಂಡು

ಕೊಂದುಹಾಕಲಾಯಿತು. ಇಂಗ್ಲೀಷ್ ಬೈಬಲ್ ಭಾಷಾಂತರದ ಚರಿತ್ರೆ ಗಮನಿಸಿದರೆ ಧಾರ್ಮಿಕ ಕೃತಿ ಸಾಮಾನ್ಯ ಭಾಷೆಯಲ್ಲಿ ಭಾಷಾಂತರಗೊಳ್ಳಲು ಎಷ್ಟು ಪರಿಶ್ರಮ ಪಡಬೇಕಾಯಿತೆಂಬುದು ತಿಳಿದುಬರುತ್ತದೆ.

ಕನ್ನಡ ಬೈಬಲ್ ಅನುವಾದ ಕಾರ್ಯದಲ್ಲಿ ಕೆಲವೊಂದು ನಿಯಮಗಳನ್ನು ಪಾಲಿಸಿದ ಬಗ್ಗೆ ಹಿಂದೆ ನೋಡಲಾಗಿದೆ. ಧಾರ್ಮಿಕ ಗ್ರಂಥ ಎಂಬ ಕಾರಣಕ್ಕಾಗಿಯೇ ಮೂಲವನ್ನು ಅತ್ಯಂತ ಕಟ್ಟುನಿಟ್ಟಾಗಿ ಅನುಸರಿಸಬೇಕೆಂದು, ಭಾಷಾಂತರವು ಸಂಪೂರ್ಣ ಮೂಲಾನು ಸಾರಿಯಾಗಿರಬೇಕಲ್ಲದೆ, ಅರ್ಥ ಸ್ಪಷ್ಟತೆಗಾಗಿ ಅದನ್ನು ವಿಸ್ತರಿಸಬಾರದು. ಮೂಲದಲ್ಲಿ ಒಂದು ವೇಳೆ ಸಂದಿಗ್ಧವಾಗಿ ಕಂಡುಬಂದಲ್ಲಿ, ಹಾಗೆಯೇ ಅನುಸರಿಸಬೇಕೆಂಬ ನಿಲುವನ್ನು ಅಂದಿನ ಮಿಶನರಿಗಳು ತಾಳುವಲ್ಲಿ ಇದ್ದ ಮುಖ್ಯ ಉದ್ದೇಶ, ಧಾರ್ಮಿಕ ಗ್ರಂಥದ ಮಡಿವಂತಿಕೆಯನ್ನು ಅದರ ಸ್ಥಾನವನ್ನು ಕಾಯ್ದುಕೊಂಡು ಬರುವುದೇ ಆಗಿತ್ತು.

ಬೈಬಲ್ ಪವಿತ್ರ ಕೃತಿಯ ಸ್ಥಾನ ಕಾಪಾಡುವಲ್ಲಿ ಮಿಶನರಿಗಳು ಬಹಳ ಆಸ್ತೆವಹಿಸಿರುವರು. "ಕ್ರಿ.ಶ.೧೮೫೮ರಲ್ಲಿ ನಡೆದ ಮಿಶನರಿ ಸಮ್ಮೇಳನದಲ್ಲಿ ಬೈಬಲ್ ಅನುವಾದದ ಸಮಸ್ಯೆ ಕುರಿತು ಚರ್ಚೆ ನಡೆದಾಗ, ಬೈಬಲ್ ಅನುವಾದದಲ್ಲಿ ಭಾರತೀಕರಣ ಬೇಡವೆಂದು ಕ್ರೈಸ್ತ ಮತಕ್ಕೆ ಸೇರಿದ ದೇಶೀಯರಿಗಾಗಿಯೇ ಅನುವಾದಿತ ಬೈಬಲ್ ಇದ್ದರೂ ತಮ್ಮ ದೇವವಾಣಿಯನ್ನು ವ್ಯಕ್ತಪಡಿಸುವ ರೀತಿಯ ಮೂಲದಂತೆ ಇರಬೇಕು"[೧] ಎಂದು ನಿರ್ಧರಿಸಿದರು. ಅಂದಿನ ಭಾಷಾಂತರದ ಸಮಿತಿಯ ಸದಸ್ಯನಾದ ಕಾಲಿನ್ ಕ್ಯಾಂಪಬೆಲ್, ಅನುವಾದದಲ್ಲಿ ಭಾರತೀಯ ಪಂಡಿತರ ನೆರವು ಬೇಡವೆಂದು ಸಲಹೆ ಇತ್ತಿದ್ದಾನೆ. ಹೀಗೆ ಬೈಬಲ್ ಭಾರತೀಯ ಭಾಷೆಗೆ ತರ್ಜುಮೆಗೊಂಡರು ಮಿಶನರಿಗಳು ಇತರ ಕೃತಿಯಂತೆ ಭಾಷಾಂತರಿಸದೇ, ಬೈಬಲ್ ಪೂಜ್ಯತೆಯನ್ನು, ವಿಶಿಷ್ಟತೆಯನ್ನು ಕಾಯ್ದುಕೊಂಡು, ಇಂದು ತನ್ನದೇ ಆದ ವಿಶಿಷ್ಟ ಶೈಲಿಯಲ್ಲಿ ಕನ್ನಡ ಸಾಹಿತ್ಯದಲ್ಲಿ ಸ್ಥಾನ ಪಡೆದಿದೆ.

ಬೈಬಲ್ ಪ್ರಥಮವಾಗಿ ಓದುವ, ಓದುಗನಿಗೆ ಇದೊಂದು ಬೇರೆ ವಿಧದ ಶೈಲಿಯಲ್ಲಿರುವಂತೆ ಭಾಸವಾಗುವುದು ಸಹಜ, ನಂತರ ಅದರದೇ ಆದ ಓಘದಲ್ಲಿ ಸಾಗಿದಂತೆ ಇದೊಂದು ವಿಭಿನ್ನ ಶೈಲಿಯ ಕೃತಿಯೆಂದು ಕಂಡುಕೊಳ್ಳುವನು. ಬೈಬಲ್ ಜಾಗತಿಕ ಧಾರ್ಮಿಕ ಕೃತಿಯ ಸ್ಥಾನದಲ್ಲಿದ್ದು, ಒಬ್ಬ ವ್ಯಕ್ತಿಯ ಕಾಲ್ಪನಿಕತೆಗೆ ಅಥವಾ ವೈಯಕ್ತಿಕ ಶೈಲಿಗೆ ಸಿಲುಕದೇ ತನ್ನದೇ ಪ್ರಭಾವ ಬೀರುವಲ್ಲಿ ಎಲ್ಲ ಭಾಷೆಯಲ್ಲಿ ಯಶಸ್ಸು ಪಡೆದಿದೆ. ಇಂದಿನವರೆಗೂ ವರ್ಣನಾತ್ಮಕ ಸಾಹಿತ್ಯವೆನಿಸದೆ, ಕಾಲ್ಪನಿಕತೆಗೆ ಆಸ್ಪದ ನೀಡದೆ, ಆಜ್ಞಾ ಹಾಗೂ ಬೋಧನಾ ಸಾಹಿತ್ಯವಾಗಿ ತನ್ನ ಧಾರ್ಮಿಕ ದೃಷ್ಟಿಕೋನವನ್ನು ಉಳಿಸಿಕೊಂಡು. ಜಗತ್ತಿನ ಜನತೆಯ ಹೃದಯದಲ್ಲಿ ನಿಂತುಕೊಂಡಿದೆ.

---

೧. ಹೊ.ಅ.ಶ್ರೀ.ಹಾ., ಪು.೪೨೩

೫.೪. ಅನುವಾದದಲ್ಲಿ ಉದ್ದೇಶ ಹಾಗೂ ಆಸಕ್ತಿ

೧೮೧೮ರವರೆಗೆ ಉತ್ತರ ಕರ್ನಾಟಕವನ್ನು ಪೇಶ್ವೆ ಮನೆತನದವರು ಆಳಿದರು. ಅನಂತರ ಬ್ರಿಟೀಷರು ಇದನ್ನು ವಶಪಡಿಸಿಕೊಂಡರು. ಕರ್ನಾಟಕ ಏಕೀಕರಣವಾಗುವವರೆಗೆ ಭಾರತ ಸ್ವತಂತ್ರವಾದ ಮೇಲೂ ಈ ಪ್ರದೇಶಗಳು ಮುಂಬೈ ಪ್ರಾಂತ್ಯದಲ್ಲಿಯೇ ಇದ್ದವು. ಆಗ ಮುಂಬಯಿ ಕರ್ನಾಟಕವೆಂದೇ ಕರೆಯಲಾಗುತ್ತಿತ್ತು. ಈ ಪ್ರಾಂತ್ಯದ ನಾಲ್ಕು ಕನ್ನಡ ಜಿಲ್ಲೆಗಳು ಬೆಳಗಾವಿ, ಬಿಜಾಪೂರ, ಧಾರವಾಡ ಹಾಗೂ ಉತ್ತರ ಕನ್ನಡ. ಈ ಎಲ್ಲ ಜಿಲ್ಲೆಗಳಲ್ಲಿ ರೋಮನ್ ಕೆಥೋಲಿಕ ಹಾಗೂ ಪ್ರೊಟೆಸ್ಟೆಂಟ್ ಕ್ರೈಸ್ತರು ವಾಸಿಸುತ್ತಿದ್ದರು. ಅಲ್ಲದೆ ಬ್ರಿಟೀಷ್ ಅಧಿಕಾರಿಗಳು ಹಾಗೂ ಸೈನಿಕರಾಗಿ ತೆಲಗು, ತಮಿಳು, ಮಲೆಯಾಳಂ ಭಾಷೆಯನ್ನಾಡುವ ಕ್ರೈಸ್ತರೂ ಇದ್ದರು.

ಬೈಬಲ್ ಅನುವಾದದ ಸಮಯದಲ್ಲಿ ಈ ಪ್ರಾದೇಶಿಕ ದೃಷ್ಟಿಕೋನವನ್ನು ಆಧರಿಸಿ ಭಾಷಾಂತರಗೊಳಿಸಬೇಕಾಗಿತ್ತೆಂಬ ಅಂಶವನ್ನು ಮರೆಯುವಂತಿಲ್ಲ. ಈ ಸಂದರ್ಭದಲ್ಲಿ ಕ್ರೈಸ್ತ ಧರ್ಮವನ್ನು ಪ್ರಚಾರ ಮಾಡಿ ಕ್ರೈಸ್ತೇತರರು ಅದನ್ನು ಸ್ವೀಕರಿಸುವಂತೆ ಪ್ರಯತ್ನಿಸುವ ಏಕೈಕ ಗುರಿಯನ್ನು ಸಾಧಿಸಲು ಕನ್ನಡ ಭಾಷೆ, ಅಗತ್ಯವಾದ ಒಂದು ಉಪಕರಣ ಎಂಬ ರೀತಿಯಲ್ಲಿ ಭಾಷೆಯ ಬಳಕೆ ಮೊದಲ ಆವೃತ್ತಿಗಳಲ್ಲಿ ಕಂಡುಬರುವುದು.

ತದನಂತರದಲ್ಲಿ ಭಾಷೆ ಮೇಲೆ ಪ್ರಭುತ್ವ ಸಂಪಾದಿಸದೇ ಮತ ಪ್ರಚಾರ ಯಶಸ್ವಿಯಾಗಲಾರದೆಂಬ ಹಾಗೂ ಮಾತೃಭಾಷೆಯಲ್ಲಿಯೇ ಜನರಿಗೆ ಧಾರ್ಮಿಕ ಸಾಹಿತ್ಯ ಒದಗಿಸಬೇಕೆಂಬ ಕಾರಣದಿಂದ, ಅನುವಾದ ಕಾರ್ಯವನ್ನು ಕೈಗೆತ್ತಿಕೊಂಡು ಭಾಷಾ ಜ್ಞಾನವನ್ನು ಬೆಳೆಸಿದಂತೆ ತೋರುತ್ತದೆ.

ಒಂಭತ್ತು ದಶಲಕ್ಷದಷ್ಟು ಶಬ್ದಗಳಿರುವ ಬೈಬಲ್ ಅನುವಾದದ ವಿವಿಧ ಹಂತಗಳಲ್ಲಿ ನಾವು ಕನ್ನಡದ ಗದ್ಯದ ವಿಕಾಸವನ್ನು ಕಾಣಬಹುದು. ಅದರ ಬೃಹತ್ತಿನ ಮಾತಿರಲಿ ಸಂಪೂರ್ಣ ವಿಭಿನ್ನ ಸಂಸ್ಕೃತಿಯನ್ನು ರೂಪಿಸುವ ಕೃತಿಯನ್ನು ಕನ್ನಡದಲ್ಲಿ ತುರುವುದು ಕಷ್ಟಸಾಧ್ಯವಾದುದು''[೧] ಬೈಬಲ್ಲಿನ ಭಾಷೆಯು ಮೇಲು ನೋಟಕ್ಕೆ ಸರಳವಾಗಿ ಕಂಡರೂ ಅದರ ಖಚಿತವಾದ ಅರ್ಥವನ್ನು ಅನ್ಯ ಭಾಷೆಯಲ್ಲಿ ತರುವುದು ಕಠಿಣ. ಪ್ರಾರಂಭದ ಆವೃತ್ತಿಯ ತರ್ಜುಮೆ ಅಸಮರ್ಪಕ ಇದ್ದುದಕ್ಕೆ, ಇನ್ನೊಂದು ಕಾರಣ ಮೂಲವನ್ನು ಅತ್ಯಂತ ಕಟ್ಟು ನಿಟ್ಟಾಗಿ ಅನುಸರಿಸಬೇಕೆಂಬ ಪೂಜ್ಯಭಾವನೆ ಯಾವ ಶಬ್ದವನ್ನು ಬಿಡದೆ ಇದ್ದಕ್ಕಿದ್ದಂತೆ ಅನುವಾದಿಸಿದ್ದಾರೆ. ಅದು ಕನ್ನಡ ನುಡಿಯ ಜಾಯಮಾನಕ್ಕೆ ಹೊಂದಲಿಕ್ಕಿಲ್ಲ ಎಂಬ ವಿಚಾರವೇ ಬರದಷ್ಟು ಬೈಬಲ್ ವಾಣಿಯ ವಿಷಯದಲ್ಲಿ ಅವರು ಆದರವನ್ನು ತಳೆದಿದ್ದರು. ಹೀಗಾಗಿ. to present the inspired writings in their own unaltered and undiminished beauty

---

೧. ಹೊ.ಅ.ಶ್ರೀ.ಹಾ., ಪು.೧೨೨

and prose in Language simple, perspicuous and dignified ಎಂಬುದೇ ಪ್ರಥಮ ಪರಿಷ್ಕರಣ ಸಮಿತಿಯ ಗುರಿಯಾಗಿದ್ದಿತು.[೧]

೧೮೩೦ರ ಸುಮಾರಿಗೆ ಮದ್ರಾಸ್ ಆಕ್ಜಲರಿ ಸೊಸೈಟಿಯಿಂದ ನೇಮಕಗೊಂಡ ಭಾಷಾಂತರ ಸಮಿತಿಯ ಸದಸ್ಯರಾದ ಜೇ. ಟೇಲರ (Taylor) ಎ.ಡಿ.ಕಾಂಪ್‌ಬೆಲ್, (A.D.Compbell) ಆರ್.ಸಿ.ಗೋಸ್ಲಿಂಗ್ (R.C.Gosling)ರವರು ಜಾನ್ ಹ್ಯಾಂಡ್ಸ ಸಂಪ್ರದಾಯದ ಭಾಷಾಂತರವು ಉತ್ತಮ ಮಟ್ಟದಲ್ಲಿ ತರ್ಜುಮೆಗೊಳಿಸುವಲ್ಲಿ ಶ್ರಮಿಸಿದರು. ಆ ಸಂದರ್ಭದಲ್ಲಿ ಭಾಷಾಂತರ ಸಮಯದಲ್ಲಿ ಮೂಲ ಭಾಷೆಯಾದ ಗ್ರೀಕದಿಂದ ಕನ್ನಡದ ಅನುವಾದಗಳನ್ನು ತರಲು ಪ್ರಯತ್ನಿಸಿದರು. ಹೀಗಾಗಿ ಗ್ರೀಕ ಭಾಷೆ ಅತ್ಯಂತ ಮನೋಹರವಾದ ಹಾಗೂ ಹಗುರವಾದ ಭಾಷೆಯಾಗಿದ್ದರಿಂದ, ಅದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ ಶಬ್ದದ ಬಳಕೆ ಅಷ್ಟು ಸುಲಭವಿರಲಿಲ್ಲ. ಈ ಕಾರಣದಿಂದ ಕೆಲವು ನಿಯಮಾವಳಿಗಳನ್ನು ಭಾಷಾಂತರಕಾರರು ಅನುಸರಿಸಬೇಕಾಯಿತು.

೧. ಮೂಲದ ಅಂಶ ಇದ್ದಂತೆಯೇ ಇದ್ದು ಯಾವ ಸಂದರ್ಭದಲ್ಲಿಯೂ ಅದರ ಸುಂದರತೆ ಹಾಳಾಗಬಾರದು.

೨. ಸಂದಿಗ್ಧವಿರುವ ವಿಷಯವನ್ನು ಹಾಗೆಯೇ ಬಿಡಬೇಕು, ಅದನ್ನು ಓದುಗನಿಗೆ ತಿಳಿಸಲು, ವಿಸ್ತರಿಸಲು ಬೇರೊಂದು ರೀತಿಯಲ್ಲಿ ಪ್ರಯತ್ನಿಸಬಾರದು.

೩. ಜನಸಾಮಾನ್ಯರಿಗೆ ಅರ್ಥವಾಗುವ ಶಬ್ದಗಳ ಬಳಕೆಗೆ ಮಹತ್ವ, ಸಂಸ್ಕೃತ ಶಬ್ದಗಳ ಬಳಕೆ ನಿಷಿದ್ಧ.

೪. ಮೂಲ ಭಾಷೆ ಹಿಬ್ರೂ, ಗ್ರೀಕ್ ನಾಮಾಂಕಿತ ಸಂದರ್ಭದಲ್ಲಿ ಮೂಲದ ಭಾವವನ್ನೇ ಅನುಸರಿಸಬೇಕು. ಉದಾ. Peter (ಪೀಟರ್)ಗೆ ಬದಲಾಗಿ ಪೇತ್ರನೆಂದು, Jacob(ಜಾಕೋಬ)ಗೆ ಯಾಕೋಬ ಎಂದು ಬಳಕೆ ಇದೆ.

೫. ಗಿಡ, ಪಕ್ಷಿ, ಪ್ರಾಣಿ, ಖನಿಜ, ಜಲಚರ ಮುಂತಾದ ನೈಸರ್ಗಿಕ ಶಬ್ದಗಳನ್ನು ಬಳಕೆಯ ಸಂದರ್ಭದಲ್ಲಿ ಸಮಾನ ಅರ್ಥವಿರುವ ಕನ್ನಡ ಶಬ್ದಗಳನ್ನು ಬಳಸಬಹುದು.

೬. ಅನ್ಯದೇಶಿಯ ಅಥವಾ ಗ್ರಾಮ್ಯ ಶಬ್ದಗಳ ಬಳಕೆ ಅನಿವಾರ್ಯವಿದ್ದಾಗ ಮಾತ್ರ.

೭. ಕರ್ನಾಟಕ ಪ್ರಾಂತೀಯ ಭೇದವನ್ನು ಗಮನದಲ್ಲಿಟ್ಟುಕೊಂಡು ಶಬ್ದಗಳ ಬಳಕೆ ಅವಶ್ಯಕ. ಉದಾ. ಕ್ರಿಸ್ತನು ಯುರಿಕೋವಿನಿಂದ (ಜರಿಕೊ) ಘಟ್ಟಾ ಇಳಿದು ಬಂದನು. ಇಲ್ಲಿ ಘಟ್ಟಾ ಉತ್ತರ ಕನ್ನಡ ಶಬ್ದವಲ್ಲ.

೮. ತರ್ಜುಮೆಗೊಂಡ ಭಾಗವನ್ನು ಮತ್ತೆ ಹಲವು ಸಲ ಕೂಲಂಕುಷವಾಗಿ ಗಮನಿಸಿ ನಿರ್ಧರಿಸಬೇಕು.[೨]

---

೧. ಹೊ.ಅ.ಶ್ರೀ.ಹಾ., ಪು.೪೨೨

೨..B.T.I.I.P & Ceylon, J.S.M.Hooper, Pp.97

(ರೆ.ಜಾನ್ ಹ್ಯಾಂಡ್ಸ್ ಒಂದು ಭಾಗವನ್ನು ೭ ರಿಂದ ೮ ಸಾರೆ ಪ್ರತಿಮಾಡಿದ ಉಲ್ಲೇಖವಿದೆ.)

ಈ ಮೇಲಿನ ಅಂಶಗಳ ಕಡೆ ಗಮನವಿತ್ತು ಪರಿಷ್ಕರಣ ಸಮಿತಿಯ ಅಧ್ಯಕ್ಷರಾಗಿದ್ದ ರೆ.ಜಿ.ಎಚ್. ವೀಗಲ್ ನು ೧೮೫೦ರ ಸುಮಾರಿಗೆ ಪೂರ್ವದ ಆವೃತ್ತಿಗಳನ್ನು ದೃಷ್ಟಿಸಿ ಉತ್ತಮ ಗುಣಮಟ್ಟವನ್ನು ತರಲು ಶ್ರಮಿಸಿರುವುದು ಆತನ ಆವೃತ್ತಿಯಲ್ಲಿ ತೋರಿಬರುತ್ತದೆ. "ವೀಗಲ್ ಮರಣದ ನಂತರ ೧೮೫೮ರಲ್ಲಿ ಜರ್ಮನ್, ಲಂಡನ್ ಮತ್ತು ವೆಸ್ಲಿಯನ್ ಸೊಸೈಟಿಯ ಮಿಶನರಿಗಳ ಕಮೀಟಿಯು ಮದ್ರಾಸ ಆಕ್ಸಲಿರ ಬೈಬಲ್ ಸೊಸೈಟಿಯಿಂದ ನೇಮಕಗೊಂಡಿತು. ಈ ಕಮೀಟಿಯಲ್ಲಿ ರೆ.ಸಿ.ಕಾಂಪಬೆಲ್ ಮತ್ತು ರೆ.ಬಿ.ರೈಸ್ ರವರು ಹೆಚ್ಚು ಆಸ್ತೆವಹಿಸಿ ಕಾರ್ಯನಿರ್ವಹಿಸಿದರು."[೧]

"ಕ್ರಿ.ಶ.೧೮೫೮ರಲ್ಲಿ ದಕ್ಷಿಣ ಭಾರತ ಮಿಶನರಿ (ಪ್ರೊಟೆಸ್ಟಂಟ್) ಸಮ್ಮೇಳನದಲ್ಲಿ ಬೈಬಲ್ ಅನುವಾದಗಳ ಸಮಸ್ಯೆ ಕುರಿತು ಪ್ರತ್ಯೇಕವಾಗಿಯೇ ಒಂದು ವಿಚಾರಗೋಷ್ಠಿ ನಡೆಯಿತು. ಅದರಲ್ಲಿ ಭಾಗವಹಿಸಿದವರ ಮುಖ್ಯ ನಿಲುವು, ಬೈಬಲ್ ಅನುವಾದದಲ್ಲಿ ಭಾರತೀಕರಣ ಬೇಡವೆಂಬುದು. ಕ್ರೈಸ್ತ ಮತಕ್ಕೆ ಸೇರಿದ ದೇಶೀಯರಿಗಾಗಿಯೇ ಅನುವಾದಿತ ಬೈಬಲ್ ಇದ್ದರೂ ತಮ್ಮ ದೇವವಾಣಿಯನ್ನು ವ್ಯಕ್ತಪಡಿಸುವ ರೀತಿಯ ಮೂಲದಂತೆಯೇ ಇರಬೇಕು".[೨] ಭಾರತೀಯ ಸಾಹಿತ್ಯದೃಷ್ಟಿಕೋನದಂತೆ (ಮಹಾಭಾರತ-ರಾಮಾಯಣ) ಭಾಷಾಂತರಗೊಳಿಸಲು ಬರುವಂತಿದ್ದರೂ ಅಥವಾ ಮೂಲ ಪರಿಕಲ್ಪನೆಯನ್ನು ಬಳಸಿ ಸಾಹಿತ್ಯಿಕ ಕೃತಿಯಂತೆ ರೂಪಿಸುವ ಅವಕಾಶವಿದ್ದರೂ ಹಾಗೆ ಬರೆಯಬಾರದೆಂಬ ಮಡಿವಂತಿಕೆ (ಅಥವಾ ಕಟ್ಟೆಚ್ಚರಿಕೆ) ಅವರನ್ನು ಕಾಡಿರಬಹುದು. ಬೈಬಲ್ ಗ್ರಂಥದ ಕೊನೆಯ ಪುಸ್ತಕವಾದ ಪ್ರಕಟಣೆ ಎಂಬ ಪರಿಚ್ಛೇದದಲ್ಲಿ ಹೀಗೆ ಬರೆಯಲಾಗಿದೆ. "ಇವುಗಳಿಗೆ (ಪ್ರವಾದನಾವಾಕ್ಯಕ್ಕೆ) ಯಾವನಾದರೂ ಹೆಚ್ಚು ಮಾತುಗಳನ್ನು ತಂದು ಹಾಕಿದರೆ ದೇವರು ಅವನ ಮೇಲೆ ಈ ಪುಸ್ತಕದಲ್ಲಿ ಬರೆದಿರುವ ಉಪದ್ರವಗಳನ್ನು ತಂದು ಹಾಕುವನು. ಯಾವನಾದರೂ ಈ ಪ್ರವಾದನಾ ಪುಸ್ತಕದಲ್ಲಿರುವ ಮಾತುಗಳಲ್ಲಿ ಒಂದನ್ನಾದರೂ ತೆಗೆದುಬಿಟ್ಟರೆ, ಈ ಪುಸ್ತಕದಲ್ಲಿ ಬರೆದಿರುವ ಪರಿಶುದ್ಧ ಪಟ್ಟಣದಲ್ಲಿ(ಜರುಸಲೇಮ)ಯೂ ಜೀವವೃಕ್ಷ (ಸ್ವರ್ಗದಲ್ಲಿರುವ)ದಲ್ಲಿಯೂ ಅವನಿಗಿರುವ ಪಾಲನ್ನು ದೇವರು ತೆಗೆದು ಬಿಡುವನು."[೩] ಈ ಹೇಳಿಕೆಯನ್ನು ಅನುಸರಿಸಿಯೇ ಅಥವಾ ಭಯದಿಂದಲೋ ಏನೋ ಮೂಲಕ್ಕೆ ಧಕ್ಕೆ ಬರದಂತೆ ಅನುವಾದ ಕಾರ್ಯದಲ್ಲಿ ಎಲ್ಲ ಮಿಶನರಿಗಳ ಅಭಿಪ್ರಾಯ ಒಂದೇಯಾಗಿದೆ.

ಈ ಮೇಲಿನ ಅಂಶವನ್ನು ಗಮನದಲ್ಲಿರಿಸಿಯೇ ಇರಬಹುದು ಕಾಲಿನ್ ಕಾಂಪಬೆಲ್ ಹೀಗೆ ಹೇಳಿದ್ದಾರೆ. ಬೈಬಲ್ ಅನುವಾದ ಕಾರ್ಯದಲ್ಲಿ ಹಿಂದೂ ಪಂಡಿತರ ನೆರವನ್ನು ಸಹ ಪಡೆಯಬಾರದು.

೧. T.B.T.I.I.P. & Ceylon, J.S.M., Hooper, Pp.98

೨. ಹೊ.ಅ.ಶ್ರೀ.ಹಾ., ಪು.೪೨೨

೩. ಸತ್ಯವೇದ ಪ್ರಕಟಣೆ, ೨೨:೧೮-೨೩

ಕ್ಯಾಂಬೆಲ್ ಮಾಡಿದ್ದ ಇನ್ನೊಂದು ಸೂಚನೆಯೂ ಭಾಷಾದೃಷ್ಟಿಯಿಂದ ಗಣನೀಯವಾಗಿದೆ. ಮೇಲಿಂದ ಮೇಲೆ ಬರುವ ಪದಗಳಿಗೆ ಉದಾಹರಣೆಯಾಗಿ Lord ಪದಕ್ಕೆ ತಮಿಳಿನಲ್ಲಿ ಅಂದವರ್ ತೆಲುಗಿನಲ್ಲಿ ಪ್ರಭು, ಕನ್ನಡದಲ್ಲಿ ಸ್ವಾಮಿ ಎಂದು, ವಿವಿಧ ಶಬ್ದಗಳಿರುವುದರಿಂದ, ಈ ಅರ್ಥವನ್ನು ಕೊಡುವ ಸಮಾನ ಶಬ್ದವನ್ನು ದಕ್ಷಿಣ ಭಾರತದ ಎಲ್ಲ ಭಾಷೆಗಳಲ್ಲಿ ಬಳಸಿ ಏಕರೂಪತೆಯನ್ನು ಸಾಧಿಸಬೇಕು ಎಂಬುದೇ ಆ ಸೂಚನೆ."[೧] ಆದರೆ ಮುಂದಿನ ದಿನಗಳಲ್ಲಿ ಆತನ ಸಲಹೆ ಬಳಕೆಗೆ ಬರಲಿಲ್ಲ. ಕೆಥೋಲಿಕ ಭಾಷಾಂತರವು (೧೯೮೪, ೧೯೯೨-೯೪) ತಮಿಳು ಶಬ್ದ ಬಳಕೆಯ ರೀತಿಗೆ ಹೆಚ್ಚು ಒತ್ತುಕೊಟ್ಟಂತಿದೆ.

೫.೫. ಅನುವಾದಕರ ವೈಯಕ್ತಿಕ ವಿದ್ವತ್ತು ಮತ್ತು ಸಾಧನೆ

ಯಾವುದೇ ಪ್ರಮುಖ ಧಾರ್ಮಿಕ ಗ್ರಂಥದ ಕುರಿತು ಸಾಹಿತ್ಯ ಕಾರ್ಯದಲ್ಲಿ ತೊಡಗಬೇಕಾದರೆ ಆ ಗ್ರಂಥದ ಕುರಿತು ವಿದ್ವತ್ತು ಇರಬೇಕಾದುದು ಅವಶ್ಯಕ. ಬೈಬಲ್ ಜಾಗತಿಕ ಮೇರು ಕೃತಿ ಇದರ ಬರವಣಿಗೆಯು ಮೂರು ಪುರಾತನ ಭಾಷೆಗಳ ಸಂಪ್ರದಾಯದ ಹಿನ್ನೆಲೆಯನ್ನು ಪಡೆದಿದೆ. ಬೈಬಲ್ ಭಾಷಾಂತರಿಸುವ ವ್ಯಕ್ತಿಗೆ ಗ್ರೀಕ್ , ಹಿಬ್ರೂ ಅರಮೀಕ್ ಭಾಷೆಗಳ ಸಂಪರ್ಕ ಹಾಗೂ ಸಾಂಪ್ರದಾಯಗಳ ಅಭ್ಯಾಸ ಇರಬೇಕು. ಇದರೊಂದಿಗೆ ದೈವಜ್ಞಾನ ಶಾಸ್ತ್ರ ಅಥವಾ ಪಾರಮಾರ್ಥ ಶಾಸ್ತ್ರ (Theology)ದ ಆಳವಾದ ಜ್ಞಾನ ಇರಬೇಕು. ಭಾರತದಲ್ಲಿ ಬಂದ ಮಿಶನರಿಗಳು ತಮ್ಮ ದೇಶದಲ್ಲಿ ದೈವಜ್ಞಾನ ಶಾಸ್ತ್ರದಲ್ಲಿ ಬ್ಯಾಚಲರ ಡಿಗ್ರಿ ಪಡೆದವರಾಗಿರುತ್ತಿದ್ದರು. ಈ ಜ್ಞಾನ ಪಡೆದ ನಂತರವೇ ಅವರನ್ನು ಮಿಶನರಿ ಎಂದು ಗುರುತಿಸಿ, ದೀಕ್ಷೆಗೈದು ಧರ್ಮಪ್ರಚಾರಕ್ಕೆ ಕಳುಹಿಸುತ್ತಿದ್ದರು. ಭಾರತದಲ್ಲಿ ಈ ಪದವಿ ಪಡೆದವರಿಗೆ ಪಾಸ್ಟರ್, ಉಪದೇಶಕ, ರೆವರೆಂಡ್ (Reverend=ಪೂಜ್ಯ) ಎಂದು ಕರೆಯುತ್ತಾರೆ. ಫಾದರ್ (Father) ಎಂಬ ಬಳಕೆ ಕೇವಲ ಕೆಥೋಲಿಕರಲ್ಲಿ ಮಾತ್ರ. ಕ್ರಿಸ್ತನು ದೇವರಿಗೆ ತಂದೆ ಎಂದು (Father) ಬಳಸಿದ ಸಂಕೇತವಾಗಿ ದೇವರ ಸಮಾನನು ಎಂಬ ಅರ್ಥದಲ್ಲಿ ಇದು ಬಂದಿರಬಹುದು.*

ಅನುವಾದಕ ಯಾವ ಭಾಷೆಯಲ್ಲಿ ಅನುವಾದಕ್ಕೆ ತೊಡಗುತ್ತಾನೋ ಆ ಭಾಷಾ ಜ್ಞಾನ, ಶಬ್ದ ಸಂಪತ್ತು, ಭಾಷಾಸ್ವರೂಪ, ಶಬ್ದೋತ್ಪತ್ತಿ ಮುಂತಾದ ವಿಷಯದಲ್ಲಿ ಭಾಷಾ ಹಿಡಿತ ಅನಿವಾರ್ಯ. ಭಾರತಕ್ಕೆ ಬಂದ ಮಿಶನರಿಗಳು ನೇರವಾಗಿ ಭಾಷಾ ಪಂಡಿತರ ಸಹಾಯ ಪಡೆದು ಭಾಷಾಂತರ ಕಾರ್ಯಕ್ಕೆ ಇಳಿಯಲಿಲ್ಲ. ಅವರು ಮೊದಲು ಅವಶ್ಯಕ ಶಬ್ದಗಳನ್ನು ಆಯ್ದು ಶಬ್ದಕೋಶಗಳನ್ನು ನಿರ್ಮಿಸಿದರು. ನಂತರ ವ್ಯಾಕರಣ ಅಭ್ಯಸಿಸಿ ವ್ಯಾಕರಣ ಗ್ರಂಥಕ್ಕೆ ಕೈಹಾಕಿದರು. ತದನಂತರವೇ ಅವರಿಗೆ ಭಾಷಾಂತರದಲ್ಲಿ ಹಿಡಿತ ಲಭಿಸಿದ್ದು.

೧. ಹೊ.ಅ.ಶ್ರೀ.ಹಾ., ಪು.೪೨೩

* ಕ್ರಿಸ್ತನ ತಾಯಿ ಮೇರಿ ಸಂಕೇತವಾಗಿ ಕನ್ಯಾಸ್ತ್ರೀ(Sisters)ಯರಲ್ಲಿ ಹಿರಿಯಳಿಗೆ Mother ಎಂದು ಬಳಸುವರು.

ಕರ್ನಾಟಕಕ್ಕೆ ಬಂದು ಉತ್ತಮ ಸೇವೆಸಲ್ಲಿಸಿದ ಮಿಶನರಿಗಳು ಇಂಗ್ಲೆಂಡ್, ಸ್ವಿಟ್ಜರ್ ಲೆಂಡ್, ಜರ್ಮನ್ ದೇಶದವರೇ ಹೆಚ್ಚು. ಪ್ರೊಟೆಸ್ಟಂಟರಿಂದ ಬಾಶೆಲ್ ಮಿಶನ್ನಿಗೆ ಸೇರಿದ ಮಿಶನರಿಗಳ ಕೊಡುಗೆ ಹಿರಿಯದಾದುದು. "ಕರ್ನಾಟಕಕ್ಕೆ ಬಂದ ಮಿಶನರಿಗಳು ಅಸಾಧಾರಣ ಸಾಮರ್ಥ್ಯ ಉಳ್ಳವರು, ಅಪಾರವಾದ ಸೇವಾ ಮನೋಭಾವ ಹಾಗೂ ಕರ್ತವ್ಯಪ್ರಜ್ಞೆ ಉಳ್ಳವರು, ತಮ್ಮ ತಾಯ್ನುಡಿಯು ಜರ್ಮನ್ ಆದರೂ ಇಂಗ್ಲಿಷ್ ಮತ್ತ ಕನ್ನಡಗಳಲ್ಲಿ ಕಲಿತು, ಎರಡೂ ಭಾಷೆಗಳ ಮೂಲಕ ಅವರು ಕ್ರೈಸ್ತ ಧರ್ಮಪ್ರಚಾರ ಮಾಡಿದರು".[೧]

ಮಿಶನರಿಗಳು ಪಡೆದುಕೊಂಡ ಮೂಲ ಭಾಷಾಜ್ಞಾನ ಕುರಿತು ತಿಳಿಯುವುದಾದರೆ, ನಿಜಕ್ಕೂ ಅವರು ಬಹುಭಾಷಾಪಂಡಿತರು. ಪ್ರಮುಖ ಅನುವಾದಕರನ್ನು ಅವರ ವಿದ್ವತ್ತನ್ನು ಈ ಕೆಳಗಿನಂತೆ ಗುರುತಿಸಬಹುದು.

ರೆ.ವಿಲಿಯಂ ಕೇರಿ

ಲಂಡನ್ ಮಿಶನ್ ಸಂಸ್ಥೆಗೆ ಸೇರಿದ ಈತನು ಡಾಕ್ಟರೇಟ್ ಹಾಗೂ ದೈವಜ್ಞಾನ ಶಾಸ್ತ್ರದಲ್ಲಿ ಪದವೀಧರ. ಈತನಿಗೆ ೩೫ ಭಾಷೆಗಳು ತಿಳಿದಿದ್ದವೆಂದು ಕಂಡುಬರುತ್ತೆದೆ. "ಡಾ.ವಿಲಿಯಂ ಕೇರಿ ಅದೆಷ್ಟೋ ಶಬ್ದ ಮಂಜರಿಗಳನ್ನು ತನಗೆ ತಿಳಿದಿದ್ದ ಭಾಷೆಗಳಲ್ಲಿ ಬರೆದಿದ್ದಾನೆ. ಇವನು ಬರೆದ ಬಂಗಾಳಿ, ಮರಾಠಿ ಮತ್ತು ಪಂಜಾಬಿ ಅರ್ಥಕೋಶಗಳು ಪರಿಪುಷ್ಟವಾದುವಾಗಿವೆ. ಚೀನಿ ಭಾಷೆಯನ್ನು ಅಭ್ಯಸಿಸಿ ಅದರಲ್ಲಿಯೂ ಗ್ರಂಥಗಳನ್ನು ಬರೆದನಲ್ಲದೇ, ಭಾರತೀಯ ಮತ್ತು ಚೀನಿ ಭಾಷೆಗಳ ಬಾಂಧವ್ಯವನ್ನು ಕುರಿತಾಗಿ ಶಾಸ್ತ್ರೀಯವಾಗಿ ಅನ್ವೇಷಿಸಿ ಗ್ರಂಥಗಳನ್ನು ಬರೆದ ಸಾಹಸವೂ ಅವನದಾಗಿದೆ."[೨] "ಕೇರಿಯು ಕಲ್ಕತ್ತಾ ಪೋರ್ಟ್ ವಿಲಯಂ ಕಾಲೇಜಿನಲ್ಲಿ ಸಂಸ್ಕೃತ, ಬಂಗಾಲ ಮತ್ತು ಮರಾಠಿ ಭಾಷೆಗಳ ಪ್ರಾಧ್ಯಾಪಕನಾಗಿದ್ದನು."[೩] ಈತನ ಜನಪ್ರಿಯ ಬೈಬಲ್ ಬರಹಗಳು ೨೫೦ಕ್ಕೂ ಮೇಲ್ಪಟ್ಟಿವೆ. "ರಾಮಾಯಣ ಮತ್ತು ಸಾಂಖ್ಯವನ್ನು(Samkhya) ಇಂಗ್ಲೀಷಿಗೆ ಭಾಷಾಂತರಿಸಿದ ಮೊದಲ ಪಾಶ್ಚಾತ್ತಿಗನೆನ್ನಬಹುದು. ಭಾರತದಲ್ಲಿ ಮುದ್ರಣ ಕಲೆಯ ಪಿತಾಮಹನೀತ. ಉಗಿಬಂಡಿಯನ್ನು ಭಾರತಕ್ಕೆ ತಂದ ಮೊದಲ ಬ್ರಿಟೀಷ್ ಮನುಷ್ಯ. ಕುಷ್ಠರೋಗಿ ಆಸ್ಪತ್ರೆ ಈತನಿಂದಲೇ ಭಾರತದಲ್ಲಿ ಪ್ರಾರಂಭವಾಯಿತು. ಉಳಿತಾಯ ಯೋಜನೆಯ ಪರಿಕಲ್ಪನೆಯನ್ನು ಭಾರತಕ್ಕೆ ನೀಡಿದ ವ್ಯಕ್ತಿ ಈತ."[೪] ಹೀಗೆ ಭಾರತದಲ್ಲಿ ಈತ ೪೦ ವರ್ಷಗಳ ಸುದೀರ್ಘ ಸೇವೆಗೈದಿದ್ದಾನೆ. ಕನ್ನಡದ ಪ್ರಥಮ ಬೈಬಲ್ ಅನುವಾದಕನಾದ ಈತನನ್ನು ಕನ್ನಡನಾಡು ಮರೆಯುವಂತಿಲ್ಲ.

---

೧. ಕ.ಬಾ.ಮಿಶನ್ ರೆ.ಜೆ.ಎಂ.ಜೋಗುಳ, ಪು.೧೭೭

೨. ಭಾ.ಸಾ.ಸಂ.ಪಾ.ವಿ.ಕ.ಸೇವೆ, ಐ.ಮಾ.ಮುತ್ತಣ್ಣ, ಪು.೧೪೪

೩. Sowing Circle(Maguni) P.7

೪. ಅದೇ, ಪು.೭

ರೆ. ಜಾನ್ ಹ್ಯಾಂಡ್ಸ (Rev. JOHN HANDS)

೫-೧೨-೧೭೮೦ರಲ್ಲಿ ಇಂಗ್ಲೆಂಡಿನಲ್ಲಿ ಜನಿಸಿದ ಹ್ಯಾಂಡ್ಸ್ "ದಕ್ಷ ಮತಪ್ರಚಾರಕನು ಹೇಗೋ ಹಾಗೆ ವೈದ್ಯಕೀಯ ವಿದ್ಯೆಯಲ್ಲೂ ಪ್ರವೀಣನೆನಿಸಿದ್ದನು. ಈ ದೇಶಕ್ಕೆ ಬಂದಕೂಡಲೇ ತಮಿಳು, ತೆಲುಗು ಸಂಸ್ಕೃತ ಮತ್ತು ಪರ್ಶಿಯನ್ ಮುಂತಾದ ಭಾಷೆಗಳಲ್ಲಿ ಕುಶಲತೆಯನ್ನು ಪಡೆದನು".[೧] ತನ್ನ ತಾಯ್ನಾಡಿನಲ್ಲೆ ಕಲಿತವನಾಗಿದ್ದನು. ಭಾರತಕ್ಕೆ ಬಂದ ವರ್ಷದಿಂದಲೇ ಕನ್ನಡ ವ್ಯಾಕರಣ ಹಾಗೂ ಶಬ್ದಕೋಶಗಳನ್ನು ರಚಿಸತೊಡಗಿದನು. ಕರ್ನಾಟಕಕ್ಕೆ ಬಂದ ಮಿಶನರಿಗಳಲ್ಲಿ ಕನ್ನಡ ಸೇವೆ ಪ್ರಾರಂಭಿಸಿದ ಮೊದಲ ಮಿಶನರಿ ಈತನೇ. ಕನ್ನಡದ ಪ್ರಥಮ ಮುದ್ರಣ ಬೈಬಲ್ (N.T) ಈತನ ಪರಿಶ್ರಮದ ಫಲ.

ರೆ. ಜಿ.ಎಚ್. ವೀಗಲ್ (weigle)

೧-೭-೧೮೧೬ರಲ್ಲಿ ತ್ಸೆಲ್ ಎಂಬಲ್ಲಿ ಜನನ. ತಿಬಿಂಜನ್ ವಿಶ್ವವಿದ್ಯಾಲಯದಲ್ಲಿ (೧೮೩೫-೩೮) ವಿದ್ಯಾರ್ಥಿಯಾಗಿರುವಾಗ ಅರಬ್ಬಿ ಹಾಗೂ ಸಂಸ್ಕೃತಗಳನ್ನು ಅಭ್ಯಾಸಿಸಿದ್ದನು. "ಕ್ರಿ.ಶ.೧೮೪೬ರ ಸುಮಾರಿಗೆ ಲಂಡನ್ ಮಿಶನ್ನಿನ ಜಾನ್ ಗ್ಯಾರೆಟ್, ಭಗವದ್ಗೀತೆಯ ವಿವಿಧ ಭಾಷಾನುವಾದಗಳುಳ್ಳ ಹಾಗೂ ವ್ಯಾಖ್ಯೆ ಇರುವ ಆವೃತ್ತಿಯನ್ನು ಹೊರತರ ಬಯಿಸಿದಾಗ ವೀಗಲ್ ಅವನಿಗೆ ಸಲಹೆ ಇತ್ತುದಲ್ಲದೆ, ಗೀತೆಯ ಕನ್ನಡ ಅನುವಾದದ ತಿದ್ದುಗೆಯಲ್ಲಿ ಸಹಾಯ ಸಲ್ಲಿಸಿದ್ದಾನೆ."[೨] ಕನ್ನಡ ಭಾಷೆ ಹಾಗೂ ಸಾಹಿತ್ಯ ಕುರಿತು ಜರ್ಮನಿಯ ಪ್ರಸಿದ್ಧ ಪತ್ರಿಕೆ (ZDMG)ಯಲ್ಲಿ ಲೇಖನ ಮುದ್ರಿಸಿದ ಮೊಟ್ಟಮೊದಲಿಗನೀತ.

ಈತನ ಕುರಿತು ಮೋಗ್ಲಿಂಗ್ ಹೀಗೆ ಬರೆದಿದ್ದಾನೆ- "He seemed to take things into his mind as one puts food into one's mouth to digest at his ease. and then it was his own."[೩] ಸ್ವದೇಶದಿಂದ ಭಾರತಕ್ಕೆ ಬರುವಾಗ ತಾನು ಮುಂಬಾಯಿಯಲ್ಲಿ ಕಂಡ ಮುದ್ರಣಯಂತ್ರವನ್ನು ಸ್ಮರಿಸಿ, ಪುನಃ ಮುಂಬಯಿಗೆ ಹೋಗಿ ೧೮೪೨ರಲ್ಲಿ ಮುದ್ರಣಯಂತ್ರವನ್ನು ತಂದೆ ಬಿಟ್ಟನು. ಇದು ಮುಂದೆ ಭಾರತದಲ್ಲಿಯೇ ಶ್ರೇಷ್ಠ ಮುದ್ರಣಾಲಯವೆಂದು ೭೦-೮೦ ವರ್ಷ ಕಾಲ ಖ್ಯಾತಿಯನ್ನು ಪಡೆಯಿತು. ೧೮೩೪ರ ಈತನ ಬೈಬಲ್ ಆವೃತ್ತಿಯು ಮುಂದಿನ ಎಲ್ಲ ಆವೃತ್ತಿ (ಅಥವಾ ಪರಿಸ್ಕರಣ)ಗಳೀಗೆ ನಾಂದಿಯಾಗಿ ಪರಿಣಮಿಸಿದೆ.

ರೆ. ಜಾನ್ ರೀಡ್

ಕ್ರಿ.ಶ.೧೮೩೦ರಲ್ಲಿ ಭಾರತಕ್ಕೆ ಹಡಗಿನಲ್ಲಿ ಪ್ರಯಾಣಬೆಳೆಸಿದಾಗ ಜಾನ್ ಹ್ಯಾಂಡ್ಸನಿಂದ ಪಡೆದಿದ್ದ ಕನ್ನಡ ಸಾಹಿತ್ಯ ಕುರಿತು ಓದುತ್ತಲೇ ಕಾಲಕಳೆದನಂತೆ. ಜಾನ್ ಹ್ಯಾಂಡ್ಸನ ಜೊತೆ ಬಳ್ಳಾರಿಯಲ್ಲಿ ಇದ್ದುಕೊಂಡು ಆತನ ಇಂಗ್ಲೀಷ್ ಬರಹಗಳನ್ನು ಕನ್ನಡಕ್ಕೆ ಇಳಿಸುತ್ತಿದ್ದನು. ಕನ್ನಡ ಬೈಬಲ್

---

೧. ಭಾ.ಸಾ.ಸಂ.ಪಾ.ವಿ.ಕ.ಸೇವೆ, ಐ.ಮಾ.ಮುತ್ತಣ್ಣ, ಪು.೨೬೮

೨. ಕ.ಬಾ.ಮಿಶನ್ ರೆ.ಜೆ.ಎಂ.ಜೋಗುಳ, ಪು.೧೭೭

೩. ಅದೇ, ಪು.೭

ಪುಸ್ತಕಗಳಲ್ಲಿ ಈತನ ಅನುವಾದಗಳು ಶ್ರೇಷ್ಠ ಮಟ್ಟದಲ್ಲಿ ಹಲವಿವೆ. ಎಫೆಸಿಯನ್ ಹಾಗೂ ಪಿಲಿಪ್ಪಿಯನ್ ಭಾಗಗಳನ್ನು ಹಾಗೂ Song of Solomon and minor prophets ಎಂಬ ಕೃತಿ ರಚಿಸಿದ್ದಾನೆ. ಹ್ಯಾಂಡ್ಸನಿಗಿಂತ ಕನ್ನಡದಲ್ಲಿ ಹೆಚ್ಚು ಪಾಂಡಿತ್ಯ ಪಡೆದಿದ್ದ.

"ದೇಶೀಯ ಕ್ರೈಸ್ತ ಗುರುಗಳಾರೂ ಆ ಕಾಲಕ್ಕೆ ಇಷ್ಟು ವಿಸ್ತಾರವಾಗಿ, ವಿವರವಾಗಿ ಮತ್ತು ಉತ್ಕೃಷ್ಟವಾಗಿ ಕನ್ನಡವನ್ನು ಬರೆಯುವ ನೈಪುಣ್ಯವನ್ನು ತೋರಿಸಿದ್ದೇ ಇಲ್ಲ."[೧]

ರೆ. ವಿಲಿಯಂ ರೀವ್ (William Reeve)

"ಇವನು ಈ ದೇಶಕ್ಕೆ ಬಂದ ಉದ್ದೇಶವಾದರೋ ಬೈಬಲ್‌ನ್ನು ಕನ್ನಡದಲ್ಲಿ ಬರೆಯಬೇಕೆಂಬುದೇ ಆಗಿತ್ತು. ೧೮೨೭ರಲ್ಲಿ ಮದ್ರಾಸಿನ Fort st. George ಕಚೇರಿ ಹಾಗೂ ಭಾಷಾ ಶಾಲೆಯಲ್ಲಿ ಓರ್ವ ಪ್ರಮುಖ ಭಾಷಾ ವಿಶಾರದನಾಗಿ ದುಡಿದನು. ಈತನು ಕನ್ನಡ, ತಮಿಳು, ಓರಿಯಾ, ಬಂಗಾಳಿ ಮತ್ತು "ಸಂಸ್ಕೃತ ಇತ್ಯಾದಿ ಭಾಷೆಗಳಲ್ಲಿ ಪಾರಂಗತನಾಗಿದ್ದನು".[೨] "ರೀವ್ ನಿಸ್ಸಂಶಯವಾಗಿ ಭಾಷಾ ಕೋವಿದನು." ಈತನು ಹ್ಯಾಂಡ್ಸನ ಬೈಬಲ್ ಭಾಷಾಂತರವನ್ನು ಆದ್ಯಂತವಾಗಿ ತಿದ್ದಿದ್ದಾನೆ. ಈತನ 'ಮೋಶೆಯ(Moses) ಮೊದಲ ಕಾಂಡ' ಎಂಬ ಪುಸ್ತಕವನ್ನು ೧೮೪ (ಡೆಮ್ಮಿ) ಪುಟಗಳ ಹೊತ್ತಿಗೆಯಾಗಿ ಲಂಡನ್ ಮಿಶನ್ ಸೊಸೈಟಿಯವರ ಸಹಾಯದಿಂದ ಮದ್ರಾಸು ಕೇಂದ್ರವು ಪ್ರಕಟಿಸಿತು. ೧೮೩೦ ರಿಂದ ೧೮೩೪ರ ವರೆಗೆ ಬೈಬಲ್ ಭಾಷಾಂತರದ ಕಾರ್ಯದಲ್ಲಿ ತೊಡಗಿ ೧೨೦೦ ಡೆಮ್ಮಿ(Demy) ಪುಟಗಳಷ್ಟು ಕನ್ನಡ ಬೈಬಲ್ ಗ್ರಂಥ ಪ್ರಕಟಣೆಗೊಳ್ಳುವಲ್ಲಿ ಶ್ರಮಿಸಿರುವನು. ಈ ಧರ್ಮಗ್ರಂಥ ಅಂದಿನ ದೇಶೀಯ ಕ್ರೈಸ್ತರ ಕೈಗನ್ನಡಿಯಾಗಿ ಪರಿಣಮಿಸಿತ್ತು. ಈತನು ಕನ್ನಡ-ಇಂಗ್ಲೀಷ್ ಶಬ್ದಕೋಶವನ್ನು ರಚಿಸಿದುದಲ್ಲದೆ ಹಳೆಗನ್ನಡ ಕೋಶಗಳಾದ 'ಕರ್ನಾಟಕ ಶಬ್ದಮಂಜರಿ' ಚತುರಾಸ್ಯ ನಿಘಂಟು, ಕಬ್ಬಿಗರ ಕೈಪಿಡಿಗಳನ್ನು ಪರಿಶೀಲಿಸಿದ್ದಾನೆ.

ಹೆನ್ರಿ ಹೆಗ್ (HENRY HAIGH 1877-1910)

ಈತನು ವೆಸ್ಲಿಯನ್ ಮಿಶನ್ ಪಂಗಡಕ್ಕೆ ಸೇರಿದವನಾಗಿದ್ದನು. ಬೈಬಲ್ಲಿನ ಒಳಪುಟ್ಟಗಳ ಕುರಿತು ವಿಮರ್ಶೆ ಬರೆಯುವಲ್ಲಿ ಪ್ರಮುಖನೆನೆಸಿರುವನು. ಚರ್ಚುಗಳ ಸಂಸ್ಕಾರದ ಆಚರಣೆ ಕುರಿತು ಕೃತಿ ರಚಿಸಿರುವನು. ಕ್ರಿ.ಶ.೧೮೯೦ರಲ್ಲಿ ರಚಿತವಾದ ಬೈಬಲ್ಲಿನ ದ್ವಿತೀಯ ಪರಿಷ್ಕರಣ ಸಮಿತಿಯಲ್ಲಿ ಜೆ.ಎ.ಪೇನ್ಸನೊಂದಿಗೆ ಹೆಗ್ ವೆಸ್ಲಿಯನ್ ಪ್ರತಿನಿಧಿಯಾಗಿದ್ದನು. ಆ ಸಮಯದಲ್ಲಿ ಬಾಶೆಲ್ ಮಿಶನನ್ನಿನ ತಿಗ್ಲರನೊಂದಿಗೆ ಹೊಸ ಒಡಂಬಡಿಕೆಯ ಲೂಕ ಹಾಗೂ ಮಾರ್ಕ ಸುವಾರ್ತೆಗಳನ್ನು ಅನುವಾದಿಸಿದ್ದಾನೆ. ಸಮಿತಿ ಅಧ್ಯಕ್ಷನಾಗಿದ್ದ ಇ.ಲೆವಿಸ್ ತೀರಿಕೊಂಡ ಮೇಲೆ (೧೮೯೭) ಹೆಗ್ ಮುಂದಿನ ಆರು ವರ್ಷಗಳ

೧. ಭಾ.ಸಾ.ಸಂ.ಪಾ.ವಿ.ಕ.ಸೇವೆ, ಐ.ಮಾ.ಮುತ್ತಣ್ಣ, ಪು.೨೯೮

೨. ಅದೇ, ಪು.೨೭೧

ಕಾಲ ಅಧ್ಯಕ್ಷತೆ ವಹಿಸಿದನು. "ಹೆಗ್ ಬೋಧಕನ ಕೆಲಸದ ಫಲವಾಗಿ ಹಳೆಯ ಭಾಷಾಂತರಗಳಿಗಿಂತಲೂ ಬಹು ಉತ್ತಮವಾದ ಹೊಸ ಒಡಂಬಡಿಕೆಯು ಕನ್ನಡ ಭಾಷೆಯಲ್ಲಿ ಮುದ್ರಿಸಲ್ಪಟ್ಟಿತು. (ಮುಖ್ಯವಾಗಿ ಪತ್ರಿಕಾ ಭಾಗಗಳಲ್ಲಿ ಮೂಡಲ್ಪಟ್ಟಿರುವ ತಿದ್ದುಪಡಿಗಳು ಕಂಡುಬರುತ್ತವೆ.) ಇಂದು ಪ್ರಚಲಿತವಿರುವ ಕನ್ನಡ ಬೈಬಲ್‌ನಲ್ಲಿ ಹೆನ್ರಿಹೆಗ್ ನ ಪಾಲು ಉಂಟು. ಅಂದಿನ ಮಿಶನರಿಗಳು ಕನ್ನಡ ಭಾಷೆ ಹೊರತುಪಡಿಸಿ ಇತರ ಭಾರತೀಯ ಭಾಷೆಗಳಲ್ಲಿಯೂ ಪಾಂಡಿತ್ಯ ಪಡೆದವರಾಗಿದ್ದರು.

೫.೬. ಅನುವಾದ ಕಾರ್ಯದಲ್ಲಿ ಅವರಿಗಿದ್ದ ಅನುಭವ

ಭಾರತಕ್ಕೆ ಬಂದ ಮಿಶನರಿಗಳಲ್ಲಿ ಬೈಬಲ್ ಭಾಷಾಂತರಕ್ಕೆ ಕೈಹಾಕಿದ ಮೊದಲ ವ್ಯಕ್ತಿ ಮಿಲಿಯಂ ಕೇರಿ. ಈತನು ಸಂಸ್ಕೃತ ಬಂಗಾಲಿ, ಮರಾಠಿ, ಒರಿಯಾ, ನೇಪಾಳ, ಪಂಜಾಬ್, ತಮಿಳು, ಕನ್ನಡ ಮುಂತಾದ ಒಟ್ಟು ೩೪ ರಿಂದ ೪೦ ಭಾಷೆಗಳಲ್ಲಿ ಭಾಷಾಂತರದ ಬೈಬಲ್ ಆವೃತ್ತಿಗಳನ್ನು ಹೊರತಂದಿದ್ದಾನೆ. ಭಾಷಾಂತರ ಕಾರ್ಯದ ಪೂರ್ವದಲ್ಲಿ ಭಾಷೆ ಅಭ್ಯಸಿಸಿ. ಆಯಾ ಭಾಷಾ ವ್ಯಾಕರಣವನ್ನು ಮೊದಲು ರಚಿಸಿ ಭಾಷಾ ಹಿಡತವನ್ನು ಪಡೆಯುವಲ್ಲಿ ಯಶಸ್ಸು ಸಾಧಿಸಿದ್ದಾನೆ. ೧೮೦೯ರಲ್ಲಿ ಮುದ್ರಣಗೊಳ್ಳಬೇಕಾಗಿದ್ದ, ಈತನ ಕನ್ನಡ ಬೇಬಲ್ (ಹೊ.ಒ) ಆವೃತ್ತಿ ೧೮೨೩ರಲ್ಲಿ ಮುದ್ರಿಸಲಾಯಿತು. ಇಂತಹ ಅಪಾರ ವಿದ್ವತ್ತು ಹಾಗೂ ಭಾಷಾಂತರ ಅನುಭವ ಪಡೆದ ವಿಲಿಯಂ ಕೇರಿ ಮುಂದಿನ ಮಿಶನರಿಗಳಿಗೆ ಭಾಷಾಂತರ ಕಾರ್ಯದಲ್ಲಿ ಗುರುವಾಗಿ ಪರಿಣಮಿಸಿರುವನು.

ಕನ್ನಡ ಬೈಬಲ್ ಇತಿಹಾಸವನ್ನು ಗಮನಿಸಿದಾಗ ಬಳ್ಳಾರಿಯಲ್ಲಿದ್ದುಕೊಂಡು ಕನ್ನಡ ಬೈಬಲ್ ಭಾಷಾಂತರಕ್ಕೆ ಕೈಹಾಕಿದ. ರೆ.ಜಾನ್ ಹ್ಯಾಂಡ್ಸ್ ಅನುವಾದದ ಅನುಭವವನ್ನು ಪ್ರಪ್ರಥಮವಾಗಿ ಹೊಂದಿದ ಆದ್ಯ ಮಿಶನರಿ ಎಂದು ಹೇಳಬಹುದು. ವ್ಯಾಕರಣ, ಶಬ್ದಕೋಶಗಳ ಅಭ್ಯಾಸದಿಂದ ಅನುಭವ ಪಡೆಯುತ್ತ ಬೈಬಲ್ ಭಾಷಾಂತರಕ್ಕೆ ಕೈಹಾಕಿ ಯಶಸ್ಸನ್ನು ಸಾಧಿಸಿದ. ಈತನ ನಂತರ ಪ್ರಮುಖವಾಗಿ ಭಾಷಾಂತರ ಕಾರ್ಯದಲ್ಲಿ ಸೇವೆ ಸಲ್ಲಿಸಿದ ಎಲ್ಲ ಮಿಶನರಿಗಳು ಹ್ಯಾಂಡ್ಸನ ಅನುಭವವನ್ನು ಪಡೆದೆ ಸಾಗಿದವರಾಗಿರುವರು. ಹ್ಯಾಂಡ್ಸನಿಂದ ಇಂಗ್ಲೆಂಡಿನಲ್ಲಿ ಭಾಷೆಯ ಪರಿಚಯವಾಗಿ ಭಾರತಕ್ಕೆ ಬರುವಾಗ ಹ್ಯಾಂಡ್ಸನ ಶಬ್ದಕೋಶ ಹಾಗೂ ಆತನ ಟಿಪ್ಪಣಿಗಳನ್ನು ಅಭ್ಯಾಸಿಸುತ್ತಾಲೇ ಬಂದ ಮಿಶನರಿಗಳು ಕರ್ನಾಟಕದಲ್ಲಿ ಸೇವೆಸಲ್ಲಿಸಿದ್ದಾರೆ.

ಪರದೇಸದಲ್ಲಿಯೇ ದೈವಜ್ಞಾನ ಶಾಸ್ತ್ರ ಪದವಿಧರರಾಗಿ ಗ್ರೀಕ್, ಹಿಬ್ರೂ ಭಾಷೆಗಳ ಭಾಷಾಂಗಳ ಅನುಭವವನ್ನು ಪಡೆದವರಾಗಿದ್ದು, ನಂತರ ಕರ್ನಾಟಕದಲ್ಲಿದ್ದು, ಅನೇಕ ಬೈಬಲ್ ಆವೃತ್ತಿ ಹೊರತರಲು ಅಪಾರ ಅನುಭವ ಗಳಿಸಿದವರಾಗಿದ್ದಾರೆಂದು ಕಂಡುಬರುತ್ತದೆ.

ರೆ.ಎಫ್.ಕಿಟಲ್ ಭಾರತಕ್ಕೆ ಬಂದು ಕನ್ನಡ ಭಾಷೆಯ ಪ್ರೌಢಿಮೆಗಳಿಸಿದ ನಂತರ ಬೈಬಲ್ ಭಾಷಾಂತರದಲ್ಲಿ ಇನ್ನೂ ಸೂಕ್ತ ಹಾಗೂ ಸ್ಪಷ್ಟತೆಯೆಡೆಗೆ ಹೆಚ್ಚಿನ ಗಮನ ಹರಿಸಲಾಯಿತು. ಪ್ರತಿಯೊಂದು

ಶಬ್ದವನ್ನು ಮೂಲದ ಭಾಷೆಯೊಂದಿಗೆ ಪರಿಶೀಲಿಸುವ, ವಿಶ್ಲೇಷಿಸುವ ಹಾಗೂ ಒಪ್ಪಿಕೊಳ್ಳುವ ಕ್ರಮ ಬೆಳೆದು ಬಂತು.

ಅಂದಿನ ಮಿಶನರಿಗಳು ಅಪಾರವಾದ ಭಾಷಾಂತರದ ಅನುಭವದ ಫಲವಾಗಿ ಕನ್ನಡ ಸಾಹಿತ್ಯದಲ್ಲಿ ಭಾಷಾಂತರ ಪರಂಪರೆಯೊಂದು ತೆರೆದು ನಿಂತಿತೆಂಬುದು ಸ್ಪಷ್ಟ.

೫.೭. ಅನುವಾದದಲ್ಲಿ ಸ್ಥಳೀಯ ವಿದ್ವಾಂಸರ ನೆರವು

ಶ್ರೀನಿವಾಸ ಹಾವನೂರರ 'ಹೊಸಗನ್ನಡ ಅರುಣೋದಯ'ದಲ್ಲಿ, "ಅಂತೆಯೇ ಬೈಬಲ್ಲಿನ ಯಾವುದೇ ಅನುವಾದದ ಪುಸ್ತಕದಲ್ಲಿ ಹಿಂದೂ ಮುನಿಶಿಯ ಇಲ್ಲವೇ ವ್ಯಾಕರಣ ಪಂಡಿತನ ಸಹಾಯ ಪಡೆದ ಉಲ್ಲೇಖವು ದೊರೆಯುವುದಿಲ್ಲ"[೧]ಎಂದಿದ್ದಾರೆ. ಆದುದರಿಂದ ಬೈಬಲ್ ಅನುವಾದಕಾರ್ಯದಲ್ಲಿ ಸ್ಥಳೀಯ ಅಥವಾ ಕ್ರೈಸ್ತೇತರ ವಿದ್ವಾಂಸರ ನೆರವು ಇದೆಯೇ? ಇಲ್ಲವೋ? ಎಂಬ ಬಗ್ಗೆ ಪರಿಶೀಲಿಸುವುದು ಅಗತ್ಯವೆಂದೆನಿಸುವುದು.

ಜೆ.ಎಸ್ .ಎಂ.ಹೂಪರ್ (First General Secrelary of the British and foreign Bible society in India and first General Sccretary of the Bibal society of India and ceylon) ಬರೆದ "Bibla transtation in Indian pakistan and ceylon" ಎಂಬ ಪುಸ್ತಕದಲ್ಲಿ ಸ್ಥಳೀಯ ವಿದ್ವಾಂಸರ ನೆರವು ಪಡೆದ ಬಗ್ಗೆ ಉಲ್ಲೇಖ ಹೀಗಿದೆ.

"The college included a Department for Biblical traulation, and pandits from many parts of India were attracted to calculta by liberal pay to assist in this work."[೨] ಸ್ಥಳೀಯ ಪಂಡಿತರು ಮುಕ್ತಧನದ ಆಧಾರದ ಮೇಲೆ ಬೈಬಲ್ ಭಾಷಾಂತರ ಕಾರ್ಯಕ್ಕೆ ನಿಯೋಜಿಸಲಾಗಿತ್ತು ಎಂದು ಸ್ಪಷ್ಟವಾಗಿ ತಿಳಿಸಿದರೂ ಯಾರೊಬ್ಬರ ಹೆಸರು ಸೂಚಿತಗೊಂಡಿಲ್ಲ.

೧೮೫೮ರ ಪ್ರೊಟೆಸ್ಟಂಟ್ ಮೀಶನರಿ ಸಮ್ಮೇಳನದಲ್ಲಿ ಬೈಬಲ್ ಅನುವಾದದ ಸಮಸ್ಯೆ ಕುರಿತು ಚರ್ಚೆ ನಡೆಯುವಾಗ ಕಾಲಿನ್ ಕ್ಯಾಂಬೆಲ್ ಹೇಳಿದ ಮಾತು "ಬೈಬಲ್ ಅನುವಾದ ಕಾರ್ಯದಲ್ಲಿ ಹಿಂದೂ ಪಂಡಿತರ ನೆರವನ್ನು ಸಹ ಪಡೆಯಬಾರದು ಎಂದು ಸೂಚಿಸಿದನು."[೩] ಇದನ್ನು ಗಮನಿಸಿದರೆ, ಕಾಲಿನ್ ಕ್ಯಾಂಬೆಲ್ ಹೀಗೆ ಹೇಳಲು ಕಾರಣವೇನು? ಈ ಮೊದಲು ನೆರವು ಪಡೆದುದಾಗಿತ್ತೆ? ಎಂಬ ಸಂಶಯದ ಪ್ರಶ್ನೆ ಸಹಜ. ಜಾನ್ ಹ್ಯಾಂಡ್ಸ್ ಭಾರತಕ್ಕೆ ಬಂದ ಭಾಷಾಂತರಕ್ಕೆ ಕೈಹಾಕಿದ ಮೊದಲ ಪ್ರೊಟೆಸ್ಟಂಟ್ ಮಿಶನರಿ. ಈತನು "ಕನ್ನಡ ಭಾಷೆ ಕಲಿಯುವುದಕ್ಕಾಗಿ ಓರ್ವ ಬ್ರಾಹ್ಮಣ ಪಂಡಿತರನ್ನು ನೇಮಿಸಿದ್ದರು."[೪] ಎಂದು ತಿಳಿದುಬರುವುದು.

೧. ಹೊ.ಅ.ಶ್ರೀ.ಹಾ., ಪು.೪೩೬

೨. B.T.I.I.P. & Ceylon, J.S.M., Hooper, Pp.15

೩. ಹೊ.ಅ.ಶ್ರೀ.ಹಾ., ಪು.೪೨೩

೪. ಘನ ಜಾನ್‌ಹ್ಯಾಂಡ್ಸ್, ಸಭಾಪತಿ ಎನ್, ಪು.೪

ಹೀಗೆ ತಾವು ಕನ್ನಡ ಭಾಷೆ ಕಲಿಯಲು ಸ್ಥಳೀಯರನ್ನು ನೇಮಿಸುತ್ತಿದ್ದರೆಂದ ಮೇಲೆ, ಈ ಮಿಶನರಿಗಳು ಬರೆದ ಕನ್ನಡ ಸರಿಯಾದುದೆಂದು ಇವರಿಗೆ ತಿಳಿಸಿಕೊಟ್ಟವರು ಯಾರು? ಇವರು ಸಹಾಯ ಪಡೆದ ಪಂಡಿತರಿಗೆ ತೋರಿಸಿ ಮೆಚ್ಚುಗೆಯನ್ನು ಪಡೆದಿರಲು ಸಾಕು! ಆ ಸಮಯದಲ್ಲಿ ಅವರೊಂದಿಗೆ ಇದ್ದಂತಹ ಪಂಡಿತರು ಅನುವಾದಕ್ಕೆ ಸಹಕರಿಸಬಹುದು. ಆದರೆ ಅಂಥವರ ಹೆಸರು ಗೌಣವಾಗಿ, ಕೇವಲ ಮಿಶನರಿಗಳ ಹೆಸರು ಬೆಳಕಿಗೆ ಬಂದಂತಿದೆ.

''ಕೇರಿಯೊಂದಿಗೆ ಬೈಬಲ್ ಭಾಷಾಂತರದಲ್ಲಿ ಸಹಚರ್ಯನಾಗಿದ್ದ 'ವಾರ್ಡನು' ೧೮೭೧ರಲ್ಲಿ ತನ್ನ ಕಕ್ಕನ ಮಗನಿಗೆ ಬರೆದ ಒಂದು ಕಾಗದದಲ್ಲಿ ಅಲ್ಲಿನ ವಾತಾವರಣವನ್ನು ಈ ರೀತಿ ಬಣ್ಣಿಸಿದ್ದಾನೆ. ನೀನು ನನ್ನ ವರಾಂಡವನ್ನು ಪ್ರವೇಶಿಸಿದಾಗ, ಮೊತ್ತ ಮೊದಲಿಗೆ ಒಂದು ಚಿಕ್ಕ ಕೋಣೆಯಲ್ಲಿ ಬಿಳೀ ಬಟ್ಟೆಯನ್ನು ಧರಿಸಿಕೊಂಡು ಓದುತ್ತ ಇಲ್ಲವೇ ಬರೆಯುತ್ತ ಕೂತಿರುವ ನನ್ನನ್ನೇ ನೋಡುವಿ. ಅನಂತರ ನನ್ನ ಎದುರಿನಲ್ಲಿ ಇರುವ ಸುಮಾರು ೧೭೦ ಅಡಿ ಉದ್ದವಾದ ಒಂದು ಕಾರ್ಯಾಲಯದಲ್ಲಿ, ಭಾರತೀಯರನೇಕರು ಸತ್ಯವೇದವನ್ನು ಬೇರೆ ಬೇರೆ ಭಾಷೆಗಳಿಗೆ ತರ್ಜುಮೆ ಮಾಡುತ್ತಲೋ, ಕರಡಚ್ಚಿನ ಕಾಗದ (Proof Sheets ಗಳನ್ನು ತಿದ್ದುತ್ತಲೋ, ಕೂತಿರುವುದನ್ನು ಕಾಣುವಿ. ಅಲ್ಲದೆ ಅಲ್ಲಿ ಪಾರಸಿ, ನಾಗರಿ, ತೆಲಗು, ಪಂಜಾಬಿ, ಮರಾಠಿ, ಚೀನೀ, ಒರಿಯಾ, ಬ್ರಹ್ಮೀ, ಕನ್ನಡ, ಗ್ರೀಕ್ ಗಳಿಂದ ತುಂಬಿರುವ ಮರದ ಕೊಶಗಳನ್ನು ನೀನು ಕಾಣುವಿ. ಮತ್ತಲ್ಲಿ ಹಿಂದೂ ಮುಸಲ್ಮಾನ ಮತ್ತು ಭಾರತೀಯ ಕ್ರೈಸ್ತರು ಅಕ್ಷರ ಮೊಳೆಗಳನ್ನು ಜೋಡಿಸುತ್ತಿರುವುದೂ, ತಿದ್ದುವದೂ, ತಿರುಗಿ ಕೋಶಕ್ಕೆ ಹಾಕುತ್ತಿರುವುದೂ ನಿನ್ನ ಕಣ್ಣಿಗೆ ಬೀಳುವುದು. ಅನಂತರ ಬೇರೆ ಬೇರೆ ಭಾಷೆಗಳಲ್ಲಿ ಮುದ್ರಿತವಾದ ಸತ್ಯವೇದದ ಕಾಗದದಗಳನ್ನು ಒಂದೆಡೆ ಹಾಕುತ್ತಿರುವ ನಾಲ್ವರನ್ನೂ ನೀನು ಕಾಣುವಿ, ಇನ್ನೂ ಕೆಲವರು ಆ ಕಾಗದಗಳನ್ನು ಸರಿಯಾಗಿ ಮಡಿಸಿ ದೊಡ್ಡಸಂಗ್ರಹಾಯಲಕ್ಕೆ ಕಳುಹಿಸುತ್ತಿರುವುದು ನಿನ್ನ ಕಣ್ಣಿಗೆ ಬೀಳುವುದು. ಈ ಸಂಗ್ರಹಾಲಯದಲ್ಲಿ ಆರು ಜನ ಮಹಮ್ಮದಿಯರು ಕೂತುಕೊಂಡು ಅವುಗಳನ್ನು ಕೂಡಿಸಿ ಹೊಲೆದು ಪುಸ್ತಕ ಕಟ್ಟುತ್ತಿರುವುದು ಕಾಣುವುದು. ಈ ಕಾರ್ಯಾಲಯದಾಚೆ ಹೋದರೆ ಅಲ್ಲಿ ಬೇರೆ ಬೇರೆ ಭಾಷೆಯ ಅಕ್ಷರ ಮೊಳೆಗಳನ್ನು ತಯಾರಿಸುತ್ತಿರುವವರು ಕಾಣುವರು. ಇನ್ನೂ ಕೆಲವರು ಮುದ್ರಣಕ್ಕೆ ಬೇಕಾದ ಶಾಯಿ(Ink) ತಯಾರಿಸುತ್ತಿರುವುದು ಕಾಣುವುದು. ಅಲ್ಲಿ ನಮಗೆ ಬೇಕಾಗುವ ಕಾಗದ ತಯಾರಾಗುತ್ತಿರುವುದನ್ನು ನೋಡುವಿ. ನಮ್ಮ ಕೆಲಸಕ್ಕೆ ಬೇಕಾಗುವ ಕಾಗದವನ್ನು ನಾವೇ ಅಲ್ಲಿ ತಯಾರಿಸಿಕೊಳ್ಳುತ್ತೇವೆ.'' ಈ ಪತ್ರದಿಂದ ಅಂದು ನಡೆಯುವ ಭಾಷಾಂತರದ ಚಿತ್ರಣ ಮೂಡಿ ಬರುವುದು. ಅಲ್ಲದೆ ಅನೇಕ ಮಾಹಿತಿ ದೊರೆಯುವಲ್ಲಿ ಸಂಶಯವಿಲ್ಲ.*

* ಈ ಕುರಿತು ಮಾಹಿತಿ ಶ್ರೀ ಎಸ್.ಎ.ಮಾರಾರವರು ಬರೆದ ಭಾರತೀಯ ಕ್ರೈಸ್ತ ಸಭಾ ಚರಿತ್ರೆಯಲ್ಲಿ ಪು.೨೨೮ರಿಂದ ಸಿಕ್ಕುವುದು

ಈ ಮೇಲಿನ ಅಂಶಗಳ ಪ್ರಕಾರ ಕನ್ನಡ ಬೈಬಲ್ ಅನುವಾದ ಕಾರ್ಯದಲ್ಲಿ ದೇಶೀಯ ಪಂಡಿತರ ಸಹಾಯ ಇಲ್ಲವೇ ಇಲ್ಲ ಎಂಬ ನಿಲುವು ಸ್ಪಷ್ಟವಲ್ಲ. ಇತ್ತೀಚಿನ ೧೯೬೬-೯೭ರ ರೋಮನ್ ಕೆಥೊಲಿಕ್ ಸಮಗ್ರ ಬೈಬಲ್ ಆಕ್ಸಲರಿ ಸೊಸೈಟಿ ಬೆಂಗಳೂರ ಇವರ ಆಶ್ರಯದಲ್ಲಿ ಭಾಷಾಂತರ ನಡೆಯುತ್ತಿದ್ದಾಗ ಬಿಶೋಪ ಮೈಕಲಪ್ಪರವರ ಅಧ್ಯಕ್ಷತೆಯಲ್ಲಿ ರೆ.ಅಂತಪ್ಪ ರೆ.ಆನಂದಮೂರ್ತಿ, ರೆ.ಜಯವಂತ ಜೋಗುಳ, ಡಾ. ಲೀಲಾವತಿದಾಸ್ ಹಾಗೂ ಶ್ರೀ. ಡಿ.ಟಿ.ಪುನೀತ ಇವರುಗಳು ಭಾಷಾಂತರ ಸಮಿತಿ ಸದಸ್ಯರಿದ್ದು ಭಾಷಾಂತರಗೊಳಿಸಿದರೂ. ನಂತರ ಸಾಹಿತ್ಯಿಕ ದೃಷ್ಟಿಕೋನದ ಪರಿಶೀಲನೆಗೆ ವೆಂಕಟಸುಬ್ಬಯ್ಯರವರಿಗೆ ತಲುಪಿತು. ಅವರು ಗೌರವ ಹಣದ ಮೇಲೆ ನಿಯೋಜಿತಗೊಂಡವರಾಗಿದ್ದರು. ಹೀಗೆ ಸ್ಥಳೀಯ ವಿದ್ವಾಂಸರ ನೆರವಿನ ಪರಿಪಾಠ ಹಿಂದೆ ಇತ್ತು ಎಂಬುದಕ್ಕೆ ಹೆನ್ರಿಹೆಗ್ ಭಾಷಾಂತರ ಸಮಿತಿಯ ಅಧ್ಯಕ್ಷನಿದ್ದುಕೊಂಡು ಕಾರ್ಯನಿರ್ವಹಿಸುತ್ತಿದ್ದಾಗ, ಹೊ.ಒ.ಯ 'ಯಾಕೋಬನ ಪತ್ರಿಕೆ' ಎಂಬ ಗ್ರಂಥ ಮುದ್ರಿಸಿದ (ಆ ಕೃತಿಯ ಪ್ರಕಟಣೆಗೆ ಸಂಬಂಧಿಸಿದ ಇನ್ನೊಂದು ವಿಶಿಷ್ಟ ಅಂಶವೆಂದರೆ, ಅದರ ಹಸ್ತಪ್ರತಿಯನ್ನು ಪಿ.ಕರಿಬಸವಶಾಸ್ತ್ರೀಗೆ ಒಪ್ಪಿಸಿ ಭಾಷೆಯ ದೃಷ್ಟಿಯಿಂದ ತಿದ್ದಿಸಿಕೊಂಡಿದ್ದು, ತಮ್ಮ ಕೃತಿಗಳು ಬಹುಜನ ಗ್ರಾಹ್ಯವಾಗಬೇಕೆನ್ನುವ ಪ್ರಜ್ಞೆ ಕ್ರೈಸ್ತ ಲೇಖಕರಲ್ಲಿ ಜಾಗೃತವಾಗಿತ್ತೆನ್ನಬಹುದು.

೫.೮. ಅನುವಾದ ಕಾರ್ಯದಲ್ಲಿ ಉಂಟಾದ ಸಮಸ್ಯೆ-ತಿದ್ದುಪಡಿ, ಇತಿ-ಮಿತಿಗಳು

ಪ್ರಾರಂಭದ ಅನುವಾದಗಳ ಆವೃತ್ತಿಗಳನ್ನು ಗಮನಿಸಿದಾಗ ಕಂಡುಬರುವ ಅಂಶಗಳೇನೆಂದರೆ, ಹೊಸದಾಗಿ ಕಲಿತ ಭಾಷೆಯಲ್ಲಿ ಒಬ್ಬ ವ್ಯಕ್ತಿ ಸಾಹಿತ್ಯ ಕೆಲಸ ಮಾಡಿದರೆ, ಕಂಡುಬರುವ ದೋಷಗಳು ಇಲ್ಲಿ ಸರ್ವೇಸಾಮಾನ್ಯ. ವಿಲಿಯಂ ಕೇರಿಯ ಅನುವಾದದಲ್ಲಿ ವಾಕ್ಯ, ವ್ಯಾಕರಣ ಕಾಲಗಳ ದೋಷ ಮೇಲುನೋಟಕ್ಕೆ ಕಾಣಸಿಗುತವೆ. ತದನಂತರದ ದಿನಗಳಲ್ಲಿ ಇದರ ದೋಷ ನಿವಾರಿಸಲು ತಿದ್ದುಪಡಿ ಅವಶ್ಯಕತೆ ತೋರಿ ಬಂದದ್ದು ಸಹಜ. ಈತನಿಗಿಂತ ಭಾಷೆಯಲ್ಲಿ ಸುಧಾರಿಸಿದ ವ್ಯಕ್ತಿ ಜಾನ್ ಹ್ಯಾಂಡ್ಸ್. ಈತನು ಭಾಷಾಂತರಿಸಿದ್ದ ಆವೃತ್ತಿ ಬಹಳ ವರ್ಷಗಳ ಕಾಲ ಕ್ರೈಸ್ತ ಬಾಂಧವರಿಗೆ ಶ್ರೇಷ್ಠವೆನಿಸಿತ್ತು. ಗದ್ಯವನ್ನು ಹೀಗೆಯೇ ಬರೆಯಬೇಕೆಂಬ ಆ ಕಾಲದಲ್ಲಿ ಮಿಶನರಿಗಳ ಗದ್ಯ ಹಂಬೆಗಾಲಿಡುತ್ತ ಹೊಸ್ತಿಲು ದಾಟಿ ಹೊಸಗನ್ನಡ ಅರುಣೋದಯ ಕಂಡದ್ದು ಹೀಗೆ. ಹೊಸ ಒಡಂಬಡಿಕೆಯ ಮೊದಲು ಪುಸ್ತಕ ಮತ್ತಾಯ(Mathew) ಎಂಬ ಸುವಾರ್ತೆಯ ಉದಾಹರಣೆಯನ್ನು ನೋಡಬಹುದು.(Mathew ೧:೨೦)

"While he was thinking about this. an angle of the Lord appeared to him in a dream and said, "Joseph. deseendant of David, do not be afraid to take mary to be your wife. For it is by the Holy sprit that She has conceived."[೧]

೧. Good News Bible (NT) Pp.4

“ಯಿಪ್ಪಗಳಂನ ಕುರಿತು ಆಲೋಚನೆ ಮಾಡುತ್ತಿರುವಾಗ ಯಿಗೋಕರ್ತನ ದೂತನು ಸ್ವಪ್ನದಲ್ಲಿ ಅವನಿಗೆ ಕಾಣಿಸಿಬಿಟ್ಟು ಅವನ ಸಂಗಡ ಡಾವಿದನಮಗನಾದ ಯೋಸೇಫನೇನಿನ ಹೆಂಡತಿಯಾದ ಮರಿಯಾಳಂನಸು ಗ್ರಹಿಸ ಭಯುಪಡಬೇಡ. ಯೇನೆಂದರೆ ಆಕೆ ಗರ್ಭಿಧರಿಸಲ್ಪಟ್ಟಿದ್ದು ಶುದ್ಧಾತ್ಮ ನಿಂದುಂಟಾಗಿದೆ.”

“ಆದರೆ ಯಿದಕ್ಕೊಸ್ಕರವಾಗಿ ಆಲೋಚನೆ ಮಾಡುತ್ತಿರುವಾಗಲು ಯಿದೋ ದೇವರ ದೂತನು ಸ್ವಪ್ನದಲ್ಲಿ ಅವನಿಗೆ ಕಾಣೆಸಲ್ಪಟ್ಟು ಹೇಳಿದ್ದೇನೆಂದರೆ ದಾವೀದನ ಮಗನಾದ ಯೊಶಫೇವಿನ ಹೆಂಡತಿ ಮರಿಯಾಂನ ತಕ್ಕೊಳ್ಳ ಭಯಪಡಬ್ಯಾಡ ಯೆನೆಂದರೆ ಆಕೆ ಪರಿಶುದ್ಧಾತ್ಮನಿಂದ ಗರ್ಭವಂಶ ಧರಿಸಿದ್ದಾಳೆ.” (೧೮೨೦)

“ಅವನು ಇವುಗಳನ್ನು ಆಲೋಚಿಸುತ್ತಿರುವಾಗ, ಇಗೋ, ಕರ್ತನ ದೂತನು ಸ್ವಪ್ನದಲ್ಲಿ ಅವನಿಗೆ ಪ್ರತ್ಯಕ್ಷನಾಗಿ, ದಾವಿದನ ಮಗನಾದ ಯೋಸೆಫನೇ, ನಿನ್ನ ಹೆಂಡತಿಯಾದ ಮರಿಯಳನ್ನು ಅಂಗೀಕರಿಸುವುದಕ್ಕೆ ಭಯಪಡಬೇಡ ಯಾಕೆಂದರೆ ಅವಳಲ್ಲಿ ಉಂಟಾದದ್ದು ಪರಿಶುದ್ಧಾತ್ಮದಿಂದಾಗಿದೆ.”(೧೮೫೮)(೧೮೬೫)

“ಅವನು ಇವುಗಳನ್ನು ಆಲೋಚಿಸುತ್ತಿರುವಾಗ, ಇಗೋ ಕರ್ತನ ದೂತನು ಅವನಿಗೆ ಕನಸಿನಲ್ಲಿ ಕಾಣಸಿಕೊಂಡು -ಎಲೈ ಯೋಸೇಫನೇ, ದಾವೀದನ ವಂಶದವನೆ ನಿನ್ನ ಹೆಂಡತಿಯಾದ ಮರಿಯಳನ್ನು ಸೇರಿಸಿಕೊಳ್ಳುವುದಕ್ಕೆ ಅಂಜಬೇಡ, ಆಕೆಯ ಗರ್ಭವು ಪವಿತ್ರಾತ್ಮದಿಂದಲೇ ಆದದ್ದು.”(೧೯೦೧)

“ಆತನು ಈ ಕುರಿತು ಆಲೋಚಿಸುತ್ತಿದ್ದಂತೆ ದೇವದೂತನು ಕನಸಿನಲ್ಲಿ ಕಾಣಿಸಿಕೊಂಡು, “ದಾವೀದ ವಂಶದ ಜೊಸೆಫನೇ, ಮರಿಯಳನ್ನು ನಿನ್ನ ಪತ್ನಿಯನ್ನಾಗಿ ಸ್ವೀಕರಿಸಲು ಅಂಜಬೇಡ. ಆಕೆ ಗರ್ಭಧರಿಸಿರುವುದು ಪವಿತ್ರಾತ್ಮರ ಪ್ರಭಾವದಿಂದಲೇ.”(೧೯೭೨-೯೩ RC)

“ಯೂಸೇಫನು ಹೀಗೆ ಆಲೋಚಿಸಿಕೊಂಡ ನಂತರ ಪ್ರಭುವಿನ ದೂತನು ಯೋಸೇಫನಿಗೆ ಕನಸಿನಲ್ಲಿ ಕಾಣಿಸಿಕೊಂಡನು. ಆ ದೂತನು “ದಾವೀದನ ಮಗನಾದ ಯೊಸೇಫನೇ ಮರಿಯಳನ್ನು ನಿನ್ನ ಹೆಂಡತಿಯಾಗಿ ಸ್ವೀಕರಿಸಲು ಭಯಪಡಬೇಡ. ಆಕೆ ಪವಿತ್ರಾತ್ಮನಿಂದ ಗರ್ಭಿಣಿಯಾಗಿದ್ದಾಳೆ.”(೧೯೯೨ WBTC)

೧೮೨೦ಂಕ್ಕಿಂತ ಮೊದಲಿನ ಆವೃತ್ತಿ ಇದಾಗಿರಬಹುದು. ಈಗ ಲಭ್ಯ ಇರುವ ಈ ಆವೃತ್ತಿ ಅಪೂರ್ಣಕೃತಿ.*[1] ತೆಲಗು ಅಕ್ಷರಗಳನ್ನು ಹೋಲುವ ಆವೃತ್ತಿ ವಿಲಿಯಂ ಕೇರಿಯ ಆವೃತ್ತಿಯಾಗಿರುವುದರಿಂದ ಇದಕ್ಕೆ ಮೂಲ ಸೆರಾಂಪುರದಲ್ಲಿ ಮುದ್ರಿತವಾದ ಆವೃತ್ತಿಯಾಗಿರಬಹುದು. ಮೇಲಿನ ಉದಾಹರಣೆಯಲ್ಲಿ ಎರಡು ಪಾಠಗಳಿರಬಹುದೆಂದು ಕಂಡುಬರುತ್ತದೆ. ಒಂದು ‘ಅವಳು ಗರ್ಭಧರಿಸಿದ್ದು’, ಎಂದು ಹೇಳಿದರೆ

*1 ಇದು ಮಂಗಳೂರು ದೈವಜ್ಞಾನಶಾಸ್ತ್ರ ಕಾಲೇಜು ಬಲ್ಮಠದ ಗ್ರಂಥಾಲಯದಲ್ಲಿದೆ.

ಇನ್ನೊಂದು ಪಾಠ 'ಅವಳಲ್ಲಿ ಉಂಟಾದದ್ದು' ಎಂದಿದೆ ಇಲ್ಲಿ ಅವಳಲ್ಲಿ ಉಂಟಾದದ್ದು ಏನು ಎಂದು ಸ್ಪಷ್ಟ ಹೇಳಿಕೆ ಇಲ್ಲ. ಇದೇ ೧೮೭೭ರ ಆವೃತ್ತಿಯಲ್ಲಿ*[1] ಮುಂದುವರೆದಿದೆ.

"೧೮೨೦ನೇ ವರ್ಷದ ಅನುವಾದದಲ್ಲಿ ಶಬ್ದಗಳನ್ನು ಬಿಡಿಸಿಲ್ಲ. ಪೂರ್ಣಚಿಹ್ನೆಯನ್ನು ಸಹಿತ ಕೊಟ್ಟಿಲ್ಲ. ಅಕ್ಷರಿಕೆಗಳ ತಪ್ಪುಗಳು ಇವೆ. ೧೮೬೫ರ ಅನುವಾದದಲ್ಲಿ ಇದನ್ನು ಸರಿಪಡಿಸಲಾಗಿದೆ. ಮತ್ತು ವಾಕ್ಯರಚನೆಯು ತಕ್ಕಮಟ್ಟಿಗೆ ಸಮರ್ಪಕವಾಗಿದೆ. ಆದರೆ ಮೂಲವನ್ನು ಕಟ್ಟು-ನಿಟ್ಟಾಗಿ ಅನುಸರಿಸುವ ಪ್ರವೃತ್ತಿಯು ಕಂಡುಬರುತ್ತದೆ. ಕನ್ನಡಕ್ಕೆ ಸಹಜವಲ್ಲದ ಕರ್ಮಣಿ ಪ್ರಯೋಗವು ಎದ್ದು ತೋರುತ್ತದೆ. ೧೯೦೧ನೇ ಆವೃತ್ತಿಯಲ್ಲಿ ಕರ್ಮಣಿ ಪ್ರಯೋಗವನ್ನು ಬುದ್ಧಿಪೂರ್ವಕವಾಗಿ ಬಿಟ್ಟುಕೊಟ್ಟಿದ್ದನ್ನು ವಾಕ್ಯ ವಾಕ್ಯಗಳನ್ನು ಸರಿಯಾಗಿ ಹೊಂದಿಸಿದ್ದರಿಂದ ನಿರೂಪಣೆಯು ಸರಾಗವಾಗಿದ್ದನ್ನೂ ಗಮನಿಸಬೇಕು."*[2]

೧೯೩೨ರ ನಂತರದ ಆವೃತ್ತಿಗಳು ಓದುಗನಿಗೆ ಇನ್ನಷ್ಟು ಸ್ಪಷ್ಟತೆಯನ್ನು ಕಲ್ಪಿಸುವ ಉದ್ದೇಶದ ಕಡೆಗೆ ಸಾಗಿರುವುದು ಕಂಡುಬರುತ್ತದೆ.

ಮೇಲಿನ ಉದಾಹರಣೆಯಲ್ಲಿ ಯೊಶೇಫ ಎಂಬ ಹೆಸರು ಕೆಥೋಲಿಕ ಆವೃತ್ತಿಯಲ್ಲಿ ಜೊಶೇಫ ಎಂದಿದೆ. ಇಬ್ರಿಯ ಮೂಲದ ಉಚ್ಚಾರಣೆ ಬಳಸಿದಾಗ 'ಯೋ' ಎಂದು ಇಂಗ್ಲೀಷ್ ಆವೃತ್ತಿಯಂತೆ ಕನ್ನಡಿಕರಿಸಿದಾಗ 'ಜೋ' ಬಳಕೆ ಆದಂತೆ ತೋರಿಬರುತ್ತದೆ.

ಅನುವಾದದಲ್ಲಿ ಹೆಸರುಗಳನ್ನು ಹಾಗೆಯೇ ಬಳಸಬೇಕೆ ಅಥವಾ ಅದರ ಸಂವಾದಿ ಶಬ್ದವನ್ನು ಆಯ್ದುಕೊಳ್ಳಬೇಕೆ? ಎಂಬ ಪ್ರಶ್ನೆ ಉದ್ಭವಿಸಿ ನಂತರ ಹೆಸರುಗಳನ್ನು ಕನ್ನಡೀಕರಣಗೊಳಿಸಲು ನಿರ್ಧರಿಸಿದಂತಿದೆ. ಇಂಗ್ಲೀಷಿನಲ್ಲಿ ಹೊಸ ಒಡಂಬಡಿಕೆಯ ಮೊದಲ ಪುಸ್ತಕ ಮ್ಯಾಥ್ಯೂ(Mathew) ಎಂದು ಇದೆ. ಆದರೆ ಕನ್ನಡದಲ್ಲಿ ಮತ್ತಾಯ ಎಂದು ಬಳಕೆಗೊಂಡಿದೆ. ಕನ್ನಡ ಬೈಬಲ್ ಅನುವಾದವು ಇಂಗ್ಲೀಷ್ ಮೂಲಕ ಅನುವಾದಗೊಂಡಿರದೇ, ಗ್ರೀಕ್ ಹಿಬ್ರೂ ಭಾಷೆಯ ಪಾಠ ಹಾಗೂ ಉಚ್ಚಾರಣೆಯನ್ನು ಅನುಸರಿಸಿ ಭಾಷಾಂತರಗೊಂಡಿರುವುದನ್ನು ಗಮನದಲ್ಲಿರಿಸಬೇಕು. ಕನ್ನಡ ಬೈಬಲ್ ಆವೃತ್ತಿಯ ಮೇಲೆ 'ಮೂಲ ಹಿಬ್ರೂ, ಗ್ರೀಕ್ ನಿಂದ ಭಾಷಾಂತರಿಸಿದ್ದು' ಎಂದು ಬರೆಯಲಾಗಿದೆ.

ಕೆಲವು ಸಂದಿಗ್ಧ ಸಂದರ್ಭದಲ್ಲಿ ಯಾವ ಬದಲಾವಣೆ ಮಾಡದೇ ಹಾಗೆ ಇಡೀರೂಪವನ್ನು ಅನುಸರಿಸಲಾಗಿದೆ. ಜಡವಸ್ತು ಪ್ರಕೃತಿದತ್ತವಾದ ಗಿಡ-ಮರ-ಬಳ್ಳಿ ಹಾಗೂ ಮುಂತಾದ ನೈಸರ್ಗಿಕ ಪದಗಳನ್ನು ಕನ್ನಡಕ್ಕೆ ಅನ್ವಯಿಸುತ್ತಿದ್ದ ಸಂದರ್ಭದಲ್ಲಿ ಮಾತ್ರ ಬಳಸಿದ್ದಾರೆ. ಇಲ್ಲದಿದ್ದಲ್ಲಿ ನೇರ ಬಳಕೆ ಇದೆ. ಹೆಚ್ಚು ಸಂಸ್ಕೃತ ಶಬ್ದಗಳನ್ನು ಬಳಸದೇ ಸರಳ ಹಾಗೂ ಜನಸಾಮಾನ್ಯನ ಶಬ್ದಗಳ ಕಡೆಗೆ ಭಾಷಾಂತರದಲ್ಲಿ ಗಮನಹರಿಸಲಾಗಿದೆ.

---

*1 ಮಂಗಳೂರು ಬಾಶೆಲ್ ಮಿಶನ್ ಪ್ರೆಸ್, ೧೮೭೭

*2 ಹೊ.ಅ.ಶ್ರೀ.ಹಾ., ಪು.೪೨೬

ಒಂಭತ್ತು ಲಕ್ಷದಷ್ಟು ಶಬ್ದಗಳಿರುವ ಅನುವಾದದ ವಿವಿಧ ಹಂತಗಳಲ್ಲಿ ನಾವು ಕನ್ನಡ ಗದ್ಯದ ವಿಕಾಸವನ್ನು ಕಾಣಬಹುದು. ಅದರ ಬೃಹತ್ತಿನ ಮಾತಿರಲಿ ಸಂಪೂರ್ಣ ವಿಭಿನ್ನ ಸಂಸ್ಕೃತಿಯನ್ನು ರೂಪಿಸುವ ಕೃತಿಯನ್ನು ಕನ್ನಡದಲ್ಲಿ ತರುವುದು ಕಷ್ಟಸಾಧ್ಯವಾದುದು. ಬೈಬಲ್ಲಿನ ಭಾಷೆಯ ಮೇಲುನೋಟಕ್ಕೆ ಸರಳವಾಗಿ ಕಂಡರೂ ಅದರ ಖಚಿತವಾದ ಅರ್ಥವನ್ನು ಅನ್ಯ ಭಾಷೆಯಲ್ಲಿ ತರುವುದು ಕಠಿಣ. ಪ್ರಾರಂಭದ ಬೈಬಲ್ ಭಾಷಾಂತರವು ಅಸಮರ್ಪಕವಿದ್ದುದಕ್ಕೆ ಇನ್ನೊಂದು ಕಾರಣ, ಮೂಲವನ್ನು ಅತ್ಯಂತ ಕಟ್ಟುನಿಟ್ಟಾಗಿ ಅನುಸರಿಸಬೇಕೆನ್ನುವ ಪೂಜ್ಯಭಾವನೆ. ಯಾವ ಶಬ್ದವನ್ನೂ ಬಿಡದೆ ಇದ್ದಂತೆಯೇ ಅನುಸರಿಸಿದ್ದಾದರೆ. ಅದು ಕನ್ನಡ ನುಡಿಯ ಜಾಯಮಾನಕ್ಕೆ ಹೊಂದಲಿಕ್ಕಿಲ್ಲವೆಂಬ ವಿಚಾರವೇ ಬರದಷ್ಟು ಬೈಬಲ್ ವಾಣಿಯ ವಿಷಯದಲ್ಲಿ ಅವರು ಆದರವನ್ನು ತಳೆದಿದ್ದರು."[೧]

ಸಂಸ್ಕೃತ ಅನ್ಯಭಾಷೆ ಹೀಗಾಗಿ ಸಂಸ್ಕೃತ ಶಬ್ದದ ಬಳಕೆ ಸಾಧ್ಯವಾದಷ್ಟು ಬಳಸದೇ ಇರುವುದು ಉತ್ತಮ ಎಂದು ಭಾವಿಸಿದ್ದರೆಂದು ತಿಳಿದುಬರುವುದು. ಹೀಗಾಗಿ, ಹೊಸಗನ್ನಡ ಉದಯಕಾಲದಲ್ಲಿ ಹೊಸ ಹೊಸ ಶಬ್ದಗಳ ಜೋಡಣೆ ಉಂಟಾಗಲು ಪರ್ವಕಾಲವಾಯಿತು. (ಉದಾ, ಬ್ಯಾಪ್ಟಿಜಮ್ = ಜ್ಞಾನದೀಕ್ಷೆ, ದೀಕ್ಷಾಸ್ನಾನ, ಹೋಲಿಗೊಸ್ಟ = ಪವಿತ್ರಾತ್ಮ ಇತ್ಯಾದಿ)

ಬೈಬಲ್ಲಿನ ಕನ್ನಡ ಅನುವಾದ ಮಾಡುವ ಕಾಲಕ್ಕೆ ಪ್ರತಿ ಶಬ್ದ ವಿಚಾರವಾಗಿಯೂ ಅಂದಿನ ಮಿಶನರಿಗಳು ಜಿಜ್ಞಾಸೆಯನ್ನು ತಳೆದಿದ್ದರು. "ಬೈಬಲ್ಲಿನ ದ್ವಿತೀಯ ಪರಿಷ್ಕರಣ ಕಾಲದಲ್ಲಿ Savx ಎಂಬ ಗ್ರೀಕ್ ಶಬ್ದವನ್ನು ಕನ್ನಡದಲ್ಲಿ ಹೇಗೆ ಹೇಳಿರಬೇಕೆನ್ನುವ ಬಗ್ಗೆ ಸದಸ್ಯರಲ್ಲಿ ನಡೆದ ಚರ್ಚೆಯನ್ನು ಇಲ್ಲಿ ಉದಾಹರಿಸಬಹುದು. ಇಂಗ್ಲೀಷ್ ನಲ್ಲಿ ಇದನ್ನು Flesh ಎಂದು ಹೇಳಿದ್ದಿದೆ. The word was made Flesh (John ೧:೧೪) ಈ ಶಬ್ದವನ್ನು ಜಾನ್ ಹ್ಯಾಂಡ್ಸನು 'ಆ ವಾಕ್ಯವು ಮನುಷ್ಯತ್ವವನ್ನು ಧರಿಸಿಕೊಂಡು ಎಂಬುದಾಗಿ ಭಾಷಾಂತರಿಸಿದ್ದನು. ೧೮೬೫ರ ಆವೃತ್ತಿಯಲ್ಲಿ ಅದನ್ನು ಮಾಂಸ ಎಂಬುದಾಗಿ ಅನುವಾದಿಸಲಾಯಿತು. ಹೀಗೆ Fleshಗೆ ಪ್ರತಿಯಾಗಿ ದೇಹ, ಶರೀರ, ನರಭಾವ, ವಿಷಯ ಲಂಪಟತ್ವ. ಪ್ರಪಂಡ ಜಡಭಾವ ಮೊದಲಾದವುಗಳ ಅರ್ಥಭೇದವನ್ನು ಸೂಕ್ಷ್ಮವಾಗಿ ವಿವೇಚಿಸುತ್ತ, ಆ ಮಿಶನರಿಯು 'ಶರೀರ' ಎಂಬ ಪದವನ್ನು ಶಿಫಾರಸ್ಸು ಮಾಡಿದ್ದನು. ಆದರೆ ಅಂತಿಮವಾಗಿ ಸ್ವೀಕೃತವಾದದ್ದು 'ನರಾವತಾರ' ಎಂಬ ಶಬ್ದ."[೧] ಹೀಗೆ ಸ್ವೀಕತವಾದ ಶಬ್ದವೇ ಇಂದಿನವರೆಗೂ ಬಳಕೆಯಲ್ಲಿದೆ. ಆದರೆ ರೋಮನ್ ಕೆಥೊಲಿಕ್ ರ(೧೯೯೬-೯೭) ಆವೃತ್ತಿಯಲ್ಲಿ 'ದಿವ್ಯವಾಣಿ' ಎಂದು ಬಳಕೆಗೊಂಡಿದೆ. ಒಟ್ಟಿನಲ್ಲಿ ಮಿಶನರಿಗಳು ಕನ್ನಡ ನಾಡಿನ ಮೂಲೆ ಮೂಲೆಯಲ್ಲಿ ಪ್ರಚಲಿತವಿರುವ ಶಬ್ದದ ಬಳಕೆಗೆ ಪ್ರಯತ್ನಿಸಿದ್ದುದು ಸತ್ಯ.

---

೧. ಹೊ.ಅ.ಶ್ರೀ.ಹಾ., ಪು.೪೨೨

೫.೯. ಪರಿಷ್ಕರಣದ ಅಂತಿಮ ಪಾಠದ ಸಿದ್ಧತೆ ಮತ್ತು ಪ್ರಕಟಣೆಯಲ್ಲಿ ಅನುಸರಿಸಿದ್ದ ವಿಧಿ-ವಿಧಾನಗಳು

ಬೈಬಲ್ ಅನುವಾದ ಹೊ.ಒಡಂಬಡಿಕೆಯಿಂದ ಪ್ರಾರಂಭವಾದರೂ ಈ ಭಾಗದಲ್ಲಿ ಒಟ್ಟು ೨೭ ಪುಸ್ತಕಗಳಿವೆ. ಈ ಒಟ್ಟು ೨೭ ಪುಸ್ತಕಗಳನ್ನು ಒಬ್ಬರೇ ಭಾಷಾಂತರಿಸದೇ, ಸಮಿತಿ ಸದಸ್ಯರು ಕೆಲವೊಂದು ಪುಸ್ತಕಗಳನ್ನು ಅನುವಾದಕ್ಕಾಗಿ ಆಯ್ದುಕೊಂಡು ಕೊನೆಯಲ್ಲಿ ಎಲ್ಲವನ್ನು ಮೇಳವಿಸಿ ಪರಿಷ್ಕರಿಸುತ್ತಿದ್ದರು. ಪರಿಷ್ಕರಣ ಕಾಲದಲ್ಲಿ ಅಂತಿಮ ನಿರ್ಧಾರ ಪ್ರಧಾನ ಪರಿಷ್ಕಾರಕನದಾಗಿರುತ್ತಿತ್ತು. ಆತನಿಗೆ ಸರಿದೋರಿದ ಶಬ್ದವನ್ನು ಬಳಸಿದ್ದರೆ ಅದನ್ನು ಸಮಿತಿಯ ಸದಸ್ಯರೆದುರು ಹೇಗೆ ಸೂಕ್ತವಾದುದು ಎಂದು ಸಮರ್ಥಿಸಿ, ವಿವರಿಸಬೇಕಾಗಿದ್ದಿತು. ಭಾಷಾಂತರ ಶೈಲಿ ವಿಭಿನ್ನವಾಗದೇ, ಹೀಗೆಯೇ ಇರಬೇಕೆಂದು ಪೂರ್ವಭಾವಿಯಾಗಿ ಚರ್ಚಿಸಲಾಗುತ್ತಿತ್ತು. ಪ್ರಾರಂಭದ ಆವೃತ್ತಿಗಳಾದ ಕೇರಿಯ ಹಾಗೂ ಹ್ಯಾಂಡ್ಸನ ಅನುವಾದ ಬಿಟ್ಟರೆ ನಂತರದ ಅನುವಾದ ಕಾರ್ಯವು ಒಂದು ಸಮಿತಿಯ ನೇತೃತ್ವದಿಂದ ಸಾಗಿದುದಾಗಿದೆ. ಪರಿಷ್ಕರಣ ಕಾಲಕ್ಕೆ (ನಂತರದ ಆವೃತ್ತಿ) ತಾನು ಹೇಗೆ ಕಷ್ಟಪಟ್ಟಿರುವೆ ಎಂಬುದರ ಬಗ್ಗೆ ಜಾನ್ ಹ್ಯಾಂಡ್ಸ್, ೧೮೨೭ರಲ್ಲಿ ಇಂಗ್ಲೆಂಡಿಗೆ ಹೋಗುವ ಮುನ್ನ ಹೀಗೆ ವಿವರಿಸಿದ್ದಾನೆ.

ಈ ಕೆಲಸವನ್ನು ಸುಮಾರು ೧೬ ವರ್ಷಗಳ ಹಿಂದೆ ಪ್ರಾರಂಭಿಸಿದ್ದು, ಪ್ರತಿಯೊಂದು ದಿನವನ್ನು (ಅನಾರೋಗ್ಯದ ದಿನಗಳನ್ನು ಹೊರತುಪಡಿಸಿ) ಬಹಳ ಯೋಚಿತವಾಗಿ ಕಳೆದಿದ್ದು ನನ್ನ ಅಮೂಲ್ಯ ಸಮಯ ಮತ್ತು ಶಕ್ತಿಯನ್ನು ಸರಿಯಾದ ರೀತಿಯಲ್ಲಿ ವ್ಯಯಿಸಿದ್ದೇನೆ. ಇದಕ್ಕೋಸ್ಕರ ಅನೇಕ ಪುಸ್ತಕಗಳನ್ನು ಪರಿಶೀಲಿಸಿದ್ದು, ಸುಮಾರು ೭-೮ ಬಾರಿ ಅದನ್ನು ನಕಲು ಮಾಡಿ ಸಿದ್ದಪಡಿಸಿದ್ದೇನೆ[1] ಎಂದಿದ್ದಾನೆ.

ತಾನು ಶ್ರಮವಹಿಸಿ ಮೂಲಪ್ರತಿಯನ್ನು ತಿದ್ದಿದ ಮೇಲೆ ಬಳ್ಳಾರಿಯಲ್ಲಿ ಮುದ್ರಣಾಲಯವಿರದ ಸಮಯದಲ್ಲಿ "ಭಾಷಾಂತರಿಸಿದ ಸುವಾರ್ತೆ(Gospel)ಗಳನ್ನು ತಾಳೆಗರಿಗಳಲ್ಲಿ ತನ್ನ ಶಾಲಾ ಉಪಾಧ್ಯಾಯರಿಂದ ಬರೆಯಿಸಿ ಪ್ರತಿಗಳನ್ನು ಸಿದ್ಧಪಡಿಸುತ್ತಿದ್ದನು.[1]

ಪ್ರಕಟಣೆಗೆ ನಂತರದ ದಿನಗಳಲ್ಲಿ ಸಿದ್ದವಾಗಾದ ಕೊನೆಯ ನಿರ್ಧಾರ ಸಮಿತಿಯವರಿಗಿಂತ ಪ್ರಧಾನ ಪರಿಸ್ಕಾರಕದಾಗಿರುತಿತ್ತು. ಒಟ್ಟು ಪುಸ್ತಕಗಳನ್ನು (ಬೈಬಲ್ಲಿನ) ಒಮ್ಮೆಲೆ ಮುದ್ರಿಸುವ ಕ್ರಮ ಇಲ್ಲದಿದ್ದುದರಿಂದ ಪ್ರತಿಸಾರಿಯೂ ಅಂದಿನ ದಿನಗಳಿಗೆ ಸೂಕ್ತವಾದ ಶಬ್ದ ಆಯ್ಕೆ-ತಿದ್ದುವಿಕೆ ನಡೆದೆ ಇರುತ್ತಿತ್ತು. ಇಂದಿನವರೆಗೂ ಕನ್ನಡ ಬೈಬಲ್ ತೃಪ್ತಿದಾಯಕ ಮೂಲ ಭಾಷಾಂತರವನ್ನು ಪಡೆಯಲು ಹಾತೊರೆಯುತ್ತಿದ್ದಂತೆ ಭಾಸವಾಗುವುದು.

---

೧. ಘನ ಜಾನ್‌ಹ್ಯಾಂಡ್ಸ್, ಸಭಾಪತಿ ಎನ್., ಪು.೫

ಪ್ರಕಟಣೆಯಲ್ಲಿ ಅನುಸರಿಸಿದ ಇನ್ನೊಂದು ಪ್ರಮುಖ ಅಂಶವೆಂದರೆ, ಅಚ್ಚಿನ ಮೊಳೆಗಳ ಸುಂದರತೆ ಹಾಗೂ ಚಿಕ್ಕಗಾತ್ರದ ಮೊಳೆಗಳನ್ನು ಬಳಸಿರುವುದು ಬೈಬಲ್ ಸಾಹಿತ್ಯ ದೀರ್ಘವಾದುದಾಗಿರುವುದರಿಂದ ಅದನ್ನು ಸಾಧ್ಯವಾದಷ್ಟು ಚಿಕ್ಕ ಹೊತ್ತಿಗೆ ಮಾಡುವಲ್ಲಿ ಹೆಚ್ಚಿನ ಪರಿಶ್ರಮ ಕಂಡುಬರುತ್ತದೆ. ಒಳಗಿನ ಸಾಹಿತ್ಯ ಯಾವುದೇ ದೃಷ್ಟಿಯಿಂದ ತೆಗೆಯಲು ಅಥವಾ ಸಂಕುಚಿತಗೊಳಿಸಲು ಸಾಧ್ಯವಾಗದ, ಮಾತಾಗಿರುವಾಗ, ಮಿಶನರಿಗಳು ಹಾಗೂ ಪ್ರಕಟಿಸುವ ಸಂಸ್ಥೆಗಳು ಅಚ್ಚಿನ ವಿಧಾನದ ಮೂಲಕ, ಚಿಕ್ಕ ಗ್ರಂಥವನ್ನಾಗಿ ಮಾಡಲು ಶ್ರಮಿಸಿದ್ದಾರೆ. ಜಗತ್ತಿನಲ್ಲಿ ಬರಿ ಕಣ್ಣಿಗೆ ಓದಲು ಬಾರದ ಬೈಬಲ್ ಗಳು ಇರುವುದು ಈ ಕಾರಣಕ್ಕಾಗಿಯೇ.

ಪ್ರಕಟಣೆಯಲ್ಲಿ ಏಕ ವ್ಯಕ್ತಿಯ ಜವಾಬ್ದಾರಿ ಇಲ್ಲ ಹಾಗೂ ಪ್ರಕಟಣೆಯ ಆವೃತ್ತಿಯಲ್ಲಿ ಸಿದ್ಧಪಡಿಸಿದ ಸಂಸ್ಥೆಯ ಹೆಸರು ಮಾತ್ರ ಇದ್ದು, ಅದಕ್ಕಾಗಿ ಶ್ರಮಿಸಿದ ವ್ಯಕ್ತಿಗಳ ಹೆಸರುಗಳ ದಾಖಲೆ ಇರುವುದಿಲ್ಲ.

ಇತ್ತೀಚಿನ ದಿನಗಳಲ್ಲಿ ಮುದ್ರಿತಗೊಂಡ ಕೆಥೊಲಿಕ್ ಆವೃತ್ತಿಯಲ್ಲಿ ಧರ್ಮಾಧ್ಯಕ್ಷರ ಹೆಸರು ವಿಳಾಸ ಕೊಡಲಾಗಿದೆ. ಹಾಗೂ ಮೊದಲ ಆವೃತ್ತಿಗಳಲ್ಲಿ ಮುನ್ನುಡಿ ಹಾಗೂ ಒಳಪುಸ್ತಕಗಳ ಕುರಿತು ಚಾರಿತ್ರಿಕ ಹಿನ್ನೆಲೆ ನೀಡುವ ಸಾಹಿತ್ಯ ಸಿಕ್ಕುವುದಿಲ್ಲ. ಆದರೆ ಇಂದಿನ ಹೊಸ ಆವೃತ್ತಿಗಳಲ್ಲಿ ಇವೆಲ್ಲವನ್ನು ಕಾಣಬಹುದು. ಅಡಿ ಟಿಪ್ಪಣಿಯಲ್ಲಿ ಯಾವುದೇ ಒಂದು ಪ್ರಮುಖ ವಿಷಯ ಬಂದಾಗ ಈ ಕುರಿತು ಒಳಪುಸ್ತಕಗಳು ಮತ್ತೇನನ್ನು ಹೇಳುತ್ತವೆ ಎಂಬುದರ ಕುರಿತು ವಿವರ ಸಿಗುವುದು. ಇಂತ ಬೈಬಲ್‌ಗಳನ್ನು (Concordance) ಅನುಕ್ರಮಣಿಕಾ ಬೈಬಲ್ ಎಂದು ಕರೆಯುವರು.

೫.೧೦. ಅನುವಾದಿತ ಕೃತಿಗಳ ಉಪಯೋಗ ಮತ್ತು ಪ್ರಸಾರ

ಕ್ರೈಸ್ತಧರ್ಮ ಭಾರತದಲ್ಲಿ ಕ್ರಿಸ್ತನ ಶಿಷ್ಯನಾದ ಸಂತ ಥೋಮನಿಂದ ಪ್ರಚಾರ ಹೊಂದಿತೆಂಬ ಪ್ರತೀತಿ ಇದೆ. ಆತನು ಭಾರತಕ್ಕೆ ಬಂದು ಕ್ರಿಸ್ತನ ಕುರಿತು ಬೋಧಿಸಿದಾಗ ಅನೇಕ ಜನರು ಆತನ ಮಾತನ್ನು ಕೇಳಿ, ಕ್ರಿಸ್ತನನ್ನು ಅಂಗೀಕಾರ ಮಾಡಿದರೆಂದು ಇತಿಹಾಸದ ಪುಟಗಳಿಂದ ತಿಳಿದುಬರುತ್ತದೆ. ಅನೇಕ ವರ್ಷಗಳಿಂದ ಭಾರತೀಯ ಧರ್ಮದಲ್ಲಿ ಮಿಳಿತಗೊಂಡ ಕ್ರೈಸ್ತ ಸಾಹಿತ್ಯ, ಜನಮನದಲ್ಲಿ ಉಳಿದು ಧಾರ್ಮಿಕ ವಿಧಿ-ವಿಧಾನಗಳ ಮಾರ್ಗದಲ್ಲಿ ಹಾಸುಹೊಕ್ಕಾಗಿ, ಕೊನೆಯಲ್ಲಿ ಭಾರತೀಯ ಸಂಸ್ಕೃತಿಯ ಆಳಕ್ಕಿಳಿದು ತನ್ನತನದಲ್ಲಿ ಭಾರತೀಕರಣವನ್ನು ಗರ್ಭದಲ್ಲಿಟ್ಟು ಇಂದಿಗೂ ನಡೆದುಕೊಂಡು ಬರುತ್ತಿದೆ.

ಹೀಗೆ ಕ್ರಿ.ಶ.೫೨(ಥೋಮ ಭಾರತಕ್ಕೆ ಬಂದವರ್ಷ)ರಿಂದ ಕ್ರೈಸ್ತ ಧರ್ಮ ಭಾರತ ಭೂಮಿಯನ್ನು ಸ್ಪರ್ಶಿಸಿ, ಸ್ಪಂದಿಸಿ, ಕ್ರೈಸ್ತ ಧಾರ್ಮಿಕ ಗ್ರಂಥವಾದ ಬೈಬಲ್‌ನ್ನು ತನ್ನದೇ ಆದ ಭಾಷೆಯಲ್ಲಿ ನೋಡಲು

ಹವಣಿಸುತ್ತಿತ್ತೇನೋ''* ಇಂತಹ ಸಂದರ್ಭ ಪರಿಪಕ್ವವಾದಾಗ, ಕ್ರಿ.ಶ.೧೭ನೇ ಶತಮಾನದಿಂದ ಬೈಬಲ್ ಭಾರತೀಯ ಭಾಷೆಗೆ ಸಂಪರ್ಕಿಸಿತು. ಹಾಗೇ ಕನ್ನಡ ಬೈಬಲ್ ರೂಪುಗೊಂಡಂತೆ ಅದು ಅನೇಕರ ಕುತೂಹಲಕ್ಕೆ ಕಾರಣವಾಯಿತು. ಕಾರಣ ಭಾರತಕ್ಕೆ ಹೊಸದೆನಿಸಿದ ಧರ್ಮಬೋಧೆ, ಏಕದೇವೋಪಾಸನೆ, ವಿಭಿನ್ನ ಸಂಸ್ಕೃತಿಯ ದೃಷ್ಟಿಕೋನ, ಮನುಕುಲದ ಇತಿಹಾಸವನ್ನು ಪ್ರಕಟಿಸುವ ಕೃತಿ. ಹೀಗೆ ಜನಾಕರ್ಷಕಕ್ಕೆ ಕಾರಣವಾದುದರಿಂದ ಅನುವಾದಿತ ಕೃತಿ ಇನ್ನೂ ಹಸಿ ಇರುವಾಗಲೇ ಜನರ ಉಪಯೋಗಕ್ಕೆ ಕಾರಣವಾಯಿತು.

ಪ್ರಾರಂಭದ ಅನುವಾದ ಕನ್ನಡದ ವ್ಯವಸ್ಥಿತ ಲಿಪಿಯನ್ನು ಹೊಂದದೇ ಇದ್ದಾಗಲೂ ಜನರು ಅದನ್ನು ಓದಲು ಹವಣಿಸುತ್ತಿದ್ದಾರೆಂದು ತಿಳಿದುಬರುವುದು. ಕೇರಿಯ ಬೈಬಲ್ ತೆಲುಗು ಲಿಪಿಯನ್ನು ಹೋಲುತ್ತಿದ್ದಾದರೂ ಅದು ಕನ್ನಡದ ಜನರಿಗೆ ಅಪರೂಪದ ಕೃತಿಯಾಗಿ ಪರಿಣಮಿಸಿತ್ತು. ಹಾಗೆ ಜಾನ್ ಹ್ಯಾಂಡ್ಸನ ಬೈಬಲ್ ಕೂಡ ಅನೇಕ ವರ್ಷಗಳ ಕಾಲ ಕನ್ನಡ ಜನತೆಗೆ ಉಪಯುಕ್ತ ಬೈಬಲ್ ಸಾಹಿತ್ಯವಾಗಿಸಿದೆ. ಈ ಎರಡು ಆವೃತ್ತಿಯ ನಂತರ ಹೊರಬಂದ ಯಾವುದೇ ಆವೃತ್ತಿ ಅಥವಾ ಪರಿಷ್ಕಾರಣದ ಗ್ರಂಥ ಅತೀ ಜನಪ್ರೀಯತೆಯನ್ನೇ ಪಡೆದಿವೆ. ಜಾನ್ ಹ್ಯಾಂಡ್ಸ್ ಹೀಗೆ ಬರೆದಿದ್ದಾನೆ. (ಆತನ ಅನುವಾದದ ಕುರಿತು) ಒಂದು ಘಟನೆ ಹೀಗಿದೆ- ''ಒಮ್ಮೆ ಒಬ್ಬ ಸನ್ಯಾಸಿ ಚಿತ್ರದುರ್ಗದಲ್ಲಿ ಈ ಅನುವಾದಿತ ಸುವಾರ್ತೆಯನ್ನು ಓದಿ ಅದರ ಪರಿಣಾಮ ಕತ್ತಿಯಿಂದ ಹೃದಯವನ್ನು ತಿವಿದಹಾಗೆ ಆಯಿತು ಎಂದನು. ತಕ್ಷಣವೇ ಆ ಪುಸ್ತಕ ಎಲ್ಲಿ ದೊರೆಯುವುದೆಂದು ತಿಳಿದು ಬಳ್ಳಾರಿಯಿಂದ ಬೈಬಲನ್ನು ತರಿಸಿದನು. ಜೊತೆಗೆ ಆ ಧರ್ಮದ ಬಗ್ಗೆ ಇನ್ನೂ ಅನೇಕ ವಿಷಯ ತಿಳಿಯಲು ಪ್ರಯತ್ನಿಸಿದನು. ನಂತರ ಮಿಶನರಿಗಳ ಜೊತೆಗೆ ಬಳ್ಳಾರಿಯಲ್ಲಿ ಒಂದು ತಿಂಗಳು ಕಳೆದನು.''[೧] ಮುಂದೆ ಅದರಲ್ಲಿ ಮುಕ್ತಿಯನ್ನು ಕಂಡ ಈ ತೆಲುಗು ಮನುಷ್ಯ, ಕಡಪದಲ್ಲಿ ಕ್ರೈಸ್ತದೀಕ್ಷೆ(Bapotize) ಹೊಂದಿ ಕ್ರಿಶ್ಚಿಯನ್ ಧರ್ಮದ ಪ್ರಚಾರದಲ್ಲಿ ತೊಡಿಗದನಂತೆ. ಹೀಗೆ ಕ್ರೈಸ್ತರಲ್ಲದವರಿಗೂ ಉಪಯೋಗಕ್ಕೆ ಕಾರಣವಾದ ಬೈಬಲ್ ಬಹುಜನ ಉಪಯೋಗಿ ಗ್ರಂಥವಾಗಿ ಪರಿಣಮಿಸಿದೆ.

ಅನುವಾದಿತಗೊಂಡ ಬೈಬಲ್ ಆಕ್ಷಲರಿ ಸೊಸೈಟಿ ಮೂಲಕ ಮುದ್ರಗೊಂಡಾಗ ಪೂರ್ವಯೋಜಿತ ಗೊಂಡಂತೆ, ಆಯಾ ಸ್ಥಳಗಳಿಗೆ ರವಾನಿಸಲ್ಪಡುತ್ತಿದ್ದವು. ಬೈಬಲ್ ಸೊಸೈಟಿ ಆಫ್ ಇಂಡಿಯಾ ಎಂಬ ಸಂಸ್ಥೆಯಿಂದ ಕರ್ನಾಟಕದಲ್ಲಿ ಪ್ರಸಾರವಾಗುತ್ತಾ ಇಂದಿನವರೆಗೂ ಈ ಸಂಸ್ಥೆ ಅಸ್ತಿತ್ವದಲ್ಲಿದು, ಸೇವೆ ಸಲ್ಲಿಸುತ್ತಿದೆ.*

---

೧. B.T.I.I.P. & Ceylon, J.S.M., Hooper, Pp.98

* ಮಾಲಬಾರು ಕೊಂಕಣ ಕರ್ನಾಟಕಗಳಲ್ಲಿ ಕ್ರೈಸ್ತಧರ್ಮ ಹಿಂದಿನ ಕಾಲದಿಂದಲೂ ನೆಲೆ ನಿಂತಿತ್ತೆಂಬುದನ್ನು ಸಮರ್ಥಿಸುತ್ತದೆ. ಕನ್ನಡ ಜಿಲ್ಲೆಯ ಕಲ್ಯಾಣಪುರದಲ್ಲಿ ಕ್ರಿ.ಶ.ಮೊದಲನೇ ಶತಮಾನದಲ್ಲಿಯೇ ಹಿಬ್ರೂ ಭಾಷೆಯ ಬೈಬಲ್ ಗ್ರಂಥ ಬಳಕೆಯಲ್ಲಿತ್ತು. ಅವಲೋಕನ, ೧೯೮೫, ಪು.೧೯೪

*ಎಂ.ಜಿ.ರಸ್ತೆ, ಬೆಂಗಳೂರಲ್ಲಿ

ಬೈಬಲ್ ಪ್ರಸಾರ ಸಂಸ್ಥೆ ಮೂಲಕವಾಗಿ, ಚರ್ಚಗಳ ಮೂಲಕ ನಡೆಯುತ್ತದೆ. ಕೆಲವು ಧರ್ಮ ಪ್ರಚಾರಕ ಸಂಘಗಳು ಪ್ರಕಟಿಸುವ ಸಂಸ್ಥೆಗಳಿಗೆ ತಮ್ಮ ಬೇಡಿಕೆ(indent)ಯನ್ನು ತಿಳಿಸಿ ಬೈಬಲ್‌ನ್ನು ಪಡೆದುಕೊಳ್ಳುತ್ತವೆ. ಚರ್ಚಗಳು ತನ್ನ ಜನಕ್ಕಾಗಿ ಖರೀದಿಸಿ ವಿತರಿಸುತ್ತವೆ. ಇತ್ತೀಚಿನ ದಿನಗಳಲ್ಲಿ ಎಲ್ಲ ಪ್ರಮುಖ ಪುಸ್ತಕ ಅಂಗಡಿಗಳಲ್ಲಿಯೂ ದೊರೆಯುತ್ತದೆ. ಈ ಮೊದಲು ಬೈಬಲ್ ಕ್ರಯಕ್ಕೆ ಮಾರಾಟವಾಗುತ್ತಿರಲಿಲ್ಲ. ಇತ್ತೀಚಿನ ದಿನಗಳಲ್ಲಿ ಅದಕ್ಕೊಂದು ಸೂಕ್ತ ಬೆಲೆ ಇಟ್ಟು ಆವೃತ್ತಿಗಳ ಹಾಗೂ ಮೇಲಿನ ರ್‍ಯಾಪರ್‌ಗಳ ವಿನ್ಯಾಸದ ಅಧಾರದ ಮೇಲೆ ಕ್ರಯಕಟ್ಟಿ ಪ್ರಸಾರ ಮಾಡಲಾಗುತ್ತಿದೆ.

೫.೧೧. ಬೈಬಲ್ಲಿನ ಸಾರ್ಥಕತೆ, ಪ್ರಯೋಜನ

ಪದ್ಯಶೈಲಿಯನ್ನೇ ಅನುಸರಿಸಿದ ಕನ್ನಡ ಸಾಹಿತ್ಯ, ಗದ್ಯದ ಪ್ರಕಾರವನ್ನು ಪಡೆದಿದ್ದರೂ ಹೊಸ ಗನ್ನಡ ಗದ್ಯ ಪಾಶ್ಚಾತ್ಯರ ಪ್ರಭಾವದಿಂದ, ಅದರಲ್ಲೂ ಕ್ರೈಸ್ತ ಮಿಶನರಿಗಳಿಂದ ಎಂದರೆ ತಪ್ಪಾಗಲಿಕ್ಕಿಲ್ಲ.

“ವಿಶೇಷವಾಗಿ ಧರ್ಮಪ್ರಸಾರಕ್ಕೆಂದು ಧಾವಿಸಿ ಬಂದ ಕ್ರಿಶ್ಚಿಯನ್ ಮಿಶನರಿ ಜನರು ಕನ್ನಡ ನುಡಿಗೆ ಎಂದೂ ಮರೆಯಲಾರದ ಸೇವೆಯನ್ನು ಸಲ್ಲಿಸಿದರು.”[೧] “ಇಪ್ಪತ್ತನೆಯ ಶತಮಾನದ ಹೊಸಗನ್ನಡ ಸಾಹಿತ್ಯ ನಿರ್ಮಾಣಕ್ಕೆ ಅಡಿಗಲ್ಲನ್ನು ಇಟ್ಟವರು ಮಿಶನರಿಗಳೇ.”[೨] “ಅಧುನಿಕ ಗದ್ಯ ಪ್ರಾರಂಭವಾದುದು ಕಳೆದ ಶತಮಾನದ ಮೊದಲನೆಯ ದಶಕದಲ್ಲಿ ಈ ಕೆಲಸವನ್ನು ವಿಶೇಷವಾದ ಆಸ್ಥೆಯಿಂದ ಮೊದಲು ಮಾಡಿದವರೆಂದರೆ ಕ್ರೈಸ್ತಮತ ಪ್ರಚಾರಕ್ಕಾಗಿ ಕರ್ನಾಟಕದಲ್ಲಿ ನೆಲಸಿದ ಪಾದ್ರಿಗಳು.”[೩]

ಹೊಸಗನ್ನಡ ಗದ್ಯ ಶೈಲಿಯು, ಪಾಶ್ಚಾತ್ಯ ಸಾಹಿತ್ಯದ ಪ್ರಭಾವದ ಅಂಶಗಳಿಂದ ಜನನ ವಾಯಿತೆಂದರೆ ತಪ್ಪಾಗಲಾರದು. ಮಿಶನರಿಗಳು ತಮ್ಮ ಮಾತೃಭಾಷಾ ಶೈಲಿಯಲ್ಲಿಯೇ ಕನ್ನಡ ಅನುವಾದ ರೂಪ ಪಡೆದಂತಿದೆ. ಒಂದು ದೃಷ್ಟಿಯಿಂದ ಬೈಬಲ್ ಅನುವಾದ ಜೊತೆಗೆ ಗ್ರೀಕ್ ಹಾಗೂ ಹಿಬ್ರೂ ಶೈಲಿಯ ಸೊಗಡು ಕನ್ನಡದಲ್ಲಿ ಮಿಳಿತಗೊಂಡಿರುವುದನ್ನು ಬೈಬಲ್ ಭಾಷಾಂತರದ ಶೈಲಿಯಲ್ಲಿ ಗುರುತಿಸಬಹುದು. “ಪಾಶ್ಚಿಮಾತ್ಯ ಭಾಷಾ ಸಂಸ್ಕೃತಿಗಳ ಸಂಪರ್ಕದಿಂದ ಹಳೆಯ ಅಂಧಶ್ರದ್ಧೆಗಳು ನಶಿಸಿ ಮಹಾಪುರಾಣಗಳು, ದೈವಾಸುರ ಯುದ್ಧಗಳು, ರಾಜವಂಶಗಳು ಮಾತ್ರ ಕೃತಿ ವಸ್ತುವಾಗಿದ್ದ ಹಿಂದಿನ ಪದ್ಧತಿಗೆ ಪೂರ್ಣವಿರಾಮ ಹಾಕಿ, ಸಾಮಾನ್ಯ ಮಾನವನ ನಿತ್ಯ ಜೀವನದ ಆಗು-ಹೋಗುಗಳೊಂದಿಗೆ ಸ್ಪಂಧಿಸುವಂತಹ ಜನ ಸಾಮಾನ್ಯರ ಹೃದಯಕ್ಕೆ ಹೆಚ್ಚು ವೇದ್ಯವಾದ, ಸಹಜವಾದ ವಿಷಯಗಳು ಕೃತಿಗೆ ವಸ್ತುಗಳಾದವು.”[೪]

---

೧. ಕ.ಸಾ.ಚರಿತ್ರೆ ರಂ.ಶ್ರೀ.ಮುಗಳಿ, ಪು.೧೪೪

೨. ಕ್ರೈ.ಕ.ಕಾಣಿಕೆ, ವರದರಾಜ ಹುಯಿಲಗೋಳ, ಪು.೧

೩. ಕ.ಸಾ.ಮತ್ತು ಧರ್ಮ ಹೊ.ಗ.ಮನೋಹರ, ಪು.೬೭ ಮತ್ತು ೬೪

೪. ಅದೇ, ಪುಟ

ಆ ಮಿಶನರಿಗಳು ಸಾಹಿತ್ಯ ನಿರ್ಮಾಣವನ್ನು ಮುಖ್ಯ ಗುರಿಯಾಗಿ ನಿರೀಕ್ಷಿಸದೇ, ತಾವು ಹೇಳಲು ಹೊರಟ ಧಾರ್ಮಿಕ ವಿಷಯ, ಜನಸಾಮಾನ್ಯನಿಗೆ ಹಾಗೂ ಕರ್ನಾಟಕದ ಎಲ್ಲ ಪ್ರಾದೇಶಿಕ ಜನಕ್ಕೆ ಅರ್ಥವಾಗುವ ರೀತಿಯ ದೃಷ್ಟಿಕೋನದಲ್ಲಿ ಗದ್ಯದ ರಚನೆ ರೂಪುಗೊಂಡಿದೆ.

ಬೈಬಲ್ ಸಾಹಿತ್ಯದಲ್ಲಿ, ಸಾಹಿತ್ಯದ ಎಲ್ಲ ಪ್ರಕಾರಗಳು ಅಡಗಿವೆ ಎಂದು ಗುರುತಿಸಬಹುದು. ಉಪಮೇ, ದೃಷ್ಟಾಂತ, ರೂಪಕ, ಸರಳ ಪದ್ಯ, ಉಪದೇಶದ ವಿವಿಧ ಶೈಲಿ ನಾನ್ನುಡಿ ಪ್ರಬೋಧನೆ ಪ್ರಸ್ತಾಪ, ಜ್ಞಾನೋಕ್ತಿ, ಕೀರ್ತನೆ ಮುಂತಾದ ಪ್ರಕಾರಗಳು. ತಮ್ಮ ವಿಶಿಷ್ಟ ಶೈಲಿಯನ್ನು ಹೊರಹಾಕಿದುದರ ಪರಿಣಾಮ. ಕನ್ನಡ ಸಾಹಿತ್ಯದ ಎಲ್ಲ ಆಯಾಮಗಳನ್ನು ಸ್ಪಂಧಿಸಿ, ಹೊಸ ಶೈಲಿ ನಿರ್ಮಿಸಲು ಕಾರಣವಾದಂತಿದೆ. ಹೀಗಾಗಿ, "ಈ ಕ್ರೈಸ್ತ ಮತೋಪದೇಶಕರು ಹೊಸಗನ್ನಡವನ್ನು ಗ್ರಂಥಭಾಷೆಯಾಗಿ ಗೌರವಿಸಿದ ಮಹನೀಯರೆಂದರೆ ತಪ್ಪೇನಿಸಿದು. ಕೃತಕ ವರ್ಣನೆ ಅನಾವಶ್ಯಕ, ಸಾಹಿತ್ಯ ಜೀವನದ ಕೈಗನ್ನಡಿಯಾಗಿರಬೇಕು. ಅದು ಸಮಾಜದ ಮೇಲೆ ಪರಿಣಾಮ ಬೀರಬಲ್ಲದಾಗಿರಬೇಕೆಂಬ ಹಲವಾರು ಅಂಶಗಳನ್ನು ನಮ್ಮ ಬರಹಗಾರರಿಗೆ ಪಾಶ್ಚಾತ್ಯ ಸಾಹಿತ್ಯವು ತಿಳಿಸಿಕೊಟ್ಟಿತು."[೧] "ಮಿಶನರಿಗಳ ಪ್ರಭಾವದಿಂದಲೇ ಏನೋ ೧೯ನೇ ಶತಮಾನದಲ್ಲಿ ಕನ್ನಡದಲ್ಲಿ ವಿಶಿಷ್ಟ ಶೈಲಿಯು ಕಂಡುಬಂದಿದೆ."[೨]

"ಬೈಬಲ್ ಅನುವಾದದ ಕೆಲಸ ಕನ್ನಡ ಭಾಷೆಯ ಚರಿತ್ರೆಯಲ್ಲಿ ೧೫೦ ವರ್ಷಗಳಿಂದಲೂ ಹೆಚ್ಚಿನ ಅವಧಿಯನ್ನು ವ್ಯಾಪಿಸಿದ ಒಂದು ಸಾಹಿತ್ಯಾರಾಧನೆ. ಗುಣಗಾತ್ರ, ಧಾರ್ಮಿಕ ಚಿಂತನೆ, ಸಾರ್ವತ್ರಿಕ ಮಾನವೀಯ ಮೌಲ್ಯಗಳು ಮತ್ತು ಹಂಬಲಗಳು ಜನಪ್ರೀಯತೆ ಇವೆಲ್ಲ ದೃಷ್ಟಿಗಳಿಂದ ಅತ್ಯಂತ ಮಹತ್ವಪೂರ್ಣವಾದ ಈ ಗ್ರಂಥದ ಅನುವಾದಗಳು, ಪರಿಷ್ಕರಣಗಳು ಮರು ಅನುವಾದಗಳು ಕನ್ನಡದಲ್ಲಿ ಮಿಶನರಿಗಳ ಲೇಖನಿಗಳಿಂದ ಬಂದವು." ಈ ಆವೃತ್ತಿಗಳಿಂದ ಹೊರಬಂದ ಹೊಸಗನ್ನಡ ಗದ್ಯ ಹಾಗೂ ಪದ್ಯ ಶೈಲಿಗಳು ಕನ್ನಡ ಭಾಷೆಯ ಮೇಲೆ ವಿಶಿಷ್ಟ ಪ್ರಭಾವ ಬೀರಿವೆ. ಹೀಗೆ ಮಿಶನರಿಗಳು ಬಳಸಿದ ಶೈಲಿ ಮುಂಬರುವ ದಿನಗಳಲ್ಲಿ ಸ್ವೀಕೃತಗೊಂಡು ಯಶಸ್ಸನ್ನು ಪಡೆಯುವಲ್ಲಿ ಹಿಂದೆ ಬೀಳಲಿಲ್ಲ. ಅಂದು ಅನುವಾದಿಸಿದ ಬೈಬಲ್ ಇಂದಿಗೂ ಪ್ರಯೋಜನ ಪುಸ್ತಕವಾಗಿದ್ದು ಮಿಶನರಿಗಳು ಪಟ್ಟಶ್ರಮ ಸಾರ್ಥಕವಾಗಿ ನಿಂತಿದೆ.

ಬೈಬಲ್‌ನಲ್ಲಿ ಪದ್ಯದ ಅನುವಾದದಗಳು ನೇರವಾಗಿ ಕಂಡುಬರದಿದ್ದರೂ, ಕೀರ್ತನೆಗಳು ಎಂಬ ದಾವೀದ (David) ಪ್ರವಾದಿಯಿಂದ ಬರೆದ ಸಾಹಿತ್ಯ ಪದ್ಯದ ರೂಪವನ್ನು ಪ್ರತಿಬಿಂಬಿಸುತ್ತದೆ. ಇತ್ತೀಚಿನ ರೋಮನ್ ಕಥೊಲಿಕ್, ಬೈಬಲ್‌ನಲ್ಲಿ ಮೂಲ ಬೈಬಲ್‌ನಲ್ಲಿ ಯಾವ ಭಾಗದಲ್ಲಿ ಪದ್ಯಗಳು

---

೧. ಕ.ಸಾ.ಮತ್ತು ಧರ್ಮ ಹೊ.ಗ.ಮನೋಹರ, ಪು.೬೯

೨. ಕ.ಧಾ.ಸಾ.ಕ್ರೈ.ಮಿ.ಕೊಡುಗೆ, ಎಡ್ವರ್ಡ್ ನೋರೋನ, ಪು.೧೯

ಬಳಕೆಯಾಗಿದ್ದವೋ ಅಲ್ಲಿ (ಕನ್ನಡದಲ್ಲಿಯೂ) ಪದ್ಯಗಳನ್ನೇ ಮುದ್ರಿಸಲಾಗಿದೆ. ಆದರೆ ಇವು ಸಾಹಿತ್ಯಿಕ ಮೌಲ್ಯಗಳನ್ನು ಪಡೆದವುಗಳೆಂದು ಹೇಳುವಂತಿಲ್ಲ.

ಅಂದಿನ ಮಿಶನರಿಗಳು ಬೈಬಲ್ ಅನುವಾದದ ಜೊತೆಗೆ ಬೈಬಲ್ ಪೂರಕ ಸಾಹಿತ್ಯ ರಚನೆಯಲ್ಲಿ ಹಾಗೂ ದೇವಾಲಯಗಳಲ್ಲಿ ಆರಾಧನೆಗೆ ಬಳಕೆಯಾಗುವಂತೆ ಪದ್ಯವನ್ನು ಬರೆದಿರುವುದುಂಟು. (ಈ ಕುರಿತು ಮುಂದೆ ವಿವರವಾಗಿ ನೋಡಬಹುದು. ಆ ಶೈಲಿ ಹೊಸಗನ್ನಡ ಪದ್ಯಗಳು ರಚನೆಗೊಳ್ಳಲು ಪೂರಕವಾಗಿವೆ ಎನ್ನಬಹುದು. ಕನ್ನಡದಲ್ಲಿ ಬಿ.ಎಂ.ಶ್ರೀಗಳ ಪದ್ಯ ಸಾಹಿತ್ಯ ನಿರ್ಮಾಣವಾಗುವಾಗ ಮಿಶನರಿಗಳಿಂದ ಸಾಕಷ್ಟು ಪದ್ಯ ಸಾಹಿತ್ಯ ಆರಾಧನಾ ಉದ್ದೇಶಕ್ಕಾಗಿ ನಿರ್ಮಾಣಗೊಂಡಿರುವುದು ಕಂಡುಬರುತ್ತದೆ.

ಬೈಬಲ್ ಗದ್ಯದ ಅನುವಾದವು ನೇರವಾಗಿ ಹೊಸಗನ್ನಡದ ಮೇಲೆ ಪ್ರಭಾವ ಬೀರಿದೆ ಎಂದು ಹೇಳುವಂತಿದ್ದರೂ, ಕನ್ನಡ ಬೈಬಲ್ ಕುರಿತು ರಚನೆಗೊಂಡ ಕ್ರೈಸ್ತ ಸಾಹಿತ್ಯದಿಂದ ಹೊಸಗನ್ನಡ ಪ್ರಭಾವ ಪಡೆದುದು ಕಂಡುಬರುವುದು. ಇಲ್ಲಿ ಕೆಲವು ಕೃತಿಗಳನ್ನು ಉದಾಹರಿಸಬಹುದು. ಕ್ರಿ.ಶ.೧೮೩೫ರಲ್ಲಿ ಹೆನ್ರಿಕೊನೋಲಿ ಎಂಬುವನ್ನು ಒಳ್ಳಾರಿಯ ಬ್ರೂಹಾರ್ ಎಂಬುವನು. ದೇವಾವಾಕ್ಯ ದ್ವಿ ಪಂಚಾಶತ ಪೂರ್ವನಿರ್ಧಾರ (ಹಳೆ ಒಡಂಬಡಿಕೆ) ದ್ವಿಪಂಚಾಶತ ನವನಿರ್ಧಾರ (ಹೊಸ ಒಡಂಬಡಿಕೆ) ಎಂಬ ಕಥಾ ಸೂಕ್ತಿಗಳ ಗ್ರಂಥ ರಚಿಸಿರುವುದು ತಿಳಿದುಬರುವುದು.

೧೮೪೫ರಲ್ಲಿ ಜಾನ್ ಹೆಚ್ ಋಟ್ಸನು ೩೫೫ ಪುಟಗಳ ಕ್ರೈಸ್ತ ಧರ್ಮ ಬೋಧನೆ ಎಂಬ ಗ್ರಂಥ ರಚಿಸಿದ. ೧೮೬೧ರಲ್ಲಿ ಹಳೆ ಹಾಗೂ ಹೊಸ ಒಡಂಬಡಿಕೆಯನ್ನು ಸಿ.ಬಿ.ಬರ್ತನು ಕನ್ನಡೀಕರಿಸಿದ್ದಾನೆ. ಜೋಶೆಫ್ ಟೈಟದ ಕ್ರಿ.ಶ.೧೮೪೭ರಲ್ಲಿ Bible Selection ಎಂಬ ಗ್ರಂಥವನ್ನು ಕನ್ನಡೀಕರಿಸಿದ್ದಾನೆ. ಜಾನ್ ಗ್ಯಾರೆಟ್ ಬೈಬಲ್ ಪ್ರಸಂಗಗಳನ್ನು (ಭಾಷಣ) ಕನ್ನಡಿಕರಿಸಿದ್ದಾನೆ. "ಅಭಿಜಾಸ್ಯಾಮುವೇಲನು ಕ್ರಿ.ಶ.೧೮೬೭ರಲ್ಲಿ ಕನ್ನಡದಲ್ಲಿ ಬೈಬಲ್ ಲೇಖನಗಳನ್ನು ಹಲವಾರು ಬರೆದಿರುವನಲ್ಲದೆ, "ಜ್ಞಾನ ಕೀರ್ತನೆಗಳು ಎಂಬ ೧೧೭ ಪುಟದ ಕವನ ಸಾಹಿತ್ಯವು ಈತನಿಂದ ವಿಫುಲವಾಗಿ ಕಂಡುಬರುವುದು. ಈ ಎಲ್ಲ ಸಾಹಿತ್ಯ ಕೃತಿಗಳು ಬೈಬಲ್ ಅನುವಾದ ಪೂರಕವಾಗಿಯೇ ನಿರ್ಮಾಣಗೊಂಡವುಗಳಾಗಿವೆ. ಈ ಕೃತಿಗಳು ತಮ್ಮ ಯಶಸ್ಸಿನ ಸಾಧನೆಯತ್ತ ನಡೆದಿವೆ ಎಂಬುದು ನಂಬಲರ್ಹವಾದ ಮಾತು.

ವಿಲಿಯಂ ಕೇರಿಯ ೧೦೦೮ ಪುಟ. ಜಾನ್ ಹ್ಯಾಂಡ್ಸರ ೨೫೦೦ ಪುಟ ವೀಗಲ್‌ನ ೧೮೪ ಪುಟ ಹಾಗೂ ಕ್ಯಾಂಬೆಲ್ ರೈಸ್, ಹೆನ್ರಿಹೆಗ್ ರೀವ್, ರೀಡ್ ರವರ ಭಾಷಾಂತರಗಳು ಅಂದರೆ ಸುಮಾರು ೫೦೦೦ ಪುಟಗಳಷ್ಟು ಬೈಬಲ್ ಅನುವಾದಗಳು ಗದ್ಯದ ಯಶಸ್ಸಿಗೆ ಅದರಲ್ಲೂ ಹೊಸಗನ್ನಡ ಗದ್ಯ ಸಾಹಿತ್ಯದ ನಿರ್ಮಾಣ ಹಾಗೂ ಯಶಸ್ಸಿಗೆ ನಾಂದಿಯಾಗಿವೆ.

೫.೧೨. ಬೈಬಲ್ ಅನುವಾದದ ಮೌಲ್ಯಮಾಪನ

ಸಾಹಿತ್ಯ ಕೃತಿಗಳನ್ನು ಕುರಿತು ವಿಮರ್ಶೆಯಲ್ಲಿ ತೊಡಗಿದಾಗ ಅದು ಕೃತಿಯನ್ನು ಇತರ ಓದುಗರಿಗೆ ಕೇವಲ ಸ್ಪಷ್ಟವಾಗಿ ವಿವರಸುವ ಕ್ರಿಯೆ ಮಾತ್ರ ಆಗಿರುವುದಿಲ್ಲ. ಕೃತಿಯನ್ನು ಕುರಿತು ತೀರ್ಮಾನವನ್ನು ವ್ಯಕ್ತಪಡಿಸಬೇಕಾಗುತ್ತದೆ. ಆಗ ಆ ಕೃತಿಯ ಮೌಲ್ಯಮಾಪನವಾಗಿ ಅದು ಕಂಡುಬರುತ್ತದೆ. ಈ ದೃಷ್ಟಿಯಲ್ಲಿ ಬೈಬಲ್ ಮೌಲ್ಯಮಾಪನ ಕೇವಲ ಸಾಹಿತ್ಯ ಕೃತಿಯಂತೆ ಪರಿಗಣಿಸಲು ಸಾಧ್ಯವಿಲ್ಲ. ಕಾರಣ ಇದು ಧಾರ್ಮಿಕ ಗ್ರಂಥ. ಧಾರ್ಮಿಕ ಗ್ರಂಥಗಳ ಮೌಲ್ಯಮಾಪನಕ್ಕೆ ತೊಡಗಿದರೆ ಸಮತೋಲತೆಯನ್ನು ಮೌಲ್ಯಮಾಪಕ ಕಾಯ್ದುಕೊಳ್ಳಬೇಕಾಗುವುದು. ಧಾರ್ಮಿಕ ಭಾವನೆಯನ್ನು ಕೆರಳದೆ, ಪಕ್ಷಪಾತ ಮನೋದೃಷ್ಟಿ ಬೀರದೆ ಮೌಲ್ಯಮಾಪನ ವ್ಯಕ್ತಿನಿಷ್ಟತೆ ಹಾಗೂ ವಸ್ತುನಿಷ್ಟತೆಯನ್ನು ದೃಷ್ಟಿಯಲ್ಲಿರಿಸಬೇಕಾಗುವುದು.

ಬೈಬಲ್ ಅನುಸರಿಸುವವರು ಕೇವಲ ಒಂದೇ ಗುಂಪು ಅಥವಾ ಪಂಗಡವೆನ್ನಲು ಬರುವುದಿಲ್ಲ. ಈಗಿರುವ ಬೈಬಲ್ ಪ್ರಮುಖವಾಗಿ ಎರಡು ಪಂಗಡಗಳಾದ ರೋಮನ್ ಕೆಥೊಲಿಕ್ ಮತ್ತು ಪ್ರೊಟೆಸ್ಟೆಂಟ್ ಎಂದು ಕಂಡುಬರುವುದು. ಈ ಕೋಮಿನ ಜನರಲ್ಲಿ ಬೈಬಲ್ ಒಟ್ಟು ಪುಸ್ತಕಗಳು ವ್ಯತ್ಯಾಸಗೊಂಡಿವೆ. ಈ ಎರಡು ಪ್ರಮುಖ ಪಂಗಡಗಳಲ್ಲದೇ ಇನ್ನೂ ಅನೇಕ ಒಳ ಪಂಗಡಗಳು ಕಾಣಸಿಗುತ್ತವೆ. ಈ ದೃಷ್ಟಿಯಿಂದ ಮೌಲ್ಯಮಾಪನ ಕಾರ್ಯ ಸುಲಭ ಸಾಧ್ಯವಲ್ಲ.

ಕನ್ನಡ ಬೈಬಲ್ ಅನುವಾದ ೧೮೦೯ ರಿಂದ ನಡೆದು ಬಂದಿದ್ದರೂ ಇಂದಿನವರೆಗೂ ಅವ್ಯಾಹತವಾಗಿ ಸಾಗಿ ನಡೆದಿದೆ ಇಂದಿಗೂ ಕನ್ನಡದಲ್ಲಿ ವಿವಿಧ ಆವೃತ್ತಿಗಳು ಕಂಡುಬರುತ್ತಿವೆ. ಹೀಗಿದ್ದಾಗ್ಯೂ ಅನುವಾದಗಳು ಸಂಪೂರ್ಣ ತೃಪ್ತಿದಾಯಕವಾಗಿಲ್ಲದಿರುವುದು ತೋರಿಬರುತ್ತದೆ. ಹಿಂದಿನ ಅನುವಾದದ ಕ್ರಮ ಕೇವಲ ಮೂಲ ಭಾಷೆಗಳಾದ ಹಿಬ್ರೂ, ಗ್ರೀಕ, ಅರೆಮಿಕ್ ಗಳನ್ನು ಮುಖ್ಯವಾಗಿ ಗಮನಿಸಿ ಕಾರ್ಯ ನಡೆಯುತ್ತಿತ್ತು. ಇತ್ತೀಚಿನ ದಿನಗಳಲ್ಲಿ ಇಂಗ್ಲೀಷ್ ಆವೃತ್ತಿಗಳನ್ನು ಪ್ರಮುಖವಾಗಿ ಭಾಷಾಂತರಕಾರರು ಬಳಸುವುದುಂಟು.

ಇಂದಿನ ಅನುವಾದಕರಿಗೆ ಹಿಬ್ರೂ, ಗ್ರೀಕ್ ಭಾಷೆಗಳ ಆಳವಾದ ಅಭ್ಯಾಸ ಇರದೇ ಇರುವುದು ಇದಕ್ಕೆ ಕಾರಣವಾಗಿರಬಹುದು. ಬೈಬಲ್ ಅನುವಾದ ಸಾಹಿತ್ಯಿಕ ದೃಷ್ಟಿಯಲ್ಲಿ ತೃಪ್ತಿದಾಯಕವಾಗಿಲ್ಲ. ಇದನ್ನು ಸಾಹಿತ್ಯಿಕ ಮಟ್ಟದಲ್ಲಿ ಅನುವಾದಿಸಲು ಸಾಧ್ಯವಿಲ್ಲವೇ? ಎಂಬ ಪ್ರಶ್ನೆ ಅನೇಕರಿಗೆ ಇದ್ದರೂ ಮೂಲವನ್ನು ಇದ್ದಂತೆ ಕಾಪಾಡಬೇಕೆನ್ನುವ ದೃಷ್ಟಿಕೋನ ಬದಲಾಗದ ಹೊರತು ಈ ಕಾರ್ಯ ಸಾಧ್ಯವಿಲ್ಲ ಎನ್ನಬಹುದು.

ಕೆಥೊಲಿಕ್ ಆವೃತ್ತಿ (೧೯೭೨-೭೩)ಯ ಭಾಷಾಂತರ ಸಮಯದಲ್ಲಿ ಈ ಕುರಿತು ಪ್ರಸ್ತಾಪ ನಡೆದಾಗ, ಈಗಾಗಲೇ ಅನೇಕ ವಚನಗಳನ್ನು ಜನರು ತಮ್ಮ ದಿನ ನಿತ್ಯದ ಬದುಕಿಗೆ ಉದಾಹರಣೆ

ನೀಡಲು ಬಾಯಿಪಾಠವಾಗಿ ಬಳಸುತ್ತಿರುವುದರಿಂದ ಅವು ಬದಲಾವಣೆಗೊಂಡು ಪ್ರಕಟವಾದರೆ, ಜನರು ಅಂತಹ ಆವೃತ್ತಿಯನ್ನು ಸ್ವೀಕರಿಸದೆ, ಇರುವ ಸಾದ್ಯತೆಗಳು ಕಂಡುಬರಬಹುದೆಂಬ ಅಭಿಪ್ರಾಯ ಸ್ವೀಕರಿಸಲಾಯಿತು.

ಕನ್ನಡ ಬೈಬಲ್ ಮೌಲ್ಯೀಕರಿಸಲು ಅನೇಕ ಅಂಶಗಳು ಕಂಡುಬಂದರು, ಅವುಗಳನ್ನು ಪ್ರಸ್ತಾಪಿಸಬಹುದು. ಆದರೆ ಜಾರಿಗೊಳಿಸಲು ಸರಳವಾದವುಗಳೆಂದು ಹೇಳಲು ಬರುವಂತಿಲ್ಲ. ಈಗಿನ ಬೈಬಲ್ ಅನುವಾದ ಪಾದ್ರಿಗಳ ದೃಷ್ಟಿಕೋನದಿಂದ ಹೊರಬಂದಾಗ ಮಾತ್ರ, ಸಾಹಿತ್ಯ ಕೃತಿಯ ಅಂಶಗಳಿಂದ ರೂಪ ಪಡೆಯಲು ಸಾಧ್ಯ. ಇಲ್ಲವೇ ಕ್ರೈಸ್ತರಲ್ಲದವರು ಈ ಗ್ರಂಥ (Bible)ವನ್ನು ಭಾಷಾಂತರಿಸಲು ಪ್ರಯತ್ನಿಸಬಹುದಾದ ಅವಶ್ಯಕತೆಯು ಕಂಡುಬರುತ್ತದೆ.

ಸುವಾರ್ತೆಗಳು ನಾಲ್ಕು ಇದ್ದು, ಇವುಗಳಲ್ಲಿ ಲೇಖಕನ ದೃಷ್ಟಿ-ಭಾವನೆಯಿಂದ ಪುನರಾವರ್ತನೆಗೊಂಡಿದೆ. ಈ ನಾಲ್ಕು ಸುವಾರ್ತೆಗೆ ಬದಲಾಗಿ ಒಂದೇ ಕ್ರಿಸ್ತನ ಚರಿತ್ರೆ ರೂಪಿಸುವ ಸಾಧ್ಯತೆ ಕಂಡುಬರುತ್ತದೆ. ಬದಲಾವಣೆಯ ಅವಶ್ಯಕತೆ ಕಂಡುಬಂದರೂ, ಧಾರ್ಮಿಕ ಕೃತಿ ಎಂಬ ಮಡಿವಂತಿಕೆ ಹಾಗೂ ಪೂಜ್ಯಭಾವ, ಯಾವ ಕಾರ್ಯವನ್ನೂ ಹೊಸದೃಷ್ಟಿಯಿಂದ ನೋಡಲು ಅಥವಾ ಕ್ರಿಯಾರೂಪಕ್ಕೆ ತರಲು ಸಾಧ್ಯವಾಗದಂತಿದೆ.

ಅನೇಕ ಕ್ರೈಸ್ತ ವಿದ್ವಾಂಸರಲ್ಲಿಯೂ ಬೈಬಲ್ ಸಾಹಿತ್ಯ ಕುರಿತು ಹೊಸ ದೃಷ್ಟಿ ಇದೆ. ಆದರೆ ಇಲ್ಲಿಯವರೆಗೂ ಒಬ್ಬ ವ್ಯಕ್ತಿಯಿಂದ ಸಂಪೂರ್ಣ ಭಾಷಾಂತರಗೊಂಡಿಲ್ಲ. ಈ ಕಾರ್ಯ ಅಕ್ಷರಿ ಸೊಸೈಟಿ ಕೈಗೆತ್ತಿಕೊಂಡಾಗ ಮಾತ್ರ ಸಾಧ್ಯ. ಸಾಹಿತ್ಯದ ಮಟ್ಟದಲ್ಲಿ ಬೈಬಲ್ ಅನುವಾದ ತರುವುದಾದರೆ ಅದರ ಪ್ರಕಟಣೆಯ ಜವಾಬ್ದಾರಿ ಹಾಗೂ ಪ್ರಸಾರ ಕುರಿತು ಯೋಚಿಸಬೇಕಾಗುವುದು. ಸಾಹಿತ್ಯ ಪರಿಷತ್ ಇಂತಹ ಧಾರ್ಮಿಕ ಕೃತಿಗಳ ತರ್ಜುಮೆ ಕುರಿತು ಚಿಂತಿಸುವುದು ಸೂಕ್ತವೆಂದೆನಿಸುವುದು.

ಬೈಬಲ್, ಕುರ್ ಆನ್, ಭಗವದ್ಗೀತೆಯಲ್ಲಿ ಹೇಳಿರುವುದು ಸತ್ಯ ಎಂಬ ಭಾವನೆ ಇದ್ದರೂ ಸಂಪೂರ್ಣ ಸತ್ಯವೇ? ಈ ಪ್ರಶ್ನೆ ಎಲ್ಲರಲ್ಲಿಯೂ ಇದೆ. ನಿಜವಾದ ಧರ್ಮೀಯನಿಗೆ, ಧರ್ಮ ಮುಖ್ಯವಲ್ಲ, ಧರ್ಮದ ಗ್ರಂಥ ಮುಖ್ಯವಲ್ಲ. ಅದರ ಸತ್ಯಾಸತ್ಯತೆಯೇ ಮುಖ್ಯವಾದುದು. ನ್ಯಾಯಯುತವಾದ ಉಪದೇಶಕ್ಕೆ ಈ ಗ್ರಂಥಗಳೆಲ್ಲವು ಅವಶ್ಯಕವೇ ಹೀಗಿದ್ದಾಗ ಬೈಬಲ್ ವಸ್ತು ನಿಷ್ಠತೆಯನ್ನು ಗ್ರಹಿಸುವುದಾದರೆ ಇದು ಇಂತಹ ಧರ್ಮೀಯನಿಗೆ ಬರೆದುದೆಂದು ನೇರವಾಗಿ ತಿಳಿಸುವುದಿಲ್ಲ. ಕ್ರಿಸ್ತನ ಬೋಧನೆ ಕೇವಲ ಜನಾಂಗೀಯವಾಗಿರಲಿಲ್ಲ. ಆತ ಹೇಳಿದ್ದೇನೆಂದರೆ-

"ನೀವು(ಶಿಷ್ಯರು) ಹೊರಟು ಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ ಅವರಿಗೆ ತಂದೆ(ದೇವರ)ಯ ಮಗನ(ಕ್ರೈಸ್ತನ) ಪವಿತ್ರಾತ್ಮ(ದೇವರಆತ್ಮ)ನ ಹೆಸರಿನಲ್ಲಿ ಸ್ನಾನ ದೀಕ್ಷೆ ಮಾಡಿಸಿ,

ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವುದಕ್ಕೆ ಅವರಿಗೆ ಉಪದೇಶ ಮಾಡಿರಿ. ನೋಡಿರಿ, ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ ಎಂದು ಹೇಳಿದನು.''

ಹೀಗಿದ್ದರೂ ಈ ಕೃತಿಯು ಕೇವಲ ಕ್ರೈಸ್ತರಿಗೆ ಸೀಮಿತವಾಗಿದೆ. ಇದರ ಧಾರ್ಮಿಕ ವಿಧಿ-ವಿಧಾನಗಳು ನಂಬಿದವರಿಗೆ ಮಾತ್ರ ಅನ್ವಯವಾಗುತ್ತವೆ. ಮಾನವನ ಜೀವಿತಕ್ಕೆ ಅನ್ವಯವಾಗುವ ಮಾರ್ಗದರ್ಶನ ಇದರಲ್ಲಿ ಅಡಕವಾಗಿದೆ. ಮನುಷ್ಯನಿಗೆ ದೇವರ ಬಗ್ಗೆ ಹತ್ತು ಹಲವು ಕಲ್ಪನೆಗಳಿವೆ. ಆದರೆ ಬೈಬಲ್ ಮಾನವನ ಸೃಷ್ಟಿಯಿಂದ ಹಿಡಿದು ದೇವರ ಅಸ್ತಿತ್ವದವರೆಗೆ ಮಾಹಿತಿ ನೀಡುವ ಏಕೈಕ ಗ್ರಂಥವಾಗಿದೆ. ದೇವರ ಮತ್ತು ಮನುಷ್ಯನ ಕಡಿದು ಹೋದ ಸಂಬಂಧವನ್ನು ಪುನಃ ಸ್ಥಾಪಿಸುವ ಉದ್ದೇಶವನ್ನು ಬೈಬಲ್ ಹೊಂದಿದೆ.

"ಸಾಹಿತ್ಯದಲ್ಲಿ ವಸ್ತುನಿಷ್ಠಕೃತಿ ಎಂಬ ಮಾತು ಲೇಖಕನ ಧೋರಣೆಯನ್ನು ಸೂಚಿಸುತ್ತದೆ. ಬರಹಗಾರ ತನ್ನ ವ್ಯಕ್ತಿತ್ವವನ್ನು ಪೂರ್ತಿಯಾಗಿ ಇಲ್ಲವಾಗಿಸಿಕೊಂಡು ಅಥವಾ ಅದನ್ನು ಹಿಂಬದಿಗೆ ತಳ್ಳಿ, ತನ್ನ ಕೃತಿಯ ಪಾತ್ರ, ಸನ್ನಿವೇಶ ಕ್ರಿಯೆ, ಆಲೋಚನೆ ತನ್ನನ್ನು ಯಾವುದೇ ಒಂದು ಪಾತ್ರಕ್ಕೆ ಅಥವಾ ಆಲೋಚನೆಗೆ ಬದ್ಧಗೊಳಿಸಿಕೊಳ್ಳದಂತೆ ರಚಿಸುವ ಕೃತಿ ವಸ್ತುನಿಷ್ಠ ಕೃತಿಯಾಗುತ್ತದೆ."[೧]

ಈ ಮೇಲಿನ ವಸ್ತುನಿಷ್ಠ ಕೃತಿಯ ಲಕ್ಷಣವನ್ನು ಜಗತ್ತಿನ ಸಾಹಿತ್ಯ ಕೃತಿಗಳಿಗೆ ಅನ್ವಯಿಸುವುದಾದರೆ ಬೈಬಲ್ ಕೃತಿಗೆ ಅನ್ವಯಿಸುವಷ್ಟು ಯಾವ ಕೃತಿಗೂ ಈ ಲಕ್ಷಣ ಹೊಂದಲಾರದೆನ್ನಬಹುದು. ಮೊದಲನೆಯದಾಗಿ ಬರಹಗಾರ ತನ್ನ ವ್ಯಕ್ತಿತ್ವವನ್ನು ಪೂರ್ತಿಯಾಗಿ ಇಲ್ಲವಾಗಿಸಿಕೊಂಡದ್ದು ಬೈಬಲ್‌ನ ಪ್ರಾರಂಭದ ಐದು ಕಾಂಡಗಳು ಯಾವ ವ್ಯಕ್ತಿಯಿಂದ ಬರೆದವುಗಳಾಗಿವೆ ಎಂದು ಇಲ್ಲಿಯವರೆಗೂ ಖಚಿತವಾಗಿ ಗುರುತಿಸಲು ಸಾಧ್ಯವಾಗಿಲ್ಲ. ಕೊನೆಗೆ ಮೋಶೆ(MOSES) ಎಂಬ ಪ್ರವಾದಿ ಬರೆದಿರಬಹುದೆಂದು ಊಹಿಸಿ, ನಂತರ ಆತನ ಹೆಸರನ್ನು ಪಂಚಗ್ರಂಥ(ಕಾಂಡ)ಗಳಿಗೆ ಹೆಸರಿಸಲಾಯಿತು. ಮುಂದಿನ ಪ್ರವಾದಿಗಳ ಬರಹಗಳು ಆಯಾ ಪ್ರವಾದಿಯ ಹೆಸರಿನಿಂದ ಕಂಡುಬಂದರೂ, ಅಲ್ಲಿ ಪ್ರವಾದಿಗಳ ವ್ಯಕ್ತಿತ್ವದ ಹೆಚ್ಚಳ ಅಥವಾ ವ್ಯಕ್ತಿ ನಿಷ್ಟತೆಯ ಅಂಶ ಎಲ್ಲಿಯೂ ಕಂಡುಬರುವುದಿಲ್ಲ. "ದೇವರು ನಮಗೆ ತಿಳಿಸಿದುದನ್ನು ನಾನು ನುಡಿಯುತ್ತೇನೆ" ಅಥವಾ "ದೇವರು ನನಗೆ ಹೀಗೆ ಹೇಳಿದ"ನೆಂಬುದಾಗಿ ಸಂಪೂರ್ಣ ದೇವರ ಮಹಿಮೆಗೆ ಶ್ರಮ ಪಟ್ಟಿರುವಂತೆ ಬರಹಗಳು ಕಂಡುಬರುತ್ತವೆ. ಈ ಪರಂಪರೆ ಮುಂದಿನ ಎಲ್ಲ ಲೇಖಕರಲ್ಲಿಯೂ ಕಂಡುಬರುತ್ತದೆ.

ಎರಡನೇದಾಗಿ "ತನ್ನ ನಂಬಿಕೆ ಭಾವನೆಗಳು ಪ್ರಕಟವಾಗದಂತೆ ರಚಿಸುವ ಕೃತಿ ವಸ್ತುನಿಷ್ಠ ಕೃತಿಯಾಗುತ್ತದೆ" ಎಂಬುದಾಗಿದೆ. ಬೈಬಲ್ ಬರವಣಿಗೆಯಲ್ಲಿ ವ್ಯಕ್ತಿನಿಷ್ಟವಾದ ನಂಬಿಕೆಯ ವಿಚಾರ

೧. ವಿಮರ್ಶೆಯ ಪರಿಭಾಷೆ, ಓ.ಎಲ್.ನಾಗಭೂಷಣಸ್ವಾಮಿ, ಪು.೩೯

ಪ್ರಚುರಪಡಿಸದೆ, ದೇವರು ನಂಬಿಗಸ್ತನು ಆತನನ್ನು ನಂಬುವವರು ನಿತ್ಯಜೀವ(ಸ್ವರ್ಗ)ವನ್ನು ಹೊಂದುವರೆಂಬ ಸತ್ಯ ಪ್ರತಿಪಾದನೆಯಲ್ಲಿಯೇ ಸಾಹಿತ್ಯ ಮುಂದೆ ಸಾಗಿದೆ.

ವೈಯಕ್ತಿಕವಾದ ಭಾವನೆಗಳು ಪ್ರಕಟವಾಗಿರುವುದು ಎಲ್ಲಿಯೂ ಕಂಡುಬರುವುದಿಲ್ಲ. ಭಾವನೆಗಳ ವರ್ಣನೆಗೆ ಇಲ್ಲಿ ಆಸ್ಪದವಿಲ್ಲ. ಏನೇ ಇದ್ದರೂ ಘಟನೆಯ ನಿರೂಪಣೆ, ಆಗಿ ಹೋದ ಸಂಘಟಿಗಳ ವಿಶ್ಲೇಷಣೆ ಮುಂಬರುವ ಸಂಗತಿಗಳಿಗೆ ಆಧಾರಯುತ ವಿವರಣೆ ಮಾತ್ರ ಕಂಡುಬರುತ್ತದೆ.

ಬೈಬಲ್ ವಸ್ತುನಿಷ್ಟತೆಯನ್ನು ಗ್ರಹಿಸುವಾಗ ಆಲೋಚನೆ ಭಾವನೆಗಳ ವ್ಯಾಖ್ಯಾನಗಳು ಕಂಡುಬರುವುದಿಲ್ಲ. ಹೀಗಾಗಿ ಬೈಬಲ್ ವಸ್ತು ಇತರ ಧರ್ಮೀಯರು ಗ್ರಹಿಸುವಲ್ಲಿ ಕ್ಲಿಷ್ಟವಾಗಿ ತೋರಿಬರುತ್ತದೆ. ಈ ಕಾರಣದಿಂದ ಜಗತ್ತಿನಲ್ಲಿ ಸಿಕ್ಕುವ ವಿಫುಲ ಸಾಹಿತ್ಯವೆಂದರೆ ಬೈಬಲ್ ಅರ್ಥಮಾಡಿಕೊಳ್ಳುವಲ್ಲಿ ಸೃಷ್ಟಿಯಾದ ಸಾಹಿತ್ಯ. ಕನ್ನಡದಲ್ಲಿಯೂ ಮಿಶನರಿಗಳ ಬೈಬಲ್ ಪೂರಕ ಸಾಹಿತ್ಯ ರಚನೆಯಲ್ಲಿ ತೊಡಗಿ, ಅನೇಕ ಕೃತಿಗಳನ್ನು ರಚಿಸಿರುವುದನ್ನು ಇಲ್ಲಿ ಸ್ಮರಿಸಬಹುದು.

ಅಧ್ಯಾಯ ಆರು

ಸಂವಹನ ಮಾಧ್ಯಮವಾಗಿ ಬೈಬಲ್

೬.೧. ಬೈಬಲ್ ಸಂವಹನ ಮಾಧ್ಯಮವಾಗಿ ಬಳಕೆಗೊಂಡ ವಿಧಿ-ವಿಧಾನಗಳು

೬.೨. ಸಂಗೀತಕ್ಕೆ ಧಾರ್ಮಿಕ ಕಲ್ಪನೆ

೬.೩. ಸಂವಹನ ರೀತಿಯಲ್ಲಿ ಜರುಗುವ ವಿಧಿ ಕ್ರಿಯೆಗಳು

೬.೪. ಉತ್ಸವ

೬

ಬೈಬಲ್ ಸಂವಹನ ಮಾಧ್ಯಮವಾಗಿ ಬಳಕೆಗೊಂಡ ವಿಧಿ-ವಿಧಾನಗಳು

೬.೧. ಬೈಬಲ್ ಸಂವಹನ ಮಾಧ್ಯಮವಾಗಿ ಬಳಕೆಗೊಂಡ ವಿಧಿ-ವಿಧಾನಗಳು

ಮನುಷ್ಯ ಸಮಾಜ ಜೀವಿ, ಬಾಲ್ಯದಿಂದಲೂ ಸಂವಹನೆಯ ಕ್ರಿಯೆಯಲ್ಲಿ ತೊಡಗಿರುವವನು. ಅನುಭವಗಳು ಭಾವನೆಗಳು, ಯೋಚನೆಗಳು ಮತ್ತು ಮನಸ್ಸು ಕೆಲಸ ಮಾಡುವ ವಿಧಾನವನ್ನು ಸಂವಹನೆಯ ಅಗತ್ಯವೇ ನಿರ್ಧರಿಸಿ ರೂಪಿಸುತ್ತದೆ ಎಂಬ ಅಂಶ ಮಾತ್ರಗಮನದಲ್ಲಿ ಇರುವುದಿಲ್ಲ.

"ಒಂದು ಮನಸ್ಸು ಇನ್ನೊಂದು ಮನಸ್ಸನ್ನು ಪ್ರಭಾವಿತಗೊಳಿಸುವಂತೆ ಸುತ್ತಲ ಪರಿಸರದಲ್ಲಿ ತೊಡಗಿಸಿಕೊಂಡಾಗ, ಆ ಇನ್ನೊಂದು ಮನಸ್ಸಿನಲ್ಲಿ ಮೊದಲ ಮನಸ್ಸಿನಲ್ಲಿ ಇದ್ದಂತಹ ಅನುಭವ ಉಂಟಾಗುತ್ತದೆ. ಮತ್ತು ಹಾಗಾಗುವುದಕ್ಕೆ ಆ ಮೊದಲ ಮನಸ್ಸಿನ ಅನುಭವ ಭಾಗಶಃ ಕಾರಣವಾಗುತ್ತದೆ."[೧] ಮತ್ತು ಮಾತು ಬರವಣಿಗೆ, ಸಂಜ್ಞೆ, ಮುಖಭಾವ ದೇಹದ ಭಂಗಿ ಇವು ಸಂವಹನೆಯ ಮಾಧ್ಯಮಗಳಾಗಿ ವರ್ತಿಸುತ್ತವೆ.

ಯಾವುದೇ ಜಾತಿ-ಧರ್ಮದ, ವಿಧಿ-ಕರ್ಮಕ್ರಿಯೆಗಳು ಆಯಾ ಧರ್ಮ ತತ್ವ-ಸಿದ್ಧಾಂತಗಳ ತಳಹದಿಯ ಆಧಾರದಲ್ಲಿಯೇ ಸಾಗುತ್ತಿರುವಂತಹುಗಳು. ಅವು ಇಂದು-ನಿನ್ನೆಯವುಗಳಲ್ಲ ಅವುಗಳಿಗೆ ಅವುಗಳದೇ ಆದ ಚರಿತ್ರೆ ಉಂಟು, ಹೀಗಾಗಿ ಧರ್ಮ, ಕ್ರಿಯಾ ವಿಧಿಗಳನ್ನು ಯಾರೂ ಹಗುರವಾಗಿ ಭಾವಿಸಿ ಪ್ರಶ್ನಿಸುವುದಿಲ್ಲ. ಬದಲಾಗಿ ಶಿರಸಾವಹಿಸಿ ಅವುಗಳನ್ನು ಅನುಸರಿಸಿ, ಅನುಭವಿಸಿ ಅನನ್ಯತೆಯನ್ನು ಪಡೆಯುವಲ್ಲಿ ಇಚ್ಛೆ ಉಳ್ಳವರಾಗಿದ್ದಾರೆ. ಮದುವೆ ಎಂಬುದನ್ನು ಉದಾಹರಣೆಯಾಗಿ ತೆಗೆದುಕೊಂಡರೆ ಒಬ್ಬ ಪುರುಷ, ಒಂದು ಸ್ತ್ರೀಯನ್ನು ಗಂಡ-ಹೆಂಡತಿಯನ್ನಾಗಿ ಮಾಡುವ ಒಂದು ಸಹಜ ಪ್ರಕ್ರಿಯೆ. ಮನಸ್ಸಿನಿಂದ ಅಥವಾ ಬಹಿರಂಗವಾಗಿ ಮಾಲೆ, ಕರಿಮಣಿ ಅಥವಾ ಅರಿಶಿಣ ಕೊಂಬನ್ನು ಕಟ್ಟುವದರಿಂದ ನಡೆದು ಹೋಗುವ ಸಂಗತಿ, ಕೊನೆಯಲ್ಲಿ ಆತ ಅವಳ ಗಂಡ ಅವಳು ಆತನ ಹೆಂಡತಿ. ಇದನ್ನು ನೆರವೇರಿಸುವಲ್ಲಿ ವಿವಿಧ ಧರ್ಮೀಯರು ಅದೆಷ್ಟೋ ಕ್ರಿಯೆಗಳನ್ನು, ಸೂತ್ರ ತಂತ್ರಗಳನ್ನು ಮಂತ್ರ

೧. ವಿಮರ್ಶೆಯ ಪರಿಭಾಷೆ, ಓ.ಎಲ್.ನಾಗಭೂಷಣಸ್ವಾಮಿ, ಪು.೧೩

ಹೋಮ ಯಜ್ಞಗಳನ್ನು ಮಾಡುತ್ತಾರೆ. ಹಾಗೆ ನೋಡಿದರೆ ಇದೆಲ್ಲಾ ಅವಶ್ಯವೆ? ಮಂತ್ರಕ್ಕಿಂತ ತಂತ್ರಹೆಚ್ಚು ತಂತ್ರಕ್ಕಿಂತ ಉಗುಳೇ ಹೆಚ್ಚು ಅನ್ನುವಂತೆ ಅವರವರ ಅನುಕೂಲಕ್ಕೆ, ಮನೆತನದ ಗೌರವ ಆದರಗಳಿಗೆ ತಕ್ಕಂತೆ ಜರುಗುವ ಕ್ರಿಯೆಗಳಿಗೆ ಯಾವ ಹಿನ್ನೆಲೆ ಉಂಟು? ಶಾಸ್ತ್ರೋಕ್ತವಾಗಿ ಕಾಳಜಿವಹಿಸಿ ಮದುವೆ ನಡೆದು ಹೋದಾಗ್ಯೂ ಮುಂದಿನ ಬಾಳುವೆಗಳು ಕೆಲ ಸಮಯ ಮುರಿದು ಹೋಗಲು ಕಾರಣವೇನು?

ಏನೇ ಆದರೂ ತಮ್ಮ ಮನಸ್ಸಿನ ತೃಪ್ತಿಗೆ ಸಮಾಜದ ನಡೆ-ನುಡಿಗೆ ಗೌರವಕ್ಕೆ ತಕ್ಕಂತೆ ಮಾಡಲೇ ಬೇಕೆಂಬುದು ಮನುಷ್ಯನ ಹಂಬಲ. ಇದನ್ನು ಗಮನಿಸಿದಾಗ ತಾನೂ ಸಾಗಿ ಬಂದ ಸಮಾಜದ ಧರ್ಮ ಕ್ರಿಯೆಗಳನ್ನು ತೊಡೆದು ಸಾಗದೆ ಅವುಗಳ ಅನುಸರಣೆಯಲ್ಲಿ, ಅನುಕ್ರಮದಲ್ಲಿ ನಡೆಯಲು ಬಯಸುವವನಾಗಿದ್ದಾನೆ. ಹೀಗಿರುವಾಗ ಪ್ರತಿಯೊಬ್ಬ ಧರ್ಮೀಯನಿಗೂ, ತನ್ನ ಧರ್ಮಮಾರ್ಗ ಇದ್ದೇ ಇದೆ. ಅದನ್ನು ತ್ಯಜಿಸಿ ಅಧರ್ಮೀಯನಾಗದ ಮಾನವ ಹಿಂದಿನಿಂದಲೂ ಇಂದಿನವರೆಗೆ ಚಾಚೂ ತಪ್ಪದೆ ಧರ್ಮಬೋಧೆಗಳ ಸಂವಹನಶೀಲ ವ್ಯಕ್ತಿಯಾಗಿ ನಡೆದು ಕೊಳ್ಳುತ್ತಿರುವುದು ಸಹಜವೇ.

ಜಗತ್ತಿನ ಪ್ರಮುಖ ಧರ್ಮಗಳಾದ ಕ್ರೈಸ್ತ ಹಾಗೂ ಇಸ್ಲಾಂ ತಮ್ಮವೇ ಆದ ವಿಧಿ-ವಿಧಾನಗಳನ್ನು ಕರ್ಮಕ್ರಿಯೆಗಳನ್ನು ಹೊಂದಿದ ಧರ್ಮ ಗ್ರಂಥಗಳನ್ನು ಪಡೆದಿವೆ. ಆದುದರಿಂದ ತಾವು ಅನುಸರಿಸುವ ಧರ್ಮಮಾರ್ಗದಲ್ಲಿ, ಧರ್ಮಗ್ರಂಥವನ್ನೇ ಶಿರಸಾವಹಿಸಿ ಅಳವಡಿಸಿಕೊಂಡಿರುವುದು ಕಂಡುಬರುತ್ತದೆ. ತಾವು ಮಾಡುವ ಧಾರ್ಮಿಕ ಕ್ರಿಯೆಗಳು ಏನನ್ನು ಸೂಸಿಸುತ್ತವೆ? ಅವುಗಳನ್ನು ಅನುಸರಿಸುವುದು ಯಾಕೆ? ಇದರಿಂದ ಆಗಬಹುದಾದ ವೈಯಕ್ತಿಕ ಹಾಗೂ ಆತ್ಮೀಕ ಪ್ರಯೋಜನವೇನು? ಇವೆಲ್ಲವುಗಳನ್ನು ಧರ್ಮಗ್ರಂಥದ ಮೂಲಕ ಕಂಡುಕೊಳ್ಳುವಲ್ಲಿ ಅವರು ಯಶಸ್ಸನ್ನು ಸಾಧಿಸಿದಂತಿದೆ.

ಇದನ್ನು ಇನ್ನು ಹಲವು ಧರ್ಮೀಯರಿಗೆ ಹೋಲಿಸಿದಾಗ ಅವರಿಗೆ, ಮನುಷ್ಯನನ್ನು ಸಂಪೂರ್ಣವಾಗಿ ಧಾರ್ಮಿಕ ವಿಧಿ-ವಿಧಾನದಲ್ಲಿ ತೊಡಗಿಸಿದ ಬಗ್ಗೆ, ಪ್ರಮುಖ ಒಂದು ಆಧಾರ ಗ್ರಂಥ ಇಲ್ಲದಂತೆ ಕಂಡುಬರುವುದು. 'ಹಿಂದೂ ಧರ್ಮ' ಸಿಂಧೂನಾಗರಿಕತೆಯಿಂದ ಹಿಡಿದು ಇಂದಿನ ವಿವಿಧ ಹಿಂದೂ ಧರ್ಮದ ಶಾಖೆಗಳ ಜನರಲ್ಲಿ ಹೀಗೆಯೇ ನಡೆಯಬೇಕು, ಇದನ್ನು ಬಿಟ್ಟು ಬೇರೆಯದನ್ನು ಅನುಸರಿಸಕೂಡದು. ಅಥವಾ ಇದು ನಿಯಮ ಬದ್ಧವಾಗಿದ್ದು ಇದನ್ನು ತ್ಯಜಿಸಕೂಡದೆಂದು ನಿರ್ದಿಷ್ಟತೆ. ನಿಖರತೆ ಹಾಗೂ ಖಚಿತತೆ ಕಾಣುವುದು ಕಷ್ಟ. ಹಾಗೆ ಕಂಡರು ಅವು ಅಪ್ರಸ್ತುತವೆಂದು ನಿರಾಕರಿಸುತ್ತ ನಡೆದಂತೆ ಕಂಡುಬರುವುದು.

ವಿಧಿ-ಕರ್ಮಗಳು ಸಮಾಜದ ಅನೇಕ ಸಂದರ್ಭಗಳಲ್ಲಿ ನಡೆಯುತ್ತಿರುವಾಗ ಗುರುಗಳು ಅಥವಾ ಹಿರಿಯರು ಹೇಳಿದುದೇ ಸತ್ಯ. ಇದಕ್ಕೆ ಪ್ರತಿಯಾಗಿ ಪ್ರಶ್ನೆ ಕೇಳುವಂತಿಲ್ಲ ಎಂಬ ಪರಿಪಾಠ ಬೆಳೆದಿದೆ.

ಬ್ರಾಹ್ಮಣ-ವೀರಶೈವ ವಿಧಿ-ಕರ್ಮಕ್ರಿಯೆಗಳು ಎಲ್ಲಾ ಬ್ರಾಹ್ಮಣ-ವೀರಶೈವರಿಗೆ ಒಂದೇ ಬಗೆಯಾಗಿ ಅನ್ವಯಿಸುತ್ತವೆ ಎಂದು ಹೇಳಲು ಬರುವುದಿಲ್ಲ.

ಆದರೆ ಕ್ರೈಸ್ತ ಧರ್ಮದಲ್ಲಿ ಅವರದೇ ಆದ ಕ್ರಮ ಉಂಟು. ಇಂತಹುಗಳನ್ನು ನೆರವೇರಿಸಲು ಅಭಿಶಕ್ತನಾದ ಗುರುವೇ ಇರಬೇಕು. ಹಾಗೂ ಅವುಗಳನ್ನು ದಾಖಲಿಸಲು ದೇವಾಲಯ(ಚರ್ಚ)* ಅಥವಾ ಚುನಾಯಿತ ಆಡಳಿತ ಮಂಡಳಿಯ ಸಭೆ ಇರಬೇಕು. ಅಗತ್ಯವಿದ್ದಾಗ ಆ ದಾಖಲೆಗಳನ್ನು ಒದಗಿಸುವ ವ್ಯವಸ್ಥೆ ಕಂಡುಬರುವುದು. ಯಾವ ಧಾರ್ಮಿಕ ಕ್ರಿಯೆಗಳಾಗಲಿ ಅವು ಚರ್ಚೆಗೆ ಸಂಬಂಧಿಸಿ ನಡೆಯಬೇಕೆಂಬ ನಿಯಮ ಅನುಸರಣೆಯಲ್ಲಿರುವುದು ತೋರಿಬರುತ್ತದೆ.

ಸಮಾಜದ ಹಾಗೂ ವ್ಯಕ್ತಿಯ ಪ್ರತಿಯೊಂದು ಕ್ರಿಯೆಯು ಬೈಬಲ್ ಬೋಧನೆಯ ಆಧಾರದ ಮೇಲೆಯೇ ಜರುಗುವುದು. ಬೈಬಲ್ ಹೊರತು ಪಡಿಸಿ ನಡೆಯುವ ಸಂಪ್ರದಾಯಗಳನ್ನು ಕ್ರೈಸ್ತರು ಗೌರವಿಸುವುದಿಲ್ಲ. ಕ್ರೈಸ್ತರಲ್ಲಿ ಮುಖ್ಯವಾಗಿ ಎರಡು ಪಂಗಡಗಳುಂಟು. ಮೊದಲನೇದಾಗಿ ಕೆಥೋಲಿಕ ಎರಡನೇಯವಾಗಿ ಪ್ರೊಟೆಸ್ಟೆಂಟ್. ಪ್ರಸ್ತುತ ಬರಹದಲ್ಲಿ ಎರಡೂ ಪಂಗಡಗಳನ್ನು ಅನುಲಕ್ಷಿಸಿ ವಿವರಣೆ ಕೊಡುವ ಪ್ರಯತ್ನವಿದೆ.

ಕೆಥೋಲಿಕ ಜನಾಂಗದವರು ನಡೆಸುವ ಕೆಲವು ವಿಧಿಕ್ರಿಯೆಗಳೆಲ್ಲವೂ ಬೈಬಲ್ ಆಧಾರದೊಂದಿಗೆ ಜರುಗುವುವು ಎಂದು ನಿಖರವಾಗಿ ಹೇಳಲು ಬರುವಂತಿಲ್ಲ. ಈ ಕಾರಣ ಕ್ರಿ.ಶ.೧೫೧೭ರಲ್ಲಿ ಮಾರ್ಟಿನ್ ಲೂಥರ "ಧರ್ಮಸಭೆ (ಕೆಥೋಲಿಕ ಚರ್ಚ್)ಯನ್ನು ಧಿಕ್ಕರಿಸಿ ಬಂದವನು. ವಿಟನ್‌ಬರ್ಗ ವಿಶ್ವವಿದ್ಯಾನಿಲಯದ ತತ್ವಶಾಸ್ತ್ರ ಪ್ರಾಧ್ಯಾಪಕನಾಗಿದ್ದ ಈತ. ಬೈಬಲ್ ಗ್ರಂಥವನ್ನು ಮಾತ್ರ ಆದರ್ಶವಾಗಿಟ್ಟುಕೊಂಡು ಉಳಿದೆಲ್ಲ ಸಂಪ್ರದಾಯಗಳು, ಆಚರಣೆಗಳು, ಅಬದ್ಧ, ಅನಾದರ್ಶ ಅಸಂಸ್ಕೃತವೆಂದು ಒತ್ತಿ ಹೇಳಿದನು. ಜ್ಞಾನಸ್ನಾನ ಹಾಗೂ ಪರಮಪ್ರಸಾದಗಳನ್ನುಳಿದು ಉಳಿದೆಲ್ಲ ಸಂಸ್ಕಾರಗಳು ಯೇಸುಸ್ವಾಮಿಯಿಂದ ಬಂದಂತವುಗಳಲ್ಲ. ಯಾಜಕರು (ಪಾದ್ರಿಗಳು) ಕನ್ಯಾಸ್ತ್ರೀ (ಸಿಸ್ಟರ್)ಯರು ಸ್ವಇಚ್ಛೆಯಿಂದ ಮದುವೆ ಮಾಡಿಕೊಳ್ಳಬಹುದು. ಯಾರೂ ಯಾವುದೇ ಕಾರಣಕ್ಕೂ ಪೋಪ್ ಜಗದ್ಗುರುವಿನ ಆಜ್ಞೆಯನ್ನು ಪರಿಪಾಲಿಸಬಾರದು"[1]ಎಂದು ನೇರವಾಗಿ ಪ್ರತಿಪಾದಿಸಿದ್ದಾನೆ. ಇದು ಕೆಥೋಲಿಕ ಸಂಪ್ರದಾಯಕ್ಕೆ ವಿರುದ್ಧ(ಪ್ರೊಟೆಸ್ಟ್)ವಾಗಿ ಕಂಡುಬಂದಿತು. ಹೀಗೆ ವಿರೋಧ ವ್ಯಕ್ತಪಡಿಸಿ ಆತನು ನಿರೂಪಿಸಿದ ಕ್ರಮವನ್ನು ಯಾರೂ ಅನುಸರಿಸಿದರೋ ಅವರು ಪ್ರೊಟೆಸ್ಟೆಂಟ್‌ರು ಎಂದು ಕರೆಯಿಸಿಕೊಳ್ಳಲಾರಂಭಿಸಿದರು.

---

೧. ಕ.ಕ್ರೈ.ಇತಿಹಾಸ, ಬಿ.ಎಸ್.ತಲ್ವಾಡಿ, ಪು.೧೦೪

*Church ಎಂದರೆ ವಾಸ್ತವವಾಗಿ ಧರ್ಮಸಭೆಯೆಂದು ಧ್ವನಿಸುತ್ತದೆ. ಈಗಿನ ಕನ್ನಡ ಕ್ರೈಸ್ತರು ಚರ್ಚನ್ನು ದೇವಾಲಯವೆಂದು ಕರೆಯುವುದು ರೂಢಿ. ಹಿಂದಿನವರು ಇಂದಿಗೂ ಚರ್ಚನ್ನು ಮಠವೆಂದೆ ಸಂಬೋಧಿಸುತ್ತಾರೆ.

ಇಂದು ಕೆಥೋಲಿಕರನ್ನುಳಿದ ಇತರ ಪಂಗಡದವರು ಬೈಬಲ್ ಆಧಾರಿತ ವಿಧಿ ಕ್ರಿಯಾಚರಣೆಗಳನ್ನು ಅನುಸರಿಸುವವರಾಗಿರುವರು. ಮೂರ್ತಿ ಪೂಜೆ ಕೆಥೋಲಿಕರಲ್ಲಿ ಕಂಡು ಬಂದರೂ ಅದನ್ನು ವಿವರಿಸುವ ವಿಧಾನ ಹೀಗುಂಟು. "ಸರ್ವೇಶ್ವರ(ದೇವರು)ನಾದ ಭಗವಂತನಿಗೆ ಮಾತ್ರ ಸಲ್ಲಬೇಕಾದ ಸರ್ವಾರ್ಪಣ ಭಾವದ ಪೂಜೆಯನ್ನು ಇತರ ಯಾವತ್ತೂ ವ್ಯಕ್ತಿಗಳಿಗಾಗಲಿ, ವಿಷಯಕ್ಕಾಗಲಿ ಮಾಡಿದರೆ ಅದು ಮೂರ್ತಿಪೂಜೆಯೆಂದು ತಿಳಿಯಬೇಕು. ಆದುದರಿಂದ ಇಂತಹ ಗೌರವವನ್ನು ಅರ್ಥಾತ್ ಆರಾಧನೆಯನ್ನು ಮೂರ್ತಿಗಳಿಗಾಗಲಿ, ವ್ಯಕ್ತಿಗಳಿಗಾಗಲಿ ಕ್ರೈಸ್ತರು ಕೊಡಲಾರರು. ಹಾಗಿದ್ದರೂ ಕ್ರೈಸ್ತರು ಮೂರ್ತಿಗಳನ್ನು ಗೌರವಿಸುವುದಿಲ್ಲ. ಆದರೆ ಮೂರ್ತಿಗಳೇ ಭಗವಂತನೆಂದು ಮಾತ್ರ ತಿಳಿದುಕೊಳ್ಳುವುದಿಲ್ಲ... ಸಂದು ಹೋದ ವ್ಯಕ್ತಿಗಳ ಸ್ಮರಣೆಗಾಗಿ, ಆ ವ್ಯಕ್ತಿಗಳ ರೂಪಗಳನ್ನು ಮಾಡಿ ಗೌರವಿಸುವುದು ಪ್ರತಿಯೊಂದು ಸಮಾಜದಲ್ಲಿಯೂ ರೂಢಿಯಲ್ಲಿರುವುದು, ಹಾಗಿರುವಾಗ ಭಗವಂತನ ಸೇವೆಯಲ್ಲಿ ಸರ್ವಸ್ವವನ್ನೂ ತ್ಯಜಿಸಿ ಆತನ ಪವಿತ್ರನಾಮದಲ್ಲಿ ಸಮಾಜದ ಆ ಮೂಲಕ ದೇಶದ ಮತ್ತು ಜಗತ್ತಿನ ಹಿತವನ್ನು ಮಾಡಿದ ಮಹಾಭಕ್ತರ ಪ್ರತಿಮೆಯನ್ನು ಅಥವಾ ಚಿತ್ರವನ್ನು ಗೌರವಿಸುವುದು ದೋಷವಲ್ಲ. ಆದರೆ ಸರ್ವೇಶ್ವರನಿಗೆ ಮಾತ್ರ ನೀಡುವ ಗೌರವವನ್ನು ನೀಡುವುದು ಮೂರ್ತಿ ಪೂಜೆಯೆನಿಸುವುದು. ಪ್ರತೀಕೇಷು ಪ್ರತೀಕ ಏವೋಪಾಸ್ಯನ ಬ್ರಹ್ಮ. ವಿಗ್ರಹಾದಿಗಳಲ್ಲಿ ಸರ್ವೇಶ್ವರನಲ್ಲ ಅವುಗಳು ಪ್ರತಿಮೆಗಳೆಂದೇ ಉಪಾಸಿಸಬೇಕು ಎಂದು ಶ್ರೀರಾಮಾನುಜರು ಹೇಳಿದ ಮಾತಿನ ಮರ್ಮವಾದರೂ ಮೂರ್ತಿಪೂಜೆಯ ಕುರಿತು ಕೆಥೋಲಿಕ ಪಂಥದ ಭಾವನೆಗೆ ವ್ಯತಿರಿಕ್ತವಾದುದೇನಲ್ಲವೆಂದು ತಿಳಿಯಬಹುದು."[೧] ಆದರೆ ಮೂರ್ತಿಪೂಜೆಯ ಕುರಿತು 'ಬೈಬಲ್'ನಲ್ಲಿ ಹೀಗೆ ಸ್ಪಷ್ಟವಾಗಿ ಹೇಳಲಾಗಿದೆ-

"ಯಾವ ಮೂರ್ತಿಗಳನ್ನೂ ಮಾಡಿಕೊಳ್ಳಬಾರದು ಆಕಾಶದಲ್ಲಾಗಲಿ, ಭೂಮಿಯಲ್ಲಾಗಲಿ, ಭೂಮಿಯ ಕೆಳಗಣ ನೀರಿನಲ್ಲಾಗಲಿ, ಇರುವ ಯಾವುದರ ರೂಪವನ್ನಾಗಲಿ ಮಾಡಿಕೊಳ್ಳಬಾರದು. ಅವುಗಳಿಗೆ ಅಡ್ಡಬೀಳಲೂ ಬಾರದು."[೨] ಆದುದರಿಂದ ಪ್ರೊಟೆಸ್ಟೆಂಟರ ಚರ್ಚಗಳಲ್ಲಿ ಯಾವುದರ (ಕ್ರಿಸ್ತ, ಮರಿಯಳು) ಮೂರ್ತಿಗಳು ಇರುವುದಿಲ್ಲ. ಹೀಗಾಗಿ ಪೂಜಾವಿಧಿಗಳು ಸಂಪೂರ್ಣ ಆತ್ಮೀಕ ಆರಾಧನೆಯ ರೂಪವನ್ನು ಪಡೆದುಕೊಂಡಿವೆ.

ವ್ಯಕ್ತಿ ಹುಟ್ಟಿದಾಗಿನಿಂದ ಮರಣದವರೆಗಿನ ಎಲ್ಲ ಸಾಮಾಜಿಕ, ಧಾರ್ಮಿಕ, ಕ್ರಿಯಾವಿಧಿಗಳು ಬೈಬಲ್ ಆಧರಿಸಿ ಹೇಗೆ ಸಾಗುತ್ತವೆ. ಇಂತಹ ಸಂದರ್ಭದಲ್ಲಿ ಬೈಬಲ್ ಹೇಗೆ ಸಂವಹನ ಮಾಧ್ಯಮವಾಗಿ ಕಂಡುಬರುತ್ತದೆಂಬ ಅಂಶಗಳನ್ನು ಇನ್ನೂ ಕೂಲಂಕುಷವಾಗಿ ನೋಡಬಹುದು.

---

೧. ಕ್ರೈಸ್ತ ತತ್ವದರ್ಶನ, ಎಡ್ವಿನ್ ಡಿಸೋಜ, ಪು.೨೬೭

೨. ಸತ್ಯವೇದ, ಧರ್ಮೋ ೫ ೮ ೯, ಪು.೨೦೭

ಚರ್ಚಗಳಲ್ಲಿ ಜರುಗುವ ಪ್ರತಿಯೊಂದು ಆರಾಧನೆಯು ಕ್ರಮಬದ್ಧವಾಗಿ ನಡೆಯುತ್ತವೆ. ಇಲ್ಲಿನ ಕ್ರಮ ಹಾಗೂ ಸಮಯ ಪದೆ ಪದೇ ಬದಲಾಗುವಂತಹುದಲ್ಲ. ಆಯಾ ಭಾಷೆಗಳನ್ನು ಅನುಸರಿಸಿ ದೇವಾಲಯದ ಆರಾಧನೆಯು ನಡೆಯುತ್ತಿದ್ದರೂ ಅನುಸರಿಸುವ ವಿಧಾನಗಳು ಒಂದೇ ಆಗಿರುತ್ತವೆ. ಇಲ್ಲಿ ವ್ಯಕ್ತಿಗಳಿಗೆ ಮಹತ್ವ ನೀಡದೆ ದೇವರಿಗೆ ಸಲ್ಲುವ ಮಾನ ಪ್ರಭಾವಗಳು, ಗೌರವ ಆಧರಗಳಿಗೆ ಹೆಚ್ಚು ಒತ್ತುಕೊಡಲಾಗುವುದು.

ಕೆಥೋಲಿಕ ಹಾಗೂ ಪ್ರೊಟೆಸ್ಟೆಂಟ್ ಪಂಗಡಗಳಲ್ಲಿ ಆರಾಧನೆಯ ಕ್ರಮ ವಿಭಿನ್ನವಾಗಿ ಕಂಡುಬರುವುದು. ಈ ಎರಡೂ ಪಂಗಡಗಳ ಮೂಲ ಉದ್ದೇಶ ಒಂದೇ ಇದ್ದು, ಬೈಬಲ್ ಮೂಲಕ ಎಲ್ಲವನ್ನೂ ಅರ್ಥೈಸುವಿಕೆ ಕಂಡುಬಂದರೂ, ಬೈಬಲ್ ಮೂಲಕ ಸಂವಹನಗೊಳ್ಳುವ ಸಂಸ್ಕಾರದಲ್ಲಿ ಏಕತೆ ಕಂಡುಬರುವುದಿಲ್ಲ. ಕೆಥೋಲಿಕರಲ್ಲಿ ಫಾದರಗಳಿಗೆ ಕೊಡುವ ಮಹತ್ವ ದೇವರಿಗೆ ಸಮಾನವಾದುದೆಂದು. ಕನ್ಯಾಸ್ತ್ರೀ(ಸಿಸ್ಟರ್)ಯರಲ್ಲಿ 'ಮದರ' ಎಂದು ಕರೆಯಿಸಿಕೊಳ್ಳುವವರಿಗೆ ತಾಯಿ ಮೇರಿಯ ಸ್ಥಾನವು ಸಲ್ಲುವುದೆಂಬ ತಿಳುವಳಿಕೆಯು ಕ್ರೈಸ್ತರ ಇತರ ಪಂಗಡಗಳಲ್ಲಿ ಕಂಡುಬರುವುದಿಲ್ಲ. ಕೆಥೋಲಿಕರನ್ನು ಹೊರತುಪಡಿಸಿ ಉಳಿದೆಲ್ಲ ಪಂಗಡಗಳು ಬೈಬಲ್ ಹಾಗೂ ಕ್ರಿಸ್ತನಿಗೆ ಮಾತ್ರ ಮಹತ್ವ ನೀಡುತ್ತವೆ. ಇಲ್ಲಿ ಮೂರ್ತಿಗಳಿಗೆ ಹಾಗೂ ಅವುಗಳ ಆರಾಧನೆಗೆ ಅವಕಾಶವಿಲ್ಲ.

ಯಾವ ಬಗೆಯ ಸಂವಹನ ಕ್ರಿಯೆಗಳು ಸೂಕ್ತವಾದವುಗಳು. ಮತ್ತು ಸತ್ಯವಾದವುಗಳೆಂದು ಹಾಗೂ ವ್ಯಕ್ತಿ, ಕಾಲ, ಅವಕಾಶಗಳಿಂದ ಬದಲಾವಣೆ ಹಾಗೂ ರೂಪಾಂತರಗೊಂಡು, ಕೊನೆಯಲ್ಲಿ ಎಲ್ಲವು ಹದಗೆಡಬಾರದೆಂಬ ಸದುದ್ದೇಶದಿಂದ, ಮೂಲ ಪಂಗಡಗಳಾದ ಕೆಥೋಲಿಕ ಹಾಗೂ ಪ್ರೊಟೆಸ್ಟೆಂಟ್ ನವರು ತಮ್ಮದೇ ಆರಾಧನಾ ಕ್ರಮ ಪುಸ್ತಕಗಳನ್ನು ಹೊಂದಿವೆ.

ಕೆಥೋಲಿಕರು ಕರ್ನಾಟಕದ ಪ್ರಥಮ ಧರ್ಮಾಧ್ಯಕ್ಷರಾದ ಶಾರ್ಬೊನೋ (೧೮೪೫-೧೮೭೩) ಮಹಾಸ್ವಾಮಿಗಳಿಂದ ಮುದ್ರಿಸಲ್ಪಟ್ಟ 'ಕುಟುಂಬದ ದೊಡ್ಡ ಜಪದ ಪುಸ್ತಕ' ಎಂಬ ಅತ್ಯಂತ ಜನಪ್ರಿಯವಾದ ಆರಾಧನಾ ಪುಸ್ತಕವನ್ನು ಬಳಸುವರು. "ಚರ್ಚಗಳ ಆರಾಧನಾ ಕ್ರಮಕ್ಕಾಗಿ ಹಾಗೂ ದಿನ ನಿತ್ಯದ ಜೀವನ ಕ್ರಮಕ್ಕಾಗಿ ಮತ್ತು ಕುಟುಂಬದ ಪ್ರತಿಯೊಬ್ಬ ವ್ಯಕ್ತಿಗೆ, ವೈಯಕ್ತಿಕವಾಗಿ ಅಥವಾ ಕೌಟುಂಬಿಕವಾಗಿ ಬೇಕಾಗಬಹುದಾದ ಮತ್ತು ಎಲ್ಲಾ ಸಮಯ ಸಂದರ್ಭಗಳಿಗೆ ಉಪಯುಕ್ತವಾದ ಪ್ರಾರ್ಥನೆ ಪ್ರವಚನಗಳನ್ನು ಈ ಪುಸ್ತಕದಲ್ಲಿ ಸಂಗ್ರಹಿಸಿ"[೧] ಇಡಲಾಗಿದೆ. ಇದು ಆದಿಯಿಂದಲೂ ಅಂದರೆ ಯೇಸು ಸಭೆ (ಜೆಸ್ಸುವಿಟ್) ಯ ಸ್ವಾಮಿ ಲಿಯೊನಾರ್ಡೊ ಚಿನ್ನಾಮಿ (೧೬೪೮-೧೬೭೬) ಅವರ ಕಾಲದಿಂದಲೂ ಕನ್ನಡ ಕ್ರೈಸ್ತರಲ್ಲಿ ರೂಢಿಯಲ್ಲಿದ್ದ ಜಪಗಳನ್ನೂ ಪ್ರಾರ್ಥನೆಗಳನ್ನೂ ಸಂಗ್ರಹಿಸಿ ಅದಕ್ಕಾಗಿ ಒಂದು ಮುದ್ರಣಾಲಯ (ಕೆಥೋಲಿಕ ಮಿಶನ್ ಪ್ರೆಸ್)ವನ್ನು ಬೆಂಗಳೂರಿನಲ್ಲಿ ೧೮೪೮ರಲ್ಲಿ ಆರಂಭಿಸಿ ಅದೇ ವರ್ಷ ಸೆಪ್ಟೆಂಬರ್

೧. ಕುಟುಂಬದ ದೊಡ್ಡ ಜಪದ ಪುಸ್ತಕ ಮುನ್ನುಡಿ, ಪು.೪

ತಿಂಗಳಲ್ಲಿ ಈ ಪುಸ್ತಕವನ್ನು ಪ್ರಪ್ರಥಮವಾಗಿ ಪ್ರಕಟಿಸಿದರು. ನಂತರ ಇದು ಹಲವು ಬಾರಿ (೧೮೬೩-೬೫, ೧೮೯೭, ೧೯೩೦, ೧೯೩೫, ೧೯೪೮) ಪುನರ್ ಮುದ್ರಣಗೊಂಡಿದೆ.

೧೯೬೩ರಲ್ಲಿ ದ್ವಿತೀಯ ವ್ಯಾಟಿಕನ್ ಸಮ್ಮೇಳನದ ನಂತರ ನೂತನ ಆರಾಧನಾ ವಿಧಿಗಳನ್ನು ಒಳಗೊಂಡು ಮಾರ್ಪಾಟುಗೊಂಡಿತು. ೧೯೮೧ರಲ್ಲಿ ಹೊಸ ರೂಪದೊಂದಿಗೆ 'ಕುಟುಂಬದ ದೊಡ್ಡ ಜಪದ ಪುಸ್ತಕ' ಬಳಕೆಯಲ್ಲಿದೆ. ಈ ಪುಸ್ತಕವನ್ನು ಅನುಸರಿಸಿ ಕೆಥೋಲಿಕರು ದೈವದ ಆಚರಣೆಗಳನ್ನು ಕೈಕೊಂಡು ನಡೆಯುವರು.

ಜರ್ಮನ್ ಹಾಗೂ ಇಂಗ್ಲೆಂಡ್ ದೇಶದಿಂದ ಬಂದ ಮಿಶನರಿಗಳು ಭಾರತ ಹಾಗೂ ಕರ್ನಾಟಕದಲ್ಲಿದ್ದ ಕ್ರೈಸ್ತರ (ಕೆಥೋಲಿಕ) ಆರಾಧನಾ ಪದ್ಧತಿಗೆ ವಿಭಿನ್ನವಾದ ಕ್ರಮವನ್ನು ರೂಪಿಸಿದರು. ೧೬ನೇ ಶತಮಾನದಲ್ಲಿ ಕರ್ನಾಟಕದಲ್ಲಿದ್ದ ಕನ್ನಡದಲ್ಲಿ ಕೃತಿರಚಿಸಿದ ಲಯೋನಾರ್ಡೊ ಚಿನ್ನಾಯಿ ಕೆಥೋಲಿಕ ಸಾಂಪ್ರದಾಯಕ್ಕೆ ಸೇರಿದ ವ್ಯಕ್ತಿ ಈ ಸಂಪ್ರದಾಯ ಭಾರತದಲ್ಲಿ ಪೋರ್ಚುಗೀಸ್ ಹಾಗೂ ಫ್ರೆಂಚರದಾಗಿದೆ. ಆದರೆ ಪ್ರೊಟೆಸ್ಟೆಂಟ್ ಸಂಪ್ರದಾಯವು ಜರ್ಮನ್ ಹಾಗೂ ಇಂಗ್ಲೆಂಡ ಮೂಲದ್ದಾಗಿದ್ದುದರಿಂದ ಇವರ ಆರಾಧನಾ ವೈಖರಿ ಬೇರೆ ಸ್ವರೂಪ ತಾಳಿತು. ಜರ್ಮನದಲ್ಲಿಯ ಬಾಶೆಲ್ ಎಂಬ ನಗರದಿಂದ ಬಂದ ಮಿಶನರಿಗಳು ಭಾರತದಲ್ಲಿ 'ಬಾಶೆಲ್ ಮಿಶನ್' ಎಂಬ ಹೆಸರಿನಿಂದ ಚರ್ಚ್ ಹಾಗೂ ಕೆಲವು ಸಂಘ-ಸಂಸ್ಥೆ (ವಿದ್ಯಾ-ವೈದ್ಯಕೀಯ)ಗಳನ್ನು ಪ್ರಾರಂಭಿಸಿದರು.*[೧] ನಂತರ ಬಾಶೆಲ್ ಮಿಶನ್ನಿನ ಆರಾಧನಾ ಕ್ರಮಗಳು ಚರ್ಚುಗಳಲ್ಲಿ ಬಳಕೆಗೆ ಬಂದವು. ತದನಂತರ ಭಾರತಕ್ಕೆ ಕಾಲಿಟ್ಟ ಎಲ್ಲ ಪಂಗಡಗಳು ಚರ್ಚ ಆರಾಧನೆಯಲ್ಲಿ ಹೆಚ್ಚು ಕಡಿಮೆ ಒಂದೇ ಬಗೆಯ ಕ್ರಮ ಅನುಸರಿಸುತ್ತಿದ್ದವು. ೧೯೫೮ರಲ್ಲಿ ಬಾಶೆಲ್ ಎಂಬ ಹೆಸರಿಗೆ ಬದಲಾಗಿ, ಎಲ್ಲ ಪಂಗಡಗಳ*[೨] ಮಿಶನರಿಗಳು ಹಾಗೂ ಆಡಳಿತಾಧಿಕಾರಿಗಳು ಒಂದೆಡೆ ಸೇರಿ 'ಚರ್ಚ್ ಆಫ್ ಸೌತ್ ಇಂಡಿಯಾ' (C.S.I) ಎಂಬ ಹೆಸರನ್ನು ಸೂಚಿಸಿ ಅದನ್ನ ಬಳಕೆಗೆ ತಂದವು. ಈಗಲೂ ಸಿ.ಎಸ್.ಐ ಎಂಬ ಹೆಸರಿನಿಂದ ಚರ್ಚ್ ಹಾಗೂ ಸಂಸ್ಥೆಗಳು ನಡೆಯುತ್ತಿವೆ.

ಈ ದಕ್ಷಿಣ ಭಾರತ ಸಭೆ(C.S.I) ತಾನು ಚರ್ಚಗಳಲ್ಲಿ ಆರಾಧನೆ ನಡೆಸುವ ಸಲುವಾಗಿ. ೧೯೬೧ರಲ್ಲಿ The Book of Common Worship ಎಂಬ ಪುಸ್ತಕವನ್ನು 'ಹುದುವಾದ ಆರಾಧನೆ' ಎಂಬ ಕನ್ನಡ ಅವತರಣಿಕೆಯೊಂದಿಗೆ ರೂಢಿಗೆ ತಂದಿದೆ.

ಕೆಥೋಲಿಕರು 'ಕುಟುಂಬದ ದೊಡ್ಡ ಜಪದ ಪುಸ್ತಕ'ವನ್ನು ಹಾಗೂ ಪ್ರೊಟೆಸ್ಟೆಂಟರ್ 'ಹುದುವಾದ ಆರಾಧನೆ' ಎಂಬ ಪುಸ್ತಕವನ್ನು ಚರ್ಚಿನ ಆರಾಧನಾ ಸಂದರ್ಭದಲ್ಲಿ ಅನುಸರಿಸುತ್ತಾರೆ. ಈ ಪುಸ್ತಕಗಳ ಮೂಲಕವೇ ಬೈಬಲ್ ಸಾಹಿತ್ಯದ ಬಳಕೆ ಸಾಂದರ್ಭೋಚಿತವಾಗಿ ಸಂವಹನಗೊಳ್ಳುತ್ತದೆ.

---

*[೧] ೧೯೪೭ರಲ್ಲಿ ಮದ್ರಾಸಿನ ಸೆಂಟ್‌ಜಾರ್ಜ ಕೆಥೆಡ್ರಲ್ ಚರ್ಚ್‌ನಿಂದ ಪ್ರಾರಂಭವಾಯಿತು.

*[೨] ಬಾಶೆಲ್ ಮಿಶನ್, ವೆಸ್ಲಿಯನ್, ಪ್ರೆಸ್‌ಬೀಟರಿಯನ್, ಮೆಥೋಡಿಸ್ಟ್ ಹಾಗೂ ಲಂಡನ್ ಮಿಶನ್ ಮುಂತಾದವುಗಳು

ಕ್ರೈಸ್ತರ ಯಾವುದೇ ವಿಧಿಕ್ರಿಯೆಗಳು ಧಾರ್ಮಿಕವಾಗಿ ಜರುಗುವಲ್ಲಿ ಹಾಗೂ ದೇವಾಲಯಗಳಲ್ಲಿ, ಕ್ರೈಸ್ತರಲ್ಲದವರಿಗೆ ಭಾಗವಹಿಸುವಲ್ಲಿ ಅಭ್ಯಂತರ ಕಂಡುಬರುವುದಿಲ್ಲ, ಆದರೆ ಧಾರ್ಮಿಕ ಸಂಸ್ಕಾರಗಳಲ್ಲಿ ಪಾಲು ತೆಗೆದುಕೊಳ್ಳುವುದಾದರೆ ಅವರು ಕ್ರಿಸ್ತನನ್ನು ನಂಬುವುದು ಮಾತ್ರವಲ್ಲ ದೇವರು ಒಬ್ಬನೆ ಎಂದು ನಂಬಿರಬೇಕು. ಹಿಂದೂ ದೇವಾಲಯಗಳಲ್ಲಿ ಮಂಗಳಾರತಿ ನಡೆದಾಗ. ಅಲ್ಲಿ ಯಾರು, ಇರುವರೋ ಅವರೆಲ್ಲರೆದುರು ಆರತಿ ತಟ್ಟೆ ಹಿಡಿಯುವರು. ಎಲ್ಲರಿಗೂ ಸಮಾನ ಅವಕಾಶ. ಚರ್ಚಗಳಲ್ಲಿ ಹಾಗಿಲ್ಲ. ಪ್ರವೇಶ ಮುಕ್ತ ಬೋಧನೆ ಉಚಿತ. ಆದರೆ ಪವಿತ್ರ ಸಂಸ್ಕಾರಗಳಲ್ಲಿ ಪಾಲು ತೆಗೆದುಕೊಳ್ಳಲು ಕ್ರಿಸ್ತನ ಹೆಸರಿನಲ್ಲಿ ದೀಕ್ಷೆ ಹೊಂದಿರಬೇಕು.

ನಿಜಕ್ರೈಸ್ತರಾದವರು ಅಪೋಸ್ತಲರ ವಿಶ್ವಾಸ ಸೂತ್ರವನ್ನು ಹಾಗೂ ನೈಸಿಯದ ವಿಶ್ವಾಸ ಸೂತ್ರವನ್ನು ಒಪ್ಪಿಕೊಳ್ಳುವವರಾಗಿರಬೇಕು. ಈ ಸೂತ್ರಗಳು ಹೀಗಿವೆ. ಅಪೋಸ್ತಲರ ಸೂತ್ರ.

"ಪರಲೋಕ ಭೂಲೋಕಗಳನ್ನು ಸೃಷ್ಟಿಸಿದ ಸರ್ವಶಕ್ತನಾಗಿರುವ ತಂದೆಯಾದ ದೇವರನ್ನು ನಂಬುತ್ತೇನೆ. ಆತನ ಏಕಕುಮಾರನಾಗಿರುವ ನಮ್ಮ ಪ್ರಭುವಾದ ಯೇಸು ಕ್ರೈಸ್ತನನ್ನು ನಂಬುತ್ತೇನೆ. ಈತನು ಪರಿಶುದ್ಧಾತ್ಮನಿಂದ ಕನ್ಯೆಮರಿಯಳ ಗರ್ಭದಲ್ಲಿ ಧರಿಸಲ್ಪಟ್ಟು ಆಕೆಯಲ್ಲಿ ಹುಟ್ಟಿ. ಪೊಂತಿ ಪಿಲಾತನ ಅಧಿಪತ್ಯದಲ್ಲಿ ಶ್ರಮ ಹೊಂದಿ ಶಿಲುಬೆಗೆ ಜಡಿಯಲ್ಪಟ್ಟು ಸತ್ತು ಹೂಣಲ್ಪಟ್ಟು ಪಾತಾಳಕ್ಕೆ ಇಳಿದು, ಮೂರನೇಯ ದಿನದಲ್ಲಿ ಸತ್ತವರೊಳಗಿಂದ ಎದ್ದು ಪರಲೋಕಕ್ಕೆ ಏರಿ ಹೋಗಿ, ಸರ್ವಶಕ್ತನಾಗಿರುವ ತಂದೆಯಾದ ದೇವರ ಬಲ ಪಾರ್ಶ್ವದಲ್ಲಿ ಕುಳಿತುಕೊಂಡಿರುತ್ತಾನೆ. ಈತನು ಅಲ್ಲಿಂದ ತಿರುಗಿ ಬಂದು ಬದುಕಿದವರಿಗೂ, ಸತ್ತವರಿಗೂ, ನ್ಯಾಯ ತೀರಿಸುವನು ಎಂಬುದನ್ನು ನಂಬುತ್ತೇನೆ. ನಾನು ಪರಿಶುದ್ಧಾತ್ಮನನ್ನು ನಂಬುತ್ತೇನೆ. ಒಂದೇ ಪರಿಶುದ್ಧ ಕ್ರೈಸ್ತ ಸಭೆಯು, ಭಕ್ತರ ಅನ್ಯೂನ್ಯತೆಯು, ಪಾಪದ ಪರಿಹಾರವು, ದೇಹದ ಪುನರುತ್ಥಾನವೂ ನಿತ್ಯ ಜೀವವೂ ಉಂಟು ಎಂಬುದನ್ನು ನಂಬುತ್ತೇನೆ."[೧]

ನೈಸಿಯ ವಿಶ್ವಾಸ ಸೂತ್ರ*

"ಸರ್ವಶಕ್ತನಾದ ತಂದೆಯಾಗಿರುವ ಒಬ್ಬನೇ ದೇವರನ್ನು ನಂಬುತ್ತೇನೆ. ಆತನು ಪರಲೋಕದ ಭೂಲೋಕಗಳನ್ನೂ ಎಲ್ಲಾ ದೃಶ್ಯಾದೃಶ್ಯ ವಸ್ತುಗಳನ್ನು ಉಂಟುಮಾಡುವವನಾಗಿದ್ದಾನೆ.

ಒಬ್ಬನೇ ಕರ್ತನಾದ ಯೇಸುಕ್ರಿಸ್ತನನ್ನು ನಂಬುತ್ತೇನೆ. ಈತನು ಅನಾದಿಯಿಂದಲೇ ದೇವರ ಏಕಪುತ್ರನೂ, ದೇವರಿಂದಾಗುವ ದೇವರೂ, ಪರಂಜ್ಯೋತಿಯಿಂದಾಗುವ ಪರಂಜ್ಯೋತಿಯೂ, ಸಾಕ್ಷಾತ್

೧. ಹುದುವಾದ ದೇವಾರಾಧನೆ, ಪು.೧೧೬-೧೧೭

*ಕ್ರಿ.ಶ.೩೨೫ ಕಾನ್ಸಟಾಂಟನೋಪಲ್ ಪೂರ್ವದಲ್ಲಿ ೫೦ ಮೈಲಿ ದೂರದ ನಿಕೇಯ ಎಂಬಲ್ಲಿ ೨೨೦ ವಿಶ್ವದ ಪ್ರಮುಖ ಬಿಶೋಪ್ಪರು ಸೇರಿ ರೂಪಿಸಿದ ವಿಶ್ವಾಸ ಸೂತ್ರ ನಿಕೇಯ ಸ್ಥಳದ ಹೆಸರೇ ನೈಸಿಯ ಎಂದು ರೂಢಿಯಲ್ಲಿದೆ

ದೇವರಿಂದಾಗುವ ಸಾಕ್ಷಾತ್ ದೇವರೂ ಆಗಿದ್ದಾನೆ. ಈತನು ಸೃಷ್ಟಿಯಲ್ಲ; ದೇವರ ನಿತ್ಯಪುತ್ರನೇ; ತಂದೆಯ ತತ್ವವೂ ಈತನ ತತ್ವವೂ ಒಂದೇ; ಈತನ ಮೂಲಕವಾಗಿ ಸಮಸ್ತವೂ ಉಂಟಾಯಿತು. ಈತನು ಮನುಷ್ಯರಾದ ನಮಗೆ ಹಿತವನ್ನು ಬಯಸಿ ನಮ್ಮ ರಕ್ಷಣಾರ್ಥವಾಗಿ ಪರಲೋಕದಿಂದಿಳಿದು ಪವಿತ್ರಾತ್ಮನಿಂದ ಮರಿಯಳೆಂಬ ಕನ್ಯೆಯಲ್ಲಿ ದೇಹ, ಧರಿಸಿಕೊಂಡು ಮನುಷ್ಯನಾದನು. ಪೊಂತಿ ಪಿಲಾತನ ಆದಿಪತ್ಯದಲ್ಲಿ ನಮಗೋಸ್ಕರ ಶಿಲುಬೆಗೆ ಜಡಿಯಲ್ಪಟ್ಟು ಬಾಧೆಯನ್ನನು ಭವಿಸಿ ಸತ್ತು ಸಮಾಧಿಯಲ್ಲಿಡಲ್ಪಟ್ಟನು. ವೇದೋಕ್ತಿಗೆ ಅನುಸಾರವಾಗಿ ಮೂರನೆ ದಿನದಲ್ಲಿ ಎದ್ದು ಬಂದು, ಪರಲೋಕಕ್ಕೆ ಏರಿಹೋಗಿ ತಂದೆಯ ಬಲಗಡೆಯಲ್ಲಿ ಕುಳಿತುಕೊಂಡಿರುತ್ತಾನೆ. ಈತನು ತಿರುಗಿ ವೈಭವದೊಡನೆ ಬಂದು ಬದುಕಿರುವವರಿಗೂ ಸತ್ತವರಿಗೂ ನ್ಯಾಯತೀರಿಸುವನು ಈತನ ರಾಜ್ಯಕ್ಕೆ ಅಂತ್ಯವೇ ಇಲ್ಲ.

ಪವಿತ್ರಾತ್ಮನನ್ನು ನಂಬುತ್ತೇನೆ. ಈತನು ಕರ್ತನು, ಜೀವದಾಯಕನು, ತಂದೆಯಿಂದಲೂ ಮಗನಿಂದಲೂ ಹೊರಡುವವನು, ತಂದೆಯೊಡನೆಯೂ ಮಗನೊಡನೆಯೂ ಸರಿಸಮಾನವಾದ ಆರಾಧನೆಯನ್ನೂ ಘನತೆಯನ್ನೂ ಹೊಂದುವವನು, ಪ್ರವಾದಿಗಳ ಮೂಲಕ ನುಡಿದವನು ಆಗಿದ್ದಾನೆ.

ಪವಿತ್ರವಾಗಿಯೂ ಸರ್ವಸಾಧಾರಣವಾಗಿಯೂ ಅಪೊಸ್ತಲರಿಂದ ಸ್ಥಾಪಿತವಾಗಿಯೂ ಇರುವ ಒಂದೇ ಸಭೆ ಇದೆ ಎಂದು ನಂಬುತ್ತೇನೆ. ಪಾಪ ಪರಿಹಾರಕ್ಕಾಗಿ ಒಂದೇ ದೀಕ್ಷಾಸ್ನಾನವುಂಟೆಂದು ಒಪ್ಪಿಕೊಳ್ಳುತ್ತೇನೆ. ಸತ್ತವರ ಪುನರುತ್ಥಾನವನ್ನೂ ಮುಂದಣ ಲೋಕದ ಜೀವವನ್ನೂ ಎದುರು ನೋಡುತ್ತೆನೆ ಆಮೆನ್"[೧]

ಕ್ರೈಸ್ತರು ನಡೆಸುವ ಪ್ರತಿ ವಿಧಿ-ಕ್ರಿಯೆಗಳು ಸಂಪೂರ್ಣ 'ಬೈಬಲ್' ಮೂಲಕ ಹಾಗೂ ಪೂರಕವಾಗಿಯೇ ಸಾಗುವಂತಹುಗಳು. ಪ್ರಮುಖವಾಗಿ ಸಂವಹನ ಮಾಧ್ಯಮವಾಗಿ ಬಳಕೆಯಾದ ಸಂದರ್ಭಗಳು ಜನನ, ದೃಢೀಕರಣ(ಮುಂಜವಿ) ಮದುವೆ, ಮರಣ ಹಬ್ಬ ಹರಿದಿನಗಳು ಹಾಗೂ ಉಳಿದ ಧಾರ್ಮಿಕ ಸಂಪ್ರದಾಯಗಳನ್ನು ಮುಖ್ಯವಾಗಿಟ್ಟುಕೊಂಡು ಪರಿಶೀಲಿಸುವುದು ಇಲ್ಲಿನ ಉದ್ದೇಶಗಳಲ್ಲಿ ಒಂದಾಗಿದೆ.

೬.೨. ಸಂಗೀತಕ್ಕೆ ಧಾರ್ಮಿಕ ಕಲ್ಪನೆ

ಹಿಂದೂ ಧರ್ಮದ ಪರಿಕಲ್ಪನೆ

ಸಂಗೀತದ ಹುಟ್ಟು ಓಂ, ಓಂ, ಓಂ, ನಾದದ ಗರ್ಭದಿಂದಾಯಿತೆಂದು ಓಂ, ಈ ಶಬ್ದ ಅ.ಉ.ಮ ಈ ಮೂರು ಅಕ್ಷರಗಳಿಂದ ಕೂಡಿದೆ. ಈ ಮೂರು ಅಕ್ಷರಗಳು ಮೂರು ಶಕ್ತಿಗಳ ದ್ಯೋತಕವಾಗಿದೆ. 'ಅ' ಉತ್ಪತ್ತಿ ಶಕ್ತಿ ದ್ಯೋತಕವಾದ ಸೃಷ್ಟಿಕರ್ತನಾದ ಬ್ರಹ್ಮನನ್ನೂ 'ಉ' ಧಾರಣ ಪಾಲನ ರಕ್ಷಣ ಅಂದರೆ

ಸ್ಥಿತಿ ಶಕ್ತಿಯ ಪ್ರತೀಕನಾದ ವಿಷ್ಣುವನ್ನೂ 'ಮ' ಲಯ ಶಕ್ತಿಯ ದ್ಯೋತಕನಾದ ಶಿವನನ್ನೂ ಸೂಚಿಸುತ್ತದೆ. ಈ ಮೂರು ಶಕ್ತಿಗಳ ಸಮ್ಮಿಲನವೇ ತ್ರಿಮೂರ್ತಿ ಸ್ವರೂಪ ಪರಮೇಶ್ವರನಾಗಿದ್ದಾನೆ ಎಂಬ ನಂಬಿಕೆ.

ಉಮೇಶ ಜೋಗಿಯವರ "ಭಾರತೀಯ ಸಂಗೀತ ಇತಿಹಾಸ" ಎಂಬ ಪುಸ್ತಕದಲ್ಲಿ ಸಂಗೀತದ ಉತ್ಪತ್ತಿಯ ಬಗೆಗೆ ಒಬ್ಬ ಗ್ರಂಥಕಾರ ಮಂಡಿಸಿದ ಅಭಿಪ್ರಾಯದ ವಿಮರ್ಶೆ ಮಾಡಲಾಗಿದ್ದು, ಅದು ಹೀಗಿದೆ. 'ನಾರದನ ಅನೇಕ ವರ್ಷಗಳ ತಪಸ್ಸಿನ ಫಲವಾಗಿ ಶಿವನು ಪ್ರಸನ್ನನಾಗಿ ಅವನಿಗೆ ಸಂಗೀತ ಕಲೆಯನ್ನು ವರವಾಗಿ ದಯಪಾಲಿಸಿದನು' ಪಾರ್ವತಿಯ ಶಯನ ಮುದ್ರೆಯನ್ನು ಕಂಡು ಶಿವನು ಅವಳ ಅಂಗ, ಪ್ರತ್ಯಂಗಗಳ ಆಧಾರದ ಮೇಲೆ ರುದ್ರವೀಣೆಯನ್ನು ಸಿದ್ಧಪಡಿಸಿ ತನ್ನ ಪಂಚಮುಖಗಳಿಂದ ಐದು ರಾಗಗಳ ಉತ್ಪತ್ತಿ ಮಾಡಿದನು. ಅವನ ಪೂರ್ವ ಮುಖದಿಂದ ಭೈರವ, ಪಶ್ಚಿಮದಿಂದ ಹಿಂದೋಲ ಉತ್ತರದಿಂದ ಮೇಘ, ದಕ್ಷಿಣದಿಂದ ದೀಪಕ ಹಾಗೂ ಆಕಾಶೋನ್ಮುಖದಿಂದ ಶ್ರೀರಾಗಗಳಲು ಹುಟ್ಟಿದವು. ಪಾರ್ವತಿಯ ಮುಖದಿಂದ ಕೌಶಿಕ ರಾಗ ಹುಟ್ಟಿಬಂತಂತೆ.

ಇಸ್ಲಾಂ ಧರ್ಮದ ಪರಿಕಲ್ಪನೆ

"ಹಜರತ ಮೂಸಾ ಪೈಗಂಬರರು ಒಮ್ಮೆ ನಾವೆಯಲ್ಲಿ ಪ್ರಯಾಣ ಮಾಡುತ್ತಿದ್ದರು, ಅವರಿಗೆ ಆಗ ಒಂದು ಕಲ್ಲು ಕಾಣಿಸಿತು. ಆ ಕ್ಷಣವೆ ಒಬ್ಬ ದೇವದೂತನು ಬಂದು ಆ ಕಲ್ಲನ್ನು ಯಾವಾಗಲೂ ಅವರ ಹತ್ತಿರವೇ ಇಟ್ಟುಕೊಳ್ಳಲು ತಿಳಿಸಿದನು. ಕೆಲಕಾಲದ ನಂತರ 'ಹಜರತ್ ಮೂಸಾ' ಕಾಡಿನಲ್ಲಿ ತಿರುಗಾಡುವಾಗ ಅತ್ಯಂತ ರಭಸದಿಂದ ಮಳೆ ಬೀಳಲು ಪ್ರಾರಂಭವಾಯಿತು. ಮಳೆ ಹನಿಗಳು ಅವರ ಬಳಿಯಲ್ಲಿದ್ದ ಕಲ್ಲಿನ ಮೇಲು ಬಿದ್ದು ಆ ಕಲ್ಲು ಏಳು ತುಂಡುಗಳಾಯಿತು. ಆ ಏಳು ತುಂಡುಗಳಿಂದ ಏಳು ಧ್ವನಿಗಳು ಉತ್ಪನ್ನವಾದವು. ಈ ಧ್ವನಿಗಳ ಆಧಾರದ ಮೇಲೆಯೇ ಸಂಗೀತದ ಜನನವಾಯಿತು ಎಂದು ಹೇಳಲಾಗಿದೆ."[೧] ಈ ನಂಬಿಕೆ ಪಾರಸಿ ಜನಾಂಗದಲ್ಲಿಯೂ ಇದೆ.

ಕ್ರೈಸ್ತ ಧರ್ಮದ ಪರಿಕಲ್ಪನೆ

"ಒಮ್ಮೆ ಇಸಾಮಸೀಹ ಅರಣ್ಯದಲ್ಲಿ ತಿರುಗಾಡುತ್ತಿರುವಾಗ ದಣಿದು ಒಂದು ಗಿಡದ ಕೆಳಗೆ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದನು. ಬಹಳ ದಣಿದ ಕಾರಣ ಅವನಿಗೆ ಕೂಡಲೇ ನಿದ್ರೆ ಬಂದಿತು. ನಿದ್ರೆಯಿಂದ ಎಚ್ಚತ್ತಾಗ ಅವನಿಗೆ ಅತ್ಯಂತ ಮಧುರವಾದ ಒಂದು ಸ್ವರ ಕೇಳಿಬಂತು. ಅದನ್ನು ಅವನು ಈ ಮುಂಚೆ ಎಂದೂ ಕೇಳಿರಲಿಲ್ಲ. 'ಲಿಂಡಾ' ಎಂಬ ಪಕ್ಷಿ ಈ ಮಧುರ ಸ್ವರಾಲಾಪನೆ ಮಾಡುತ್ತಿತ್ತು.

೧. ಭಾ.ಸಂ.ಚರಿತ್ರೆ, ಉಮೇಶ ಜೋಗಿ, ಪು.೪

‘ಇಸಾಮಸಿಹನು’ ಈ ಸ್ವರ ಗುಂಜನದಿಂದ ಆನಂದ ಭರಿತನಾಗಿ ಕುಣಿಯಲು ಪ್ರಾರಂಭಿಸಿದನು. ಈ ಪ್ರಕಾರ ‘ಲಿಂಡಾ’ ಪಕ್ಷಿಯ ಮೂಲಕ ಸಂಗೀತದ ಉತ್ಪತ್ತಿ ಹಾಗೂ ಇಸಾಮಸಿಹನಿಂದ ನೃತ್ಯದ ಆವಿಷ್ಕಾರವಾಯಿತೆಂದು ಹೇಳಲಾಗುತ್ತದೆ.”[೧] ಈ ಕಥೆಯನ್ನು ಕ್ರೈಸ್ತರು ಒಪ್ಪುವುದಿಲ್ಲ.

ಈ ಮೇಲಿನಂತೆ ದಂತಕಥೆಗಳು ಕಂಡುಬಂದರೂ ಸಂಗೀತದ ಉಗಮಕ್ಕೆ ಪೌರಾಣಿಕ ಹಿನ್ನಲೆ ತೋರಿ ಬರುವುದೇ ಹೆಚ್ಚು. ದೇವರನ್ನು ಸಂಗೀತದ ಮೂಲಕ ಆರಾಧಿಸಬೇಕೆಂಬ ಉದ್ದೇಶ ಹಾಗೂ ಹಂಬಲ ಗ್ರೀಕ್ ಹಾಗೂ ಭಾರತೀಯ ಸಂಸ್ಕೃತಿಯಲ್ಲಿ ಏಕ ಕಾಲದಲ್ಲಿ ಕಂಡುಬಂದಂತಿದೆ. ಹರಪ್ಪ-ಮಾಹಂಜೊದಾರ ಸಂಸ್ಕೃತಿಯ ಅಧ್ಯಯನದಲ್ಲಿ ಅಂದಿನ ಜನರಿಗೆ ಸಂಗೀತದ ಜ್ಞಾನವಿತ್ತು ಎನ್ನುವಲ್ಲಿ ಅನೇಕ ಪುರಾವೆಗಳು ದೊರೆತಿವೆ. ಅವುಗಳಲ್ಲಿ ನೃತ್ಯದ ಪುತ್ಥಳಿಗಳು ಮಾತ್ರ ಯಾವ ಲಿಖಿತ ರೂಪದ ಪದ್ಯಗಳು ದೊರೆತಿಲ್ಲ.

“ಬೈಬಲ್‌ನ ಪ್ರಥಮ ಪುಸ್ತಕ ‘ಆದಿಕಾಂಡ’ (Genesis) ಕ್ರಿ.ಪೂ.೨೦೦೦ ಹಿಂದೆ ಬರೆಯಲಾಗಿದ್ದು ಸುಮಾರು ೪೦೦೦ BC ವರ್ಷಗಳ ಹಿಂದಿನಷ್ಟು ಚರಿತ್ರೆಯನ್ನು ಒಳಗೊಂಡಿದೆ.”[೨] ಈ ಪುಸ್ತಕದ ೩೧ ನೇ ಅಧ್ಯಯದ ೨೭ನೇ ವಚನ ಹೀಗಿದೆ “ಯಾಕೆ ನನ್ನನ್ನು ಮೋಸಗೊಳಿಸಿ ಕಳ್ಳತನದಿಂದ ಬಂದಿ? ನನಗೆ ತಿಳಿಸಿದ್ದರೆ ನಾನು ಸಂಗೀತ ಮಾಡಿಸಿ ಮದ್ದಲೆ, ವೀಣೆ ಮುಂತಾದ ವಾದ್ಯಗಳೊಡನೆ ಸಂತೋಷದಿಂದ ನಿನ್ನನ್ನು ಸಾಗಕಳುಹಿಸುತ್ತಿದ್ದೆನು.”[೩] (“...I might have sent you away with joy and songs, with timbrel and harp?”) ಅರಸನಾದ ದಾವೀದ(King David) ಬರೆದ ಕೀರ್ತನೆಗಳಲ್ಲಿ ಹೀಗಿದೆ “ದಮ್ಮಡಿ ಬಡಿಯುತ್ತಾ ಕುಣಿಯುತ್ತಾ ಆತನನ್ನು (God) ಸ್ತುತಿಸಿರಿ, ತಂತಿವಾದ್ಯಗಳಿಂದಲೂ ಕೊಳಲುಗಳಿಂದಲೂ ಆತನನ್ನು ಸ್ತುತಿಸಿರಿ, ತಾಳದಿಂದ ಆತನನ್ನು ಸ್ತುತಿಸಿರಿ, ಝಲ್ಲರಿಯಿಂದ ಆತನನ್ನು ಸ್ತುತಿಸಿರಿ, ಶ್ವಾಸವಿರುವುದೆಲ್ಲವೂ ಯಹೋವ(ದೇವರು)ನನ್ನು ಸ್ತುತಿಸಲಿ.” (ಕೀರ್ತನೆ ೧೫೦ : ೪-೬ ವಚನ)

ಕ್ರೈಸ್ತ ಧಾರ್ಮಿಕ ಗ್ರಂಥವಾದ ಬೈಬಲ್‌ನಲ್ಲಿ ಗೀತ, ಸಂಗೀತ, ನೃತ್ಯದ ಕುರಿತು ಅನೇಕ ಉಲ್ಲೇಖಗಳಿವೆ. ಇವುಗಳ ಪ್ರಾಚೀನತೆಯನ್ನು ಗ್ರಹಿಸಿದಾಗ ಜಗತ್ತಿಗೆ ಸಂಗೀತದ ಕೊಡುಗೆ ನೀಡುವಲ್ಲಿ ಕ್ರೈಸ್ತರ ಪಾತ್ರ ಹಿರಿದೆಂದೆನಿಸುವುದು.

ಕ್ರೈಸ್ತ ಧಾರ್ಮಿಕ ಅಧ್ಯಯನದಲ್ಲಿ ಕಂಡುಬರುವ ಅಂಶವೇನೆಂದರೆ ಧರ್ಮದೊಂದಿಗೆ ಸಂಗೀತ ಹಾಸುಹೊಕ್ಕಾಗಿ ನಡೆದು ಬಂದಂತಿದೆ. ಪ್ರಾಚೀನ ಗೀತಗಳ ಮೂಲಕವೇ ಬೈಬಲ್ ಸಾಹಿತ್ಯ ರೂಪ ತಾಳಿದಂತಿದೆ. ಮೊದಲ ಐದು ಪುಸ್ತಕ ಅಥವಾ ಹಳೆ ಒಡಂಬಡಿಕೆಯಲ್ಲಿ ಪ್ರಾಚೀನ ಗೀತಗಳ ತುಣುಕುಗಳು ಕಾಣಸಿಗುತ್ತವೆ. ೧೬೮೮ B.C ಅರಣ್ಯಕಾಂಡದ ೨೧ನೇ ಅಧ್ಯಾಯನದ ೧೭ನೇ ವಚನ ಹೀಗಿದೆ. “ಆ

೧. ಭಾ.ಸಂ.ಚರಿತ್ರೆ, ಉಮೇಶ ಜೋಗಿ, ಪು.೪

೨. The open Bible, P.1

೩. ಸತ್ಯವೇದ ಪು.೩೬

ಕಾಲದಲ್ಲಿ ಇಸ್ರಾಯೇಲ್ಯರು ಈ ಹಾಡನ್ನು ಗಾನಮಾಡಿದರು. ಬಾವಿಯೇ, ಉಕ್ಕುತ್ತಾ ಬಾ! ಜನರೇ ಉಲ್ಲಾಸದಿಂದ ಗಾನ ಮಾಡಿರಿ." ಮತ್ತು ನ್ಯಾಯಸ್ಥಾಪಕರು ಎಂಬ ಪುಸ್ತಕದ ೫ನೇ ಅಧ್ಯಾಯದ ಸಂಪೂರ್ಣ ಭಾಗವು ಗೀತ ರೂಪಕವಾಗಿದೆ. ಯಾವುದೇ ರಾಷ್ಟ್ರದ ಸಾಹಿತ್ಯ ಅದು ಪದ್ಯರೂಪದಿಂದಲೇ ಪ್ರಾರಂಭವಾಗಿದೆ ಎಂಬುದರಲ್ಲಿ ಸಂಶಯವಿಲ್ಲ. ಇದನ್ನು ಬೆಬಲೋನಿಯನ್ ಹಾಗೂ ಈಜಿಪ್ತ ಸಂಸ್ಕೃತಿಗಳಿಂದ ಕಂಡುಕೊಳ್ಳಬಹುದು.

ಬೈಬಲ್ ಸಂವಹನ ಮಾಧ್ಯಮದಲ್ಲಿ ಸಂಗೀತದ ಬಳಕೆ

"ಸಂಗೀತ ಜ್ಞಾನ ವಿಹೀನಲುಕು ಮೋಕ್ಷಮುಗಲದಾ? ಸಂಗೀತ ಜ್ಞಾನವಿಲ್ಲದವನಿಗೆ ಮೋಕ್ಷ ದೊರೆಯುವುದೆ? ಎಂದು ತಮ್ಮ ಒಂದು ಕೃತಿಯಲ್ಲಿ ಪ್ರಶ್ನಿಸಿದ್ದಾರೆ ತ್ಯಾಗರಾಜರು."[೧]

"Never trust a man Who hates music"

ಎಂದು ಜಾರ್ಜ ಬರ್ನಾಲ್ಡ ಶಾ ಹೇಳಿದ್ದಾರೆ. ಸಂಗೀತದಿಂದ ಭಗವಂತನನ್ನು ಒಲಿಸಿಕೊಳ್ಳಬಹುದು ಎಂಬುದು ಪರಂಪರೆಯ ನಂಬಿಕೆ. ಇದನ್ನು ಸಾಮಾನ್ಯವಾಗಿ ಎಲ್ಲ ದೇಶದ ಜನರಲ್ಲೂ ಕಾಣಬಹುದು. "ಪ್ರಾಚೀನ ಗ್ರೀಸ್, ಈಜಿಪ್ಟ್‌ಗಳಲ್ಲಿ ದೇವದೇವತೆಗಳ ಆರಾಧನೆಯಲ್ಲಿ ಸಂಗೀತಕ್ಕೆ ಮಹತ್ವವಿತ್ತು ಕ್ರೈಸ್ತ ದೇವಾಲಯಗಳಲ್ಲಿ ಸಂಗೀತಕ್ಕೆ ಮುಖ್ಯ ಸ್ಥಾನವಿದೆ."[೨]

ಸಂಗೀತ ಇಂದು ನಿನ್ನೆಯದಲ್ಲ, ಮನುಷ್ಯನಿಗೆ ಮಾತು ಬಂದಾಗಿನಿಂದ ಗುನುಗುವ ಧ್ವನಿ ಲಯ ಪಡೆದಾಗಿನಿಂದ, ಹಕ್ಕಿಗಳ ಉಲಿ ಆಲಿಸಿ ಅನುಕರಿಸಿದಾಗಿನಿಂದ ಸಂಗೀತ ಬಳಕೆಗೊಂಡಿರಲಕ್ಕೆ ಸಾಕು! ಮೊದಮೊದಲು ಸಂಗೀತ ಬಾಯಿಂದ ಬಾಯಿಗೆ ಕಲಿಸಲ್ಪಡುತ್ತಾ ಇತ್ತು. ಕ್ರಮೇಣ ಸ್ವರ ಪ್ರಸಾರ ತಾಳಗಳನ್ನೂ ಸೂಚಿಸಿ ಸಂಗೀತವನ್ನು ಬರೆಯುವ ಪದ್ಧತಿ ಪಾಶ್ಚಾತ್ಯ ಸಂಗೀತದಲ್ಲಿ ಮೊದಲು ರೂಢಿಗೆ ಬಂದಿತು. ಇತರ ಸಂಗೀತ ಪದ್ಧತಿಗಳಲ್ಲಿಯೂ ಇದನ್ನು ಉಪಯೋಗಕ್ಕೆ ತಂದುಕೊಳ್ಳುವ ಪ್ರಯತ್ನಗಳು ನಡೆದಿದೆ. "ಕರ್ನಾಟಕ ಸಂಗೀತದಲ್ಲಿ ಪಕ್ಕವಾದ್ಯವಾಗಿಯೂ ತನಿವಾದ್ಯವಾಗಿಯೂ ಬಳಸಲಾಗುವ ಪಿಟೀಲು ಭಾರತೀಯ ಸಂಗೀತಕ್ಕೆ ದೊರೆತದ್ದು ಪಾಶ್ಚಾತ್ಯ ಸಂಗೀತದ ಸಂಪರ್ಕದಿಂದ."[೩]

ತಂತಿವಾದ್ಯಗಳಲ್ಲಿ ಹಲವು ಪ್ರಕಾರಗಳಿವೆ. ಪ್ರಮುಖ ಮೂರು ಬಗೆಗಳಾದ ಮಿಡಿದು ಭಾರಿಸುವ, ಕಮಾನಿನಿಂದ ನುಡಿಸುವ ಹಾಗು ಬಡಿದು ಭಾರಿಸುವ. ತಂಬೂರಿ, ವೀಣೆ ಹಾಗೂ ಸಿತಾರಗಳು ಮಿಡಿದು ಭಾರಿಸುವಂತಹುಗಳು, ಪಿಟೀಲು ಸಾರಂಗ ಕಮಾನಿನಿಂದ ಬಾರಿಸುವವುಗಳು ಮತ್ತು ಹಾರ್ಮೋನಿಯಂ, ಪಿಯಾನೋ ಮತ್ತು ಆರ್ಗನ್ ಗಳು ಒತ್ತಿ ಬಾರಿಸುವ ಗುಂಪಿಗೆ ಸೇರಿವೆ. ಈ ಎಲ್ಲ ಬಗೆಯ ಸಂಗೀತವಾದ್ಯಗಳ ಬಳಕೆ ಬಹುಕಾಲಗಳಿಂದ ಪಾಶ್ಚಾತ್ಯದಲ್ಲಿ ಕಂಡುಬರುತ್ತದೆ.

---

೧. ಜ್ಞಾನ ಗಂಗೋತ್ರಿ ಕಲೆ, ಸಾಹಿತ್ಯ, ಪು.೧೫೧

೨. ಅದೇ, ಪು.೬೧೨

೩. ಅದೇ,

ಭಾರತೀಯ ಸಂಗೀತ

ಎಲ್ಲ ರಾಷ್ಟ್ರಗಳ ಸಂಗೀತದಂತೆ ಭಾರತೀಯ ಸಂಗೀತಕ್ಕೂ ಜಾನಪದ ಗಾಯನವೇ ಮೂಲ, ಮೊದಲು ಐದು ಸ್ವರಗಳ ಬಳಕೆ ಸಂಗೀತದಲ್ಲಿ ಕಂಡುಬರುವುದು. ಅರಣ್ಯವಾಸಿಗಳ ಗಿರಿಜನರ ಸಂಗೀತದಲ್ಲಿ ಇಂದಿಗೂ ಐದು ಸ್ವರಗಳನ್ನು ಕೇಳುತ್ತೇವೆ.

ಭಾರತೀಯ ಸಂಗೀತದ ಉಗಮ ಸಾಮುವೇದದಲ್ಲಿ ಎಂಬ ಪರಂಪರಾಗತ ನಂಬಿಕೆ ಇದೆ. ಜನಕ ಪದಗಳಾದ ಗಾಯನಕ್ಕೆ 'ನಾಟ್ಯಶಾಸ್ತ್ರ'ವನ್ನು ಬರೆದ ಭರತನಿಗಿಂತ ಹಿಂದೆಯೇ (೧ನೇ ಶತಮಾನ ಪೂರ್ವ) ಸಂಗೀತಕ್ಕೆ ಶಾಸ್ತ್ರೀಯ ರೂಪ ನೀಡುವ ಪ್ರಯತ್ನ ನಡೆದಂತೆ ಕಂಡುಬರುವುದು. ನಮಗೆ ಸಂಗೀತ ಶಾಸ್ತ್ರ ಕುರಿತ ಗ್ರಂಥಗಳು ದೊರೆಯುವುದು. ೧೩ನೇ ಶತಮಾನದಿಂದ. ಶಾರ್ಙ್ಗದೇವರು ತನ್ನ ಪೂರ್ವದ ಕೃತಿಗಳನ್ನು ಆಧರಿಸಿ; ಅಮೂಲ್ಯ ಗ್ರಂಥ ಸಂಗೀತ ರತ್ನಾಕರವನ್ನು ರಚಿಸಿದ್ದಾನೆ.

"ಮಹಮ್ಮದೀಯರ ದಾಳಿಯ ನಂತರ ದೇಶೀಯ ಸಂಗೀತದ ಮೇಲೆ ಹೊರ ದೇಶದ ಪ್ರಭಾವ ಉಂಟಾಗಿ; ಇರಾನಿ ಮೂಲದ ಸಂಗೀತ ಅಮೀರ ಖುಸ್ರುವಿನ ಕಾಲದಿಂದ ಪ್ರಾರಂಭವಾಯಿತು. ಇದರ ಫಲವಾಗಿ ಭಾರತೀಯ ಸಂಗೀತಕ್ಕೆ ಹೊಸದೊಂದು ಶೈಲಿ ದೊರೆಯಿತು".[೧]

೧೯ನೇ ಶತಮಾನದ ನಂತರ ಬ್ರಿಟೀಷರ ಆಗಮನದಿಂದ ಭಾರತೀಯ ಸಂಗೀತಕ್ಕೆ ಹೊಸ ಪ್ರವಾಹ ದೊರೆತು, ತಾಳಲಯಗಳಲ್ಲದೆ ವಾದ್ಯ ಸಲಕರಣೆಯ ಬಳಕೆಯಲ್ಲೂ ಕ್ರಾಂತಿಕಾರಕ ಬದಲಾವಣೆಯನ್ನು ಕಂಡಿತು. ಬಂಗಾಲದ ಕವಿಶ್ರೇಷ್ಠರಾದ ಶ್ರೀ ರವೀಂದ್ರನಾಥ ಠಾಕೂರರವರು ಒಂದು ಹೊಸ ಸಂಗೀತ ಪದ್ಧತಿಯನ್ನು ಸೃಷ್ಟಿಸಿದರು. ಈ ಹೊಸ ಸಂಗೀತದ ಶೈಲಿಯು ಅವರ 'ಗೀತಾಂಜಲಿ' ಎಂಬ ಗ್ರಂಥದಲ್ಲಿ ಕಂಡುಬರುತ್ತದೆ. "ವಾಸ್ತವವಾಗಿ ಪ್ರಾಶ್ಚಾತ್ಯ ಹಾಗೂ ಪೌರಸ್ತ್ಯ ಎರಡೂ ಸಂಗೀತ ಪದ್ಧತಿಗಳ ಅತ್ಯಂತ ಕೌಶಲ ಪೂರ್ಣ ಪ್ರಯೋಗ ಮಾಡಿದ್ದು ಗೀತಾಂಜಲಿಯ ವೈಶಿಷ್ಟ್ಯವಾಗಿದೆ."[೨]

ಕರ್ನಾಟಕ ಸಂಗೀತ

ಭಾರತೀಯ ಸಂಗೀತ ಕ್ಷೇತ್ರದಲ್ಲಿ ನಾವು ಪ್ರಮುಖ ಬಗೆಗಳನ್ನು ಕಾಣುತ್ತೇವೆ. ಒಂದು ಹಿಂದೂಸ್ತಾನಿ ಸಂಗೀತ, ಮತ್ತೊಂದು ಕರ್ನಾಟಕ ಸಂಗೀತ. "ಕರ್ನಾಟಕ ಸಂಗೀತದಲ್ಲಿ ಗೀತ, ಸ್ವರಜತಿ ವರ್ಣ, ಕೃತಿ, ಪದ, ಚಾವಳಿ ತಿಲ್ಲಾನಗಳಂಥ ರಚನಾ ಪ್ರಕಾರಗಳಿರುವಂತೆ, ಹಿಂದೂಸ್ತಾನಿ ಸಂಗೀತದಲ್ಲೂ ಧ್ರುಪದ್ ಅಥವಾ ಧ್ರುವಪದ, ಧಮಾರ್, ಖ್ಯಾಲ್, ಠುಮರೀ ಟಿಪ್ಪಾ, ತರಾನಾ ಘಜಲ್ ಮುಂತಾದ ಪ್ರಕಾರಗಳಿವೆ."[೩]

೧. ಜ್ಞಾನ ಗಂಗೋತ್ರಿ ಕಲೆ, ಸಾಹಿತ್ಯ, ಪು.೪೫೩

೨. ಭಾರತೀಯ ಸಂಗೀತ ಚರಿತ್ರೆ, ಉಮೇಶ ಜೋಗಿ, ಪು.೧೧೫

೩. ಜ್ಞಾನ ಗಂಗೋತ್ರಿ ಕಲೆ, ಸಾಹಿತ್ಯ, ಪು.೪೬೦

ಹಿಂದೂಸ್ಥಾನಿ ಸಂಗೀತಕ್ಕಿಂತ ಕರ್ನಾಟಕದ ಸಂಗೀತದಲ್ಲಿ ಸಾಹಿತ್ಯಕ್ಕೆ ಹೆಚ್ಚು ಪ್ರಾಶಸ್ತ್ಯವಿದೆ. ಇದರ ಹಿನ್ನೆಲೆ ಆಧ್ಯಾತ್ಮಿಕ ಹಾಗೂ ಭಕ್ತಿ ಮಾರ್ಗಗಳ ಮೇಲೆ ಅವಲಂಬಿಸಿದ್ದರ ಕಾರಣ ಸಂಗೀತ ಹಾಗೂ ಸಂಗೀತಗಾರರ ಪಾವಿತ್ರ್ಯ ನಷ್ಟವಾಗಲಿಲ್ಲ.

"ಭಾರತದಲ್ಲಿ ಬ್ರಿಟೀಷರ ಆಗಮನವಾದಾಗ ಸಂಗೀತ ಒಂದು ರೀತಿಯ ಅನೈತಿಕತೆ ಹಾಗೂ ಅಸ್ಥಿರತೆಯಿಂದ ಕೂಡಿದುದಾಗಿ ಕಂಡುಬರುತ್ತಿತ್ತು. ಬ್ರಿಟೀಷರು "ಭಾರತೀಯ ಸಂಗೀತದ ಕಡೆ ಒಳ್ಳೆಯ ಭಾವನೆಯಿಂದ ನೋಡುತ್ತಿರಲಿಲ್ಲ ಎಂಬ ಮಾತು ಕೇಳಿ ಬರುತ್ತಿತ್ತು. ಕಾರಣ ಅಂದು ಸಂಗೀತದ ರೂಪವು ಸಹ ಅತ್ಯಂತ ಅಶ್ಲೀಲವಾಗಿತ್ತು. ಗಝಲ್, ಠುಮರಿ ಮುಂತಾದ ಗಾಯನ ಶೈಲಿಯಲ್ಲಿ ಶೃಂಗಾರ ರಚನೆಯಾಗುತ್ತಿತ್ತು. ಸಂಗೀತ ಕೇವಲ ಭೋಗ ವಿಲಾಸದ ಸಾಧನ ಎಂದು ಭಾವಿಸಲಾಗುತ್ತಿತ್ತು. ಪರಿಣಾಮವಾಗಿ ಸುಶಿಕ್ಷಿತ ಸ್ತ್ರೀ ಪುರುಷರು ಹಿಂದೂಸ್ಥಾನಿ ಸಂಗೀತಗಾರರು ಚಾರಿತ್ರ್ಯ ಹೀನರೆಂದು ಭಾವಿಸಲ್ಪಡುತ್ತಿದ್ದರು. ಇದರಿಂದಾಗಿ ಸಂಗೀತದ ಗೌರವ ಕೆಳಮಟ್ಟಕ್ಕೆ ಇಳಿಯಲು ಪ್ರಾರಂಭವಾಯಿತು."[೧] ಸಂಗೀತವು ಗೌರವಾನ್ವಿತ ಮನೆಗಳಲ್ಲಿ ನಿಷಿದ್ಧವೆಂದು ಭಾವಿಸಲಾಗಿತ್ತು. "ವೇಶ್ಯಾ ಕಸಬನ್ನು ಮಾಡುವ ಸ್ತ್ರೀಯರ ಬಳಿಗೆ ಸಂಗೀತ ಸೇರಿ ಅದು ತನ್ನ ಆಧ್ಯಾತ್ಮಕ, ಕಲಾತ್ಮಕ, ಭಾವನಾತ್ಮಕ ಹಾಗೂ ಸೌಂದರ್ಯಾತ್ಮಕ ರೂಪವನ್ನು ಕಳೆದುಕೊಂಡಿತು. ಇದರಿಂದ ಪ್ರತಿಭಾವಂತ ಹಾಗೂ ಉತ್ತಮ ಮನೆತನದ ಜನರು ಸಂಗೀತ ಕ್ಷೇತ್ರದಲ್ಲಿ ಬರಲು ಭಯಪಡುತ್ತಿದ್ದರು. ಪಾಶ್ಚಾತ್ಯ ಶಿಕ್ಷಣ ಪಡೆದ ಯುವಕ ಯುವತಿಯರು ಭಾರತೀಯ ಸಂಗೀತವನ್ನು ದೂರ ಮಾಡಿ ಪಾಶ್ಚಾತ್ಯ ಸಂಗೀತದ ಪದ್ಧತಿಯನ್ನನುಸರಿಸಲು ಪ್ರಾರಂಭಿಸಿದರು."[೨]

ಈ ಸ್ಥಿತಿಯಲ್ಲಿ ಕ್ರೈಸ್ತ ಮಿಶನರಿಗಳಿಗೆ ಭಾರತೀಯ ಸಂಗೀತ ಪ್ರಭಾವ ಮಾಡಿದಂತೆ ಕಂಡುಬರುವುದಿಲ್ಲ. ಹೀಗಾಗಿ ಭಾರತದ ಮೇಲೆ ಪಾಶ್ಚಾತ್ಯ ಸಂಗೀತದ ಪ್ರಭಾವ ಉಂಟಾಗಲು ಕಾರಣವಾಯಿತು. ಮಿಶನರಿಗಳು ಜರ್ಮನ್ ಟಿಟ್ಯೋನಿಕ್ ಮಾದರಿಯ ಗೀತಗಳ ಶೈಲಿಯನ್ನು ಕನ್ನಡದ ಮೇಲೆ ತರಲು ಪ್ರಯತ್ನಿಸಿದ್ದು ಸ್ವಾಭಾವಿಕ ಎನ್ನಬಹುದು. ಹಾಗೂ ಆ ಗೀತಗಳನ್ನು ಸರಳ ಕನ್ನಡದಲ್ಲಿ ಪ್ರಕಟಿಸಿದ ಪ್ರಯತ್ನ ಶ್ಲಾಘನೀಯ.

ಬ್ರಿಟೀಷರ ಆಗಮನದಿಂದ ಸಾಂಪ್ರದಾಯಕ ಸರಪಳಿಯಿಂದ ಮುಕ್ತಿಯನ್ನು ಪಡೆಯುವಲ್ಲಿ ಭಾರತೀಯ ಸಂಗೀತವು ಯಶಸ್ಸನ್ನು ಕಂಡಿತು. ತತ್ಫಲವಾಗಿ ಸಂಗೀತ ಕ್ಷೇತ್ರದಲ್ಲಿ ಸ್ವತಂತ್ರ ವಿಕಾಸ ಹಾಗೂ ಪುನರುದ್ಧಾರದ ಪ್ರಯತ್ನಗಳು ನಡೆದವು. ಇದರಿಂದ ಪಾಶ್ಚಾತ್ಯದ ಸಂಗೀತದ ಛಾಯೆ ನಮ್ಮ ಸಂಗೀತದ ಮೇಲೆ ಬಿದ್ದು, ದೇಶೀಯ ಸಂಗೀತ ಪಾಶ್ಚಾತ್ಯ ಸಂಗೀತದೊಂದಿಗೆ ಮೇಳವಿಸಲು ಅನುವಾಯಿತು.

---

೧. ಭಾರತೀಯ ಸಂಗೀತ ಚರಿತ್ರೆ, ಉಮೇಶ ಜೋಗಿ, ಪು.೧೦೫

೨. ಅದೇ, ಪು.೧೧೨

ಬ್ರಿಟೀಷರಲ್ಲಿ ಪ್ರಮುಖರಾದ ಕೆಲವು ವಿದ್ವಾಂಸರು ಭಾರತೀಯ ಹಾಗೂ ಪಾಶ್ಚಾತ್ಯ ಸಂಗೀತದ ಕುರಿತು ಪ್ರಮುಖ ಕೃತಿಗಳನ್ನು ರಚಿಸಿದರು. ಅವರುಗಳಲ್ಲಿ ಶಾಕುಂತಲೆ ನಾಟಕವನ್ನು ಇಂಗ್ಲೀಷಿಗೆ ತರ್ಜುಮೆ (೧೮೭೬) ಮಾಡಿದ್ದ ಸರ್ ವಿಲಿಯಂ ಜೋನ್ಸ್ ಕ್ಯಾಪ್ಟನ್ ಡೇ ಬರೆದ 'ದಿ ಹಿಸ್ಟರಿ ಆಫ್ ವರ್ಲ್ಡ್ ಮ್ಯೂಜಿಕ್', ಕ್ಯಾಪ್ಟನ್ ಮಿಲಾರ್ಡ ಬರೆದ 'ದಿ ಬ್ರಿಟೀಶ್ ಆನಾ ದಿ ಮ್ಯೂಜಿಕ್ ಆಫ್ ಹಿಂದೂಸ್ಥಾನಿ' ಮತ್ತು ಮಿಸ್ಟರ್ ಎಲೆನ್ ಡಿಸೆಲೋ ಬರೆದ ನೋರ್ದನ್ ಇಂಡಿಯನ್ ಮ್ಯೂಜಿಕ್' ಹಾಗೂ ಕಾರ್ಡಿನಲ್ ಶೋಮ್ಸ ಬರೆದ ರಾಯಿಜ್ ಮತ್ತು ಪಾಲ್ ಆಫ್ ಇಂಡಿಯನ್ ಮ್ಯೂಜಿಕ್, ಜಾನ್ ಮಾನ್ಸ ಬರೆದ ದಿ ಪ್ಲೊ ಆಫ್ ಇಂಡಿಯನ್ ಮ್ಯೂಜಿಕ್ ಮುಂತಾದವುಗಳನ್ನು ಸ್ಮರಿಸಬಹುದು.

ಈ ಮೇಲಿನ ಕೃತಿಗಳ ಪ್ರಭಾವದಿಂದ ಭಾರತೀಯ ಸಂಗೀತಕ್ಕೆ ಒಂದು ವಿಮರ್ಶಾ ದೃಷ್ಟಿಕೋನ ಕಂಡುಬರತೊಡಗಿತು. "ಭಾರತೀಯ ಸಂಗೀತದ ಬಗೆಗೆ ವಿದೇಶೀಯರ ಕಟು ಟೀಕೆಯಿಂದಾಗಿ ಹಾಗೂ ಅಲ್ಲಲ್ಲಿ ಕೇಳಿದ ಸರ್ವ ಸಾಧಾರಣ ಸಂಗೀತದಿಂದ ಕೆಲವು ಭಾರತೀಯರು ಸಂಗೀತದಲ್ಲಿಯ ವೈಜ್ಞಾನಿಕತೆ ಹಾಗೂ ಸೂಕ್ಷ್ಮತೆಗಳನ್ನು ಪ್ರಕಾಶದಲ್ಲಿ ತರುವುದಕ್ಕಾಗಿ, ಪಾಶ್ಚಾತ್ಯ ಪದ್ಧತಿಯ ಸ್ಟಾಫ್ ಸೊಟೇಶನ್ 'ದಲ್ಲಿ ಭಾರತೀಯ ರಾಗ ರಾಗಿನಿಗೆ ಗೀತವಾದ್ಯಗಳಲ್ಲಿಯ ರಚನೆಗಳು ಆಪಾಲಗಳು ಹಾಗೂ ತಾಲಗಳ ಸ್ವರೂಪ ಪ್ರಕಾಶಿಸುವ ಕಾರ್ಯ ಮಾಡಿದರು."[೧] ಇವರುಗಳಲ್ಲಿ ಪ್ರಮುಖರು ಬಂಗಾಲದಲ್ಲಿ ಸುರೇಂದ್ರ ಮೋಹನ್ ಠಾಕೂರು, ದಕ್ಷಿಣಭಾರತದಲ್ಲಿ ಚಿನ್ನಸ್ವಾಮಿಮೊದಲಿಯಾರ ಶ್ರೀಕೃಷ್ಣಧನ ಬಂದೋಪಾಧ್ಯಾಯರು

ಕರ್ನಾಟಕದಲ್ಲಿ ಪಾಶ್ಚಾತ್ಯದ ಸಂಗೀತ ಹೆಚ್ಚಾಗಿ ಕಂಡುಬಂದುದು ಕ್ರಿಶ್ಚಿಯನ್ ಮಿಶನರಿಗಳ ಭಕ್ತಿರಸದ ಮೂಲಕ. ಇವರ ವಾದ್ಯ ಸಲಕರಣೆಗಳಾದ ಗಿಟಾರ, ವಾಯೋಲಿನ್ ಹಾಗೂ ಆರ್ಗನ್ ಗಳಂತ ಸಲಕರಣೆಗಳು ಹಾಗೂ ಸಂಗೀತಕ್ಕಾಗಿ ಅನುಸರಿಸಿದ ನೋಟ್ಸ್‌ಗಳು, ಭಾರತೀಯ ಸಂಗೀತ ಕ್ಷೇತ್ರದ ಮೇಲೆ ಹೆಚ್ಚು ಪ್ರಭಾವವನ್ನುಂಟು ಮಾಡಿ ಹೊಸತನವನ್ನು ತಂದುಕೊಟ್ಟಿರುವುದರಲ್ಲಿ ಸಂದೇಹವಿಲ್ಲ, ಹೀಗಾಗಿ ಪಾಶ್ಚಾತ್ಯ ಸಂಗೀತದ ಕೊಡಕೊಳ್ಳುವಿಕೆಯನ್ನು ನಾವು ಕಂಡುಕೊಳ್ಳಬಹುದು.

ಕ್ರಿಶ್ಚಿಯನ್ ಮಿಶನರಿಗಳ ಸೇವೆ ಕರ್ನಾಟಕದಲ್ಲಿ ಮಾತ್ರವಲ್ಲದೆ, ಇಡೀ ಭಾರತ ದೇಶವನ್ನೆ ಅವಲಂಬಿಸಿತ್ತು. ವಿಲಿಯಂ ಕೇರಿ ಎಂಬ ಮಿಶನರಿ ಮೊದಲು ಬಂಗಾಲದಲ್ಲಿದ್ದು, ದಕ್ಷಿಣ ಹಾಗೂ ಉತ್ತರ ಭಾರತದ ಪ್ರಮುಖ ಭಾಷೆಗಳಲ್ಲಿ ಬೈಬಲ್ ಭಾಷಾಂತರಿಸಿದನು. ಇದರಿಂದ ಗಮನಿಸಿಬಹುದಾದ ಅಂಶವೇನೆಂದರೆ, ಆಯಾ ರಾಜ್ಯದಲ್ಲಿದ್ದ ಮಿಶನರಿಗಳು ಅಲ್ಲಿನ ಮಾತೃ ಭಾಷೆಯಲ್ಲಿಯೇ ಬೈಬಲ್ ಬೋಧನೆ ಹಾಗೂ ಅದಕ್ಕೆ ಪೂರಕವಾದ ಸಂಗೀತ ಜ್ಞಾನವನ್ನು ಜನರಿಗೆ ಕೊಡುವ ಉದ್ದೇಶ ಹೊಂದಿದ್ದರೆಂಬುದು ಸ್ಪಷ್ಟವಾಗುವುದು.

---

೧. ಭಾರತೀಯ ಸಂಗೀತ ಚರಿತ್ರೆ, ಉಮೇಶ ಜೋಗಿ, ಪು.೧೦೫

ಕನ್ನಡದಲ್ಲಿ ಕ್ರೈಸ್ತ ಸಾಹಿತ್ಯ, ಅದರಲ್ಲಿಯೂ ಪದ್ಯ ಸಾಹಿತ್ಯ ಕುರಿತು ವಿವೇಚಿಸುವಾಗ ಸ್ವತಂತ್ರ ಹಾಗೂ ಅನುವಾದ ಗೀತ ಸಾಹಿತ್ಯವೆಂದು ಎರಡು ಬಗೆಯನ್ನು ಕಾಣಬಹುದು. ಅಂದಿನ ಮಿಶನರಿಗಳು ಕನ್ನಡ ನಾಡಿಗೆ ಕಾಲಿಟ್ಟಾಗ ಅವರೆದುರು ಹಳೆಗನ್ನಡ ಪದ್ಯ ಸಾಹಿತ್ಯ, ವೀರಶೈವ ವಚನ ಸಾಹಿತ್ಯ, ದಾಸರ ಪದಗಳು ಹಾಗೂ ಸರ್ವಜ್ಞನ ತ್ರಿಪದಿಗಳು ಮಾದರಿಯಾಗಿದ್ದರೂ, ಅವರಿಗೆ ಜರ್ಮನ್ ಗೀತಗಳ ಭಾಷಾಂತರದ ಅವಶ್ಯಕತೆ ಕಂಡು ಬಂದುದು ಏಕೆ? ಎಂಬ ಪ್ರಶ್ನೆ ಸಹಜ. ಈ ನಿಟ್ಟಿನಲ್ಲಿ ಗ್ರಹಿಸಿದರೆ ಅಂದಿನ ಕರ್ನಾಟಕ ಸಂಗೀತ ಪ್ರಭಾವಿ ಪೂರಕವಿತ್ತೇ? ಅಥವಾ ಅವರ ಮಾತೃ ಭಾಷೆಯ ವ್ಯಾಮೋಹ, ಈ ನಾಡಿನ ಜನಕ್ಕೆ ತಮ್ಮ ಸಾಹಿತ್ಯದ ರುಚಿ ನೀಡುವ ಇಚ್ಛೆ ಮತ್ತು ಕ್ರೈಸ್ತ ಜನಾಂಗಕ್ಕೆ ಒಂದೇ ಬಗೆಯ ಶೈಲಿ ಅಳವಡಿಸಬೇಕೆಂಬ ಉದ್ದೇಶ ಇದ್ದಿರಲೂಬಹುದು.

ಜರ್ಮನ್ ದೇಶದ ಗೀತಗಳಿಗೆ ಅವುಗಳದೇ ವೈಶಿಷ್ಟ್ಯವಿದೆ. ಹಾಗೂ ರಚನೆಯಲ್ಲಿ ಕರಳು ಮಿಡಿಯುವಂತ ಹಾಗೂ ಮನೋಜ್ಞವಾಗತಕ್ಕ ಕಥೆ ಅವುಗಳ ಹಿಂದೆ ಅಡಕವಾಗಿದೆಂಬುದನ್ನು ತಿಳಿದಾಗ ಅವರು ಅಂತಹ ಗೀತೆಗಳನ್ನು ತರ್ಜುಮೆ ಮಾಡುವಲ್ಲಿ ಒಂದು ಉದ್ದೇಶವಿದೆ ಎಂದು ಕಂಡುಬರುವುದು.

ಮಿಶನರಿಗಳು ಸ್ವತಂತ್ರವಾದ ಪದ್ಯಗಳನ್ನು ರಚಿಸುವ ಸಾಮರ್ಥ್ಯ ಹೊಂದಿದ್ದರೂ ಭಾಷಾಂತರಕ್ಕೆ ಹೆಚ್ಚು ಆದ್ಯತೆ ನೀಡಿದಂತೆ ಕಂಡುಬರುತ್ತದೆ. ತಮ್ಮ ದೇಶದ ಆ ಗೀತೆಗಳು ಅಷ್ಟೊಂದು ಜಗತ್ಪ್ರಸಿದ್ಧ ವಾಗಿರುವುದರಿಂದ ಭಾರತೀಯರು ಅದರಲ್ಲಿ ಕನ್ನಡಿಗರು ಅವುಗಳನ್ನು ಅನುಭವಿಸಲಿ ಎಂಬ ಉದ್ದೇಶ ಹೊಂದಿದ್ದಿರಬಹುದು. ಕನ್ನಡಕ್ಕೆ ಅನುವಾದಿಸಿದ ಪ್ರಮುಖ ಗೀತೆಗಳು ಹಾಗೂ ಅವುಗಳನ್ನು ರಚಿಸಿದ ಕರ್ತೃಗಳ ವಿಷಯ ತಿಳಿದಾಗ ನಿಜವಾಗಿ ದೈವ ಭಕ್ತ-ಭಕ್ತೆಯರು. ತಮ್ಮ ಜೀವನದ ಸಾರವನ್ನೇ ಆತ್ಮೀಕ ಬಾಳಿನ ಚಿತ್ರವನ್ನಾಗಿ ನಿರೂಪಿಸಿದ್ದಾರೆನ್ನುವಲ್ಲಿ ಬೇರೆ ಮಾತೊಂದಿಲ್ಲ. "ಇಂಗ್ಲೀಷ ಸಂಗೀತಗಳಲ್ಲೆಲ್ಲಾ ನಾಲ್ಕು ವಿಶೇಷವಾದ ಸಂಗೀತಗಳು ಇವೆ. "ಹೊತ್ತಾರೆ ಸೂರ್ಯನೊಂದಿಗೆ" "ಕೇಳು ದೂತಗಾನವ" "ಆದಿ ಕರ್ತ ಕ್ರಿಸ್ತನೇ" ಮತ್ತು "ಆಶ್ಚರ್ಯವಾದ ಶಿಲುಬೆ" ಎಂಬೀ ಸಂಗೀತಗಳೇ ಎಂಬುದಾಗಿ ಡಾಕ್ಟರ್ ಜೂಲಿಯನ್ ಎಂಬಾತನು ತಿಳಿಸಿದ್ದಾನೆ."[೧]

ಅಂದಿನ ಮಿಷನರಿಗಳು, ಚರ್ಚ ಆರಾಧನೆಯಲ್ಲಿ ದೇಶಿಯ ಪದ್ಯಗಳನ್ನು ಬಳಸುವ ಮನಸ್ಸು ಮಾಡದೆ ಕ್ರೈಸ್ತರೆನಿಸಿಕೊಳ್ಳುವ ಪ್ರತಿಯೊಬ್ಬರು ವಿದೇಶಿಯ ಸಂಗಿತವನ್ನೇ ಕಲಿಯುವುದು ಒಳಿತೆಂದು ಭಾವಿಸಿದಂತಿದೆ. ಹೀಗಾಗಿ ವಿವಿಧ ದೇಶಗಳಿಂದ ರಚಿತವಾಗಿ ಜಗತ್ಪ್ರಸಿದ್ಧವೆನಿಸಿದ್ದ ಸಂಗೀತಗಳನ್ನು ಕನ್ನಡಿಸುವ ಪ್ರಯತ್ನಕ್ಕೆ ಕೈಹಚ್ಚಿದಂತಿದೆ.

ದೇಶ ಭಾಷೆಗಳು ವಿಭಿನ್ನವಾಗಿದ್ದರೂ ದೇವರನ್ನು ಆರಾಧಿಸುವ ಭಾವನೆ, ಕಲ್ಪನೆ, ಗುಣಗಾನಗಳ ತಾಳ, ಲಯಗಳು ಒಂದೇ ಎಂಬ ಭಾವನೆಯಿಂದ ಜರ್ಮನ್, ಇಂಗ್ಲೆಂಡ್‌ನಲ್ಲಿ ಪ್ರಸಿದ್ಧಿ ಪಡೆದು

---

೧. ಸಂಗೀತಗಳು ಮತ್ತು ಸಂಗೀತಗಾರರು, ಘನ.ಎಸ್.ರತ್ನಂ, ಪು.೨

ಪ್ರಭಾವಗೊಂಡ ಶ್ರೇಷ್ಠ ಕವನಗಳನ್ನು ಕನ್ನಡಕ್ಕೆ ತಂದು ಒಂದೇ (ಟ್ಯೂನ್) ದಾಟಿಯಲ್ಲಿ ಬಳಸ ತೊಡಗಿದರು.

ಈಗ ಕ್ರೈಸ್ತ ದೇವಾಲಯಗಳಲ್ಲಿ ಪಾಶ್ಚಾತ್ಯ ಮಾದರಿ ಸಂಗೀತ ಹಾಗೂ ದೇಶಿ ಮಾದರಿ ಸಂಗೀತ ಎಂಬ ಎರಡು ಬಗೆಯ ಪದ್ಯಗಳು ಬಳಕೆಯಾಗುತ್ತವೆ. ಪ್ರೊಟಸ್ಟೆಂಟ ಆಂಗ್ಲಿಕನ ಮಥೋಡಿಸ್ಟ, ಬ್ಯಾಪ್ಟಿಷ್ಟ ಮುಂತಾದ ಚರ್ಚಗಳಲ್ಲಿ ಈಗಲೂ ಬಳಕೆಯಲ್ಲಿವೆ.

ಇಂಗ್ಲಿಷ್ ಸಂಗೀತಗಳಲ್ಲೆಲ್ಲಾ ನಾಲ್ಕು ವಿಶೇಷವಾದ ಸಂಗೀತಗಳು ಇರುತ್ತವೆ. ಅವುಗಳಲ್ಲಿ ಎರಡನ್ನು ಉದಾಹರಣೆಗೆ ತೆಗೆದುಕೊಳ್ಳಲಾಗಿದೆ.

ಕೇಳು ಧೂತರ್ಗಾನವ

ಈ ಕವನವನ್ನು ಬಿ.ಎಲ್.ರೈಸರವರು ಮೂಲ ಘನ ಚಾರ್ಲ್ಸವೆಸ್ಲಿ ಬೋಧಕರು ೧೭೩೯ರಲ್ಲಿ ರಚಿಸಿರುವುದನ್ನು ಕನ್ನಡಕ್ಕೆ ಭಾಷಾಂತರಿಸಿರುವರು. ಮೂಲದಲ್ಲಿದ್ದ ೮ ಚರಣದಲ್ಲಿ ಕನ್ನಡಕ್ಕೆ ೩ ಚರಣವನ್ನು ಮಾತ್ರ ಭಾಷಾಂತರಿಸಲಾಗಿದೆ. ಸಿ.ಎಸ್.ಐ.ಚರ್ಚನಲ್ಲಿ 'ಕನ್ನಡಸಂಗೀತ ಸಂಗ್ರಹ' ಎಂಬ ಸಂಗೀತ ಪುಸ್ತಕದಲ್ಲಿ ೮೩ನೇ ಅಂಕಿಯಲ್ಲಿ ಹೊಂದಿದೆ.

೧. ಕೇಳುದೂತರ್ಗಾನವ
ಘನರಾಜ ಹುಟ್ಟಿದ
ಸ್ವರ್ಗದಲ್ಲಿ ಮಹಿಮೆ
ಭೂವಿಯಲ್ಲಿ ಕರುಣೆ
ಎಲ್ಲಾ ಜನ ಹರ್ಷಿಸಿ
ದೂತಕೂಡ ಹಾಡಲಿ
ಬೇತ್ಲೆಹೇಮಿನೊಳಗೆ
ಪರಂಜ್ಯೋತಿ ತೋರಿದ
ಕೇಳು ದೂತರ್ಗಾನವ
ಘನರಾಜ ಹುಟ್ಟಿದ

೨. ಈಗ ಹುಟ್ಟಿರ್ದಾತನು
ಪರಲೋಕದರಸು
ಮೇಲಿನಿಂದ ಇಳಿದು
ನರನಾಗಿ ಬಂದನುಃ

ಪ್ರೀತಿಯಿಂದ ತನ್ನನ್ನು
ದೀನ ಮಾಡಿಕೊಂಡನು
ದೇವರ ಕುಮಾರನು
ಇಲ್ಲಿ ವಾಸಿಸಿದನು
ಕೇಳುದೂತರ್ಗಾನವ
ಘನರಾಜ ಹುಟ್ಟಿದ

೩. ಓ ಮಹತ್ವದರಸಾ
ಸರ್ವಲೋಕ ರಕ್ಷಕಾ
ಸಮಾಧಾನ ಗುರವೆ
ನೀತಿ ಸೂರ್ಯಕ್ರಿಸ್ತನೆ
ಮನಶ್ಯಾಂತಿ ಹುಟ್ಟಿಸಿ
ಮೋಕ್ಷಾನಂದ ತಂದಿದ್ದೀ
ನಮಸ್ಕಾರ ಯೇಸುವೇ
ನಿತ್ಯಮಾನ ನಿನಗೆ
ಕೇಳುದೂತರ್ಗಾನವ
ಘನರಾಜ ಹುಟ್ಟಿದ

ಕ್ರಿಸ್ತನು ಹುಟ್ಟಿದ ದಿನದಂದು ಬೇತ್ಲೆಹೇಮಿನಲ್ಲಿ ಕುರುಬರಿಗೆ ದೇವದೂತರು ಕಾಣಿಸಿಕೊಂಡು, ಹಾಡಿದ ಗೀತದಲ್ಲೂ, ಸಾರಿದ ವಾರ್ತೆಯಲ್ಲೂ, ಹುಟ್ಟಿದ ಮಗುವು ಘನರಾಜನು ರಾಜಾಧಿರಾಜನು, ಮಾತ್ರವಲ್ಲದೆ ಮಾನವ ಕೋಟಿಯನ್ನು ರಕ್ಷಿಸಲು ಬಂದವನೆಂದೂ, ಸಮಾಧಾನವನ್ನು ಸಾಲಿದನು. ಸಮಾಧಾನ ಪುರುಷನು ತಾನಾಗಿಯೇ ಆಗಿದ್ದು, ಪಾಪಾಂಧಕಾರದಲ್ಲಿ ಪ್ರಕಾಶಿಸುವ, ಪಾಪಿಗೆ ತನ್ನ ಪಾಪವನ್ನು ತೋರಿಸಿಕೊಡುವ ನೀತಿ ಸೂರ್ಯನಾಗಿಯೂ, ಅಶಾಂತತೆಯಿಂದ ಕೂಡಿದ ಮಾನವರಿಗೆಲ್ಲ ಮನಶಾಂತಿಯನ್ನು ಹುಟ್ಟಿಸುವವನೂ, ತನ್ಮೂಲಕ ಮೋಕ್ಷಾನಂದವನ್ನು ಕೊಡುವ ಪರಮ ಗುರವಾಗಿಯೂ ಇದ್ದಾನೆಂಬ ವಿಷಯಗಳು ಸ್ಪಷ್ಟವಾಗಿವೆ.

ಅಮೂಲ್ಯವಾದ ಮತ್ತು ಅರ್ಥಗರ್ಭಿತವಾದ ಮಾತುಗಳಿಂದ ಕೂಡಿದ ಸಾಲುಗಳು ಈ ಸಂಗೀತಕ್ಕೆ ತಕ್ಕ ರಾಗವು ಇರುತ್ತದೆ. ಆದುದರಿಂದಲೇ ಈಗಲೂ ಪ್ರತಿ ವರ್ಷದ ಕ್ರಿಸ್ತ ಜಯಂತಿಯ ಕಾಲದಲ್ಲಿ ಈ ಸಂಗತಿಯನ್ನು ಹಾಡಲು ಎಲ್ಲರೂ ಆಶೆಪಡುವರು. ಇಂಪಾಗಿ ಇದನ್ನು ಹಾಡುವುದಾದರೆ ಕೇಳು ವಂಥವರಿಗೆ ಮನಸ್ಸಿಗೆ ನಿಜವಾಗಿಯೂ ಎಷ್ಟೋ ಸೊಂಪನ್ನು ಕೊಡುತ್ತದೆ.

When I Survey the Wondrous Cross


ISAAC WATTS

Arranged by Lowell Mason



Favorite song of Dr. Bill Rice and composer John W. Peterson.

ಗೀತೆಗಳ ನೋಟ್ಸ್



Stille Nacht, heilige Nacht. **271** S. f. Ch. No. 101.



ಮತ್ತೊಂದು ಪ್ರಸಿದ್ಧ ಗೀತ. ಆಶ್ಚರ್ಯವಾದ ಶಿಲುಬೆ

ಈ ಗೀತವನ್ನು ಕೂಡ ಬಿ.ಎಲ್.ರೈಸರವರು ಕನ್ನಡದಲ್ಲಿ ಬರೆದಿರವರು. ಇಂದು ಹಾಡುವ ಸಂಗೀತ ಪುಸ್ತಕದಲ್ಲಿ ೧೧ನೇ ಅಂಕಿಯನ್ನು ಹೊಂದಿದೆ.

೧. ಆಶ್ಚರ್ಯವಾದ ಶಿಲುಬೆ
ಕಣ್ಣಿಟ್ಟು ದೃಷ್ಟಿಸಿದರೆ
ಈ ಲೋಕದ ಮಹತ್ವವು
ಬರೀ ಹುಚ್ಚಾಟವಾದದ್ದು

೨. ಎನ್ ಯೇಸುಸ್ವಾಮಿ ಒಬ್ಬನೇ
ಅಮೂಲ್ಯರತ್ನ ನನಗೆ
ನಾನಾತನನ್ನು ಕಂಡರೆ
ಬೇರೆಲ್ಲ ಭಾಗ್ಯ ಶೂನ್ಯವೆ

೩. ದೇಹಾತ್ಮದಲ್ಲಿ ಆತನು
ಎಷ್ಟೋ ಸಂತಾಪಪಟ್ಟನು
ಇದೆಲ್ಲಾ ನನಗೋಸ್ಕರ
ಕಟಾಕ್ಷದಿಂದ ತಾಳಿದ

೪. ಈ ದಿವ್ಯವಾದ ಪ್ರೀತಿಗೆ
ನಾ ಬದಲೇನು ಕೊಡುವೆ?
ಸಂಪತ್ತು ಪ್ರಾಣ ಯಾವುತ್ತು
ಕೊಟ್ಟಾಗ್ಯೂ ಇನ್ನೂ ಸಾಲದು

ಈ ಸಂಗೀತವನ್ನು ರಚಿಸಿದ ಡಾ.ಐಸಕ್ ವಾಟ್ಸ ಜನಿಸಿದ್ದು, ಸೌಥಾಂಪ್ಟನ್ ರೇವು ಪಟ್ಟಣದಲ್ಲಿ ೧೬೭೪ರಲ್ಲಿ ಒಂದು ದಿನ ದೇವಾಲಯದಿಂದ ಮನೆಗೆ ಬಂದು ಅಪ್ಪಾ ನಮ್ಮ ಚರ್ಚನಲ್ಲಿ ಜನರು ಯಾಕೆ ಸಂಗೀತವನ್ನು ಸ್ವಾರಸ್ಯಕರವಾದ ರೀತಿಯಲ್ಲಿ ಹಾಡುತ್ತಿಲ್ಲ ಎಂದು ತಂದೆಯನ್ನು ಕೇಳಿದನಂತೆ. ಅದಕ್ಕೆ ತಂದೆ ಮಗನೇ ಅಂತಹ ಸ್ವಾರಸ್ಯವಿರುವಂಥ ಸಂಗೀತಗಳನ್ನು ನೀನೇ ಏಕೆ ರಚಿಸಬಾರದು ಎಂದು ಹೇಳಿದನಂತೆ. ಈ ಮಾತು ಆ ಬಾಲಕನ ಮನಸ್ಸಿನಲ್ಲಿ ಕೆಲಸ ಮಾಡುತ್ತಿತ್ತು. ಮುಂದೆ ಈತ ೨೪ನೇ ವಯಸ್ಸಿನಲ್ಲಿ ಲಂಡನ್ ಮಿಶನ್ನಿಗೆ ಸೇರಿ ಒಂದು ಸ್ವತಂತ್ರ ದೇವಾಲಯಕ್ಕೆ ಬೋಧಕನಾದನು. ಅಲ್ಲಿ ಸಂಗೀತ ರಚನೆಯನ್ನು ೧೭೦೨ ರಿಂದ ೧೭೦೯ರವರೆಗೆ ರಚಿಸಲು ಪ್ರಾರಂಭಿಸಿ ಆತ್ಮೀಕ ಸಂಗೀತ ಕೀರ್ತನೆಗಳು ಎಂಬ ಶಿರೋನಾಮೆಯ ಕೃತಿಯನ್ನು ಹೊಂತಂದನು. ಬೈಬಲ್‌ನಲ್ಲಿಯ 'ಗಲಾತ್ಯ' ಪುಸ್ತಕದ ೭ ಅಧ್ಯಾಯದ ೧೪ನೇ ವಚನದ ಆಧಾರದ ಮೇಲೆ ಮೇಲಿನ ಗೀತವನ್ನು ರಚಿಸಿದ. ಈ

ವಚನ ಹೀಗಿದೆ. ನನಗಾದರೋ ನಮ್ಮ ಕರ್ತನಾದ ಯೇಸುಕ್ರಿಸ್ತನ ಶಿಲುಬೆಯ ವಿಷಯದಲ್ಲಿ ಹೊರತು ಹೆಚ್ಚಳಪಡುವುದು ಬೇಡವೇ ಬೇಡ ಆತನ ಮೂಲಕ ಲೋಕವು ಶಿಲುಬೆಗೆ ಹಾಕಿಸಿಕೊಂಡು ನನ್ನ ಪಾಲಿಗೆ ಸತ್ತಿತ್ತು. ನಾನು ಶಿಲುಬೆಗೆ ಹಾಕಿಸಿಕೊಂಡು ಲೋಕದ ಪಾಲಿಗೆ ಸತ್ತೇನ. ಅನೇಕ ಕ್ರಿಸ್ತನ ಭಕ್ತರು ಈ ಗೀತೆಯನ್ನು ತಮ್ಮ ಅಂತಿಮ ದಿನಗಳಲ್ಲಿ ಹಾಡಿಸಿಕೊಂಡು ಕೇಳಿ ಈ ಲೋಕದ ಯಾತ್ರೆಯನ್ನು ಮುಗಿಸಿದ ಉದಾಹರಣೆಗಳಿವೆ. ಅವರುಗಳಲ್ಲಿ ಮ್ಯಾಥ್ಯೂಅರ್ನಾಲ್ಡ್, ಜಾರ್ಜಎಲಿಯಟನ್ ಚಿಕ್ಕಮ್ಮ ಮುಂತಾದವರು.

ಒಂದು ಸಾರಿ ಚರ್ಚ ಬೋಧಕರು ಘನ ಉದ್ದೇಶಕ್ಕಾಗಿ ಭಕ್ತರಿಂದ ಹಣ ಕೂಡಿಸಬೇಕಾಗಿತ್ತಂತೆ. ಮುಂದೆ ಈ ಗೀತವನ್ನು ಹಾಡಿ ಕಾಣಿಕೆ ಕೂಡಿಸಲಾಯಿತು. ಕಾಣಿಕೆ ಚೀಲದಲ್ಲಿ ಸಂಗ್ರವಾದ ಹಣ ಕೇವಲ ೧೮ರೂ ಮಾತ್ರ. ನಂತರ ಬೋಧಕರು ಸಭಿಕರನ್ನುದ್ದೇಶಿಸಿ ನೀವು ಹಾಡಿದ ಸಂಗೀತವನ್ನು ಯಾರೂ ಅರ್ಥಮಾಡಿಕೊಂಡಂತೆ ಕಂಡುಬರಲಿಲ್ಲ. ಇನ್ನೊಂದು ಸಾರಿ ಮನಃಪೂರ್ವಕ, ಅರ್ಥಗರ್ಭಿತವಾಗಿ ಗ್ರಹಿಸಿಕೊಂಡು ಕೊನೆಯ ಚರಣವನ್ನು ಹಾಡಿರಿ ಎಂದರಂತೆ. ಆಗ ಇಡೀ ಸಭೆಯವರು ಎದ್ದು ನಿಂತುಕೊಂಡು ಗಂಭೀರವಾಗಿ ಹಾಡ ತೊಡಗಿದರಂತೆ. ಈ ದಿವ್ಯವಾದ ಪ್ರೀತಿ (ಶಿಲುಬೆಯಲ್ಲಿ ಕ್ರಿಸ್ತನಿಂದ ಪ್ರಕಟವಾದದ್ದು)ಗೆ ನಾ ಬದಲೇನು ಕೊಡುವೆ? ಸಂಪತ್ತು, ಪ್ರಾಣ ಯಾವತ್ತು ಕೊಟ್ಟಾಗ್ಯೂ ಇನ್ನು ಸಾಲದು. ನಮ್ಮ ಜೀವಮಾನದ ಕಾಲದಲ್ಲಿ ನಾವು ಎಷ್ಟೇ ಕಾಣಿಕೆಗಳನ್ನು ಕೊಟ್ಟರೂ, ಭಕ್ತಿಯ ಬಾಳನ್ನು ಬಾಳಿದರೂ, ಅತ್ಯುತ್ತಮ ಕ್ರೈಸ್ತ ಬಾಳನ್ನೇ ಬಾಳಿದರು ಕ್ರಿಸ್ತನಿಗೆ ನಾವು ಚಿರಋಣಿಯಾಗಿಯೇ ಇರುತ್ತೇವೆ ಎನ್ನುವ ಅರ್ಥದೊಂದಿಗೆ ಕಾಣಿಕೆ ಅಧಿಕವಾಗಿ ಸಂಗ್ರಹವಾಯಿತಂತೆ.

ಇಂತಹ ಅಮೂಲ್ಯ ಗೀತಗಳನ್ನು ಮಿಶನರಿಗಳು ಕನ್ನಡ ಕ್ರೈಸ್ತರಿಗೆ ಕಾಣಿಕೆ ಇತ್ತದ್ದು ಶ್ಲಾಘನೀಯ. ಭಾರತೀಯ ಧಾರ್ಮಿಕ ವಿಧಿ ವಿಧಾನವನ್ನು ಹಾಗೂ ಪೂಜಾ ಪರಿಕರಗಳನ್ನು ಕಂಡ ಮಿಶನಗಳು ಹಿಂದೂ ಮಾದರಿಯ ಗೀತ ಸಂಗೀತವನ್ನು, ತಮ್ಮ ಪೂಜಾ ವಿಧಾನಗಳಲ್ಲಿ ಬಳಸಲು ಇಚ್ಛಿಸಿ ಅವುಗಳ ರಚನೆಯಲ್ಲಿ ಪ್ರೋತ್ಸಾಹಕೊಟ್ಟರು. ನಂತರ ಅವುಗಳನ್ನು ಆರಾಧನೆಯಲ್ಲಿ ಬಳಸಿ ಆನಂದಿಸಿದರು.

ಈಗ ಸಿ.ಎಸ್.ಐ., ಮೆಥೋಡಿಸ್ಟ್, ಬ್ಯಾಪಿಷ್ಟ ಹಾಗೂ ಆಂಗ್ಲಿಕನ್ ಚರ್ಚಗಳು ಕನ್ನಡ ಕೀರ್ತನೆಗಳು ಎಂಬ ಗೀತ ಪುಸ್ತಕವನ್ನು ಬಳಸುತ್ತವೆ. ಬೆಂಗಳೂರು ಟ್ರಾಕ್ಟ್ ಹಾಗೂ ಬುಕ್ ಕಮಿಟಿಯ ಒತ್ತಾಯದ ಮೇರೆಗೆ ೧೮೬೭ರಲ್ಲಿ ವೆಸ್ಲಿಯನ್ ಮಿಶನ್ ಈ ಗೀತ ರಚನೆಗೆ ಕೈ ಹಾಕಿತು. ಆ ಸಂದರ್ಭದಲ್ಲಿ ರೆ.ಜೆ.ಲಾರೆನ್ಸ ಟಿ.ಲ್ಯೂಕ, ಜೆ.ಪೌಲ, ಎ.ಪಿಲಿಪ್ ಮತ್ತು ಶ್ರೀ ಜಿ.ರಂಗಯ್ಯ ಮುಂದೆ ಎರಡನೆಯ ಮುದ್ರಣದ ಕಾರ್ಯಕ್ಕೆ ರೆ.ಇ.ಪಿ.ರೈಸ್ ಹಾಗೂ ಜಿ.ಗಂಗಯ್ಯ ಅವರಿಂದ ಒಟ್ಟು ೧೪೮ ಕೀರ್ತನೆಗಳೊಂದಿಗೆ ಹೊರಬಂದಿತು.

ಈ ಕೀರ್ತನ ಗ್ರಂಥವನ್ನು ಪುನವಿಮರ್ಶಿಸಿ ವಿಸ್ತರಿಸುವ ಕಾರ್ಯವು ಕೆಲವು ವರ್ಷಗಳಿಂದ ನಡೆಯುತ್ತಾ ಬಂದಿದೆ. ಹಳೆಯ ಗ್ರಂಥವು ಕರ್ನಾಟಕ ಪ್ರಾಂತ್ಯದಲ್ಲಿ ಸುಮಾರು ಐವತ್ತು ವರ್ಷಗಳಿಂದಲೂ

ಉಪಯೋಗದಲ್ಲಿವೆ. ಹಿಂದಿನ ೧೪೮ರ ಬದಲಿಗೆ ಸಂಪೂರ್ಣವಾಗಿ ೩೦ ಕೀರ್ತನೆಗಳನ್ನು ಮುದ್ರಿಸಲು ನಿರ್ಧರಿಸಲಾಯಿತು. ಯಾವ ವಿಷಯಗಳ ಕುರಿತು ಕೀರ್ತನೆಗಳು ಈ ಹಿಂದೆ ಇರಲಿಲ್ಲವೂ ಅವುಗಳನ್ನು ಅನುಲಕ್ಷಿಸಿ ಬರೆಯಲಾಯಿತು.

"೧೯೪೩ನೆಯ ವರುಷದ ಜುಲೈ ತಿಂಗಳಲ್ಲಿ ಟ್ರಾಕ್ಟ ಅಂಡ್ ಬುಕ್ ಸೊಸೈಟಿ ಬೆಂಗಳೂರು ಇವರ ಇಷ್ಟಾನುಸಾರ ಒಂದು ಸಮಿತಿಯು ಮೈಸೂರಿನಲ್ಲಿ ಹದಿನೈದು ದಿನಗಳವರೆಗೆ ನಡೆಯಿತು. ಈ ಸಮಿತಿಯವರು ಮೊದಲೆ ಪರಿಶೋಧಿತವಾಗಿದ್ದು, ಉಳಿದಿದ್ದ ೧೫೪ ಹೊಸ ಕೀರ್ತನೆಗಳನ್ನು ಬಹು ಜಾಗರೂಕತೆಯಿಂದ ವಿಮರ್ಶಿಸಿದರು. ಈ ಕೀರ್ತನೆಗಳಲ್ಲಿ ೮೭ನ್ನು ಆರಿಸಲಾಯಿತು. ೧೪ನೇ ಮುದ್ರಣದಲ್ಲಿದ್ದ ಕೀರ್ತನೆಗಳಲ್ಲಿ ಒಂದನ್ನು ಮಾತ್ರ ಬಿಟ್ಟು ಬಿಡಲಾಯಿತು. ಉಳಿದ ಹಳೆಯ ಕೀರ್ತನೆಗಳನ್ನು ಪುನವಿಮರ್ಶಿಸಿ ಮುಖ್ಯವಾಗಿ ಪ್ರಾಸ ವಿಚಾರಗಳನ್ನು ಉತ್ತಮಗೊಳಿಸಲಾಯಿತು. ಮೇಲೆ ಕಂಡ ಸಮಿತಿಯಲ್ಲಿ ಇದ್ದವರು ಟಿ.ದೇವದತ್ತಪ್ಪ, ಸಮುವೇಲ ಸಾಧು, ಬೋಧಕರಾದ ಎಂ.ಆನಂದಮೂರ್ತಿ, ಬಿ.ಡಿ.ವೈ.ಸಮುವೇಲ, ಡಿ.ತಿರುವೆಂಗಡಯ್ಯ, ಎನ್.ವೀರಭದ್ರನ್ ಮತ್ತು ಡಬ್ಲ್ಯು ಈ ಟಾರ್ಲಿನ್‌ಸನ್ ಈ ಸಮಿತಿಯ ಕಾರ್ಯಕಲಾಪಗಳಲ್ಲಿ ಆಸ್ಥಾನದ ವಿದ್ವಾನ್ ಆನವಟ್ಟಿ ರಾಮರಾಯರ ಸಹಾಯವು ವಿಶೇಷವಾಗಿ ದೊರೆಯಿತು".[೧]

ಈ ಕನ್ನಡ ಕೀರ್ತನೆಗಳ ಬೆಳವಣಿಗೆಗೆ ಇಂಗ್ಲೀಷ ಮೂಲದ ಕವನಗಳೇ ಪ್ರೇರಕಗಳಾಗಿವೆ. ಒಟ್ಟು ೫೨ ಇಂಗ್ಲೀಷ್ ಗೀತೆಗಳ ಪ್ರಭಾವ, ಪ್ರೇರಣೆಯಿಂದ ಮೂಡಿಬಂದಿವೆ. ಈಗ ಒಟ್ಟು ೨೩೪ ಕೀರ್ತನೆಗಳು ಸಂಗ್ರಹದಲ್ಲಿ ಕಂಡುಬರುವವು. ಇನ್ನೂ ಹೆಚ್ಚು ಹೆಚ್ಚಾಗಿ ಇಂ ತಹ ಕೀರ್ತನೆಗಳು ಮೂಡಿ ಬರಬಹುದೆಂಬುದು ಸಮಿತಿಯ ಅಪೇಕ್ಷೆ ಇದೆ. ಒಟ್ಟು ೨೯ ಜನ ಎರಡು ಮುಖ್ಯ ತಾಳಗಳಾದ ಆದಿತಾಳ ಹಾಗೂ ಆಟತಾಳಗಳನ್ನು ಬಳಸಿಕೊಂಡಿದ್ದಾರೆ. ಮತ್ತು ಭಾರತೀಯ ಸಂಗೀತ ಕ್ಷೇತ್ರದಲ್ಲಿ ಬಳಸುವ ರಾಗಗಳನ್ನು ಬಳಸಿರುವರು ಅವು ಒಟ್ಟು ೫೧.

ರಾಗಗಳ ವಿವರ

೧. ಭೈರವಿ	ಒಟ್ಟು	೦೯	೭. ಕಮಾಚ್	ಒಟ್ಟು	೧೨
೨. ಪಂತುವರಾಳ	ಒಟ್ಟು	೦೨	೮. ಧನ್ಯಾಸಿ	ಒಟ್ಟು	೧೫
೩. ಸುರಟಿ	ಒಟ್ಟು	೦೯	೯. ಶಂಕರಾಭರಣ	ಒಟ್ಟು	೨೯
೪. ಕೇತಾರಗೌಳ	ಒಟ್ಟು	೦೫	೧೦. ಜುಂಜೋಟಿ ಜಿಲ್ಲಿ	ಒಟ್ಟು	೧೧
೫. ಯದುಕುಲಾಂಬೋಧಿ	ಒಟ್ಟು	೧೧	೧೧. ಲಾವಣಿ ಮಟ್ಟು	ಒಟ್ಟು	೦೪
೬. ಬೇಹಾಗ್	ಒಟ್ಟು	೦೭	೧೨. ಆನಂದಭೈರವಿ	ಒಟ್ಟು	೧೫

೧. ಕನ್ನಡ ಕೀರ್ತನೆಗಳು ಟ್ರಕ್ಟ್ ಅಂಡ್ ಬುಕ್ ಸೊಸೈಟಿ, ಬೆಂಗಳೂರು, ೧೯೬೨, ಪ್ರಸ್ತಾವನೆ ಪು.೪

೧೩. ಭೂಪಾಳಿ ಒಟ್ಟು ೦೧

೧೪. ಹಿಂದೂಸ್ಥಾನಿ ಕಾಪಿ ಒಟ್ಟು ೦೩

೧೫. ಕಾಂಬೋದಿ ಒಟ್ಟು ೦೭

೧೬. ಯಮುನಾ ಕಲ್ಯಾಣಿ ಒಟ್ಟು ೦೨

೧೭. ಶಹನ ಒಟ್ಟು ೦೩

೧೮. ಕಲ್ಯಾಣಿ ಒಟ್ಟು ೦೮

೧೯. ಮುಖಾರಿ ಒಟ್ಟು ೦೨

೨೦. ಮದ್ಯಮವಾದಿ ಒಟ್ಟು ೦೨

೨೧. ಮೋಹನ್ ಒಟ್ಟು ೦೮

೨೨. ನಾನಕ್ ಒಟ್ಟು ೦೧

೨೩. ಕುಂತಲವರಾಳಿ ಒಟ್ಟು ೦೧

೨೪. ಶಂಕರಾಭರಣ ನೋಟ್ ಒಟ್ಟು ೦೩

೨೫. ನರಸಕನ್ನಡ ಒಟ್ಟು ೦೧

೨೬. ಜುಲಾಬ ಒಟ್ಟು ೦೧

೨೭. ಹಿಂದೂಸ್ಥಾನಿಭೈರವಿ ಒಟ್ಟು ೦೧

೨೮. ಮಾಂಡು ಒಟ್ಟು ೦೧

೨೯. ನಳಿನಕಾಂತಿ ಒಟ್ಟು ೦೧

೩೦. ತೋಡಿ ಒಟ್ಟು ೦೧

೩೧. ನಾದನಾಮಕ್ರಿಯೆ ಒಟ್ಟು ೦೪

೩೨. ಪೂರ್ವಕಲ್ಯಾಣಿ ಒಟ್ಟು ೦೧

೩೩. ಇಂಗ್ಲಿಷ್ ನೋಟ್ಸ್ ಒಟ್ಟು ೦೧

೩೪. ಖರಹರಪ್ರಿಯ ಒಟ್ಟು ೦೧

೩೫. ಅಮೀರಕಲ್ಯಾಣಿ ಒಟ್ಟು ೦೧

೩೬. ಹಂಸಧ್ವನಿ ಒಟ್ಟು ೦೧

೩೭. ಹಿಂದೂಸ್ಥಾನಿ ಒಟ್ಟು ೦೧

೩೮. ಕಾಮವರ್ದಿನಿ ಒಟ್ಟು ೦೧

೩೯. ಬಲಹರಿ ಒಟ್ಟು ೦೨

೪೦. ರೇಗುಪ್ತಿ ಒಟ್ಟು ೦೧

೪೧. ಸೌರಾಷ್ಟ್ರ ಒಟ್ಟು ೦೧

೪೨. ಮೋಹನಕಲ್ಯಾಣಿ ಒಟ್ಟು ೦೫

೪೩. ಕ್ಯಾಲ್ ಒಟ್ಟು ೦೧

೪೪. ನಾಯಕಿ ಒಟ್ಟು ೦೧

೪೫. ಸಾರಂಗ ಒಟ್ಟು ೦೧

೪೬. ಕೇತಾರ ಕಾಪಿ ಒಟ್ಟು ೦೧

೪೭. ನವರೋಜ ಒಟ್ಟು ೦೧

೪೮. ಕುರಂಜಿ ಒಟ್ಟು ೦೧

೪೯. ಬ್ಯಾಗಡೆ ಒಟ್ಟು ೦೧

೫೦. ದೇಶಿ ಒಟ್ಟು ೦೧

೫೧. ಪುನಾಗವತಾಳಿ ಒಟ್ಟು ೦೧

ಭಾರತೀಯ ಹಾಗೂ ಪಾಶ್ಚಾತ್ಯ ಸಂಗೀತಗಳ ಒಟ್ಟು ಬಳಕೆ ಇಂದಿನ ಕ್ರೈಸ್ತರಲ್ಲಿ ಸಾಗಿ ಬರುತ್ತಿದೆ. ಇವೆಲ್ಲವೂಗಳನ್ನು ದೃಷ್ಟಿಸಿದಾಗ ರಾಗ, ತಾಳ, ಲಯ, ಸಂಗೀತ, ಸಾಮಗ್ರಿಗಳು ಒಂದು ಸಂಸ್ಕೃತಿಯಿಂದ ಮತ್ತೊಂದು ಸಂಸ್ಕೃತಿಯಲ್ಲಿ ಮೇಳವಿಸಿ ಕೊಡುಕೊಳ್ಳುವಿಕೆಯುಂಟಾಗಿ ಪಾಶ್ಚಾತ್ಯ ಪೌರ್ವಾತ್ಯ ಮಿಲನ ಏರ್ಪಟ್ಟಿದೆ ಎಂದರೆ ತಪ್ಪಾಗಲಾರದು.

ಸಂಗೀತದ ಬಳಕೆ, ಬೈಬಲ್ ಪಠಣ ಮಾಧ್ಯಮದಲ್ಲಿ ಯಾವ ಧರ್ಮ, ಜಾತಿ, ಲಿಂಗ ಬೇಧವಿಲ್ಲದೆ ಮನುಷ್ಯನಿಗೆ ಆನಂದವನ್ನುಂಟು ಮಾಡುವುದೇ ಸಂಗೀತದ ಗುರಿಯಾಗಿರುವಾಗ ಆಯಾ ಜನಾಂಗದ ನಾದ, ಲಯವಾಗಿ ಅವರವರಿಗೆ ಭಕ್ತಿ, ಉಲ್ಲಾಸ, ಹರ್ಷವನ್ನಿಯುತ್ತ ಮನುಕುಲದ ಏಳಿಗೆಯನ್ನೇ ಸೂಚಿಸುವ ಈ ಸಂಗೀತ ಕ್ರೈಸ್ತ ಧರ್ಮೀಯರಲ್ಲೂ ತನ್ನದೇ ಆದ ವೈಶಿಷ್ಟ್ಯತೆಯಿಂದ ಕೂಡಿದೆ.

ಸಂಗೀತದ ಹುಟ್ಟಿನ ಬಗ್ಗೆ ತಿಳಿಯುವಲ್ಲಿ ಮುಖ್ಯವಾಗಿ ಎರಡು ಬಗೆ ಕಂಡುಬರುತ್ತದೆ. ಒಂದು, ಸೃಷ್ಟಿಯ ಅಂಶಗಳಾದ, ಖಗ, ಮೃಗಗಳನ್ನು ಆಧರಿಸಿ, ಇನ್ನೊಂದು ಪುರಾಣದ ದೇವ-ದೇವತೆಗಳನ್ನು ಅನುಸರಿಸಿ. ಇದಕ್ಕೆ ಪ್ರಾಚೀನ ಕಾಲದಲ್ಲಿ ೧. ಮಾರ್ಗ ಸಂಗೀತ ೨. ದೇಶೀ ಸಂಗೀತವೆಂದು ಕರೆಯುತ್ತಿದ್ದರು.

ಮಾರ್ಗಸಂಗೀತ ಅನೇಕ ಕಟ್ಟುನಿಟ್ಟುಗಳ ನಿಯಮಗಳಿಂದ ಬದ್ಧವಾಗಿ ಪರಿವರ್ತನೆಗೆ ಅವಕಾಶವಿಲ್ಲದೆ, ಗಾಯಕರಿಗೂ ವೈವಿಧ್ಯತೆಯನ್ನುಂಟು ಮಾಡುವ ಸ್ವಾತಂತ್ರ ಇರದಂತೆ ಸಾಗುವಂತಹುದು. ಇದು ಈಶ್ವರ ನಿರ್ಮಿತ.

"ದೇಶಿ ಸಂಗೀತ ಮಾನವ ನಿರ್ಮಿತವಾಗಿದ್ದು, ಅದರ ಉದ್ದೇಶವು ಜನ ಮನರಂಜನೆಯಾಗಿದೆ. ಮಾರ್ಗ ಸಂಗೀತದಂತೆಯೇ ಕಟ್ಟುನಿಟ್ಟಾದ ನಿಯಮಗಳಲ್ಲ. ಆದುದರಿಂದ ಗಾಯಕರು ಸ್ವಾತಂತ್ರವಹಿಸಿ ಹಾಡುವಾಗ ವೈವಿಧ್ಯತರಬಲ್ಲರು. ಲೋಕಾಭಿರುಚಿಗನುಸಾರವಾಗಿ ಪರಿವರ್ತನೆ ಹೊಂದುತ್ತದೆ."[೧]

ಶ್ರೀ ಜಿ.ಎಸ್.ರಾನಡೆಯವರು 'ಹಿಂದೂಸ್ಥಾನಿ ಮ್ಯೂಜಿಕ್ ' ಎಂಬ ಗ್ರಂಥದಲ್ಲಿ ಪಶುಪಕ್ಷಿಗಳ ಬೇರೆ ಬೇರೆ ಸ್ಥರಗಳಿಂದ ಉದಾ : ಕೋಗಿಲೆ ಹಾಗೂ ಸಿಂಹಗಳ ಘರ್ಜನೆಯಿಂದ ಸಂಗೀತನಾದ ಹೊಮ್ಮಿದೆ ಎಂದು ಅಭಿಪ್ರಾಯ ಪಟ್ಟರೆ, "ಪಂಡಿತ ದಾಮೋದರ ಸಹ ಸಂಗೀತದ ಉತ್ಪತ್ತಿ ಬೇರೆ ಬೇರೆ ಪಕ್ಷಿಗಳ ಸ್ವರದಿಂದಾಗಿದೆ ಎಂದು ಹೇಳುತ್ತ. "ನವಿಲಿನಿಂದ ಷಡ್ಜಸ್ವರ, ಜಾತಕ ಪಕ್ಷಿಯಿಂದ ರಿಷಭ, ಆಡಿನಿಂದ ಗಾಂಧಾರ, ಕಾಗೆಯಿಂದ ಮಧ್ಯಮ, ಕೋಗಿಲೆಯಿಂದ ಪಂಚಮ ಕಪ್ಪೆಯಿಂದ ಧೈವತ ಹಾಗೂ ಆಸೆಯಿಂದ ನಿಷಾದ ಸ್ವರಗಳ ಉತ್ಪತ್ತಿಯಾಗಿದೆ"[೨] ಎಂದಿದ್ದಾರೆ.

ಸಂಗೀತವು ಮಾನವನ ಕಲ್ಪನಾಶಕ್ತಿ ಹಾಗೂ ಉತ್ಪಾದಕ ಶಕ್ತಿಯ ಕೊಡುಗೆ. ಸುಖ ಹಾಗೂ ದುಃಖದ ಅನುಭವಗಳನ್ನು ಮುಖ ವಿಕಾರದಿಂದಲೋ, ಹಸ್ತಾದಿ ಅಂಗಾಂಗಗಳ ಚಲನವಲನದಿಂದಲೋ ಅಭಿವ್ಯಕ್ತಿಸುತ್ತ ಕಾಲ ಕಳೆದಂತೆ, ಅನೇಕ ವಸ್ತುಗಳ ಅವಶ್ಯಕತೆ ಕಂಡುಬಂದಿರಬಹುದು. ನೀರಡಿಕೆಯಾದಾಗ ನದಿ, ಹಳ್ಳಗಳ ನೀರಿನ ಬಯಕೆ, ಹಸಿವಾದಾಗ ಹಣ್ಣಿನ ಬೇಟೆಯ ಬಯಕೆ. ನಿಸರ್ಗದ ಬಣ್ಣ ಬಣ್ಣದ

೧. ಭಾರತದ ಸಂಗೀತದ ಚರಿತ್ರೆ, ಪು.೭ ಮತ್ತು ೮

೨. ಅದೇ, ಪು.೨

ವಾತಾವರಣದಲ್ಲಿ ಪಶು, ಪಕ್ಷಿಗಳ ಧ್ವನಿಗಳು ಮಾನವನ ಮನಸ್ಸಿನಲ್ಲಿ ಆಶ್ಚರ್ಯಕರ ಪ್ರವೃತ್ತಿ ರೂಢಿಸಲು ಪ್ರಾರಂಭಿಸಿರಬಹುದು. ಪ್ರಕೃತಿದತ್ತವಾದ ಈ ಪಕ್ಷಿಗಳ ಕೂಗು ಮನುಷ್ಯನ ಬೇಸರಿಕೆಯನ್ನು ಹೋಗಲಾಡಿಸಿ, ಮನೋಲ್ಲಾಸವನ್ನು ಹರ್ಷವನ್ನು ತಂದಿರಲು ಸಾಕು! ನಿಸರ್ಗ ನಿರ್ಮಿತ ಅನೇಕ ಮಧುರ ಧ್ವನಿಗಳನ್ನು ತಾನು ಅನುಕರಿಸಿ ತೃಪ್ತಿ ಪಟ್ಟ ಮೇಲಂತೂ, ತನ್ನ ಕಲ್ಪನಾ ಶಕ್ತಿಯನ್ನು ಬೆಳೆಸಿಕೊಂಡು ಸಂಗೀತ ಲಯ ರಾಗಗಳನ್ನು ಮನಸ್ಸು ಒಪ್ಪುವ ರೀತಿಯಲ್ಲಿ ರೂಢಿಸಿರಬಹುದು. ನಿಸರ್ಗದ ಕೊಡುಗೆಯೇ ಸಂಗೀತಕ್ಕೆ ಉಗಮವಾದರೆ, ಪುರಾಣದ ಓಂಕಾರ ಸಂಗೀತಕ್ಕೆ ಮೂಲವೆನ್ನಲಾಗಿದೆ.

೬.೩. ಸಂವಹನ ರೀತಿಯಲ್ಲಿ ಜರುಗುವ ವಿಧಿ ಕ್ರಿಯೆಗಳು

ಜನನ

ಹುಟ್ಟಿದಾಗ ಮಗು ಯಾವ ಧರ್ಮಕ್ಕೆ ಸೇರಿದುದು ಎಂದು ಕೇಳಿದರೆ, ತಂದೆ-ತಾಯಿಗಳ ಧರ್ಮ ಎಂಬ ಉತ್ತರ ಸಹಜ. ಆದರೆ ಮಗು ಬೆಳೆದು ಯೌವನಾವಸ್ಥೆಗೆ ಬಂದಾಗ ಆ ವ್ಯಕ್ತಿ ಜಗತ್ತಿನ ಯಾವುದೇ ಧರ್ಮವನ್ನು ಸ್ವೀಕರಿಸುವಲ್ಲಿ ಅಭ್ಯಂತರವಿಲ್ಲ. ಹೀಗಾಗಿ ಹುಟ್ಟಿದಾಗ ಇದೇ ಧರ್ಮ ಕೊನೆಯವರೆಗೂ ಉಳಿಯುವಲ್ಲಿ ಖಚಿತತೆ ಇಲ್ಲ. ಈ ಕಾರಣ ಕ್ರೈಸ್ತ ಧರ್ಮ ತನ್ನಲ್ಲಿ ಜನಿಸಿದ ಪ್ರತಿ ಮಗುವು ಕ್ರೈಸ್ತತತ್ವದಲ್ಲಿ ಹಾಗೂ ಬೈಬಲ್ ಆಧಾರಯುತ ವಾಕ್ಯದೊಂದಿಗೆ ಬೆಳೆಸುವಲ್ಲಿ ಆಸ್ತೆವಹಿಸುವುದು ಕಂಡುಬರುವುದು.

ಮಕ್ಕಳು ದೇವರಿತ್ತ ದಾನಗಳು ಅದರಲ್ಲಿಯೂ "ಪುತ್ರ ಸಂತಾನವು ಯಹೋವ(ದೇವರು)ನಿಂದ ಬಂದ ಭಾಗ್ಯವು" ಎಂದು ಬೈಬಲ್ ತಿಳಿಸುತ್ತ ಪ್ರತಿ ಮಾನವನು ಮಗುವಿನಂತಹ ಮುಗ್ಧ ಮನಸ್ಸನ್ನು ಹೊಂದದೆ ಹೋದರೆ ಅವನು ದೇವರ ರಾಜ್ಯದಲ್ಲಿ ಸೇರಲಾರನೆಂದು ಕ್ರಿಸ್ತನು ಸ್ಪಷ್ಟವಾಗಿ ತಿಳಿಸಿದ್ದಾನೆ.

ಈ ಸಿದ್ಧಾಂತವನ್ನು ಆಧರಿಸಿ ಕವಿ ವರ್ಡ್ಸ್‌ವರ್ತ 'CHILD IS FATHER OF MAN' ಅಂದರೆ ಮಗು ಮಾನವನ ತಂದೆ ಎಂದಿದ್ದಾನೆ. ಇಲ್ಲಿ ತಂದೆ ಎಂದರೆ ದೇವರು ಎಂದು ಅರ್ಥೈಸಬೇಕು ಯಾಕೆಂದರೆ ಯೇಸು ಕ್ರೈಸ್ತನು ದೇವರಿಗೆ ತಂದೆ ಎಂದಿದ್ದಾನೆ.

ಮಗು ಹುಟ್ಟಿದ ಎಂಟು ದಿನಗಳಿಂದ ಮೂರು ತಿಂಗಳೊಳಗಾಗಿ ಹೆಸರಿಡುವ ಪರಿಪಾಠವಿದೆ ಕ್ರಿಸ್ತನಿಗೆ ಹೆಸರಿಟ್ಟ ಬಗ್ಗೆ ಬೈಬಲ್ ಹೀಗೆ ದಾಖಲಿಸುತ್ತದೆ.

"ಆ ಕೂಸಿಗೆ (ಶಿಸ್ತನಿಗೆ) ಸುನ್ನತಿ ಮಾಡುವುದಕ್ಕೆ ಕಳೆಯ ಬೇಕಾದ ಎಂಟು ದಿವಸಗಳು ತುಂಬಿದ ಮೇಲೆ ಅದಕ್ಕೆ ಯೇಸು ಎಂದು ಹೆಸರಿಟ್ಟರು."(ಲೂಕ ೨:೨೧) ಈ ಕಾರಣದಿಂದ ಕ್ರೈಸ್ತರು ಮಗುವಿಗೆ ಹೆಸರಿಡಲು ಚರ್ಚ್‌ಗಳಿಗೆ ತೆಗೆದುಕೊಂಡು ಹೋಗುವರು. ಅಲ್ಲಿ ಗರ್ಭಗುಡಿಯಲ್ಲಿ ಧರ್ಮಗುರುಗಳು

ಆ ಮಗುವನ್ನು ಕೈಯಲ್ಲಿ ಎತ್ತಿ ಹಿಡಿದು ಬೈಬಲ್ ಉಕ್ತಿಗಳನ್ನು ಪಠಿಸುತ್ತ ತಂದೆ(ದೇವರು) ಮಗ (ಕ್ರಿಸ್ತರು) ಹಾಗೂ ಪವಿತ್ರಾತ್ಮನ ಹೆಸರಿನಲ್ಲಿ ಮಸ್ತಕವನ್ನು ನೀರಿನಿಂದ ಸ್ಪರ್ಶಿಸಿ ಆಶೀರ್ವದಿಸುವರು. ಹೀಗೆ ಮಾಡಲು ಯೇಸುಕ್ರಿಸ್ತನ ವಾಕ್ಯಗಳೇ ಕಾರಣ "ಮಕ್ಕಳನ್ನು ತನ್ನ ಹತ್ತಿರ ಬರಲು ಅನುವುಗೊಳಿಸಿರಿ, ಅವುಗಳಿಗೆ ಅಡ್ಡಿ ಮಾಡಬೇಡಿರಿ ದೇವರ ರಾಜ್ಯವು ಇಂಥವರದೇ ನಿಮಗೆ ಸತ್ಯವಾಗಿ ಹೇಳುತ್ತೇನೆ; ಯಾವನು ಶಿಶುಭಾವದಿಂದ ದೇವರ ರಾಜ್ಯವನ್ನು ಅಂಗೀಕರಿಸುವುದಿಲ್ಲವೋ ಅವನು ಅದರಲ್ಲಿ ಸೇರುವುದೇ ಇಲ್ಲ ಎಂದು ಹೇಳಿ ಅವುಗಳನ್ನು ಅಪ್ಪಿಕೊಂಡು ಅವುಗಳ ಮೇಲೆ ಕೈಯಿಟ್ಟು (ಕ್ರಿಸ್ತನು) ಆಶೀರ್ವದಿಸಿದನು." (ಮಾರ್ಕ್ ೧೦:೧೩).

"ನಾನು ನಿಮಗೆ ನಿಜನಿಜವಾಗಿ ಹೇಳುತ್ತೇನೆ. ಒಬ್ಬನು ನೀರಿನಿಂದಲೂ ಆತ್ಮನಿಂದಲೂ ಹುಟ್ಟದಿದ್ದರೆ ದೇವರ ರಾಜ್ಯಕ್ಕೆ ಸೇರಲಾರನು" ಯೊಹಾ ೩:೫.

"ನೀವು ಹೊರಟು ಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ ಅವರಿಗೆ ತಂದೆಯ ಮಗನ, ಪವಿತ್ರಾತ್ಮನ ಹೆಸರಿನಲ್ಲಿ ಸ್ನಾನದೀಕ್ಷೆ ಮಾಡಿಸಿರಿ"(ಮತ್ತಾಯ ೨೬:೧೯).

ಈ ಬೈಬಲ್ ಉಕ್ತಿಗಳು ದೊಡ್ಡವರ ಪ್ರಯೋಜನಕ್ಕೆ ಉಪಯೋಗವಾಗುವುದರಿಂದ ಚಿಕ್ಕಮಗುವಿಗೆ ಇವು ಅಪ್ರಯೋಜಕವಾಗಿವೆ. ಆದುದರಿಂದ ಹೆಸರಿಡುವಾಗ ತಂದೆ-ತಾಯಿಗಳಿಂದ ಮಗುವನ್ನು ಕ್ರೈಸ್ತೀಯ ಸಂಪ್ರದಾಯದಲ್ಲಿ ಬೆಳೆಸುವುದಾಗಿ ಪ್ರತಿಜ್ಞೆ ಪಡೆಯಲಾಗುವುದು. ಅದು ಹೀಗಿದೆ- "ನೀವು ದೇವರ ಸಹಾಯದಿಂದ ನಿಮ್ಮ ಕುಟುಂಬದಲ್ಲಿ ಈ ಮಗುವಿಗೆ ಕ್ರೈಸ್ತ ಸನ್ನಿವೇಶವನ್ನು ಒದಗಿಸಿಕೊಟ್ಟು ಸಭೆಯ ಆರಾಧನೆಯನ್ನೂ ಬೋಧನೆಯನ್ನೂ ಇದಕ್ಕೇ ಅಭ್ಯಾಸ ಮಾಡಿಸಿ ಇದು ಬೆಳೆದು ತನ್ನ ರಕ್ಷಕನಾದ ಕ್ರಿಸ್ತನನ್ನು ಅರಿತುಕೊಳ್ಳುವ ಹಾಗೆ ಪ್ರಯತ್ನ ಮಾಡುತ್ತೀರಾ?"[೧]

"ಈ ಚಿಕ್ಕ ಮಗುವಿಗೆ ನೀವೆ ಅಡ್ಡಿಯಾಗದ ಹಾಗೆ ನಿಮ್ಮ ಸ್ವಂತ ಬಾಳನ್ನು ಕ್ರಮಪಡಿಸಿಕೊಳ್ಳುವ ಪ್ರಯತ್ನ ಮಾಡುತ್ತೀರಾ?"[೨]

ಹಾಗೆಯೇ ದೇವಾಲಯಕ್ಕೆ ಹಿರಿಯರಾದವರಿಂದಲೂ ಪ್ರತಿಜ್ಞೆ, ಮಾಡಿಸಲಾಗುವುದು-

"ಪ್ರೀಯರೆ, ಕ್ರಿಸ್ತನ ಸಭೆಗಳಲ್ಲಿ ಅಂಗಗಳಾಗಿರುವುದಕ್ಕೆ ನೀವು ಕರೆಯಲ್ಪಟ್ಟಿದ್ದೀರಲ್ಲಾ; ಈ ಮಕ್ಕಳೂ ನಿಮ್ಮಲ್ಲಿರುವ ಎಲ್ಲಾ ಮಕ್ಕಳೂ ಕ್ರಿಸ್ತನನ್ನು ಅರಿತುಕೊಂಡು ಪ್ರೀತಿಸುವವರಾಗಿ ಬೆಳೆಯುವ ಹಾಗೆ ನೀವು ನಂಬಿಗಸ್ತರಾಗಿರುವಿರಾ?"[೩]

---

೧. ಹುದುವಾದ ದೇವಾರಾಧನೆ, ಪು.೧೫೦

೨. ಅದೇ, ಪು.೧೫೧

೩. ಅದೇ, ಪು.೧೫೧

ಹೀಗೆ ಚಿಕ್ಕ ಮಗುವಿನಿಂದ ತಿಳುವಳಿಕೆಗೆ ಬರುವವರೆಗೆ ಮಗುವಿನ ಧರ್ಮಬೋಧನಾ ಜವಾಬ್ದಾರಿಕೆಯನ್ನು ತಂದೆ-ತಾಯಿಗಳು, ಗುರು ಹಿರಿಯರು ಹೊತ್ತುಕೊಂಡು ನಡೆಸುವರು.

ದೃಢೀಕರಣ (Confirmation)

ಪ್ರತಿಯೊಂದು ಧರ್ಮದಲ್ಲಿ ಬೆಳೆದಂತ ಮಕ್ಕಳಿಗೆ (ಹೆಚ್ಚಾಗಿ ಗಂಡು) ತಿಳುವಳಿಕೆ ಬಂದ ನಂತರ ತಮ್ಮ ಧರ್ಮದಲ್ಲಿ ಪೂರ್ಣ ಸದಸ್ಯನಾಗಲು ಉಪನಯನ, ಮುಂಜವಿ, ಭದ್ರಾಬ್ಯಂಗ, ದೃಢೀಕರಣ ಎಂಬ ಹಲವು ಹೆಸರಿನಿಂದ ಅಭಿಷೇಕಿಸುತ್ತಾರೆ. ಹಾಗೆಯೇ ಕ್ರೈಸ್ತ ಧರ್ಮದಲ್ಲಿ ಇದನ್ನು ದೃಢೀಕರಣ (Confirmation) ಎಂದು ಕರೆಯುತ್ತಾರೆ(ವಿವಿಧ ಪಗಂಡಗಳಲ್ಲಿ ಬೇರೆ ಬೇರೆ ಹೆಸರುಂಟು).

"ದೃಢೀಕರಣವೆಂಬ ಶಬ್ದವು ಪೂರ್ಣಸಭಾಂಗಿಗಳನ್ನಾಗಿ ಮಾಡುವುದು ಎಂದು ಅರ್ಥಕೊಡುವುದು. ದಕ್ಷಿಣ ಇಂಡಿಯಾ ಸಭೆಯು ನಿರ್ಮಾಣಕ್ಕೆ ಬಂದಾಗ ಆಂಗ್ಲಿಕನ್ ಮತ್ತು ಬಾಸಲ್ ಮಿಶನ್ ನವರಲ್ಲಿ ರೂಢಿಯಲ್ಲಿದ್ದ ಈ ಪದವನ್ನು ಮೈಸೂರ ಪ್ರಾಂತದಲ್ಲಿಯೂ ಅವಲಂಬಿಸಲಾಯಿತು. ದೃಢೀಕರಣವೆಂದರೆ ಆಂಗ್ಲಭಾಷೆಯ (Confirmation)ಕನಫರ್ಮೇಷನ್ ಎಂಬ ನೇರ ಭಾಷಾಂತರ"[೧]

ಶಿಶುವಿಗೆ ನಾಮಕರಣ ಅಥವಾ ಸ್ನಾನದೀಕ್ಷೆಯಾದ ಮಾತ್ರಕ್ಕೆ ಧರ್ಮೀಯನೆಂಬ ಹೆಸರು ಬರಬಹುದು. ಆದರೆ ತನ್ನ ಧರ್ಮದ ತತ್ವಗಳನ್ನು ಪಾಲಿಸಲು ಜ್ಞಾನ ಸಾಲದು. ಮತ್ತು ಧರ್ಮದ ಆದೇಶಗಳಂತೆ ನಡೆಯುವ ಧೈರ್ಯವಾಗಲಿ, ಬಲವಾಗಲಿ ಇರಲಾರದು. ಅದಕ್ಕಾಗಿ ದೃಢೀಕರಣ ಎಂಬ ಸಂಸ್ಕಾರವನ್ನು ಹಮ್ಮಿಕೊಳ್ಳವರು. "ದೃಢೀಕರಣದಿಂದ ಅದರ ಹೆಸರೇ ತಿಳಿಸುವಂತೆ ವೃತ್ತಿಯ ಧರ್ಮದಲ್ಲಿ ದೃಢನಾಗುತ್ತಾನೆ. ಜ್ಞಾನ ಸ್ನಾನದಿಂದ ಶುದ್ಧನಾದ ಮಾನವನ ಆತ್ಮವು ಭಗವಂತನ ದೇಗುಲವಾಗುತ್ತದೆ. ದೃಢೀಕರಣದಿಂದಾಗಿ ಆತ್ಮದ ಆ ದೇಗುಲದಲ್ಲಿ ಭಗವಾನ್ ಪವಿತ್ರಾತ್ಮನು ಜೀವಿಸುವನು"[೨] ಎಂದು ನಂಬಿಕೆ ಉಂಟು.

ಪ್ರತಿಯೊಬ್ಬ ಯೌವನಸ್ಥ ಹಾಗೂ ಯೌವನಸ್ಥಳು ಕ್ರೈಸ್ತ ತತ್ವ ಸಿದ್ಧಾಂತದ ಬೋಧನೆಯನ್ನು ಗುರುಗಳಿಂದ ಪಡೆದು, ಆ ಸಿದ್ಧಾಂತಗಳನ್ನು ನಂಬಿ ದೃಢೀಕರಣ ಸಂಸ್ಕಾರದಲ್ಲಿ ಭಾಗಿಗಳಾಗುವರು. ನಂತರ ದೇವಾಲಯದಲ್ಲಿ ಗುರುವಿನಿಂದ ಪವಿತ್ರ ಭೋಜನ ಸಂಸ್ಕಾರ ಅಂದರೆ ಕ್ರಿಸ್ತನ ದೇಹವನ್ನು ರೊಟ್ಟಿ(ಬ್ರೆಡ್) ಗೂ ಆತನ ರಕ್ತವನ್ನು ದ್ರಾಕ್ಷಾರಸಕ್ಕೂ ಹೋಲಿಸಿ ನೀಡುವ ಪ್ರಸಾದವನ್ನು ಸ್ವೀಕರಿಸುವರು. ಇದು ದೃಢೀಕರಣ ಹೊಂದಲಾರದವರಿಗೆ ಕೊಡುವುದಿಲ್ಲ. ಹೀಗೆ ಈ ದೃಢೀಕರಣದಲ್ಲಿ ಭಾಗವಹಿಸುವವರ ನಂಬಿಕೆ ಸಂಪೂರ್ಣ ಬೈಬಲ್ ಉಕ್ತಿಗಳನ್ನು ಅವಲಂಬಿಸಿರುತ್ತದೆ.

---

೧. ದೃಢೀಕರಣ ಪಾಠಗಳು, ಎಸ್.ಎಂ.ರತ್ನಂ, ಪು.೧

೨. ಕ್ರೈಸ್ತ ತತ್ವ ಸಿದ್ಧಾಂತ, ಪು.೧೯೫

"ನಾನು (ದೇವರು) ನಿಮ್ಮ ಮೇಲೆ ನಿರ್ಮಲೋದಕವನ್ನು ಪ್ರೋಕ್ಷಿಸಲು ನೀವು ನಿರ್ಮಲರಾಗುವಿರಿ; ನಿಮ್ಮ ಸಮಸ್ತ ವಿಗ್ರಹಗಳಿಂದಲೂ ಸಕಲ ವಿಧವಾದ ಹೊಲಸಿನಿಂದಲೂ ನಿಮ್ಮನ್ನು ಶುದ್ಧಿ ಮಾಡುವೆನು. ನಾನು ನಿಮಗೆ ಹೊಸ ಮನಸ್ಸನ್ನು ಕೊಟ್ಟು ನಿಮ್ಮಲ್ಲಿ ನೂತನ ಸ್ವಭಾವವನ್ನು ಹುಟ್ಟಿಸುವೆನು. ಕಲ್ಲಾದ ಹೃದಯವನ್ನು ನಿಮಗೆ ದಯಪಾಲಿಸುವೆನು ನನ್ನ ಆತ್ಮವನ್ನು ನಿಮ್ಮಲ್ಲಿ ನೆಲೆಸಿರುವಂತೆ ಅನುಗ್ರಹಿಸಿ, ನೀವು ನನ್ನ ನಿಯಮಗಳನ್ನು ಅನುಸರಿಸುವ ಹಾಗೆ ಮಾಡುವೆನು. ನೀವು ನನ್ನ ವಿಧಿಗಳನ್ನು ಕೈಕೊಂಡು ಆಚರಿಸುವಿರಿ."[೧]

"ನೀವು ನನ್ನನ್ನು ಪ್ರೀತಿಸುವುದಾದರೆ ನನ್ನ ಆಜ್ಞೆಗಳನ್ನು ಕೈಕೊಂಡು ನಡೆಯುವಿರಿ ಆಗ ನಾನು ತಂದೆ(ದೇವರು)ಯನ್ನು ಕೇಳಿಕೊಳ್ಳುವೆನು. ಆತನು ನಿಮಗೆ ಬೇರೊಬ್ಬ ಸಹಾಯಕನನ್ನು ಸದಾ ಕಾಲ ನಿಮ್ಮ ಸಂಗಡ ಇರುವುದಕ್ಕೆ ಕೊಡುವನು. ಆ ಸಹಾಯಕನು ಯಾರೆಂದರೆ ಸತ್ಯದ ಆತ್ಮನೆ, ಲೋಕವು ಆತನನ್ನು ನೋಡದೆಯೂ, ತಿಳಿಯದೆಯೂ ಇರುವುದರಿಂದ ಆತನನ್ನು ಹೊಂದಲಾರದು. ನೀವು ಆತನನ್ನು ಬಲ್ಲಿರಿ ಹೇಗೆಂದರೆ ನಿಮ್ಮ ಬಳಿಯಲ್ಲಿ ವಾಸಮಾಡುತ್ತಾನೆ ಮತ್ತು ನಿಮ್ಮೊಳಗಿರುವನು."[೨]

"ಪವಿತ್ರಾತ್ಮ ನಿಮ್ಮ ಮೇಲೆ ಬರಲು ನೀವು ಬಲಹೊಂದಿ ಯರೂಸಲೇಮಿನಲ್ಲಿಯೂ ಎಲ್ಲಾ ಯಾದಾಯ ಸಮಾರ್ಯ ಸೀಮೆಗಳಲ್ಲಿಯೂ ಭೂಲೋಕದ ಕಟ್ಟ ಕಡೆಯವರೆಗೂ ನನ್ನ ಸಾಕ್ಷಿಗಳಾಗಿರಬೇಕು.[೩] ಈ ಮೇಲಿನ 'ಬೈಬಲ್' ಉಕ್ತಿಗಳು ದೃಢೀಕರಣಾರ್ಥಿಗಳಿಗೆ ಬಲವನ್ನು ಸ್ಥೈರ್ಯವನ್ನು ತಂದುಕೊಟ್ಟು ಕ್ರಿಸ್ತೀಯ ಜೀವಿತದ ಸಾರ್ಥಕತೆಯನ್ನು ಮನವರಿಕೆ ಮಾಡುವಲ್ಲಿ ಸಹಾಯವಾಗುತ್ತವೆ.

ಯೇಸುವು ಸತ್ತು, ಮೂರನೆ ದಿನದಲ್ಲಿ ಪುನರುತ್ಥಾನ ಹೊಂದಿದ ಬಳಿಕ ತನ್ನ ಶಿಷ್ಯರಿಗೆ, ಎಲ್ಲ ದೇಶಗಳಿಗೆ ಹೋಗಿ ಸಕಲ ಜನಾಂಗಗಳಿಗೂ ತನ್ನ ಸಂದೇಶವನ್ನು ಉಪದೇಶಿಸಲು ಅಣತಿ ಇತ್ತನು ಆಗ "ಇಗೋ ನನ್ನ ತಂದೆಯು ವಾಗ್ದಾನ ಮಾಡಿದ್ದನ್ನು ನಿಮಗೆ ಕಳುಹಿಸಿ ಕೊಡುತ್ತೇನೆ. ದೇವರು ಮೇಲಣ ಲೋಕದಿಂದ ನಿಮಗೆ ಶಕ್ತಿಯನ್ನು ಹೊದಿಸುವ ತನಕ ಈ ಪಟ್ಟಣದಲ್ಲೇ ಕಾದುಕೊಂಡಿರಬೇಕೆಂದು ಹೇಳಿದನು."[೪]

ಆದರೆ ನಗರದಲ್ಲಿ ಹೋಗಿ ಕ್ರಿಸ್ತನ ಸಂದೇಶವನ್ನು ನೀಡುವ ಧೈರ್ಯ ಯಾವ ಶಿಷ್ಯನಲ್ಲಿಯೂ ಇರಲಿಲ್ಲವಾದ ಕಾರಣ ಕ್ರಿಸ್ತನನ್ನು ಹಿಂಸಿಸಿದಂತೆ ತಮ್ಮನ್ನು ಹಿಂಸೆಗೆ ಗುರಿ ಮಾಡಿಯಾರು ಎಂಬ ಭಯ ಅವರಲ್ಲಿತ್ತು. ಶಿಷ್ಯರು ವಿಶ್ವಾಸದಿಂದ ಕ್ರಿಸ್ತನ ಆಜ್ಞೆಯಂತೆ ಒಂದು ಕೊಠಡಿಯಲ್ಲಿ ಕಾದು ಕುಳಿತುಕೊಂಡಿರುವಾಗ. "ಆಗ ಬಿರುಗಾಳಿ ಬೀಸುತ್ತದೋ ಎಂಬಂತೆ ಪಕ್ಕನೆ ಆಕಾಶದೊಳಗಿಂದ ಒಂದು

---

೧. ಸತ್ಯವೇದ ಯೋಹಾನ ೩೬ : ೨೫-೨೭

೨. ಅದೇ, ೧೪ : ೧೫-೧೭

೩. ಅಪೊಸ್ತಲ ಕೃತ್ಯ ೧:೮

೪. ಅದೇ, ಲೂಕ ೨೪:೪೯

ಶಬ್ದ ಉಂಟಾಗಿ ಅವರು ಕುಳಿತಿದ್ದ ಮನೆಯಲ್ಲಿ ತುಂಬಿಕೊಂಡಿತು. ಅದಲ್ಲದೆ ಉರಿಯಂತಿದ್ದ ನಾಲಿಗೆಗಳು ವಿಂಗಡಿಸಿಕೊಳ್ಳುವ ಹಾಗೆ ಅವರಿಗೆ ಕಾಣಿಸಿ ಅವರಲ್ಲಿ ಒಬ್ಬೊಬ್ಬರ ಮೇಲೆ ಒಂದೊಂದಾಗಿ ಕಾಣಿಸಿಕೊಂಡವು. ಆಗ ಅವರೆಲ್ಲರೂ ಪವಿತ್ರಾತ್ಮಭರಿತರಾದರು."[೧]

ಪವಿತ್ರ ಆತ್ಮನಿಂದ ಅಭಿಷೇಕ ಹೊಂದಿದ್ದರಿಂದ ಮುಂದೆ ಶಿಷ್ಯರು ಎಲ್ಲ ವಿಷಯಗಳಲ್ಲಿ ದೃಢರಾದರು. ಇವರು ದೃಢೀಕರಣವನ್ನು ಅಸಾಮಾನ್ಯ ರೀತಿಯಲ್ಲಿ ಪಡೆದರು. ಆಗ ಪುನರುತ್ಥಾನ ಹೊಂದಿದ ಕ್ರಿಸ್ತನು ಶಿಷ್ಯರಿಗೆ ಕಾಣಿಸಿಕೊಂಡು ಅವರಿಗೆ ಶಾಂತಿಯನ್ನು ದಯಪಾಲಿಸಿದನು. ನಂತರ ಶಿಷ್ಯರೆದುರೆ ಆಕಾಶದ ಮೇಘಗಳೊಡನೆ ಪರಲೋಕಕ್ಕೆ ಏರಿ ಹೋದನು. ಇದನ್ನು ಕಂಡು ಮೇಲೆ "ಧರ್ಮ ದುರ್ಬಲರಾದ ಅವರು ಸಬಲರಾದರು. ಅತ್ಯುತ್ಸಾಹದಿಂದ ಧರ್ಮೋಪದೇಶಕ್ಕೆ ಹೊರಟರು. ವೈರಿಗಳಿಗೆ ಅವರು ಅಂಜಿಲಿಲ್ಲ, ಮರಣಕ್ಕೆ ಅವರು ಅಂಜಲಿಲ್ಲ, ದೇಶ-ವಿದೇಶಗಳೆಂಬ ತಾರತಮ್ಯವನ್ನು ತಿಳಿಯಲಿಲ್ಲ. ಸ್ವಕೀಯ-ಪರಕೀಯ ಎಂಬ ಬೇಧಭಾವವು ಅವರಲ್ಲಿಗೆ ಸುಳಿಯಲಿಲ್ಲ. ರಕ್ಷಣೆಯ ಮಾರ್ಗದ ಸಂದೇಶವನ್ನು ಬಿತ್ತರಿಸಲು ಧೀರ ಯೋಧರಂತೆ ಅವರು ಮುಂದಾದರು."[೨]

ದೃಢೀಕರಣ ಹೊಂದಿದ ಕ್ರಿಸ್ತನ ಶಿಷ್ಯರಿಂದ ಈ ಪರಂಪರೆ ಮುಂದುವರೆಯಿತು. ಕ್ರಿಸ್ತನ ಶಿಷ್ಯರು, ತಾವು ಯಾರಿಗೆ ಪವಿತ್ರಾತ್ಮನ ಅವಶ್ಯಕತೆ ಇದೆ ಎಂದು ಬಯಸುತ್ತಿದ್ದರೋ, ಅಂತವರ ತಲೆ ಮೇಲೆ ಕೈ ಇಟ್ಟು ಪವಿತ್ರಾತ್ಮವನ್ನು ಆಹ್ವಾನಿಸಲು ಅವರು ಪವಿತ್ರಾತ್ಮ ಭರಿತರಾಗುತ್ತಿದ್ದರು. ಅಂದಿನ ಕ್ರಿಸ್ತನ ಶಿಷ್ಯರ ಪರಂಪರೆ ಹಸ್ತಾರ್ಪಣ ಒಬ್ಬರಿಂದ ಒಬ್ಬರಿಗೆ ನಡೆದು ಬಂದು, ಈ ಕ್ರಮದಿಂದ ಗುರುಗಳು ಗುರು ದೀಕ್ಷೆ ಹೊಂದಿ ಶಿಷ್ಯರಿಗೆ ದೀಕ್ಷಾಶೀರ್ವಾದ ಎಂಬಂತೆ ತಲೆ ಮೇಲೆ ಕೈಯಿಟ್ಟು ದೃಢೀಕರಿಸುವರು... ಈ ಸಂಪ್ರದಾಯದ ಅನುಕರಣೆಯಲ್ಲಿ ಎರಡು ವಿಧಿಗಳಿದ್ದು, ಎರಡನ್ನೂ ಸಂದರ್ಭೋಚಿತವಾಗಿ ಹಾಗೂ ವ್ಯಕ್ತಿಯ ಅಭಿಪ್ರಾಯಕ್ಕೆ ತಕ್ಕಂತೆಯೂ ಜರುಗಿಸಲಾಗುವುದು. ಈ ದೀಕ್ಷೆ ಪಡೆದ ನಂತರವೇ ಅವರು 'ಯುಖರಿಸ್ಟ'* ಸಂಸ್ಕಾರಕ್ಕೆ ಅರ್ಹರಾಗುತ್ತಾರೆ. ಕೆಥೋಲಿಕ್ ಪಂಗಡದವರಲ್ಲಿ ಈ ಕ್ರಮದಲ್ಲಿ ಭಾಗಿಗಳಾಗಬೇಕಾದರೆ, ಕನಿಷ್ಠ ೮ ವರ್ಷಗಳಾಗಿರಬೇಕು. ಆದರೆ ಪ್ರೊಟೆಸ್ಟೆಂಟರಲ್ಲಿ ಆ ವ್ಯಕ್ತಿ ಹದಿ ವಯಸ್ಸಿನಲ್ಲಿ ಕಾಲಿಟ್ಟಿರಬೇಕು. ಅಂದಾಗ ಮಾತ್ರ ಧಾರ್ಮಿಕ ಸಂಪ್ರದಾಯಗಳನ್ನು ಸ್ವತಂತ್ರವಾಗಿ ಅರ್ಥೈಸಲು, ಅನುಸರಿಸಲು ಯೋಗ್ಯರೆಂಬುದು ನಂಬಿಕೆ.

೧. ಸತ್ಯವೇದ ಅಪೋಸ್ತಲ ಕೃತ್ಯಗಳು, ೨:೨೪

೨. ಕ್ರೈಸ್ತತತ್ವ ಸಿದ್ಧಾಂತ, ಪು.೧೯೬

* ಯುಖರಿಷ್ಟ ಯುಸ್ತ್ರೀಯನೆಂಬ ದೃವಜ್ಞಾನ ಪಂಡಿತನು(ಕ್ರಿ.ಶ.೧೫೫) ಈ ಆಹಾರವನ್ನು ಯುಖರಿಷ್ಟ ಎಂದು ಕರೆದನು. ಅದು ಇಡೀ ಆರಾಧನೆ ಎಂಬುದೇ ಅವನು ಕೊಡುವ ಅರ್ಥ ಯುಖರಿಸ್ಟಿಯಾ (Eucharistia)ಎಂಬ ಗ್ರೀಕ್ ಪದಕ್ಕೆ ಉಪಕಾರ ಸ್ಮರಣೆ ಎಂಬರ್ಥ. ಕ್ರಿಸ್ತನು ತಾನು ಹಿಡಿದುಕೊಡಲ್ಪಟ್ಟ ರಾತ್ರಿಯಲ್ಲಿ ಈ ಕ್ರಮವನ್ನು ಅನುಸರಿಸಿ ಇದನ್ನು ತಾನು ತಿರುಗಿ ಬರುವವರೆಗೂ ತನ್ನ ಸ್ಮರಣೆಗಾಗಿ ಆಚರಿಸಲು ತನ್ನ ಶಿಷ್ಯರಿಗೆ ಅಜ್ಞೆ ಇತ್ತನು.

ದೃಢೀಕರಣದಲ್ಲಿ ಮುಖ್ಯವಾಗಿ ಎರಡು ವಿಧ. ಚರ್ಚಗಳಲ್ಲಿ ದೃಢೀಕರಣಾರ್ಥಿಗಳಿಗೆ ಅನೇಕ ದಿನಗಳವರೆಗೆ ಬೈಬಲ್ ಹಾಗೂ ಧರ್ಮ ಪದ್ಧತಿಗಳ ಕುರಿತು ಹಾಗೂ ಒಬ್ಬ ದೇವರ ಕುರಿತು ಬೋಧಿಸಿ ನಂತರ ಚರ್ಚಗಳಲ್ಲಿ ಹಿರಿಯ ಧರ್ಮಬೋಧಕರು ಅಥವಾ ಬಿಶಪ್ಪರು ತಲೆಯ ಮೇಲೆ ಹಸ್ತಾರ್ಪಣ ಮಾಡುವುದರ ಮೂಲಕ ಹಾಗೂ ಅವರಿಗೆ ನಿರ್ಮಲೋಧಕವನ್ನು ಸಿಂಪಡಿಸುವುದರ ಮೂಲಕ ದೃಢೀಕರಣವನ್ನು ನೀಡುವುದು.

ಇನ್ನೊಂದು ವಿಧ. ಹರಿಯುವ ನೀರು ಇಲ್ಲವೆ, ನೀರು ತುಂಬಿದ ಟ್ಯಾಂಕಗಳಲ್ಲಿ ದೃಢೀಕರಣಾರ್ಥಿಗಳನ್ನು ಸಂಪೂರ್ಣ ನೀರಿನಲ್ಲಿ ಮುಳುಗಿಸಿ ನಂತರ ತಲೆ ಮೇಲೆ ಕೈಯಿಟ್ಟು ಆಶೀರ್ವದಿಸಿ ಪ್ರಾರ್ಥಿಸುವರು. ಹೀಗೆ ನೀರಿನಲ್ಲಿ ಮುಳುಗುವುದರಿಂದ ತಮ್ಮ ಪಾಪಗಳನ್ನು ತ್ಯಜಿಸಿದಂತೆ ತಿರುಗಿ ನೀರಿನಿಂದ ಏಳುವಾಗ ಪರಿಶುದ್ಧರಾಗುವರೆಂಬ ನಂಬಿಕೆ ಉಂಟು. ಕ್ರಿಸ್ತನು ಕೂಡ ಸ್ನಾನಿಕನಾದ ಯೂಹಾನನೆಂಬ ಪ್ರವಾದಿಯಿಂದ ಜೊರ್ಡಾನ್ ನದಿಯಲ್ಲಿ ಹೀಗೆ ಸ್ನಾನದೀಕ್ಷೆ ಹೊಂದಿ ದೃಢೀಕರಿಸಲ್ಪಟ್ಟನೆಂಬುದನ್ನು ಇತಿಹಾಸ ಹಾಗೂ ಬೈಬಲ್ ತಿಳಿಸುತ್ತದೆ.

ಮದುವೆ

'MARRIAGES ARE MADE IN HEAVEN' ಎಂಬ ಉಕ್ತಿ ಒಂದು ಉಂಟು. ಇದು ಪಾಶ್ಚಾತ್ಯರ ಹೇಳಿಕೆ ಎಂಬುದು ಸ್ಪಷ್ಟ. ಅಂದರೆ ಈ ಮಾತು ನಿಜವೇ? ಹೌದಾದರೆ, ಮದುವೆಗೂ ಸ್ವರ್ಗಕ್ಕೂ ಸಂಬಂಧವೇನು? ಸತಿ-ಪತಿಗಳ ಸುಖಕ್ಕೂ, ಸ್ವರ್ಗದ ಸುಖಕ್ಕೂ ಸಂಬಂಧ ಇದೆಯೇ?

ವೀರಶೈವ ತತ್ವವು ಕ್ರಿಸ್ತಿಯ ತತ್ವದ ಆಧಾರವನ್ನು ಹೊಂದಿದೆ ಎನ್ನುವ ವಿಷಯವನ್ನು ರೆ. ಉತ್ತಂಗಿ ಚನ್ನಪ್ಪನವರು ತಮ್ಮ ಲೇಖನ "ಬಸವೇಶ್ವರರೂ ಕರ್ನಾಟಕದ ಅಭ್ಯುದಯವೂ" ಹಾಗೂ ಬಸವೇಶ್ವರರೂ ಅಸ್ಪೃಶ್ಯರ ಉದ್ಧಾರವೋ"ಗಳಲ್ಲಿ ಸ್ಪಷ್ಟ ಪಡಿಸಿರುವರು.

ಭಾರತದಲ್ಲಿ ಹುಟ್ಟಿದ ಧರ್ಮಗಳು ಏಕದೇವೋಪಾಸನೆಯನ್ನು ಅವಲಂಬಿಸಿಲ್ಲ ಮತ್ತು ಇದು ಭಾರತೀಯ ಧರ್ಮ ಸಿದ್ಧಾಂತವೂ ಅಲ್ಲ. ಏಕ ದೇವರಾಧನೆ ಪಾಶ್ಚಾತ್ಯರ ಕೊಡುಗೆ. ವೀರಶೈವ ತತ್ವವೂ ಏಕದೇವಾರಾಧನೆಯನ್ನು ಪಡೆದುಕೊಂಡೆ ಹುಟ್ಟಿದ್ದು; ಅಂದ ಮೇಲೆ ಇದು ಪಾಶ್ಚಾತ್ಯ ತತ್ವ ತಳಹದಿಯ ಮೇಲಿದೆ ಎನ್ನುವುದು ಸೂಕ್ತವಾಗಬಹುದು.

"ಸತಿ-ಪತಿಗಳೊಂದಾದ ಭಕ್ತಿ ಹಿತ ಒಪ್ಪುದು ಶಿವಂಗೆ"

"ಶರಣ ಪತಿ ಲಿಂಗಸತಿ" (ಎಂಬ ಅಕ್ಕಮಹಾದೇವಿ ಪರಿ)

ಭವವಿಲ್ಲದ ಭಯವಿಲ್ಲದ ನಿರ್ಭಯದ ಚಲುವಂಗೊಲಿದೆ ನಾನು

ಕುಲ ಸೀಮೆ ಇಲ್ಲದ ನಿಸ್ಸೀಮ ಚಲುವಂಗೆ ನೊಲಿದೆ ಇದು ಕಾರಣ

ಚೆನ್ನಮಲ್ಲಿಕಾರ್ಜುನ ಚಲುವ ಗಂಡ ನನಗೆ
ಈ ಸಾವ ಕೊಡುವ ಗಂಡನೊಯ್ದು ಒಲೆಯೊಳಗಿಕ್ಕು

-ಅಕ್ಕಮಹಾದೇವಿ

ಎಲೆ ಅವ್ವಾ ಎನ್ನನಲ್ಲನ ಕೂಡಿದ ಕೂಟವ ನಿದಿರಿಂಗೆ
ಹೇಳಬಾರದವ್ವ ನೀವೆಲ್ಲಾ ನಿಮ್ಮ ನಲ್ಲನ ಕೂಡಿದ
ಸುಖವ ಬಲ್ಲಂತೆ ಹೇಳಿ ಉರಿಲಿಂಗದೇವ ಬಂದೆನ್ನ
ಸಿರಿಯ ಸೆರಗ ಹಿಡಿಯಲೊಡನೆ ನಾನೂ ತಾನೂ
ಎಂದರಿಯೆನಪ್ಪಾ

-ಉರಿಲಿಂಗದೇವರು

ಎಂಬ ಸಾಲುಗಳು ದಾಂಪತ್ಯದ ಸಂಬಂಧವನ್ನು ಸ್ವರ್ಗಕ್ಕೂ ದೇವರಿಗೂ ಕಲ್ಪಿಸುವಂತಿವೆ.

ಬೈಬಲ್‌ನಲ್ಲಿ ಕೂಡ ಅನೇಕ ಸಂದರ್ಭಗಳನ್ನು ಹಾಗು ಉಕ್ತಿಗಳನ್ನು ಗ್ರಹಿಸಬಹುದು.

- "ನಾನು (ದೇವರು) ನಿಮಗೆ ಪತಿ"-ಯರೆ ೩:೧೪
- "ಪತ್ನಿಲಾಭವು ರತ್ನಲಾಭ ಅದು ಯಹೋವ(ದೇವರ)ನ ಅನುಗ್ರಹವೇ" -ಜ್ಞಾನೊ ೧೮:೨೧
- "ವರನು ವಧುವಿನಲ್ಲಿ ಆನಂದಿಸುವ ಹಾಗೆ ನಿನ್ನ ದೇವರು ನಿನ್ನಲ್ಲಿ ಆನಂದಿಸುವನು" -ಯಶಾ ೬೨:೫
- "ನಿನ್ನ ಸೃಷ್ಟಿಕರ್ತನೆ ನಿನ್ನ ಪತಿ" -ಯಶಾಯ ೫೪:೫

ಈ ಮೇಲಿನ ಬೈಬಲ್ ಉಕ್ತಿಗಳು ಕ್ರಿ.ಪೂ.೬ ಹಾಗೂ ೭ನೇ ಶತಮಾನದಲ್ಲಿ ಬರೆದವುಗಳಾಗಿವೆ.

ದೇವರು ಮನುಷ್ಯನನ್ನು ಉಂಟು ಮಾಡಿ, ತಾನು ಉಂಟು ಮಾಡಿದ ಸಕಲ ಸೃಷ್ಟಿಯ ಮೇಲೆ ಅವನಿಗೆ ಒಡೆತನ ಮಾಡಲು ಅಪ್ಪಣೆ ಕೊಟ್ಟನು ಮತ್ತು ದೇವರು "ಮನುಷ್ಯನು ಒಂಟಿಗನಾಗಿರುವುದು ಒಳ್ಳೆಯದಲ್ಲ, ಅವನಿಗೆ ಸರಿ ಬೀಳುವ ಸಹಕಾರಿಣಿಯನ್ನು ಉಂಟು ಮಾಡುವೆನು ಅಂದನು.... "ಹೀಗಿರುವಲ್ಲಿ ದೇವರು ಆ ಮನುಷ್ಯನಿಗೆ ಗಾಢ ನಿದ್ರೆಯನ್ನು ಬರಮಾಡಿ, ಅವನ ಪಕ್ಕೆಯ ಎಲುಬುಗಳಲ್ಲಿ ಒಂದನ್ನು ತೆಗೆದುಕೊಂಡು ಅದರ ಸ್ಥಳವನ್ನು ಮಾಂಸದಿಂದ ಮುಚ್ಚಿ, ತಾನು ಮನುಷ್ಯನಿಂದ ತೆಗೆದಿದ್ದ ಎಲುಬನ್ನು ಸ್ತ್ರೀಯಾಗಿ ಮಾಡಿ ಆಕೆಯನ್ನು ಅವನ ಬಳಿಗೆ ಕರತಂದನು. ಅವನು ಆಕೆಯನ್ನು ನೋಡಿ ಈಗ ಸರಿ ಈಕೆಯೂ ನನ್ನ ಎಲುಬುಗಳಿಂದ ಬಂದ ಎಲಬೂ, ನನ್ನ ಮಾಂಸದಿಂದ ಬಂದ ಮಾಂಸವೂ ಆಗಿದ್ದಾಳೆ. ಈಕೆಯು ನರನಿಂದ ಉತ್ಪತ್ತಿಯಾದ ಕಾರಣ ನಾರಿ ಎನಿಸಿಕೊಳ್ಳುವಳು ಅಂದನು. ಈ ಕಾರಣದಿಂದ ಪುರುಷನು ತಂದೆ-ತಾಯಿಗಳನ್ನು ಬಿಟ್ಟು ತನ್ನ ಹೆಂಡತಿಯನ್ನು ಸೇರಿಕೊಳ್ಳುವನು ಅವರಿಬ್ಬರೂ ಒಂದೇ ಶರೀರವಾಗಿರುವರು."[೧]

---

೧. ಸತ್ಯವೇದ ಆದಿಕಾಂಡ ೨:೧೮

'ಬೈಬಲ್' ಪ್ರಥಮ ಪುಸ್ತಕವಾದ ಆದಿಕಾಂಡದಲ್ಲಿ ಈ ಮೇಲಿನ ವಿಷಯ ಬರೆಯಲಾಗಿದೆ. ಕ್ರಿ.ಪೂ. ೧೭೦೦ರಲ್ಲಿ ಬರೆಯಲಾಗಿರುವ ಈ ಪುಸ್ತಕ ಮಾನವ ಹುಟ್ಟಿನ ವಿಚಾರವನ್ನು ಅಂದರೆ ಸೃಷ್ಟಿ ಕಾರ್ಯದ ವಿಷಯವನ್ನು ಒಳಗೊಂಡಿದೆ. ಇದನ್ನೇ ಕ್ರಿಸ್ತನು ತನ್ನ ಬೋಧನೆಯಲ್ಲಿ ಬಳಸಿ ಹೀಗೆ ಹೇಳಿದ್ದಾನೆ. "ದೇವರಾದರೋ ಸೃಷ್ಟಿಯ ಮೊದಲಿನಿಂದಲೇ ಮನುಷ್ಯರನ್ನು ಗಂಡು ಹೆಣ್ಣಾಗಿ ನಿರ್ಮಿಸಿದನೆಂತಲೂ ಈ ಕಾರಣದಿಂದ ಪುರುಷನು ತನ್ನ ತಂದೆ ತಾಯಿಗಳನ್ನು ಬಿಟ್ಟು ತನ್ನ ಹೆಂಡತಿಯನ್ನು ಸೇರಿಕೊಂಡು ಅವರಿಬ್ಬರು ಒಂದೇ ಶರೀರವಾಗಿರುವರೆಂತಲೂ ಬರೆದಿದೆ. ಹೀಗಿರುವಲ್ಲಿ ಅವರು ಇನ್ನು ಇಬ್ಬರಲ್ಲ ಒಂದೇ ಶರೀರವಾಗಿದ್ದಾರೆ. ಆದುದರಿಂದ ದೇವರು ಕೂಡಿಸಿದ್ದನ್ನು ಮನುಷ್ಯನು ಅಗಲಿಸಬಾರದು"[೧] ಎಂದಿದ್ದಾನೆ.

ದೇವರು ನಿರ್ಮಿಸಿದ ಮೊದಲ ಪುರುಷ(Adam)ನಿಗೆ ಆತನೇ ಸ್ತ್ರೀ (Eve)ಯನ್ನು ಉಂಟು ಮಾಡಿ ಅವರಿಬ್ಬರೂ ಸತಿ ಪತಿಗಳಾಗಲು ಆಶೀರ್ವಾಧಿಸಿದನು ಈ ಕಾರಣದಿಂದ ಇಂದಿಗೂ ಅದೇ ದೇವರು ಪುರುಷನಿಗೆ ಸ್ತ್ರೀಯನ್ನು ನಿರ್ಮಿಸಿರುತ್ತಾನೆ. ಇದು ದೇವರ ಸಂಕಲ್ಪ ಎಂದು ತಿಳಿದ ಕ್ರೈಸ್ತರು. "Marriages are made in heaven" ಎಂದು ನಂಬಿರುವರು.

ಪುರುಷನು ತನ್ನ ತಂದೆ ತಾಯಿಯನ್ನು ಹೊಂದಿದ್ದರು. ಅವರಿಗಿಂತ ಹೆಚ್ಚಾಗಿ ಪತ್ನಿಯನ್ನು ಪ್ರೀತಿಸುವವನಾಗುವನು. ಸ್ತ್ರೀಯು ತನ್ನ ಮನೆ-ತಂದೆ-ತಾಯಿ, ಬಂಧು-ಬಾಂಧವರು ಹಾಗೂ ಸಂಸ್ಕೃತಿಯನ್ನು ಬಿಟ್ಟು ತನ್ನ ಗಂಡನನ್ನು ಸೇರಿ ಆತನಲ್ಲಿ ಅನುರಕ್ತಳಾಗಿರುವಳು.* ಹೀಗೆ ಬೇರೊಂದನ್ನು ಪಡೆದುಕೊಂಡು ಜೀವಿಸುವಲ್ಲಿ ದಾಂಪತ್ಯ ಗಟ್ಟಿಗೊಳ್ಳುತ್ತದೆ. ಇಂತಹ ವಿವಾಹ ಬಂಧನ ಹೊಸತನಕ್ಕೆ ತಾನರಿಯದ ಸ್ಥಿತಿಗೆ ಹಾಗೂ ಸ್ವರ್ಗ ಸುಖಕ್ಕೆ ನಾಂದಿಯಾಗುತ್ತದೆ. ಕೇವಲ ಸತಿ-ಪತಿಗಳೊಂದಾದಾಗ ಸಿಗುವ ಸುಖವು ತತ್ಕಾಲಕವೆನಿಸಿದರು. ಬಾಳಿನ ಉದ್ದೇಶದ ಸೃಷ್ಟಿ ಲೀಲೆಯಿಂದ ಜಗದ್ರಕ್ಷಕನಾದ ಸೃಷ್ಟಿಕರ್ತನಾದ ದೇವರ ಅಸ್ತಿತ್ವ ಹಾಗೂ ಆತನ ಪ್ರೀತಿ. ಅನ್ಯೋನ್ಯತೆ ಎಡೆಗೆ ಕರೆದೊಯ್ಯುವ ಸಾಧನವಾಗಿದೆ ಎಂಬುದು ಕ್ರಮೇಣ ಅರಿವಿಗೆ ಬರುವ ಸಂಗತಿಯಾಗಿದೆ.

---

೧. ಸತ್ಯವೇದ ಆದಿಕಾಂಡ ೧೦:೬-೯

* ಪುರುಷ ಸ್ತ್ರೀಯನ್ನು ಮತ್ತು ಸ್ತ್ರೀ ಪುರುಷನನ್ನು ಎಲ್ಲರಿಗಿಂತ ಹೆಚ್ಚಾಗಿ ಯಾಕೆ ಪ್ರೀತಿಸುತ್ತಾರೆ ದೇವರು ಮನುಷ್ಯನಿಗೆ ಸ್ತ್ರೀಯನ್ನುಂಟು ಮಾಡಿದನೆಂದು ಬೈಬಲ್ ತಿಳಿಸುತ್ತದೆ. ಪುರುಷ ದೇವರನ್ನು ಮೊದಲಾಗಿ ಸ್ತುತಿಸಿದ, ಸಾನಿಧ್ಯ ಬಯಸಿದ, ಕಂಡು ಆನಂದಿಸಿದ ಕೊನೆಗೆ ಆತನಿಗೆ ಸ್ತ್ರೀ ಸಿಕ್ಕಳು ಅವಳೊಂದಿಗೆ ಅನುರಕ್ತನಾಗಿ ಪ್ರೀತಿಸಿದ, ಪ್ರೇಮಿಸಿದ. ಪುರುಷನು ಮೊದಲು ಕಂಡದ್ದು ಪ್ರೇಯಸಿಯ ಪ್ರೀತಿಯನ್ನು, ತಂದೆ ತಾಯಿ ಅಣ್ಣ ತಮ್ಮಂದಿರ ಅಕ್ಕ ತಂಗಿಯರ ಪ್ರೀತಿಯಲ್ಲ. ಆದುದರಿಂದ ಮದುವೆಯ ನಂತರ ಅವರಿಬ್ಬರು ತಮ್ಮ ಪ್ರೀತಿಗೆನೇ ಹೆಚ್ಚು ಮಹತ್ವ ಕೊಡುತ್ತಾರೆ. ಗಂಡ ಹೆಂಡಿರ ಪ್ರೀತಿ ಬಹುದೊಡ್ಡದು. ಆದರೆ ಅದಕ್ಕೂ ಹೆಚ್ಚಾಗಿ ಮನುಷ್ಯರು ದೇವರನ್ನು ಪ್ರೀತಿಸಬೇಕೆಂಬುದೇ ದೇವರ ಉದ್ದೇಶ ಎಂಬುದನ್ನು ಬೈಬಲ್ ವಿಷದಿಕರಿಸುತ್ತದೆ.

ವಿವಾಹ ಸಂದರ್ಭದಲ್ಲಿ ಪ್ರೀತಿಯ ಉನ್ನತತೆಯನ್ನು ಮತ್ತು ಪ್ರೀತಿಯ ಪರಾಕಾಷ್ಠೆಯನ್ನು ತಿಳಿಸುವ ಪರಿಚ್ಛೆದವನ್ನು ಬಳಸಲಾಗುವುದು. "ಪ್ರೀತಿಯು ಬಹು ತಾಳ್ಮೆ ಉಳ್ಳದ್ದು, ಪ್ರೀತಿ ದಯ ತೋರಿಸುವುದು, ಪ್ರೀತಿಯು ಹೊಟ್ಟೆಕಿಚ್ಚು ಪಡುವುದಿಲ್ಲ, ಹೊಗಳಿಕೊಳ್ಳುವುದಿಲ್ಲ. ಉಬ್ಬಿಕೊಳ್ಳುವುದಿಲ್ಲ ಮರ್ಯಾದೆಗೆಟ್ಟು ನಡೆಯುವುದಿಲ್ಲ. ಸ್ವಪ್ರಯೋಜನವನ್ನು ಚಿಂತಿಸುವುದಿಲ್ಲ, ಸಿಟ್ಟುಗೊಳ್ಳುವುದಿಲ್ಲ. ಅಪಕಾರವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುವುದಿಲ್ಲ. ಅನ್ಯಾಯವನ್ನು ನೋಡಿ ಸಂತೋಷ ಪಡದೆ ಸತ್ಯಕ್ಕೆ ಜಯವಾಗುವಲ್ಲಿ ಸಂತೋಷಪಡುತ್ತದೆ ಎಲ್ಲವನ್ನೂ ಅಡಗಿಸಿಕೊಳ್ಳುತ್ತದೆ. ಎಲ್ಲವನ್ನೂ ನಂಬುತ್ತದೆ. ಎಲ್ಲವನ್ನೂ ನಿರೀಕ್ಷಿಸುತ್ತದೆ. ಎಲ್ಲವನ್ನೂ ಸಹಿಸಿಕೊಳ್ಳುತ್ತದೆ. ಪ್ರೀತಿಯು ಎಂದಿಗೂ ಬಿದ್ದು ಹೋಗುವುದಿಲ್ಲ.[೧] ಇಂತಹ ಪ್ರೀತಿ ಕೇವಲ ಗಂಡ-ಹೆಂಡತಿರಲ್ಲಿ ಮಾತ್ರ ಕಂಡುಬರುವುದಲ್ಲದೆ ದೇವರೊಂದಿಗೆ ಮಾನವನ ಸಂಬಂಧದಲ್ಲಿ ಪ್ರತಿಫಲಿಸುವಲ್ಲಿ ಬೈಬಲ್ ಅಪೇಕ್ಷಿಸುತ್ತದೆ. ಮದುವೆ ಕ್ರಿಯೆ ಕೇವಲ ದೈಹಿಕ ಸಂಬಂಧವಾಗಿದ್ದರೂ ದಾಂಪತ್ಯ ಜೀವಿತವೂ ಸ್ವರ್ಗೀಯ ದೈವತ್ವದ ಅಂಶಗಳನ್ನು ಹೊಂದುವ ಸಾಧನವಾಗಿ ಕಂಡುಬರುವುದು.

ಯೇಸುವು ಮೊದಲಿಂಗನು ಆತನ ಭಕ್ತಮಂಡಲಿ ಮೊದಲ ಗಿತ್ತಿ ಎಂದು ಬೈಬಲ್ ದೃಷ್ಟಾಂತಗಳಿಂದ ತಿಳಿಸುತ್ತದೆ. ಕ್ರಿಸ್ತೀಯ ವಿವಾಹ ಕ್ರಮದಲ್ಲಿ ಮದುವೆ ಮಾಡಿಕೊಳ್ಳುವವರಿಗೆ ಸಂಪೂರ್ಣ ಸ್ವತಂತ್ರ ಕೊಡಲಾಗಿದೆ. ಇಲ್ಲಿ ಮಧ್ಯವರ್ತಿಗಳಿಗೆ ಅವಕಾಶವಿಲ್ಲ. ಮದುವೆಯ ಪೂರ್ವದಲ್ಲಿ ಚರ್ಚಿನಲ್ಲಿ ನೆರೆದ ಸಮಸ್ತ ಜನರ ಎದುರಿನಲ್ಲಿ ಇಬ್ಬರ ಒಪ್ಪಿಗೆಯನ್ನು ಪಾದ್ರಿಯು ಪಡೆದು ಒಬ್ಬರಿಗೊಬ್ಬರು ಉಂಗುರ ಬದಲಾಯಿಸಲು ಅಥವಾ ಮಾಲೆ, ಮಂಗಳ ಸೂತ್ರ* ಧರಿಸಲು ಅನುಮತಿಸಿ ನಂತರ ಮದುವೆ ದಾಖಲಾತಿ (ರಿಜಿಸ್ಟರ್) ಪುಸ್ತಕದಲ್ಲಿ ಇಬ್ಬರಿಂದ ಸಹಿಪಡೆದು ಹಾಗೂ ಸಾಕ್ಷಿಗಳಿಬ್ಬರ ಸಹಿಪಡೆದು ವಿವಾಹ ಜರುಗಿದ ಬಗ್ಗೆ ಬಹಿರಂಗವಾಗಿ ಪ್ರಕಟಿಸುವರು.

ಸ್ವ ಇಚ್ಛೆಯಿಂದ ಕೂಡಿದವರಾದ ಕಾರಣ ಸ್ವೇಚ್ಛೆಯಿಂದ ಅಗಲಬಾರದೆಂಬುದಕ್ಕೆ ಬೈಬಲ್ ನಲ್ಲಿ ಕಟ್ಟು-ನಿಟ್ಟಾದ ನಿಯಮಗಳನ್ನು ಬರೆಯಲಾಗಿದೆ. ಪ್ರವಾದಿ ಮೋಜಸ್‌ನ ಕಾಲದಲ್ಲಿ ದಾಂಪತ್ಯದಿಂದ ಬಿಡುಗಡೆ ಪಡೆಯುವವರಾಗಿದ್ದರೆ, ತ್ಯಾಗ ಪತ್ರವನ್ನು ಕೊಡಬೇಕೆಂಬ ನಿಯಮ ಜಾರಿಯಲ್ಲಿತ್ತು. ಇದನ್ನೇ ಕೆಲವು ಜನ ಕ್ರಿಸ್ತನಿಗೆ ಕೇಳಿದಾಗ ಆತನು ಹೀಗೆ ಉತ್ತರಿಸಿದನು. "ಹಾದರದ ಕಾರಣದಿಂದಲ್ಲದೆ ತನ್ನ ಹೆಂಡತಿಯನ್ನು ಬಿಟ್ಟುಬಿಡುವವನು. ಅವಳು ವ್ಯಭಿಚಾರ ಮಾಡುವುದಕ್ಕೆ ಕಾರಣನಾಗುತ್ತಾನೆ. ಮತ್ತು ಅಂತವಳನ್ನು ಮದುವೆ ಮಾಡಿಕೊಳ್ಳುವವನು ವ್ಯಭಿಚಾರ ಮಾಡಿದವನಾಗಿದ್ದಾನೆ."[೨]

---

೧. ಸತ್ಯವೇದ ೧ ಕೋರೆ ೧೩:೪-೧೩

೨. ಸತ್ಯವೇದ ಆದಿಕಾಂಡ ೫:೩೨

* ಕ್ರೈಸ್ತರು ಭಾರತೀಯ ಮಣ್ಣಿನ ಮಕ್ಕಳಾಗಿದ್ದರಿಂದ ಮಂಗಳ ಸೂತ್ರದ ಸಂಪ್ರದಾಯವನ್ನು ಸಂಸ್ಕಾರವನ್ನು ಬದುಕಿನಲ್ಲಿ ಅಳವಡಿಸಿಕೊಂಡಿದ್ದಾರೆ. ಕೆಥೋಲಿಕ ಕ್ರೈಸ್ತರು ಹಣೆಗೆ ಕುಂಕುಮ ಇಡುವುದು ಕಂಡುಬರುವುದು. ಇಲ್ಲಿ ಭಾರತೀಯ ಹಾಗೂ ಪಾಶ್ಚಾತ್ಯರ ಸಂಸ್ಕೃತಿಯ ಸಮ್ಮಿಲನವನ್ನು ಕಾಣುತ್ತೇವೆ.

ಪುರುಷ-ಸ್ತ್ರೀ ಸಂಬಂಧ ವಿವಾಹ ಬಂಧನದಲ್ಲಿ ನಡೆದರೆ ಮಾತ್ರ ಅದು ಮಾನ್ಯವಾದುದು. ಇದನ್ನು ಇಬ್ರೀಯ ಗ್ರಂಥಕರ್ತ ಹೀಗೆ ಹೇಳುತ್ತಾನೆ. "ದಾಂಪತ್ಯವು ಮಾನ್ಯವಾದುದೆಂದು ಎಲ್ಲರೂ ಎಣಿಸಬೇಕು ಗಂಡ-ಹೆಂಡಿರ ಸಂಬಂಧ. ನಿಷ್ಕಲಂಕವಾಗಿರಬೇಕು."[೧] ಇದಿಲ್ಲದ ಸಂಬಂಧ ಜಾರ-ಜಾರಣಿಯರ ಸಂಬಂಧವೆಂಬುದನ್ನು ಬೈಬಲ್ ವಿಷಧಿಕರಿಸುತ್ತದೆ. ಸಂತ ಪೌಲನು ರೋಮಾಪುರ ಎಂಬ ಸಭೆಯ ಜನರಿಗೆ ಬರೆದ ಪತ್ರದಲ್ಲಿ ಹೀಗಿದೆ. "ಗಂಡನು ಜೀವವಿರುವ ತನಕ ಹೆಂಡತಿಯು ನ್ಯಾಯದ ಪ್ರಕಾರ ಅವನಿಗೆ ಬದ್ಧಳಾಗಿರುವಳು. ಗಂಡನು ಸತ್ತರೆ ಅವನ ಹಂಗು ಆಕೆಗೆ ತಪ್ಪುವುದು. ಹೀಗಿರಲಾಗಿ ಗಂಡನು ಜೀವದಿಂದಿರುವಾಗ ಆಕೆ ಬೇರೊಬ್ಬನನ್ನು ಸೇರಿದರೆ ವ್ಯಭಿಚಾರಿಣಿ ಎನಿಸಿಕೊಳ್ಳುವಳು. ಆದರೆ ಗಂಡನು ಸತ್ತ ಮೇಲೆ ಅವನ ಹಂಗು ತಪ್ಪಿದ್ದರಿಂದ ಆಕೆ ಬೇರೊಬ್ಬ ಗಂಡನನ್ನು ಮಾಡಿಕೊಂಡರೂ ವ್ಯಭಿಚಾರಿಣಿಯಲ್ಲ.

ಭಾರತೀಯ ಸಂಸ್ಕೃತಿಯಲ್ಲಿ 'ಸತಿಸಹಗಮನ' ಪದ್ಧತಿ ಕುರಿತು ನೋಡುವಾಗ ಕೇವಲ ಸ್ತ್ರೀಯರಿಗೆ ಮರು ಮದುವೆಗೆ ಅವಕಾಶ ಇಲ್ಲದಿರುವುದು ಹಾಗೂ ಸಮಾಜದ ವಿಧಿ-ಕ್ರಿಯೆಯಲ್ಲಿ ಪಾಲಿಲ್ಲದೆ ಮೈಲಿಗೆಯ ಭಾವವನ್ನು ಹಾಗೂ ಅಪಶಕುನದ ಸಂಖ್ಯೆತವನ್ನೆಲ್ಲ ಕಾಣುತ್ತೇವೆ. ಆದರೆ ಪುರುಷನು ಪತ್ನಿ ತೀರಿ ಹೋದ ನಂತರ ಮರು ಮದುವೆಯಾಗುವಲ್ಲಿ ಅಭ್ಯಂತರ ಕಂಡುಬರುವುದಿಲ್ಲ. ಬೈಬಲ್‌ನಲ್ಲಿ ಗಂಡ-ಹೆಂಡತಿ ಇಬ್ಬರಿಗೂ ಸಮಾನ ಅವಕಾಶ ಇರುವುದು ಸ್ಪಷ್ಟ. ಆದುದರಿಂದ ಪಾಶ್ಚಾತ್ಯರ ಪ್ರಭಾವಕ್ಕೆ ಒಳಗಾದ ಭಾರತದಲ್ಲಿ ಈ ಕುರಿತು ಸುಧಾರಣೆ ಬರದದ್ದು ಚರಿತ್ರಾರ್ಹ ಸಂಗತಿ.

"ಗಂಡ ಹೆಂಡಿರನ್ನು ಒಟ್ಟಿಗೆ ಬದುಕುವಂತೆ ಮಾಡುವ ಸಾಧನ ಪ್ರೀತಿಯೊಂದೇ. ಒಬ್ಬರನೊಬ್ಬರು ಪ್ರೀತಿಸದವರು ತಾಳಿಕಟ್ಟಿಕೊಂಡರೂ ವ್ಯರ್ಥ. ಅಗ್ನಿಯನ್ನು ಸುತ್ತಿದರೂ ವ್ಯರ್ಥ, ಯಾವ ಯಾವ ಶಾಸ್ತ್ರಾಚಾರದ ಪ್ರಕಾರ ಮದುವೆ ಮಾಡಿದರೂ ವ್ಯರ್ಥ".[೨]

ಸತಿ ಸಹಗಮನ, ಕಾಳಿನದಿಗೆ ನರ ಬಲಿ, ಗಂಗಾನದಿಗೆ ಶಿಶುಗಳನ್ನು ಎಸೆಯುವ ಕ್ರಮದ ವಿರುದ್ಧ ಡಾ.ವಿಲಿಯಂ ಕೇರಿ (೧೭೬೧-೧೮೩೪) ಬಹಳ ಪರಿಶ್ರಮಪಟ್ಟು ಸುಧಾರಣೆಯನ್ನು ತರುವಲ್ಲಿ ಯಶಸ್ವಿಯಾದನು.

"೧೮೨೯ನೇ ವರ್ಷದಲ್ಲಿ ಒಂದು ಆದಿತ್ಯವಾರ ದಿನ ಬೆಳಿಗ್ಗೆ ಕ್ರೈಸ್ತ ಗುಡಿಯಲ್ಲಿ ಧರ್ಮ ಬೋಧೆಯಲ್ಲಿ ನಿರತನಾಗಿದ್ದಾಗ ಗವರ್ನರ್ ಜನರಲ್ Lord William Bentink ಇವನಿಂದ ಒಂದು ಸರ್ಕಾರಿ ಪತ್ರವು ಭಾಷಾಂತರಿಸಲಿಕ್ಕೆಂದು ಕಳುಹಿಸಲಾಗಿತ್ತು. ಆ ಪತ್ರವಾದರೋ ಸತಿ ಸಹಗಮನ ಪದ್ಧತಿಯನ್ನು ರದ್ದು ಮಾಡುವ ಆಜ್ಞಾಪತ್ರವಾಗಿತ್ತು. ಅದನ್ನು ನೋಡಿದ ಕೂಡಲೇ ಆ ಮಹಾಧರ್ಮಗುರುವಿನ ಮುಖವು ಅರಳಿತು. ಕೂಡಲೇ ಅವನು ತನ್ನ ಉಪನ್ಯಾಸವನ್ನು ನಿಲ್ಲಿಸಿದನು.

---

೧. ಸತ್ಯವೇದ ಇಬ್ರಿ, ೧೩:೧೪

೨. ಕುವೆಂಪು ಸಮಗ್ರ ಗದ್ಯ, ಡಾ.ಶಿವಾರೆಡ್ಡಿ, ಪು.೧೨೯

‘Someone else must preach for me today I will not delay a minute trauslating this document. lest some poor women are burnt in the interval’ ಎಂದು ಹೇಳಿ ಅಲ್ಲಿಯೇ ಒಂದೆಡೆ ಕುಳಿತು ಆ ಪತ್ರವನ್ನು ದೇಶೀಯ ಭಾಷೆಗಳಿಗೆ ಪರಿವರ್ತಿಸಿ ಗವರ್ನರ್ ಜನರಲ್ ಸಾಹೇಬನಿಗೆ ಕಳುಹಿಸಿಕೊಟ್ಟನು.”[೧] ಪಾಶ್ಚಾತ್ಯ ಮಿಶನರಿಗಳ ಫಲದಿಂದ ನಾವು ಸತಿಸಹಗಮನಗಳಂಥ ಅನೇಕ ಮೂಢನಂಬಿಕೆಯ ಪದ್ಧತಿಗಳನ್ನು ನಿರ್ಮೂಲನ ಮಾಡಲು ಸಾಧ್ಯವಾಯಿತು. ಆದರೆ ದೇಶೀಯ ಪ್ರಮುಖರಾದ ರಾಜಾರಾಮ್ ಮೋಹನರಾಯರ* ಹೆಸರು ಮಾತ್ರ ಉಳಿದು ಮಿಶನರಿಗಳನ್ನು ನಾವು ಮರೆತಿರುವುದು ವಿಶಾದನೀಯ.

ಕ್ರೈಸ್ತ ವಿವಾಹಕ್ರಮವು ಗಂಡ-ಹೆಂಡತಿಯರಿಬ್ಬರಿಗೂ ಸಮಾನ ಹಕ್ಕುಗಳನ್ನು ಕೊಟ್ಟಿದೆ. “ಜಾರತ್ವವು ಪ್ರಬಲವಾಗಿರುವುದರಿಂದ ಪ್ರತಿಯೊಬ್ಬನಿಗೆ ಸ್ವಂತ ಹೆಂಡತಿಯು ಪ್ರತಿಯೊಬ್ಬಳಿಗೆ ಸ್ವಂತ ಗಂಡನಿರಲಿ, ಗಂಡನು ಹೆಂಡತಿಗೆ ಸಲ್ಲಿಸತಕ್ಕದ್ದನ್ನು ಸಲ್ಲಿಸಲಿ ಹಾಗೆಯೇ ಹೆಂಡತಿಯು ಗಂಡನಿಗೆ ಸಲ್ಲಿಸಲಿ. ಹೆಂಡತಿಗೆ ಸ್ವಂತ ದೇಹದ ಮೇಲೆ ಅಧಿಕಾರವಿಲ್ಲ. ಅದು ಗಂಡನಿಗುಂಟು. ಹಾಗೆಯೇ ಪುರುಷನಿಗೆ ಸ್ವಂತ ದೇಹದ ಮೇಲೆ ಅಧಿಕಾರವಿಲ್ಲ ಅದು ಹೆಂಡತಿಗುಂಟು... ಕಾಮತಾಪಪಡುವದಕ್ಕಿಂತ ಮದುವೆ ಮಾಡಿಕೊಳ್ಳುವುದು ಉತ್ತಮವಷ್ಟೇ.... ಹೆಂಡತಿಯು ಗಂಡನನ್ನು ಬಿಟ್ಟು ಅಗಲಬಾರದು. ಒಂದು ವೇಳೆ ಅಗಲಿದರೂ ಪುರುಷ ಸಹವಾಸವಿಲ್ಲದೆ ಇರಬೇಕು. ಇಲ್ಲವೇ ಗಂಡನ ಸಂಗಡ ಸಮಾಧಾನವಾಗಬೇಕು. ಮತ್ತು ಗಂಡನು ಹೆಂಡತಿಯನ್ನು ಬಿಡಬಾರದು.”[೨]

ಮರು ಮದುವೆ

ಮರುಮದುವೆಗೆ ಕ್ರೈಸ್ತ ವಿವಾಹ ಕ್ರಮದಲ್ಲಿ ಅವಕಾಶ ಉಂಟು. ಆದರೆ ಗಂಡ ಅಥವಾ ಹೆಂಡತಿ ತೀರಿಹೋದ ಪಕ್ಷದಲ್ಲಿ ಮಾತ್ರ. “ಮುತ್ತೈದೆಯು ತನ್ನ ಗಂಡನು ಜೀವದಿಂದಿರುವತನಕ ಅವನಿಗೆ ಬದ್ಧಳಾಗಿದ್ದಾಳೆ. ಗಂಡನು ಸತ್ತಿದ್ದರೆ, ಆಕೆಯು ಬೇಕಾದವನನ್ನು ಮದುವೆ ಮಾಡಿಕೊಳ್ಳುವುದಕ್ಕೆ ಸ್ವತಂತ್ರಳಾಗಿದ್ದಾಳೆ.”[೩] ವಿವಾಹಕ್ರಮವು ಈ ಲೋಕ ಸಂಬಂಧವಾದುದು ಇದರ ಹುಟ್ಟುವಿಕೆ ಹಾಗೂ ಅಂತ್ಯವು ಇಹದಲ್ಲಿಯೇ ಆಗಬೇಕಾದುದು. ಒಂದು ಸಾರಿ ಕ್ರಿಸ್ತನಿಗೆ ಜನರು ಒಂದು ಸವಾಲು ಹಾಕುವರು. “ಬೋಧಕನೆ ಒಬ್ಬನು ಮಕ್ಕಳಿಲ್ಲದೆ ಸತ್ತರೆ ಅವನ ಹೆಂಡತಿಯನ್ನು ಅವನ ತಮ್ಮನು ಮದುವೆ ಮಾಡಿಕೊಂಡು ತನ್ನ ಅಣ್ಣನಿಗೆ ಸಂತಾನವನ್ನು ಪಡೆಯಬೇಕೆಂದು ಮೋಶೆ ಹೇಳಿದ್ದಾನೆ. ಆದರೆ ನಮ್ಮಲ್ಲಿ

---

೧. ಭಾ.ಸಾ.ಸಂ.ಪಾ.ವಿ.ಕ.ಸೇವೆ, ಐ.ಮಾ.ಮುತ್ತಣ್ಣ, ೧೯೮೭, ಪು.೧೮೫

೨. ಸತ್ಯವೇದ ೧ ಕೊರೆ ೭:೨

೩. ಅದೇ, ಕೊರೆ ೭:೩೯

* ಭಾ.ಸಾ.ಸಂ.ಪಾ.ವಿ.ಕ.ಸೇವೆ, ಐ.ಮಾ.ಮುತ್ತಣ್ಣ, ೧೯೮೭, ಪು.೧೫

ಏಳು ಮಂದಿ ಅಣ್ಣ ತಮ್ಮಂದಿರಿದ್ದು ಮೊದಲನೇಯವನು ಮದುವೆಯಾಗಿ ತೀರಿಹೋದನು. ಅವನಿಗೆ ಸಂತಾನವಿಲ್ಲದ ಕಾರಣ ಹೆಂಡತಿಯನ್ನು ತನ್ನ ತಮ್ಮನಿಗೆ ಬಿಟ್ಟನು. ಅವನು ತೀರಿ ಹೋದ ಮೇಲೆ ಮೂರನೆಯವನು ಹೀಗೆ ಏಳನೆಯವನ ತನಕ ಮದುವೆಯಾದರು. ಅವರೆಲ್ಲರೂ ಸತ್ತ ಮೇಲೆ ಆ ಹೆಂಗಸು ಸತ್ತಳು. ಹಾಗಾದರೆ ಪುನರುತ್ಥಾನ (ಸ್ವರ್ಗದಲ್ಲಿ)ದಲ್ಲಿ ಆ ಏಳು ಮಂದಿಯಲ್ಲಿ ಯಾರ ಹೆಂಡತಿಯಾಗಿರುವಳು?'' ಇದಕ್ಕೆ ಕ್ರಿಸ್ತನು ಹೀಗೆ ಉತ್ತರಿಸಿದನು. ''ನೀವು ಶಾಸ್ತ್ರವನ್ನಾದರು ದೇವರ ಶಕ್ತಿಯನ್ನಾದರೂ ತಿಳಿಯದೆ ತಪ್ಪುವವರಾಗಿದ್ದೀರಿ ಪುನರುತ್ಥಾನ(ಜೀವದಿಂದ ಎದ್ದ ಮೇಲೆ)ವಾದ ಮೇಲೆ ಮದುವೆ ಮಾಡಿಕೊಳ್ಳುವುದಿಲ್ಲ ಮಾಡಿಕೊಡುವುದು ಇಲ್ಲ. ಪರಲೋಕದಲ್ಲಿರುವ ದೇವದೂತರಂತೆ ಇರುತ್ತಾರೆ''[೧] ಎಂದನು.

ಅಂತರ ಜಾತಿ ವಿವಾಹ

ಈ ಕುರಿತು ಬೈಬಲ್ ಅವಕಾಶ ಕಲ್ಪಿಸಿದೆ. ಅನೇಕ ಧರ್ಮಗಳಲ್ಲಿ ಜಾತಿ ಒಂದೇ ಇದ್ದರು ಒಳಜಾತಿ ಬೇರೆ ಇರುವುದರಿಂದ ವಿವಾಹ ಬಂಧನಕ್ಕೆ ಅವಕಾಶವಿಲ್ಲ. ಆದರೆ ಬೈಬಲ್ ಪ್ರಕಾರ ಅನ್ಯಧರ್ಮದವರನ್ನು ಮದುವೆಯಾಗುವಲ್ಲಿ ಧಾರ್ಮಿಕ ನಿರ್ಬಂಧಗಳು ಕಂಡುಬರುವುದಿಲ್ಲ. ಅವಕಾಶ ಕಲ್ಪಿಸಿದ ಬಗ್ಗೆ ಹೀಗುಂಟು- ''ಒಬ್ಬ ಸಹೋದರನಿಗೆ ಕ್ರಿಸ್ತ ನಂಬಿಕೆ ಇಲ್ಲದ ಹೆಂಡತಿ ಇರಲಾಗಿ ಆಕೆ ಅವನೊಂದಿಗೆ ಒಗೆತನ ಮಾಡುವುದಕ್ಕೆ ಸಮ್ಮತಿಸಿದರೆ ಅವನು ಆಕೆಯನ್ನು ಬಿಡಬಾರದು. ಒಬ್ಬ ಸ್ತ್ರೀಗೆ ಕ್ರಿಸ್ತ ನಂಬಿಕೆ ಇಲ್ಲದ ಗಂಡನಿರಲಾಗಿ ಅವನು ಆಕೆಯೊಂದಿಗೆ ಒಗೆತನ ಮಾಡುವುದಕ್ಕೆ ಸಮ್ಮತಿಸಿದರೆ ಆಕೆಯು ಅವನನ್ನು ಬಿಡಬಾರದು. ಯಾಕೆಂದರೆ ಕ್ರಿಸ್ತನಂಬಿಕೆ ಇಲ್ಲದ ಗಂಡನು ತನ್ನ ಹೆಂಡತಿಯಲ್ಲಿ ದೇವ ಜನಕ್ಕೆ ಸಂಬಂಧ ಪಟ್ಟವನಾದನು. ಮತ್ತು ಕ್ರಿಸ್ತನಂಬಿಕೆ ಇಲ್ಲದ ಹೆಂಡತಿಯು ತನ್ನ ಗಂಡನಲ್ಲಿ ದೇವಜನಕ್ಕೆ ಸಂಬಂಧಪಟ್ಟವಳಾದಳು. ಹಾಗಲ್ಲದಿದ್ದರೆ ನಿಮ್ಮ ಮಕ್ಕಳು ಅಪವಿತ್ರರಾಗಿರುತ್ತಿದ್ದರು.''[೨]

ಈ ಬೈಬಲ್ ಹೇಳಿಕೆಗಳನ್ನು ಗಮನಿಸಿದರೆ ದೇವರ ನಂಬಿಕೆಗಿಂತ ದೇವರು ಗೌರವಿಸಿ ಮಾನ್ಯವೆಂದು ಪರಿಗಣಿಸಿದ ವಿವಾಹ ಬಂಧನವು ಪ್ರಮುಖವಾದುದೆಂದು ಕಂಡುಬರುವುದು. ''ದೇವರ ಸೃಷ್ಟಿಕಾರ್ಯದಲ್ಲಿ ಮಾನವನು ಸಹಕರಿಸುವ ಏಕಮಾತ್ರ ಸೌಭಾಗ್ಯವು ವೈವಾಹಿಕ ಕ್ರಿಯೆಯಲ್ಲಿ ಅರ್ಥಾತ್ ದಾಂಪತ್ಯದಲ್ಲಿದೆ.''[೩]

---

೧. ಸತ್ಯವೇದ ಮತ್ತಾಯ ೨೨:೨೪-೩೧

೨. ಸತ್ಯವೇದ ೧ ಕೊರೆಂತ ೭:೧೩-೧೪

೩. ಕ್ರೈಸ್ತ ತತ್ವದರ್ಶನ, ಎಡ್ವಿನ್ ಡಿಸೋಜ, ಪು.೨೨೭

ಬಹುಪತ್ನಿತ್ವ

ಬೈಬಲ್‌ನಲ್ಲಿ ಎರಡು ಭಾಗ ಉಂಟು. ಒಂದು ಹಳೆ ಒಡಂಬಡಿಕೆ(OLD TESTMENT) ಇನ್ನೊಂದು ಹೊಸ ಒಡಂಬಡಿಕೆ (NEW TESTMENT). ಈ ಒಡಂಬಡಿಕೆಗಳು ದೇವರೊಂದಿಗೆ ಮಾನವ ಮಾಡಿಕೊಂಡ ಒಡಂಬಡಿಕೆ ಎಂಬ ಅರ್ಥಉಳ್ಳದ್ದು.

ಕ್ರಿಸ್ತನ ಹುಟ್ಟಿನ ನಂತರ ಎರಡನೆ ಭಾಗ ಪ್ರಾರಂಭವಾಗುವುದು. ಈ ಭಾಗದಲ್ಲಿ ಬಹುಪತ್ನಿತ್ವಕ್ಕೆ ಆಸ್ಪದವಿಲ್ಲ. ಕ್ರಿಸ್ತನ ಒಂದು ಮಾತನ್ನು ಉದಾಹರಣೆಗೆ ತಿಳಿದುಕೊಳ್ಳಬಹುದು. "ವ್ಯಭಿಚಾರ ಮಾಡಬಾರದೆಂದು ಹೇಳಿಯದೆ ಎಂಬದಾಗಿ ನೀವು ಕೇಳಿದ್ದೀರಷ್ಟೇ. ಆದರೆ ನಾನು ನಿಮಗೆ ಹೇಳುವುದೇನೆಂದರೆ- ಪರಸ್ತ್ರೀಯನ್ನು ನೋಡಿ ಮೋಹಿಸುವ ಪ್ರತಿ ಮನುಷ್ಯನು ಆಗಲೇ ತನ್ನ ಮನಸ್ಸಿನಲ್ಲಿ ಆಕೆಯ ಕೂಡ ವ್ಯಭಿಚಾರ ಮಾಡಿದವನಾದನು."[೧] ಇಂತಹ ಸೂಕ್ಷ್ಮತೆಯನ್ನು ಹೊಂದಿದ ಬೋಧನೆ ಬಹುಪತ್ನಿತ್ವಕ್ಕೆ ಅವಕಾಶ ಕಲ್ಪಿಸಲು ಸಾಧ್ಯವಿಲ್ಲ. ಯಾಕೆಂದರೆ ಎರಡನೆ ಹೆಂಡತಿ ಮಾಡಿಕೊಳ್ಳಲಿಚಿಸುವವನು ಮೇಲಿನ ನಿಯಮ ಉಲ್ಲಂಘಿಸಿಯೇ ಹೋಗಬೇಕಾಗಬಹುದು ಇದು ಬೈಬಲ್ ವಿರುದ್ಧ ಕ್ರಮ.

ಮನುಷ್ಯನ ಸಹಜ ಪ್ರವೃತ್ತಿ(Instingt)ಗಳಲ್ಲಿ ಕಾಮವು ಒಂದು. ಸಮಾಜದ ಪರಿಕಲ್ಪನೆಯ ಪೂರ್ವದಲ್ಲಿ ಹೆಣ್ಣು ಗಂಡಿನ ಸಂಬಂಧದಲ್ಲಿ ಸ್ವೇಚ್ಛೆ ಹಾಗೂ ಬಲಾತ್ಕಾರದ ಅಂಶಗಳ ಪಾತ್ರ ಪ್ರಮುಖವಾಗಿತ್ತು. ಇಚ್ಛೆ ಉಳ್ಳವರು ಕೂಡಿಕೊಳ್ಳುವುದರಲ್ಲಿ ಸಾಮಾಜಿಕ ನಿರ್ಬಂಧವಿರಲಿಲ್ಲ. ಬರಬರುತ್ತಾ ಸಮಾಜದ ಕಟ್ಟುಪಾಡುಗಳು ಬಿಗಿಗೊಂಡು ಏಕ ಪತ್ನಿತ್ವದೆಡೆಗೆ ಭದ್ರಗೊಂಡಿದೆ. ಹೀಗಿದ್ದರೂ ಮನುಷ್ಯ ಪರಸ್ತ್ರೀಯನ್ನು, ಸ್ತ್ರೀ ಪರಪುರುಷನನ್ನು ಬಯಸುವವರಾಗಿರುವರು. ಆದರೆ ಇದು ಇಂದು ಸಮಾಜ ಬಾಹೀರ. ಮದುವೆ ಎಂಬ ಬಂಧನದ ಮೂಲಕ ತನ್ನ ಕಾಮದಾಶೆಯನ್ನು ಪೂರ್ತಿಗೊಳಿಸಿಕೊಳ್ಳುವುದು ಸಹಜ. ಆದರೆ ಈ ಸಂಬಂಧ ಬಯಸಿದವರೊಂದಿಗೆ ಸಮಾಜ ಒಪ್ಪದೇ ಇರುವುದರಿಂದ ಇಸ್ಲಾಂ ಧರ್ಮ ಬಹುಪತ್ನಿತ್ವ ಸಿದ್ಧಾಂತವನ್ನು ಒಪ್ಪಿಕೊಂಡಿದೆ. ಪುರುಷನಾಗಲಿ ಸ್ತ್ರೀಯಾಗಲಿ ಅನ್ಯ ಸಂಬಂಧ ಹೊಂದಿದರೆ ಕಾನೂನು ಪ್ರಕಾರ ಅವರನ್ನು ಮರಣ ದಂಡನೆಗೆ ಗುರಿ ಮಾಡುವ ಕಠಿಣ ಕ್ರಮವೇ ಬಹುಪತ್ನಿತ್ವಕ್ಕೆ ನಾಂದಿಯಾಗಿದೆ. ಮದುವೆ ಎನ್ನುವ ಬಂಧನದಿಂದ ಬಹುಪತ್ನಿತ್ವ (ಸ್ತ್ರೀತ್ವ)ದ ಆಶೆ ಈಡೇರುವಲ್ಲಿ ಸಂಶಯವಿಲ್ಲ. ಇಸ್ಲಾಂ ಧರ್ಮದಲ್ಲಿ ಜಿಹಾದ(ಧರ್ಮಯುದ್ಧ) ಹೆಸರಲ್ಲಿ ಯುದ್ಧಮಾಡಿ, ಕೇವಲ ಪುರುಷರ ಯುದ್ಧದಲ್ಲಿ ಬಹುಸಂಖ್ಯೆಯಲ್ಲಿ ಮರಣ ಹೊಂದುತ್ತಾ ಬಂದಿರುವುದರಿಂದ, ಪುರುಷರ ಸಂಖ್ಯೆ ಕಡಿಮೆಗೊಂಡು ಅನ್ಯಸಂಬಂಧ ಬೆಳೆಯಲು ಕಾರಣವಾದಾಗ ಬಹುಪತ್ನಿತ್ವದ ಪದ್ಧತಿ ಜಾರಿಗೆ ಬಂದಂತಿದೆ.

---

೧. ಸತ್ಯವೇದ, ಮುತ್ತಾಯ ೫:೨೭-೨೮

ಹಿಂದೂ ಧರ್ಮದಲ್ಲಿ ಹೆಂಡತಿ ಇರುವಾಗ ಇನ್ನೊಂದು ಮದುವೆಗೆ ಅವಕಾಶ ಇಲ್ಲದಿದ್ದರೂ ಉಪ ಪತ್ನಿತ್ವದ ಪದ್ಧತಿ ಕಂಡುಬರುವುದು. ಪುರುಷ ಅನ್ಯ ಸ್ತ್ರೀ ಸಂಬಂಧ (ಹೆಂಡತಿ ಬಿಟ್ಟು)ದಲ್ಲಿರುವುದು ಕಂಡುಬಂದಲ್ಲಿ ಯಾವ ಕಾನೂನು ಅವನಿಗೆ ಕ್ರಮಕೈಕೊಳ್ಳಲಾರದು. ಕೈಕೊಳ್ಳುವಲ್ಲಿ ಸಾಕ್ಷಿ ಪುರಾವೆಗಳು ಒದಗುವುದು ಕಷ್ಟ ಹೀಗಾಗಿ. ಅನ್ಯ ಸಂಬಂಧ ಸಹಜವಾಗಿ ಕಂಡುಬರುವುದು.

ಕ್ರೈಸ್ತರಲ್ಲಿ ಅವರ ಕಾನೂನಿನ ಪ್ರಕಾರ ಬಿಡುಗಡೆ ಮರುಮದುವೆಗಳು ಪಾಶ್ಚಾತ್ಯರಲ್ಲಿ ಸಹಜ. ಆದರೆ ದೇಶೀಯ ಕ್ರೈಸ್ತರು ಏಕಪತ್ನಿತ್ವ ಸಿದ್ಧಾಂತ ಅನುಸರಿಸಿ ಕ್ರಿಸ್ತನ ಬೋಧನೆಯನ್ನು ಪುರಸ್ಕರಿಸುವವರಾಗಿದ್ದಾರೆ.

ಮನುಷ್ಯ ಕಾಮದ ತಾಪಕ್ಕೆ ಮದುವೆಯಾಗುವುದು ಸಹಜ. ಆದರೆ ಮದುವೆಯಾದ ಮೇಲೂ ಮತ್ತೊಬ್ಬರನ್ನು ಬಯಸುವುದು ಯಾಕೆ? ಎಷ್ಟೋ ಪುರುಷ ಹಾಗೂ ಸ್ತ್ರೀಗೆ ತಾನು ಮಾಡುವುದು ತಪ್ಪು ಎಂಬ ಪ್ರಜ್ಞೆ ಇದ್ದಾಗ್ಯೂ, ಈ ಜಾರತ್ವದಿಂದ ಹೊರಬರಲು ಸಾಧ್ಯವಾಗದೆ ಇರುವುದು ಕಂಡುಬರುತ್ತದೆ?

ಬೈಬಲ್‌ನಲ್ಲಿ ಸಂತ ಪೌಲನು ಹೀಗೆ ಬರೆಯುತ್ತಾನೆ. "ನಾನು ದೇಹಧರ್ಮಕ್ಕೆ ಒಳಗಾದವನು. ಪಾಪದ ಸ್ವಾಧೀನದಲ್ಲಿರುವುದಕ್ಕೆ ಮಾರಲ್ಪಟ್ಟವನೂ ಆಗಿದ್ದೇನೆ. ಹೇಗೆಂದರೆ ನಾನು ಮಾಡುವುದು ನನಗೆ ಗೊತ್ತಿಲ್ಲ... ನನ್ನಲ್ಲಿ ನೆಲೆಗೊಂಡಿರುವ ಪಾಪವೇ ಅದನ್ನು ಮಾಡುತ್ತದೆ. ನನ್ನಲ್ಲಿ ಅಂದರೆ ನನ್ನ ಶರೀರಾಧೀನ ಸ್ವಭಾವದಲ್ಲಿ ಒಳ್ಳೆಯದೇನೂ ವಾಸವಾಗಿಲ್ಲವೆಂದು ನನಗೆ ತಿಳಿದರೆ ಒಳ್ಳೆಯದನ್ನು ಮಾಡುವುದಕ್ಕೆ ನನಗೆ ಮನಸ್ಸುಂಟು. ಆದರೆ ಅದನ್ನು ಮಾಡುವುದು ನನ್ನಿಂದಾಗದು... ಮಾಡಬಾರದೆನ್ನುವ ಕೆಲಸವನ್ನು ನಾನು ಮಾಡಿದರೆ ಅದನ್ನು ಮಾಡಿದವನು ಇನ್ನು ನಾನಲ್ಲ. ನನ್ನಲ್ಲಿ ನೆಲೆಗೊಂಡಿರುವ ಪಾಪವೇ ಅದನ್ನು ಮಾಡಿತು. ಹೀಗಿರಲಾಗಿ ಒಳ್ಳೆದನ್ನು ಮಾಡಬೇಕೆಂದಿರುವ ನನಗೆ ಕೆಟ್ಟದ್ದೇ ಸಿದ್ಧವಾಗಿದೆಂಬ ನಿಯಮ ನನಗೆ ಕಾಣಬರುತ್ತದೆ. ಅಂತರಾತ್ಮದೊಳಗೆ ದೇವರ ನಿಯಮದಲ್ಲಿ ಆನಂದಪಡುವವನಾಗಿದ್ದೇನೆ. ಆದರೆ ನನ್ನ ಅಂಗಗಳಲ್ಲಿ ಬೇರೊಂದು ನಿಯಮ ಉಂಟೆಂದು ನೋಡುತ್ತೇನೆ. ಅದು ನನ್ನ ಮನಸ್ಸಿನಲ್ಲಿರುವ ನಿಯಮಕ್ಕೆ ವಿರುದ್ಧವಾಗಿ ಕಾದಾಡಿ ನನ್ನನ್ನು ಸೆರೆ ಹಿಡಿದು ನನ್ನ ಅಂಗಗಳಲ್ಲಿರುವ ಪಾಪದ ನಿಯಮಕ್ಕೆ ವಶಮಾಡುವಂಥದಾಗಿದೆ".[೧] ಎಂದಿರುವನು.

ಇದನ್ನು ಅರ್ಥಮಾಡಿಕೊಂಡಾಗ ದೇವರ ವಿರುದ್ಧ ಶಕ್ತಿ ಈ ಲೋಕದಲ್ಲಿ ಎಷ್ಟೊಂದು ಪ್ರಬಲವಾಗಿದೆಂಬುದು ತಿಳಿದುಬರುವುದು. ಬೈಬಲ್ "ಮನುಷ್ಯ ತಾಯಿ ಗರ್ಭದಿಂದಲೇ ಪಾಪಿ" ಎಂದು ಹೇಳುತ್ತದೆ. ಈ ಪಾಪದ ಸ್ವಭಾವ ಮನುಷ್ಯನನ್ನು ಆದಿಕಾಲದಿಂದಲೂ ಬೆನ್ನತ್ತಿ ಬಂದಂತಿದೆ.

---

೧. ಸತ್ಯವೇದ ೧ ಕೊರೆಂತ ೭:೧೩-೨೩

"ಶರೀರ ಭಾವವು ಅಭಿಲಾಷಿಸುವುದು ಆತ್ಮನಿಗೆ ವಿರುದ್ಧವಾಗಿದೆ. ಆತ್ಮನು ಅಭಿಲಾಷಿಸುವುದು ಶರೀರಭಾವಕ್ಕೆ ವಿರುದ್ಧವಾಗಿದೆ. ನಾವು ಮಾಡಲಟ್ಟಿರುವುದನ್ನು ಮಾಡದಂತೆ ಇವು ಒಂದಕ್ಕೊಂದು ಹೋರಾಡುತ್ತವೆ."[೧] ಹೀಗಿರುವಾಗ ಮನುಷ್ಯ ಈ ಲೋಕದಲ್ಲಿ ನ್ಯಾಯಕ್ಕಾಗಿ ಹೋರಾಡಬೇಕಾಗಿದೆ.

ತಂದೆ-ತಾಯಿ, ಅಜ್ಜ-ಅಮ್ಮರಿಂದ ಆನುವಂಶಿಕ ಕಾಯಿಲೆಗಳಾದ ಡೈಬೆಟೀಸ್ , ಬಿ.ಪಿ, ಅಸ್ತಮಾ, ಟಿ.ಬಿ, ಏಡ್ಸ್ ಗಳು ಇಂದು ಅವರ ಮಕ್ಕಳಿಗೆ, ಮೊಮ್ಮಕ್ಕಳಿಗೆ ಬರುವುದು ಸಹಜವಾದರೆ, ಪೂರ್ವಜರು ಸ್ವೇಚ್ಛೆಯಾಗಿ ಅನುಭವಿಸಿದ ಕಾಮ ಕ್ರೀಡೆ, ಚಂಚಲತೆ, ಚಪಲತೆ ಇಂದಿನ ತನಕವು ಬಾರದೆ ಇರಲು ಸಾಧ್ಯವೆ? ಇದು ಪೂರ್ವಜರ ಸಂಸ್ಕಾರದ ಕೊಡುಗೆ ಆಗಿರುವಾಗ ಇದರಿಂದ ಹೊರಬರಲು ಹೇಗೆ ಸಾಧ್ಯ?

ನಾವು ಹೇಗೆ ಇದ್ದರು ಅದು ನಮ್ಮ ಒಳ್ಳೆತನದ ಅಂಶಗಳ ಮೇಲೆ ಅವಲಂಬಿಸಿದೆ ಎನ್ನುವವರು ಇದ್ದಾರೆ. ಆದರೆ ಬೈಬಲ್ ಹೇಳುವುದೇನೆಂದರೆ ನೀನು ನೀತಿವಂತನೆಂದು ಉಬ್ಬಿಕೊಳ್ಳಬೇಡ ನಿನ್ನ ನೀತಿಗಳು ಹೊಲೆ ಬಟ್ಟೆಯಂತೆ. ಆದರೆ ದೇವರು ನಿನ್ನನ್ನು ನೀತಿವಂತನೆಂದು ನಿನ್ನ ಪಾಪದಿಂದಲೇ ಆಯ್ದುಕೊಳ್ಳುವುದಾದರೆ ನೀನು ಜಯಪ್ರದನು ಎಂದಿದೆ. ಕ್ರಿಸ್ತನು ಪಾಪಿಗಳನ್ನು ಹುಡುಕಿಕೊಂಡು ಈ ಲೋಕಕ್ಕೆ ಬಂದನು ನೀತಿವಂತರನಲ್ಲ ಯಾಕೆಂದರೆ ದೇವರ ದೃಷ್ಟಿಯಲ್ಲಿ ನೀತಿವಂತರು ಒಬ್ಬರೂ ಇಲ್ಲ.

ಮನುಷ್ಯನಲ್ಲಿಯ ಕಾಮ ಪ್ರವೃತ್ತಿಯ ಎಲ್ಲ ಅಂಶಗಳೂ ದೇವರಿಗೆ ತಿಳಿಯದೆ ಇರಲಾರದು. ಆದರೆ ಕಾಮತ್ವವನ್ನು ಅರಿತು ಅದನ್ನು ಜಯಿಸಿದವನು ದೇವರ ದೃಷ್ಟಿಯಲ್ಲಿ ನೀತಿವಂತನಾಗುನು. ಪುರುಷ ಸ್ತ್ರೀಯಲ್ಲಿ ಕಾಣುವ ಪ್ರೀತಿಗಿಂತ ಮಿಗಿಲಾದುದು ಆತನು ಈಹಲೋಕದ ವ್ಯಾಮೋಹಕ್ಕಿಂತ ಪರಲೋಕದ ಅಧಿಪತಿಯನ್ನು ಕೂಡಿ ಆನಂದಿಸುವುದೇ ಶ್ರೇಷ್ಠವಾದುದು.

ಆದರೆ ಮನುಷ್ಯ ಇಹಲೋಕದ ಸಕಲ ಪ್ರೀತಿಯನ್ನು ಅರಿಯದೆ ಆ ಲೋಕದ ಪ್ರೀತಿ ವ್ಯಾಮೋಹವನ್ನು ಅರಿಯಲು ಸಾಧ್ಯವಿಲ್ಲ. ಆದುದರಿಂದ ವಿವಾಹ ಬಂಧನವು ಸತಿಪತಿಗಳ ಭಕ್ತಿಗೆ ಹೋಲಿಸಲಾಗಿದೆ. ಒಬ್ಬರನ್ನೊಬ್ಬರು ಅಗಲದಂತಿರುವ ಸಂಬಂಧ ಇದಾಗಿದೆ. ದೇವರನ್ನು ಪತಿ, ಪತಿಯೇ ದೇವರು, ಶರಣ ಸತಿ, ಲಿಂಗಪತಿ, ಮೊದಲಗಿತ್ತಿ ಸಭೆ ಎಂಬ ಮನೋಸಂಬಂಧ ಕಂಡುಬರುವುದು.

ಮರಣ ಮತ್ತು ಮರಣೋತ್ತರ

ಮರಣವು ನಿತ್ಯತ್ವದ ಮೆಟ್ಟಿಲು, ಮರಣದಿಂದಲೇ ಮಾನವನು ಮುಕ್ತಿಯನ್ನು ಪಡೆಯಲು ಸಾಧ್ಯ. ಮರಣ, ಶರೀರ ಹಾಗೂ ಆತ್ಮದ ಸಂಬಂಧವನ್ನು ಕಡಿದು ಹಾಕಿ, ಆತ್ಮೀಕ ಶರೀರ ಹಾಗೂ ಆತ್ಮನ* ಇರುವಿಕೆಯನ್ನು ಹೊಂದುವುದೆಂಬ ನಂಬಿಕೆ ಕ್ರೈಸ್ತ ಬಾಂಧವರಲ್ಲಿರುವುದು ಕಂಡು ಬರುತ್ತದೆ.

೧. ಸತ್ಯವೇದ ಗಲಾತ್ಯ ೫:೧೭

* ಆತ್ಮ ಇದೆಯೇ? ಪರಮಾತ್ಮ ಇರುವುದಾದರೆ ಆತ್ಮನು ಇದ್ದಾನೆ. ಆತ್ಮ ಇದೆಯೇ ಎಂದು ಕೇಳಿದ್ದಕ್ಕೆ ನಿನಗೆ ಬುದ್ಧಿ ಇದೆಯ ಎಂದನಂತೆ. ಹೌದು ನನಗೆ ಬುದ್ಧಿ ಇದೆ ಎಂದು ಉತ್ತರಿಸಿದಾಗ ಹಾಗಿದ್ದರೆ ನನಗೆ ಕಾಣುವುದಿಲ್ಲ ಅಂದನಂತೆ

ಸತ್ತು ಹೋದ ವ್ಯಕ್ತಿ ಇಹಲೋಕವನ್ನು ತ್ಯಜಿಸಿ ಪದಲೋಕಕ್ಕೆ ಹೋಗುವನು. ಇಲ್ಲಿಯ ಜೀವಿತದಂತೆ ಅಲ್ಲಿಯೂ ಬೇರೊಂದು ಜೀವಿತ ಉಂಟು. ಅಲ್ಲಿಯ ಜೀವಿತ ದೇವನ ದೃಷ್ಟಿಯದಾಗಿರುವಂತಹುದು. ದೇವರ ನ್ಯಾಯ ತೀರ್ಪಿನವರೆಗೂ ಆತ್ಮನಲ್ಲಿ ಜೀವಿಸುವರೆಂಬುದಕ್ಕೆ ಬೈಬಲ್ ನಲ್ಲಿ ಅನೇಕ ಆಧಾರಗಳು ತೋರಿ ಬರುತ್ತವೆ.

ಕುರ್ ಆನ್ ಪ್ರಕಾರ "ಮನುಷ್ಯನು ಇಹಲೋಕದಲ್ಲಿ ದೇವರ ಪ್ರತಿನಿಧಿ. ಅವನು ವಿಶ್ವದ ಅಡಕ. ಅವನ ಆತ್ಮ ಪರಿಶುದ್ಧವೂ ಅಪಾರ್ಥಿವವೂ ಇದ್ದು ಕರ್ಮದ ಮೂಲಕ ವ್ಯಕ್ತವಾಗುತ್ತದೆ. ವಿಶ್ವಾತ್ಮದೊಡನೆ ಹೋಲಿಸಿದರೆ ಜೀವಾತ್ಮಕ್ಕೆ ಆದಿಯುಂಟು. ಆದರೆ ವ್ಯಕ್ತಿತ್ವವೂ ತನ್ನ ಬೆಳವಣಿಗೆ ಪೂರ್ಣತ್ವಗಳಿಗೆ ಸಹಾಯಕವಾದ ಇಚ್ಛಾಶಕ್ತಿಯೂ ಉಂಟು. ಆದರೆ, ಈ ಶಕ್ತಿ ದೈವ ಸಂಕಲ್ಪಕ್ಕೆ ಹೊಂದಿ ಕೊಂಡು ಹೋಗಬೇಕು. "ಅವರು ಆತ್ಮದ ವಿಷಯ ಕೇಳುತ್ತಾರೆ. ನೀನು ಹೀಗೆ ಹೇಳು- ಆತ್ಮ ನನ್ನ ಪ್ರಭುವಿನ ಆಜ್ಞಾಧೀನವಾದದ್ದು, ಅದರ ಯಥಾರ್ಥ ಜ್ಞಾನ ನಿಮಗೆ ತಿಳಿದಿರುವುದು ಬಹು ಸ್ವಲ್ಪ.(೧೭-೮೫) ಆತ್ಮಕ್ಕೆ ಮೇಲೆ ಮೇಲೆ ಏರಿ ತನ್ನನ್ನು ತಾನು ಸಾಧಿಸಿ ಅರಿತುಕೊಂಡು ದೇವ ಸಾನ್ನಿಧ್ಯವನ್ನೈದುವ ಶಕ್ತಿಯುಂಟು. ಆದರೆ ಕಾಮಕ್ರೋಧಾದಿ ಕಷಾಯಗಳ ತುಳಿತಕ್ಕೆ ಸಿಕ್ಕಿ ಪಶುವಿಗಿಂತ ಕಡೆಯಾಗಿ ಬೀಳಲೂಬಹುದು. ಒಂದು ದೃಷ್ಟಿಯಿಂದ ಆತ್ಮಕ್ಕೆ ತನ್ನರಿವು ಇದ್ದು ಅದರ ಏಳುಬೀಳುಗಳಿಗೆ ಅದೇ ಹೊಣೆಯಾಗಿದೆ."[೧]

ಹಿಂದೂಧರ್ಮದ ಕಲ್ಪನೆಯಂತೆ ಪುನರ್ ಜನ್ಮದ ಕಲ್ಪನೆ ಕ್ರೈಸ್ತರಲ್ಲಿ ಇಲ್ಲ. ಒಂದೇ ಸಾರಿ ಹುಟ್ಟಿ, ಒಂದೇ ಸಾರಿ ಸಾಯುವುದು. ಕೂಸು ಗರ್ಭದಲ್ಲಿರುವವರೆಗೆ ಹೇಗೆ ಈ ಲೋಕವನ್ನು ಕಾಣದೋ ಹಾಗೆಯೇ ಆತ್ಮನು ಶರೀರ ಎಂಬ ಗರ್ಭದಲ್ಲಿ ಇರುವವರೆಗೆ ಪರಲೋಕವನ್ನು ಕಾಣನು. ಗರ್ಭವನ್ನು ಬಿಟ್ಟ ಕೂಸು ಪುನಃ ಗರ್ಭವನ್ನು ಸೇರಲಾರದಂತೆ ದೇಹವನ್ನು ಬಿಟ್ಟ ಆತ್ಮವು ತಾನು ಪುನಃ ದೇವರ ಆಜ್ಞೆ ಇಲ್ಲದೆ ಶರೀರ ಸೇರಲಾರದು.

ಹಿಂದೂ ಧರ್ಮದಲ್ಲಿ ಸತ್ತ ನಂತರ ಅವರ ಪಾಪ, ಪುಣ್ಯದ ಪ್ರಕಾರ ತೀರ್ಮಾನ ನೀಡಿ ಮರು ಜನ್ಮ ಪಡೆಯುವಲ್ಲಿ ಜೀವಾತ್ಮ ಸಾಗುತಲಿರುವುದು. ಹೀಗೆ ಸಾಗುವ ಜೀವಾತ್ಮಕ್ಕೆ ಅಂತ್ಯಯಾವಾಗ? ಜೀವಾತ್ಮ ಕೊನೆಯಲ್ಲಿ ಪರಮಾತ್ಮನಲ್ಲಿ ಲೀನವಾಗುವುದೇ ಮುಕ್ತಿಯಾದರೆ ಜೀವಾತ್ಮನ ಅಸ್ತಿತ್ವವೇನು? ಹೀಗಿದ್ದರೆ ಅವಸರವೇಕೆ? ಜನ್ಮಾಂತರ ಚಕ್ರದಲ್ಲಿ ಸುತ್ತುವುದು ಕರ್ಮವಾಗಿದ್ದರೆ ದೇವರ ಪಾತ್ರವಾದರು ಏನು? ಎಂಬೆಲ್ಲ ಪ್ರಶ್ನೆಗೆ ಹಿಂದೂ ತತ್ವ ಉತ್ತರ ನೀಡಬೇಕಾದ ಅಗತ್ಯತೆ ಕಂಡುಬರುವುದು.

ಆದರೆ ಬೈಬಲ್ ಆಧಾರಿತ ವಿಚಾರವು ಈ ಸಿದ್ಧಾಂತಗಳಿಂದ ಭಿನ್ನವಾಗಿದೆ. "ಒಬ್ಬ ಮನುಷ್ಯ(Adam)ನಿಂದಲೇ ಪಾಪವು ಪಾಪದಿಂದ ಮರಣವೂ ಲೋಕದೊಳಗೆ ಸೇರಿದವು. ಎಲ್ಲರೂ

---

೧. ಇಸ್ಲಾಂ ಸಂಸ್ಕೃತಿ, ಕೆ.ವಿ.ಪುಟ್ಟಪ್ಪ, ೧೯೪೦, ಪು.೮-೯

ಪಾಪ ಮಾಡಿದ್ದರಿಂದ ಮರಣವು ಹೀಗೆ ಎಲ್ಲರಿಗೂ ವ್ಯಾಪಿಸಿತು."[೧] ಈ ಮರಣವು ಪ್ರಾಕೃತ ಶರೀರವನ್ನು ತ್ಯಜಿಸುವಂತಹುದು. ಮನುಷ್ಯ ಸತ್ತ ಮೇಲೆ ಆತ್ಮೀಕ ಶರೀರದೊಂದಿಗೆ ಇರುವನೇ ಹೊರತು ಆತ ಇನ್ನೊಂದು ಜನ್ಮವನ್ನು ತಳೆದು, ಮತ್ತೆ ಈ ಭೂಲೋಕಕ್ಕೆ ಬರುವನೆಂಬ ನಂಬಿಕೆಗೆ ಕ್ರೈಸ್ತರು ಆಧಾರವಿಲ್ಲವೆಂದು ಹೇಳುತ್ತಾರೆ.

"ಜೀವಾತ್ಮನು ಪರಮಾತ್ಮನ ಅಂಶೀಭೂತನಾಗಿರುವುದರಿಂದ ಆತ್ಮಕ್ಕೆ ಪಾಪವಿಲ್ಲವೆಂದು ತತ್ವಜ್ಞಾನಿಗಳು ಹೇಳುತ್ತಾರೆ. ಜೀವಾತ್ಮನಿಗೆ, ಸ್ಥೂಲ, ಸೂಕ್ಷ್ಮ, ಕಾರಣ ಹೀಗೆ ಮೂರು ತರಹದ ದೇಹಗಳಿರುವುದರಿಂದ ಇವುಗಳ ಮೂಲಕವಾಗಿ ಮಾಡಿದ ಕರ್ಮಗಳಿಗೆ ಆಯಾ ಜನ್ಮದಲ್ಲಿ ಫಲವನ್ನನುಭವಿಸಬೇಕಾಗುತ್ತದೆಂದು ಹಿಂದೂ ಮತ. ಈ ಲೋಕದಲ್ಲಿ ಮಾಡಿದ ಪಾಪಕ್ಕೆ ಮುಂದಣ ಜನ್ಮದಲ್ಲಿ ಇಲ್ಲವೆ ನರಕದಲ್ಲಿ ಶಿಕ್ಷೆ ಉಂಟಾಗಬೇಕಾದರೆ ಒಂದಿಲ್ಲೊಂದು ತರಹದ ದೇಹವು ಬೇಕಾಗುತ್ತದೆ. ಹೀಗಾಗಿ ಶರೀರಕ್ಕೆ ಶಿಕ್ಷೆ ಇಲ್ಲಿದೆ. ಆತ್ಮಕ್ಕೆ ಶಿಕ್ಷೆ ಇಲ್ಲವೆಂದೂ ಅದೂ ಕಾರಣ ಪಾಪವು ಆತ್ಮಕ್ಕೆ ಹತ್ತುವಂಥದ್ದಲ್ಲವೆಂದೂ ಹಿಂದೂಮತವು ಹೇಳುತ್ತದೆ. ಆತ್ಮ ಸುಧಾರಿಸಬೇಕೆಂಬ ಉದ್ದೇಶದಿಂದಲೇ ದೇಹಕ್ಕೆ ಶಿಕ್ಷೆಯು ಕೊಡಲ್ಪಡುತ್ತದೆಯಲ್ಲವೆ? ದೇಹಕ್ಕುಂಟಾದ ಶಿಕ್ಷೆಯು ಆತ್ಮನಿಗೆ ಹತ್ತದೆ ಹೋದರೆ ಅಂಥ ಶಿಕ್ಷೆಯಿಂದ ಪ್ರಯೋಜನವೇನು?"[೨] ಎನ್ನಬೇಕಾಗುತ್ತದೆ.

ಮನುಷ್ಯನು ಇತರ ಪ್ರಾಣಿಗಳಂತೆ ಮರಣಾಧೀನನಾಗಿರುವ ಕಾರಣ ಅವನಿಗೆ ಆತ್ಮವಿಲ್ಲ. ಶಾರೀರಿಕ ಸಾವೇ ಅವರ ಅಂತ್ಯವೆಂದು ಹೇಳುವವರಿದ್ದಾರೆ. ಹೊರಗಣ ಲೋಕವು ಹೊರಗಿರುವ ಇಂದ್ರೀಯಗಳಿಗೆ ಗೋಚರಿಸುವಂತೆ ಒಳಗಿನ ಲೋಕವು ಒಳಗಣ ಇಂದ್ರಿಯಕ್ಕೆ ಭಾಸವಾಗುವುದೆಂದು, ಯಾವುದೊಂದು ವಸ್ತುವಿನ ಕಲ್ಪನೆಯು ಆ ವಸ್ತುವಿನ ಅಸ್ತಿತ್ವವನ್ನು ಹೇಗೆ ನಿರ್ದೇಶಿಸುತ್ತದೋ ಹಾಗೆಯೇ ಪರಲೋಕವನ್ನು ಕುರಿತಾದ ಭಾವನೆಯು ಅಂಥ ಒಂದು ಲೋಕವಿರಬೇಕೆಂದು ಸಿದ್ಧಾಂತಗೊಳಿಸುತ್ತದೆ. ಮನಸ್ಸು ಒಂದು ದರ್ಪಣದಂತಿದ್ದು ಅದು ಭೂಲೋಕದ ವಸ್ತುಗಳನ್ನು ಹೇಗೋ ಹಾಗೆಯೇ ಪರಲೋಕದ ಸಂಗತಿಗಳನ್ನೂ ಪ್ರತಿಬಿಂಬಿಸುತ್ತದೆ. ಆತ್ಮೀಯ ಸಂಬಂಧವಾದ ಇಂಥ ಅಲೌಕಿಕ ಅನುಭಾವಗಳು ಮನುಷ್ಯನಿಗೆ ಆತ್ಮವಿರುವುದೆಂದೂ, ಅದಕ್ಕೆ ಸಂಬಂಧಿಸಿದ ಒಂದು ಲೋಕವಿರಬೇಕೆಂದೂ ಸೂಚಿಸುತ್ತದೆ. ಪರಲೋಕವೆಂಬುದು ಇರುವುದೇ ಸತ್ಯವಾದರೆ ಆ ಲೋಕಕ್ಕೆ ಸರಿಯಾಗಿ ಸೂಕ್ಷ್ಮ ಶರೀರವೂ ಬೇಕಾಗುತ್ತದೆ. ಇದರಿಂದ ಆತ್ಮವೆಂಬಾತನು ಇರಬೇಕೆಂದು ಅನಿಸುತ್ತದೆ."

ಪಾಪದಿಂದ ಮನುಷ್ಯನು ಮರಣಾಧೀನನಾಗಿದ್ದರೂ ಅವನಲ್ಲಿ ದೇವಾಂಶವಿರುವುದನ್ನು ನೋಡಿದರೆ, ಪಂಚ ಭೌತಿಕವಾದ ಶರೀರವನ್ನು ಆಳುವ ಆತ್ಮನೊಬ್ಬನು ಇದ್ದಾನೆಂಬುದು ಸ್ಪಷ್ಟವಾಗುತ್ತದೆ. ಸತ್ತು

೧. ಸತ್ಯವೇದ ರೋಮಾ ೫-೨

೨. ಚನ್ನಪ್ಪ ಉತ್ತಂಗಿ ಸಮಗ್ರ ಸಾಹಿತ್ಯ ಭಾಗ ೧, ರೆ.ಜೆ.ಎಂ.ಜೋಗುಳ, ಪು.೨೪೬

ಹೋದ ಮನುಷ್ಯನ ಅವಯವಗಳು ಸರಿಯಾಗಿದ್ದರೂ ಕ್ರಿಯೆ ಇಲ್ಲದೆ ಹೇಗೆ ನಿಃಶಬ್ದವಾಗಿರುವುದೋ, ಹಾಗೆಯೇ ಜೀವಾತ್ಮನಿಲ್ಲದ ಶರೀರವು ನಿಶಬ್ದವಾಗಿ ಬಿದ್ದುಕೊಂಡಿರುವುದು. ಚೈತನ್ಯದಾಯಕ ಆತ್ಮನು ಶರೀರವನ್ನು ಬಿಟ್ಟ ಬಳಿಕ ಅದರಿಂದ ಯಾವ ತರಹದ ಪ್ರತಿಕ್ರಿಯೆಯೂ ತೋರದು. ಹೀಗಾಗಿ ಶಾರೀರಿಕ ಸಾವೆಂಬುದು ಆತ್ಮದ ಅಭಾವಕಿಂತ ಅದರ ಅಸ್ತಿತ್ವವನ್ನು ಸಿದ್ಧಾಂತ ಪಡಿಸುತ್ತದೆಂದು ಹೇಳಬೇಕು.

ದೇವರು ತನ್ನ ಸ್ವರೂಪದಲ್ಲಿ ಮನುಷ್ಯನನ್ನು ಉಂಟು ಮಾಡಿರುವುದರಿಂದ ಆ ಮನುಷ್ಯನು ದೇವರ ಸ್ವರೂಪದಲ್ಲಿರತಕ್ಕವನು ಹಾಗೂ ಮನುಷ್ಯನು ಶಾಶ್ವತವಾಗಿ ಇರಲು ಸೃಷ್ಟಿಯಾಗಿರುವುದರಿಂದ ಮನುಷ್ಯನಿಗೆ ಬರುವ ಸಾವು ಕೇವಲ ಶಾರೀರಿಕ ಮರಣವೆಂದು; ಆತ್ಮದಲ್ಲಿ ಆತನು ಜೀವಿಸುತ್ತಾನೆಂಬ ನಂಬಿಕೆಯು ಕಂಡುಬರುವುದು. ದೇವರು ಕೊಟ್ಟಂಥ ನಿತ್ಯತ್ವವನ್ನು ಆತನು ಕಳೆದುಕೊಂಡಿರುವುದರಿಂದ (Adam & Eve story) ಅದನ್ನು ಪಡೆಯುವಲ್ಲಿ ಮನುಷ್ಯನ ಪ್ರಯತ್ನ ಮಾತ್ರ ನಿಂತಿಲ್ಲ. ಮನುಷ್ಯನು ದೇವರನ್ನು ಹುಡುಕುತ್ತಿರುವುದು ಯಾತಕ್ಕೇ? ಮನುಷ್ಯ ದೇವರ ಸನ್ನಿಧಾನದಿಂದ ಹೊರ ಬಂದಿರುವುದರಿಂದಲೇ. ತನ್ನ ದಾಹ, ಹುಡುಕುವಿಕೆ, ಪಡೆಯುವಿಕೆ ಹಾಗೂ ಗುರಿ. ದೇವರಿಂದಲ್ಲದೆ ಬೇರೆ ಯಾರಿಂದಲೂ ದೊರೆಯಲು ಸಾಧ್ಯವಿಲ್ಲ ಎನ್ನುವ ಪರಿ ಕಂಡುಬರುತ್ತದೆ.

ಮನುಷ್ಯ ಮರಣ ಹೊಂದಿದಾಗ ಈ ಲೋಕದ ಜೀವಿತಕ್ಕಾಗಿ ಇದ್ದ ಶರೀರ ನಾಶವಾಗುವುದು. ಪರಲೋಕದ ಜೀವಿತಕ್ಕೆ ಇನ್ನೊಂದು ಶರೀರ ಇರಲೇಬೇಕಾಗುವುದು. ಅದು ಈ ಶರೀರದ ಮುಖಾಂತರವೇ ಕೊಡೋಣವಾಗಿದೆ. ಅದನ್ನು ನಾವು ನಮ್ಮ ಚಕ್ಷುಗಳಿಂದ ನೋಡಲು ಸಾಧ್ಯವಿಲ್ಲ. ಆತ್ಮೀಕ ಶರೀರ ದಾರಿಗಳಾದಾಗ ಎಲ್ಲವೂ ಗೋಚರ.

"ಸಾವಿನ ಮೂಲಕ ಆತ್ಮವು ಹೊಸ ಸ್ಥಳಕ್ಕಿಂತ ಹೊಸ ಸ್ಥಿತಿಯಲ್ಲಿ ಸೇರುತ್ತದೆ. ಗರ್ಭದಲ್ಲಿ ಜೀವಿಸುತ್ತಿರುವ ಕೂಸು ಭೂಲೋಕಕ್ಕೆ ಬಂದೊಡನೆ ಉಸಿರಾಡ ಹತ್ತಿ ಹೊಸ ಸ್ಥಿತಿಯನ್ನು ಪಡೆದು ಹೇಗೆ ಹೊಸ ಜೀವಿಕೆಯಲ್ಲಿ ಬೆಳೆಯುವುದೋ, ಹಾಗೆಯೇ ಮರಣವೆಂಬ ಪ್ರಸವ ವೇದನೆಯಿಂದ ಶರೀರವನ್ನು ಬಿಟ್ಟು ಹೊರಬಿದ್ದ ಆತ್ಮವು ಸ್ವಾಭಾವಿಕವಾಗಿ ಪರಲೋಕದ ಸ್ಥಿತಿಯನ್ನು ಅನುಭವಿಸಲಾರಂಭಿಸುವುದೆಂದು ಚನ್ನಪ್ಪ ಉತ್ತಂಗಿಯವರು ಅಭಿಪ್ರಾಯಪಡುತ್ತಾರೆ".[೧]

ಕ್ರಿಸ್ತನ ಹತ್ತಿರ ಯಹೂದ್ಯರ ಹಿರಿಯ ಬೋಧಕನಾದ ನಿಕೊದೇಯನೆಂಬ ವ್ಯಕ್ತಿ ರಾತ್ರಿಯಲ್ಲಿ ಬಂದು. "ನೀನು ದೇವರ ಕಡೆಯಿಂದ ಬಂದ ಬೋಧಕನೆಂದು ಬಲ್ಲೆನು, ನೀನು ಮಾಡುವಂಥ ಈ ಸೂಚಕ ಕಾರ್ಯಗಳನ್ನು ದೇವರ ಸಹಾಯವಿಲ್ಲದೆ ಮಾಡುವುದು ಯಾರಿಂದಲೂ ಆಗದು ಎಂದು ಹೇಳಿದನು. ಅದಕ್ಕೆ ಯೇಸು. 'ನಾನು ನಿನಗೆ ನಿಜನಿಜವಾಗಿ ಹೇಳುತ್ತೇನೆ. ಒಬ್ಬನು ಹೊಸದಾಗಿ ಹುಟ್ಟದಿದ್ದರೆ ಅವನು ದೇವರ ರಾಜ್ಯವನ್ನು ಕಾಣಲಾರನು ಅಂದನು. ನಿಕೊದೇಮನು ಆತನನ್ನು-

೧. ಚನ್ನಪ್ಪ ಉತ್ತಂಗಿ, ಸಮಗ್ರ ಸಾಹಿತ್ಯ, ಭಾಗ ೧, ರೆ.ಜೆ.ಎಂ.ಜೋಗುಳ, ಪು.೨೪೯

ಮನುಷ್ಯನು ಮುದುಕನಾದ ಮೇಲೆ ಹುಟ್ಟುವುದು ಹೇಗೆ? ಅವನು ತನ್ನ ತಾಯಿಯ ಗರ್ಭದಲ್ಲಿ ತಿರಿಗಿ ಸೇರಿ ಹುಟ್ಟುವುದಾದೀತೆ? ಎಂದು ಕೇಳಿದನು. ಅದಕ್ಕೆ ಯೇಸು 'ನಾನು ನಿನಗೆ ನಿಜನಿಜವಾಗಿ ಹೇಳುತ್ತೇನೆ. ಒಬ್ಬನು ನೀರಿನಿಂದಲೂ, ಆತ್ಮನಿಂದಲೂ ಹುಟ್ಟದಿದ್ದರೆ ದೇವರ ರಾಜ್ಯಕ್ಕ ಸೇರಲಾರನು. ದೇಹದಿಂದ ಹುಟ್ಟಿದ್ದು ದೇಹವೇ; ಆತ್ಮನಿಂದ ಹುಟ್ಟಿದ್ದು ಆತ್ಮವೆ. ನೀವು ಹೊಸದಾಗಿ ಹುಟ್ಟಬೇಕು ಎಂದು ನಾನು ನಿನಗೆ ಹೇಳಿದ್ದರಿಂದ ಆಶ್ಚರ್ಯಪಡಬೇಡ. ಗಾಳಿಯು ಮನಸ್ಸು ಬಂದ ಕಡೆ ಬೀಸುತ್ತದೆ. ಅದರ ಸಪ್ಪಳವನ್ನು ಕೇಳುತ್ತೀ; ಆದರೆ ಅದು ಎಲ್ಲಿಂದ ಬರುತ್ತದೋ ಎಲ್ಲಿಗೆ ಹೋಗುತ್ತದೋ, ನಿನಗೆ ತಿಳಿಯದು. ಆತ್ಮದಿಂದ ಹುಟ್ಟಿದವರೆಲ್ಲರು ಅದರಂತೆಯೇ ಅಂದನು. ಅದಕ್ಕೆ ನಿಕೊದೇಮನು ಇದು ಆಗುವುದು ಹೇಗೆ? ಅಂದಾಗ ಯೇಸು ಅವನಿಗೆ ಹೇಳಿದ್ದೇನೆಂದರೆ, ಇಸ್ರಾಯೇಲ್ ಜನಕ್ಕೆ ಬೋಧಕನಾಗಿರುವ ನಿನಗೆ ಇದು ತಿಳಿದಿಲ್ಲವೋ? ನಿನಗೆ ನಿಜ ನಿಜವಾಗಿ ಹೇಳುತ್ತೇನೆ. ತಿಳಿದಿದ್ದನ್ನು ಹೇಳುತ್ತೇವೆ. ನೋಡಿದ್ದಕ್ಕೆ ಸಾಕ್ಷಿಕೊಡುತ್ತೇವೆ. ನೀವು ನಮ್ಮ ಸಾಕ್ಷಿಯನ್ನು ಒಪ್ಪುವುದಿಲ್ಲ. ನಾನು ಭೂಲೋಕದಲ್ಲಿ ನಡೆಯುವ ಕಾರ್ಯಗಳನ್ನು ಕುರಿತು ನಿಮಗೆ ಹೇಳುವಾಗ ನೀವು ನಂಬದೇ ಹೋದರೆ ಪರಲೋಕದ ಕಾರ್ಯಗಳನ್ನು ಕುರಿತು ನಿಮಗೆ ಹೇಳಿದರೆ ಹೇಗೆ ನಂಬೀರಿ? ಪರಲೋಕದಿಂದ ಇಳಿದು ಬಂದವನೇ(ಕ್ರಿಸ್ತನು) ಹೊರತು ಮತ್ತಾರೊ ಪರಲೋಕಕ್ಕೆ ಏರಿ ಹೋದವನಲ್ಲ."[೧] ಎಂದು ಕ್ರಿಸ್ತನು ಆತ್ಮೀಕ ದೇಹದ ಕುರಿತು ವಿವರಣೆ ನೀಡಿದ್ದಾನೆ.

ಕ್ರಿಸ್ತನು ನಿಕೋದೇಮನೊಂದಿಗೆ ಈ ಲೋಕದಲ್ಲಿಯೇ ಉಂಟಾಗಬೇಕಾದ ನೂತನ ಜನ್ಮವನ್ನು ಕುರಿತು ಸಂಭಾಷಿಸಿದಾಗ ಪ್ರಾಕೃತಭಾವವುಳ್ಳ ಆ ವಯೋವೃದ್ಧನು ಆತನ ಮಾತುಗಳನ್ನು ಗ್ರಹಿಸದೆ ಹೋದನು. ಈ ಜನ್ಮದಲ್ಲಿಯೇ ಮನುಷ್ಯನು ದೇವರನ್ನು ಅರಿತು ಆತನ ಮಾರ್ಗದಲ್ಲಿ ನಡೆಯುವುದೇ ಪುನರ್ ಜನ್ಮ ಎಂದು ಕ್ರಿಸ್ತನು ತಿಳಿಸುತ್ತಾನೆ. ಈ ಲೋಕದಲ್ಲಿದ್ದು ದೇವರ ಮಕ್ಕಳು ಎಂದೆನಿಸಿಕೊಂಡರೆ, ಪರಲೋಕದಲ್ಲಿ ನಾವು ಹುಟ್ಟಿದಂತೆ ಅದೇ ಪುನರಜನ್ಮ. ಹಾಗೆಯೇ ಇತರ ವಿಷಯಗಳನ್ನು ತಿಳಿದು ತಮ್ಮನ್ನು ತಾವು ತಿಳಿದುಕೊಳ್ಳದೇ ಇರುವವರೆಲ್ಲರು ಪರಲೋಕದ ಸಂಗತಿಗಳನ್ನು ಗ್ರಹಿಸರು.

ಕೂಸು ಗರ್ಭದಲ್ಲಿರುವವರೆಗೆ ಹೇಗೆ ಈ ಭೂಲೋಕವನ್ನು ಕಾಣದೋ ಹಾಗೆಯೇ ಆತ್ಮನು ಶರೀರವೆಂಬ ಗರ್ಭದಲ್ಲಿರುವವರೆಗೆ ಪರಲೋಕವನ್ನು ಕಾಣನು. ಕೂಸಿಗೆ ತಾಯಿಯ ಗರ್ಭದಲ್ಲಿ ೯ ತಿಂಗಳವರೆಗೆ ಆಗುವ ಪೋಷಣೆಯು, ಮುಂದೆ ಭೂಲೋಕದ ಬಾಳಿಗೆ ಯೋಗ್ಯವಾಗುವಂತೆ ಹೇಗೆ ಅದನ್ನು ಸಿದ್ಧಪಡಿಸುವುದೋ ಹಾಗೆಯೇ, ಮನುಷ್ಯನಿಗೆ ಈ ಲೋಕದಲ್ಲಿ ಕೊಡೋಣವಾದ ೯೦ ವರ್ಷದ ಆಯುಷ್ಯವು ಅವನನ್ನು ಮುಂದಣ ಲೋಕದ ಸ್ಥಿತಿಗೆ ಸಿದ್ಧಪಡಿಸುವುದು. ಹೀಗಾಗಿ ಭೂಲೋಕವು ಜೀವಾತ್ಮವನ್ನು ಪರಲೋಕದ ಪರಿಪೂರ್ಣ ಸ್ಥಿತಿಗೆ ಮುಟ್ಟಿಸುವ ಸಾಧನ ಭೂಮಿಯೆಂದು ಹೇಳಬೇಕು."[೨]

೧. ಸತ್ಯವೇದ ಯೊಹಾ ೩:೨-೧೩

೨. ಚನ್ನಪ್ಪ ಉತ್ತಂಗಿ, ಸಮಗ್ರ ಸಾಹಿತ್ಯ, ಭಾಗ ೧, ರೆ.ಜೆ.ಎಂ.ಜೋಗುಳ, ಪು.೨೫೦

ಮರಣದಿಂದ ಮುಕ್ತಿ

ಕ್ರೈಸ್ತರಲ್ಲಿ ಎರಡು ಬಗೆಯ ಮರಣದ ಕಲ್ಪನೆಯು ಕಂಡುಬರುತ್ತದೆ. ಶರೀರ ಕೃಷವಾಗಿ, ರೋಗರುಜಿನಕ್ಕೆ ತುತ್ತಾಗಿ ಮತ್ತು ಆಕಸ್ಮಿಕ ಅಪಘಾತಕ್ಕೆ ಒಳಗಾಗಿ, ಈ ಲೋಕದ ಭೂಮಿಯನ್ನು ಸೇರುವುದು. ಇದನ್ನು ಶಾರೀರಿಕ ಮರಣವೆಂದು ಕರೆಯುವರು.

ಶರೀರ ತನ್ನ ಚೈತನ್ಯ(ಪ್ರಾಣ) ಕಳೆದುಕೊಂಡ ಕೂಡಲೇ, ಆತ್ಮ ಎಂಬ ಅಂಶದೊಂದಿಗೆ ಮುಂದಿನ ಜೀವಿತ ಪ್ರಾರಂಭವಾಗುವುದು. ಪ್ರಾಕೃತನಾದವನು ಆತ್ಮೀಕನಾಗುವನು. ಈ ಆತ್ಮನು ದೇವರು ಕೊಡುವ ನ್ಯಾಯ ತೀರ್ಪಿನವರೆಗೂ ಆತ್ಮನಲ್ಲಿಯೇ ಜೀವಿಸುವನು. ನ್ಯಾಯ ತೀರ್ಪಿನಲ್ಲಿ ಒಂದು ವೇಳೆ ಪಾಪಿ ಎಂದು ಕಂಡುಬಂದಲ್ಲಿ ಆತ್ಮನಿಗೆ ಶಿಕ್ಷೆ ಉಂಟಾಗುವುದು. ಈ ಶಿಕ್ಷೆ ಸಹಿಸಲು ಅಸಾಧ್ಯವಾಗಿರುವುದರಿಂದ ಇದನ್ನೆ ಎರಡನೇ ಮರಣವೆಂದು ಕರೆಯುವರು.

"ನಾನು ಈ ಲೋಕದವನಲ್ಲದ ಪ್ರಕಾರ ನೀವು ಈ ಲೋಕದವರಲ್ಲ" ಎಂಬ ಕ್ರಿಸ್ತನ ಮಾತಿನಂತೆ, ನಾವೆಲ್ಲ ಪ್ರವಾಸಿಗರು ಕೆಲದಿನಗಳವರೆಗೆ ತಂಗಲು ಬಂದವರೆಂದು ಕ್ರೈಸ್ತರು ನಂಬಿರುವರು.

ಈ ಲೋಕ ಶಾಶ್ವತವಲ್ಲ.* ಹಾಗೂ ತಿರುಗಿ ಈ ಲೋಕವನ್ನು ಪ್ರವೇಶಿಸಲಾರೆವು. ಮತ್ತು ಮನುಷ್ಯ ಹುಟ್ಟಿದಾರಭ್ಯ ಬೆನ್ನು ಹತ್ತಿದ ಮರಣ ಆತನಿಗೆ ಈ ಲೋಕದಿಂದ ಮುಕ್ತಿ ದೊರಕಿಸಲು ವಿನಾ ತೊಂದರೆ ನೀಡಲ್ಲ ಹಾಗೂ ತಿರುಗಿ ಬರಲೂ ಅಲ್ಲ ಎಂಬುದು ಸಹಜ ನಂಬಿಕೆಯಾಗಿದೆ.

ಕ್ರೈಸ್ತರಿಗೆ ಮರಣ ಎಂಬುದು ಒಂದು ವಿಶೇಷವಾದ ಸಂಗತಿ. "ಅವರಿಗೆ ಭಯ, ದಿಗ್ ಭ್ರಮೆ, ಚಿಂತೆ, ನಿರಾಶೆ, ದುಃಖ ಮತ್ತು ಶಾಶ್ವತವಾದ ನಷ್ಟವನ್ನು ಉಂಟುಮಾಡುವುದಿಲ್ಲ. ತತ್ ಕ್ಷಣಕ್ಕೆ ದುಃಖ-ಅಗಲಿಕೆ-ನೋವು-ನಷ್ಟವೆಂದು ಕಂಡುಬಂದರೂ ಅದರ ಅಂತ್ಯ ಶಾಶ್ವತವಾದ, ಸಂತೋಷ-ಜಯ ಮತ್ತು ಸೌಭಾಗ್ಯಕರವಾದ ಸ್ಥಿತಿಯೇ ಆಗಿರುತ್ತದೆ."[೧] ಆದುದರಿಂದ ಕ್ರೈಸ್ತ ವಿಶ್ವಾಸಿಗಳ ಮರಣ is not an Accident but Gods Divine Fruitful plan

"We live in a Resurrected christ
Since he cannot die. Neither can we.

ನಾವು ಜೀವಿಸುವುದು ಪುನರುತ್ಥಾನ ಹೊಂದಿದ ಕ್ರಿಸ್ತನಲ್ಲಿಯೇ. ಆತನು ಸಾಯುವುದೇ ಇಲ್ಲ. ನಾವಾದರೂ ಹೇಗೆ ಸತ್ತೇವು?"[೨]

---

೧. ಆತ್ಮಿಕ ಚಿಂತನ, ಪಿ.ನಿರಂಜನ ಕುಮಾರ್, ಪು.೧೦

೨. ಅದೇ, ಪು.೧೧೧

*ಇಲ್ಲಿರುವುದು ಸುಮ್ಮನೆ ಅಲ್ಲಿರುವುದು ನಮ್ಮ ಮನೆ

ಕ್ರೈಸ್ತರಲ್ಲಿ ಪುನರ್ ಜನ್ಮದ ನಂಬಿಕೆ

ಜಗತ್ತಿನಲ್ಲಿರುವ ಮನುಷ್ಯನ ಸ್ಥಿತಿಗೆ ಆತನ ಪೂರ್ವ ಜನ್ಮದ ಕರ್ಮವೇ ಎಂದು ಹಿಂದೂ ಹಾಗೂ ಅನೇಕ ಪೌರ್ವಾತ್ಯ ದೇಶಗಳಲ್ಲಿ ನಂಬಿಕೆ ಇರುವುದು ಕಂಡುಬರುತ್ತದೆ.

ಮರಣದಿಂದ ಜೀವಾತ್ಮನು ನಾಶವಾಗದೆ ಹಾಗೆ ಉಳಿಯುವನೆಂದ ನಂಬಿಕೆಯು ಎಲ್ಲ ಧರ್ಮೀಯರಲ್ಲಿರುವುದು ತಿಳಿದುಬರುತ್ತದೆ. ಈ ರೀತಿ ಉಳಿದ ಜೀವಾತ್ಮನಿಗೆ ಅವನ ಈ ಲೋಕದ ಜೀವಿತದ ಆಧಾರದ ಮೇಲೆ ಶಿಕ್ಷೆ/ಪುನರ್ ಜನ್ಮ/ನರಕ, ಕೊಡಲ್ಪಡುತ್ತದೆಂಬ ನಂಬಿಕೆಯು ಕಂಡುಬರುವುದು.

ಕ್ರೈಸ್ತ ಹಾಗೂ ಇಸ್ಲಾಂ ಧರ್ಮದಲ್ಲಿ ಮಾತ್ರ ಈ ಸಿದ್ಧಾಂತ ಅಥವಾ ನಂಬಿಕೆಗೆ ಆಧಾರವಿಲ್ಲ. ಮರಣದಿಂದ ಜೀವಾತ್ಮನು 'ನಾಶವಾಗದೆ ದೇವರು ಕೊಡುವ ತೀರ್ಪಿಗಾಗಿ ಕಾಯುವವನಾಗಿದ್ದಾನೆ. ಆ ನ್ಯಾಯ ತೀರ್ಪು ಅವರವರ ಪುಣ್ಯಕಾರ್ಯದ ನಿಮಿತ್ತ ಒದಗುವುದರಿಂದ ಆತ್ಮೀಕ ಲೋಕದಲ್ಲಿ ತಾವು ಶಾಶ್ವತವಾಗಿ ಜೀವಿಸುತ್ತೇವೆಂಬ ನಂಬಿಕೆ ಇರುವುದು. ಆದರೆ ತಪ್ಪು ಮಾಡಿದ ಆತ್ಮಗಳಿಗೆ ನಿತ್ಯವಾಗಿ ನರಕ ಪ್ರಾಪ್ತವಾಗುವುದು. ಈ ಆತ್ಮ ಪುನರ್ ಜನ್ಮ ಪಡೆಯಲು ಸಾಧ್ಯವಿಲ್ಲ. ಯಾಕೆಂದರೆ, "ಒಂದು ಸಾರಿ ಸಾಯುವುದೂ ಆ ಮೇಲೆ ನ್ಯಾಯ ತೀರ್ಪು ಮನುಷ್ಯನಿಗೆ ಹೇಗೆ ನೇಮಕವಾಗಿದೆಯೋ ಹಾಗೆಯೇ ಕ್ರಿಸ್ತನು ಸಹ ಬಹುಜನರ ಪಾಪಗಳನ್ನು ಹೊತ್ತು ಕೊಳ್ಳುವುದಕ್ಕೊಸ್ಕರ ಒಂದೇ ಸಾರಿ ಸಮರ್ಪಿತನಾದನು. ತನ್ನನ್ನು ನಿರೀಕ್ಷಿಸಿಕೊಂಡವರಿಗೆ ರಕ್ಷಣೆಯನ್ನುಂಟು ಮಾಡುವುದಕ್ಕೋಸ್ಕರ ಪಾಪ ಸಂಬಂಧವಿಲ್ಲದವನಾಗಿ ಎರಡನೇ ಸಾರಿ ಕಾಣಿಸಿಕೊಳ್ಳುವನು." (ಇಬ್ರ ೯:೨೭) ಎಂದು ಬೈಬಲ್ ತಿಳಿಸುವುದು. ಕುರ್ ಆನ್ ಕೂಡ ಎರಡನೇ ಬರೋಣವನ್ನು ಖಚಿತಪಡಿಸುವುದು.

"ಹಿಂದೂ ಧರ್ಮದ ಪ್ರಕಾರ ೮೪ ಲಕ್ಷ ಯೋನಿಗಳು ಇರುವುದೇ ಸತ್ಯವಾದರೆ, ಇದು ಸ್ಥಿತಿತಾರತಮ್ಯದ ಸಮಸ್ಯೆಯನ್ನು ಬಿಡಿಸಲು ಹೋಗಿ ಜನ್ಮಾಂತರವಾದವನ್ನು ಕಲ್ಪಿಸಿ ಇದ್ದ ಕಷ್ಟವನ್ನು ಇಮ್ಮಡಿ ಮಾಡಿತೆಂದು ಹೇಳಬಹುದು."[೧]

ಜನ್ಮಾಂತರ ಕಥೆಗಳು ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುತ್ತವೆ. ೮ ವರ್ಷದ ಬಾಲಕ ಕರ್ನಾಟಕದಲ್ಲಿ ಹುಟ್ಟಿ ತಾನು ಕಾಶ್ಮೀರದಲ್ಲಿ ಇದ್ದವನು. ನನ್ನ ಮನೆ ಇಲ್ಲಿದೆ, ಇವಳೇ ನನ್ನ ಹೆಂಡತಿ (ವಯಸ್ಸಾದವಳನ್ನು ತೋರಿಸಿ) ಇಂತಹ ಕಛೇರಿಯಲ್ಲಿ ನಾನು ಗುಮಾಸ್ತನಾಗಿದ್ದೆ. ಬೇಕಾದರೆ ನೀವು ದಾಖಲೆಯನ್ನು ನೋಡಿ ಎಂದು ನಡೆದ ಘಟನೆ ಎಂಬಂತೆ ಹೇಳಿದಾಗ, ನಿಜವಾಗಿ ಆ ಹೆಸರಿನ ವ್ಯಕ್ತಿಯ ದಾಖಲೆ ದೊರೆಯುವುದು. ಆಗ ಹೌದು ಈತನು ಹಿಂದಿನ ಜನ್ಮದಲ್ಲಿ ಇಲ್ಲೆ ಇದ್ದವನೆಂದು ನಂಬಬೇಕಾಗುತ್ತೆ. ಇದು ಸತ್ಯವಾಗಿದ್ದರೆ, ಪುನಃ ಈ ಲೋಕದ ಪ್ರಾರಂಭಿಕ ಶಿಕ್ಷಣ ಮೂಲ ಅನುಭವಗಳು ಯಾಕೆ ಬೇಕು? ತಾನು ನೌಕರಿಯಲ್ಲಿದ್ದರೆ ಆ ಜ್ಞಾನ ಎಲ್ಲಿ ಹೋಯಿತು? ಹಿಂದಿನ ಜ್ಞಾನದಿಂದ ಈಗ ಇನ್ನೂ ಹೆಚ್ಚಾದ ಹಾಗೂ ಅನುಭವದ

ವ್ಯಕ್ತಿಯಾಗಿ ಉನ್ನತವಾದುದನ್ನು ಈ ಜನ್ಮದಲ್ಲಿ ಸಾಧಿಸಬಹುದಲ್ಲ. ಆದರೆ ಹೀಗೆ ನಡೆದ ಘಟನೆ ಎಲ್ಲಿಯೂ ಕಂಡುಬರುವುದಿಲ್ಲ. ತನ್ನ ಜನ್ಮದ ಬಗ್ಗೆ ಹೇಳಿದ ವ್ಯಕ್ತಿ ಕೆಲದಿನಗಳ ನಂತರ ಇವುಗಳ ಪರಿವಿಲ್ಲದೆ ಲೋಕದ ಜ್ಞಾನವಿಲ್ಲದೆ ಬೆಳೆದು ದೊಡ್ಡವನಾಗುವುದು ಯಾಕೆ? ಇಲ್ಲಿ ಅವನಿಗೆ ಅರಿವಿಲ್ಲದೆ ಬೇರೊಂದು ದುರಾತ್ಮ ಸಂದರ್ಭೋಚಿತವಾಗಿ ಪ್ರವೇಶ ಮಾಡುವುದು ಕಂಡುಕೊಳ್ಳಬಹುದು.

ದೇವರ ದೃಷ್ಟಿಯಲ್ಲಿ ಮನುಷ್ಯ ಒಮ್ಮೆ ಹುಟ್ಟಿ ಒಮ್ಮೆಯೇ ಸತ್ತು, ತಾನು ಆತ್ಮೀಕ ಶರೀರದಾರಿಯಾಗಲು ಹವಣಿಸುವನು. ಅದರಲ್ಲಿಯೇ ಇರಲು ಪ್ರಯತ್ನಿಸುವನು. ಕಾರಣ ದೇವರು ಮನುಷ್ಯನನ್ನು ತನ್ನ ಸ್ವರೂಪದಲ್ಲಿ ಉಂಟು ಮಾಡಿದನು. ಆತನು ಪಾಪ ಮಾಡಿದ್ದರಿಂದ ಮರಣವನ್ನು ಪಡೆದುಕೊಂಡನು. ತಿರುಗಿ ದೇವರ ಸಾನಿಧ್ಯದಲ್ಲಿ ನಿತ್ಯತ್ವ ಹೊಂದುವುದೇ ದೇವರ ಉದ್ದೇಶವಾಗಿದೆ ಎಂದು ಬೈಬಲ್ ತಿಳಿಸುತ್ತದೆ. ಈ ಹೇಳಿಕೆಯಂತೆ ಮನುಷ್ಯ ತನ್ನ ಜೀವಿತ ಕಾಲದಲ್ಲಿ ಒಳಿತನ್ನು ಮಾಡಿ, ದೇವರ ದೃಷ್ಟಿಯಲ್ಲಿ ನ್ಯಾಯವಾದುದನ್ನು ಕೈಕೊಂಡು ದೇವರ ಸಾನಿಧ್ಯ ಬಯಸುವವನಾಗಿರುವನು. ಇದನ್ನು ತಪ್ಪಿಸುವ ಉದ್ದೇಶದಿಂದ ದೇವರ ವಿರುದ್ಧ ಶಕ್ತಿ (ಸೈತಾನ) ಜನ್ಮಾಂತರದ ಕಲ್ಪನೆ ಹುಟ್ಟಿಸಿ ಈ ಜನ್ಮದಲ್ಲಿ ಕೆಟ್ಟರೇನಾಯಿತು, ಇನ್ನೊಂದು ಜನ್ಮ ಇದೆಯಲ್ಲಾ ಎಂಬ ಉದಾಸೀನತೆ ಬೆಳೆಸುವುದು. ನೀನು ಅನುಭವಿಸುವ ಇಂದಿನ ಜನ್ಮಕ್ಕೆ ನಿನ್ನ ಹಿಂದಿನ ಜನ್ಮದ ಕರ್ಮವೇ ಕಾರಣ ಎಂದು ಹೇಳಿ, ನಿನಗೆ ಏನನ್ನು ಮಾಡಲು ಶಕ್ಯವಿಲ್ಲ, ಎಂದು ಹಾಗೂ ಕರ್ಮವೇ ನಿನ್ನ ಮುಂದಿನ ಜನ್ಮಕ್ಕೆ ನಾಂದಿ ಎಂದು ಬೋಧನೆಗೆ ಆಸ್ಪದ ಉಂಟು ಮಾಡಿದೆ. ಹೀಗೆ ಮುಂಬರುವ ಜನ್ಮಗಳೆಲ್ಲಾ ಕರ್ಮಫಲಕ್ಕಾಗಿ, ಶಿಕ್ಷೆಯ ದಿಸೆಯಿಂದ ಉಂಟಾಗಿದ್ದರೆ, ಇಂಥ ಶಿಕ್ಷೆಯಿಂದ ಪ್ರಯೋಜನವೇನು?

ಕರ್ಮವೇ ಮನುಷ್ಯನ ಜನ್ಮಕ್ಕೆ ಕಾರಣವಾದರೆ ಮನುಷ್ಯನನ್ನು ಹುಟ್ಟಿಸಿದ್ದು ದೇವರೊ? ಕರ್ಮವೊ? ಇಂತಹ ಕರ್ಮದಿಂದ ಮುಕ್ತಿ ಪಡೆಯಲು ಮನುಷ್ಯ ದೇವರನ್ನು ನಂಬಬೇಕೊ? ಅಥವಾ ನೀತಿ ಮಾರ್ಗವನ್ನು ಅನುಸರಿಸಿ ತಾನೇ ಮುಕ್ತನಾಗಬೇಕೋ? ಒಂದು ವೇಳೆ ಹಾಗಾಗುವುದಾದರೆ ಮನುಷ್ಯ ಹಾಗೂ ದೇವನ ಸಂಬಂಧ ಯಾವುದಕ್ಕಾಗಿ? ಮುಕ್ತಿ ಪಡೆದ ವ್ಯಕ್ತಿ ಇರುವುದಾದರು ಎಲ್ಲಿ? ಒಂದು ವೇಳೆ ಪರಮಾತ್ಮನಲ್ಲಿ ಎನ್ನುವುದಾದರೆ ವ್ಯಕ್ತಿಯ ಆತ್ಮಕ್ಕೆ ಅಸ್ತಿತ್ವ ಇಲ್ಲದಾದೀತು! ಹೀಗಾಗುವುದಾದರೆ ಅಷ್ಟೊಂದು ಅವಸರವಾಗಿ ಮುಕ್ತಿ ಪಡೆದು ಅಸ್ತಿತ್ವವನ್ನು ಕಳೆದುಕೊಳ್ಳುವುದಕ್ಕಿಂತ ನಿಧಾನವಾಗಿ ಅಂದರೆ ಕರ್ಮಗಳನ್ನೇ ಹೆಚ್ಚಾಗಿ ಮಾಡಿ ಮುಕ್ತಿ ಎಡೆಗೆ ಸಾಗಬಹುದಲ್ಲ. ಒಂದು ವೇಳೆ ಸಾಗದೆ ಇರುವುದು ಉಚಿತವೆ? ಇಂತಹ ಹತ್ತು ಹಲವು ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಅವಶ್ಯಕತೆ ಇಂದು ಕಂಡುಬರುತ್ತದೆ.

"ಜನ್ಮಾಂತರವಾದದ ಪ್ರಕಾರ ಆಯಾ ಜನ್ಮಗಳನ್ನು ಹೊಂದಿದ ಅಪರಾಧಿಗೆ ತಾನು ಮಾಡಿದ ತಪ್ಪಿನ ಅರಿವಾಗಲಿ, ಶಿಕ್ಷೆಯ ಕಾರಣವಾಗಲಿ, ಅದರ ಉದ್ದೇಶವಾಗಲಿ, ಎಳ್ಳಷ್ಟೂ ಗೊತ್ತಿರುವುದಿಲ್ಲ. ಶಿಕ್ಷೆಯನ್ನು ಹೊಂದಿದವನು ಉತ್ತಮನಾಗಬೇಕೆಂಬ ಉದ್ದೇಶವೂ ಅದರಲ್ಲಿ ಇಲ್ಲ."[೧]

ತಂದೆಯ ಹೊಟ್ಟೆಯಲ್ಲಿ ಹುಟ್ಟಿದ ಮಗನು ಯಾವುದೋ ಒಂದು ಜೀವಾತ್ಮನಾಗಿದ್ದು, ತಾನು ಪೂರ್ವ ಜನ್ಮದಲ್ಲಿ ಮಾಡಿದ ಕರ್ಮ ಫಲವನ್ನು ಉಣ್ಣುವುದಕ್ಕಾಗಿ ಇವನ ಮಗನಾಗಿ ಹುಟ್ಟಿರುವನಲ್ಲದೆ, ತಂದೆಯ ಯಾವ ಅಂಶವು ಅವನಲ್ಲಿಲ್ಲ ಎಂದಂತಾಗುವುದು. ತಂದೆಗೂ ಮಗನಿಗೂ ಅಥವಾ ತಂದೆಯ ಕರ್ಮಕ್ಕೂ, ಮಗನ ಕರ್ಮಕ್ಕೂ ತಿಲಾಂಶವಾದರು ಸಂಬಂಧ ಇರುವುದಿಲ್ಲ. ಹೀಗಾಗಿ ಪುನರ್ ಜನ್ಮವು ತಂದೆ ಮಗನಲ್ಲಿಯ ಪ್ರೇಮ, ವಾತ್ಸಲ್ಯ, ಅನುರಾಗಗಳನ್ನು ಹರಿದೊಗೆದು ಹಾಗೂ ಅವರಿಬ್ಬರಲ್ಲಿರುವ ಜವಾಬ್ದಾರಿಕೆಯನ್ನು ಅಲ್ಲಗಳೆದಂತಾಗುವುದು.

ಈಗಿನ ಸಂಶೋಧನೆಯಂತೆ ತಂದೆ-ತಾಯಿಗಳ ಕಾಯಿಲೆ ಮಕ್ಕಳಿಗೆ ಬರುವುದರಿಂದ ಆನುವಂಶಿಕ ಕಾಯಿಲೆಗಳಾದ ಡೈಯಬೋಟಿಸ್, ಬಿ.ಪಿ, ಏಡ್ಸ್, ಕ್ಷಯ, ಕುಷ್ಠ, ಅಸ್ತಮಾ ಮುಂತಾದವುಗಳನ್ನು ಪಡೆದ ಮಕ್ಕಳು ಯಾವ ಕರ್ಮವನ್ನು ಮಾಡಿರುತ್ತಾರೆ. ಮನುಷ್ಯನ ಸ್ವಭಾವವು ಅವನ ಪೂರ್ವಜರ ಆನುವಂಶಿಕತೆಯನ್ನು ಅನುಸರಿಸಿ ಬರುವುದಲ್ಲದೇ ಕರ್ಮವನ್ನು ಅನುಸರಿಸಿಯಲ್ಲ ಎಂಬುದು ಸ್ಪಷ್ಟ. ಕರ್ಮಕ್ಕೆ ಶಿಕ್ಷೆ ಎನ್ನುವುದರಲ್ಲಿ ಇದ್ದಷ್ಟು ಸತ್ಯಾಂಶ ಕರ್ಮಕ್ಕೆ ಮರುಜನ್ಮವಿದೆ ಎನ್ನುವಲ್ಲಿ ಕಂಡುಬರುವುದು.

ಜನ್ಮಾಂತರವಾದವು ದೇವರ ಸಂಬಂಧವನ್ನು ಪುರಸ್ಕರಿಸುವುದಿಲ್ಲ. ಕರ್ಮಕ್ಕಾಗಿ ಹುಟ್ಟುವಲ್ಲಿ ದೇವರ ಕಾರ್ಯವಾದರು ಏನು? ಒಂದು ವೇಳೆ ದೇವರು ಮನುಷ್ಯನ ಪಾಪಗಳನ್ನು, ಆತನ ಕರ್ಮಗಳನ್ನು ನಿವಾರಿಸುವವನಾಗಿರುವವನಾದರೆ ಆಗ ದೇವರ ಸ್ಥಾನಕ್ಕೆ ಬೆಲೆ ಹಾಗೂ ಗೌರವವಿದೆ.

ದೇವರು ಪ್ರೀತಿ ಸ್ವರೂಪಿ, ಆತನು ದಯೆಯನ್ನು, ಕ್ಷಮೆಯನ್ನು ತೋರಿಸುವವನು. ಆತನಿಂದಲೇ ಮನುಷ್ಯನಿಗೆ ಮುಕ್ತಿ ಎಂದು ನಂಬುವುದಾದರೆ ಒಂದೇ ಜನ್ಮದಲ್ಲಿ ದೇವರಿಂದ ಅದನ್ನು ಮನುಷ್ಯ ಪಡೆಯಲು ಅಸಾಧ್ಯವೇ? ಕ್ರಿಸ್ತನು ನಮ್ಮ ಪಾಪಗಳನ್ನು ನಿವಾರಿಸಿ ನಮ್ಮನ್ನು ನಿತ್ಯತ್ವದಲ್ಲಿ, ದೇವರ ಸನ್ನಿಧಾನದಲ್ಲಿ ನಿರ್ದೋಷಿಗಳು, ನಿಷ್ಕಪಟಿಗಳಾಗಿ ಮಾಡಲು ಮನುಷ್ಯನ ಪಾಪಗಳನ್ನು ತನ್ನ ಮೇಲೆ ಹೊತ್ತುಕೊಂಡು ಶಿಲುಬೆಯಲ್ಲಿ ರಕ್ತ ಸುರಿಸಿ, ಆ ರಕ್ತ ಪ್ರೋಕ್ಷಣೆಯಿಂದ ನಮ್ಮ ಕರ್ಮ ಪಾಪಗಳನ್ನು ತೊಳೆದು ಶುದ್ಧೀಕರಿಸಿದ್ದಾನೆ. ಆತನೆ ಮುಕ್ತಿದಾತನು ಎಂದು ಕ್ರೈಸ್ತರು ನಂಬುತ್ತಾರೆ.

ಪಾಪೋಹಂ ಪಾಪಕರ್ಮಂ
ಪಾಪತ್ಮನ್ ಪಾಪಸಂಭವ

ಎನ್ನುವಂತೆ ಪಾಪಿಯಾದ ಮಾನವನು ಪಾಪವನ್ನೇ ಮಾಡುವವನಾಗಿದ್ದಾನೆ. (ಇದು ಎಲ್ಲಿಯವರೆಗೆ) ತಾನು

೧. ಚನ್ನಪ್ಪ ಉತ್ತಂಗಿ, ಸಮಗ್ರ ಸಾಹಿತ್ಯ, ಭಾಗ ೧, ರೆ.ಜೆ.ಎಂ.ಜೋಗುಳ, ಪು.೩೩೭

ಮಾಡಿದ ಪಾಪದ ಪರಿಹಾರಕ್ಕೆ ಕುರಿ, ಕೋಳಿ, ಕೋಣಗಳನ್ನು ಬಲಿಕೊಡುವುದು ಎಲ್ಲಿಯವರೆಗೆ. ಇದಕ್ಕಾಗಿ ಕ್ರಿಸ್ತನು ಸಾಮುವೇದದ ಈ ಉಕ್ತಿಯನ್ನು ನೆರವೇರಿಸಿದನೆಂದು ಕ್ರೈಸ್ತರು ಹೇಳುವವರಾಗಿದ್ದಾರೆ.

'ರಕ್ತಪ್ರೋಕ್ಷಣಂ ಪಾಪಪರಿಹಾರಂ

ತದ್ ರಕ್ತಂ ಪರಮಾತ್ಮನ ಪುಣ್ಯದಾನ ಬಲಿಯಾಗಂ'

ರಕ್ತ ಪ್ರೋಕ್ಷಣವಿಲ್ಲದೆ ಪಾಪ ಪರಿಹಾರವಿಲ್ಲ, ಆದರೆ ಹಾಗೆ ಪಾಪ ಪರಿಹಾರ ಮಾಡುವ ರಕ್ತ ಅದು ಪರಮಾತ್ಮನದೆ ಆಗಿರಬೇಕು ಎಂದು ಸಾಮುವೇದ ತಿಳಿಸುವುದು.

ಆ ದೇವರೆ ಯೇಸು ಕ್ರಿಸ್ತನ ರೂಪದಲ್ಲಿ ಈ ಲೋಕಕ್ಕೆ ಬಂದು, ಸಕಲ ಮಾನವರ ಪಾಪಕ್ಕಾಗಿ ನಾನು ನನ್ನ ರಕ್ತವನ್ನು ಸುರಿಸಿ ಮನುಷ್ಯನನ್ನು ಪಾಪದಿಂದ ಬಿಡುಗಡೆ ಮಾಡುವೆನೆಂದು ಬೋಧಿಸಿರುವನು.

ಅಸತೋಮಾ ಸದ್ಗ್ಮಯ

ತಮಸೋಮ ಜೋತಿರ್ಗಮಯ

ಮೃತೋರ್ಮ ಅಮೃತಂಗಮಯ

ಅಸತ್ಯದಿಂದ ಸತ್ಯದೆಡೆಗೆ, ಕತ್ತಲೆಯಿಂದ ಬೆಳಕಿನೆಡೆಗೆ ನಡೆಸುವವನು. ತಾನು ಮೃತ್ಯವನ್ನು ಜಯಿಸಿ ಮೂರನೆ ದಿನದಲ್ಲಿ ಸತ್ತವರೊಳಗಿಂದ ಕ್ರಿಸ್ತನು ಎದ್ದು ಬಂದಿರುವುದರಿಂದ ಈತನಿಂದಲೇ ಅಮೃತತ್ವ ಸಾಧ್ಯ ಈತನಿಲ್ಲದೆ ಮುಕ್ತಿ ಸಾಧ್ಯವಿಲ್ಲ ಎನ್ನುವರು.* ಕ್ರಿಸ್ತನು ಈ ಲೋಕಕ್ಕೆ ಬಂದದ್ದು ಆತ್ಮೀಕ ಮರಣದಿಂದ ಪಾರು ಮಾಡಲು, ಶಾರೀರಿಕ ಮರಣದಿಂದಲ್ಲ.

"ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ

ನನ್ನನ್ನು ನಂಬುವವನು ಸತ್ತರೂ ಬದುಕುವನು

ಮತ್ತು ಬದುಕುತ್ತಾ ನನ್ನನ್ನು ನಂಬುವ ಪ್ರತಿ

ಯೊಬ್ಬನೂ ಎಂದಿಗೂ ಸಾಯುವುದಿಲ್ಲ."(ಸತ್ಯವೇದ, ಯಾಹಾ ೧೧:೨೫)

ಎಂಬ ಕ್ರಿಸ್ತನ ಮಾತಿನಿಂದ ಸ್ಪಷ್ಟವಾಗುತ್ತದೆ. ಯೇಸುವು ಈ ಲೋಕದಲ್ಲಿ ಬಡವರ ಕುಟುಂಬದಲ್ಲಿ ಹುಟ್ಟಿ, ೩೩½ ವರ್ಷ ಮಾತ್ರ ಜೀವಿಸಿ, ಜನರಿಂದ ಹಿಂಸೆಗೆ ಒಳಗಾಗಿ, ಶಿಲುಬೆಯ ಮೇಲೆ ತನ್ನ ಪ್ರಾಣವನ್ನು ಕೊಡುವುದು ಮಾತ್ರವಲ್ಲದೆ, ಸತ್ತು ಮೂರನೆ ದಿನದಲ್ಲಿ ಎದ್ದು ಬಂದು ತಿರುಗಿ ತನ್ನ ಶಿಷ್ಯರಿಗೆ, ಆತ್ಮೀಯರಿಗೆ ಕಾಣಿಸಿಕೊಂಡ ನಂತರವೇ ಕ್ರಿಸ್ತನ ಶಿಷ್ಯರು ಪುನರುತ್ಥಾನವನ್ನು ನಂಬುವವರಾದರು. ಯೇಸು ಕ್ರಿಸ್ತನು ಸಾವನ್ನು ಜೈಸಿದ್ದರಿಂದ ಮರಣದ ಕುರಿತು ಮೂಲದಲ್ಲಿದ್ದ ಕಲ್ಪನೆಗಳೆಲ್ಲವೂ ಬದಲಾದವು.

*ನಪುತ್ರಸ್ಯಗತಿರ್ನಾಸ್ತಿ ಪುತ್ರನಿಲ್ಲದೆ ಸ್ವರ್ಗಪ್ರಾಪ್ತಿ ಆಗಲಾರದು. ಅಂದರೆ ದೇವರ ಪುತ್ರ ಕ್ರಿಸ್ತನಿಂದ ಮಾತ್ರ ಸ್ವರ್ಗ ಪ್ರಾಪ್ತಿ ಎನ್ನುತ್ತಾರೆ ಕ್ರೈಸ್ತರು. ಕ್ರೈಸ್ತ ಧರ್ಮದಲ್ಲಿ ದೇವರ ಪುತ್ರ ಕ್ರಿಸ್ತನು ದೇವರೊಂದಿಗಿನ ಜೈವಿಕ ಸಂಬಂಧದ ಪುತ್ರನಲ್ಲ, ಆತ್ಮೀಕ ಸಂಬಂಧದ ಪುತ್ರತ್ವದ ಸಂಕೇತ

ಕ್ರಿಸ್ತನು ನಾನು ದೇವರಿಂದ ಕಳುಹಿಸಲ್ಪಟ್ಟವನು. ನನ್ನ ಮಾತು ನಂಬಿರಿ ಎಂದು ಅನೇಕ ಸಾಮ್ಯ, ದೃಷ್ಟಾಂತದ ಮೂಲಕವಾಗಿ ಪರಲೋಕದ ಜ್ಞಾನದ ಕುರಿತು ಶಿಷ್ಯರಿಗೆ ಹಾಗೂ ನೆರೆದ ಜನರಿಗೆ ಹೇಳುತ್ತಿದ್ದನು. ಆತನ ಮಾತನ್ನು ಜನರು ಗ್ರಹಿಸಲಿಲ್ಲ. ನಾನು ಸತ್ತು ತಿರುಗಿ ಮೂರನೆ ದಿನದಲ್ಲಿ ಎದ್ದು ಬರುತ್ತೇನೆಂದು ಶಿಷ್ಯರಿಗೆ ಹೇಳಿದ್ದರೂ ಈ ವಿಷಯದಲ್ಲಿ ಅವರು ಅಜ್ಞಾನಿಗಳು ಹಾಗೂ ಅವಿಶ್ವಾಸಿಗಳಾಗಿದ್ದರು. ನಂತರ ಕ್ರಿಸ್ತನು ಎದ್ದ ಬಂದಿದ್ದನ್ನು ಕಂಡು ಶಿಷ್ಯರು ಮರಣ-ಪುನರುತ್ಥಾನದ ಕುರಿತು ಬೋಧಿಸಲು ತೊಡಗಿದರು.

ಕ್ರಿಸ್ತನು ಎದ್ದು ಬಂದೇ ತೀರುವನೆಂದು ಶಿಷ್ಯರು ನಂಬದೆ ಇದ್ದರೂ ಆತನನ್ನು ಶಿಲುಬೆಗೆ ಹಾಕಿದ, ಹಿಂಸೆಪಡಿಸಿದ ವೈರಿಗಳು ಬಲವಾಗಿ ನಂಬಿದ್ದರು. ಆದುದರಿಂದ ಅರಸ ಪಿಲಾತನಿಂದ ಕ್ರಿಸ್ತನ ಸಮಾಧಿ ಬಗ್ಗೆ ನಡೆದ ಸಂವಾದ ಬೈಬಲ್‌ನಲ್ಲಿ ಹೀಗಿದೆ "ಮರುದಿನ ಅಂದರೆ ಸೌರಣೆಯ ಹಬ್ಬದ ಹಿಂದಿನ ದಿನ ಕಳೆದ ಮೇಲೆ ಮಹಾಯಾಜಕರು, ಪರಿಸಾಯರು ಪಿಲಾತನ ಬಳಿಗೆ ಕೂಡಿಬಂದು, ದೊರೆಯೇ ಆ ಮೋಸಗಾರನು ಬದುಕಿದ್ದಾಗ ತಾನು ಮೂರು ದಿನದ ಮೇಲೆ ಏಳುತ್ತೇನೆ ಅಂತ ಹೇಳಿದ್ದು ನಮ್ಮ ನೆನಪಿಗೆ ಬಂತು. ಆದಕಾರಣ ಮೂರನೆಯ ದಿನದ ನತಕ ಸಮಾಧಿಯನ್ನು ಭದ್ರಮಾಡಿ ಕಾಯುವುದಕ್ಕೆ ಅಪ್ಪಣೆ ಕೊಡಬೇಕು. ಇಲ್ಲದಿದ್ದರೆ ಅವನ ಶಿಷ್ಯರು ಬಂದು ಅವನನ್ನು ಕದ್ದುಕೊಂಡು ಹೋಗಿ ಸತ್ತವನು ಬದುಕಿ ಬಂದಿದ್ದಾನೆ ಎಂದು ಹೇಳಾರು... ಅಂದರು ಪಿಲಾತನು ಅವರಿಗೆ ಕಾವಲುಗಾರರನ್ನು ತಕ್ಕೊಳ್ಳಿ ಹೋಗಿ ನಿಮಗೆ ತಿಳಿದ ಹಾಗೆ ಭದ್ರಮಾಡಿ ಕಾಯಿರಿ ಎಂದು ಹೇಳಲಾಗಿ ಅವರು ಹೊರಟು ಕಾವಲುಗಾರರೊಂದಿಗೆ ಆ ಕಲ್ಲಿಗೆ ಮುದ್ರಿಹಾಕಿ ಸಮಾಧಿಯನ್ನು ಭದ್ರಮಾಡಿದರು"(ಬೈಬಲ್ ಮತ್ತಾ ೨೭:೬೨-೬೬).

ಸತ್ತವರು, ಪುನರ್ ಜನ್ಮ ಪಡೆದು ಈ ಲೋಕಕ್ಕೇ ಬರದೇ, ಪರಲೋಕದಲ್ಲಿ ಆತ್ಮೀಕ ಶರೀರದಾರಿಗಳಾಗಿದ್ದು ದೇವರ ನ್ಯಾಯ ತೀರ್ಪಿನವರೆಗೆ ಕಾದು, ಆತನಿಂದ ದೊರೆಯುವ ನಿತ್ಯಜೀವಕ್ಕಾಗಿ ಹಾತೊರೆಯುವರು. ಒಂದು ವೇಳೆ ಈ ಲೋಕದ ಜೀವಿತದಲ್ಲಿ ತಪ್ಪು ಮಾರ್ಗದಲ್ಲಿ ನಡೆದಿದ್ದರೆ ನಮ್ಮ ಆತ್ಮಕ್ಕೆ ನರಕ ಪ್ರಾಪ್ತವಾಗುವುದು ಶಾಶ್ವತವಾದ ನಿತ್ಯಜೀವಕ್ಕೆ ಬದಲಾಗಿ ನರಕದಲ್ಲಿ ಬೀಳಬೇಕೆಂಬುದು ಕ್ರೈಸ್ತರ ನಂಬಿಕೆಯಾಗಿದೆ.

ಮರಣೋತ್ತರ ಕ್ರಿಯಾ ವಿಧಿಗಳು

ತೀರಿ ಹೋದ ವ್ಯಕ್ತಿಗೆ ಈ ಲೋಕದಲ್ಲಿ ನಡೆಸುವ ಅಂತಿಮ ಸಂಸ್ಕಾರಗಳು ಆಯಾ ಧರ್ಮದಲ್ಲಿ ವಿವಿಧ ಬಗೆಗಳಾಗಿ ಕಾಣುತ್ತವೆ. ಹೀಗೆಯೇ ನಡೆಯಬೇಕೆಂಬ ಕಟ್ಟುನಿಟ್ಟಿನ ನಿಯಮಗಳು ಹೆಚ್ಚಾಗಿ ಕಂಡುಬರದೆ ಇದ್ದರೂ, ಒಂದು ಧರ್ಮವನ್ನು ಅನುಸರಿಸುವವರಲ್ಲಿಯೂ ಮರಣೋತ್ತರ ಕ್ರಿಯೆಗಳ ಸಡಿಲಿಕೆ ಕಂಡುಬರುವುದು.

ಆದರೆ ಕ್ರೈಸ್ತಧರ್ಮದಲ್ಲಿನ ಮರಣೋತ್ತರ ಕ್ರಿಯೆಯಲ್ಲಿ ಗುರುವಿನ ಪಾತ್ರ ಪ್ರಮುಖವಾಗಿದೆ. ಗುರುವಿನ ಆಣತಿಯಂತೆಯೇ ಎಲ್ಲವು ಜರುಗುವುದು.

ದೇವರಿಂದುಂಟಾದ ಮಾನವ ಶರೀರ ಆತನ ಶ್ವಾಸದಿಂದ ಬದುಕುವಂತಾಯಿತು. ಆ ಶ್ವಾಸ ತಿರುಗಿ ದೇವರಲ್ಲಿ ಲೀನವಾದಾಗ ಈ ಶರೀರ ಮಣ್ಣಿಗೆ ಸೇರಲೇಬೇಕು. ಯಾಕೆಂದರೆ, ಮಣ್ಣಿನಿಂದಲೇ ದೇವರು ಮನುಷ್ಯನನ್ನು ಉಂಟು ಮಾಡಿರುವನೆಂಬ ನಂಬಿಕೆ. ಆದುದರಿಂದ ಮಣ್ಣಿಗೆ ಆ ದೇಹ ಸೇರಿಸಲು ದೇವ ಸಮಾನವಾದ ಅಥವಾ ದೇವ ಭಕ್ತನಾದ ಗುರುವು ಸಂಸ್ಕಾರ ಕಾರ್ಯ ನಡೆಸುವುದು ಉಚಿತ ಎಂಬ ಭಾವನೆ ಕಂಡುಬರುವುದು.

ಜೀವ ಕಳೆದುಕೊಂಡ ವ್ಯಕ್ತಿಯನ್ನು ಗೌರವ ಆದರಗಳೊಂದಿಗೆ ಸಂಸ್ಕಾರಕ್ಕೆ ಸಿದ್ಧಗೊಳಿಸಲಾಗುವುದು. (ಯಹೂದ್ಯರ ಸಂಪ್ರದಾಯದಂತೆ) ತೀರಿ ಹೋದ ಸುದ್ದಿಯನ್ನು ಚರ್ಚಿನ ಮುಖ್ಯ ಗುರುಗಳಿಗೆ ತಿಳಿಸಿದಾಗ ಅವರ ಅಪ್ಪಣೆಯಂತೆ ಚರ್ಚಿನ ಘಂಟೆ ಬಾರಿಸುವುದು. ಈ ಘಂಟೆಯ ಲಯ ಆರಾಧನೆಯ ಸಪ್ಪಳದಂತಿರದೆ, ಬಿಟ್ಟು ಬಿಟ್ಟು ನಾದ ಕೇಳುವಂತೆ ಬಾರಿಸಲಾಗುವುದು. ಈ ಬಗೆಯ ನಾದ ಕೇಳುಗರಿಗೆ ಅದು ಸಾವಿನ ಸುದ್ದಿ ಎಂಬ ಸಂಖ್ಯಾತವನ್ನು ಕೊಡುತ್ತದೆ. ಇದರಿಂದ ಜನರಿಗೆ ಸಾವು ಸಂಭವಿಸಿದ ಬಗ್ಗೆ ತಿಳಿದುಬರುವುದು. ಮತ್ತು ಚರ್ಚ್ ಪರಿಚಾರಕನಿಂದ ನೋಟೀಸ್ ಮೂಲಕ ಮನೆ ಮನೆಗೆ ಸತ್ತ ಸುದ್ದಿ ತಲುಪಿಸಲಾಗುವುದು. ಇತ್ತೀಚಿನ ದಿನದಲ್ಲಿ ದೂರವಾಣಿ ಮೂಲಕವಾಗಿ ಸಾವಿನ ಸುದ್ದಿ ಬಿತ್ತರಿಸಲಾಗುತ್ತದೆ.

ಬಂಧುಗಳು ಆತ್ಮೀಯರು ಸೇರಿ ಶವಕ್ಕೆ ಸ್ನಾನ ಮಾಡಿಸಿ ಸುಗಂಧ ದ್ರವ್ಯ ಸಿಂಪಡಿಸಿ, ಶವವನ್ನು ಹೊಸ ಬಿಳಿ ಬಟ್ಟೆಯಿಂದ ಸುತ್ತುವರು. ಕೆಲವೊಂದು ಸಾರಿ ಮೃತ ವ್ಯಕ್ತಿಯ ಪ್ರೀಯ ಉಡುಪನ್ನು ಹಾಕುವರು. ನಂತರ ಭಜನೆ ಗೀತಗಳಿಂದ ಆ ಮನೆಯ ಸಾಂತ್ವನತೆಯನ್ನು ಹಾಗೂ ಶಾಂತತೆಯನ್ನು ಕಾಯ್ದುಕೊಳ್ಳಲು ಅನುಕೂಲವಾಗುವ ಪ್ರಾರ್ಥನೆ ಮುಂತಾದವುಗಳಿಂದ ವಾತಾವರಣದ ಗಂಭೀರತೆಯನ್ನು ಕಾಪಾಡುವರು. ಜನರು ಹೂವು-ಮಾಲೆಗಳಿಂದ ಮೃತರ ಶರೀರಕ್ಕೆ ತಮ್ಮ ಪ್ರೀತಿಯ ದ್ಯೋತಕವಾದ ಅಂತಿಮ ನಮನವನ್ನು ಸಲ್ಲಿಸುವರು.

ಮನುಷ್ಯ ಈ ಲೋಕದ ಯಾತ್ರೆಯನ್ನು ಮುಗಿಸಿದ ಮೇಲೆ ಆ ವ್ಯಕ್ತಿ ಲೋಕದ ಸಂಬಂಧ ಕಳೆದುಕೊಂಡರೂ, ತಿರುಗಿ ತೀರಿ ಹೋದವರನ್ನು ಬದುಕಿದವರು ಪುನಃ ಸಂಧಿಸಲು ಪರಲೋಕದಲ್ಲಿ ಅವಕಾಶವಿದೆ ಎಂಬುದು ಕ್ರೈಸ್ತರ ನಂಬಿಕೆ. ಹಿಂದೂ ಧರ್ಮದ ಕಲ್ಪನೆಗೆ ಈ ಅವಕಾಶವಿಲ್ಲ. ತೀರಿ ಹೋದ ವ್ಯಕ್ತಿ ಪಾಪ ಪುಣ್ಯಗಳ ಹಾಗೂ ತನ್ನ ಕರ್ಮದ ಆಧಾರದ ಮೇಲೆ ಪುನರ್ ಜನ್ಮ ಪಡೆಯುವುದರಿಂದ ಪರಲೋಕದಲ್ಲಿ ಬಹುಕಾಲ ಇರಲು ಸಾಧ್ಯವಿಲ್ಲ. ಹಾಗೂ ಈ ಲೋಕದಲ್ಲಿಯ

ವ್ಯಕ್ತಿಗಳನ್ನು ಪರಲೋಕದಲ್ಲಿ ಸಂಧಿಸಲು ಅವಕಾಶವಿಲ್ಲದೇ ಭೂಲೋಕದ ಯಾವ ಸಂಬಂಧವನ್ನು ಪುನಃ ಕಾಣುವುದು ಅಸಾಧ್ಯ.

ಯೇಸು ಕ್ರಿಸ್ತನು ಸತ್ತು ಹೋದ ಬಡಲಾಜರನ ಕಥೆಯನ್ನು ಹೇಳಿರುವುದನ್ನು ಗಮನಿಸಿದರೆ,* ಯೇಸು ಕ್ರಿಸ್ತನು ಎರಡನೇ ಸಾರಿ ಈ ಲೋಕಕ್ಕೆ ತಿರುಗಿ ಬಂದು ಬದುಕಿದವರಿಗೂ, ಸತ್ತವರಿಗೂ ನ್ಯಾಯ ವಿಚಾರಣೆ ಮಾಡುವನು. ಅಲ್ಲಿಯವರೆಗೆ ಸತ್ತವರು ತಮ್ಮ ಭೂಲೋಕದ ಜೀವಿತಕ್ಕೆ ತಕ್ಕಂತೆ ಪರಲೋಕದಲ್ಲಿ ದೊರೆಯುವ ಸ್ಥಳಗಳಲ್ಲಿ ವಿಶ್ರಾಂತಿ ಪಡೆಯುವರೆಂದು ಕಂಡುಬರುವುದು.

ಸತ್ತವರನ್ನು ಪುನಃ ಕಾಣುವೆವೆಂಬ ಭರವಸೆ ಮತ್ತು ಈ ಲೋಕವನ್ನು ತ್ಯಜಿಸಿದವರು ಪರಲೋಕದ ಮಾರ್ಗಿಗಳು ಇವರಿಗೆ ಅಂತಿಮ ನಮನ ಈಯುವುದು ಗೌರವಯುಕ್ತವಾದುದೆಂದು ಭಾವಿಸಲಾಗುವುದು.

ಇಲ್ಲಿಯವರೆಗೆ ಈ ಲೋಕ ತ್ಯಜಿಸಿದ ಯಾವ ವ್ಯಕ್ತಿಯೂ ತಿರುಗಿ (ಪುನರ್ ಜನ್ಮಪಡೆದು) ಬರಲಿಲ್ಲ, ಅವರು ಕ್ರಿಸ್ತನು ಕೊಡುವ ನ್ಯಾಯ ತೀರ್ಪಿಗಾಗಿ ಕಾಯುತ್ತಿರುತ್ತಾರೆ ಎಂದು ನಂಬಿಕೆ ಇರುವುದರಿಂದ ಪುನರ್ ಜನ್ಮಕ್ಕೆ ಅವಕಾಶವಿಲ್ಲ. ಕ್ರಿಸ್ತನು ಸತ್ತು, ಎದ್ದು ತಿರುಗಿ ಬದುಕುತ್ತಿರುವುದರಿಂದ ನಾವು ಸತ್ತ ನಂತರ ಪುನಃ ಶಾಶ್ವತವಾಗಿ ಬದುಕುವೆವೆಂಬ ಸತ್ಯಾಂಶ ಬೈಬಲ್ ಆಧಾರದಿಂದ ಸ್ಪಷ್ಟ. ಆದುದರಿಂದ ಕ್ರಿಸ್ತನು ಹೀಗೆ ಹೇಳುತ್ತಾನೆ. "ನಾನು ಬದುಕುವುದರಿಂದ ನೀವು ಬದುಕುವಿರಿ" ಇದೇ ಸತ್ಯವನ್ನು ಆತನು ಶಿಷ್ಯ ಸಂತ್ ಪೀಟರ್ "ಯೇಸು ಕ್ರಿಸ್ತನನ್ನು ಸತ್ತವರೊಳಗಿಂದ ಎಬ್ಬಿಸಿದ್ದರಲ್ಲಿ ತನ್ನ ಮಹಾಕರುಣಾನುಸಾರವಾಗಿ ನಮ್ಮನ್ನು ತಿರುಗಿ ಜೀವಿಸುವಂತೆ ಮಾಡಿ ಜೀವಕರವಾದ ನಿರೀಕ್ಷೆಯನ್ನು ನಮ್ಮಲ್ಲಿ ಹುಟ್ಟಿಸಿದ್ದಾನೆ."[೧]ಎಂದು ಹೇಳಿದ್ದಾನೆ. ನಾವು ಸತ್ತು ಪುನಃ ದೇವರೊಂದಿಗೆ ಜೀವಿಸುತ್ತೇವೆ ಎಂಬ ಧೃಢ ಕಲ್ಪನೆಯನ್ನು ಕ್ರೈಸ್ತನು ಹೊಂದಲು ಆಧಾರವಾಗಿರುವ ಬೈಬಲ್ ಉಕ್ತಿಗಳನ್ನು ಈ ಕೆಳಗಿನಂತೆ ಗಮನಿಸಬಹುದು.

೧. "ಒಬ್ಬ ಮನುಷ್ಯ(Adam)ನಿಂದಲೇ ಪಾಪವೂ, ಪಾಪದಿಂದ ಮರಣವೂ, ಲೋಕದೊಳಗೆ ಸೇರಿದವು. ಎಲ್ಲರೂ ಪಾಪ ಮಾಡಿದ್ದರಿಂದ ಮರಣವು ಹೀಗೆ ಎಲ್ಲರಿಗೂ ವ್ಯಾಪಿಸಿತು." -ರೊಮಾ ೫:೧೨

೨. "ಕ್ರಿಸ್ತ ಯೇಸುವಿನಲ್ಲಿರುವವರಿಗೆ ಅಪರಾಧ ನಿರ್ಣಯವು ಈಗ ಇಲ್ಲವೇ ಇಲ್ಲ, ಯಾಕೆಂದರೆ ಜೀವವನ್ನುಂಟು ಮಾಡುವ ಪವಿತ್ರಾತ್ಮದಿಂದ ನಿಯಮವು, ನಿನ್ನನ್ನು ಪಾಪ ಮರಣಗಳಿಗೆ ಕಾರಣವಾದ ನಿಯಮದಿಂದ ಕ್ರಿಸ್ತ ಯೇಸುವಿನ ಮೂಲಕ ಬಿಡಿಸಿತು." ರೂಮಾ ೮:೧-೨

೩. ಕರ್ತನು (God) ಇಂತೆನ್ನುತ್ತಾನೆ. ಹೆದರಬೇಡ ನಾನು (ಕ್ರಿಸ್ತನು) ಮೊದಲನೆಯವನು ಕಡೆಯವನೂ ಸದಾ ಜೀವಿಸುವವನೂ ಆಗಿದ್ದೇನೆ, ಸತ್ತವನಾದೆನು ಮತ್ತು ಇಗೋ ಯುಗ ಯುಗಾಂತರಗಳಲ್ಲಿಯೂ ಬದುಕುವವನಾಗಿದ್ದೇನೆ. ಪ್ರಕಟಣೆ ೧: ೧೭-೧೮

೧. ಸತ್ಯವೇದ ಪೇತ್ರ ೧, ೧:೩

* ಸತ್ಯವೇದ ಯೂಹಾ, ೧೪:೧೯

೪. "ಕ್ರಿಸ್ತನು ಸತ್ತವರೊಳಗಿಂದ ಎದ್ದು ಬಂದೇ ಇದ್ದಾನೆ. ನಿದ್ರೆ(ಸಾವು) ಹೋದವರಲ್ಲ ಪ್ರಥಮ ಫಲವಾದನು. ಮನುಷ್ಯನ ಮೂಲಕ ಮರಣವು ಉಂಟಾದ ಕಾರಣ ಮನುಷ್ಯನ(ಕ್ರಿಸ್ತನ) ಮೂಲಕ ಸತ್ತವರಿಗೆ ಪುನರುತ್ಥಾನ ಉಂಟಾಗುವುದು. ಯಾವ ಪ್ರಕಾರ ಆದಾಮನ ಸಂಬಂಧದಿಂದ ಎಲ್ಲರೂ ಸಾಯುವವರಾದರೋ ಅದೇ ಪ್ರಕಾರ ಕ್ರಿಸ್ತನ (ಕೊನೆ ಆದಾಮ) ಸಂಬಂಧದಿಂದ ಎಲ್ಲರೂ ಜೀವಿತರಾಗುವರು." ಕೊರೆ ೧೫:೨೦-೨೨

೫. ಪರಲೋಕದಿಂದ ಒಂದು ಶಬ್ದವು ನನಗೆ ಕೇಳಿಸಿತು ಅದು, ಇಂದಿನಿಂದ ಕರ್ತನ ಭಕ್ತರಾಗಿ ಸಾಯುವವರು ಧನ್ಯರು ಎಂಬುದಾಗಿ ಬರೆ ಎಂದು ನನಗೆ ಹೇಳಿತು. ಅದಕ್ಕೆ ಆತ್ಮನು ಹೌದು ಅವರು ಧನ್ಯರೇ; ಅವರ ಕಷ್ಟ ತೀರಿತು ಅವರಿಗೆ ವಿಶ್ರಾಂತಿಯಾಗುವುದು. ಅವರ ಸುಕೃತ್ಯಗಳು ಅವರೊಡನೆ ಬರುವುವು ಎಂದು ಹೇಳುತ್ತಾನೆ." ಪ್ರಕಟಣೆ - ೧೪:೧೩

೬. "ಮನುಷ್ಯನ ಆಯುಷ್ಕಾಲವು ಹುಲ್ಲಿನಂತಿದೆ. ಅವನು ಅಡವಿಯ ಹೂವಿನ ಹಾಗೆ ಶೋಭಿಸುತ್ತಾನೆ. ಗಾಳಿ ಬಡಿಯುತ್ತಲೆ ಅದು ಹೋಗುವುದು ಅದರ ಸ್ಥಳವು ಅದನ್ನು ತಿರುಗಿ ಕಾಣುವುದಿಲ್ಲ" ಕೀರ್ತನೆ: ೧೦೩ : ೧೫-೧೬

೭. ನೀನು ಮನುಷ್ಯರನ್ನು ಪ್ರವಾಹದಿಂದ ಬಡಕೊಂಡು ಹೋಗುತ್ತಿ ಅವರು ನಿದ್ರೆಗೆ ಸಮಾನರೇ, ಅವರು ಹೊತ್ತಾರೆಯಲ್ಲಿ ಚಿಗುರುವ ಹುಲ್ಲಿನಂತಿದ್ದಾರೆ. ಅದು ಉದಯದಲ್ಲಿ ಬೆಳೆದು ಹೂ ಬಿಡುತ್ತದೆ. ಸಂಜೆಯಲ್ಲಿ ಉದುರಿ ಒಣಗಿ ಹೋಗುತ್ತದೆ... ನಮ್ಮ ಆಯಷ್ಕಾಲವು ಎಪ್ಪತ್ತು ವರ್ಷ ಬಲ ಹೆಚ್ಚಿದರೆ ಎಂಭತ್ತು, ಕಷ್ಟ ಸಂಕಟಗಳೇ ಅದರ ಆಡಂಬರ ಅದು ಬೇಗನೆ ಗತಿಸಿ ಹೋಗುತ್ತದೆ ನಾವು ಹಾರಿ ಹೋಗುತ್ತೇವೆ."

೮. " ಸಮಾಧಿಗಳಲ್ಲಿರುವವರೆಲ್ಲರೂ ಆತನ(ಕ್ರಿಸ್ತನ) ಧ್ವನಿಯನ್ನು ಕೇಳಿ ಎದ್ದು ಹೊರಗೆ ಬರುವ ಕಾಲ ಬರುತ್ತದೆ. ಒಳ್ಳೆದನ್ನು ಮಾಡಿದವರಿಗೆ ಜೀವಕ್ಕಾಗಿ ಪುನರುತ್ಥಾನವಾಗುವುದು. ಕೆಟ್ಟದ್ದನ್ನು ನಡೆಸಿದವರಿಗೆ ತೀರ್ಪಿಗಾಗಿ ಪುನರುತ್ಥಾನವಾಗುವುದು." ಯಾಹಾ ೫:೨೯

೯. "ಕರ್ತನು ತಾನೆ ಆಜ್ಞಾಘೋಷದೊಡನೆಯೂ ಪ್ರಧಾನ ದೂತನ ಶಬ್ದದೊಡನೆಯು ಆಕಾಶದಿಂದ ಇಳಿದು ಬರುವನು. ಆಗ ಕ್ರಿಸ್ತನಲ್ಲಿರುವ ಸತ್ತವರು ಮೊದಲು ಎದ್ದು ಬರುವರು." ೧ ಥೆಸ್ ೪: ೧೩-೧೪

೧೦. "ನಾನೇ ಪುನರುತ್ಥಾನವು ಜೀವವೂ ಆಗಿದ್ದೇನೆ. ನನ್ನನ್ನು ನಂಬುವವರು ಸತ್ತರು ಬದುಕುವನು ಮತ್ತು ಬದುಕುತ್ತಾ ನನ್ನನ್ನು ನಂಬುವ ಪ್ರತಿಯೊಬ್ಬನು ಎಂದಿಗೂ ಸಾಯುವುದಿಲ್ಲ." ಯಾಹಾ ೧೧:೨೫

ಹೀಗೆ ಅನೇಕ ವಚನಗಳು ಮರಣಾ ನಂತರದ ಆತ್ಮನ ಸ್ಥಿತಿಯನ್ನು ವಿವರಿಸುವಂತೆ ಬೈಬಲ್‌ನಲ್ಲಿ ಕಾಣಬಹುದು. ಈ ಲೋಕವನ್ನು ತ್ಯಜಿಸಿ ಈಗ ಪರಲೋಕದಲ್ಲಿ ಇರುವ ದೇವ ಸಂತರ ನೆನಪಿಗಾಗಿ ಅವರನ್ನು ಸ್ಮರಿಸುವುದಕೋಸ್ಕರ ಹಾಗೂ ರಾಷ್ಟ್ರೀಯ ಹಬ್ಬಗಳನ್ನು ರಾಷ್ಟ್ರ ಗೌರವಕೋಸ್ಕರ ಚರ್ಚಗಳಲ್ಲಿ ಆಚರಿಸುವ ವಾಡಿಗೆ ಇದೆ. ಅವುಗಳನ್ನು ಹೀಗೆ ಗ್ರಹಿಸಬಹುದು.

ಹಬ್ಬಹರಿದಿನಗಳು ಹಾಗೂ ವಿಶೇಷ ದಿನಗಳ ಆಚರಣೆ

ಜನವರಿ ೧	ಒಡಂಬಡಿಕೆಯ ದಿನ ಕೀರ್ತ ೨೫: ೧-೧೦ ಆದಿ ೧೭: ೧-೮ ಕೊಲೊ ೨:೮-೧೫, ಮಾರ್ಕ ೧೪:೨೨-೨೬
ಜನವರಿ ೨೫	ಪೌಲನ ಪರಿವರ್ತನೆ ಕಿ ೬೭, ಯೆರೆ ೧:೪-೧೦ ಅ.ಕೃ ೯:೧-೧೯ ಮತ್ತು ೧೯:೨೭-೩೦
ಜನವರಿ ೨೬	ಗಣರಾಜ್ಯೋತ್ಸವ ಕಿ ೧೪೪:೯-೧೫, ಯೆಶಾ೩೨:೧-೮, ೧ತಿ೨:೧-೬ ಮತ್ತು ೬:೧೯-೩೪
ಫೆಬ್ರವರಿ ೨	ಕ್ರಿಸ್ತನನ್ನು ದೇವಾಲಯದಲ್ಲಿ ಸಮರ್ಪಿಸಿದ್ದು
ಫೆಬ್ರವರಿ ೧೫	ಹತಸಾಕ್ಷಿಯಾದ ಸ್ತೇಫನನ ಕಿ ೭೩:೨೪-೨೮ ೨ಪೂ ೨೪:೨೦-೨೨ ಅಕೃ ೭:೫೫-೬೦ ಮತ್ತಾ ೨೩:೨೪-೩೯
ಮಾರ್ಚ್ ೨೫	ಮರಿಯಗಳಿಗೆ ಬಂದ ದೈವ ಸಂದೇಶ ಕಿ ೮೯:೧-೧೮ ಆದಿ ೧೮:೧-೧೪ ಗಲಾತ್ಯ ೪:೧-೭ ಲೂಕ ೧:೨೬-೩೮
ಏಪ್ರಿಲ್ ೨೫	ಸುವಾರ್ತಿಕನಾದ ಮಾರ್ಕ ಕಿ.೧೧೯:೧-೮ ಹೊಶೆ ೬:೧-೬ ೨ತಿಮು ೪:೧-೧೧ ಮಾರ್ಕ ೧೪:೪೩-೫೨
ಮೇ ೬	ಅಪೂಸ್ತಲ ಹಾಗೂ ಸೌವಾರ್ತಿಕನಾದ ಯೊಹಾನ ಕಿ.೨೭ ವಿ.ಕಾ ೩೩:೭-೨೩, ೧ ಯಾಹಾ ೧ ಯಾಹಾ ೨೧:೧೫-೨೫
ಜೂನ್ ೧೧	ಅಪೂಸ್ತಲನಾದ ಬಾರ್ನಬನು ಕಿ.೩೪ ಯೂಬ ೨೯:೧-೧೬ ಅ.ಕೃ ೧೧:೨೨-೩೦ ಮತ್ತಾ ೫:೧೩-೧೬
ಜೂನ್ ೨೪	ಸ್ನಾನಿಕ ಯೋಹಾನನು ಕಿ.೩:೧-೬ ಮಲಾಕಿ ೩:೧-೬ ಗಲಾಳ ೨೮: ೫-೧ ಲೂಕ ೩:೭-೨೦

ಜೂನ್ ೨೯	ಅಪೊಸ್ತಲನಾದ ಪೇತ್ರನು ಕಿ.೪೮ ಯೆಶೆ ೩:೪-೧೧ ಅಕೃ ೧೧:೧-೧೮ ಮತ್ತಾ ೧೬:೧೩-೧೯
ಜುಲೈ ೨೨	ಮಗ್ಗಲದ ಮರಿಯಳು ಕಿ.೧೧೬:೧-೧೬ ಚೆಫ ೩:೧೪-೨೦ ೨ಕೊ ೫:೧೪-೧೭ ಯಾಹಾ ೨೦:೧೧-೧೮
ಜುಲೈ ೨೫	ಅಪೊಸ್ತಲನಾದ ಯಾಕೋಬ ಕಿ.೧೬ ೧ಅರಸು ೧೯:೧೯-೨೧ ಅ.ಕೃ ೧೧:೨೭, ೧೨:೩ ಮಾರ್ಕ್ ೧೦:೩೫-೪೫
ಆಗಸ್ಟ್ ೬	ಕ್ರಿಸ್ತನ ರೂಪಾಂತರ
ಆಗಸ್ಟ್ ೧೫	ಸ್ವಾತಂತ್ರದಿನ ಕಿ.೩೩:೧೨-೨೨ ೧ಅರಸು ೩:೫-೧೪, ರೂಮಾ ೧೩:೧-೧೦, ಮಾರ್ಕ ೧೨:೧೩-೧೭
ಸೆಪ್ಟೆಂಬರ್ ೨೧	ಅಪೊಸ್ತಲನೂ ಸೌವರ್ತಿಕನೂ ಆದ ಮತ್ತಾಯನು ಕಿ.೧೪೬ ಜ್ಞಾ ೩:೧೩-೧೭, ೨ಕೊ ೪:೧-೧೬ ಮತ್ತಾ ೯:೯-೧೩
ಸೆಪ್ಟೆಂಬರ್ ೨೭	ದಕ್ಷಿಣ ಇಂಡಿಯ ಸಭೆಯ ಸಂಸ್ಥಾಪನೆ ಕಿ.೧೨೨ ಯೆಹೆ ೩೭:೧೫-೨೨, ಎಫೆ ೪:೧-೧೬, ಯಹಾ ೧೭:೨೦-೨೬
ಸೆಪ್ಟೆಂಬರ್ ೨೯	ಮಿಕಾಯೇಲನೂ ಸರ್ವದೇವದೂತರೂ ಕಿ ೧೦೩:೧೫-೨೨ ದಾನಿ ೧೨:೧-೩, ಪ್ರಕ ೧೨:೭-೧೧ ಮತ್ತಾ ೧೮:೧-೧೦
ಅಕ್ಟೋಬರ್ ೬	ಅಪೊಸ್ತಲನಾದ ತೋಮನು ಕಿ.೬೬, ಯೊಬ ೪೨:೧-೬, ಇಬ್ರಿ ೧೩:೧೩-೨೧, ಯಹಾ ೨೦:೨೪-೨೯
ಅಕ್ಟೋಬರ್ ೧೮	ವೈದ್ಯನೂ ಸೌವಾರ್ತಿಕನೂ ಆದ ಲೂಕನು ಕಿ.೭೮:೧-೭ ಯೊಹ ೩೫:೩-೬, ಎಕ್ಲೇಸ್ ೩೮:೧-೧೪, ಅಕೃ ೧೬:೬-೧೨ ಲೂಕ ೧:೧-೪
ನವೆಂಬರ್ ೧	ಸರ್ವಸಂತರು ಕಿ.೧೪೫:೧-೧೩, ದಾನಿ ೭:೨೭ ಸೊಜ್ಞಾನಾ ೫:೧೫-೧೬ ಪ್ರಕ ೭:೯-೧೭, ಮತ್ತಾ ೫:೧-೧೨
ನವೆಂಬರ್ ೩೦	ಅಪೊಸ್ತಲನಾದ ಅಂದ್ರೇಯ ಕಿ.೧೪೭:೧-೧೧, ಆಮೋಸ ೭:೧೧-೧೫ ಪಿಲಿಪ್ಪ ೧:೫-೧೧, ಯೊಹಾ ೧:೩೫-೪೨
ಡಿಸೆಂಬರ್ ೨೫	ಕ್ರಿಸ್ತನು ಹುಟ್ಟಿದ ದಿನ

ಗುಡ್‌ಫ್ರೈಡೆ (ಶುಭಶುಕ್ರವಾರ) ಈಸ್ಟರ (ಕ್ರಿಸ್ತನ ಪುನರುತ್ಥಾನ) ದಿನಗಳು ಪ್ರತಿವರ್ಷ ಬದಲಾದ ದಿನಾಂಕದಿಂದ ಆಚರಿಸಲ್ಪಡುತ್ತವೆ.

೬.೪. ಉತ್ಸವ

ಯೇಸು ಕ್ರಿಸ್ತನು ಜರುಸಲೇಮನ್ನು ಪ್ರವೇಶ ಮಾಡುವಾಗ ಜನರು ಆತನನ್ನು ಸ್ವಾಗತಿಸಲಿಕ್ಕೆ "ಜಯ, ಕರ್ತನ ಹೆಸರಿನಲ್ಲಿ ಬರುವವನಿಗೆ ಆಶೀರ್ವಾದ, ಇಸ್ರಾಯೇಲಿನ ಅರಸನಿಗೆ ಆಶೀರ್ವಾದ ಎಂದು ಆರ್ಭಟಿಸಿದರು.(ಯಾಹಾ-೧೨:೧೩)

"ಚೀಯಾನ್ ನಗರಿಯೇ ಹೆದರಬೇಡ
ಇಗೋ ನಿನ್ನ ಅರಸನು ಕತ್ತೆಯ ಮರಿಯ
ಮೇಲೆ ಕೂತುಕೊಂಡು ಬರುತ್ತಾನೆ"

ಎಂದು ಶಾಸ್ತ್ರದ(ಅರಸನಾದ ದಾವಿದ(David)ನ) ಮಾತು. ನೆರವೆರುವಂತೆ ಕ್ರಿಸ್ತನು ಕತ್ತೆಯ ಮರಿಯನ್ನು ತರಿಸಿಕೊಂಡು ಅದರ ಮೇಲೆ ಕೂತುಕೊಂಡು ಅರಸನಂತೆ ಊರನ್ನು ಪ್ರವೇಶ ಮಾಡಿದನು. ಈ ಮೇಲಿನ ಪ್ರಸಂಗವನ್ನು ಅಧಾರವಾಗಿಟ್ಟುಕೊಂಡು ಖರ್ಜೂರ ಗರಿಗಳನ್ನು ಹಿಡಿದು ಇಂದಿಗೂ ಉತ್ಸವವನ್ನು ಕೆಥೋಲಿಕ ಹಾಗೂ ಪ್ರೊಟೆಸ್ಟೆಂಟರು ನೆರವೇರಿಸುವರು.

ಪ್ರಕೃತಿ ದತ್ತವಾದ ಕೊಡುಗೆ ಎಲ್ಲವೂ ದೇವರ ಕೃಪೆಯಿಂದ ಮಾನವನಿಗೆ ದೊರೆಯುವಂತಹುದು. ಆದುದರಿಂದ ಮನುಷ್ಯನ ಬೆಳೆಯ ಪ್ರಥಮ ಫಲವನ್ನು ದೇವರಿಗೆ ಸಮರ್ಪಿಸಬೇಕೆಂಬ ಭಾವನೆಯಿಂದ, ಪ್ರತಿವರ್ಷ ಭೂಮಿಯ ಫಲವನ್ನು ದೇವರಿಗೆ ಸಮರ್ಪಿಸುವ ವಾಡಿಕೆ ಕ್ರೈಸ್ತರಲ್ಲಿ ಇದೆ. ಈ ಸಂದರ್ಭದಲ್ಲಿ ದೇವರು ಕೊಟ್ಟ ಸಕಾಲದ ಎಲ್ಲ ಅನುಕೂಲಕ್ಕಾಗಿ ಸ್ತುತಿ ಸ್ತೋತ್ರಗಳನ್ನು ಅರ್ಪಿಸಲಾಗುವುದು. ಚರ್ಚನ್ನು ಶೃಂಗರಿಸಲಾಗುವುದು ಹಾಗೂ ದೇವರಿಗೆ ವಿಶೇಷ ಆರಾಧನೆ ಏರ್ಪಡಿಸಲಾಗಿರುವುದು. ಇದನ್ನು ಸುಗ್ಗಿಯ ಹಬ್ಬವೆಂದು ಕರೆಯುತ್ತಾರೆ. ಇದು ಉತ್ಸವದಂತೆ ಆಚರಿಸಲಾಗುವುದು.

ಕ್ರಿಸ್ತನು ಜರುಸಲೇಮನ್ನು ಪ್ರವೇಶಿಸುವಾಗ ಆತನನ್ನು ಜನರು ಸ್ವಾಗತಿಸಿದಂತೆ, ಇಂದಿಗೂ ಕ್ರಿಸ್ತ ಧರ್ಮದ ಪ್ರಮುಖ ಗುರುಗಳಾದ ಬಿಶಪ್ಪ ಹಾಗೂ ಪೋಪರನ್ನು ಜನರು ತಮ್ಮ ಊರಿಗೆ ಪಟ್ಟಣಕ್ಕೆ ಬರುವಾಗ ಉತ್ಸವಗಳಂತೆ, ಆಚರಿಸುತ್ತಾ ಮೆರವಣಿಗೆ ರೂಪದಲ್ಲಿ ಬಹಿರಂಗ ಸ್ವಾಗತಿಸುವರು. ಹಿಂದೂ ಸಂಪ್ರದಾಯದ ಸ್ವಾಮಿಗಳನ್ನು ಸ್ವಾಗತಿಸುವಂತೆ ಈ ಕಾರ್ಯ ಕ್ರೈಸ್ತರಲ್ಲಿ ನಡೆಯುತ್ತದೆ.

ಕ್ರೈಸ್ತ ಧರ್ಮದಲ್ಲಿ ಯಾವ ಮೂರ್ತಿಗಳಿಗೂ ಮಹತ್ವ ಇಲ್ಲ. ಹೀಗಾಗಿ ಉತ್ಸವದಂತೆ ಆಚರಿಸಲು ಪ್ರಮುಖವಾದ ವ್ಯಕ್ತಿ ಅಥವಾ ಮೂರ್ತಿ ಬೇಕಾಗಿರುವುದರಿಂದ ಉತ್ಸವಗಳಿಗೆ ಮಹತ್ವ ಹೆಚ್ಚಾಗಿ ಕಂಡುಬರುವುದಿಲ್ಲ.

ಆದರೆ ಇತ್ತೀಚಿನ ದಿನಗಳಲ್ಲಿ ಉದ್ಭವಗೊಂಡ ಬಾಲ ಏಸು, ಮದರ್ ಮೇರಿ, ವೇಲಂಗಣಿ ಎಂಬ ಹೆಸರುಗಳಿಂದ ಕಂಡುಬರುವ ಮೂರ್ತಿಗಳನ್ನು ಮಾಡಿಕೊಂಡು ಅವುಗಳಿಗೆ ನಿಗದಿತ ದಿನಗಳನ್ನು

ಪ್ರಕಟಪಡಿಸಿ ಉತ್ಸವಗಳಂತೆ ಆಚರಿಸಲಾಗುತ್ತದೆ. ಹಾಗೂ ಅವುಗಳಿಗೆ ಪೂಜೆ ಸಲ್ಲಿಸಲಾಗುವುದು. ಇವುಗಳು ಈಗ ಜಾತ್ರಾ ಸ್ಥಳಗಳಾಗಿವೆ.

ಬೈಬಲ್ ಪ್ರಕಾರ ದೇವರು ಉಂಟು ಮಾಡಿದ ಮಣ್ಣು, ಕಟ್ಟಿಗೆ, ಕಲ್ಲು ಹಾಗೂ ಲೋಹ ಇವ್ಯಾವುಗಳ ಮೂಲಕ ಮೂರ್ತಿಗಳನ್ನು ಮಾಡಬಾರದು. ಹೀಗೆ ಮಾಡುವುದರಿಂದ ಇವುಗಳನ್ನುಂಟು ಮಾಡಿದ ತನ್ನನ್ನೇ ಮನುಷ್ಯ ಮರೆಯುತ್ತಾನೆಂದು ದೇವರು ತಿಳಿಸುತ್ತಾನೆ. ಈ ನಿರ್ಬಂಧ ಕಂಡುಬಂದುದು ಇತ್ತಿತ್ತಲಾಗಿ.

ಬೈಬಲ್ ವಿರುದ್ಧವಾಗಿ ಇಂತಹ ಉತ್ಸವಗಳು ಕಂಡುಬರುವುವು. ಇವುಗಳ ನಿಯಂತ್ರಣ ಆಗದೆ ಇರುವುದಕ್ಕೆ ಕಾರಣವೇನೆಂದರೆ ಆಪಾರ ಭಕ್ತಾದಿಗಳ ಆಕರ್ಷಣೆ ಹಾಗೂ ಭಕ್ತರಿಂದ ಬರುವ ಯಥೇಚ್ಛ ಕಾಣಿಕೆ.

ಬೈಬಲ್‌ನ್ನು ಸಂಪೂರ್ಣ ನಂಬಿ, ನಿಜಕ್ರೈಸ್ತರೆನಿಸಿಕೊಳ್ಳುವವರು ಇಂತಹ ಸ್ಥಳಗಳಗೆ ಹೋಗುವುದಿಲ್ಲ. ಹಾಗೂ ಇವುಗಳಿಗೆ ಮಹತ್ವ ಕೊಡುವುದಿಲ್ಲ. ಹೀಗೆ ಆಚರಿಸುವ ಕ್ರಮಗಳು ದೇವರಿಂದ ಉಂಟಾದವುಗಳಲ್ಲ. ಅವು ದುಷ್ಟಶಕ್ತಿ(ಸೈತಾನ್) ಪ್ರೇರಣೆಯಿಂದ ಆಚರಣೆಗೊಳ್ಳುತ್ತವೆ ಎಂದು ಆಕ್ಷೇಪಿಸುತ್ತಾರೆ. ಒಟ್ಟಿನಲ್ಲಿ ಉತ್ಸವಗಳ ಆಚರಣೆ ಕೇವಲ ಚರ್ಚ ಆವರಣಕ್ಕೆ ಸೀಮಿತಗೊಂಡು ಬೈಬಲ್ ಆಧಾರವನ್ನ ಹೊಂದಿಕೊಂಡು ಸಾಗುವ ಕೆಲವೇ ಕೆಲವು ಉತ್ಸವಗಳಿಗೆ ಮನ್ನಣೆ ಇದೆ.

ಪಸ್ಕ ಹಬ್ಬ

ಇದು ಯಹೊದ್ಯರು ಆಚರಿಸುತ್ತಿದ್ದ ಒಂದು ಪ್ರಮುಖ ಹಬ್ಬ. ಇಸ್ರೇಲರು ಈಜಿಪ್ತದಲ್ಲಿ ಗುಲಾಮಗಿರಿಯಲ್ಲಿ ಇದ್ದು, ತೊಂದರೆ ಅನುಭವಿಸಿ ನಂತರ ಅಲ್ಲಿಂದ ಬಿಡುಗಡೆ ಪಡೆದುದರ ನೆನಪಿಗಾಗಿ ಈ ಹಬ್ಬವನ್ನು ಆಚರಿಸುತ್ತಾ ಬಂದರು. ಇದಕ್ಕಿಂತ ಪೂರ್ವದಲ್ಲಿ ಮೂಲ ಪಿತೃಗಳ ಮಕ್ಕಳಾದ ಕಾಯಿನ್ -ಹೆಬೆಲ್ಲರು (ಯಾಡಮ್ ಹಾಗೂ ಈವರ ಮಕ್ಕಳು) ಭೂಮಿಯ ಪ್ರಥಮ ಫಲವನ್ನು ಹಾಗೂ ಚೊಚ್ಚಲು ಫಲವನ್ನು ದೇವರಿಗೆ ಸಮರ್ಪಿಸಿದ್ದರ ಸಂಕೇತವಾಗಿ (ಆದಿಕಾಂಡ ೪:೩-೪) ಈ ಹಬ್ಬವನ್ನು ಜಾರಿಗೆ ತಂದಿರಬಹುದೆಂದು ವೇದ ಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ.

ಈ ಹಬ್ಬದಲ್ಲಿ ದೇವರಿಗೆ ಕುರಿಯನ್ನು ಬಲಿಕೊಟ್ಟು, ಅವುಗಳ ರಕ್ತದಿಂದ ಯಜ್ಞವೇದಿಯನ್ನು ಪುನೀತಗೊಳಿಸಿ ದೇವರಿಗೆ ಸ್ತುತಿ, ಸ್ತೋತ್ರಗಳನ್ನು ಸಲ್ಲಿಸುತ್ತಿದ್ದರು.

ಕ್ರಿಸ್ತನು ತನ್ನನ್ನು ತಾನು ಬಲಿಯಜ್ಞವಾಗಿ ಸಮರ್ಪಿಸಿಕೊಳ್ಳುವ ಮೊದಲು. ಒಂದು ಪಸ್ಕ ಹಬ್ಬದಲ್ಲಿ ರಾತ್ರಿ ತಾನು ಶಿಷ್ಯರೊಂದಿಗೆ ಊಟಕ್ಕೆ ಕೊಡುವ ಸಮಯದಲ್ಲಿ, ಹೀಗೆ ಹೇಳಿದನೆಂದು ಕ್ರಿಸ್ತನ

ಶಿಷ್ಯರಲ್ಲಿ ಒಬ್ಬನಾದ ಲೂಕ ಹೀಗೆ ಬರೆದಿರುತ್ತಾನೆ. ''ನಂತರ ಆತನು ರೊಟ್ಟಿ(Bread)ಯನ್ನು ತೆಗೆದುಕೊಂಡು ದೇವ ಸ್ತೋತ್ರಮಾಡಿ ಮುರಿದು ಅವರಿಗೆ ಕೊಟ್ಟು ಇದು ನಿಮಗೋಸ್ಕರ ಕೊಟ್ಟಿರುವ ನನ್ನ ದೇಹ; ನನ್ನನ್ನು ನೆನಪಿಸಿಕೊಳ್ಳುವುದಕ್ಕೋಸ್ಕರ ಹೀಗೆ ಮಾಡಿರಿ ಅಂದನು. ಊಟವಾದ ಮೇಲೆ ಆತನು ಅದೇ ರೀತಿಯಾಗಿ ಪಾತ್ರೆಯನ್ನು ತೆಗೆದುಕೊಂಡು ಸ್ತೋತ್ರ ಮಾಡಿ ಅವರಿಗೆ ಕೊಟ್ಟು. ಇದರಲ್ಲಿರುವುದನ್ನು ಎಲ್ಲರೂ ಕುಡಿಯಿರಿ. ಇದು ನನ್ನ ರಕ್ತ. ಇದು ಪಾಪಗಳ ಕ್ಷಮೆಗಾಗಿ. ಬಹು ಜನರಿಗೋಸ್ಕರ ಸುರಿಸಲ್ಪಡುವ ರಕ್ತ. ಇದು ಸ್ಥಾಪಿತವಾಗುವ ಹೊಸ ಒಡಂಬಡಿಕೆಯನ್ನು ಸೂಚಿಸುತ್ತದೆ ಎಂದನು.[೧]

ಆದುದರಿಂದ ಕ್ರೈಸ್ತರು ಈ ಪಸ್ಕಹಬ್ಬದ ದಿನದಲ್ಲಿ, ಲೋಕದ ಜನರಿಗಾಗಿ ಶಿಲುಬೆಯ ಮೇಲೆ ತನ್ನ ರಕ್ತ ಸುರಿಸಿ ಸಮಸ್ತ ಜನರನ್ನು ಪಾಪದಿಂದ ನಿವಾರಣೆ ಮಾಡಿದ, ಯಜ್ಞದ ಕುರಿಯಾದ ಕ್ರಿಸ್ತನ ನೆನಪನ್ನು ಸ್ಮರಿಸುವರು. ಈಗಲೂ ವಾರಕ್ಕೊಮ್ಮೆ ಅಥವಾ ಪ್ರತಿ ತಿಂಗಳು ಯೇಸು ಕ್ರಿಸ್ತನ ನೆನಪಿಗಾಗಿ ಚರ್ಚಗಳಲ್ಲಿ ರೊಟ್ಟಿ(ಬ್ರೆಡ್) ದ್ರಾಕ್ಷಾರಸ(ವಾಯಿನ್)ಗಳನ್ನು ಕ್ರಿಸ್ತನ ದೇಹ ಹಾಗೂ ರಕ್ತ ಎಂಬ ಸಂಕೇತವೆಂದು ಬಳಸಿ, ಮಹಾ ಪ್ರಸಾದವೆಂಬಂತೆ ಸ್ವೀಕರಿಸುವರು. ಇದರಿಂದ ಕ್ರಿಸ್ತನ ಅನ್ಯೂನ್ಯತೆಯಲ್ಲಿ ಪಾಲುತೆಗೆದುಕೊಳ್ಳುತ್ತೇವೆಂಬ ಭಾವ ಅಡಗಿದೆ. ಹಾಗೂ ಕ್ರಿಸ್ತನು ತಾನು ಈ ಲೋಕಕ್ಕೆ ತಿರುಗಿ ಬರುವ ವರೆಗೂ ನೀವು ಇದನ್ನು ಆಚರಿಸಿರಿ ಎಂದು ಅಪ್ಪಣೆಕೊಟ್ಟಂತೆ, ಈಗಲೂ ಎಲ್ಲ ಕ್ರೈಸ್ತರು ಇದನ್ನು ಶಿರಸಾವಹಿಸಿ ನಡೆಸಿಕೊಂಡು ಬರುತ್ತಿದ್ದಾರೆ.

ಈಸ್ಟರ್ ಹಬ್ಬ

ಯೇಸು ಕ್ರಿಸ್ತನು ಶುಕ್ರವಾರದಂದು ಶಿಲುಬೆಗೆ ಹಾಕಲ್ಪಟ್ಟನು, ಮೂರನೇಯ ದಿನ ಅಂದರೆ ಭಾನುವಾರ ಸತ್ತವರೊಳಗಿಂದ ತಿರುಗಿ ಎದ್ದು ಬಂದು ತನ್ನ ಶಿಷ್ಯರಿಗೂ ಹಾಗೂ ತಾಯಿ ಮರಿಯಳಿಗೂ ಕಾಣಿಸಿಕೊಂಡನೆಂದು ಬೈಬಲ್ ತಿಳಿಸುತ್ತದೆ. ಜಗತ್ತಿಗೆ ತಿಳಿದಿರುವಂತೆ ಶುಕ್ರವಾರದಂದು ಕ್ರಿಸ್ತನು ತೀರಿಹೋದನು. ಇದನ್ನು Good Friday ಎಂದು ಕರೆಯುವರು. ಹಾಗೂ ಇದು ಇಂದಿಗೂ ರಜಾ ದಿನವಾಗಿರುವುದರಿಂದ ಎಲ್ಲರಿಗೂ ತಿಳಿದ ವಿಷಯವಾಗಿದೆ.

ಕ್ರೈಸ್ತರಿಗೆ ಶುಕ್ರವಾರ ಶುಭ ಶುಕ್ರವಾರವಾಯಿತು. ಇದು ದುಃಖದ ದಿನ ಎಂದು ಕಂಡುಬಂದರು. ಭಾನುವಾರ ಕ್ರಿಸ್ತನು ಸತ್ತು ಎದ್ದು ಬಂದನೆಂಬ ದಿನವಾಗಿರುವುದರಿಂದ ಅದು ಸಂತೋಷದ ಹಾಗೂ ಜಯಪ್ರದವಾದ ದಿನವಾಗಿದೆ. ಭಾನುವಾರ ಇದನ್ನು ಆಚರಿಸುವುದರಿಂದ ಇದಕ್ಕಾಗಿ ರಜಾದಿನ ಇಲ್ಲದಿರುವುದರಿಂದ ಕ್ರಿಸ್ತನ ಈ ಪುನರುತ್ಥಾನದ ಬಗ್ಗೆ ಕ್ರೈಸ್ತರನ್ನು ಬಿಟ್ಟರೆ ಬೇರೆಯವರಿಗೆ ಮಾಹಿತಿ ತಿಳಿದಿಲ್ಲ. ಈ ಭಾನುವಾರವನ್ನು ಈಸ್ಟರ್ ಭಾನುವಾರ ಹಾಗೂ ಪುನರುತ್ಥಾನದ ಭಾನುವಾರ ಎಂದು ಕರೆಯುವರು.

ಕ್ರಿಸ್ತನು ತೀರಿಹೋಗಿದ್ದು, ಪುನಃ ತಿರುಗಿ ಎದ್ದು ಬರಬೇಕೆಂಬ ಉದ್ದೇಶದಿಂದಲೇ ಎಂದು ಬೈಬಲ್ ತಿಳಿಸುವುದು. ಇದನ್ನು ಆತನ ಶಿಷ್ಯರು ಅಂದು ನಂಬದೇ ಹೋದರು. ಕ್ರಿಸ್ತನ ಬೋಧನೆಯಲ್ಲಿ ತಾನು ಸಾಯುವ ಮೊದಲು ಮೂರು ಸಾರಿ ತನ್ನ ಮರಣ ಹಾಗೂ ಪುನರುತ್ಥಾನದ ಬಗ್ಗೆ ತಿಳಿಸಿರುವುದನ್ನು ಕಾಣುತ್ತೇವೆ.

ಕ್ರಿಸ್ತನ ಶಿಷ್ಯರಿಗೆ, ಕ್ರಿಸ್ತನು ಸತ್ತು ಮೂರನೆಯ ದಿನದಲ್ಲಿಯೇ ಎದ್ದು ಬರುವನೆಂಬ ನಂಬಿಕೆ ಇರಲಿಲ್ಲ. ಅಷ್ಟೇ ಅಲ್ಲ ಇಂತಹ ಮಹಾತ್ಮನು ಇಷ್ಟುಬೇಗ ದುಷ್ಟರ ಕೈಗೆ ಸಿಲುಕಿ ಪ್ರಾಣ ಬಿಡುತ್ತಾನೆಂದು ನೆನಸಿರಲಿಲ್ಲ. ಆದರೆ ಯಾರು ಕ್ರಿಸ್ತನಿಗೆ ಸುಳ್ಳು ಸಾಕ್ಷಿ ಹೊರೆಯಿಸಿ ಮರಣ ದಂಡನೆಗೆ ಗುರಿಪಡಿಸಿದರೋ ಆ ವಿರೋಧಿಗಳಿಗೆ ಇವನು ಎದ್ದು ಬರುತ್ತಾನೆಂಬ ನಂಬಿಕೆಯಲ್ಲಿ ಇದ್ದರು. ಇದನ್ನು ಬೈಬಲ್ ಮಾತುಗಳಲ್ಲಿ ನೋಡೋಣ. "ಮರುದಿನ ಅಂದರೆ ಸೌರಣೆಯ ದಿನ ಕಳೆದ ಮೇಲೆ ಮಹಾಯಾಜಕರೂ ಪರಿಸಾಯರು, ಪಿಲಾತ(ಯಹೂದ್ಯರ ಅಧಿಪತಿ ರೋಮ್ ಚಕ್ರವರ್ತಿಯಿಂದ ನೇಮಕವಾದ)ನ ಒಳಗೆ ಕೂಡಿ ಬಂದು 'ದೊರೆಯೇ ಆ ಮೋಸಗಾರ(ಕ್ರಿಸ್ತ)ನು ಬದುಕಿದ್ದಾಗ ತಾನು ಮೂರು ದಿನದ ಮೇಲೆ ಏಳುತ್ತೇನೆಂದು ಹೇಳಿದ್ದು ನಮ್ಮ ನೆನಪಿಗೆ ಬಂತು. ಭದ್ರಮಾಡಿ ಕಾಯುವುದಕ್ಕೆ ಅಪ್ಪಣೆ ಕೊಡಬೇಕು. ಇಲ್ಲದಿದ್ದರೆ ಅವನ ಶಿಷ್ಯರು ಬಂದು ಅವನನ್ನು ಕದ್ದುಕೊಂಡು ಹೋಗಿ ಸತ್ತವನು ಬದುಕಿ ಬಂದಿದ್ದಾನೆ ಎಂದು ಹೇಳಾರು; ಆಗ ಮೊದಲನೆಯ ಮೋಸಕ್ಕಿಂತ ಕಡೆಯ ಮೋಸವು ಕೆಡುಕಾದೀತು ಅಂದರು. ಪಿಲಾತನು ಅವರಿಗೆ ಕಾವಲುಗಾರರನ್ನು ತಕ್ಕೊಳ್ಳಿ; ಹೋಗಿ ನಿಮಗೆ ತಿಳಿದ ಹಾಗೆ ಭದ್ರಮಾಡಿ ಕಾಯಿರಿ ಎಂದು ಹೇಳಲಾಗಿ, ಅವರು ಹೊರಟು ಕಾವಲುಗಾರರೊಂದಿಗೆ ಆ ಕಲ್ಲಿಗೆ ಮುದ್ರೆ ಹಾಕಿ ಸಮಾಧಿಯನ್ನು ಭದ್ರಮಾಡಿದರು." ಕ್ರಿಸ್ತನು ಎದ್ದು ಬರುವನೆಂಬ ನಂಬಿಕೆಯನ್ನು ಇಲ್ಲಿ ಆತನ ವಿರೋಧಿಗಳಲ್ಲಿ ಕಾಣುತ್ತೇವೆ. ವಿಶ್ವಾಸಿಗಳಲ್ಲಿ ಅಲ್ಲ.

ಕ್ರಿಸ್ತನು ಭಾನುವಾರದಂದು ಪುನರುತ್ಥಾನಗೊಂಡ ಮೇಲೆ ಈ ವಿರೋಧಿಗಳೇ ಕ್ರಿಸ್ತನ ಪುನರುತ್ಥಾನದ ವಿಷಯವನ್ನು ತಿರುಚಲು ಪ್ರಯತ್ನಿಸಿ, ಆತನು ಸಾಯಲಿಲ್ಲ ಆತನ ಜಾಗದಲ್ಲಿ ಬೇರೆಯವನ ದೇಹ ಇಡಲಾಗಿತ್ತು ಎಂದು ಸುದ್ದಿ ಹಬ್ಬಿಸಿದರು. ಇದನ್ನು ಅನೇಕರು ನಂಬಿದರು. ಇಂದಿಗೂ ಕ್ರಿಸ್ತನು ಶಿಲುಬೆಯ ಮೇಲೆ ಸತ್ತನು, ಸಮಾಧಿ ಮಾಡಲಾಯಿತು, ಆತನ ದೇಹವನ್ನು ರೋಮಾಯ ಸಿಪಾಯಿಗಳು ಹಗಲಿರುಳು ಕಾದರು ಎಂಬ ದಾಖಲಾತಿ ಹಾಗೂ ಪ್ರತ್ಯಕ್ಷ ಸಾಕ್ಷಿಗಳಾದ ಶಿಷ್ಯರು ನಡೆದ ಘಟನೆಯನ್ನು ಕಣ್ಣಿಗೆ ಕಟ್ಟುವಂತೆ ಬೈಬಲ್ ನಲ್ಲಿ ಬರೆದಿದ್ದರೂ, ಕ್ರಿಸ್ತನು ಎದ್ದು ಬಂದನೆಂಬುದನ್ನು ನಂಬದೆ ಇದ್ದಾರೆ. ಇದನ್ನು ಕುರ್ ಆನ್ ಕೂಡ ನಂಬುವುದಿಲ್ಲ, ಮಾತ್ರವಲ್ಲ ಕ್ರಿಸ್ತನು ಸಾಯಲಿಲ್ಲ, ಆತನನ್ನು ದೇವರು

ಹಾಗೆ ಪರಲೋಕಕ್ಕೆ ಎತ್ತಿಕೊಂಡನೆಂದು ತಿಳಿಸುವುದು. ಕ್ರಿಸ್ತಶಕದಿಂದ ಸುಮಾರು ೫ ಶತಮಾನಗಳ ನಂತರ ಬರೆದ ಕುರ್‌ಆನ್ ವಿಷಯ ಕ್ರಿಸ್ತ ವಿರೋದಿ ಜನರ ವದಂತಿ ಎಂಬುದು ಕಂಡುಬರುತ್ತದೆ.

ಜಗತ್ತಿನಲ್ಲಿ ಎರಡು ಸಾಕ್ಷಿಗಳ ಮೇಲೆ ಇಂದಿಗೂ ನ್ಯಾಯಾಲಯಗಳು ಪ್ರವಾದಿ ಮೋಜಸ್ ಕಾಲದಿಂದ ನಿರ್ಣಯ ನೀಡುತ್ತಾ ಸಾಗಿದೆ. ಕ್ರಿಸ್ತನ ಸಾವು, ಸಾವಿನ ಯಾತನೆ, ಪುನರುತ್ಥಾನ ಹಾಗೂ ದಿವಾರೋಹಣ (ಪರಲೋಕಕ್ಕೆ ಏರಿಹೋದದ್ದು) ಇವುಗಳನ್ನು ಕುರಿತು ಪ್ರತ್ಯಕ್ಷದರ್ಶಿ ಶಿಷ್ಯರು, ತಾಯಿ ಹಾಗೂ ಸಂಬಂಧಿಗಳು ಇರುವಾಗ, ನಂಬಿಕೆ ಹಾಗೂ ಅಪನಂಬಿಕೆಯ ಪ್ರಶ್ನೆಯೇ ಉದ್ಭವಿಸಲಾರದು. ಆದರು ಸತ್ಯವನ್ನು ಸುಳ್ಳು ಎಂದು ಸಾಧಿಸುವುದು ಈ ಲೋಕದ ಸ್ವಭಾವ.

ಕ್ರಿಸ್ತನು ಪುನರುತ್ಥಾನದ ನಂತರ ಅನೇಕರಿಗೆ ಕಾಣಿಸಿಕೊಂಡು, ಶಿಷ್ಯನಾದ ಥೊಮಸ್ ನಿನ್ನನ್ನು ಮುಟ್ಟಿ ನೋಡದೆ ನಂಬಲಾರೆಯ ಎಂದಾಗ, ಕ್ರಿಸ್ತನು ಹೇಳಿದ್ದೇನೆಂದರೆ ನೀನಾದರೂ ನನ್ನನ್ನು ಮುಟ್ಟಿ ನೋಡುವೆ ಆದರೆ ನೋಡದೆ ನಂಬುವವರು ಧನ್ಯರು ಎಂದನು. ಭವಿಷ್ಯ ಪುರಾಣದಲ್ಲಿ ಶಕ ಪುರುಷನಾದ ಶಾಲಿವಾಹನನು, ಶಕ ಪುರುಷನಾದ ಕ್ರಿಸ್ತನನ್ನು ದರ್ಶಿಸಿದ ಬಗ್ಗೆ ಶ್ಲೋಕಗಳು ವಿವರಣೆ ನೀಡುವವು.(ಹಿಂದೆ ನೋಡಿದ್ದೇವೆ) ಧ್ಯಾನ ಮಗ್ನರಾದ ಹಿಮಾಲಯದ ಅನೇಕ ಋಷಿಮುನಿಗಳಿಗೆ ಕ್ರಿಸ್ತನು ದರ್ಶಿಸಿರಲುಬಹುದು. ಹೀಗಾಗಿ ಕ್ರಿಸ್ತನು ಹಿಮಾಲಯಕ್ಕೆ ಬಂದಿದ್ದನೆಂಬ ವದಂತಿ ಕೇಳುತ್ತೇವೆ. ರಾಮಕೃಷ್ಣ ಪರಮ ಹಂಸರಿಗೆ ಕ್ರಿಸ್ತನ ದರ್ಶನವಾದಂತೆ ಹಾಗೂ ಸ್ವಾಮಿ ವಿವೇಕಾನಂದರಿಗೆ ಕ್ರಿಸ್ತನ ಸಾಕ್ಷಾತ್ಕಾರವಾದಂತೆ ಇವರ ಕುರಿತು 'ಜ್ಞಾನ ದೀಪಂ' ಎಂಬ ತಮಿಳು ಪುಸ್ತಕ ಮಾಲೆಯಲ್ಲಿ ಕಾಣಬಹುದು. ಅನೇಕರಿಗೆ ಈಗಲೂ ದರ್ಶನಗಳುಂಟಾಗುತ್ತವೆ.

ಅಧ್ಯಾಯ ೭

ಸಮಾರೋಪ

೭.೧. ಭಾಷಾಂತರದಿಂದ ಕನ್ನಡ ಭಾಷೆಗೆ ಒದಗಿದ ಪ್ರಯೋಜನ

೭.೨. ಬೈಬಲ್ ಕುರಿತ ಸಂಪೂರ್ಣ ಮಾಹಿತಿ ಹಾಗೂ ಕನ್ನಡ ಬೈಬಲ್ ರೂಪ ಪಡೆದ ಇತಿಹಾಸ

೭.೩. ಬೈಬಲ್ ಸಂವಹನ ಮಾಧ್ಯಮವಾಗಿ ಬಳಕೆಗೊಂಡ ಪರಿ

೭.೪. ಮಿಶನರಿಗಳಿಂದ ರಚಿತಗೊಂಡ ಕನ್ನಡ ಕೃತಿಗಳ ಮಾಹಿತಿ

೭.೫. ಬೈಬಲ್ ಪ್ರಭಾವ ಇತರ ಧರ್ಮಗಳ ಮೇಲೆ

೭.೬. ಎರಡು ಪ್ರಾಚೀನ ಹೊಸಗನ್ನಡದ ವಿಶಿಷ್ಟ ಕೃತಿಗಳ ಪರಿಚಯ "ಲೋಕ ಚರಿತ್ರೆ" ೧೮೫೪, 'ಬಜಾರ್ ಬುಕ್' ೧೮....

೭

ಸಮಾರೋಪ

೭.೧. ಭಾಷಾಂತರದಿಂದ ಕನ್ನಡ ಭಾಷೆಗೆ ಒದಗಿದ ಪ್ರಯೋಜನ

"ಯುರೋಪಿಯನ್ ಭಾಷೆಗಳಲ್ಲಿ ಮೂಲ ಭಾಷಾಂತರವು ನಡೆದಾಗ ಆ ಭಾಷೆಗಳ 'ಸ್ವರೂಪವೇ ಮಾರ್ಪಟ್ಟು ಅವುಗಳ ಗದ್ಯಶೈಲಿಯಲ್ಲಿ ಮಹತ್ವದ ಸ್ಥಿತ್ಯಂತರಗಳಾದುವೆಂದು ಹೇಳುವುದುಂಟು. ಕನ್ನಡಕ್ಕೆ ಈ ಮಾತು ಎಷ್ಟರ ಮಟ್ಟಿಗೆ ಅನ್ವಯಿಸುತ್ತದೆ? ಬೈಬಲ್ ನಲ್ಲಿ ಕನ್ನಡ ಗದ್ಯ ರೂಪವು ಕನ್ನಡ ಭಾಷಾ ಚರಿತ್ರೆಯಲ್ಲಿ ವಿಶಿಷ್ಟ ಸ್ಥಾನವನ್ನು ಹೊಂದಿದೆ ಎನ್ನುವುದರಲ್ಲಿ ಸಂದೇಹವಿಲ್ಲ. ಮುಂದಿನ ಗದ್ಯ ರಚನೆಯ ಮೇಲೆ ಪ್ರಭಾವವನ್ನು ಬೀರುವ ಒಂದು ಅವಕಾಶವೂ ಒದಗಿ ಬಂದಿದ್ದಿತು."[೧]

೧೮೦೯ರಲ್ಲಿ ಬೈಬಲ್ ಭಾಷಾಂತರಗೊಳ್ಳುತ್ತ ಅನೇಕ ಸ್ಥಿತ್ಯಂತರಗಳನ್ನು ದಾಟುತ್ತಾ ಇಂದಿಗೂ ಸಾಗಿದೆ. ಈ ಮಧ್ಯದ ಅವಧಿಯಲ್ಲಿ ಕನ್ನಡ ಸಾಹಿತ್ಯ ಬೈಬಲ್ ಗದ್ಯ ಶೈಲಿಯಿಂದ ಸ್ವಲ್ಪ ಮಟ್ಟಿಗೆ ಮಾತ್ರವೇ ತೋರಿ ಬಂದಿತು ಎನ್ನುವ ಹಾವನೂರವರ ಅಭಿಪ್ರಾಯವನ್ನು ಪರಿಶೀಲಿಸಿದರೆ, ಹೊಸಗನ್ನಡ ಗದ್ಯವನ್ನು ಅರಿಯದ ಕನ್ನಡ ಸಾಹಿತ್ಯ ಹೊಸ ಹುಟ್ಟನ್ನೆ ಪಡೆಯಿತೆನ್ನುವಲ್ಲಿ ಹಿಂಜರಿಯಬೇಕಾಗಿಲ್ಲ. ಅಂತಹ ಅನೇಕ ಉದಾಹರಣೆಗಳನ್ನು ನೋಡಿದ್ದೇವೆ.

ಸಂಸ್ಕೃತ ಸಾಹಿತ್ಯ ಪ್ರಭಾವದ ಹಿನ್ನೆಲೆಯನ್ನು ರೂಪಿಸಿಕೊಂಡು ತನ್ನದೇಯಾದ ಅಸ್ತಿತ್ವದೊಂದಿಗೆ ಕನ್ನಡ ಸಾಹಿತ್ಯ ರೂಪು ತಳೆಯುತ್ತಾ ಸಾಗಿ ಬಂದಿದೆ. ಕನ್ನಡದ ಹೆಸರಾಂತ ಕವಿ ಪುಂಗರು ಸಂಸ್ಕೃತವನ್ನು ಅನುಕರಣ ಮಾಧ್ಯಮವಾಗಿ ಬಳಸದೆ ಅನುಸಂಧಾನ ಮಾರ್ಗದಲ್ಲಿ ನಡೆದು ಬಂದಿರುವುದನ್ನು ಪಂಪನಿಂದ ಕುಮಾರವ್ಯಾಸನವರೆಗೆ ಕಾಣಬಹುದು.

೧೭ ಹಾಗೂ ೧೮ನೇ ಶತಮಾನದಲ್ಲಿ ವಿದೇಶಿ ಮಿಶನರಿಗಳು ಭಾರತಕ್ಕೆ ಬಂದಾಗ, ತಮ್ಮ ಧರ್ಮ ಪ್ರಚಾರಾರ್ಥ ಅವರು ಸಾಹಿತ್ಯ ಕ್ಷೇತ್ರವನ್ನು ಬಳಸಲುದ್ಯುಕ್ತರಾದಾಗ, ಅವರಿಗೆ ಭಾರತೀಯ ಮೂಲದ ಹೊಸಗನ್ನಡ ಸಾಹಿತ್ಯ ಜ್ಞಾನದ ಲಭ್ಯತೆ ಕಷ್ಟ ಸಾಧ್ಯವಾಗಿತ್ತು. ಇಂತಹ ಸಂದರ್ಭದಲ್ಲಿ ತಮ್ಮೊಂದಿಗೆ ತಂದಿದ್ದ ಬೈಬಲ್ ಸಾಹಿತ್ಯ ಹಾಗೂ ಇಂಗ್ಲಿಷ್ ಜ್ಞಾನ ಭಂಡಾರವನ್ನು ಭಾರತೀಯ ಭಾಷೆಯಲ್ಲಿ ನೀಡಲು ಇಚ್ಛಿಸಿದ ಫಲವಾಗಿ, ಭಾಷಾಂತರ ಕಲೆ ಕನ್ನಡಸಾಹಿತ್ಯಕ್ಕೂ ಒದಗಿಬಂದಿತು.

---

೧. ಹೊ.ಅ., ಪು.೪೩೭

"ಒಂಭತ್ತು ದಶಲಕ್ಷದಷ್ಟು ಶಬ್ದಗಳಿರುವ ಬೈಬಲ್ ಅನುವಾದದ ವಿವಿಧ ಹಂತಗಳಲ್ಲಿ ನಾವು ಕನ್ನಡ ಗದ್ಯದ ವಿಕಾಸವನ್ನು ಕಾಣಬಹುದು." ಇಂಗ್ಲೀಷಿನಿಂದ ಹಾಗೂ ಜರ್ಮನ ಭಾಷೆಯಿಂದ ಕನ್ನಡಕ್ಕೆ ಭಾಷಾಂತರ ಅಷ್ಟು ಸುಲಭದ ಮಾತಾಗಿರಲಿಲ್ಲ. "ಕನ್ನಡ ಭಾಷೆಯ ದೃಷ್ಟಿಯಿಂದ ಅವರು ವಿಚಾರ ಮಾಡಿ ಸುಲಭವಾಗಿ ಅರ್ಥವಾಗುವ ದೇಶ್ಯ ಮತ್ತು ತದ್ಭವ ಶಬ್ದಗಳನ್ನೇ ಆಯ್ದುಕೊಳ್ಳಬೇಕು; ಅವು ಸಿಕ್ಕದೆ ಹೋದಲ್ಲಿ ಸಂಸ್ಕೃತ ಶಬ್ದಗಳಿಗೆ ಶರಣು ಹೋಗಬೇಕು. ಗ್ರಾಮ್ಯ ಅಥವಾ ಅನ್ಯ ದೇಶ್ಯ ಶಬ್ದಗಳನ್ನು ಅನಿವಾರ್ಯ ಎಂದಿದ್ದರೆ ಮಾತ್ರ ಬಳಸಬೇಕು"[೧] ಎಂಬ ನಿಲುವನ್ನು ಅಂದಿನ ಮಿಶನರಿಗಳು ತಳೆದಿದ್ದರಿಂದ ಅನುವಾದ ಕಾರ್ಯದಲ್ಲಿ ಅವರಿಗೆ ಸಮರ್ಪಕವಾದ ಶಬ್ದಗಳು ಸಿಗದೆ ಇದ್ದ ಪ್ರಸಂಗವನ್ನು ಎದುರಿಸಬೇಕಾಯಿತು. ಹೊಸಗನ್ನಡ ಅವರ ಕಾಲಕ್ಕೆ ಪುಷ್ಟಿಯನ್ನು ಹೊಂದಿರಲಿಲ್ಲ. ಸಂಸ್ಕೃತ ಸಹಾಯವನ್ನು ನೇರವಾಗಿ ನಿರಾಕರಿಸುತ್ತಿರುವುದು ಒಂದು ಕಾರಣವಾಗಿತ್ತು.

ಕನ್ನಡಸಾಹಿತ್ಯದ ಹೊಸಗನ್ನಡ ತನದ ಅವಶ್ಯಕತೆ ಕನ್ನಡ ಸಾಹಿತ್ಯಕ್ಕೆ ಇತ್ತೆಂದು ಹೇಳಲು ಬರುವುದಿಲ್ಲ. ಯಾಕೆಂದರೆ ಹಳೆಗನ್ನಡ ಗದ್ಯದ ಕೃತಿಗಳ ಕಾಲವದು. ಜರ್ಮನ್ ಇಂಗ್ಲೆಂಡ್ ಮಿಶನರಿಗಳ ಆಗಮನದ ಪೂರ್ವದಲ್ಲಿ ಕ್ಯಾಥೋಲಿಕ ಮಿಶನರಿಗಳು ೧೭ನೇ ಶತಮಾನದಲ್ಲಿ ಕರ್ನಾಟಕಕ್ಕೆ ಬಂದು ಕೃತಿಗಳನ್ನು ರಚಿಸಿದ ಉಲ್ಲೇಖ ಇರುವಾಗ, ಆ ಸಾಹಿತ್ಯ ದೊರೆತಿದ್ದರೆ ಹೊಸಗನ್ನಡದ ಪ್ರಾರಂಭದ ಕಾಲ ಒಂದು ಶತಮಾನದಷ್ಟು ಹಿಂದೆ ಸರಿಯುತ್ತಿತ್ತೇನೋ ಎಂದೆನ್ನಬಹುದು. ಮಿಶನರಿಗಳ ಬೈಬಲ್ ಭಾಷಾಂತರವೇ. ಹೊ.ಗ.ಮೊದಲ ಗದ್ಯ ಕೃತಿ ಎನ್ನುವಲ್ಲಿ ಎರಡು ಮಾತಿಲ್ಲ.

"ಹೊಸಗನ್ನಡದ ಗದ್ಯವು ನೆಲೆಗೊಂಡಿರದ ಆ ಕಾಲದಲ್ಲಿ ಪ್ರತಿ ಶಬ್ದ ವರೆಗೆ ಹಚ್ಚಿ ಪ್ರಾದೇಶಿಕ ಭೇದಗಳನ್ನು ಸಮನ್ವಯಗೊಳಿಸುತ್ತ ಈ ಬೃಹದ್ಗ್ರಂಥದ ಭಾಷಾಂತರವನ್ನು ಮುಗಿಸುವುದು ಕನ್ನಡ ಸಾಹಿತ್ಯೇತಿಹಾಸದಲ್ಲಿ ಒಂದು ಅಪೂರ್ವ ಘಟನೆಯಾಗಿದೆ".[೨]

ಬೈಬಲ್ ಭಾಷಾಂತರದಿಂದ ಕ.ಸಾಹಿತ್ಯದಲ್ಲಿ ಭಾಷಾಂತರ ಪರಂಪರೆಯೊಂದು ತೆರೆದುಕೊಂಡಿತು.

೧. ಬೈಬಲ್ ನೇರ ಭಾಷಾಂತರ

೨. ಬೈಬಲ್ ವ್ಯಾಖ್ಯಾನ ಸಾಹಿತ್ಯ ಭಾಷಾಂತರ

೩. ಬೈಬಲ್ ಪೂರಕ ಸಾಹಿತ್ಯದ ಭಾಷಾಂತರ

೪. ಕ್ರೈಸ್ತ ಧಾರ್ಮಿಕ ಸಾಹಿತ್ಯ ಭಾಷಾಂತರ ಹಾಗೂ ಸ್ವಾತಂತ್ರ ಕೃತಿಗಳು

೫. ಭಾರತೀಯ ಧಾರ್ಮಿಕ ಕೃತಿಗಳ ಇಂಗ್ಲೀಷ್ -ಜರ್ಮನ್ ಭಾಷಾಂತರ.

೬. ಶಬ್ದಕೋಶಗಳ ರಚನೆ

---

೧. ಹೊ.ಅ.ಶ್ರೀ.ಹಾ., ಪು.೪೩೬

೨. ಅದೇ, ಪು.೪೩೪

೭. ವಿಮರ್ಶೆ ಹಾಗೂ ಟೀಕೆ ಪ್ರತಿ ಟೀಕೆಯ ಮತೀಯ ಸಾಹಿತ್ಯ ಲೋಕದಲ್ಲಿ ಹೊಸ ಅಲೆಯನ್ನು ಎಬ್ಬಿಸಿ ಭಾಷೆಯ ಶೈಲಿ ಕಸುವು ನೂನ್ಯತೆಯನ್ನು ಹುಟ್ಟು ಹಾಕಲು ಕಾರಣೀಭೂತವಾಯಿತು.

೭.೨. ಬೈಬಲ್ ಕುರಿತ ಸಂಪೂರ್ಣ ಮಾಹಿತಿ ಹಾಗೂ ಕನ್ನಡ ಬೈಬಲ್ ಇತಿಹಾಸ

ಪ್ರಸ್ತುತ ಅಧ್ಯಯನವು ಕನ್ನಡ ಸಾಹಿತ್ಯಲೋಕಕ್ಕೆ ಬೈಬಲ್‌ನ ಸಂಪೂರ್ಣ ಮಾಹಿತಿ ಕೊಡುವ ನಿಟ್ಟಿನಲ್ಲಿ ಪ್ರಯತ್ನಿಸಿದೆ. ಇಲ್ಲಿಯವರೆಗೂ ಸಂಪೂರ್ಣ ಮಾಹಿತಿಯನ್ನು ಒಂದೆಡೆಗೆ ಸಂಗ್ರಹಿಸಿದ ಕೃತಿಗಳಿಲ್ಲ. ಬೈಬಲ್ ಜಗತ್ತಿನ ಶ್ರೇಷ್ಠ ಧಾರ್ಮಿಕ ಕೃತಿ ಇದರ ಮಾಹಿತಿ ಸಂಗ್ರಹವು ಕಷ್ಟ ಸಾಧ್ಯ. ಬೈಬಲ್‌ನ ಕಾಲ ನಿರ್ಣಯವು ಪ್ರಶ್ನಾತೀತ. ಪ್ರೊಟೆಸ್ಟೆಂಟರ್ ೬೬ ಪುಸ್ತಕಗಳು, ಕ್ಯಾಥೋಲಿಕರ ೭೮ ಪುಸ್ತಕಗಳ ಸಂಗ್ರಹವೇ ಬೈಬಲ್ ಎಂದು ಕರೆಸಿಕೊಳ್ಳುವುದನ್ನು ಆ ಪುಸ್ತಕಗಳ ರಚನೆಯ ಕಾಲ ಹಾಗೂ ಕರ್ತೃಗಳನ್ನು ಗುರುತಿಸುವಲ್ಲಿ ಈ ಅಧ್ಯಯನದಲ್ಲಿ ಶ್ರಮಿಸಲಾಗಿದೆ. ಒಟ್ಟು ಸು.೪೫ ಬರಹಗಾರರ ಕಾಲ ಮಾಹಿತಿ ಹಾಗೂ ಈಗಿರುವ ಬೈಬಲ್ ರೂಪ ತಳೆಯುವಲ್ಲಿ, ಯಾವ ಯಾವ ಕಾಲಗಟ್ಟಗಳನ್ನು ಹಾಯ್ದು ಬಂದಿದೆಂಬುದರ ಕುರಿತು; ಇಲ್ಲಿ ಮಾಹಿತಿ ದೊರೆಯುತ್ತದೆ. ಮೊದಲಲ್ಲಿ ಆಯಾ ಪ್ರವಾದಿಗಳಿಂದ ಅಂದಿನ ಜನಾಂಗಕ್ಕೆ ಬರೆದ ಕೃತಿಗಳು ತಮ್ಮ ತನವನ್ನು ಮುಂದಿನ ಪ್ರವಾದಿಗಳಿಂದ ಮುಂದುವರೆಸಿಕೊಂಡು ಹೋದುದರಿಂದ, ಮೊದಲ ಪ್ರವಾದಿಯ ಸಾಹಿತ್ಯದ ಉಲ್ಲೇಖ ಕೊನೆಯ ಯೇಸುವಿನ ಶಿಷ್ಯನ ಬರವಣಿಗೆಯವರೆಗೂ ಬಳಕೆಯಾಗಿದೆ. ಆದುದರಿಂದ ಈ ಕೃತಿಗಳ ಕರ್ತೃ ದೇವದಾತ್ಮನೆಂಬ ನಂಬಿಕೆ ಕ್ರೈಸ್ತರಲ್ಲಿ ಇರುವುದರಿಂದ, ಇದೊಂದು ಗ್ರಂಥವಾಗಿ ಅನೇಕ ಕಾಲ, ಘಟ್ಟ, ಕೃತಿಕಾರರೊಂದಿಗೆ ಸಂಕಲನಗೊಂಡು ನಂತರ ಓದುಗರ ದೃಷ್ಟಿಕೋನದ ಅನುಕೂಲಕ್ಕೆ ವಿವಿಧ ಹೆಸರಿನ ಪುಸ್ತಕವಾಗಿ ತದನಂತರ ಅಧ್ಯಾಯ ಹಾಗೂ ವಚನಗಳಾಗಿ ರೂಪು ಪಡೆದ ಇತಿಹಾಸವನ್ನು ಅಧ್ಯಯನ ಒಳಗೊಂಡಿದೆ.

ಜಾಗತಿಕ ಮಟ್ಟದಲ್ಲಿ ಇಂಗ್ಲೀಷ್ ಬೈಬಲ್ ಹಾಗೂ ಕನ್ನಡ ಬೈಬಲ್ ಅಸ್ತಿತ್ವ ಪಡೆದ ವಿವರ ಕೂಡ ಸಂಗ್ರಹಿತಗೊಂಡಿದೆ. ರೆ. ವಿಲಿಯಂ ಕೇರಿ ಹಾಗೂ ರೆ.ಜಾನ್ ಹ್ಯಾಂಡ್ಸ್ ರವರಿಂದ ಕನ್ನಡ ಭಾಷೆಗೆ ಬೈಬಲ್ ಕಾಲಿಟ್ಟ ದಿನಗಳಿಂದ ಇಂದಿನವರೆಗೂ ನಡೆದು ಬಂದ ದಾರಿಯ ಸಿಂಹಾವಲೋಕನವನ್ನು ಅಧ್ಯಯನ ಒಳಗೊಂಡಿದೆ.

೭.೨. ಬೈಬಲ್ ಸಂವಹನ ಮಾಧ್ಯಮವಾಗಿ ಬಳಕೆಗೊಂಡ ಪರಿ

ಆಯಾ ಜನಾಂಗಕ್ಕೆ ಅವರದೆ ಆದ ಧಾರ್ಮಿಕ ಪವಿತ್ರ ಗ್ರಂಥಗಳು ಇರುವುದು ಸಹಜ. ಆದರೆ ಜನಾಂಗದ ಅರುಹಿಗೆ ಅವರ ಬದುಕಿನ ಮಟ್ಟಕ್ಕೆ ಹಾಗೂ ಬಳಕೆಗೆ ಇಂಥಹ ಪವಿತ್ರಗ್ರಂಥಗಳ ಉಪಯುಕ್ತತೆ ಕುರಿತು ಚಿಂತಿಸಿದಾಗ, ಎಷ್ಟೋ ಜನಾಂಗ ಧರ್ಮೀಯರಿಗೆ ಅವರ ಧಾರ್ಮಿಕ ಗ್ರಂಥಗಳ ತಿಳುವಳಿಕೆ ಇರದೆ ಇರುವುದು ಹೆಚ್ಚು. ಆದರೆ ಕ್ರೈಸ್ತ ಜನಾಂಗವನ್ನು ದೃಷ್ಟಿಸಿದಾಗ ಹಾಗೂ ಇಸ್ಲಾಂ ಜನಾಂಗವನ್ನು ದೃಷ್ಟಿಸಿದಾಗ ತಮ್ಮ ಧರ್ಮ ಗ್ರಂಥವನ್ನು ಚಾಚೂ ತಪ್ಪದೆ ಅನ್ವಯಿಸುವುದು ಕಂಡುಬರುವುದು.

ಪಾಶ್ಚಾತ್ಯ ಧರ್ಮದ ಸಂವಹನ ಮಾಧ್ಯಮದಲ್ಲಿ ಆಯಾ ಧರ್ಮಗ್ರಂಥಗಳ ಬಳಕೆ ಕುರಿತು ಕನ್ನಡ ಸಾಹಿತ್ಯದಲ್ಲಿ ಮಾಹಿತಿ ಸಿಗುವುದು ಬಹು ವಿರಳ. ಕೇವಲ ಬೆರಳೆಣಿಕೆ ಮಾತ್ರ. ಹೀಗಿರುವಾಗ ಕ್ರೈಸ್ತ ಧರ್ಮದವರು ತಮ್ಮ ಧಾರ್ಮಿಕ ಸಭೆ-ಸಮಾರಂಭ. ಜನನ-ಮದುವೆ-ಮರಣ ಮುಂತಾದ ಸಾಂಪ್ರದಾಯಿಕ ಆಚರಣೆಯಲ್ಲಿ, ಬೈಬಲ್ ಬಳಕೆ ಹೇಗೆ ಎಂಬುದರ ಮಾಹಿತಿಯನ್ನು ಈ ಅಧ್ಯಯನ ವಿವರಿಸುವಲ್ಲಿ ಪ್ರಯತ್ನಿಸಿದೆ. ಇಲ್ಲಿ ಕ್ರೈಸ್ತ ಹಬ್ಬ-ಹರಿದಿನಗಳ ಹಾಗೂ ಕ್ರೀಯಾ ವಿಧಿ-ವಿಧಾನಗಳ ಮಹತ್ವ, ಪ್ರಯೋಜನ ಹಾಗೂ ಧರ್ಮಗ್ರಂಥಕ್ಕೆ ಹೊಂದಿಕೊಂಡು ಜನರ ನಂಬಿಕೆ ಕುರಿತು ವಿಶ್ಲೇಷಿಸಲಾಗಿದೆ.

ಕ್ರೈಸ್ತ ಜನಾಂಗದಲ್ಲಿ ಹಾಗೂ ಚರ್ಚಗಳಲ್ಲಿ ದೇವರ ಸ್ತುತಿಯೊಂದಿಗೆ ಸಂಗೀತದ ಬಳಕೆ ಕೂಡ ಒಂದು ಮಹತ್ವದ ಸ್ಥಾನ ಪಡೆದಿದೆ. ಈ ಕುರಿತು ವಿವೇಚಿಸುವಾಗ ಪಾಶ್ಚಾತ್ಯ ಸಂಗೀತದ ಮಹತ್ವ ವಿಶಿಷ್ಟತೆ ಹಾಗೂ ಭಾರತೀಯ ಸಂಗೀತದ ಮೇಲೆ ಅದರ ಪ್ರಭಾವವನ್ನು ಈ ಅಧ್ಯಯನದಲ್ಲಿ ಗುರಿತಿಸಲಾಗಿದೆ.

೭.೪. ಮಿಶನರಿಗಳಿಂದ ರಚಿತಗೊಂಡ ಕನ್ನಡ ಕೃತಿಗಳ ಮಾಹಿತಿ

ಕ್ರೈಸ್ತ ಸಾಹಿತ್ಯವು ಹೆಚ್ಚಾಗಿ ಅನುವಾದ ಇಲ್ಲವೆ ಪರಿವರ್ತನ ರೂಪದಲ್ಲಿದೆ, ಸ್ವತಂತ್ರ ರಚನೆಯನ್ನು ಮಾಡುವ ಸಾಮರ್ಥ್ಯವು ಕರ್ನಾಟಕದ ಅಂದಿನ ಮಿಶನರಿಗಳಲ್ಲಿ ಇದ್ದಿಲ್ಲವೆಂದಲ್ಲ. ಅವರ ಮುಖ್ಯ ಉದ್ದೇಶವು ಸಾಹಿತ್ಯ ನಿರ್ಮಿತಿಯಾಗಲೀ, ತಾತ್ವಿಕ ವಿವೇಚನೆಯಾಗಲೀ ಅಲ್ಲ. ವಿದೇಶಿ ಭಾಷೆಗಳಲ್ಲದೆ ನೆರೆಯ ತಮಿಳು, ತೆಲಗು ಹಾಗೂ ಮರಾಠೀ ಭಾಷೆಗಳಿಂದಲೂ ಕರ್ನಾಟಕದ ಮಿಶನರಿಗಳು ಗ್ರಂಥಗಳನ್ನು ಅನುವಾದಿಸಿದುದು ಕಂಡುಬರುತ್ತದೆ. ಇಂತು ಮತ ಪ್ರಸಾರದ ದೃಷ್ಟಿಯಿಂದ ಯಾವುದೇ ಭಾಷೆಯಲ್ಲಿರಲಿ ಅದನ್ನು ಅನುವಾದಿಸಿ ಮುದ್ರಿಸುವುದು ಅವರಿಗೆ ಸೂಕ್ತವಾಗಿ ಕಂಡಿತು.

ಮಿಶನರಿಗಳು ಸಾಹಿತ್ಯ ಕಾರ್ಯವೆಂದು ಪ್ರಾರಂಭಿಸಿರುವುದು ಬೈಬಲ್ ಅನುವಾದ. ಈ ಕಾರ್ಯಕ್ಕೆ ಉಪಯುಕ್ತವೆನಿಸುವ ಶಬ್ದಕೋಶಗಳನ್ನು ನಂತರ ವ್ಯಾಕರಣ ಅಂಶಗಳನ್ನು ಹೆಚ್ಚಾಗಿ ಮುಂದುವರೆಸಿದರು. ಜನರಿಗೆ ಬೈಬಲ್ ಇನ್ನೂ ಹೆಚ್ಚಾಗಿ ಗ್ರಾಹ್ಯವಾಗಬೇಕೆಂಬ ಯೋಚನೆ ಬಂದಾಗ ಅವರು ಬೈಬಲ್ ವ್ಯಾಖ್ಯಾನಗಳನ್ನು ರಚಿಸತೊಡಗಿದರು. ತದನಂತರದಲ್ಲಿ ಬೈಬಲ್ ಕಥೆಗಳು, ಬೈಬಲ್ ಆಧಾರಿತ ಸಂಭಾಷಣೆ, ಪತ್ರಲೇಖನ ಕಲ್ಪನಾ ಹಾಗೂ ಊಹಾ ಸಾಹಿತ್ಯವನ್ನು ಬೈಬಲ್ ಪೂರಕ ಸಾಹಿತ್ಯವಾಗಿ ಬರೆಯ ತೊಡಗಿದರು. ಕ್ರೈಸ್ತ ಜನರಿಗಾಗಿ ಧಾರ್ಮಿಕ ಕಟ್ಟುಪಾಡು-ಹಬ್ಬ-ಹರಿದಿನಗಳು ಸಂಪ್ರದಾಯಿಕ ಅಂಶಗಳನ್ನು ಅನುಸರಿಸುವ ಸಾಹಿತ್ಯವು ಬೆಳೆದುಬಂತು. ಕ್ರೈಸ್ತ ಧಾರ್ಮಿಕ ಸಿದ್ಧಾಂತ ಬೆಳೆದಂತೆಲ್ಲ. ಅನ್ಯ ಧರ್ಮೀಯರೊಡನೆ ತೂಗಿ ನೋಡುವ ಪ್ರವೃತ್ತಿ ಧರ್ಮಪ್ರಸಾರಕ್ಕಾಗಿ ಹುಟ್ಟಿಬಂದಿತು. ಇದರ ತತ್ಫಲವೇ ಅನ್ಯಧರ್ಮೀಯ ಟೀಕೆ, ಟಿಪ್ಪಣಿ, ವಾಗ್ವಾದಕ್ಕೆ ಎಡೆಕೊಡುವ ಸಾಹಿತ್ಯ ಮೂಡಿ ಬಂದು ಹೊಸಗನ್ನಡ ಸಾಹಿತ್ಯದ ಕಸುವು ಗಟ್ಟಿಗೊಳ್ಳಲು ಭಾಷೆ ಸ್ಫುಟವಾಗಲು ಅನುಕೂಲವಾಯಿತು. ಹಾಗೂ ಟೀಕೆಗೊಳಗಾದ ಧರ್ಮಗಳು ತಮ್ಮ

ತಮ್ಮ ಸ್ವವಿಮರ್ಶೆಗೆ ತೊಡಗಿ ಅನೇಕ ಶಾಖೆಗಳಾಗಿ ಬೆಳೆದು ನಿಲ್ಲುವಲ್ಲಿ ಮಿಶನರಿಗಳ ಮತೀಯ ವಿಚಾರಗಳ ಪ್ರತಿಫಲವನ್ನು ನಾವು ಕಾಣುತ್ತೇವೆ. ಉದಾಹರಣೆಗೆ ಬ್ರಹ್ಮೊಸಮಾಜ, ರಾಮ ಕೃಷ್ಣಮಿಶನ್, ಹರೆರಾಮ ಹರೆ ಕೃಷ್ಣಮಿಶನ್ ಮುಂ.

ಭಾರತ ದೇಶಕ್ಕೆ ಅದರಲ್ಲಿಯೂ ಕರ್ನಾಟಕಕ್ಕೆ ಬಂದ ಮಿಶನರಿಗಳು ಕನ್ನಡ ಸಾಹಿತ್ಯಕ್ಕಾಗಿ ವಿಶೇಷ ಆಸಕ್ತಿವಹಿಸಿದುದು ನೇರವಾಗಿ ಕಂಡುಬರುತ್ತಿದ್ದರು. ಅವರು ಮಾಡಿದ ಸಾಹಿತ್ಯ ಕಾರ್ಯವನ್ನು ಮುಕ್ತಕಂಠದಿಂದ ಹೊಗಳಲು ಯೋಗ್ಯವಾಗಿದ್ದರು. ಮತೀಯ ಭಾವನೆಯಿಂದೆನೋ ಮೆಚ್ಚಿಗೆ ವ್ಯಕ್ತಪಡಿಸದ ಉಕ್ತಿಗಳು ಉಂಟು. ಉದಾ : "ಹೀಗೆ ಮಿಶನರಿ ಜನರು ಭಾರತೀಯರಿಗೆ ಅವರ ಏಳ್ಗೆಗಾಗಿ ಇಂಥ ಕಾರ್ಯವನ್ನು ಕೈಕೊಂಡವರೇನಲ್ಲ. ಅವರು ಭಾರತದ ಪ್ರಾಚೀನ ಗ್ರಂಥಗಳಲ್ಲಿ. ಸಾಂಸ್ಕೃತಿಕ ಪರಂಪರೆಯಲ್ಲಿ ಆಸಕ್ತಿವಹಿಸಿದ್ದರೆ, ಅದು ಸ್ವಮತ ಪ್ರಸಾರದ ಉದ್ದೇಶ ಸಾಧನೆಗಾಗಿಯೇ".[೧] ಹೀಗೆ ಮೀಶನರಿಗಳು ಬ್ರಿಟೀಷರು ಕೇವಲ ಸ್ವಮತ ಪ್ರಚಾರಕ್ಕಾಗಿ ಮಾಡಿದ್ದರೆ ಅವರನ್ಯಾರು ಹೊಗಳುತಿದ್ದಿಲ್ಲ. ಅವರ ಒಬ್ಬೊಬ್ಬರ ಕಾರ್ಯವನ್ನು ಇಂದಿಗೂ ಒಂದೊಂದು ಸಂಸ್ಥೆಗಳು ಮಾಡಲಾಗಿಲ್ಲವೆಂದರೆ ತಪ್ಪಾಗಲಿಕ್ಕಿಲ್ಲ. ಮಿಶನರಿಗಳಲ್ಲದ ಮೆಕೆಂಝಿ, ಬುಕನನ್, ವಾಲ್ಟರ್ ಎಲಿಯಟ್, ಬಿ.ಎಲ್.ರೈಸ್, ಜೆ.ಎಫ್.ಫ್ಲೀಟ್ ಮುಂತಾದವರ ಕಾರ್ಯ ಶ್ಲಾಘನೀಯ. ಕೇವಲ ಮೆಕೆಂಝಿ ಒಬ್ಬನೇ ಕ್ರಿ.ಶ.೧೭೮೩ರಲ್ಲಿ ಸರ್ವೆಯರ್ ಜನರಲ್ ಆಗಿ ಮುಂದೆ ೩೮ ವರ್ಷ ಒಮ್ಮೆಯೂ ಸ್ವದೇಶಕ್ಕೆ ಹೋಗದೆ ಕ್ಷೇತ್ರ ಕಾರ್ಯದಲ್ಲಿ ತೊಡಗಿ ೧೭೦೦ ಶಿಲಾಲೇಖನ ಮತ್ತು ತಾಮ್ರ ಶಾಸನಗಳನ್ನು ೨೦೦ಕ್ಕೂ ಅಧಿಕ ಕನ್ನಡ ಹಸ್ತಪ್ರತಿಗಳು ಜೊತೆಗೆ ಐತಿಹ್ಯ, ಸ್ಥಳಪುರಾಣಗಳನ್ನು ಸಂಗ್ರಹಿಸಿದ್ದಾನೆ. ಇವು ಅವನ ಆಸಕ್ತಿಯ ಕಾರ್ಯಗಳು. ಆದರೆ ತನಗೆ ನೇಮಕಗೊಂಡ ಕಾರ್ಯವನ್ನು ಮಾಡುತ್ತಾ ಕನ್ನಡ ಜನತೆಗೆ ಉಪಯಕ್ತತೆಗೆ ಸಂಗ್ರಹಿಸಿದ್ದು ಕ್ರೈಸ್ತ ಧರ್ಮ ಪ್ರಚಾರಕ್ಕಾಗಿ ಅಲ್ಲ. ಹೀಗೆ ಅನೇಕ ಮಿಶನರಿಗಳಲ್ಲದ್ದವರು ಹಾಗೂ ಮಿಶನರಿಗಳು ಕನ್ನಡಕ್ಕೆ ಸೇವೆ ಸಲ್ಲಿಸಿದ್ದು, ಕೇವಲ ಧರ್ಮ ಪ್ರಸಾರಕ್ಕಾಗಿಯೇ ಎಂದೆನ್ನುವಲ್ಲಿ ಅರ್ಥವಿಲ್ಲ. ನಾಲ್ಕು 'ವಿಶ್ವವಿದ್ಯಾಲಯಗಳು ಸೇರಿ ಮಾಡಬೇಕಾದ ಕಾರ್ಯವನ್ನು ಕಿಟಲ್ ಒಬ್ಬರೇ ಕನ್ನಡ ನಿಘಂಟನ್ನು ರಚಿಸಿರುವುದು ಪರದೇಶಿಯನ ಕನ್ನಡ ಪ್ರೇಮಕ್ಕೆ ಜ್ವಲಂತ ಸಾಕ್ಷಿಯಾಗಿದೆ.

ಮಿಶನರಿಗಳು ರಚಿಸಿದ ಕನ್ನಡ ಗ್ರಂಥಗಳು ಒಟ್ಟಿನಲ್ಲಿ ಬೈಬಲ್ ಸಾಹಿತ್ಯ, ಬೈಬಲ್ ಪೂರಕ ಸಾಹಿತ್ಯ, ಧಾರ್ಮಿಕ ಪದ್ಯ ಹಾಗೂ ಕಥನ ಸಾಹಿತ್ಯ ಹಾಗೂ ಹಿಂದೂ, ಇಸ್ಲಾಂ, ಜೈನ, ಬೌದ್ಧ ಕುರಿತ ವಿಮರ್ಶೆ ಹಾಗೂ ಟೀಕಾ ಸಾಹಿತ್ಯ.

---

೧. ಹೊ.ಅ.ಶ್ರೀ.ಹಾ., ಪು.೧೫

೭.೫. ಬೈಬಲ್ ಪ್ರಭಾವ ಇತರ ಧರ್ಮಗಳ ಮೇಲೆ

"ಕ್ರೈಸ್ತ ಮಿಶನರಿಗಳು ತಂಡೋಪತಂಡವಾಗಿ ಭಾರತಕ್ಕೆ ಬಂದು ಮತಾಂತರಕ್ಕೆ ತೊಡಗಿದರು. ಇದರ ಒಂದು ಅಂಗವಾಗಿ ಹಿಂದೂ ಧರ್ಮದ ಮತ್ತು ಭಾರತೀಯ ಸಮಾಜದಲ್ಲಿದ್ದ ಮೂಢನಂಬಿಕೆಗಳನ್ನು ಖಂಡಿಸುವುದಕ್ಕೆ ತೊಡಗಿದರು... ಹೀಗೆ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವಕ್ಕೆ ಭಾರತೀಯ ಸಂಸ್ಕೃತಿಯು ಕೊಚ್ಚಿ ಹೋಗುತ್ತದೆ ಎನ್ನುವ ಸಂದರ್ಭಕ್ಕೆ ಸರಿಯಾಗಿ ಕೆಲವು ನಾಯಕರು ಮೂಡಿ ಬಂದರು. ಇವರು ಇದ್ದ ಪರಿಸ್ಥಿತಿಯನ್ನು ಪ್ರಶ್ನಿಸಲಾರಂಭಿಸಿದರು. ಪಾಶ್ಚಾತ್ಯ ಸಂಸ್ಕೃತಿಯ ಯಶಸ್ಸಿಗೆ ಮತ್ತು ಭಾರತೀಯ ಸಂಸ್ಕೃತಿಯ ಕುಂದು ಕೊರತೆಗಳಿಗೆ ಕಾರಣಗಳನ್ನು ಹುಡುಕಲು ಪ್ರಯತ್ನಿಸಿದರು. ಹಿಂದೂ ಧರ್ಮ ಮತ್ತು ಸಮಾಜವನ್ನು ಬದಲಾದ ಪರಿಸ್ಥಿತಿಗೆ ಅನುಗುಣವಾಗಿ ಹೇಗೆ ಸುಧಾರಿಸುವುದು? ಹಿಂದೂ ಧರ್ಮವನ್ನು ಹೇಗೆ ಪುನರುಜ್ಜೀವನಗೊಳಿಸುವುದು? ಹಿಂದೂಗಳಲ್ಲಿ ತಮ್ಮ ಧರ್ಮದ ಬಗ್ಗೆ ಆತ್ಮಾಭಿಮಾನವನ್ನು ಹೇಗೆ ಮೂಡಿಸುವುದು? ಇತ್ಯಾದಿ ಪ್ರಶ್ನೆಗಳು ಅವರನ್ನು ಕಾಡಿದವು. ಇದರ ಪರಿಣಾಮ ಧರ್ಮ ಸುಧಾರಕರು ಅನೇಕ ಪಂಥ ಹಾಗೂ ಮಿಶನ್ ಗಳನ್ನು ಸ್ಥಾಪಿಸಿದರು."[೧] ಮುಂದೆ ಧಾರ್ಮಿಕ ದೃಷ್ಟಿಕೋನ ಮಿಶನರಿಗಳ ಮತೀಯ ಸಾಹಿತ್ಯದ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಒಂದು ಪರ್ವಕಾಲವೇ ತಳೆದಂತಿದೆ.

ಭಾರತಕ್ಕೆ ಬಂದ ಮಿಶನರಿಗಳು ಆಯಾ ಸ್ಥಳದಲ್ಲಿದ್ದುಕೊಂಡು ಆಯಾ ಸ್ಥಳೀಯ ಭಾಷೆಗಳಲ್ಲಿ ತಮ್ಮ ಧಾರ್ಮಿಕ ಸಾಹಿತ್ಯ ಪ್ರಾರಂಭಿಸಿದರು. ಹಾಗೆ ಕನ್ನಡದಲ್ಲಿ ಬೈಬಲ್ ಭಾಷಾಂತರಗೊಳ್ಳುವುದರೊಂದಿಗೆ ಹೊಸಗನ್ನಡ ಉದಯವನ್ನು ನಾವು ಕಾಣುತ್ತೇವೆ. ಹೊಸಗನ್ನಡ ಶೈಲಿಯಲ್ಲಿ ರೂಪಪಡೆದ ಯಾವೊಂದು ಧಾರ್ಮಿಕ ಗ್ರಂಥಗಳು ಅಷ್ಟು ಸುಲಭದಲ್ಲಿ, ಓದಲು ಹಾಗೂ ಪಡೆದುಕೊಳ್ಳಲು ಅನುಕೂಲವಿರದ ಕಾಲದಲ್ಲಿ ಬೈಬಲ್ ಕನ್ನಡದಲ್ಲಿ ಬಹುಬೇಗ ಜನಪ್ರಿಯತೆಯನ್ನು ಪಡೆದುಕೊಂಡಿತು. ಮೈಸೂರ ಅರಸರ ಕಾಲದ ಎಲ್ಲ ವಿದ್ವಾಂಸರಿಗೂ ಸುಲಭದಲ್ಲಿ ಲಭ್ಯವಾಗಿತ್ತು. ಈ ಹೊಸಗನ್ನಡ ಶೈಲಿಯಿಂದ ಸ್ಫೂರ್ತಿ ಪಡೆದು ಮುಂದಿನ ದಿನಗಳಲ್ಲಿ ಹೊಸಗನ್ನಡ ಕೃತಿಗಳು ಜನ್ಮ ತಾಳಿದವು.

ಬೈಬಲ್ ಭಾಷಾಂತರದೊಂದಿಗೆ ಕ್ರೈಸ್ತ ಧರ್ಮ ಪ್ರಚಾರಕ್ಕಾಗಿ ಅವರು ಬೈಬಲ್ ವ್ಯಾಖ್ಯಾನಗಳನ್ನು ಬರೆದರು. ನಂತರ ಹಿಂದೂ ಧರ್ಮದ ಅಂಶಗಳೊಂದಿಗೆ ತುಲನಾತ್ಮಕ ದೃಷ್ಟಿಕೋನ ಬೆಳೆಯಿಸಲು ಮತೀಯ ಸಾಹಿತ್ಯ ಸೃಷ್ಟಿಗೆ ತೊಡಗಿದರು. ಇದರಿಂದ ಧರ್ಮಗಳ ವಿಮರ್ಶೆ-ಟೀಕೆಗಳು ತಲೆ ಎತ್ತಿ ನಿಲ್ಲುವುದಲ್ಲದೆ ಮತೀಯ ಭಾವನೆ ಕೆರಳಿ ನಿಲ್ಲಲು ಅನುವಾಯಿತು. ಏಕದೇವೋಪಾಸನೆ ಭರದಲ್ಲಿ ಅವರು ಇತರ ದೇವರನ್ನು ವಿಮರ್ಶಿಸುವ, ಹಳಿಯುವ ನಿಲುವಿಗೆ ತಲುಪಿದುದರ ಪರಿಣಾಮವಾಗಿ,

೧. ಧರ್ಮ ರಹಮತ್ ತರೀಕೆರೆ, ಹಂಪಿ, ಪು.೫೭

ಹಿಂದೂ ಧರ್ಮ ಜಾಗೃತಿ ಪ್ರಶ್ನೆ ಹುಟ್ಟಿ, ಅನೇಕ ಮಿಶನ್‌ಗಳು ಹುಟ್ಟುವಂತಾಯಿತು. ಮಿಶನರಿಗಳ ಸುಮಾರು ೩೦ಕ್ಕೂ ಹೆಚ್ಚು ಹೊಸಗನ್ನಡ ಕೃತಿಗಳು ಹಿಂದೂ ಧರ್ಮವನ್ನು ಜಾಗೃತಿಯ ಕಡೆಗೆ ಆಹ್ವಾನಿಸಿದವು. ಇವುಗಳಲ್ಲಿ ಪ್ರಮುಖವಾದವುಗಳು ಬಜಾರ ಬುಕ್ (ಕಿರಣ ಮಾಲಿಕೆ) ಈರಾರು ಪತ್ರಿಕೆ, ವೇದದಲ್ಲಿ ಏನಿದೆ, ಜನ್ಮಾಂತರ ವಿಚಾರಣೆ, ವಿಕೀರ್ಣ ಸುಭಾಷಿತ ಪ್ರಸಂಗ ಶತಕ ಮತ್ತು ಜಾತಿ ವಿಚಾರಣೆ ಇನ್ನೂ ಮುಂತಾದವುಗಳು. ಇವುಗಳಲ್ಲಿ ವಿಕೀರ್ಣ ಸುಭಾಷಿತ ಪ್ರಸಂಗ ಶತಕ'ವನ್ನು ಕುರಿತು ನೋಡುವುದಾದರೆ ಶ್ರೀ ಹಾವನೂರವರು ತಮ್ಮ ಹೊಸಗನ್ನಡ ಅರುಣೋದಯದಲ್ಲಿ "೧೦೭ ಸಂಸ್ಕೃತ ಶ್ಲೋಕಗಳನ್ನು ಆಯ್ದು ಅರ್ಥಸಹಿತ ಕೊಡಲಾಗಿದೆ. ಕ್ರೈಸ್ತ ಮತಕ್ಕೆ ಅನುಕೂಲವಾಗುವಂತೆ ಇಲ್ಲವೆ. ಹಿಂದೂಧರ್ಮವನ್ನು ತೆಗಳುವುದಕ್ಕೆ ಆಸ್ಪದವಿರುವ ಪದ್ಯಗಳನಷ್ಟೇ ಅದರಲ್ಲಿ ತೆಗೆದುಕೊಂಡಿದ್ದಾರೆ. ೯೫ನೇ ಶ್ಲೋಕದಿಂದ ಈ ತೆಗಳಿಕೆ ಹೆಚ್ಚುತ್ತ ನಡೆದಿದೆ" ಎಂದಿರುವರು.

ಈ ಕೃತಿಯು ಕ್ರಿಸ್ತನನ್ನು ನಂಬಿ ಹಿಂದೂ ಧರ್ಮವನ್ನು ತಿಳಿದವನಾದ ದೇಶೀಯ ಕ್ರಿಸ್ತಾನುಜ ವಾತ್ಸನು ರಚಿಸಿರುವನು. ಇಲ್ಲಿಯ ೧೦೦ ಶ್ಲೋಕಗಳು ಯಾವೊಂದು ಧರ್ಮವನ್ನು ಟೀಕಿಸುವುದಕ್ಕಾಗಿ ಮಿಶನರಿಗಳಿಂದ ರಚಿತವಾದವುಗಳಲ್ಲ. ಹಿಂದೂ ಧರ್ಮದಲ್ಲಿಯ ಮೂಢನಂಬಿಕೆಯನ್ನು ಎತ್ತಿ ತೋರಿಸಲು ನಮ್ಮ ದೇಶದ ಮಹಾನ್ ಗ್ರಂಥಗಳಿಂದ ಆಯ್ದ ಶ್ಲೋಕಗಳು. ಇವು ಕೇವಲ ಕ್ರೈಸ್ತ ಧರ್ಮ ನಿರೂಪಣೆಗಾಗಿ ಬಳಕೆಯಾದವುಗಳೆಂದು ಹಾವನೂರರವರು ಹೇಳುವ ದೃಷ್ಟಿ ಮತೀಯ ಭಾವನೆಯನ್ನು ತಳೆದುದಾಗುತ್ತದೆ ಎಂದರೆ ತಪ್ಪಾಗಲಾರದು. ಶತಕ ಎಂದು ಹೆಸರುಗೊಂಡ ನೂರು ಶ್ಲೋಕಗಳು ಸತ್ಯ-ನೀತಿ ಮಾರ್ಗದೆಡೆಗೆ ನಡೆಯುವ ನಡೆನುಡಿಯನ್ನು ಸೂಚಿಸಿ ಕೊನೆಯಲ್ಲಿ ಕ್ರೈಸ್ತ ಧರ್ಮವನ್ನು ಅಳವಡಿಸಲಾಗಿದೆ.

ಮಿಶನರಿಗಳು ಭಾರತಕ್ಕೆ ಬರುವ ಪೂರ್ವದಲ್ಲಿ ಭಾರತದಲ್ಲಿ ಒಂದು ಮತ ಇನ್ನೊಂದನ್ನು ಹಳಿಯುತ್ತಿರುವ ಉದಾಹರಣೆಗಳು ಸಾಕಷ್ಟು. "ಅನೇಕ ವಿದ್ವಾಂಸರು ವೇದ ಮತ್ತು ಉಪನಿಷತ್ತುಗಳಲ್ಲಿ ವ್ಯಕ್ತವಾಗುವ ಉದಾತ್ತ ವಿಚಾರಗಳನ್ನು ಮತ್ತು ಆಧ್ಯಾತ್ಮ ಹಿರಿಮೆಗಳನ್ನು ಅಭಿಮಾನದಿಂದ ಉಲ್ಲೇಖಿಸಿದ್ದಾರೆ. ಆದರೆ ಅನಂತರ ರಚನೆಯಾದ ಸ್ಮೃತಿ ಅಥವಾ ಧರ್ಮಶಾಸ್ತ್ರಗಳು ಪ್ರತಿಪಾದಿಸುವ ಚಾತುರ್ವರ್ಣ್ಯ ಅಥವಾ 'ಜಾತಿ' ವ್ಯವಸ್ಥೆಗಳ ಬಗ್ಗೆ ದಿವ್ಯ ನಿರ್ಲಕ್ಷ ತಾಳುತ್ತಾರೆ."[೧]

ಮಿಶನರಿಗಳ ಧಾರ್ಮಿಕ ಹೊಸ ದೃಷ್ಟಿಕೋನದ ಪರಿಣಾಮ, ಹಿಂದೂ ಧರ್ಮ ಹಾಗೂ ಜಾತಿ ವ್ಯವಸ್ಥೆಯ ವಿರುದ್ಧ ಉಗ್ರವಾಗಿ ಹೋರಾಡಿದವರಲ್ಲಿ ಮಹಾತ್ಮಪುಲೆ, ಡಾ.ಬಿ.ಆರ್.ಅಂಬೇಡ್ಕರ್, ರಾಮಸ್ವಾಮಿ ಪೆರಿಯಾರ ಪ್ರಮುಖರು. ಮಹಾತ್ಮಪುಲೆ ಹಿಂದೂ ಸಾಂಪ್ರದಾಯ ವಾದಿಗಳ ವಿರುದ್ಧ ಪ್ರಬಲ ಸಾಂಸ್ಕೃತಿಕ ಚಳುವಳಿಯನ್ನು ನಡೆಸಿದರು. ಡಾ.ಅಂಬೇಡ್ಕರ್ ಹಿಂದೂ ಧಾರ್ಮಿಕ ವ್ಯವಸ್ಥೆಯ

೧. ಧರ್ಮ ರಮಹತ್ ತರೀಕೆರೆ, ಪು.೫೪

ವಿರುದ್ಧ ಯುದ್ಧವನ್ನೇ ಸಾರಿದರು. ಹಿಂದೂ ಮತೀಯ ಗ್ರಂಥಗಳಾದ ವೇದಗಳು, ಉಪನಿಷತ್ತುಗಳು, ಧರ್ಮ ಶಾಸ್ತ್ರಗಳು ಮತ್ತು ಪುರಾಣಗಳ ಮೇಲೆ ವೈಜ್ಞಾನಿಕ ವಿಮರ್ಶೆಯನ್ನು ಬರೆದರು. ಈ ಗ್ರಂಥಗಳು ಎಷ್ಟು ಅವೈಜ್ಞಾನಿಕವಾದವುಗಳೆಂಬುದನ್ನು ಮನದಟ್ಟು ಮಾಡಿಕೊಟ್ಟರು.

ರಾಮಸ್ವಾಮಿ ಪೆರಿಯಾರರು ಹಿಂದೂ ಧರ್ಮಕ್ಕೆ ವಿರುದ್ಧವಾಗಿ ಆತ್ಮ ಗೌರವ ಚಳುವಳಿಯನ್ನು ಪ್ರಾರಂಭಿಸಿದರು. ದಕ್ಷಿಣ ಭಾರತದಲ್ಲಿ ಹಿಂದೂ ಧರ್ಮದ ಮೂಢನಂಬಿಕೆಗಳ ವಿರುದ್ಧ ಮತ್ತು ಹಿಂದೂ ಮೇಲ್ಜಾತಿಯ ಶಕ್ತಿಗಳ ವಿರುದ್ಧ ನಿರ್ಭಯವಾಗಿ ಹೋರಾಡಿದರು.

ಕ್ರೈಸ್ತ ಧರ್ಮ ತತ್ವಗಳು, ಬೈಬಲ್ ಆಧಾರಿತ ಸಾಹಿತ್ಯಗಳು, ಭಾರತದಲ್ಲಿ ಕರ್ನಾಟಕದಲ್ಲಿ ಧರ್ಮ ಜಾಗೃತಿಯನ್ನುಂಟು ಮಾಡಿರುವಲ್ಲಿ ಎರಡು ಮಾತಿಲ್ಲ. 'ಮಿಶನರಿಗಳ ಸಾಹಿತ್ಯ ಕಾರ್ಯ ಪ್ರಾರಂಭವಾದಾಗಿನಿಂದ ತಾತ್ವಿಕ ಮತ್ತು ಭಕ್ತಿಪರ ಬರಹಗಳು ಹಾಗೂ ಹಿಂದೂ ಧರ್ಮದ ಟೀಕೆ, ಪ್ರತಿ ಟೀಕೆಗಳು ಉದ್ಭವಿಸಿದವು. ತತ್ಫಲವಾಗಿ ಅನೇಕ ಧಾರ್ಮಿಕ ಪಂಥ ಹಾಗೂ ಮಿಶನ್‌ಗಳು ಉದಯಿಸಿದವು.

ರಾಜಾರಾಮ್ ಮೋಹನ್ ರಾಯ್ "ಕ್ರೈಸ್ತ ಧರ್ಮ ಮತ್ತು ಪಾಶ್ಚಾತ್ಯ ಸಂಸ್ಕೃತಿಗಳಿಂದ ಪ್ರಭಾವಿತರಾಗಿ ಹಿಂದೂಧರ್ಮ ಮತ್ತು ಸಮಾಜದ ಪುನರುಜ್ಜೀವನಕ್ಕಾಗಿ ಪಣತೊಟ್ಟು" ೧೭೭೨ರಲ್ಲಿ ಬ್ರಹ್ಮ ಸಮಾಜವನ್ನು ನಿರ್ಮಿಸಿದರು.

ಇಸ್ಲಾಂ ಧರ್ಮ ಕುರಿತು ಮಿಶನರಿಗಳು ಲೇಖನ ಪುಸ್ತಕಗಳನ್ನು ಬರೆದುದರ ಫಲವಾಗಿ "ಕ್ರೈಸ್ತ ಮಿಶನರಿಗಳ ಕಾರ್ಯಾಚರಣೆ ಮತ್ತು ಆರ್ಯ ಸಮಾಜದ ಬಿರುಸಿನ ಚಟುವಟಿಕೆಗಳ ಪ್ರತಿಕ್ರಿಯೆಯಾಗಿ ಮಿರ್ಜಾಗುಲಾಮ್ ಅಹಮ್ಮದ್ (೧೮೪೯-೧೯೦೮)ರವರಿಂದ ಮಹಮ್ಮದೀಯ ಪಂಥವು ಸ್ಥಾಪನೆಯಾಯಿತು.

ದಯಾನಂದ ಸರಸ್ವತಿ (ಶಂಕರ ಮೂಲಹೆಸರು)ಯವರಿಂದ ೧೮೭೫ರಲ್ಲಿಯೇ ಆರ್ಯ ಸಮಾಜ ತಲೆ ಎತ್ತಿ ನಿಂತಿತು. ವಜ್ರ ವ್ಯಾಪಾರಿ ದಾದಾ ಲೇಖರಾಜ ೧೯೩೭ರಲ್ಲಿ 'ಓಂ ಮಂಡ್ಲಿ' ಸಭೆ ಸ್ಥಾಪಿಸಿ ನಂತರ ಸ್ತ್ರೀ ಸಮುದಾಯಕ್ಕೆ ತಮ್ಮ ಆಸ್ತಿ ಸಮೇತವಾಗಿ ಒಪ್ಪಿಸಿದ ಮೇಲೆ ಆ ಸ್ತ್ರೀಯರು ಬ್ರಹ್ಮಕುಮಾರಿಗಳೆಂದು ಹೆಸರಾದರು.

ರಾಮ ಕೃಷ್ಣ ಪರಮಹಂಸರು ಕಾಳಿಯ ಪೂಜಾರಿಗಳಿದ್ದು, ವೈಷ್ಣವ-ಮುಸ್ಲಿಂ ಹಾಗೂ ಕ್ರೈಸ್ತ ಭಕ್ತಿಗಳಲ್ಲಿ ಉಪಾಸನೆ ಕೈಕೊಂಡು ಎಲ್ಲ ದೇವರನ್ನು ಸಾಕ್ಷಾತ್ಕಾರ ಮಾಡಿಕೊಂಡರು. ಮುಂದೆ ರಾಮಕೃಷ್ಣ ಮಿಶನ್ ಅಸ್ತಿತ್ವ ತಾಳಿತು.

೧೯೫೧ರಲ್ಲಿ ಚಿನ್ಮಯಾನಂದರು ಚಿನ್ಮಯ ಮಿಶನ್ ಸ್ಥಾಪಿಸಿದರು. ಪರದೇಶದಲ್ಲಿ ಪ್ರಚಲಿತವಿದ್ದ ಥಿಯೊಸೊಫಿಕಲ್ ಸೊಸೈಟಿ ಭಾರತದಲ್ಲಿ ಶ್ರೀಮತಿ ಅನಿಬೇಸೆಂಟ್‌ರಿಂದ ಪ್ರಾರಂಭಗೊಂಡು ಜಾತಿ-ಮತ-ಜನಾಂಗ ಮತ್ತು ವರ್ಣಭೇದಗಳಿಲ್ಲದೆ ಸಾರ್ವತ್ರಿಕ ಸಹೋದರತ್ವ ತರಲು ಶ್ರಮಿಸಿತು.

ಹೀಗೆ ಪಾಶ್ಚಾತ್ಯ ಧರ್ಮ ಭಾರತೀಯ ಧರ್ಮ ಜಾಗೃತಿಗೆ ಸಮ್ಮಿಳನಕ್ಕೆ ಕಾರಣವಾಗಿರುವಲ್ಲಿ ಸಂಶಯವಿಲ್ಲ.

೭.೬. ಎರಡು ಪ್ರಾಚೀನ ಹೊಸಗನ್ನಡದ ವಿಶಿಷ್ಟ ಕೃತಿಗಳ ಪರಿಚಯ : 'ಲೋಕ ಚರಿತೆ' ೧೮೫೪, 'ಬಜಾರ ಬುಕ್'

ಈ ನನ್ನ ಸಂಶೋಧನೆಯ ಸಮಯದಲ್ಲಿ ದೊರಕಿದ ಎರಡು ಹೊಸಗನ್ನಡದ ಪ್ರಮುಖ ಪುಸ್ತಕಗಳ ಪರಿಚಯವನ್ನು ಹೇಳುವುದು ನನ್ನ ಕರ್ತವ್ಯವೆಂದು ತಿಳಿದಿದ್ದೇನೆ. ಇದರಲ್ಲಿ ಮೊದಲನೆಯದು 'ಲೋಕ ಚರಿತೆ' ಎರಡನೇಯದು ಕಿರಣ ಮಾಲಿಕೆ ಅಥವಾ 'ಬಜಾರ್ ಬುಕ್'. ಈ ಪ್ರಬಂಧದ ೩ನೇ ಅಧ್ಯಾಯ ದಲ್ಲಿ ಇವುಗಳ ವಿವರವನ್ನು ನೋಡಿದ್ದಾಗಿದೆ.

'ಲೋಕಚರಿತೆ'ಯು ಕ್ರೈಸ್ತರ ಉತ್ತಮ ಗ್ರಂಥದಲ್ಲಿ ಒಂದಾಗಿದೆ. ಜೋಹನ್ ಹ್ಯೂಬರ್ ಒಬ್ಬ ಜರ್ಮನ್ ವಿದ್ವಾಂಸ ಕ್ರಿ.ಶ.೧೮೫೪ರಲ್ಲಿ ಜರ್ಮನ್ ಭಾಷೆಯಲ್ಲಿ ಗಿಶಾಯ್ದಿದೆ ವಾಲ್ಟ(Geshide walt)ನು ಬರೆದುದನ್ನು ಕನ್ನಡಕ್ಕೆ ಭಾಷಾಂತರಿಸಿದನು. ಇದೊಂದು ಕ್ರೈಸ್ತ ಪುರಾಣವೆನ್ನಬಹುದು. ಈ ಕೃತಿ ಮಂಗಳೂರ ಪ್ರೆಸ್ ನಲ್ಲಿ ಕಲ್ಲಚ್ಚಿನಿಂದ ಛಾಪಿಸಿದ್ದಾಗಿದೆ. ಲೋಕಚರಿತ್ರವು ಎಂದು ಎರಡು ಭಾಗದಲ್ಲಿದೆ. ಮೊದಲ ಭಾಗದಲ್ಲಿ ನಾಲ್ಕು ಅಧ್ಯಾಯಗಳು, ಎರಡನೆ ಭಾಗದಲ್ಲಿ ಎರಡು ಅಧ್ಯಾಯಗಳಿವೆ. ಒಟ್ಟು ೩೫೫ ಪುಟಗಳ ಸುದೀರ್ಘ ಪುಸ್ತಕ ಇದಾಗಿದೆ.

ಕ್ರಿಸ್ತನು ಈ ಲೋಕಕ್ಕೆ ಬರುವ ಮೊದಲು ನಡೆದ ವಿಷಯ, ಮೊದಲಿದ್ದ ಮನುಷ್ಯರ ವಂಶ ನಂತರ ಮ್ಲೇಚ್ಚರ ಮತ ಸ್ಥಾಪನೆ, ಸಂಸ್ಥಾನಗಳು ರಾಜಮನೆತನಗಳ ಹುಟ್ಟು ಮತ್ತು ಲೆಬೆನೂನ್ಯರು, ಅಸ್ಪೃಶ್ಯರು, ಮೇಸ್ಯರು, ಪಾರ್ಶಿಯರು ಇವರ ಮಾಹಿತಿ ಹಾಗೂ ಕ್ರೈಸ್ತ ಜನಾಂಗದ ಕುಟುಂಬಗಳ ಕಾಲ ಚರಿತ್ರೆ ಒಳಗೊಂಡಿದೆ. ಇಸ್ರಾಯೇಲರ ಮಾಹಿತಿ ಇದೆ. ತದನಂತರದಲ್ಲಿ ಗ್ರೀಕ್ ದೇಶದ ಜನಾಂಗ ರಾಜಮನೆತನಗಳ ಸಂಗ್ರಹ.

ಎರಡನೆ ಭಾಗದಲ್ಲಿ ಕ್ರಿಸ್ತನ ತರುವಾಯದ ಕಾಲ. ಅಂದಿನ ಧಾರ್ಮಿಕ ಸಂಪ್ರದಾಯ ಏಕ ದೇವೋಪಾಸನೆಯ ವಿಷಯ ಒಳಗೊಂಡಿದೆ. ೧೮೫೪ರಲ್ಲಿ ಈ ಕೃತಿ ಹೊಸಗನ್ನಡದ ಹೊಸ ಅಚ್ಚಿನಲ್ಲಿ ಕನ್ನಡಿಗರಿಗೆ ಕ್ರೈಸ್ತ ಧರ್ಮ ಹಾಗೂ ಮಾನವ ಜನಾಂಗದ ವಂಶಾವಳಿಯನ್ನು ಸೂಚಿಸಲು ಅನುಕೂಲಕರ ಹಾಗೂ ವಿಲಾಯತಿಯ ಧಾರ್ಮಿಕ ವಿಷಯಗಳ ಮಾಹಿತಿ ಒದಗಿಸುವ ಗ್ರಂಥವಾಗಿ ಬಳಕೆಗೊಂಡಿತ್ತು. ಈ ಕೃತಿ ದೊರೆತಿರುವುದರಿಂದ ಇನ್ನೂ ಹೆಚ್ಚಿನ ಮಾಹಿತಿ ದೊರೆಯುವಲ್ಲಿ ಸಂಶಯವಿಲ್ಲ. ದ್ವಿತೀಯ ಗ್ರಂಥ. 'ಬಜಾರ ಬುಕ್' ಈ ಪುಸ್ತಕದ ಮೇಲೆ ಕಿರಣಮಾಲಿಕೆ ಎಂದೂ ಬರೆಯಲಾಗಿದೆ.

ಐ.ಮಾ.ಮುತ್ತಣ್ಣನವರು ತಮ್ಮ ೧೯ನೇ ಶತಮಾನದಲ್ಲಿ ಪಾಶ್ಚಾತ್ಯ ವಿದ್ವಾಂಸರ ಕನ್ನಡ ಸೇವೆ ಎಂಬ ಪುಸ್ತಕದ (ಪು.೪೪೯)ಲ್ಲಿ ಈ ಬಜಾರ್ ಬುಕ್ ಎಂದು ತಲೆಬರಹವನ್ನು ಕಂಡು ಇದೊಂದು 'ಸಂತೆ ಲೆಕ್ಕಗಳ ವ್ಯವಹಾರಗಳನ್ನು ತಿಳಿಸುವ ಪುಸ್ತಕವೆಂದು ಅಭಿಪ್ರಾಯಪಟ್ಟರು. ಇವರ ಹೇಳಿಕೆಯನ್ನು ವಿಮರ್ಶಿಸಲು ಹೊರಟ ಶ್ರೀನಿವಾಸ ಹಾವನೂರರು ಈ ಪುಸ್ತಕದ ಕುರಿತು ಏನೂ ವಿವರ ಹೇಳದೆ ಇದು ಲೆಕ್ಕಪತ್ರದ ಕೃತಿಯಲ್ಲ. ಇದು ಕ್ರೈಸ್ತ ಮತೀಯ ಪುಸ್ತಕವೆಂದು, ಕನ್ನಡದಲ್ಲಿ ಕ್ರೈಸ್ತ ಸಾಹಿತ್ಯ, ಹನಿಗತೆ, ಕಂಪ್ಯೂಟರ್ ಇತ್ಯಾದಿ (ಪು.೬೭) ಎಂಬ ತಮ್ಮ ಪುಸ್ತಕದಲ್ಲಿ ಬರೆದಿರುವರು.

ಈ ಮೇಲಿನ ಇಬ್ಬರು ವಿದ್ವಾಂಸರ ಹೇಳಿಕೆಯನ್ನು ಹೀಗೆ ಸ್ಪಷ್ಟಪಡಿಸಬಹುದು. ಕೃತಿ ದೊರೆತಿರುವುದರಿಂದ ಯಾವ ಸಂಶಯಕ್ಕೂ ಆಸ್ಪದವಿಲ್ಲ.

ಇದು ಸ್ವಮತೀಯ ಪುಸ್ತಕ ಎನ್ನುವಲ್ಲಿ ಎರಡು ಮಾತಿಲ್ಲ. ಈ ಪುಸ್ತಕ ಅನುವಾದವಲ್ಲ. ತಮ್ಮ ಧರ್ಮಪ್ರಚಾರದಲ್ಲಿ ಮಿಶನರಿಗಳು ಎರಡು ವಿಧವನ್ನು ಅನುಸರಿಸುತ್ತಿದ್ದರು. ಮೊದಲನೇಯದಾಗಿ ತಮ್ಮ ಧರ್ಮದ ಕುರಿತು ವಿವರಿಸಿ ಮನನ ಮಾಡಿ ಕ್ರೈಸ್ತತ್ವವನ್ನು ತಿಳಿಸುವುದು, ಎರಡನೇಯದಾಗಿ ಇತರೆ ಧರ್ಮದ ಜೊತೆಗೆ ತುಲನಾತ್ಮಕವಾಗಿ ವಿಮರ್ಶಾತ್ಮಕವಾಗಿ ಬೋಧಿಸುವುದು. ಈ ಮೇಲಿನ ಕೃತಿ ಎರಡನೆ ವರ್ಗಕ್ಕೆ ಸೇರುತ್ತದೆ.

ತಮ್ಮ ಧರ್ಮಪ್ರಚಾರ ಹೆಚ್ಚು ಪ್ರಭಾವಶಾಲಿಯಾಗಲು ಅವರು ಹಿಂದೂ ಧರ್ಮದಲ್ಲಿಯ ನ್ಯೂನ್ಯತೆಗಳನ್ನು ಅರಿತು, ಅದನ್ನೇ ಬೋಧನೆಯ ಬಂಡವಾಳ ಮಾಡಿಕೊಂಡು, ಕ್ರೈಸ್ತೀಯ ಧರ್ಮದ ಪ್ರಭಾವ ಬೀರುತ್ತಿದ್ದುದರಿಂದ ಅವರು ಬಜಾರ ಬುಕ್ ಎಂದು ಬೀದಿ ಚೌಕುಗಳಲ್ಲಿ ನಿಂತು ಸಲೀಸಾಗಿ ಬೋಧಿಸಲು ಬರುವಂತೆ ಸಿದ್ಧಪಡಿಸಿದರು. ಇಲ್ಲಿ ಹಿಂದೂಮತ ಖಂಡನೆಗೆ ಅವರು ಹಿಂದೂ ಧರ್ಮವನ್ನೆ ಬಳಸಿರುವುದು ಕಂಡುಬರುತ್ತದೆ. ಈ ಪುಸ್ತಕದಲ್ಲಿ ಒಟ್ಟು ೧೩ ಅಧ್ಯಾಯಗಳಿದ್ದು, ಒಟ್ಟು ೨೯೬ ಪುಟಗಳಿವೆ. ಸಾಮುವೇಲ ಅಬೆಜನು ರಚಿಸಿದನೆನ್ನಲಾದ ಈ ಕೃತಿ ಸ್ವತಂತ್ರ ಕೃತಿಯಾಗಿದೆ.

ಈ ಕೃತಿಯ ಒಂದು ವೈಶಿಷ್ಟ್ಯವೇನೆಂದರೆ ತೆಲಗು ಹಾಗೂ ಕನ್ನಡ ಪದ್ಯಗಳನ್ನು ಸಂದರ್ಭೋಚಿತವಾಗಿ ಬಳಸಿ, ತಮ್ಮ ಉದ್ದೇಶವನ್ನು ಸಾಧಿಸುವಲ್ಲಿ ಯಶಸ್ಸನ್ನು ಕಂಡಿದೆ. ತೆಲಗಿನಲ್ಲಿ ವೇಮನನು ರಚಿಸಿದ ಹದಿನೇಳು ಪದ್ಯಗಳನ್ನು ಹಾಗೂ ಸರ್ವಜ್ಞನ ಏಳು ಪದ್ಯಗಳನ್ನು ಲೇಖಕ ಬಳಸಿಕೊಂಡಿದ್ದಾನೆ. ಹಾಗೂ ಅನೇಕ ಸಂಸ್ಕೃತ ಶ್ಲೋಕಗಳಿವೆ.

೧. ಕಾಶಿ ಕಾಶಿಯನುಚು ಕಡುವೇಟ್ಕತೋ ಬೋದಾ
ರಂದುಗಳುಗು ದೇವುಡಿಂದು ಲೇಟೆ ||
ಯಿಂದುನಂದುಗಲಡು ಹೃದಯಂಬು ಲೆಸ್ಸೈಸ |

ವಿಶ್ವದಾಭಿರಾಮ ವಿನರವೇಯ ||

೨. ಗುಡಿಯ ಬೋದಿಗೆಕಲ್ಲು ; ನಡುರಂಗ ತಾ ಕಲ್ಲು
ಕಡೆ ಮೂಲೆ ಶರಗು ತಾ ಕಲ್ಲು ; ವರವನು
ಕೊಡುವಾತ ಬೇರೆ ; ಸರ್ವಜ್ಞ |

೩. ಕಾಡುಕಲ್ಲನು ತಂದು ಕಡಿದು ಲಿಂಗವ ಮಾಡಿ
ನಾಡೆಲ್ಲ ಅದಕ್ಕೆ ಅಡ್ಡಡ್ಡ ಬೀಳುವರು
ಮೂಢರನ್ನೇನೆಂಬೈ, ಸರ್ವಜ್ಞ!

ಇಲ್ಲಿನ ಮುಖ್ಯ ವಿಷಯಗಳು ಧರ್ಮ ಪುಸ್ತಕವನ್ನು ಕುರಿತು ಮಾನವೀಯತ್ವ ತೋರುವಲ್ಲಿನ ವಿಫಲತೆಯನ್ನು ವಿವರಿಸುತ್ತದೆ. ಮನುಷ್ಯ ದೇವರ ಸಂಬಂಧ, ಪಾಪದ ಜೀವಿತದ ವಿವರಣೆ, ಜನ್ಮಾಂತರ, ಮಂತ್ರ-ತಂತ್ರ, ಕರ್ಮಪೂಜೆ, ಬ್ರಾಹ್ಮಣತ್ವ, ಜಾತಿ ಅದೃಷ್ಟ ಕುರಿತು, ಕ್ರೈಸ್ತಧರ್ಮದ ಹೋಲಿಕೆಗಳೊಂದಿಗೆ ವಿವರಿಸಲಾಗಿದೆ.

ಅಂದಿನ ಮಿಶನರಿಗಳಿಗೆ ಹಾಗೂ ಇಂದಿನ ಧರ್ಮ ಪ್ರಚಾರಕರಿಗೆ ಇದೊಂದು ಬಹು ಉಪಯುಕ್ತ ಹಾಗೂ ವಿಶಿಷ್ಟ ಕೃತಿ ಎನ್ನುವಲ್ಲಿ ಸಂಶಯವಿಲ್ಲ. ಈ ಅಧ್ಯಯನದ ಪರಿಶ್ರಮದ ಫಲವಾಗಿ ಕನ್ನಡ ಸಾಹಿತ್ಯ ಲೋಕಕ್ಕೆ ಮೇಲಿನ ಎರಡು ಕೃತಿಗಳು ಲಭ್ಯವಾಗಿದ್ದು ಸಂತೋಷಕರ ಸಂಗತಿ.

ಅನುಬಂಧಗಳು

ಗ್ರಂಥಋಣ

ಅನಂತ ರಂಗಾಚಾರ್ಯ ಎನ್., ಸಾಹಿತ್ಯ ಭಾರತಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೦

ಉಮೇಶ ಜೋಗಿ, ಭಾರತೀಯ ಸಂಗೀತ ಚರಿತ್ರೆ,

ಎಚ್ಚೆಸ್ಕೆ, ಅವಲೋಕನ, ವಿಶ್ವಕನ್ನಡ ಸಮ್ಮೇಳನ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೮೫

ಎಡ್ವರ್ಡ್ ನೊರೋನ, ಕನ್ನಡ ಧಾರ್ಮಿಕ ಸಾಹಿತ್ಯಕ್ಕೆ ಕ್ರೈಸ್ತ ಮಿಶನರಿಗಳ ಕೊಡುಗೆ, ಭಾಗ್ಯವಾನ ಪ್ರಕಾಶನ, ಮೈಸೂರು, ೧೯೯೬

ಎಡ್ವರ್ಡ್ ನೊರೋನ, ಕನ್ನಡದಲ್ಲಿ ಬೈಬಲ್ ಅನುವಾದ, ಪ್ರಬುದ್ಧ ಕರ್ನಾಟಕ ಸಂ.೬೭, ಸಂ.೧, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೮೫

ಐವನ್ ಅಲ್ಬರ್ಟ್, ಹರ್ಮನ ಫೆಡ್ರಿಕ್ ಮೋಗ್ಲಿಂಗ್, ಕರ್ನಾಟಕ ಪತ್ರಿಕಾ ಅಕಾಡೆಮಿ, ಬೆಂಗಳೂರು

ಗೆಸ್‌ಪಿಚ್, ಸತ್ಯವೇದವನ್ನು ನಾವು ಪಡೆದುದು ಹೇಗೆ, ಮಿತ್ರಾಲಯ ಹೈಸ್ಕೂಲ್, ಬೆಂಗಳೂರು

ಗೌಡರ್ ಪಿ.ಎಸ್., ಕನ್ನಡ ಕ್ರೈಸ್ತ ಗೀತೆಗಳ ಅಧ್ಯಯನ, ಕಿಟಲ್ ಮಹಾವಿದ್ಯಾಲಯ, ಧಾರವಾಡ, ೧೯೯೭

ಚಿಂತಾಮಣಿ ಕೇಲೆಬ್, ವೇದಕೋಶ ಹೊಸ ಒಡಂಬಡಿಕೆ, ಟ್ರಾಕ್ಟ್ ಮತ್ತು ಬುಕ್ ಸೊಸೈಟಿ, ಬೆಂಗಳೂರು ೧೯೨೬

ಜೋಗುಳ ಜೆ.ಎಂ., ಚನ್ನಪ್ಪ ಉತ್ತಂಗಿ ಸಮಗ್ರ ಸಾಹಿತ್ಯ, ಭಾಗ ೧ ಮತ್ತು ೨, ಸಮಗ್ರ ಸಾಹಿತ್ಯ ಪ್ರಕಾಶನ ಸಮಿತಿ, ಧಾರವಾಡ, ೧೯೯೧

ಜೋಗುಳ ಜೆ.ಎಂ., ಕರ್ನಾಟಕದಲ್ಲಿ ಬಾಶೆಲ್ ಮಿಶನ್, ನೂರೈವತ್ತು ವರ್ಷ ನೆನಪಿನ ಕಾಣಿಕೆಗೆ ೧೯೩೬ ೮೬, ಧಾವಾರಡ, ೧೮೮೬

ಜೋಹನ್ ಹ್ಯೂಬರ್, ಲೋಕಚರಿತ್ರೆ, ಮಂಗಳೂರು ಮಿಶನ್ ಪ್ರೆಸ್, ಮಂಗಳೂರು, ೧೮೫೪

ತಾರಾನಾಥ ಎನ್.ಎಸ್., ಶತಮಾನಗಳ ಸಂಶೋಧನೆ, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೧

ತಲ್ವಾಡಿ ಬಿ.ಎಸ್., ಕರ್ನಾಟಕ ಕ್ರೈಸ್ತರ ಇತಿಹಾಸ, ಕನ್ನಡ ಕೆಥೋಲಿಕ ಸಂಘ, ಯಶವಂತಪುರ, ಬೆಂಗಳೂರು

ಥಿಯೊಡರ ಕಾಸಿಂ, ಹೊಸ ಒಡಂಬಡಿಕೆಯ ಚರಿತ್ರೆ ಹಾಗೂ ಸಂದೇಶ ಪ್ರವೇಶಿಕೆ, ಕ್ರಿಶ್ಚಿಯನ್ ಲಿಟ್ರೇಚರ್ ಸೊಸೈಟಿ ಫಾರ್ ಇಂಡಿಯಾ, ಮದ್ರಾಸ್, ೧೯೫೧

ಥೋಬರ್ನ ಪಿ.ಎಸ್., ಹಳೆ ಒಡಂಬಡಿಕೆ ಪ್ರವೇಶದಾಯಿನಿ, ಕ್ರೈಸ್ತ ದೈವಜ್ಞಾನ ಸಾಹಿತ್ಯಮಾಲೆ, ನಂ.೯ ಮಂಗಳೂರು

ಧಾರವಾಡಕರ ರಾ.ಯ., ಹೊಸಗನ್ನಡ ಸಾಹಿತ್ಯದ ಉದಯಕಾಲ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೫

ನಂದಿಮಠ ಎಸ್.ಸಿ., ಕರ್ನಾಟಕ ಧರ್ಮಗಳು, ವಿಶ್ವಕನ್ನಡ ಸಮ್ಮೇಳನ, ನೃಪತುಂಗರಸ್ತೆ, ವಿನಾಯಕ ಪ್ರೆಸ್, ಮೈಸೂರು

ನಾಗಯ್ಯ ಹಿ.ಮ., ಪುಸ್ತಕ ಭಾಗ್ಯ, ಕನ್ನಡ ಸಾಹಿತ್ಯ ಪರಿಷತ್ತು, ಭಾರತದ ಸ್ವಾತಂತ್ರ್ಯದ ಬೆಳ್ಳಿಹಬ್ಬ, ಬೆಂಗಳೂರು, ೧೯೭೨

ನಾಡಿಗ ಕೃಷ್ಣಮೂರ್ತಿ, ಭಾರತೀಯ ಪತ್ರಿಕೋದ್ಯಮ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ೧೯೬೯

ನಾಯಕ ಹ.ಮಾ.(ಸಂ), ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೯

ಪುಟ್ಟಪ್ಪ ಕೆ.ವಿ.(ಸಂ), ಇಸ್ಲಾಂ ಸಂಸ್ಕೃತಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೪೦

ಪುಟ್ಟಪ್ಪ ಕೆ.ವಿ.(ಸಂ), ಪ್ರಾಚ್ಯ ಮತ್ತು ಪಾಶ್ಚಾತ್ಯ ಸಂಸ್ಕೃತಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೬೧

ಮಳೆಕಾರ ಎಸ್.ಎಸ್., ಗ್ರಂಥಗಳಲೆಲ್ಲ ಶ್ರೇಷ್ಠ ಗ್ರಂಥ, ಪುಸ್ತಕ ಮಾಲೆ ೧೨, ಇವ್ಯಾಂಜಲಿಕಲ್ ಚರ್ಚ ಆಫ್ ಇಂಡಿಯಾ, ದಾಂಡೇಲಿ, ೧೯೯೪

ಮನೋಹರ ಹೊ.ಗ., ಕನ್ನಡ ಸಾಹಿತ್ಯ ಮತ್ತು ಧರ್ಮ, ಭಾಸ್ಕರ ಪ್ರಕಾಶನ, ಗಾಂಧಿನಗರ, ತುರುವೇಕೆರೆ

ಮುತ್ತಣ್ಣ ಐ.ಮಾ., ಪಾಶ್ಚಾತ್ಯ ವಿದ್ವಾಂಸರ ಕನ್ನಡ ಸೇವೆ, ಭಾಗ ೧, ಆರ್.ಎನ್.ಅಚ್ಚು ಪ್ರಕಾಶನ, ಮೈಸೂರು, ೧೯೬೯

ಮುತ್ತಣ್ಣ ಐ.ಮಾ., ಭಾರತೀಯ ಸಾಹಿತ್ಯ ಸಂಸ್ಕೃತಿಗೆ ಪಾಶ್ಚಾತ್ಯ ವಿದ್ವಾಂಸರ ಕೊಡುಗೆ, ಶಕ್ತಿ ಇಲೆಕ್ಟ್ರಿಕಲ್ ಪ್ರೆಸ್, ಜಯನಗರ, ಮೈಸೂರು, ೧೯೮೭

ಮುಗಳಿ ರಂ.ಶ್ರೀ, **ಕನ್ನಡ ಸಾಹಿತ್ಯ ಚರಿತ್ರೆ**, ಸಮಾಜ ಪುಸ್ತಕಾಲಯ, ಧಾರವಾಡ, ೨ನೇ ಆವೃತ್ತಿ, ೧೯೯೬

ಮಹಿಪತಿದಾಸ, **ಕನ್ನಡ ಶಾಸ್ತ್ರ ಸಾಹಿತ್ಯಕ್ಕೆ ಕ್ರೈಸ್ತ ಮಿಶನರಿಗಳ ಕೊಡುಗೆ**, ಸಂಶೋಧನಾ ಗ್ರಂಥ, ಅಪ್ರಕಟಿತ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೯೨

ಮೋಗ್ಲಿಂಗ್, **ಕಿರಣ ಮಾಲಿಕೆ(Bazaar Book)**, ಮಂಗಳೂರು ಬಾಶೆಲ್ ಮಿಶನ್ ಪ್ರೆಸ್, ಮಂಗಳೂರು

ಮಾರಾ ಎಸ್.ವಿ., **ಭಾರತೀಯ ಕ್ರೈಸ್ತ ಸಭಾ ಚರಿತ್ರೆಯ ಪ್ರವೇಶಿಕೆ**, ಕನ್ನಡ ದೈವಜ್ಞಾನ ಸಾಹಿತ್ಯ ಸಮಿತಿ, ಮಂಗಳೂರು

ಮೇಸನ್ ಬಿ.ಡಿ., **ದೈವೋಕ್ತಿಗಳು**, ಕ್ರೈಸ್ತದೈವಜ್ಞಾನ ಸಾಹಿತ್ಯ ಮಾಲೆ, ಮಂಗಳೂರು, ೧೯೭೦

ರತ್ನಂ ಎಸ್.ಎಂ., **ಸಂಗೀತ ಮತ್ತು ಸಂಗೀತಗಾರರು**, ಕನ್ನಡ ಸಾಹಿತ್ಯ ಸಮಿತಿ, ದಕ್ಷಿಣ ಇಂಡಿಯಾ ಸಭೆ, ಮೈಸೂರು, ೧೯೫೫

ರತ್ನಂ ಎಸ್.ಎಂ., **ದೃಢೀಕರಣ ಪಾಠಗಳು**, ವೆಸ್ಲಿಪ್ರೆಸ್, ಮೈಸೂರು, ೧೯೬೩

ರಹಮತ್ ತರೀಕೆರೆ(ಸಂ), **ಧರ್ಮ ವಿಷಯ ವಿಶ್ವಕೋಶ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

ರಾಯ ಇ.ಡೇವಿಸ್, **ಕ್ರೈಸ್ತ ವೇದಾಂತಸಾರದ ಪ್ರಸ್ತಾವನೆ**, ಕರ್ನಾಟಕ ಸತ್ಯವೇದ ವಿದ್ಯಾಲಯ, ಗದಗ, ಮೈಸೂರು ಪ್ರಾಂತ್ಯ

ರಾಮನಾಥಯ್ಯ ಕೆ.ಪಿ., **ವಿವಿಧ ಮತಗಳ ಚಾರಿತ್ರಿಕ ವಿಮರ್ಶೆ ಮತ್ತು ಸಮನ್ವಯ**, ಕಾರೋನೇಷನ್ ಪ್ರೆಸ್, ಮೈಸೂರು

ರಾಮಚಂದ್ರರಾವ್, ಡಾ.ಕೆ.ಕೃಷ್ಣಮೂರ್ತಿ, **ಧರ್ಮಶಾಸ್ತ್ರದ ಇತಿಹಾಸ**, ಸಂ.೧, ಭಾಗ.೧, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೮೦

ವರದರಾಜ ಹುಯಿಲಗೋಳ, **ಕನ್ನಡಕ್ಕೆ ಕ್ರೈಸ್ತರ ಕಾಣಿಕೆ**, ಧಾರವಾಡ

ಶೇಷಗಿರಿರಾವ್ ಎಲ್.ಎಸ್., **ಭಾರತೀಯ ಸಾಹಿತ್ಯ ಸಮೀಕ್ಷೆ**, ಸಂ.೨, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಶೇಷಗಿರಿರಾವ್ ಎಲ್.ಎಸ್., **ಸ್ವಾತಂತ್ರೋತ್ತರ ಕನ್ನಡ ಸಾಹಿತ್ಯ ಸಂಸ್ಕೃತಿ**, ರಜತ ಮಹೋತ್ಸವ ಪ್ರಕಟಣೆ

ಶಾಮರಾವ್ ತ.ಸು., **ಪರಿವರ್ತನಾಶೀಲ ಸಮಾಜಕ್ಕೆ ಶಾಶ್ವತ ಮೌಲ್ಯಗಳು**, ಮೂಲ : ಸ್ವಾಮಿ ರಂಗನಾಥನಂದ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ಶ್ರೀನಿವಾಸ ಹಾವನೂರ, **ಹೊಸಗನ್ನಡ ಅರುಣೋದಯ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೦

ಶ್ರೀನಿವಾಸ ಹಾವನೂರ, **ಕನ್ನಡದಲ್ಲಿ ಕ್ರೈಸ್ತಸಾಹಿತ್ಯ ಹನಿಗತೆ ಕಂಪ್ಯೂಟರ್ ಇತ್ಯಾದಿ,** ಥಿಯೋಬಾಲ್ಡ್ ರಸ್ತೆ, ನಜರಾಬಾದ್, ಮೈಸೂರು, ೧೯೮೨

ಶಿವಾರೆಡ್ಡಿ ಕೆ.ಸಿ., **ಕುವೆಂಪು ಸಮಗ್ರ ಗದ್ಯ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಭಾಪತಿ ಎನ್., **ಘನಜಾನ್ ಹ್ಯಾಂಡ್ಸ್,** ಬಳ್ಳಾರಿ

ಹುದುವಾದ ದೇವಾರಾಧನೆ, ಆಕ್ಸಫರ್ಡ್ ಯೂನಿವರ್ಸಿಟಿ ಪ್ರೆಸ್, ದೆಹಲಿ, ಮುಂಬೈ, ಕಲ್ಕತ್ತ, ೧೯೬೨

ಕನ್ನಡ ಮತ್ತು ತುಳು ಗೀತೆಗಳಿಗೆ ತಕ್ಕ ರಾಗಗಳು, ದಿ ಬಲ್ಮಠ ಮಾಸ್ಟರ್ ಪ್ರೆಸ್, ಮಂಗಳೂರು, ೧೯೭೫

ಇಂಗ್ಲಿಷ್ ಗ್ರಂಥಗಳು

Anan, **Harvest Field,** Vol-2, 1942

ALP D.Soza, **History of the Catholic Community of South Canara,** 1983

Arulmani J.D., **History of the Printed Bible,** Karntaka Auilary B.S.I., Bangalore

Bertha Morris Parker, **The Golden Book Encyclopedia,** Simon & Schuster, Newyark

Bruce F.F., **Nelsans Illustrated Bible Dictionary,** Thomas Nelson Publishers, Newyark

Dodd C.H., **A Authority of the Bible**

Douglas J.D. **The Illustrated Bible Dictionary,** Inter varsity Press

Finis Jennings Dake, **Dake's Annotated Reference Bible,** P.B.Box 1050, Lawreneerille Georgia, 3024y U.SA.

Hayavadan Rao, **Gazetteer,** Vol-1, 1927

Herbert Lockeyer, **Nelsons Illustrated Bible Dictionary,** Newyark

Hooper J.S.M., **Bible Translation in India Pakistan & Ceylon,** 4th Edition, Oxford University Press, 1962

James Hastings, **Encyclopedia of Religion & Ethics,** Morrison and Gibb Limited Great Britain

Lamp G.W.H., **The Cambridge History of the Bible,** Vol-1, University Press, 1969

Mausan, **A Guide to the scrolls,** Relgion Book Club Ed.127, S.C.M.Press London

Mircea Eliade, **The Encyclopedia of Religion,** Vol-2, McMillan Publishing Company Newyark, London, 1985

Pal Alexander, **The Lion Encyclopedia of Bible**

Rabert McHeny, **The New Encyclopedia Britanica,** Vol-2, 15th Edition, Chikago, U.S.A., 1992

Suryanath U.Kamath, **A Hand Book of Karnataka,** Dept. of Karnataka Gazetteer

Simpson J.R., **The Oxford English Dictionary,** Vol-II, Clarendon Press, Oxford-1989

Warth G., **Canarese Poetical Anthalogy**

Bible Soceity of India, **Story of the Kannada Bible,** Thril Jublic Celebration, 1954

Watch Tower, **You can live forover in Paradise on Earth,** Watch Tower Publication, Lonovla, Maharastra, India, 1982


1986 Edition Comptan's Encyclopedia, The University of Chicago

Grolier Academic Encyclopedia Gralier International

Watch Tower, **Insight of the Scriptures** Vol-1, watch lower Bible Trust soceity of Newyark, U.S.A.

Testimonies of Great Men tothe Bible & Christionity 5th Edition, Madras, K.U.Hamp, Library, 1891

Willam Henry Monk, **Manglore Tune Book,** 4th Edition, Kannad & Telu Human Book of the Basel Evanglical Mission Charch, Mangalore, 1975



ಬೈಬಲ್ ಮುದ್ರಣಗೊಂಡ ಭಾಷಾವಾರು ಮಾಹಿತಿ.


ಮಿಶನರಿಗಳ ಮಾಹಿತಿ.

	Arrival	Dep.	Death
Buhler	1846	—	1854
Hoch	1846	1860	1865
Lehmann	1848	1859	1875
Haller	1851	1865	1878
Kullen	1851	1855	1865?
Kauffmann	1853	1869	1769
Cammerer	1854	—	1858
Hausser	1856	—	1858
Keuler	1856	—	1858
Hahn	1857	1871	1875
Schoch	1857	—	1876
Wurtele	1858	—	1863
Finkh	1858	1865	1865
Traub	1859	1868	1868
Riehm	1860	1872	1872
Gundert	1863	—	1879
Reuther	1867	—	1871
Schmid	1870	—	1870
Burkhardt	1872	—	1881
Ziegler	1872	—	1881

1885ರಿಂದ 1914ರ ವರೆಗೆ ಮೃತಪಟ್ಟ ಬಾಸೆಲ್ ಮಿಶ್ಯನೆರಿಗಳು.


	Arrival	Death
William Hasen wandel	1872 S. M.	1885
John Frede ic Metz	1844 S. K.	1885
Audam Buhrer	1842 S. K.	1886
John Le:nberger	1849 S. M.	1886
John James Brigel	1858 S. K.	1887
Nathanae Hubner	1870 S. K. & S. M.	1887
Emil Brunner	1885 S. K.	1887
George Frederic Muller	1842 Malabar	1888
Bernhard Deggeller	1845 S. K.	1888
Charles George Andrew Plebst	1851 S. K.	1888
Charles Stocking	Malabar	1848
Rudolf Hauri	1873 S. K.	1888
John Layer	1836 S M	1889
Christian Irion	1841 Malabar	1890
August Manner	1857 S K	1891
Herman Ananda Rao Kaundinya	1851 S K & Coorg	1891

	Arrival	Death
Theodore Elsaser	1867 S K & Mal.	1893
Karl Fenchter	1873 Malabar	1895
Paul Ott	1871 S. K.	1896
Leonhard Gottlieb Hanhart	1857 Malabar	1896
Benignus Grater	1863 M & S. K.	1895
Christian Muller	1843 Malabar	1895
Mr Hohn	1896 Malabar	1896
Th. Schauffler	18?? Malabar	1897
G. Pfleiderer	1834 S K.	1893
Ph. Weidner	1892 Malabar	1898
Ernst Diez	1851 Malabar	1899
B. Liebendorfer	Malabar	1902
Christian Keppler	1879 S K	1903
W F Bornhard	1901 Malabar	1901
W P Schonthal	Malabar	1904
F Kittel	1853 S K	1903
J Huber	1857—1869	1904
N. Weitbrecht	1871—1876	1904
H Bergfeld	18?0—1874	1904
C Linder	1868—1880	1904
L Daur	1888—1891	1904
Maz Mieg	1878—1883	1905
J.h Mack	1858—1880	"
J Bosinger	1848—1882	"
F Ziegler	1860—1905 S K & S M	1905
G Grossmann	1874—1904 S M	
W Stokes	1860 Coorg	1905
Ernst Stinestel	1905 Coorg	"
J J Thumm	186?—1882 Nilgiris	1907
G Hirner	1871 S K	1908
J Hermelink	1872 S K	1908
W Sikemeier	1872 S K	1910
M Schneitor	1908 M & S M	1911
R Bosshardt	1888 Malabar	1911
C G Eblen	1876-1908 Coorg S. K. & N. K.	1911
F. Veil	1872-1886C.	1911
R. Hartmann	1859-1894 S. K.	1911
J. Strobel	1857 Malabar	1912
Adolf Ruhland	1876 "	1912
Thomas Diegel	1864 S. K.	1912
H Altenmuller	1877 S. K.	1913
Karl Huttinger	1871 S. K.	1914
Heinrich Daimelhuber	1866 S. K.	1914


ಲೋಕಚರಿತ್ರವು.

ಯೆರಡನೇ ಭಾಗ.

ಮಂಗಳೂರಲ್ಲಿ ಛಾಪಿಸಿದ್ದು.
೧೮೫೪.


೨. ಚೀನದೇಶದ ಮಧ್ಯಕಾಲವು.

1854 ರಲ್ಲಿ ಮುದ್ರಣಗೊಂಡ ಹೊಸಗನ್ನಡ ಕೃತಿ ಲೋಕ ಚರಿತ್ರವು.

ARUNA PRINTRES
Chetana Hotel Road,
th Main, 7th Cross, P. J. Extn.,
DAVANGERE-2 ✆ 232252